
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
KARNATAKA FOLKLORE UNIVERSITY



ಕೇರಳದ ಜನಪದವೀರ ತಚ್ಚೋಳಿ ಒದೇನನ್

ಡಾ. ಕೆ. ಕಮಲಾಕ್ಷ

ಕೇರಳದ ಜನಪದವೀರ ತಚ್ಚೋಳಿ ಒದೇನನ್

ಡಾ. ಕಮಲಾಕ್ಷ ಕೆ.

ವಿಸ್ತರಣೆ ಹಾಗೂ ಸಲಹಾ ಕೇಂದ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ – 581 205
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

KERALADA JANAPADAVEERA TACCHOLI ODENANAN:

By
Dr. K .Kamalaksha

Published by
Prof. S.C. Ramesh
Director, Centre for Extension and Consultancy
Karnataka Janapada University, Gotagodi - 581 205
Shiggavi Taluk, Haveri Dist., Karnataka
Ph : 0836 -2255180
E-Mail : kajavivi@gmail.com   www.janapadauni.in

Pages : xx + 254

Size : Demy 1/8th

First Edition : 2013

Price : Rs. 140/-

ಮೊದಲನೆ ಮುದ್ರಣ : 2013

ಮುಖಪುಟ ವಿನ್ಯಾಸ : ಎಸ್. ಮಂಜುನಾಥ್

ಬೆಲೆ : ರೂ. 140/–

ISBN : 978-93-83149-02-5

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೋಟಗೋಡಿ 581 205, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ
ಫೋ : 0836 -2255180

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಬೆಂಗಳೂರು ಕಚೇರಿ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. 2/106, 3ನೇ ಮಹಡಿ, 17ನೇ ಅಡ್ಡರಸ್ತೆ
ಮಾಗಡಿ ಕಾರ್ಡ್ ರಸ್ತೆ, ವಿಜಯನಗರ
ಬೆಂಗಳೂರು – 560 040, ಫೋ : 080 2350 4880

Prited at
Lotus Printers Pvt. Ltd.,
Bangalore

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿ ಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿ ಕೊಂಡು ಬದುಕು ತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲ ವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರ ಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ

ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿ ವಳಿಕೆಯ ಚೌಕಟ್ಟಿ ನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂ ಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿ ಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರ ವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟ ವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲ ಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲ ಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿ ವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆ ಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕ ವಾಗಿಯೂ, ಪ್ರಾಯೋಜ ಕವಾಗಿಯೂ, ದೃಢವಾಗಿಯೂ ರೂಢಿಸ ಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ

ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ-ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ.

ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಇತಿಹಾಸದ ಗರ್ಭದಲ್ಲಿ ಜನಪದ ಸಾಹಿತ್ಯದ ಕೆಲ ಪ್ರಭೇದಗಳು ಹುದುಗಿವೆ. ಐತಿಹಾಸಿಕ ಘಟನೆಗಳು, ವ್ಯಕ್ತಿಗಳು, ವೀರಪುರುಷರು, ಲಾವಣಿ, ಐತಿಹ್ಯ, ಪುರಾಣಗಳಲ್ಲಿ ಚಿತ್ರಿತವಾಗಿರುವುದು ಸರಿಯಷ್ಟೆ. ಅದರಲ್ಲೂ ಕೆಲವರು ಪ್ರಾಂತ್ಯಭೇದ ಮೀರಿ ತಮ್ಮ ಸ್ವಭಾವದಿಂದ ಕಾಲಾತೀತರಾಗಿ ಬಿಡುತ್ತಾರೆ. ಜನಪದದ ಪ್ರತಿನಿಧಿಯಾಗಿ ತೋರುತ್ತಾರೆ.

ಅಂತಹ ವಿರಳ ವ್ಯಕ್ತಿತ್ವಗಳಲ್ಲಿ ಒದೇನನು ತುಂಬ ಭಿನ್ನವಾಗಿ ಮತ್ತು ವಿಶಿಷ್ಟವಾಗಿ ಚಿತ್ರಿತವಾಗಿದ್ದಾನೆ. ಉತ್ತರ ಕೇರಳದ ಕಡತ್ತುನಾಡಿನ ಜನಪದ ವೀರ ತಚ್ಚೋಳಿ ಒದೇನನ ಮಲೆಯಾಳಂ ಜನಪದ ಸಾಹಿತ್ಯದಲ್ಲಿ ಗಣ್ಯ ಸ್ಥಾನ ಪಡೆದುಕೊಂಡಿದ್ದಾನೆ. ಒದೇನನ ಗುಣಸ್ವಭಾವ, ವ್ಯಕ್ತಿದೌರ್ಬಲ್ಯ, ಮೌಲ್ಯಗಳನ್ನು ಬಿಂಬಿಸುವ ಜನಪದ ಗೀತೆಗಳು ಮಲೆಯಾಳಂ ಭಾಷೆಯಲ್ಲಿ ಈಗಾಗಲೇ ಜನಪ್ರಿಯ ಗೊಂಡಿವೆ. ಚದುರಿದಂತಿರುವ ಒದೇನನ ಒಟ್ಟು ಬದುಕಿನ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನಗಳು ಈವರೆಗೆ ನಡೆದಿರುವುದು ವಿರಳ. ಮಲೆಯಾಳಂದಲ್ಲಿ ಈಗಾಗಲೇ ಜನಪ್ರಿಯತೆ ಪಡೆದುಕೊಂಡಿರುವ ಒದೇನನನ್ನು ಕನ್ನಡ ಭಾಷೆಗೆ ರೂಪಾಂತರಿಸುವ ಮೂಲಕ ಒದೇನನ ಜನಪದೀಯತೆಯನ್ನು ಕನ್ನಡ ಜನಪದ ವಾಙ್ಮಯಕ್ಕೆ ನೀಡುವ ಸಾಹಸವನ್ನು ನಾಡಿನ ಹಿರಿಯ ವಿದ್ವಾಂಸರಾದ ಡಾ. ಕೆ. ಕಮಲಾಕ್ಷ ಅವರು ಮಾಡಿದ್ದಾರೆ. ಒದೇನನನು ಜೀವಿಸಿದ್ದ ಕಾಲಘಟ್ಟವನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ, ಸಾಹಿತ್ಯಕ ಅಂಶಗಳನ್ನು ಮುಖ್ಯವಾಗಿ ಕೇಂದ್ರೀಕರಿಸಿ ಒದೇನನ ಒಟ್ಟು ಜೀವನ ಚಿತ್ರಣವನ್ನು ಕೊಡುವ ಪ್ರಯತ್ನದ ಹಿಂದೆ ಕಮಲಾಕ್ಷ ಅವರ ಆಳವಾದ ಅಧ್ಯಯನ, ಶ್ರದ್ಧೆ, ಶ್ರಮ ಇವೆ. ಪ್ರಸ್ತುತ ಕೃತಿ ಒಂದು ತೆರನಾದ ರೂಪಾಂತರವಾದರೂ ಅದು ಕನ್ನಡದ್ದೇ ಎಂಬಷ್ಟು ಆಪ್ತವಾಗಿ ಓದಿಸಿಕೊಳ್ಳುವ ಗುಣ ಪಡೆದುಕೊಂಡಿರುವುದನ್ನು ನೋಡಿದರೆ ಕಮಲಾಕ್ಷ ಅವರಿಗೆ ಮಲೆಯಾಳಂ ಹಾಗೂ ಕನ್ನಡ ಭಾಷೆ ಎರಡರ ಮೇಲೂ ಸಮಾನ ಪ್ರಭುತ್ವ, ಪಾಂಡಿತ್ಯ ಇರುವುದು ಸಾಬೀತಾಗುತ್ತದೆ. ಎರಡು ಭಾಷಾ ಸಂಸ್ಕೃತಿಗಳ ಕೊಂಡಿಯಾಗಿ 'ಕೇರಳದ ಜನಪದ ವೀರ ತಚ್ಚೋಳಿ ಒದೇನನ್' ಕೃತಿ ಗಮನಾರ್ಹವಾದುದು. ಅನನ್ಯವಾದ ಕೃತಿಯನ್ನು ರೂಪಾಂತರಿಸಿ ಕೊಟ್ಟ ಡಾ. ಕೆ. ಕಮಲಾಕ್ಷ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು.

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರು ತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯ ನೂತನವಾದ ಜನಪದ ಸಂಸ್ಕೃತಿಯನ್ನು ಪುನರ್ ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ,

ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗ ಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾ ಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯ ಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ

ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯ ವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ – ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟ ಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಚಾರಿತ್ರಿಕ ವ್ಯಕ್ತಿಗಳ ಜೀವನ ಚಿತ್ರಣವನ್ನು ವ್ಯವಸ್ಥಿತವಾಗಿ ಕಟ್ಟಿ ಹಾಡುವ ಪರಂಪರೆಯು ಜನಪದರಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಲಾವಣಿ ಸಾಹಿತ್ಯ ವಿಶೇಷವಾಗಿ ಐತಿಹಾಸಿಕ ಘಟನೆಗಳು, ವ್ಯಕ್ತಿಗಳ ಬದುಕಿನ ಏಳು – ಬೀಳು, ಸಾಹಸ ಗುಣಗಳನ್ನು ವರ್ಣಿಸಿದೆ. ಮಲೆಯಾಳಂ ಭಾಷೆ ಸಮೃದ್ಧವಾದ ಜನಪದ ಸಾಹಿತ್ಯದ ಕಣಜ. ಮಲೆಯಾಳಂ ಜನಪದ ಸಾಹಿತ್ಯದಲ್ಲಿ ವಡಕ್ಕನ್ ಪಾಟ್ಟು(ಬಡಗಣ ಹಾಡು)ಗಳಿಗೆ ವಿಶೇಷ ಮಹತ್ವವಿದೆ. ಇದರಲ್ಲಿ ಪುತ್ತೂರಂ ಪಾಟ್ಟು, ತಚ್ಚೋಳಿಪಾಟ್ಟು ಮತ್ತು ಒಟ್ಟಪಾಟ್ಟು (ಬಿಡಿಹಾಡು) ಗಳೆಂದು ಮೂರು ಮುಖ್ಯ ವಿಭಾಗಗಳು. ಪುತ್ತೂರಂ ಪಾಟ್ಟು ಆರೋಮಲ್ ಚೇಗವರ ಮನೆತನದ ಕುರಿತಾಗಿಯೂ, ತಚ್ಚೋಳಿಪಾಟ್ಟು ತಚ್ಚೋಳಿ ಒದೇನನ ಮನೆತನದ ಕುರಿತಾಗಿಯೂ ಬಿಡಿ ಹಾಡುಗಳು ಇತರ ವೀರರ ಕುರಿತೂ ಇವೆ. ಇದು ವಡಕ್ಕನ್ ಪಾಟ್ಟುಗಳ ಕಾಲಾನುಕ್ರಮ ವಿವರ ಕೂಡ. ಉತ್ತರ ಕೇರಳದ ಕಡತ್ತುನಾಡಿನ ಜನಪದ ವೀರ ತಚ್ಚೋಳಿ ಒದೇನ ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಬದುಕಿ ಬಾಳಿದವನು. ಅತಿರಸಿಕತನ ಮತ್ತು ಅಪ್ರತಿಮ ವೀರತನಗಳಿಗೆ ಅವನು ಪ್ರತೀಕದಂತಿರುವಾತ. ತನ್ನ ಮೂವತ್ತೆರಡನೆಯ ವಯಸ್ಸಲ್ಲಿ ವಂಚನೆಗೊಳಗಾಗಿ ಸಾವನ್ನು ಅಪ್ಪಿದ. ಉತ್ತರ ಕೇರಳದ ಜನಪದ ಹಾಡುಗಳಲ್ಲಿ ಅತ್ಯಂತ ಹೆಚ್ಚಿನ ಭಾಗವನ್ನು ಒದೇನನ್ ಆವರಿಸಿಕೊಂಡಿರುವುದು ಅವನ ಜನಪ್ರಿಯತೆಗೆ ಸಾಕ್ಷಿ. ಇಂತಹ ಜನಪದ ವ್ಯಕ್ತಿಯಾದ ತಚ್ಚೋಳಿ ಒದೇನನ ಜೀವನದ ಚಿತ್ರಣವನ್ನು ಅಚ್ಚುಕಟ್ಟಾಗಿ ಕನ್ನಡಕ್ಕೆ ರೂಪಾಂತರಿಸಿ ಕೊಟ್ಟ ವಿದ್ವಾಂಸರಾದ ಡಾ. ಕೆ. ಕಮಲಾಕ್ಷ ಅವರಿಗೆ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ

ನಿರ್ದೇಶಕರು, ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕೃತಿ ಓದತೊಡಗುವ ಮುನ್ನ

ಪ್ರಿಯ ಓದುಗರೆ, ವಂದನೆಗಳು. ತಚ್ಚೋಳಿ ಕಣ್ಮಣಿ ಬಾಲಒದೇನನ ವರ್ಣರಂಜಿತ ಕಥಾನಕಕ್ಕೆ ತೊಡಗುವ ಮುನ್ನ ಕೆಲವು ವಿಚಾರಗಳನ್ನು ಇದೋ ನಿಮ್ಮ ಮುಂದಿಡುತ್ತಿದ್ದೇನೆ.

ಈ ಕನ್ನಡ ರೂಪ: ಈ ಕನ್ನಡ ಅವತರಣಿಕೆಗೆ ಮೂಲಪ್ರೇರಣೆ ಹಿರಿಯರಾದ ಡಾ. ಅಮೃತ ಸೋಮೇಶ್ವರರು. ಇತ್ತೀಚೆಗೆ ಕೋಟೆಕಾರಿನ 'ಒಲುಮೆ'ಯಲ್ಲಿ ಅವರೊಂದಿಗೆ ಮಾತನಾಡುತ್ತಿದ್ದಾಗ ಅಮೃತರು ತಚ್ಚೋಳಿ ಒದೇನನ ಪಾಟ್ಟು (ಜನಪದ ಹಾಡು) ಗಳನ್ನು ತಮ್ಮ ತಂದೆಯವರು ಹೇಳುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದುದು, ಆ ಪಾಟ್ಟುಗಳ ಸೊಗಸು, ಒದೇನನ ಕಥೆಯ ರೋಚಕತೆ, ಒದೇನನನ್ನು ಕನ್ನಡದಲ್ಲಿ ತರಬೇಕೆಂದಿದ್ದ ತಮ್ಮ ಈಡೇರದ ಹಂಬಲ, ಒದೇನ ಕನ್ನಡ –ತುಳುಗಳಲ್ಲೂ ಬರಬೇಕಾದ ಅಗತ್ಯ ಇತ್ಯಾದಿಗಳನ್ನು ಪ್ರಸ್ತಾಪಿಸಿ ನಾನು ಆ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ವಾತ್ಸಲ್ಯ ಪೂರ್ವಕವಾಗಿ ಆದೇಶಿಸಿದರು. ಆ ಪ್ರೇರಣೆಯಿಂದ ಈ ಕೆಲಸಕ್ಕೆ ತೊಡಗಿದೆ.

ಪ್ರಕೃತ ಕೃತಿಗೆ ಮುಖ್ಯ ಆಕರಗಳಾಗಿ ಮೂರು ಕೃತಿಗಳನ್ನು ಇಟ್ಟುಕೊಂಡಿದ್ದೇನೆ. ಮೊದಲನೆಯದು – ಬ್ರಿಟಿಷ್ ಆಡಳಿತದಲ್ಲಿ ಮದರಾಸು ಮತ್ತು ಚೆಂಗಲ್ಪಟ್ಟ್ ಜಿಲ್ಲೆಗಳ ಕಲೆಕ್ಟರರಾಗಿದ್ದ ಪರ್ಸಿ ಮೆಕ್ವೀನರು 1913 ರಿಂದ 1919ರ ವರೆಗೆ ಸಂಗ್ರಹಿಸಿದ್ದ ಹಾಡುಗಳಲ್ಲಿ ಐವತ್ತನ್ನು ಆಯ್ದು ಚೇಲನಾಟ್ಟ್ ಅಚ್ಯುತ ಮೆನೋನರು Ballads of North Malabar ಎಂಬ ಹೆಸರಲ್ಲಿ ಮದರಾಸು ವಿ.ವಿ.ಯ ಮೂಲಕ ಪ್ರಕಟಿಸಿದ ಕೃತಿಯ ಎರಡನೆಯ ಆವೃತ್ತಿ (1956). ಎರಡನೆಯದು – ಎಂ.ಸಿ. ಅಪ್ಪುಣ್ಣಿ ನಂಬ್ಯಾರರು ಸಂಗ್ರಹಿಸಿ ತ್ರಿಚ್ಚೂರಿನ ಕರೆಂಟ್ ಬುಕ್ಸ್‌ನ ಮೂಲಕ ಪ್ರಕಾಶನಗೊಂಡ 'ವಡಕ್ಕನ್ ಪಾಟ್ಟುಗಳ್' ಎಂಬ ಕೃತಿ (1960). ಮೂರನೆಯದು ಇರುವತ್ತಿನಾಲ್ ವಡಕ್ಕನ್ ಪಾಟ್ಟುಗಳ್. ಕೆಲಸಕ್ಕೆ ಪೂರಕವಾಗಿ ವಿಲಿಯಂ ಲೋಗನ್‌ರ The Malabar Manual ಎಂಬ ಪುಸ್ತಕದ ದ್ವಿತೀಯ ಆವೃತ್ತಿ (1995) ಯಲ್ಲಿನ Tachcholi Ballad, ಕಡತ್ತನಾಡ್

ಮಾಧವಿ ಅಮ್ಮ ಅವರ ತಚ್ಚೋಳಿ ಒದೇನನ್ (1956) ಮತ್ತು ಕೆ. ವಾಸುದೇವನ್ ಮೂಸ್ಸದ್ ಅವರ ತಚ್ಚೋಳಿ ಒದೇನನ್ (1958) ಎಂಬ ಕೃತಿಗಳನ್ನೂ ಬಳಸಿದ್ದೇನೆ. ಆಯ್ದುಕೊಂಡಿರುವ ಮೂರು ಮುಖ್ಯ ಆಕರಗಳು ಜನಪದ ಹಾಡುಗಳ ರೂಪದಲ್ಲಿವೆ. ಅಲ್ಲಿ ಸಂಗ್ರಹೀತವಾದ ಪ್ರಕರಣಗಳು ಒದೇನನ ಬದುಕಿನ ಘಟನೆಗಳನ್ನು ಸಮಗ್ರ ವಾಗಿಯೂ ವ್ಯವಸ್ಥಿತವಾಗಿಯೂ ಕಟ್ಟಿಕೊಡುತ್ತಿಲ್ಲ. ಅಲ್ಲಿರುವುದು ಬಿಡಿಬಿಡಿ ಘಟನೆಗಳು. ಅವನ್ನು ಅವುಗಳ ಜಾನಪದ ಸೊಗಡು ಸೋರಿಹೋಗದಂತೆ ಗದ್ಯರೂಪದಲ್ಲಿ ಅನುವಾದಿಸಿ ಹಿಡಿದಿಡಲು ಪ್ರಯತ್ನಿಸಿದ್ದೇನೆ. ಪುನರಾವರ್ತನೆಯು ಜನಪದ ಹಾಡುಗಳ ಲಕ್ಷಣವೇ ಆಗಿದ್ದರೂ ಅತಿ ಅನಿಸಿದಾಗ ಅಂಥ ಭಾಗಗಳನ್ನು ಕೈ ಬಿಟ್ಟಿದ್ದೇನೆ. ಪ್ರಕರಣಗಳ ಮೂಲ ಮಲಯಾಳ ಶಿರೋನಾಮೆಗಳನ್ನು ಒಂದಿಷ್ಟು ಆಕರ್ಷಕವಾಗುವಂತೆ ಪುನರ್ನಾಮ ಕರಣ ಮಾಡಿಕೊಂಡು ನನಗೆ ಸರಿ ಕಂಡಂತೆ ಸಂಕಲಿಸಿದ್ದೇನೆ. ಒಂದು ಅನುಕ್ರಮವೂ ಸಮಗ್ರತೆಯೂ ಲಭ್ಯವಾಗಲಿ ಎನ್ನುವುದಷ್ಟೆ ಉದ್ದೇಶ. ಕೃತಿಯ ಸೊಗಸು ಅಜ್ಞಾತ ಮೂಲರಚನಾಕಾರರಿಗೆ ಸೇರಿದ್ದು, ಅನುವಾದದಿಂದಾದ ದೋಷಗಳೇನಿದ್ದರೂ ನನ್ನವು.

ಪ್ರಕೃತ ಕೃತಿಯ ಬರವಣಿಗೆಯ ಕುರಿತು ಒಂದೆರಡು ಸ್ಪಷ್ಟೀಕರಣಗಳು– ಅನಿವಾರ್ಯ ಕಾರಣಗಳಿಗಾಗಿ ಪ್ರಕೃತ ಕೃತಿಯಲ್ಲಿ ಲೇಖನ ಚಿಹ್ನೆಗಳನ್ನು ಕನಿಷ್ಠ ಪ್ರಮಾಣದಲ್ಲಿ ಬಳಸಿದೆ. ನಿಮಗೆ ಮೊದಮೊದಲು ಇದರಿಂದ ಒಂದಿಷ್ಟು ತೊಡಕಾದರೂ ನಾಲ್ಕಾರು ಪುಟಗಳ ಓದಿನ ಬಳಿಕ ಎಲ್ಲವೂ ಸಲೀಸಾದೀತೆಂದು ನನ್ನ ವಿಶ್ವಾಸ. ಕೃತಿಯ ಪ್ರಧಾನ ಆಕರವಾಗಿರುವ ವಡಕ್ಕನ್ ಪಾಟ್ಟುಗಳು ಸಹಜವಾಗಿ ಲಯಬದ್ಧ ಜನಪದ ಹಾಡುಗಳು. ಇದು ಅದರ ಗದ್ಯರೂಪಾಂತರ. ಈ ಗದ್ಯ ರೂಪಾಂತರಕ್ಕೆ ಓದುಗರು ಎಂಥ ಪ್ರತಿಕ್ರಿಯೆ ತೋರುತ್ತಾರೆ ಎನ್ನುವ ಬಗೆಗೆ ನನಗೆ ಅತೀವ ಕುತೂಹಲವಿದೆ. ಮಲೆಯಾಳಂನ ಇಂಥ ಕೃತಿಗಳ ಪರಿಚಯವಿಲ್ಲದ ಓದುಗರಿಗೆ ಇಲ್ಲಿನ ಊರುಗಳ, ವ್ಯಕ್ತಿಗಳ ಹೆಸರು – ಅದಕ್ಕಿಂತಲೂ ಹೆಚ್ಚಾಗಿ ಪರಸ್ಪರ ಸಂಭಾಷಣೆಯಲ್ಲಿ ತೊಡಗಿ ಕೊಳ್ಳುವ ವ್ಯಕ್ತಿಗಳು – ಅವರು ತಾಯಿಮಗಳು ಅಣ್ಣತಮ್ಮ ಅಕ್ಕತಂಗಿ ಗಂಡಹೆಂಡಿರೇ ಆಗಿದ್ದರೂ– ಪರಸ್ಪರ ಮನೆತನದ ಹೆಸರು ಹೇಳಿಯೇ ಸಂಬೋಧಿಸುವುದು ಮುಂತಾದವು ಒಂದಿಷ್ಟು ವಿಚಿತ್ರವಾಗಿದ್ದರೂ ಅದು ಸಮುದಾಯಗಳ ಪ್ರತಿನಿಧಿಯಾದ ಭಾಷೆಯೊಂದರ ವೈಶಿಷ್ಟ್ಯವೆಂಬ ಕಾರಣಕ್ಕೆ ಇಲ್ಲಿ ಅದನ್ನು ಅಂತೆಯೇ ಇರಿಸಿಕೊಂಡಿದ್ದೇನೆ. ಪುನರಾವರ್ತನೆ, ಲೈಂಗಿಕ ವಿಚಾರಗಳ ವಿವರಗಳಲ್ಲಿ ಪಾಲಿಸುವ ಅಚ್ಚರಿಯ ಸಂಯಮ, ಅನಿರೀಕ್ಷಿತ ಅಂತ್ಯಕಾಣುವ ಪ್ರಕರಣಗಳು, ಪಾತ್ರಗಳು ತಮ್ಮ ಪ್ರಾಯವನ್ನು ಬದಲಿಸದೆ ಕಾಯ್ದುಕೊಳ್ಳುವುದು (ಮುಂದೆ ಯಾರೂ ಹೀಗೆ ಮಾಡಬಾರದು ಎಂಬ ಪ್ರಕರಣದಲ್ಲಿ ಕಣ್ಣ ಮತ್ತು ಮಾತುವಿನಂತಹ ಪಾತ್ರಗಳು)... ಇತ್ಯಾದಿ ಮಲೆಯಾಳಂ ಜನಪದ ಸಾಹಿತ್ಯದ

ವೈಶಿಷ್ಟ್ಯಗಳು ನಷ್ಟವಾಗದಂತೆ ಉಳಿಸಿಕೊಳ್ಳಲು ಯತ್ನಿಸಿದ್ದೇನೆ. ಭಾಷಾ ಶೈಲಿಯಲ್ಲಿ ಕೂಡ ಮೂಲಕ್ಕೆ ವಿಧೇಯನಾಗಿರುವುದು ನನಗೆ ಇಷ್ಟ. ತಚ್ಚೋಳಿ ಕಣ್ಮಣಿ ಬಾಲಒದೇನನು (ತಚ್ಚೋಳಿಯೋಮನ ಕುಂಇಞ್ಯೊದೇನನ್) ಕನ್ನಡಿಗರಿಗೂ ಪ್ರಿಯನಾದರೆ ನನಗೆ ಸಂತೋಷ.

ಒದೇನನ ಕಾಲದ ಮಧ್ಯಕಾಲೀನ ಕಡತ್ತನಾಡು: ಕೇರಳದ ಮಲಬಾರ್ ಪ್ರದೇಶದ ಕಡತ್ತನಾಡಿಗೆ ಉತ್ತರದಲ್ಲಿ ಮಾಹಿ ಹೊಳೆಯೂ ದಕ್ಷಿಣದಲ್ಲಿ ಪುದುಪಟ್ಟಣಂ ಹೊಳೆಯೂ ಮೇರೆಗಳು. ಫ್ಯೂಡಲ್ ವ್ಯವಸ್ಥೆಯ ಜಮೀನ್ದಾರಿ ಪದ್ಧತಿ ಜ್ಯಾರಿಯಲ್ಲಿದ್ದ ಕಾಲ. ಭತ್ತಕೃಷಿ ಮುಖ್ಯ ಜೀವನಾಧಾರ. ಸಾಕಷ್ಟು ತೆಂಗುಕೃಷಿ ಕೂಡ. ಕಡತ್ತನಾಡಿನ ಉತ್ತರಕ್ಕೆ ಕೋಲತ್ತಿರಿ ಅರಸರು, ದಕ್ಷಿಣಕ್ಕೆ ಸಾಮೂದಿರಿ ಅರಸರು. ಅವರ ಪರಸ್ಪರ ಸಂಘರ್ಷ. ಕೆಲವೊಮ್ಮೆ ಪೋರ್ಚುಗೀಸರ, ಬ್ರಿಟಿಷರ, ಹೈದರಾಲಿ – ಟಿಪ್ಪೂರ ಕಾರಣದಿಂದ ಉಂಟಾಗುತ್ತಿದ್ದ ಕಂಪನಗಳು. ಆದರೂ ಅಂದಿನ ಕಡತ್ತನಾಡು ಬಹುಮಟ್ಟಿಗೆ ಸ್ವತಂತ್ರ, ಸ್ವಚ್ಛಂದ. ನಾಲ್ಕು ಕಡೆ ಅರಸೊತ್ತಿಗೆ, ಅಲ್ಲಲ್ಲಿ ಸಣ್ಣ ಪುಟ್ಟ ಪಾಳಯಗಾರರು, ಭೂಮಾಲಿಕರು. ಯಾರಿಗೂ ಪರಮ ಪ್ರಾಬಲ್ಯವಿಲ್ಲ. ಗೇಣಿ ವಸೂಲಿ, ಪುಂಡತನದ ದಮನ ಮುಂತಾದವು ಗಳಿಗೆ ಕೂಡ ಅವರು ಪರಾಕ್ರಮಿಗಳಾದ ವೀರಪುರುಷರನ್ನು ಅವಲಂಬಿಸುತ್ತಿದ್ದರು. ಪರಸ್ಪರ ತಂಟೆ ತಕರಾರುಗಳು, ಸಮಸ್ಯೆಗಳು 'ಅಂಕ' ಎಂಬ ಒಂದು ವಿಶಿಷ್ಟ ದ್ವಂದ್ವಯುದ್ಧದ ಮೂಲಕವೇ ಪರಿಹಾರ ಕಾಣುತ್ತಿದ್ದವು. ವೃತ್ತಿಪರ ಅಂಕದಕಲಿ/ಕಾದಾಳುಗಳಿಗೆ ಸಮಾಜದಲ್ಲಿ ತುಂಬ ಮನ್ನಣೆಯಿತ್ತು. ಈ ಯುದ್ಧದಲ್ಲಿ ಒಂದು ಕಡೆಯ ಕಾದಾಳುವು ಕೆಲವೊಮ್ಮೆ ಮರಣಕ್ಕೆ ಈಡಾಗುತ್ತಿದ್ದ. ಒಮ್ಮೊಮ್ಮೆ ವಂಚನೆಗೆ ಪಕ್ಕಾಗಿಯೂ ಸಾವು ಸಂಭವಿಸುತ್ತಿತ್ತು. ವೀರನೊಬ್ಬನು 'ಅಂಕ'ದ ಆಹ್ವಾನವನ್ನು ಒಮ್ಮೆ ಸ್ವೀಕರಿಸಿದನಾದರೆ ಯಾವುದೇ ಕಾರಣಕ್ಕೆ ಮತ್ತೆ ಅದರಿಂದ ವಿಮುಖನಾಗುವುದು ಸಾಧ್ಯವಿಲ್ಲದ ಸಂಗತಿಯಾಗಿತ್ತು. ಹಾಗೇನಾದರೂ ತಪ್ಪಿದರೆ ತುಂಬ ಅಪಮಾನಕರವೂ ಆಗಿತ್ತು. ಅದರ ಬದಲು ಅಂಕದ ಕಣದಲ್ಲಿ ವೀರ ಮರಣವನ್ನು ಅಪ್ಪುವುದೆ ಶ್ರೇಯಸ್ಕರವೆಂದು ಭಾವಿಸಲಾಗಿತ್ತು. ಅಂಕದಲ್ಲಿ ಪ್ರಾಣ ತೆತ್ತವನ ಮಕ್ಕಳಾಗಲಿ ಸಂಬಂಧಿಕರಾಗಲಿ ಮತ್ತೆ ಹಗೆ ತೀರಿಸಿಕೊಳ್ಳುವುದೂ ಅಭಿಮಾನದ ಸಂಗತಿಯಾಗಿತ್ತು.

ಕಳರಿ ಮತ್ತು ಕುರಿಕ್ಕಳ್ – ಕಳರಿ ಮತ್ತು ಕುರಿಕ್ಕಳ್ (ಗುರುಗಳು) ಸಮಾಜದ ಶ್ರದ್ಧಾ ಕೇಂದ್ರವಾಗಿದ್ದರು. ಪುತ್ತೂರು, ತಚ್ಚೋಳಿ, ಕಪ್ಪಳಿ, ಮದಿಲೇರಿ, ಮದಿಲೂರು, ಪುದುಶ್ಶೇರಿ, ಅರಿಂಜೋಡರ್, ನಾದಾಪುರ, ಪಯ್ಯಂಬಳ್ಳಿ, ಕರುವಾಂಚೇರಿ, ಕುರುಂಜೋಟ್ಟ್, ಕೋದುಮಲ, ಮೇಲೂರ್, ಕೋಲಪಟ್ಟಣಂ, ಮಾಡಾಯಿ, ನಾರಾತ್ತ್, ತಳಾಪ್ಪ್, ಪೂಕ್ಕುನ್ನಂ – ಹೀಗೆ ಅನೇಕ ಕಳರಿಗಳು (ಗರಡಿಗಳು) ಅಂದಿನ ಕಾಲದಲ್ಲಿ

ಪ್ರಸಿದ್ಧವಾಗಿದ್ದುವು. 'ಅಂಕ'ಕ್ಕೆ ಸಂಬಂಧಿಸಿದಂತೆ ಪೊನ್ನಿಯಂ ಮತ್ತು ಮಯ್ಯಯಿ (ಮಾಹಿ) ಕಳರಿಗಳು ತುಂಬ ಪ್ರಖ್ಯಾತವಾಗಿದ್ದುವು. ಕಡತ್ತನಾಡಿನ ಕಳರಿವೀರರು ತುಳುನಾಡಿನ ಗುರುಗಳಲ್ಲಿ ಬಂದು ವಿಶೇಷ ತರಬೇತಿ ಪಡೆಯುತ್ತಿದ್ದರು. 'ಪೊಯ್ತ್' ಎಂಬುದು ಕಳರಿ ಪಯಟ್ಟ್‌ನ (ಗರಡಿ ಸಾಧನೆಯ) ಒಂದು ವಿಶಿಷ್ಟ ಸ್ಪರ್ಧಾರೂಪವಾಗಿದ್ದು ಅದರಲ್ಲಿ ಹಗೆತನವಾಗಲಿ ಪ್ರಾಣಾಪಾಯವಾಗಲಿ ಇರಲಿಲ್ಲ. 'ಅಂಕ'ದಂತೆ ಅದು ಗಂಭೀರ ಸ್ವರೂಪದ್ದಾಗಿರದೆ ಮನೋರಂಜನ ರೂಪದ ಸ್ಪರ್ಧೆಯಾಗಿತ್ತು. ಅಂಗಸಾಧನೆ, ಸ್ಪರ್ಧೆ, ಹೋರಾಟ, ಅಂಕ, ಯುದ್ಧ ಇತ್ಯಾದಿಗಳೇ ವೀರ ಯುವಕರ ದೈನಂದಿನ ದಿನಚರಿಯಾಗಿದ್ದವು. ಅವರ ಭವಿಷ್ಯವು ಸದಾ ಡೋಲಾಯಮಾನವಾಗಿ ಅತಂತ್ರವಾಗಿತ್ತು. ಕಳರಿ ಮತ್ತು ಚಾವೇರ್ (ವೃತ್ತಿಪರ ಕಾದಾಟ) ಸಂಪ್ರದಾಯಗಳ ಅನಿಷ್ಟಗಳನ್ನು ಮನಗಂಡು 1793 ರಲ್ಲಿ ಮೇಜರ್ ಡೋ ಎಂಬ ಆಂಗ್ಲ ಅಧಿಕಾರಿಯು ಅವುಗಳನ್ನು ನಿಷೇಧಿಸಿದ ಬಳಿಕವಷ್ಟೆ ಆ ಪದ್ಧತಿಗಳು ಕಣ್ಮರೆಯಾದವು.

ತೆಂಡಯ್ಕ್ ಪೋವುಗ (ತಿರುಗಾಟಕ್ಕೆ ಹೋಗುವುದು) – ಇದು ಮೇಲ್ವರ್ಗದ ತರುಣರ ಒಂದು ಹವ್ಯಾಸವಾಗಿತ್ತು. ಗೇಣಿವಸೂಲಿ, ಕೃಷಿ ಕೆಲಸಗಳ ಮೇಲ್ವಿಚಾರಣೆ ಇತ್ಯಾದಿಗಳು ತೋರಿಕೆಗೆ ಇದರ ಗುರಿಯಾಗಿದ್ದರೂ ನಿಜವಾಗಿಯೂ ಇದು ಯುವಕರ ಸ್ವಚ್ಛಂದ ತಿರುಗಾಟವಾಗಿತ್ತು. ಮನೆಯಿಂದ ಹೊರಟು ಒಂದಿಷ್ಟು ದಿನ ತಿರುಗಾಡುತ್ತ ಕಳೆದು ಮರಳುವುದು. ಆ ಸಂದರ್ಭದಲ್ಲಿ ಕಳರಿಗಳಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಭಾಗವಹಿಸುವುದು, ತರುಣಿಯರ ವಶೀಕರಣ, ಅಪರಿಚಿತ ಊರು/ಜನರ ಸಂಪರ್ಕ ಇತ್ಯಾದಿಗಳಲ್ಲೂ ತೊಡಗಿಸಿಕೊಳ್ಳುವುದು. ವಡಕ್ಕನ್ ಪಾಟ್ಟುಗಳಲ್ಲಿ ಒದೇನನನ್ನೂ ಒಳಗೊಂಡಂತೆ ಇನ್ನೂ ಕೆಲವು ಯುವಕರು ಹೀಗೆ ಸಂಚಾರ ಹೋದುದರ ವಿವರಗಳಿವೆ.

ಒಂದು ಪ್ರಬಲ ಕೇಂದ್ರೀಯ ವ್ಯವಸ್ಥೆ ಇಲ್ಲದೆ ತೋಳ್ಬಲವೇ ನ್ಯಾಯ ಎಂಬಂತಿದ್ದ ಕಾಲಘಟ್ಟದಲ್ಲಿ ಕಡತ್ತನಾಡು ಅರಾಜಕತೆಯ ಮಡಿಲಾಗಿತ್ತು. ಹೊನ್ನು ಹೆಣ್ಣುಗಳ ಖಯಾಲಿಗೆ ಬಿದ್ದು ಶ್ರೀಮಂತರೂ ಮೇಲ್ವರ್ಗದವರೂ ಭೋಗಲಾಲಸಿಗಳಾಗಿದ್ದರು. ಭೋಗಜೀವನಕ್ಕಾಗಿ ಏಳಂತಸ್ತಿನ ಉಪ್ಪರಿಗೆ ಮನೆಗಳನ್ನು, ನಾನಾತೆರನ ಬಲಿಷ್ಠ ಕೋಟೆಗಳನ್ನು ಅವರು ಕಟ್ಟಿಸಿಕೊಂಡು ಸದಾ ತಮ್ಮ ಪುಂಡ ಅಂಗರಕ್ಷಕರೊಂದಿಗೆ ತಿರುಗಾಡುತ್ತ ಬದುಕು ಸಾಗಿಸುತ್ತಿದ್ದರು. ಕಟ್ಟಿಸುತ್ತಿದ್ದ ಕೋಟೆಗಳನ್ನು ನೋಡಹೋಗುವುದು, ಆ ಕೋಟೆಯಲ್ಲಿನ ಸಂಪತ್ತನ್ನು ವಶಪಡಿಸಿಕೊಳ್ಳುವುದು ಕೂಡ ಮೇಲ್ವರ್ಗದ ತರುಣರ ಖಯಾಲಿಗಳಾಗಿದ್ದವು (ಒದೇನನು ಹಾಗೆ ಅನೇಕ ಬಾರಿ ಕೋಟೆ ನೋಡಲು ಹೋದ ವಿವರಗಳು ವಡಕ್ಕನ್ ಪಾಟ್ಟುಗಳಲ್ಲಿ ಬರುತ್ತವೆ). ಜಾತಿಪ್ರಜ್ಞೆ ಅಷ್ಟೊಂದು ತೀವ್ರವಾಗಿರದಿದ್ದ

ಕಾಲಘಟ್ಟ ಕಳೆದು ಅದು ಬರುಬರುತ್ತ ತೀವ್ರವಾಗಿ ನಾಯರ್ ತರುಣರು ತೀಯ ತರುಣರ ಬಗೆಗೆ ಅಸಹನೆ ತೋರುತ್ತಿದ್ದ ಸಾಕಷ್ಟು ನಿದರ್ಶನಗಳು ವಡಕ್ಕನ್ ಪಾಟ್ಟುಗಳಲ್ಲಿವೆ.

ಸ್ತ್ರೀಯರು ಬದುಕು – ಕುಟುಂಬ ವ್ಯವಸ್ಥೆ ಮಾತೃಪ್ರಧಾನವಾಗಿದ್ದರೂ ಅದು ಪುರುಷಾಧಿಷ್ಠಿತ ಸಮಾಜವಾಗಿತ್ತು. ಸಾಮಾನ್ಯವಾಗಿ ಮನೆಯೊಳಗಿನ ವ್ಯವಹಾರಗಳಿಗೆ ಹೆಣ್ಣು ಸೀಮಿತವಾಗಿದ್ದಳು. ಪ್ರತಿಷ್ಠಿತ ಮನೆತನಗಳಲ್ಲಿನ ಹುಡುಗಿಯರು ಚಿಕ್ಕಂದಿನಲ್ಲಿ ಕಳರಿಗಳಿಗೆ ಹೋಗಿ ಓದು ಬರಹ ಕಲಿಯುವ ಪದ್ಧತಿಯಿತ್ತು. ಕೆಲವೊಮ್ಮೆ ಗುರುಕ್ಕಳೇ ಮನೆಗೆ ಬಂದು ಹೆಣ್ಣು ಮಕ್ಕಳಿಗೆ ಅಕ್ಷರಾಭ್ಯಾಸವನ್ನೂ ವಿರಳವಾಗಿ ಅಂಗಸಾಧನೆಯನ್ನೂ ಕಲಿಸುತ್ತಿದ್ದರು. ಮೈನೆರೆದರೆ ಅದನ್ನು ಸಾರಿ ಹೇಳುವ ತೆರಂಡ್ ಕಲ್ಯಾಣಂ (ಋತುಮತಿ ಮದುವೆ) ಎಂಬ ಕಾರ್ಯಕ್ರಮ. ಬಳಿಕ 'ಕೆಟ್ಟ್ ಕಲ್ಯಾಣ' (ತಾಳಿಕಟ್ಟಿ ಮದುವೆ). ಇದರಲ್ಲಿ ಕೂಡಾ ತಾಳಿಕಟ್ಟುವ ಗಂಡನಿಗೆ ಮೂರು ದಿನಗಳ ಅವಧಿಯವರೆಗೆ ಮಾತ್ರ ಹೆಣ್ಣಿನ ಮೇಲೆ ಅಧಿಕಾರ. ಆಮೇಲೆ ಅವಳಿಗೆ ಇಷ್ಟವಿಲ್ಲದಿದ್ದರೆ ಅವನನ್ನು ಮದುವೆಯಾಗಲೇ ಬೇಕೆಂಬ ನಿರ್ಬಂಧವಿರಲಿಲ್ಲ. ಮಧ್ಯಕಾಲೀನ ಕಡತ್ತನಾಡಲ್ಲಿ ಪುಡಮುರಿ, ಒಲವಿಲ ಮುರಿಕ್ಕಲ್, ಊವಂ ಪೊರುಕ್ಕಲ್/ಊವಂ ಬಯಂಜಲ್ ಮುಂತಾದ ವಿವಾಹ ಕ್ರಮಗಳಿದ್ದುವೆಂದು ತಿಳಿಯುತ್ತದೆ. ವಧೂವರರ ಜಾತಕಗಳು ಸೇರಿಬರುವುದಾದರೆ ದಿನ ನಿಶ್ಚಯಿಸಿ ನಡೆಸುವ ಮದುವೆ–ಪುಡಮುರಿ. ಇದರಲ್ಲಿ ವರನು ವಧುವಿಗೆ ಹೊಸಬಟ್ಟೆ ಕೊಡಬೇಕು. ಅದನ್ನು ಆಕೆ ಸ್ವೀಕರಿಸಿ ಉಟ್ಟುಕೊಳ್ಳುವುದೂ ಮುಖ್ಯ ಕ್ರಿಯೆ. ಇದು ಮೇಲ್ವರ್ಗದವರಲ್ಲಿ ರೂಢಿಯಲ್ಲಿದ್ದ, ಅತ್ಯಂತ ದುರ್ಬಲ ಸ್ವರೂಪದ ಒಂದು ವಿವಾಹ ಕ್ರಮ. ಹೆಣ್ಣಿನ ಮನೆಗೆ ಗಂಡು ಹೋಗಿ ಅವಳಿಗೆ ಇಷ್ಟವಾದಲ್ಲಿ ಮೂರುದಿನ ಜತೆಗಿದ್ದು ದೈಹಿಕ ಸಂಪರ್ಕ ಕೂಡ ಮಾಡಬಹುದು. ಬಳಿಕ ಪುಡಮುರಿ ಕಾರ್ಯಕ್ರಮ ನಡೆಯುತ್ತದೆ. ಆದರೆ ಅವಳು ಗಂಡನ ಮನೆಗೆ ಹೋಗುವಂತಿಲ್ಲ.

ವಡಕ್ಕನ್ ಪಾಟ್ಟುಗಳಲ್ಲಿ ಕಂಡುಬರುವ ವಿವರಗಳ ಪ್ರಕಾರ ಹೆಂಗಸರ ವಾಸ ಪಡಿಂಞಾಟ್ಟ (ಪಡುಕೋಣೆ) ದಲ್ಲಿ. ಅಲ್ಲಿ ತಮ್ಮ ತಮ್ಮ ಅಂತಸ್ತಿಗೆ ಅನುಸಾರ ಶಯ್ಯಾ ಸೌಕರ್ಯ. ಹೊಂಬೆತ್ತದ ಮಂಚ/ರತ್ನ ಮಂಚಗಳ ಪ್ರಸ್ತಾಪವೂ ಪಾಟ್ಟುಗಳಲ್ಲಿದೆ. ಮಂಚದ ಮೇಲೆ ಹಾಸಿಗೆ. ಹಾಸಿಗೆಗೆ ರೇಶ್ಮೆಯ ಹಾಸು. ಗಂಡ (ಪಾಟ್ಟುಗಳಲ್ಲಿ ಇವನನ್ನು 'ಬಂಧು' ಎಂದು ಕರೆದಿದೆ), ಸಂಬಂಧ ಬೆಳೆಸಿದವ, ಇಷ್ಟವಾದವ – ಇವರನ್ನು ಪಡುಕೋಣೆಯಲ್ಲಿ ಹೆಣ್ಣು ಕೂಡುತ್ತಾಳೆ. ಹಣಕ್ಕಾಗಿ ಕೆಲವೊಮ್ಮೆ ಮನೆಯ ಹಿರಿಯರು ಹುಡುಗಿಯರನ್ನು ಬಲವಂತವಾಗಿ ಪುರುಷರಿಗೆ ಹಾಗೆ ಪಡುಕೋಣೆಯಲ್ಲಿ ಒದಗಿಸಿ ಕೊಡುವುದೂ ಇತ್ತು. ನಾಯರ್‌ರಂಥ ಮೇಲ್ವರ್ಗದ ಹೆಣ್ಣುಮಕ್ಕಳನ್ನು ತೀಯ, ಮುಸಲ್ಮಾನ ಮುಂತಾದವರು ಒಂದಷ್ಟು ಚಿನ್ನಕೊಟ್ಟು ವಿವಾಹವಾಗುವ ಸಂಪ್ರದಾಯವಿತ್ತು. ಅನ್ಯ

ಮತೀಯ ಮುಸಲ್ಮಾನರು ಹಾಗೆ ಚಿನ್ನನೀಡಿ ನಾಯರ್ ಹುಡುಗಿಯರನ್ನು ಪಡೆಯುತ್ತಿದ್ದರು. ಈ ರೂಢಿ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲೂ ಬಳಕೆಯಲ್ಲಿತ್ತೆಂದು ಕಾಣುತ್ತದೆ. ಸ್ತ್ರೀಯರಿಗೆ ಕಟ್ಟುನಿಟ್ಟಾದ ಪಾತಿವ್ರತ್ಯದ ನಿರ್ಬಂಧ ಇದ್ದಂತಿಲ್ಲ. ಪುರುಷರಿಗಂತೂ ಲೈಂಗಿಕ ನಿರ್ಬಂಧವೇ ಇದ್ದಂತಿಲ್ಲ. ಅವರು ಎಷ್ಟು ಜನ ಸ್ತ್ರೀಯರಲ್ಲಾದರೂ ಯಾವುದೇ ರೀತಿಯ ಸಂಬಂಧ ಇಟ್ಟುಕೊಳ್ಳುತ್ತಿದ್ದರು, ವಿವಾಹಿತೆಯರಲ್ಲಿ ಕೂಡ. ಆದರೆ ಕೆಲವು ವಡಕ್ಕನ್ ಪಾಟ್ಟುಗಳಲ್ಲಿ ಸ್ತ್ರೀಯ ವಂಚನೆ – ವಿಶ್ವಾಸಘಾತಕತನಕ್ಕೆ ಉಗ್ರಶಿಕ್ಷೆಯನ್ನು ವಿಧಿಸುತ್ತಿದ್ದ ಸೂಚನೆಗಳಿವೆ. ಉರಿವ ಅಗ್ನಿಕುಂಡ ನಿರ್ಮಿಸಿ ಅದರಲ್ಲಿ ಬೀಳುವಂತೆ ಮಾಡುವುದು, ಕಡಿದು ಕೊಲೆ, ಛಡಿಯೇಟು, ದೈಹಿಕ ಶ್ರಮದಾಯಕ ಕೆಲಸ ಮಾಡಿಸುವುದು, ಅಲ್ಪಾಹಾರ ನೀಡುವುದು – ಇತ್ಯಾದಿ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು.

ಪ್ರತಿಷ್ಠಿತ ಮನೆಯ ಹುಡುಗಿಯರು ವಿರಾಮ ಕೋಣೆಯಲ್ಲಿ ರೇಶ್ಮೆ ಕಟ್ಟಿನ ತಾಳೆಯೋಲೆ ಗ್ರಂಥವನ್ನು ತಂದು ಚಾವಡಿಯಲ್ಲಿ ಕುಳಿತುಕೊಂಡು ಅವನ್ನು ಓದುತ್ತಿದ್ದರು/ಹಾಡುತ್ತಿದ್ದರು. ಪಾಟ್ಟ್‌ಗಳಲ್ಲಿ ಕಂಡು ಬರುವಂತೆ ಅವರು ಹಾಗೆ ಓದುವುದು ರಾಮಾಯಣವನ್ನೇ. ಹಾಗೆ ಓದುತ್ತಿರುವಾಗ ಮಾನ್ಯರಾದ ಪುರುಷ ಅತಿಥಿಗಳು ಬಂದರೆ ಓಲೆಕಟ್ಟನ್ನು ಕಟ್ಟಿ ಒಳಗೆ ಒಯ್ದಿಟ್ಟು ಬಂದು ಶಿಷ್ಟಾಚಾರಗಳನ್ನು ಮಾಡಬೇಕು. ಕುಳಿತುಕೊಳ್ಳಲು ಮೃದುವಾದ ಹುಲ್ಲಚಾಪೆ ಕೊಡಬೇಕು. ಕುಡಿಯಲು ಗಿಂಡಿಯಲ್ಲಿ ನೀರು/ಹಾಲು ಕೊಡಬೇಕು.

ಪುರುಷರ ಪ್ರಣಯಭಿಕ್ಷೆ, ಕಾಮಲಾಲಸೆಗಳಿಂದ ಅಂದಿನ ಸ್ತ್ರೀಯರು ತುಂಬ ಬವಣೆ ಪಡುತ್ತಿದ್ದುದು ಪಾಟ್ಟುಗಳಿಂದ ಗೊತ್ತಾಗುತ್ತದೆ. ಉಳಿದಂತೆ ಅವರು ಗೃಹಕೃತ್ಯಗಳಲ್ಲಿ ಮಗ್ನವಾಗಿರುತ್ತ ಸಂಸಾರ ನಿಭಾಯಿಸುತ್ತಿದ್ದರು. ಶ್ರೀಮಂತ ಮನೆತನದ ಹೆಂಗುಸರು ರೇಶ್ಮೆಯ ಬಟ್ಟೆಬರೆ, ಚಿನ್ನ ಬೆಳ್ಳಿಯ ಆಭರಣಗಳಿಂದ ಅಲಂಕರಿಸಿಕೊಂಡು ದೇವತಾದರ್ಶನ, ಜಾತ್ರೆ ಇತ್ಯಾದಿಗಳಿಗೆ ಹೋಗುತ್ತಿದ್ದರು. ಹಾಲನ್ನ, ಹಳೆಯಕ್ಕಿಯ ಅನ್ನ – ತುಂಬೆಯ ಹೂವಿನಂಥ ಅನ್ನವನ್ನು ಮಾಡಿ ಬೇರೆ ಬೇರೆ ತರಕಾರಿಗಳಿಂದ ಸೊಗಸಾದ ಪದಾರ್ಥ/ಮೇಲೋಗರಗಳನ್ನು ಸಿದ್ಧಪಡಿಸಿ, ರಸಬಾಳೆಯ ತುದಿಯೆಲೆಯಿಟ್ಟು ಅವನ್ನು ಬಡಿಸಿ ದನದ ಶುದ್ಧ ತುಪ್ಪವನ್ನು ಕಾಸಿ ಎರೆದು, ಗಂಡುಸನ್ನು/ ಅತಿಥಿಯನ್ನು ಉಣ್ಣಿಸುವ ಸ್ತ್ರೀಯರ ಸುಂದರ ಚಿತ್ರವನ್ನೂ ವಡಕ್ಕನ್ ಪಾಟ್ಟ್‌ಗಳು ನೀಡುತ್ತವೆ. ಒಲ್ಲದ ಗಂಡಿನ ಪ್ರಣಯವನ್ನು/ಕಾಮ ಭಿಕ್ಷೆಯನ್ನು ಧಿಕ್ಕರಿಸುವ, ಕೆಲವೊಮ್ಮೆ ವಂಚಕನಾದ ಕಾಮುಕ ಪುರುಷನ ಕಾಮಕ್ಕೆ ಬಲಿಯಾಗುವ, ಚಿನ್ನದ/ಹಣದ ಆಸೆಗೆ ಬಲಿಬೀಳುವ, ತಿಳಿದೇ ಪರಪುರುಷನ ತೆಕ್ಕೆಗೆ ಬೀಳುವ ಹೆಣ್ಣುಗಳೂ ಇದ್ದರು.

ಸಾಮಾನ್ಯವಾಗಿ ಅಂದಿನ ಕಡತ್ತನಾಡಲ್ಲಿ ಹಿರಿಯರಿಗೆ ಗೌರವದ ಸ್ಥಾನವಿತ್ತು. ಅವರ ಪಾದಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುವುದು ರೂಢಿ. ಹಿರಿಯರಲ್ಲಿ ಮಾತನಾಡುವಾಗ ಬಾಗಿ, ಕೈಯನ್ನು ಬಾಯಿಗೆ ಅಡ್ಡಹಿಡಿದು ವಿನಯಪೂರ್ವಕವಾಗಿ ಮಾತನಾಡುತ್ತಿದ್ದರು. ಮನೆ ಯಿಂದ ಹೊರಗೆ ಹೊರಪಯಣ ಹೊರಡುವಾಗಲೂ ಅಂಕ ಇತ್ಯಾದಿಗಳನ್ನು ಆರಂಭಿಸು ವಾಗಲೂ ಹಿರಿಯರ ಹರಕೆ ಪಡೆಯುವ ಅಭ್ಯಾಸವಿತ್ತು. ಕಳರಿಯ ಗುರುಕ್ಕಳಿಗೂ ಸಮಾಜದಲ್ಲಿ ಗೌರವದ ಸ್ಥಾನಮಾನವಿತ್ತು. ಊರ ಅರಸ, ಹಿರಿಯ ಅಧಿಕಾರಿಗಳಿಗೂ ಗೌರವ ಇದ್ದೇ ಇರುತ್ತಿತ್ತು. ಶ್ರೀಮಂತಿಕೆ, ಜಾತಿ, ಅಧಿಕಾರ, ವಯಸ್ಸು – ಎಲ್ಲವೂ ಗೌರವ ನೀಡುವುದಕ್ಕೆ ಮಾನದಂಡಗಳಾಗಿದ್ದುವು.

ಅಂದಿನದು ಜ್ಯೋತಿಷ್ಯದಲ್ಲೂ ಮಂತ್ರವಾದದಲ್ಲೂ ವಿಶೇಷ ನಂಬಿಕೆಯಿದ್ದ ಸಮಾಜ. ಗುಂಡು ತಾಗದಂತೆ ರಕ್ಷಿಸುವ ಮಂತ್ರಿಸಿದ ತಾಯಿತದಂಡೊಂದು ಒದೇನನಲ್ಲಿತ್ತು. ಮಂತ್ರತಂತ್ರದ ಬಲದಿಂದ ಕೋಣೆಯ ಭದ್ರ ಬಾಗಿಲನ್ನು ತೆರೆಯುವ ಹಾಗೂ ವ್ಯಕ್ತಿಯೊಬ್ಬ ಫಕ್ಕನೆ ಅದೃಶ್ಯವಾಗುವ ವಿವರಗಳು ಪಾಟ್ಟುಗಳಲ್ಲಿ ಲಭ್ಯ. ನಿಮಿತ್ತಗಳು, ಶಕುನಗಳು ಭವಿಷ್ಯ ಸೂಚಕಗಳಾಗಿದ್ದುವು.

ವಿಶೇಷ ಸಂದರ್ಭಗಳಲ್ಲಿ ವರ್ತಮಾನ – ಭವಿಷ್ಯಗಳ ಗತಿಯನ್ನು ನಿರ್ಧರಿಸಲು ಜ್ಯೋತಿಷ್ಯದ ಮೊರೆಹೊಗುತ್ತಿದ್ದರು. ಒಳಗೆ ವಾರಿಯರ್ ಎಂಬ ಮೇಲ್ಜಾತಿಯ ಜೋಯಿಸ, ಹೊರಗೆ ಕಣಿಶ ಎಂಬ ಕೆಳಜಾತಿಯ ಜೋಯಿಸರು ಕವಡೆ ತಿರುಗಿಸಿ ನಿಮಿತ್ತ ಹೇಳುತ್ತಿದ್ದರು.

ದೇವಾಲಯ – ದೈವಾಲಯಗಳಲ್ಲಿನ ಅತಿಮಾನುಷ ಶಕ್ತಿಗಳ ಬಗೆಗೆ ಜನರಿಗೆ ಅಪಾರ ವಿಶ್ವಾಸವಿತ್ತು. ದೇವಾಲಯ/ಕಾವ್‌ನ ದೊಡ್ಡ ಕೆರೆಯಲ್ಲಿ ಮಿಂದು ಸಣ್ಣ ಕೆರೆಯಲ್ಲಿ ಕೈಕಾಲು ತೊಳೆದುಕೊಂಡು ಸುಗಂಧಲೇಪನ ಮಾಡಿ ಜಾತಿ ಪದ್ಧತಿಗನುಸಾರವಾಗಿ ನಾಮಗಳನ್ನು ಧರಿಸಿಕೊಂಡು ಶುಚಿರ್ಭೂತರಾಗಿ ಪುರುಷರು ದೇವಾಲಯ ಪ್ರವೇಶ ಮಾಡುತ್ತಿದ್ದರು. ಅರ್ಚಕರಿಂದ ದೀಪ ಬೆಳಗಿಸಿ ದೇವರ ದರ್ಶನ. ಭಂಡಾರ ಡಬ್ಬಕ್ಕೆ ಕಾಣಿಕೆ ಹೊನ್ನು ಹಾಕುವುದು (ಸಾಮಾನ್ಯವಾಗಿ ಹದಿನಾರು ಹಣ), ಆಭರಣಗಳು ಹೊನ್ನು ಇತ್ಯಾದಿಗಳನ್ನು ಅರ್ಪಿಸುವುದು, ಸಿಡಿಮದ್ದು ಸಿಡಿಸುವುದು, ಜೀರ್ಣೋದ್ಧಾರ – ಇತ್ಯಾದಿ ಹರಕೆಗಳನ್ನು ಹೇಳಿಕೊಳ್ಳುತ್ತಿದ್ದರು. ಹಾಗೆ ಹೇಳಿಕೊಂಡ ಹರಕೆಯನ್ನು ಪುನಃ ಒಪ್ಪಿಸುವಾಗಲೂ ಕೆಲವು ಶಿಷ್ಟಾಚಾರಗಳನ್ನು ಪಾಲಿಸಬೇಕಾಗುತ್ತಿತ್ತು.

ಪ್ರತಿಷ್ಠಿತ ಮನೆಗಳಿಗೆಲ್ಲ ಬಾವಿ/ಕೆರೆಗಳು. ಬಾವಿ/ಕೆರೆಗೊಂದು ಏತ. ಏತದ ನೀರು ಬಿದ್ದು ಹರಿಯುವಲ್ಲಿ ಹೂಗಿಡಗಳು. ಕೈಕಾಲು ತೊಳೆಯುವುದು, ಮುಖ ತೊಳೆಯುವುದು

ಅಲ್ಲೇ. ಸ್ನಾನ ಮಾತ್ರ ಕೊಳಗಳಲ್ಲಿ. ಎಣ್ಣೆ ಹಚ್ಚಿಕೊಂಡು ಮಾಡುವ ಸ್ನಾನವು ವಿಶೇಷ. ತಲೆಗೆ ಗೊಂಪು ಹಚ್ಚಿಕೊಂಡು ತೊಳೆದ ಬಳಿಕ ಮೈಗೆ ಬಾಗೆ ಹುಡಿ ಹಚ್ಚಿ ಸ್ನಾನ. ಸ್ನಾನ ಮಾಡುವ ಹೆಣ್ಣಲ್ಲಿ ತಲೆಕೂದಲಿಗೆ ಹಚ್ಚಿಕೊಳ್ಳಲು ಎಣ್ಣೆ ಅಥವಾ ಗೊಂಪು ಕೇಳುವುದು ಅವಲ ಒಲವನ್ನು ಪರೀಕ್ಷಿಸುವ ಪುರುಷವಿಧಾನ. ಹಾಗೆಯೇ ತಾಂಬೂಲ ಹಾಕಲು ವೀಳ್ಯ ಕೇಳುವುದು ಕೂಡ. ಕೆಲವೊಮ್ಮೆ ಪ್ರಣಯಯಾಚನೆಗೆ ನಿರ್ಭಿಡೆಯ ನೇರ ವಿಧಾನಕೂಡ ಬಳಕೆಯಲ್ಲಿತ್ತು.

ಊರ ಅರಸು, ಪ್ರತಿಷ್ಠಿತ ಮನೆತನದ ಪುರುಷರು ಹೊರ ಹೊರಡುವಾಗ ತಮ್ಮ ತಮ್ಮ ಅಂತಸ್ತಿಗೆ ಅನುಸಾರವಾಗಿ ಪಾರುಪತ್ಯಗಾರರು, ಅಂಗರಕ್ಷಕರು, ಸೈನಿಕರನ್ನು ಜತೆಗೆ ಕರೆದು ಕೊಳ್ಳುತ್ತಿದ್ದರು. ಹನ್ನೆರಡು, ಇಪ್ಪತ್ತೆರಡು, ಮೂವತ್ತಮೂರು ಮಂದಿ ಅಂಗರಕ್ಷಕ ನಾಯಮ್ಮಾರ ರೊಂದಿಗೆ ಅರಸ/ಪ್ರತಿಷ್ಠಿತ ತರವಾಡಿನ ಯಜಮಾನ ಹೊರಟು ಹೋಗುತ್ತಿರುವ ಚಿತ್ರ ವಡಕ್ಕನ್ ಪಾಟ್ಟುಗಳಲ್ಲಿ ಸಾಮಾನ್ಯ. ಕಳರಿ ಗುರುಕ್ಕಳ್ ತಮ್ಮ ಶಿಷ್ಯರ ಬೆಂಗಾವಲಲ್ಲಿ ಸಂಚಾರ ಹೊರಡುತ್ತಿದ್ದರು. ಸಾಮಾನ್ಯವಾಗಿ ಕಂಡಾಚ್ಚೇರಿ ಚಾಪ್ಪನನ್ನಷ್ಟೆ ಕರೆದುಕೊಳ್ಳುತ್ತಿದ್ದ ಒದೇನ ತನ್ನ ಕೊನೆಯ ಪೊನ್ನಿಯಂ ಅಂಕಕಾದಲು ಹೋದಾಗ ಐನೂರು ಜನ ಜತೆಗಿದ್ದರಂತೆ.

ಊರಿಂದೂರಿಗೆ ಸಂದೇಶ, ಸುದ್ದಿಗಳನ್ನು ತಲುಪಿಸುತಿದ್ದವರು ಸಾಮಾನ್ಯವಾಗಿ ಚಾರಣ ಬ್ರಾಹ್ಮಣರು (ಪಾಲಕ್ಕಾಡ್ ಪಟ್ಟಮ್ಮಾರ್, ಉಲಾದಿರಿ ಪಟ್ಟಮ್ಮಾರ್). ಸಂದೇಶ ಕಳಿಸಲು/ಸುದ್ದಿ ತಿಳಿಸಲು ಸಾಮಾನ್ಯವಾಗಿ ತಾಳೆಯೋಲೆಗಳನ್ನು ಬಳಸುತ್ತಿದ್ದರು. ಈ ಚಾರಣ ಬ್ರಾಹ್ಮಣರಿಗೆ ಊರ ಆಢ್ಯರ ವತಿಯಿಂದ ಊಟದ ವ್ಯವಸ್ಥೆ ಇತ್ತು. ಭೋಜನ ಶಾಲೆಗಳು (ಊಟ್ಟುಪುರ) ಇದ್ದವು. ಇಲ್ಲವಾದರೆ ಅವರಿಗೆ ಅಟ್ಟುಣ್ಣಲು ಅಡುಗೆಯ ಸಾಮಾನುಗಳನ್ನೂ ಪಾತ್ರೆ ಪರಡಿಗಳನ್ನೂ ಕೊಡುತ್ತಿದ್ದರು. ಉಳಿದ ವರ್ಣದವರಿಗೂ ರಾತ್ರೆಯ ಊಟ ಮತ್ತು ಉಳಕೊಳ್ಳುವ (ಅಂದಿ ಉಣ್ಣಲ್, ಅಂದಿ ಉರಂಜಲ್‌ಗಳಿಗೆ) ವ್ಯವಸ್ಥೆ ಇತ್ತು.

ವಡಕ್ಕನ್ ಪಾಟ್ಟುಗಳಲ್ಲಿ ಮುಸ್ಲಿಮರ ಕುರಿತು ಅನೇಕ ಉಲ್ಲೇಖಗಳಿವೆ. ಅವರನ್ನು 'ಜೋನಕರು' ಎಂಬ ಪರಿಭಾಷೆಯಲ್ಲಿ ಗುರುತಿಸಲಾಗಿದೆ. ಚರಿತ್ರೆಯಲ್ಲಿ ಪ್ರಸಿದ್ಧನಾದ ಕುಂಞಾಲಿ ಮರಕ್ಕಾರನು ಪಾಟ್ಟ್‌ಗಳಲ್ಲಿ ಪ್ರವೇಶ ಪಡೆದಿದ್ದಾನೆ. ವಡಕ್ಕನ್ ಪಾಟ್ಟ್‌ಗಳಲ್ಲಿ ಪೋರ್ಚುಗೀಸರನ್ನೂ ಆಂಗ್ಲರನ್ನೂ ವೆಳ್ಳಕ್ಕಾರ್ (ಬಿಳಿಯರು) ಎಂದು ಹೆಸರಿಸಲಾಗಿದ್ದು ಅವರ ಕುರಿತೂ ಕೆಲವು ವಿವರಗಳಿಗೆ. ಕಲ್ಲಿಕೋಟೆಯ ಪೋರ್ಚುಗೀಸರು ಮತ್ತು ತಲಶ್ಶೇರಿಯ ಇಂಗ್ಲಿಷರು ನಡೆಸಿದ ಪುಂಡಾಟಿಕೆಯ ತಲ್ಲಣಗಳು ಮತ್ತು ಕಡತ್ತುನಾಡಿನ ಜನಪದರು ಅದಕ್ಕೆ ತೋರಿದ ಪ್ರತಿಕ್ರಿಯೆಯ ಕೆಲವು ಚಿತ್ರಣಗಳೂ ತಚ್ಚೋಳಿ ಪಾಟ್ಟುಗಳಲ್ಲಿವೆ.

ನಮ್ಮ ಕಥಾನಾಯಕ –

ಒದೇನನ ಬದುಕಿನ ಬಗೆಗೆ ಸಾಕಷ್ಟು ಐತಿಹಾಸಿಕ ವಿವರಗಳು ಲಭ್ಯವಿಲ್ಲ. ಆತ ಉತ್ತರಕೇರಳದ ಜನಪ್ರಿಯನಾದ ಜನಪರ ವೀರ. ಬಹುಶಃ ಜನಪ್ರಿಯತೆಯಲ್ಲಿ ಮಲಯಾಳ ಜನಪದ ಸಾಹಿತ್ಯದಲ್ಲಿ ಇವನ ಜತೆ ಸ್ಪರ್ಧಿಸಬಲ್ಲವನು ಆರೋಮಲ್ ಚೇಗವರ್ ಎಂಬ ಇನ್ನೊಬ್ಬ ವೀರ ಮಾತ್ರ. ಮಲಯಾಳ ಜನಪದ ಸಾಹಿತ್ಯವು – ಮುಖ್ಯವಾಗಿ ವಡಕ್ಕನ್ ಪಾಟ್ಟುಗಳು (ಬಡಗಿನ/ಉತ್ತರದ ಹಾಡುಗಳು) – ಅವಳಿ ಜವಳಿ ಮಕ್ಕಳನ್ನು ಎದೆಗೆ ಅವಚಿಕೊಳ್ಳುವ ತಾಯಿಯಂತೆ ಇವರಿಬ್ಬರನ್ನೂ ಸಾಕಿ ಸಲಹಿವೆ. ವಡಕ್ಕನ್ ಪಾಟ್ಟುಗಳ ಎರಡು ಮುಖ್ಯ ವಿಭಾಗಗಳಾದ ತಚ್ಚೋಳಿ ಪಾಟ್ಟುಗಳಲ್ಲಿ ಒದೇನನು ಮುಖ್ಯವಾಗಿಯೂ ಪುತ್ತೂರಂ ಪಾಟ್ಟುಗಳಲ್ಲಿ ಆರೋಮಲ್ ಚೇಗವರ್ ಮುಖ್ಯವಾಗಿಯೂ ಚಿತ್ರಿತವಾಗಿದ್ದಾರೆ. ಒದೇನನು ನಾಯರ್ ಸಮುದಾಯದವನು, ಆರೋಮಲ್ ತೀಯ ಸಮುದಾಯದವನು.

ಮಧ್ಯಯುಗೀನ ತುಳುನಾಡು, ಮಲಬಾರುಗಳಲ್ಲಿ ವೀರಪುರುಷರ ಕುರಿತು ಜನಪದ ಸಮಾಜವು ವಿಶೇಷ ಒಲವು ತೋರಿದೆ. ಈ ವೀರರ ಕುರಿತು ಐತಿಹಾಸಿಕ ವಿವರಗಳು ಸ್ವಲ್ಪ ಮಾತ್ರ ಲಭ್ಯ. ಅವರ ವ್ಯಕ್ತಿತ್ವದ ಕೆಲವು ಎಳೆಗಳನ್ನು ಹಿಡಿದುಕೊಂಡು ಜನಪದರು ಉತ್ಸಾಹದಿಂದ ಹಾಡಿಕೊಂಡರು. ಬರಬರುತ್ತ ವೀರರು ಆರಾಧ್ಯ ವ್ಯಕ್ತಿಗಳಾದರು. ಜನಪದ ಕಾವ್ಯಗಳು ಕೊಡುವ ವಿವರಗಳು ನಿಜವಾಗಿಯೂ ಅವರ ಬಾಳಲ್ಲಿ ನಡೆದುವೋ ಇಲ್ಲವೋ ಹೇಳಲು ಸಾಧ್ಯವಿಲ್ಲ. ಕೋಟಿಚೆನ್ನಯರು, ದೇವಪೂಂಜ, ಒದೇನನ್, ಆರೋಮಲ್ ಚೇಗವರ್‌ರಂಥ ವೀರರ ಕುರಿತು ಜನಪದರಿಗೆ ಅಸಾಧ್ಯ ಒಲವು.

ಕೌಟುಂಬಿಕ – ಮಲಬಾರ್‌ನಲ್ಲಿ ಅಂದು ಖ್ಯಾತವಾಗಿದ್ದ ಮನೆತನಗಳಲ್ಲೊಂದು –ಪತ್ತ್‌ಪಣಂ/ಪುದುಪ್ಪಣಂ. ಅಲ್ಲಿನ ಮುಖ್ಯಸ್ಥ ಪುದುಪ್ಪಣಂ ಮೂಪಿಲ್ ವಾಳುನ್ನವರ್. ಅವನಿಗೆ ಚೀನಂ ವೀಟ್ಟಿಲ್ ತಂಜಳ್ ಎಂಬುದು ಇನ್ನೊಂದು ಹೆಸರು. ಮೊದಲ ಬ್ರಾಹ್ಮಣ ಹೆಂಡತಿಯಲ್ಲಿ ಕೋಮ ಕುರುಪ್ಪ್‌ಎಂಬ ಮಗ. ಬಳಿಕದ ನಾಯರ್ ಸ್ತ್ರೀ ಉಪ್ಪಾಟ್ಟಿಯಲ್ಲಿ ಒದೇನನ್, ಉಣ್ಣಿಚ್ಚಿರ/ಉಣ್ಣಿಚ್ಚಾರ ಎಂಬ ಹುಡುಗ ಹುಡುಗಿಯರು. ಇನ್ನೂ ಒಬ್ಬಾಕೆಯಲ್ಲಿ ನಾಲ್ಕಾರು ಮಕ್ಕಳು. ಒದೇನನ ತಾಯಿ ಉಪ್ಪಾಟ್ಟಿಯು ಕುರುಕ್ಕಾಟ್ಟ್ ಕುರುಪ್ಪರ ವಂಶಸಂಜಾತೆ. ಮಕ್ಕಳು ಸಣ್ಣವರಿರುವಾಗಲೇ ಈಕೆ ಭಗವತಿಯಲ್ಲಿ ಐಕ್ಯ.

ಒದೇನ ಹುಟ್ಟಿದ್ದು ಮಲಯಾಳಂ ಶಕವರ್ಷ 759 ರಲ್ಲಿ, ಅಂದರೆ ಕ್ರಿ.ಶ.1584 ರಲ್ಲಿ. ಮಿಥುನ ಮಾಸ. ಶುಕ್ರವಾರ. ಅಮಾವಾಸ್ಯೆಯಂದು. ನಡುಮಧ್ಯಾಹ್ನ. ತಂದೆಯ ಅಲಕ್ಷ್ಯ ಮತ್ತು ತಾಯಿಯ ಮರಣಗಳಿಂದ ಬಾಲ್ಯವು ಸುಖಕರವಾಗಿರಲಿಲ್ಲ. ಯುವಕ

ನಾದಾಗ ಧೈರ್ಯ, ಸಾಹಸ, ಪರಾಕ್ರಮಗಳೇ ಸಂಗಾತಿಗಳು. ಅಣ್ಣ ಅತ್ತಿಗೆಯರ ವಾತ್ಸಲ್ಯದ ತಂಪು ನೆರಳು. ಕಡತ್ತನಾಟ್ಟ್ ಅರಸನ ಮಗಳು ಕುಂಞಿಕನ್ನಿ ಉಡುಗೊರೆ ರೂಪದಲ್ಲಿ ಹೆಂಡತಿಯಾಗಿ ಸಿಕ್ಕಳು. ಕಾವಿಲ್ ಚಾತ್ತೋತ್ತ್ ಕುಂಞಿಚೀರು ಅವನ ಮನಮೆಚ್ಚಿದ ಹೆಂಡತಿ. ಇನ್ನೊಬ್ಬಾಕೆ ಕುಂಞಿಕುಕ್ಕಿ/ಕುಂಞಿಕುಂಕಿ. ಇನ್ನೂ ಅನೇಕರು ನಾನಾ ಕಾರಣಕ್ಕೆ ಅವನನ್ನು ಒಲಿದು ಅವನ ತೆಕ್ಕೆಗೆ ಬಿದ್ದರು. ಮತ್ತೆ ಕೆಲವರನ್ನು ನಾನಾ ರೀತಿಗಳಿಂದ ವಶಪಡಿಸಿದ. ಹೆಂಗುಸರ ಕುರಿತು ಅವನ ಸ್ವಭಾವವು ಸುಸಂಸ್ಕೃತ ಮನಸ್ಸುಗಳಿಗೆ ಸಮ್ಮತವಾದುದಲ್ಲ, ಆ ಕಾಲಕ್ಕೆ ಅದು ಸಹ್ಯವೇ ಆಗಿರಬಹುದಾದರೂ. 'ಬಿಳಿತೊಗಲಿನ ಯಾವ ಹೆಣ್ಣನ್ನೂ ಒದೇನ ಹಾಗೆಯೇ ಬಿಟ್ಟವನಲ್ಲ' ಎನ್ನುವ ಮಾತು ಅವನ ವಿಶಿಷ್ಟ ಸ್ವಭಾವಸೂಚಕ ಹೇಳಿಕೆ. ಅವನು ಮಾತ್ರ ಕರಿತೊಣಪನಾಗಿದ್ದನಂತೆ! ಅಂಬಾಡಿಯು ಒದೇನನ ಪ್ರಿಯ ಪುತ್ರ. ಕುಂಞಿಕೇಳು ಸೋದರಳಿಯ. ಅಂಬಾಡಿಯಲ್ಲದೆ ಬೇರೆ ಮಕ್ಕಳೂ ಒದೇನನಿಗೆ ಇತರ ಪತ್ನಿಯರ ಮೂಲಕ ಇದ್ದುದು ತಿಳಿಯುತ್ತದೆ.

ಒದೇನನಿಗೆ ತಂದೆಯ ಬಗೆಗೆ ಅಸಹನೆ, ತಾಯಿಯ ಬಗ್ಗೆ ಭಕ್ತಿ. ಅಣ್ಣ ಅತ್ತಿಗೆಯರಲ್ಲಿ ಗೌರವ ಮಿಶ್ರಿತ ಸಲುಗೆ. ತಂಗಿ ಉಣ್ಣಿಚ್ಚಿರಳಲ್ಲಿ ಅಪಾರ ಪ್ರೀತಿ. ಮಡದಿಯರಲ್ಲಿ ಪ್ರೇಮ. ಮಗ, ಅಳಿಯಂದಿರಲ್ಲಿ ಎಣೆಯಿಲ್ಲದ ವಾತ್ಸಲ್ಯ. ಕುಟುಂಬ ವತ್ಸಲ ಒದೇನ ಒಳ್ಳೆಯ ಗೆಳೆಯ ಕೂಡ. ಅಂದಿನ ಖ್ಯಾತ ಯುವಕ ವೀರರು ಒಂದೋ ಅವನ ಗೆಳೆಯರು ಅಥವಾ ಪ್ರತಿಸ್ಪರ್ಧಿಗಳಾಗಿದ್ದರು. ಸಹಚರ/ಸೇವಕ ಕಂಡಾಚ್ಚೇರಿ ಚಾಪ್ಪನ ಮೇಲೆ ಅವನ ಪ್ರೀತಿ ಅತಿ ವಿಶಿಷ್ಟವಾಗಿತ್ತು.

ಇತರ – ಒದೇನ ದೊಡ್ಡ ದೈವಭಕ್ತ. ಒಳವನ್ನೂರ್ ಭಗವತಿ ಅವನ ಇಷ್ಟದೇವತೆ. ಭಗವತಿಗೂ ಅಷ್ಟೆ, ಈ ಭಕ್ತನ ಮೇಲೆ ತಾಯ ಮಮತೆ. ಪಿರಿಯಾಪಟ್ಟಣದ ಕಾಳಗದಲ್ಲಿನ ಚಾಮುಂಡಿಗೆ ದಳವಾಯಿಯ ಮೇಲಿದ್ದಂತೆ. ಉಳಿದಂತೆ ಎಲ್ಲ ಪ್ರಾದೇಶಿಕ ದೈವ ದೇವತೆಗಳ ಕುರಿತೂ ಅವನಿಗೆ ಆಸ್ತಿಕ ಭಾವ. ಅವನು ಕಳರಿ ವಿದ್ಯೆಯಲ್ಲಿ ಅಸಮಾನವ್ಯಕ್ತಿ. ಪೌರುಷವು ಪುರುಷರೂಪ ಧರಿಸಿದ ಹಾಗಿದ್ದವ. ಅವನು ಅರುವತ್ತ ನಾಲ್ಕು ಅಂಕಗಳಲ್ಲಿ ಪಡೆನಾಯಕನಾಗಿ ಅವುಗಳಲ್ಲಿ ಜಯಗಳಿಸಿದ್ದನಂತೆ. ಒದೇನನನ್ನು ಪ್ರತಿಸ್ಪರ್ಧಿಯಾಗಿ ಎದುರು ಹಾಕಿಕೊಳ್ಳಲು ಅಂದಿನ ಯಾವನೇ ವೀರ ಅಳುಕುತ್ತಿದ್ದ. ಬೆರಳೆಣಿಕೆಯ ಕೆಲವರು ಮಾತ್ರ ಅವನನ್ನು ಎದುರು ಹಾಕಿಕೊಳ್ಳುವ ಧೈರ್ಯ ತೋರಿದರು. ಚೆಂಡನ್ ನಂಬಿಯಾರ್, ಪುನ್ನೋರ ಕೇಳಪ್ಪನ್, ಪುರಮಾಲ ನಂಬಿಕುರುಪ್ ಮುಂತಾದ ಖ್ಯಾತ ವೀರರು ಅವನನ್ನು ಎದುರಿಸಿ ಪ್ರಾಣ ಕಳೆದುಕೊಂಡರು. ಅವನು ದೊಡ್ಡ ಸ್ವಾಭಿಮಾನಿ. ಸ್ವತಃ ಕದಿರೂರ್ ಗುರುಕ್ಕಳ್ ಎಂಬ ಕಳರಿ ಗುರುವೇ ತನ್ನನ್ನು ಲಘುಭಾವದಿಂದ ಕಂಡರೂ ಸಹಿಸಿದವನಲ್ಲ.

ಅವನ ಇನ್ನೊಂದು ಸ್ವಭಾವ ವಿಶೇಷವೆಂದರೆ ಅತಿಸಾಹಸಿಕತೆ. ಅಂಜಿಕೆಯೆಂದರೆ ಏನೆಂದು ಅವನು ಅರಿಯ. ತನ್ನ ಅತಿಸಾಹಸ ಪ್ರವೃತ್ತಿಯಿಂದ ಪ್ರಾಣಾಪಾಯದವರೆಗಿನ ಗಂಡಾಂತರಕ್ಕೂ ಕೆಲವೊಮ್ಮೆ ಈಡಾಗಿದ್ದ. ಭಾಗ್ಯವಶಾತ್ ಹೇಗೋ ಅವುಗಳಿಂದ ಪಾರಾಗುತ್ತಿದ್ದ ಕೂಡ. ಮುಂಗೋಪ ಅವನ ಸಂಗಾತಿ. ಅವನ ಉರ್ಮಿಗೂ (ಬಳುಕುವ ಖಡ್ಗ) ಬಲಕೈಗೂ ಕುಜದೋಷವಿತ್ತೆಂದು ಅಣ್ಣ ಕೋಮ ಕುರುಪ್ಪ್‌ನ ಹೇಳಿಕೆ.

ಸಮಕಾಲೀನ ಪುರುಷಖಯಾಲಿಗೆ ಅನುಗುಣವಾಗಿ ತೆಂಡಲ್‌ಗೆ (ತಿರುಗಾಟ) ಆಗಾಗ ಹೋಗುತ್ತಿದ್ದ ಒದೇನ ಕೆಲವೊಮ್ಮೆ ಅಪಾರ ಧನ ಸಂಗ್ರಹ ಮಾಡಿ 'ಉಪ್ಪಿನ ಗೆರಟೆಯನ್ನು ಕೂಡ ಬಿಡದೆ' ಅದನ್ನು ಆಳುಗಳಿಂದ ಹೊರಿಸಿ ಮಾಣಿಕೋತ್ತ್‌ಗಾಗಲಿ ತಚ್ಚೋಳಿ ಮೇಪ್ಪಕ್ಕಾಗಲಿ (ಒದೇನನ ತರವಾಡು ಮನೆಗಳು) ಸಾಗಿಸುತ್ತಿದ್ದ. ಕೆಲವೊಮ್ಮೆ, ಇದು ನ್ಯಾಯಸಮ್ಮತವೇ? ಎನಿಸಬಹುದು. ಅನೇಕಬಾರಿ ಅವನು ತನ್ನ ಪ್ರಾಣವನ್ನೇ ಒತ್ತೆಯಿಟ್ಟು ಸಾಹಸದ ಬೆನ್ನೇರಿ ಅರಸರಿಂದ ಕೂಡ ಸಾಕಷ್ಟು ಧನಕನಕಗಳನ್ನು ಪಾರಿತೋಷಕದ ರೂಪದಲ್ಲಿ ಗಳಿಸಿದ್ದ. ಆ ಧನರಾಶಿಗಳಲ್ಲಿ ಒಂದು ದೊಡ್ಡ ಭಾಗವು ದೇವತಾಸೇವೆ, ದೇವಾಲಯಗಳ ಜೀರ್ಣೋದ್ಧಾರ, ಉತ್ಸವಗಳು, ಬ್ರಾಹ್ಮಣ ಸಂತರ್ಪಣೆ, ಬಂಧುಗಳಿಗೆ ನೆರವು, ಆಶ್ರಿತರಿಗೆ ಸಹಾಯ ಇತ್ಯಾದಿ ರೂಪದಲ್ಲಿ ವಿನಿಯೋಗವಾಗುತ್ತಿತ್ತು. ಮಾಣಿಕೋತ್ತ್ ಮತ್ತು ತಚ್ಚೋಳಿ ಮನೆಗಳು ಅಂದಿನ ಸಮಕಾಲೀನ ಸಮಾಜದಲ್ಲಿ ಗೌರವಾರ್ಹವಾದ ಉನ್ನತ ಸ್ಥಾನಮಾನಗಳನ್ನು ಗಳಿಸಲು ಸಾಧ್ಯವಾದುದು ಒದೇನನ ಸಾಹಸದಿಂದಲೇ. ಅಲ್ಲಿ ಸಂಪತ್ತು ತುಂಬಿ ತುಳುಕುತ್ತಿದ್ದುದಕ್ಕೂ ಇವನ ಸತತ ಪ್ರಯತ್ನವೇ ಮುಖ್ಯ ಕಾರಣವಾಗಿತ್ತು. ಒಲವನ್ನೂರ್ ಕಾವ್ ಕೂಡ ಅಂದಿನ ವಿಖ್ಯಾತ ಮತ್ತು ಸಂಪದ್ಭರಿತ ದೇವಾಲಯವಾಗಿತ್ತು. ಅವನಿಗೆ ಈ ವಿಚಾರಗಳಲ್ಲಿ ಸಹಜ ವಾಗಿಯೇ ಹೆಮ್ಮೆ ಇತ್ತು. ಅರಸರಿಗೆ ಅವನು ತೋರುವ ವಿನಯ ವಿಧೇಯತೆಗಳನ್ನು ತಚ್ಚೋಳಿ ಪಾಟ್ಟು ಎತ್ತಿತೋರಿಸಿದ ಹಾಗೆಯೇ ಕಲ್ಲಿಕೋಟೆಯ ಜಾಮೊರಿನ್ (ಸಾಮೂದಿರಿ) ಅರಸನನ್ನೂ ಒಳಗೊಂಡು ಎಲ್ಲ ಅರಸರು ಒದೇನನಿಗೆ ತೋರುತ್ತಿದ್ದ ಭಯಮಿಶ್ರಿತ ಗೌರವವನ್ನೂ ಸ್ಪಷ್ಟವಾಗಿ ಚಿತ್ರಿಸಿದೆ.

ದೈವಭಕ್ತಿ, ಸ್ವಾಭಿಮಾನ, ರಸಿಕತೆ, ಪರಾಕ್ರಮ, ಕುಟುಂಬ ವತ್ಸಲತ್ವದಂತಹ ಗುಣಗಳ ಹೊರತಾಗಿ ಅವನಲ್ಲಿ ದುರಭಿಮಾನಕ್ಕೆ ತಿರುಗಿದ ಸ್ವಾಭಿಮಾನ, ದುಡುಕು ಪ್ರವೃತ್ತಿ, ಮುಂಗೋಪ, ಕಾಮುಕತೆ, ಅತಿಸಾಹಸ ಪ್ರವೃತ್ತಿಗಳು ಇದ್ದು - ಬಹುಶಃ ಅವನ ದುರಂತಕ್ಕೆ ಇವೆ ಕಾರಣ ವಾದುವೇನೋ? ತನ್ನ ಮೂವತ್ತೆರಡನೆಯ ವಯಸ್ಸಿನಲ್ಲಿ ವಿಜಯೋತ್ಸಾಹದಿಂದ ಹಿಂತಿರುಗುತ್ತ ದುರ್ಮರಣಕ್ಕೆ ಈಡಾದ ಅವನ ಈ ರೋಚಕ

ಸ್ವಭಾವವೈಲಕ್ಷಣ್ಯವೇ ಜನಪದ ಕವಿಗಳನ್ನು ಚುಂಬಕದಂತೆ ಆಕರ್ಷಿಸಿ ಅದೆಷ್ಟೋ ಹಾಡುಗಳನ್ನು ರಚಿಸುವ ಕಾಯಕದಲ್ಲಿ ತೊಡಗಿಸಿತು ಎನ್ನುವುದು ಖಚಿತ.

ಗಮನಿಸಿ – ಜನಪದ ಹಾಡುಗಳಲ್ಲಿ/ಕಥೆಗಳಲ್ಲಿ ಚಿತ್ರತನಾಗಿರುವ ಒದೇನ ಶ್ರೀರಾಮ ಚಂದ್ರನಲ್ಲ. ಅವನಲ್ಲಿ ಸಾಕಷ್ಟು ದೌರ್ಬಲ್ಯಗಳಿವೆ, ಇಂದಿನ ಸಮಾಜ ಒಪ್ಪದ ಪ್ರವೃತ್ತಿಗಳಿವೆ. ಸುಸಂಸ್ಕೃತ ಮನಸ್ಸುಗಳಿಗೆ ಕ್ಷೋಭೆಯುಂಟುಮಾಡಬಹುದಾದ ಅತಿಕಾಮುಕತೆ ಮತ್ತು ಹಿಂಸಾ ಪ್ರವೃತ್ತಿಗಳಿವೆ, ಉದ್ಧಟತನವಿದೆ. ಆದರೆ ಯಾಕೋ ಜನಪದ ಮನಸ್ಸು ಅವನನ್ನು ತನ್ನ ಮಡಿಲಲ್ಲಿಟ್ಟು ಪೋಷಿಸಿದೆ. ಪ್ರಕೃತ ಕೃತಿಯಲ್ಲಿ ಮೂಲ ಆಕರಗಳಲ್ಲಿನ ವಿವರಗಳನ್ನು ಎಲ್ಲಿಯೂ ಒಗ್ಗಿಸಿಕೊಂಡಿಲ್ಲ, ಬಗ್ಗಿಸಿಕೊಂಡಿಲ್ಲ. ಇದು ಬರವಣಿಗೆಯ ಶಿಸ್ತುಗಳಲ್ಲೊಂದು ಎಂದು ಭಾವಿಸುವವನು ನಾನು.

ಇದೀಗ ತಚ್ಚೋಳಿ ಒದೇನ ಕನ್ನಡಿಗರ ಬಳಿ ಬರುತ್ತಿದ್ದಾನೆ. ಕೃತಿಯನ್ನು ತನ್ನ ವಿಸ್ತರಣೆ ಹಾಗೂ ಸಲಹಾಕೇಂದ್ರದ ವತಿಯಿಂದ ಪ್ರಕಟಿಸಲು ಕರ್ನಾಟಕ ಜಾನಪದ ವಿಶವಿದ್ಯಾಲಯವು ಕೈಗೆ ಎತ್ತಿಕೊಂಡಿದೆ. ನೂತನವಾಗಿ ಆರಂಭಗೊಂಡು ಕಾರ್ಯಪ್ರವೃತ್ತ ವಾಗಿರುವ ಈ ವಿಶ್ವವಿದ್ಯಾಲಯವು ಕನ್ನಡದ ಸಹೋದರಿ ಭಾಷೆ ಮಲೆಯಾಳಂನ ಜನಪದ ವಸ್ತುವನ್ನೊಳಗೊಂಡ ಕನ್ನಡ ಕೃತಿಯನ್ನು ಪ್ರಕಟಿಸಲು ಮುಂದಾಗಿರುವುದು ಅದರ ಭಾಷಾಬಾಂಧವ್ಯ ದೃಷ್ಟಿಕೋನಕ್ಕೆ ಸಂಕೇತ ಎಂದು ಭಾವಿಸುವೆ. ವಿಶ್ವವಿದ್ಯಾಲಯದ ಮಾನ್ಯ ಕುಲಪತಿ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ಇದಕ್ಕಾಗಿ ಗೌರವಪೂರ್ವಕ ವಂದನೆಗಳು. ವಿಶ್ವವಿದ್ಯಾಲಯದ ಕುಲ ಸಚಿವರಾದ ಪ್ರೊ. ಸಿ.ಎ. ಸೋಮಶೇಖರಪ್ಪ, ವಿಸ್ತರಣೆ ಹಾಗೂ ಸಲಹಾಕೇಂದ್ರದ ನಿರ್ದೇಶಕ ರಾದ ಪ್ರೊ. ಸ.ಚಿ. ರಮೇಶ ಇವರಿಗೂ ಕೃತಜ್ಞತೆಗಳು. ಕೃತಿಯ ಹಸ್ತಪ್ರತಿಯನ್ನು ಪರಿಶೀಲಿಸಿ ಸೂಕ್ತ ವರದಿ ನೀಡಿದ ಪ್ರೊ. ಎ. ಸುಬ್ಬಣ್ಣ ರೈಯವರಿಗೆ ಕೂಡಾ.

ಈ ಕೃತಿಯ ಓದು ನಿಮಗೆ ಮಲೆಯಾಳಂ ಜನಪದರ ನೆಚ್ಚಿನ 'ತಚ್ಚೋಳಿ ಕಣ್ಮಣಿ ಬಾಲಒದೇನ'ನನ್ನು ಹತ್ತಿರದಿಂದ ತಿಳಿಯುವ ಸಂತಸಯಾತ್ರೆಯಾಗಲಿ, ಆನಂದದ ರಸ ಯಾತ್ರೆಯಾಗಲಿ. ಸಹೃದಯರೇ, ಮುಂದಿನ ಕಥಾನಕಗಳನ್ನು ಚೆನ್ನಾಗಿ ಆಸ್ವಾದಿಸಲು ಇಷ್ಟು ವಿವರಗಳು ನಿಮಗೆ ಸಹಾಯಕವಾದವು ಎಂದು ನಂಬುವೆ.

ಇನ್ನೊಮ್ಮೆ ವಂದನೆಗಳು.

ಡಾ. ಕಮಲಾಕ್ಷ. ಕೆ

ಸತ್ತ ನಿನ್ನ ಅಮ್ಮನಿಗಾಗಿ ಏನಾದರೂ ಧರ್ಮ ಮಾಡಿದ್ದಿಯಾ?

ತಚ್ಚೋಳಿಯ ಕಣ್ಮಣಿ ಬಾಲಒದೇನ ಮತ್ತು ಅವನ ಅಮ್ಮ ತಚ್ಚೋಳಿ ಮೇಪ್ಪದ ಉಪ್ಪಾಟ್ಟಿ ಅದೋ ಹೋಗುತ್ತಿದ್ದಾರೆ! ಆಕೆ ತುಂಬ ಒಡವೆಗಳನ್ನು ಹಾಕಿಕೊಂಡಿದ್ದಾಳೆ, ರೇಶ್ಮೆಯ ಬಟ್ಟೆ ಧರಿಸಿದ್ದಾಳೆ. ಅವರು ಹೋಗುತ್ತಿರುವುದು ಒಲವಣ್ಣೂರ್ ಕಾವ್‌ಗೆ. ಅವರು ಅಲ್ಲಿಗೆ ತಲಪಿದಾಗ ಅಲ್ಲಿನ ದೇವತೆ ಭಗವತಿ ಅಲಂಕರಿಸಿಕೊಂಡು ಮೂಡು ದಿಕ್ಕಿಗೆ ಹೊರಟಿದ್ದಾಳೆ (ಭಗವತಿಯನ್ನು ಅಲಂಕರಿಸಿ ಮೆರವಣಿಗೆ ಮಾಡಿಸುತ್ತಿದ್ದಾರೆ). ಭಗವತಿ ಉಪ್ಪಾಟ್ಟಿಯನ್ನು ಕಂಡಳು. ಅವಳನ್ನು ಚೆನ್ನಾಗಿ ನೋಡಿದಳು. ಅವಳ ಮೈಗೆ ಸೇರಿಕೊಂಡಳು. ಕೂಡಲೇ ಉಪ್ಪಾಟ್ಟಿ ರಕ್ತಕಾರಿ ಕೆಳಬಿದ್ದಳು. ಸ್ವಲ್ಪ ಹೊತ್ತಲ್ಲೇ ತೀರಿ ಕೊಂಡಳು. ಅದನ್ನು ಕೇಳಿ ತಚ್ಚೋಳಿ ಕೋಮ ಕುರುಪ್ಪ್ ಇನ್ನೂ ಕೆಲಮಂದಿಯನ್ನು ಸೇರಿಸಿಕೊಂಡು ಅಲ್ಲಿಗೆ ತಲಪಿದ. ಅಣ್ಣ ತಮ್ಮಂದಿರಿಬ್ಬರೂ ಸೇರಿ ಬೇಗನೆ ತಮ್ಮಮ್ಮ ತಚ್ಚೋಳಿ ಮೇಪ್ಪದ ಉಪ್ಪಾಟ್ಟಿಯಮ್ಮನಿಗೆ ರೇಶ್ಮೆಬಟ್ಟೆಯನ್ನು ಹೊದೆಸಿದರು. ಹಾಗೆ ಹೊದೆಸಿ ಮೇನೆಯನ್ನು ಸಿದ್ಧಪಡಿಸಿದರು. ಒಲವಣ್ಣೂರ್ ಕಾವಿನಿಂದಲೇ ಸಾವಿರಾರು ಜನಕ್ಕೆ ಅಕ್ಕಿ ದಾನಕೊಟ್ಟರು. ಬಳಿಕ ಮೇನೆಯನ್ನು ಹೊರಿಸಿಕೊಂಡು ತಚ್ಚೋಳಿ ಮೇಪ್ಪದಲ್ಲಿ ಇಳಿಸಿದರು. ಅಷ್ಟರಲ್ಲೇ ಕಂಡಾಚ್ಚೇರಿ ಚಾಪ್ಪ ಹೆಣಸುಡುವುದಕ್ಕೆ ಆಗಬೇಕಾದ ಎಲ್ಲ ಸಿದ್ಧತೆಗಳನ್ನು ಆಳುಗಳಿಂದ ಮಾಡಿಸಿದ. ಎಲ್ಲ ಕೆಲಸಗಳನ್ನು ಮುಗಿಸಿದ ಬಳಿಕ ತಚ್ಚೋಳಿ ಮೇಪ್ಪದ ಉಪ್ಪಾಟ್ಟಿಯನ್ನು ಒಯ್ದು ಸುಟ್ಟರು. ತಚ್ಚೋಳಿಯ ಕಣ್ಮಣಿ ಬಾಲ ಒದೇನನೂ ಅವನ ಅಣ್ಣನೂ ತುಂಬ ಅಕ್ಕಿಯನ್ನೂ ತುಂಬ ಪಂಚೆಗಳನ್ನೂ ಬಡವರಿಗೆ ಕೊಟ್ಟರು. ಹನ್ನೆರಡು ದಿನಗಳಾದಾಗ ಕೇಳಿದಷ್ಟು ಅನ್ನ ಪದಾರ್ಥಗಳನ್ನು ಅನೇಕ ಜನರಿಗೆ ಕೊಟ್ಟರು.

ಅತ್ತ ಅವರು ಹಾಗಿರಲು ತುಂಬ ದಿನಗಳುರುಳಿದುವು. ಓಣಂ ಹಬ್ಬವು ಹತ್ತಿರ ಬಂತು. ಒದೇನ ಚೀನಂ ಮನೆಗೆ (ಒದೇನನ ತಂದೆಯ ಮನೆ) ಹೋದ. ಚೀನಂ ಮನೆಗೆ ಬಂದು ತಂಜಳ್ ಬಾವುನ್ನೋರ್‌ರನ್ನು(ತಂದೆ) ಕಂಡ. ಬಾವುನ್ನೋರ್ ಬಹಳ ಹಿಂದೆ ಒದೇನನ ಅಮ್ಮನನ್ನು ಬಿಟ್ಟ ಬಳಿಕ ಇದೇ ಮೊದಲ ಬಾರಿಗೆ ಒದೇನ ಅಲ್ಲಿ ಹೋಗುತ್ತಿರುವುದು. ಓಣಂ ಹಬ್ಬಕ್ಕೆ ನೀಡುವ ಹೊಸ ಬಟ್ಟೆಗಾಗಿ ಅವನು ಅಲ್ಲಿಗೆ ಹೋದಾಗ ಚೀನಂ ಮನೆಯ ಬಾವುನ್ನೋರ್ ಚಾವಡಿಯಲ್ಲಿ ಕುಳಿತಿದ್ದಾರೆ. ಒದೇನ ಅವರು ಕುಳಿತಿದ್ದ ಬಳಿಗೇ ಹೋದ. ಬಾವುನ್ನೋರ್ ಅವನಿಗೆಂದರು – ತಚ್ಚೋಳಿ ಮೇಪ್ಪದ ಕುಂಞೊದೇನ, ಬಂದ ದಾರಿಯಲ್ಲಿ ಹಾಗೆಯೇ ಹಿಂದಿರುಗಿ ಬಿಡು! ಅದಕ್ಕೆ ಒದೇನನೆಂದ – ಬಂದ ಜಾಗ ಸಂದುಹೋಯ್ತಲ್ಲ! ಇದೀಗ ನಾನು ಮಾತ್ರ ಇದ್ದೇನೆ, ಗೊತ್ತಲ್ಲವೆ? ಆಗ ತಂಜಳ್ ಎಂದರು – ಹಾಗಾದರೆ ಚಾವಡಿಯ ಬೋದಿಗೆ ಕಂಬದ ಬಳಿ ಕುಳಿತುಕೊ, ಒದೇನ. ಅದಕ್ಕೆ ಒದೇನನೆಂದ–ಬೋದಿಗೆಕಂಬ ನನ್ನ ಮನೆಯಲ್ಲೂ ಇದೆ. ಬೋದಿಗೆ ಕಂಬದ ಬಳಿ ಕುಳಿತುಕೊಳ್ಳುವುದಿಲ್ಲ. ನಾನು ಇಲ್ಲಿಯೇ ನಿಂತಿರುತ್ತೇನೆ. ಆಗ ತಂಜಳೆಂದರು – ಹಾಗಾದರೆ ನಿನ್ನ ಉರುಮಿ ಇದೆಯಲ್ಲ, ಅದನ್ನು ಕೆಳಗಿಟ್ಟು ಕುಳಿತುಕೊ! ಅದಕ್ಕೆ ಒದೇನನೆಂದ – ಉರುಮಿ ನನ್ನ ಕುಂಡೆಗೆ ಸರಿಹೊಂದುವುದಿಲ್ಲ. ಅದು ನನ್ನ ಕೈಯಲ್ಲೇ ಬೇಕು. ಚೀನಂ ಮನೆಯ ತಂಜಳ್ ಬಾವುನ್ನೋರ್ ಆಗ ಎಂದರು – ತಚ್ಚೋಳಿ ಕಣ್ಮಣಿ ಬಾಲಒದೇನ, ಇಡೀ ಒಂದು ಮನೆ ತುಂಬುವಷ್ಟು ಪಂಚೆಗಳನ್ನು ತರಿಸಿ ರಾಶಿ ಹಾಕಿಸಿದ್ದೆ; ಎಲ್ಲ ಕೊಟ್ಟು ಮುಗಿಯಿತು. ಇನ್ನು ಒಂದು ಪಂಚೆ ಮಾತ್ರ ಬಾಕಿ. ಆನೆಯ ಕೊರಳಷ್ಟೆತ್ತರಕ್ಕೆ ಅಕ್ಕಿ ರಾಶಿ ಹಾಕಿಸಿದ್ದೆ; ಎಲ್ಲ ಕೊಟ್ಟು ಮುಗಿಯಿತು. ನಾಲ್ಕು ಬಳ್ಳ ಅಕ್ಕಿಯಷ್ಟೆ ಬಾಕಿ. ತಚ್ಚೋಳಿ ಕಣ್ಮಣಿ ಬಾಲ ಒದೇನ! ಒಂದು ಪಂಚೆ ಮತ್ತು ನಾಲ್ಕು ಬಳ್ಳ ಅಕ್ಕಿಗಳನ್ನು ಇಲ್ಲಿ ನಿನಗಾಗಿ ಇರಿಸಲಾಗಿದೆ. ಹೀಗೆನ್ನುತ್ತಾ ಬಾವುನ್ನೋರ್ ಅವುಗಳನ್ನು ಒದೇನನಿಗೆ ಕೊಡಲು ಮುಂದಾದರು. ಒದೇನ ಅಕ್ಕಿಯನ್ನೂ ಪಂಚೆಯನ್ನೂ ತೆಗೆದುಕೊಂಡ. ಅವನಿಗೆ ಕೋಪ ಏರುತ್ತ ಹೋಯಿತು. ಅವನು ಬಾವುನ್ನೋರ ಮುಂದೆ ಬಂದು ನಿಂತ. ಬತ್ತಿ ಮಾಡುವುದಕ್ಕಾಗಿ ಬಟ್ಟೆ ಹರಿಯುವಂತೆ ಆ ಪಂಚೆಯನ್ನು ಐನೂರು ಸೀಳಾಗಿ ಸೀಳಿದ. ಬಳಿಕ ಅವುಗಳನ್ನೆಲ್ಲ ಎತ್ತಿಕೊಂಡು ಬೋದಿಗೆ ಕಂಬಕ್ಕೆ ಕಟ್ಟಿದ. ಅವನ ಸಿಟ್ಟು ಇನ್ನೂ ಇಳಿಯಲಿಲ್ಲ. ಅಕ್ಕಿಯನ್ನು ಎತ್ತಿಕೊಂಡು ಅಂಗಳ ತುಂಬ ಚೆಲ್ಲಾಡಿದ. ಇದೆಲ್ಲವನ್ನೂ ಕಂಡು ಚೀನಂ ಮನೆಯ ತಂಜಳ್ ಬಾವುನ್ನೋರ್ ಹೇಳಿದರು – ತಚ್ಚೋಳಿ ಒದೇನ, ನನ್ನ ನಾಯಿಯೇ! ನೀನು ಇಷ್ಟೊಂದು ದೊಡ್ಡ ಜಾಣನಾಗಿ ಬಿಟ್ಟೆಯಾ? ಇಷ್ಟು ಜಾಣತನ ಯಾಕೋ ನಿನಗೆ? ನಿನ್ನ ಜಂಭ ಏನನ್ನೂ ಇಲ್ಲಿ ತೋರಿಸಬೇಡ. ನಿನ್ನನ್ನು ನನಗೆ ಗೊತ್ತಿಲ್ಲವೇ, ಒದೇನ?

ನಿನ್ನ ಅಮ್ಮನನ್ನು ನಾನು ಬಿಟ್ಟ ಕಾಲದಲ್ಲಿ....! ನಿನ್ನ ಅಮ್ಮನನ್ನೇ.... ಗೊತ್ತಾಯಿತೆ? ನಾನು ಅವಳನ್ನು ಹೊರಹಾಕಿದಾಗ ಒಲವಣ್ಣೂರ್ ಕಾವಿಗೆ ಅವಳು ಹೋದಳು. ಅಲ್ಲಿ ರಕ್ತಕಾರಿ ಅವಳು ಸತ್ತ ಸಂದರ್ಭದಲ್ಲಿ ಚಾಪೆಯಲ್ಲಿ ಕಟ್ಟಿಸಿ ಅವಳ ಹೆಣ ತೆಗೆಸಿದ್ದು ನಾನಲ್ಲವೇನೋ? ಅದೆಲ್ಲವನ್ನೂ ಮರೆತೆಯೇನೋ, ಒದೇನ? ಅವಳ ಹೆಣವನ್ನು ಬೂದಿಮಾಡಿಸಿದ್ದೂ ನಾನಲ್ಲವೇನೋ? ನೀನು ಇಷ್ಟೊಂದು ದೊಡ್ಡ ಜಾಣನಾಗಿ ಬಿಟ್ಟೆಯ? ಬಾವುನ್ನೋರ್ ಮತ್ತೂ ಹೇಳಿದರು – ತಚ್ಚೋಳಿ ಒದೇನ ಕೇಳೋ ನನ್ಮಗನೇ! ನಿನ್ನ ಅಮ್ಮನನ್ನು ಬಿಟ್ಟ ಮೇಲೆ ನಾನು ಪುಡಮುರಿ ಮಾಡಿಕೊಂಡು ಇನ್ನೊಬ್ಬಾಕೆ ಹೆಣ್ಣನ್ನು ತಂದುಕೊಂಡೆ. ಅವಳಿಗೀಗ ಐದಾರು ಮಕ್ಕಳಾದುವು. ಅವಳೂ ಅವಳ ಮಕ್ಕಳೂ ಈಗ ಯಾವುದೇ ಒಳ್ಳೆಯ ವಸ್ತುಗಳನ್ನು ತಿನ್ನುವಂತಿಲ್ಲ. ನಿನ್ನ ಅಮ್ಮ ಉಪ್ಪಾಟ್ಟಿ ಎಲ್ಲರ ಮೈಗೂ ಸೇರಿಕೊಳ್ಳುತ್ತಾಳೆ. ನನ್ನವರೆಲ್ಲರಿಗೂ ಮಕ್ಕಳಿಗೂ ಅವಳು ಸೇರಿಕೊಳ್ಳುತ್ತಾಳೆ. ಗಂಜಿಯನ್ನಾಗಲಿ ಉಪ್ಪುಮೆಣಸನ್ನಾಗಲಿ ತಯಾರು ಮಾಡಿದರೂ ಅವೆಲ್ಲವುಗಳಲ್ಲೂ ಅವಳು ಸೇರಿಕೊಳ್ಳುತ್ತಾಳೆ. ಯಾರೂ ಅದನ್ನು ಮತ್ತೆ ತೆಗೆದುಕೊಳ್ಳು ವಂತಿಲ್ಲ. ಆದುದರಿಂದ ನಾನು ತೀರ್ಮಾನಿಸಿದ್ದೇನೆ – ನಿನ್ನ ಅಮ್ಮನನ್ನು ಮಂತ್ರವಾದ ಮಾಡಿ ತೆಂಗಿನ ತೊಂಡಿನಲ್ಲಿ ಬಂಧಿಸಿ ಕಡಲಿಗೆ ಎಸೆಯಿಸುತ್ತೇನೆ. ಅವಳ ಜಾಣತನವನ್ನು ನಾನೊಮ್ಮೆ ಕಾಣಬೇಕು. ಅದನ್ನು ಕೇಳಿದ ಒದೇನ ಸಿಟ್ಟುಗೊಂಡು ಹೇಳಿದ – ಚೀನಂ ಮನೆಯಲ್ಲಿದ್ದು ಕಾರುಭಾರು ಮಾಡುತ್ತಿರುವ ಶುದ್ಧಕಳ್ಳ! ನೀನು ಇಷ್ಟೊಂದು ಸುಳ್ಳು ಹೇಳಬಹುದೇ? ನಿನ್ನನ್ನು ಹೆತ್ತ ಅಮ್ಮ ಸತ್ತಾಗ ನಾನೂ ನನ್ನ ಅಣ್ಣನೂ ಸೇರಿಯಲ್ಲವೆ ಹೊಲೆಯನನ್ನು ಕರೆಸಿ ಹೆಣ ತೆಗೆಸಿದ್ದು? ಸಮುದ್ರ ತೀರಕ್ಕೆ ಒಯ್ದು ಅಲ್ಲಿ ಹೊಂಡಕ್ಕೆ ಹಾಕಿಸಿದ್ದು? ಅವನಿಗೆ ಕಳ್ಳು ತೆಗೆಯಿಸಿ ನೀನು ಕೊಡಿಸಿದೆಯಾ? ಬಳಿಕ ನಾನೂ ನನ್ನ ಅಣ್ಣನೂ ಅಲ್ಲವೇ ಅವನಿಗೆ ಕಳ್ಳು ಕೊಡಿಸಿದ್ದು? ಅಷ್ಟನ್ನು ಕೂಡ ನೀನು ಕೊಡಿಸಿದೆಯಾ ಕಳ್ಳ? ಅವಳು ವಾಂತಿಭೇದಿಯಾಗಿ ಸತ್ತದ್ದಲ್ಲವೆ? ಹಾಗಿದ್ದರೂ ನಿನ್ನ ಅಮ್ಮನಿಗಾಗಿ ಏನಾದರೂ ಧರ್ಮವನ್ನು ನೀನು ಮಾಡಿದ್ದೆಯಾ ಕಳ್ಳ? ಹಾಗೆ ಒದೇನನು ಹೇಳುತ್ತಿರಲು ಅವನ ಅಮ್ಮ ಉಪ್ಪಾಟ್ಟಿ ಭಗವತಿ ಸೇರಿಕೊಂಡ ಶಕ್ತಿಯಾಗಿ ಅಲ್ಲಿ ಕಾಣಿಸಿಕೊಂಡಳು. ಚೀನಂ ಮನೆಯ ತಂಬಳ್ ಬಾವುನ್ನೋರಿಗೂ ಅವರ ಹೆಂಡತಿ ಮಕ್ಕಳಿಗೂ ಸೇರಿ ಕೊಂಡಳು. ಹಾಗೆ ಸೇರಿಕೊಂಡಾಗ ಎಲ್ಲರೂ ಬೊಬ್ಬಿಟ್ಟರು. ಮನೆಯಿಂದ ಎಲ್ಲರೂ ಓಡಿದರು. ಹಾಗೆ ಎಲ್ಲರೂ ಓಟಕ್ಕಿತ್ತಾಗ ಚೀನಂ ಮನೆಯ ತಂಬಳ್ ಬಾವುನ್ನೋರ್ ಕೂಡ ಹೆದರಿ ಹೋದರು. ಆ ಮನೆ ಮುಚ್ಚಿ ಹೋಯಿತು. ಇದನ್ನೆಲ್ಲ ಕಂಡು ಒದೇನ ನಕ್ಕ. ಅವನು ತನ್ನ ತಚ್ಚೋಳಿ ಮನೆಗೆ ಮರಳಿದ.

ನನ್ನ ಮಗು ಒದೇನನನ್ನು ಯಾರಿಗೂ ಬಿಟ್ಟುಕೊಡೆನು

ತಚ್ಚೋಳಿ ಕಣ್ಮಣಿ ಬಾಲಒದೇನ ಒಮ್ಮೆ ಅಣ್ಣ ಕೋಮಕುರುಪ್ಪ್‌ನಲ್ಲಿ ಹೇಳಿದ – ತಚ್ಚೋಳಿ ಕೋಮಕುರುಪ್ಪೇ! ನನ್ನಣ್ಣ! ನಾನೊಮ್ಮೆ ಪರಂಬ್‌ಗೆ ತಿರುಗಾಟಕ್ಕೆ ಹೋಗಬೇಕು. ಅದಕ್ಕೆ ಕೋಮ ಕುರುಪ್ಪ್ ಎಂದ – ತಚ್ಚೋಳಿ ಕಣ್ಮಣಿ ಬಾಲಒದೇನ! ತಿಳಿದೋ ತಿಳಿಯದೆಯೋ ಪರಂಬ್‌ನ ತಿರುಗಾಟಕ್ಕೆ ಹೋದೆಯಾದರೆ ನಿನಗೆ ಒಂದು ಎಳನೀರು ಕೂಡ ಸಿಗದು. ಒಮ್ಮೆ ಬಾಯಿಗೆ ಎಸೆದುಕೊಳ್ಳಲು ತಾಂಬೂಲವೂ ಸಿಗದು. ಕಲ್ಲೇರಿಯ ತೀಯ ತಂಡಾಯನ (ಮುಖ್ಯಸ್ಥ) ಮನೆಗೆ ಹೋದರೆ ಅವನು ಮುಕ್ಕಾಲಿ ಪೀಠದಲ್ಲಿ ಕುಳಿತು ವೀಳ್ಯ ಹಾಕುತ್ತ ಪೀಕದಾನಿಯಲ್ಲಿ ಉಗುಳುತ್ತ ಇದ್ದಾನು, ಹೊರತು ನೀನು ಹೋದಾಗ ಎದ್ದುನಿಂತು ಗೌರವಸೂಚಕ ಆಚಾರಗಳನ್ನು ಮಾಡುವವನಲ್ಲ. ನೀನು ಅದನ್ನು ಸಹಿಸುವವನೂ ಅಲ್ಲ. ನಿನ್ನ ಬಲಕೈಗೂ ಉರ್ಮಿಗೂ ಕುಜದೋಷ ಇದೆಯಲ್ಲ! ಅವನು ಪರಂಬ್ ಕುರುಕ್ಕಾಟ್ಟ್ ಕುರುಪ್ಪರಿಗೆ ನಿಷ್ಠ. ಅವನನ್ನು ಕುರುಪ್ಪರು ಅನ್ನ ಬಟ್ಟೆ ಕೊಟ್ಟು ಜತನದಿಂದ ಸಾಕುತ್ತಾರೆ. ನಿನ್ನನ್ನು ಪರಂಬ್ ಕುರುಕ್ಕಾಟ್ಟ್ ಚೇರನೂ ಲೆಕ್ಕಿಸುವವನಲ್ಲ. ಅವನು ಯಾರನ್ನೂ ಗಣಿಸುವವನಲ್ಲ. ನೀನು ಅಲ್ಲಿಗೆ ಹೋಗದಿರುವುದು ಲೇಸು. ಹೋದೆಯಾದರೆ ನಿನ್ನ ತಲೆಯನ್ನು ಅವನು ಕಡಿದಾನು. ಹೀಗೆ ಕೋಮಕುರುಪ್ಪ್ ನೀಡಿದ ಎಚ್ಚರಿಕೆಗಳಾವುದನ್ನೂ ಒದೇನ ಗಣ್ಯಮಾಡಲಿಲ್ಲ. ಪರಂಬ್‌ಗೆ ತಿರುಗಾಟಕ್ಕೆ ಹೊರಟೇ ಬಿಟ್ಟ. ಹಾಗೆ ಮೂರು ದಿನವಿಡೀ ತಿರುಗಾಡಿದರೂ ಒಂದು ಎಳನೀರೂ ಹುಟ್ಟಲಿಲ್ಲ, ಒಂದು ಸೀಳು ವೀಳ್ಯ ಕೂಡ ದಕ್ಕಲಿಲ್ಲ. ಒದೇನ ಹಿಂತಿರುಗುವುದರಲ್ಲಿದ್ದ. ಕಲ್ಲೇರಿ ತಂಡಾಯನ ಮನೆಗೆ ತಲಪುವಾಗ ಒದೇನ ಚಾಪ್ಪನಲ್ಲಿ ಕೇಳಿದ – ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ಈ ಕಾಣುವ ಮನೆ ಯಾರದು? ಚಾಪ್ಪನೆಂದ – ಅದು ಕಲ್ಲೇರಿ ತೀಯ

ತಂಡಾಯನದು. ಈ ಮನೆಗೆ ಹೋಗುವುದೇ ಬೇಡ. ಒದೇನನೆಂದ – ಅದೇಕೆ ಹಾಗೆ ಹೇಳುತ್ತಿ? ಅದಕ್ಕೆ ಚಾಪ್ಪನೆಂದ – ನಿಮ್ಮನ್ನು ಲೆಕ್ಕಿಸದೆ ಅವನು ಮುಕ್ಕಾಲಿ ಪೀಠದಲ್ಲಿ ಕುಳಿತೇ ಇದ್ದಾನು. ಅದನ್ನು ಕಂಡರೆ ನನ್ನ ಯಜಮಾನರಿಗೆ ಸಹಿಸಲಾರದಷ್ಟೆ? ಒದೇನ ಚಾಪ್ಪನ ಸಲಹೆಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಪಡಿಪ್ಪುರೆ ದಾಟಿ ಒಳಹೋದ. ಕಲ್ಲೇರಿ ತಂಡಾಯ ಮುಕ್ಕಾಲಿ ಪೀಠದಲ್ಲಿ ಕುಳಿತಿದ್ದಾನೆ. ತಾಂಬೂಲ ಜಗಿಯುತ್ತಾನೆ, ಉಗುಳುತ್ತಿದ್ದಾನೆ! ಒದೇನನನ್ನು ಕಂಡೂ ಕಾಣದವನ ಹಾಗೆ ಮಾಡಿದ. ಎಲ್ಲಿಂದ ಬಂದಿರಿ ಎಂದು ಕೇಳಲಿಲ್ಲ. ಯಾಕೆ ಬಂದಿರಿ ಎಂದು ಕೇಳಲಿಲ್ಲ. ಎದ್ದು ನಿಂತು ಗೌರವದ ಆಚಾರ ಮಾಡಲಿಲ್ಲ. ಒದೇನ ಒಳಗಿನ ಸಿಟ್ಟನ್ನು ಹಲ್ಲುಗಳಲ್ಲಿ ನುರಿದುಕೊಂಡ. ಒದೇನ ಹೇಳಿಯೇ ಬಿಟ್ಟ – ಕಲ್ಲೇರಿಯ ತೀಯ ತಂಡಾಯನೆ, ಕೇಳು! ತಿನ್ನಲು ವೀಳ್ಯ ತೆಗೆದುಕೊಂಡು ಬಾ! ತೀಯ ತಂಡಾಯ ಉತ್ತರವಾಗಿ ಹೇಳಿದ – ಎಲ್ಲಿಂದ ಬಂದವನು ಈ ಕರಿ ಠೊಣಪ? ನಾನು ಯಾರಿಗೂ ತಿನ್ನಲು ವೀಳ್ಯ ಕೊಡುವವನಲ್ಲ. ನಾನು ಹಾಗೇನಾದರೂ ವೀಳ್ಯಕೊಡಬೇಕಾದರೆ ನನ್ನ ಧನಿ ಕುರುಕ್ಕಾಟೊಡೆಯರ ಸವಾರಿ ಇತ್ತ ಬರಬೇಕು. ಆಗ ಹರಿವಾಣದಲ್ಲಿ ಸೂಡಿ ವೀಳ್ಯದೆಲೆ ತಂದಿರಿಸಿಯೇನು. ಹಬೆ ಯೇಳುವ ಹೊಗೆಸೊಪ್ಪು ತಂದಿರಿಸಿಯೇನು. ಅದನ್ನು ಕೇಳಿ ಒದೇನನೆಂದ– ಕಲ್ಲೇರಿ ತೀಯ ತಂಡಾಯನೇ ಕೇಳು! ಹರಿವಾಣದಲ್ಲಿ ಈಗ ಸೂಡಿ ವೀಳ್ಯದೆಲೆ ತಂದಿರಿಸು. ಹಬೆಯೇಳುವ ಹೊಗೆಸೊಪ್ಪು ತಂದಿರಿಸು. ಅದಕ್ಕೆ ತಂಡಾಯನೆಂದ – ಈ ಕರಿ ಠೊಣಪ ಎಲ್ಲಿಂದ ಬಂದ? ಆಗ ಒದೇನ ಒಮ್ಮೆಲೆ ತನ್ನ ಉರುಮಿ ತಿರುಗಿಸಿ ಒಂದೇಟು ಹೊಡೆದ. ತೀಯ ತಂಡಾಯ ಎರಡು ತುಂಡುಗಳಾಗಿ ಉರುಳಿದ. ಒದೇನ ಪಡಿಪ್ಪುರೆಯ ಬಾಗಿಲಿಂದ ನೆಗೆದು ಹೊರಟು ಹೋದ. ಒದೇನ ಹೋಗುತ್ತಾ ಕಂಡಾಚ್ಚೇರಿ ಚಾಪ್ಪನಿಗೆಂದ – ಕಂಡಾಚ್ಚೇರಿಯ ಪ್ರಿಯ ಚಾಪ್ಪ! ನನ್ನ ಮೇಲಿನ ಪ್ರೀತಿಯಿಂದ ನನ್ನನ್ನು ಹಿಂಬಾಲಿಸಿ ಬರಬೇಡ. ನೀನು ಎಲ್ಲಿಯಾದರೂ ಹೋಗಿ ಇದ್ದುಕೊ.

ಕಲ್ಲೇರಿ ತಂಡಾಯನ ಹೆಂಡತಿ ಮುಡಿಯನ್ನು ಬಿಚ್ಚಿಹಾಕಿ ಪಡಿಪ್ಪುರೆ ಬಾಗಿಲ ಹೊರಹೋಗಿ ಹಾಹಾಕಾರ ಮಾಡಿದಳು. ಪರಂಬ್ ಕುರುಕ್ಕಾಟ್ಟ್ ಚೇರ ಮಾಳಿಗೆಯ ಮೇಲಿನಿಂದ ಅದನ್ನು ಕೇಳಿದ. ಕುಂಞಿಚ್ಚೇರ ಮಾಳಿಗೆಯ ಮೆಟ್ಟಲಿಳಿದು ಬಂದ. ತಂಡಾಯನ ಹೆಂಡತಿಯಲ್ಲಿ ಕೇಳಿದ – ಯಾಕೆ ಹಾಹಾಕಾರ ಮಾಡುತ್ತಿದ್ದಿ? ಅವಳೆಂದಳು – ನಮ್ಮೊಡೆಯ! ಕಡತ್ತ್ ವೈನಾಡಿನ ಕರಿಠೊಣಪ (ಒದೇನ) ನನ್ನ ತೀಯನನ್ನು ಕೊಂದ, ಒಡೆಯ! ಕುಂಞಿಚ್ಚೇರ ಅವಳಲ್ಲಿ ಹೇಳಿದ – ಒಂದು ಮಾತು ಕೇಳು, ತೀಯತ್ತಿ! ಕಾಸರಕನ ಮರದ ಕೆಳಗೆ ದಫನದ ಗುಳಿ ಮಾಡಿಸಿ ನಿನ್ನ ಗಂಡನನ್ನು

ಅದರಲ್ಲಿರಿಸು. ಈ ತೀಯ ತಂಡಾನ ನನ್ನ ಸೇವೆ ಮಾಡುತ್ತಿದ್ದ. ಅವನನ್ನು ಕೊಂದ ಆ ಕರಿತೊಣಪನನ್ನು ಎಲ್ಲಿದ್ದರೂ ನಾನು ಹಿಡಿಯುತ್ತೇನೆ.

ತಚ್ಚೋಳಿ ಒದೇನ ತೀಯನಲ್ಲಿಂದ ಹೊರಟವನು ನಡೆಯುತ್ತ ನಡೆಯುತ್ತ ಮೇಲಿನ ಮನೆಗೆ ತಲಪಿದ. ಅಲ್ಲಿಗೆ ಹೋದಾಗ ಬಾಗಿಲುಗಳೆಲ್ಲ ಮುಚ್ಚಿವೆ. ಒದೇನ– ಕುಂಕಿ, ಕುಂಕಿ! ಎಂದು ಕರೆದ. ಆಗ ಕುಂಞಿಕುಂಕಿ ಕೇಳಿದಳು – ಯಾರದು ಕರೆಯುತ್ತಿರುವುದು? ಅದಕ್ಕೆ ಒದೇನನೆಂದ – ಇದು ನಾನಲ್ವೇ ನಾನಲ್ವೇ ಕುಂಞಿಕುಂಕಿ? ತಚ್ಚೋಳಿ ಮನೆಯ ಒದೇನ! ಬಾಗಿಲು ತೆರೆಯಮ್ಮ ಕುಂಞಿಕುಂಕಿ. ಕುಂಕಿ ಬಾಗಿಲು ತೆಗೆದಳು. ಒದೇನನನ್ನು ಕಂಡು ಕುಂಕಿ ಕೇಳಿದಳು – ಇದೇನಿದು ನಿನ್ನ ಮುಖದಲ್ಲಿ ಇಂಥ ಆತಂಕ? ಏನು ಗಡಿಬಿಡಿ ಮಾಡಿಕೊಂಡೆ? ಒದೇನನೆಂದ – ಕುಂಞಿಕುಂಕಿ, ನಾನು ಒಂದು ವಿಷಯ ಹೇಳಿಕೊಂಡರೆ ಕೇಳುತ್ತಿಯಾ? ಕುಂಕಿಯೆಂದಳು – ಏನಾಯಿತು ಹೇಳೋ ನನ್ನ ಪ್ರಿಯ ಒದೇನ, ಇದ್ದುದ್ದನ್ನು ಇದ್ದಂತೆ ಹೇಳು. ಒದೇನನೆಂದ – ಇದ್ದದ್ದು ಇದ್ದಂತೆ ಹೇಳಬೇಕಾದರೆ ಸತ್ಯವನ್ನೇ ಹೇಳಬೇಕು. ಸತ್ಯ ಅಂದರೆ ಕಟುಸತ್ಯ. ಆದರೂ ಹೇಳುತ್ತೇನೆ ಕೇಳು. ಅದಕ್ಕೆ ಕುಂಕಿಯೆಂದಳು – ಸತ್ಯವನ್ನೇ ಹೇಳುವೆಯಾದರೆ ನನ್ನಾಣೆ ನಿನ್ನಾಣೆ ನಮ್ಮಪ್ಪನಾಣೆ! ನಾನು ನಿನ್ನೊಂದಿಗೆ ಇರುತ್ತೇನೆ. ಒದೇನ ಹೇಳಿದ – ಕಲ್ಲೇರಿ ತೀಯ ತಂಡಾಯನನ್ನು ನಾನು ಕೊಂದುಬಿಟ್ಟೆ, ನಾನು ಅವನ ಮನೆಗೆ ಹೋದಾಗ ನನಗೆ ಗೌರವ ತೋರದೆ ಅಸಡ್ಡೆ ಮಾಡಿದ. ಕುಂಕಿಯೆಂದಳು – ಅಯ್ಯೋ ಒದೇನ ಏನು ಮಾಡಿಬಿಟ್ಟೆ? ಈಗ ನಾನೇನು ಮಾಡಲಿ ದೇವರೆ? ಪರಂಬ್ ಕುರುಕ್ಕಾಟ್ಟ್‌ನ ನನ್ನ ಅಣ್ಣನ ಹಳೆಯಕ್ಕಿಯನ್ನಕ್ಕೆ ಕಲ್ಲು ಬಿತ್ತಲ್ಲ? ತೀಯ ತಂಡಾಯ ಅನ್ನ ಬಟ್ಟೆಗಳ ಬಗೆಗೆ ಬೇಕಾದುದನ್ನು ನಮಗೆ ತಂದುಕೊಡುತ್ತಿದ್ದ. ಒದೇನ! ಆದದ್ದಾಯಿತು. ಏನಾದರಾಗಲಿ ನೀನು ಕಲ್ಲಕೋಣೆಯನ್ನು ಸೇರಿಕೊ. ಒದೇನ ಕಲ್ಲಕೋಣೆ ಸೇರಿಕೊಂಡ. ಕುಂಕಿ ಕಲ್ಲ ಕೋಣೆಯನ್ನು ಮುಚ್ಚಿ ಚಿಲಕ/ಅಗುಳಿ ಹಾಕಿದಳು. ತನ್ನ ಪಡುಕೋಣೆ ಸೇರಿಕೊಂಡಳು. ಕುಂಞಿಚ್ಚೇರ ಹಾಗೆ ನಡೆದು ನಡೆದು ತಚ್ಚೋಳಿ ಮೇಪ್ಪ ತಲಪಿ ಕೋಮ ಕುರುಪ್ಪ್‌ನಲ್ಲಿ ಕೇಳಿದ– ತಚ್ಚೋಳಿ ಕೋಮಕುರುಪ್ಪರೇ! ಈ ಮನೆಯ ಒದೇನ ಇಲ್ಲಿ ಇದ್ದಾನೆಯೇ? ಕೋಮಕುರುಪ್ಪನೆಂದ – ಇಂದಿಗೆ ಮೂರು ದಿವಸವಾಯಿತು, ಅವನು ಇಲ್ಲಿಂದ ಹೊರಟು. ಕುಂಞಿಚ್ಚೇರ ಹಾಗೆ ನಡೆದು ನಡೆದು ಕಾವಿಲ್ ಚಾತ್ತೋತ್ತ್‌ಗೆ ಹೋದ. ಅಲ್ಲಿ ಒದೇನನ ಹೆಂಡತಿ ಚೀರುವಿನಲ್ಲಿ ಕೇಳಿದ – ಒದೇನ ಇಲ್ಲಿ ಇದ್ದಾನೆಯೇ? ಅದಕ್ಕೆ ಅವಳೆಂದಳು – ನನ್ನ ಗಂಡ ನಿನ್ನೆಯೇ ಇಲ್ಲಿಂದ ಹೋಗಿದ್ದಾರೆ. ಕುಂಞಿಚ್ಚೇರ ಹಾಗೆ ನಡೆದು ನಡೆದು ಬೂಡಿನ ಕುಂಞಿಕೋಮನ್ ನಂಬ್ಯಾರರಲ್ಲಿಗೂ ಹೋಗಿ ವಿಚಾರಿಸಿದ. ಅಲ್ಲಿಯೂ ಒದೇನನ ಸುಳಿವು ಸಿಗಲಿಲ್ಲ. ಹಾಗೆ ನಡೆದು ನಡೆದು ಪನಂಚಾಡ್‌ನ

ಕೇಳೋತ್ತ್‌ಗೆ ಹೋದ. ಅಲ್ಲಿ ಚಂದು ಕುರುಪ್ಪ್‌ನಲ್ಲೂ ಒದೇನನ ಬಗ್ಗೆ ವಿಚಾರಿಸಿದ. ನಾವು ಒದೇನನನ್ನು ಕಂಡಿಲ್ಲ ಎಂದು ಚಂದು ಕುರುಪ್ಪ್ ಹೇಳಿದ. ಹಾಗೆ ನಡೆದು ನಡೆದು ಮೇಲಿನ ಮನೆಗೆ ತಲಪಿದ. ಮನೆಯಲ್ಲಿ ಕುಂಕಿಯಲ್ಲಿ ವಿಚಾರಿಸಿದ – ಮೇಲಿನ ಮನೆಯ ನನ್ನ ತಂಗಿ ಕುಂಕಿ! ಕಡತ್ತ್ ವೈನಾಡಿನ ಕರಿತೊಣಪ ಇಲ್ಲಿಗೇನಾದರೂ ಬಂದಿದ್ದ ನೇನಮ್ಮಾ? ಕುಂಞಿಕುಂಕಿ ಆಗ ಕೇಳಿದಳು – ಅಣ್ಣಾ! ಕಡತ್ತ ವೈನಾಡಿನ ಕರಿತೊಣಪ ಯಾರಣ್ಣಾ? ಕುಂಞಿಚೇರನೆಂದ – ಹಾಗೆಂದರೆ ತಚ್ಚೋಳಿ ಒದೇನನಲ್ಲ ವೇನಮ್ಮಾ? ಕುಂಕಿಯೆಂದಳು – ಪರಂಬ್‌ಕುರುಕ್ಕಾಟ್ಟ್‌ನ ನನ್ನ ಅಣ್ಣ! ನನಗಂಥ ಒದೇನನನ್ನು ಗೊತ್ತೇ ಇಲ್ಲ. ಅವನನ್ನು ನಾನು ಕಂಡೇ ಇಲ್ಲ. ಕುಂಞಿಚೇರ ಸತ್ಯವೆಂದೇ ನಂಬಿದ. ಹಾಗೆ ನಡೆದು ನಡೆದು ಲೋಕನಾರ್ ಕಾವ್‌ಗೆ ಹೋದ. ಅಲ್ಲಿನ ಕೆರೆಯಲ್ಲಿ ಮಿಂದ. ಗರ್ಭಗುಡಿಯ ಬಾಗಿಲಿಗೆ ಬಂದು ನಿಂತ. ಬೆಳ್ಳಿಯ ಹದಿನಾರು ಹಣಗಳನ್ನು ತೆಗೆದ. ಭಂಡಾರಕ್ಕೆ ಅವನ್ನು ಹಾಕಿದ. ಪಾತ್ರಿಯ ಮುಂದೆ ಕೈ ಮುಗಿದು ನಿಂತ. ಪಾತ್ರಿ ನಂಬೂದಿರಿಗೆ ದೈವಾವೇಶವಾಯಿತು. ಪಾತ್ರಿ ಯೆಂದ – ಪರಂಬ್‌ಕುರುಕ್ಕಾಟ್ಟ್ ಕುಂಞಿಚ್ಚೇರಾ! ಏನಂಥ ಸಂಕಟ ಬಂತು ಚೇರ? ಒದೇನನನ್ನು ಕಾಣದೆ ಇರುವುದಕ್ಕೋ? ಸಂಕಟ ಪಡಬೇಡ, ಕುಂಞಿಚೇರ. ಒದೇನ ಹೋದಾಗ ತಂಡಾಯ ಮುಕ್ಕಾಲಿ ಪೀಠದಲ್ಲಿ ಕುಳಿತವನು ಎದ್ದು ನಿಂತು ಆಚಾರ ಮಾಡಬೇಡವೇ? ಯಾಕೆ ಮಾಡಲಿಲ್ಲ? ತೀಯ ತಂಡಾಯನದೇ ತಪ್ಪಲ್ಲವೇ? ಒದೇನನದೇನು ತಪ್ಪು, ಕುಂಞಿಚೇರಾ? ದೈವಾವೇಶದ ಪಾತ್ರಿಯ ನುಡಿ ಮುಂದುವರಿಯಿತು – ಒದೇನನನ್ನು ಕಾಣಬೇಕೇನು? ಆದರೆ ನಾನು ಅವನನ್ನು ಬಿಟ್ಟು ಕೊಡುವುದಿಲ್ಲ. ಚೆನ್ನಾಗಿ ಕೇಳಿ ಮುಂದಡಿಯಿಡು. ಕಿವಿಕೊಟ್ಟು ಚೆನ್ನಾಗಿ ಕೇಳು. ನನ್ನ ಒದೇನ ಇಲ್ಲವೆಂದಾದರೆ ನಾನು ಈ ಕಾವ್‌ನಲ್ಲಿ ಇರುವುದಿಲ್ಲ. ಬಡಗು ಮುಳಗ್‌ಮಣಿ ಕೋಟೆಯಿಂದ ನಾವು ಏಳು ದೈವ ದೇವರುಗಳು ಹೊರಟೆವು. ಭಗವತಿ ಕೊಟ್ಟಿಯೂರು ಕೊಡುಂಗಲ್ಲೂರಲ್ಲಿ ನೆಲೆನಿಂತಳು. ಬಳಿಕ ಆರುಜನ ನಾವು ಹೋಗುತ್ತಿದ್ದಾಗ ನನ್ನ ತಂಗಿ ಮಣಿಯೂರ್ ತೆರುವತ್ತ್‌ನಲ್ಲಿ ನೆಲೆಯಾದಳು. ಬಳಿಕ ನಾವೈದು ಮಂದಿ ಹೋಗುತ್ತಾ ನನ್ನ ಇನ್ನೊಬ್ಬಳು ತಂಗಿ ಕಳಿಯಾಂಬಳ್ಳಿಯ ಕೆಳಗೆ ತಲಪುವಾಗ ತುಂಬ ದಾಹವಾಯಿತೆಂದು ತೆಂಗಿನ ಮರದಿಂದ ಕಳ್ಳು ತೆಗೆದುಕೊಂಡು ಕುಡಿದು ಅಲ್ಲಿ ನಿಂತಳು. ಪಾಯಸಾನ್ನದ ಪರಿಮಳ ಅಡರಿ ನಮ್ಮಪ್ಪ ಶಿವದೇವರು ಪೊನ್ಮೇರಿಯಲ್ಲಿ ನೆಲೆಯಾದರು. ಮತ್ತೆ ಮುಂದೆ ಸಾಗಿದ ನಾವು ಮೂವರಲ್ಲಿ ಅಜ್ಜಿ ಪೆರಿವಶ್ಶೇರಿಯಲ್ಲಿ ನೆಲೆಯಾದಳು. ಮತ್ತೆ ನಾವು ಇಬ್ಬರು ಮಾತ್ರ ಉಳಿದೆವು. ನನ್ನ ತಂಗಿ ಪಾಞ್ಞೋಟ್ಟರದಲ್ಲಿ ನಿಂತಳು. ಅವಳು ತೀವ್ರ ದಾಹಶಮನಕ್ಕಾಗಿ ಅಲ್ಲಿನ ಕೈದಕುಂಡು ಎಂಬಲ್ಲಿನ ನೀರು ಕುಡಿದಿದ್ದಳು. ಅವಳು ಅಲ್ಲೇ ಸಿಕ್ಕಿಹಾಕಿಕೊಂಡಳಲ್ಲ ಚೇರಾ? ಬಳಿಕ ನಾನೊಬ್ಬಳೇ ಆದೆನಲ್ಲವೇ?

ನಾನು ಮುಂದೆ ನಡೆದು ಈ ಕಾವ್‌ನಲ್ಲಿ ನೆಲೆನಿಂತೆ. ಇಲ್ಲಿ ಮುಳುಗಿ ಮೀಯಲು ಕೊಳವಿದೆ. ಗಾಳಿಗೆ ಮೈಯೊಡ್ಡಿ ಕುಳಿತುಕೊಳ್ಳುವುದಕ್ಕೆ ಒಳ್ಳೆಯ ಜಾಗವಿದೆ. ಇದನ್ನೆಲ್ಲ ನೋಡಿದ ನಾನು ಅಶ್ವತ್ಥಕಟ್ಟೆಯಲ್ಲಿ ಕುಳಿತಿದ್ದೆ. ಆಗ ತಚ್ಚೋಳಿ ಮನೆಯ ಹೆಂಗಸೊಬ್ಬಳು ಆರೇಳು ತಿಂಗಳ ಕೂಸು ಒದೇನನನ್ನು ಸೊಂಟದಲ್ಲಿ ಎತ್ತಿಕೊಂಡು ಬಂದವಳು ಕಾವ್‌ನ ಕೆರೆಯಲ್ಲಿ ಮಿಂದಳು. ಹಾಗೆ ಮಿಂದು ಬಂದವಳು ನನ್ನಲ್ಲಿ ಕೇಳಿದಳು – ಅಶ್ವತ್ಥಕಟ್ಟೆಯಲ್ಲಿ ಯಾಕೆ ಕುಳಿತಿರಿ! ಅದಕ್ಕೆ ನಾನಂದಿದ್ದೆ – ತುಂಬಾ ಬಾಯಾರಿಕೆ, ನೀರು ಸಿಗದೆ ಕುಳಿತಿದ್ದೇನೆ. ಅದಕ್ಕೆ ಅವಳು ಹೇಳಿದಳು– ನೀರು ಎಲ್ಲಿಂದ ಕೊಡಲಿ? ಮಾಣಿಕೋತ್ತ್ ಮನೆ ತುಂಬ ದೂರ. ಅಶ್ವತ್ಥಕಟ್ಟೆಯ ಬಳಿ ಕರು ಹಾಕಿದ ಕಪಿಲೆ ದನ ಮೇಯುತ್ತಿತ್ತು. ಮಾರಾರರ ಮನೆಯಿಂದ ಒಂದು ಗಿಂಡಿಯನ್ನು ಕೇಳಿ ಪಡೆದು ಅದನ್ನು ಕೆರೆಯಲ್ಲಿ ಚೆನ್ನಾಗಿ ತೊಳೆದು ಕಪಿಲೆ ದನದ ಕೆಚ್ಚಲು ಹಿಂಡಿದಳು. ಅಶ್ವತ್ಥಕಟ್ಟೆಯಲ್ಲಿ ಹಾಲು ತಂದಿಟ್ಟಳು. ಆಗ ಅವಳಲ್ಲಿ ನಾನು ಹೇಳಿದೆ – ನೀನು ಕೊಟ್ಟರೆ ನಾನು ಹಾಲು ಕುಡಿಯುವುದಿಲ್ಲ. ಅದಕ್ಕೆ ಅವಳು ಕೇಳಿದಳು – ಹಾಗಾದರೆ ಯಾರು ಕೊಟ್ಟರೆ ಹಾಲು ಕುಡಿಯುತ್ತೀರಿ? ಅದಕ್ಕೆ ನಾನೆಂದೆ – ನೂಲು (ಜನಿವಾರ) ಹಾಕಿದ ಬ್ರಾಹ್ಮಣ ಕೊಟ್ಟರೆ ಕುಡಿಯುತ್ತೇನೆ. ಆಗ ಅವಳು ಅಂದಿದ್ದಳು – ಈ ಮಗುವನ್ನು ಎಲ್ಲೂ ಬಿಡುವಂತಿಲ್ಲ. ಇಲ್ಲವಾದರೆ ಬ್ರಾಹ್ಮಣನನ್ನು ಕರೆದು ತರ ಬಹುದಿತ್ತು. ಅದಕ್ಕೆ ನಾನಂದೆ – ಮಗುವನ್ನು ನನ್ನ ಹತ್ತಿರ ಅಶ್ವತ್ಥಕಟ್ಟೆಯಲ್ಲಿ ಬಿಡು. ಅವಳು ಆರು ತಿಂಗಳ ಮಗು ಒದೇನನನ್ನು ನನ್ನ ಹತ್ತಿರ ಬಿಟ್ಟು ತಯ್ಯಿಲ್ಲಂ ಮನೆಗೆ ಹೋಗಿ ಬ್ರಾಹ್ಮಣ ಮಾಣಿಯೊಬ್ಬನನ್ನು ಕರೆತಂದಳು. ಮಾಣಿ ನನಗೆ ಹಾಲುಕೊಟ್ಟ. ಆಗ ಆಕೆ – ಇನ್ನು ನಾನು ನನ್ನ ಮಾಣಿಕೋತ್ತ್ ಮನೆಗೆ ಹೋಗಲೇ? ಎಂದು ಕೇಳಿದಳು. ಆಗ ನಾನು ಅವಳಿಗೆ ಹೇಳಿದೆ – ನನ್ನನ್ನು ಇಲ್ಲಿ ಅಶ್ವತ್ಥಕಟ್ಟೆಯಲ್ಲಿ ಬಿಡುತ್ತಿಯಾ? ಆಗ ಅವಳು ಈಂದ್‌ನ (ಈಚಲು) ಓಲೆ ಗಳನ್ನು ಕಡಿದು ತಂದು ಅಶ್ವತ್ಥಕಟ್ಟೆಯ ಮೇಲೆ ಚಪ್ಪರ ಹಾಕಿದಳು. ಆಗ ನಾನು ಅವಳಿಗೆ ಹೇಳಿದೆ – ನೀನು ಹಾಕಿದ ಚಪ್ಪರದಲ್ಲಿ ನಾನು ನಿಲ್ಲುವವಳಲ್ಲ. ನಿನ್ನ ಮಗ ಅದನ್ನು ಕಟ್ಟಿಕೊಡಲಿ. ಆಗ ಅವಳು ಮಗು ಒದೇನನ ಕೈ ಹಿಡಿದುಕೊಂಡು ಚಪ್ಪರ ನಿರ್ಮಿಸಿದಳು. ಮೂರು ವರ್ಷಗಳ ವರೆಗೆ ಮಗು ಒದೇನ ಕಟ್ಟಿದ ಆ ಚಪ್ಪರದಲ್ಲಿಯೇ ಉಳಿದುಕೊಂಡೆ. ಒದೇನನಿಗೆ ಮೂರು ವರ್ಷ ಪ್ರಾಯವಾದಾಗ ಈಂದೋಲೆಗಳನ್ನು ತೆಗೆದು ತೆಂಗಿನ ಹೆಣೆ ಯೋಲೆಗಳಿಂದ ಚಪ್ಪರ ಕಟ್ಟಿದರು. ಅವನಿಗೆ ಐದು ವರ್ಷ ಪ್ರಾಯವಾದಾಗ ಹೆಣೆಯೋಲೆಗಳ ಚಪ್ಪರವನ್ನು ತೆಗೆದು ಹಾಕಿ ಹೆಣೆಯೋಲೆಗಳಿಂದಲೇ ನನಗೆ ಗುಡಿ ನಿರ್ಮಿಸಿದರು. ಒದೇನನಿಗೆ ಒಂಬತ್ತು ವರ್ಷ ಪ್ರಾಯವಾದಾಗ ಹೆಣೆಯೋಲೆಗಳನ್ನು ತೆಗೆಸಿ ಹಂಚು ಹಾಕಿಸಿದರು. ಅವನಿಗೆ ಹದಿನಾಲ್ಕು ವರ್ಷ ಪ್ರಾಯವಾದಾಗ ನನಗಿದೋ

ಈ ತಾಮ್ರದ ತಗಡು ಹೊದೆಸಿದ ಮಾಡವನ್ನು ನಿರ್ಮಿಸಿಕೊಟ್ಟರು. ಅಂಥ ನನ್ನ ಮಗು ಒದೇನನನ್ನು ನಾನು ಯಾರಿಗೂ ಬಿಟ್ಟುಕೊಡೆನು.

ಇದನ್ನೆಲ್ಲ ಕೇಳಿದ ಕುಂಞಿಚೇರನಿಗೆ ತಾಳ್ಮೆ ಕೆಟ್ಟಿತು. ಅವನೆಂದ – ಪರಂಬ್ ಕುರುಕ್ಕಾಟ್ಟ್‌ನ ನಾಯಮ್ಮಾರರೇ! ನೀವು ಪರಂಬ್‌ಕುರುಕ್ಕಾಟ್ಟ್‌ಗೆ ಹೋಗಿ ಹಟ್ಟಿಯಿಂದ ಹೋರಿಯನ್ನು ಬಿಚ್ಚಿ ಇಲ್ಲಿಗೆ ತನ್ನಿ. ಈ ಪಾತ್ರಿಯ ಮುಂದೆಯೇ ನಾನು ಆ ಹೋರಿಯ ತಲೆ ಕಡಿಯುತ್ತೇನೆ. ದೈವಾವೇಶದಿಂದ ಪಾತ್ರಿ ಹೇಳಿದ– ಬೇಡ, ಎಚ್ಚರ! ಇಲ್ಲಿ ನಿನ್ನ ಆಟ ಸಾಗದು, ಕುಂಞಿಚೇರಾ! ನೀನು ಈಗ ಇಲ್ಲಿಂದ ಹೊರಟುಹೋಗು. ಆಗ ಚೇರನೆಂದ – ಪರಂಬ್‌ಕುರು ಕ್ಕಾಟ್ಟ್‌ನ ನಾಯಮ್ಮಾರರೇ! ನೀವು ಹೋಗಿ ಒಂದು ಕಟ್ಟು ಸೂಟೆಯನ್ನು (ತೆಂಗಿನ ಒಣ ಗರಿಗಳಿಂದ ಮಾಡಿದ ಹಿಲಾಲುಗಳು) ಇಲ್ಲಿ ತನ್ನಿ. ಇಲ್ಲಿನ ಪಾಟ್ಟ್‌ಪುರ (ದೇವರು ದೈವಗಳಿಗೆ ಪಾಟ್ಟು ಎಂಬ ಉತ್ಸವ ನಡೆಯುವ ಜಾಗ) ವನ್ನು ನಾನು ಸುಟ್ಟು ಬೂದಿಮಾಡಿಬಿಡುತ್ತೇನೆ. ಇನ್ನೊಮ್ಮೆ ದೈವಾವೇಶದ ನುಡಿಯಾಯಿತು – ಬೇಡ, ಎಚ್ಚರ! ಇಲ್ಲಿ ನಿನ್ನ ಆಟ ಸಾಗದು, ಕುಂಞಿಚೇರ! ನಿನ್ನ ಕುರುಕ್ಕಾಟ್ಟ್‌ಗೆ ನೀನು ಹೊರಟು ಹೋಗು.

ಸನ್ನಿವೇಶವು ಹೀಗಿರಲು ಕಾವ್‌ನ ಆನೆ ಅನಂತ ಜೋರಾಗಿ ನಡುಗಲಾರಂಭಿಸಿತು. ಆನೆ ಒಮ್ಮೆ ಜೋರಾಗಿ ಘೀಳಿಟ್ಟಿತು. ಘೀಳಿಡುತ್ತಾ ಓಡತೊಡಗಿತು. ಹಾಗೆ ಓಡುತ್ತಾ ಮೇಲಿನ ಮನೆಗೂ ಓಡಿತು. ಕಲ್ಲುಕೋಣೆಯ ಮುಂದೆ ಬಂದು ನಿಂತು ಅನಂತ ಒಮ್ಮೆ ಜೋರಾಗಿ ಘೀಳಿಟ್ಟಿತು. ಒದೇನ ಮನದಲ್ಲೇ ನೆನೆದ – ನನಗೆ ಭಗವತಿ ಮುನಿಸಿಕೊಂಡ ಕಾಲವಿದು. ಕಾವ್‌ನ ಅನಂತನೆಂಬ ಆನೆಯ ಶಬ್ದ ಕೇಳುತ್ತಿದೆಯಲ್ಲವೇ! ಹಾಗೆ ನೆನೆಯುತ್ತಾ ಇದ್ದಂತೆಯೇ ಅನಂತನೆಂಬ ಆನೆ ಕಲ್ಲುಕೋಣೆಯನ್ನು ತೆರೆಯಿತು! ಸೊಂಡಿಲು ಎತ್ತಿ ನಿಂತಿತು. ಒದೇನನನ್ನು ಎತ್ತಿ ತನ್ನ ಬೆನ್ನೇರಿಸಿಕೊಂಡಿತು. ಬೆನ್ನೇರಿಸಿ ಕೊಂಡು ಮತ್ತೆ ಓಟ ಕಿತ್ತಿತು. ಲೋಕನಾರ್ ಕಾವ್‌ಗೆ ಬಂದಾಗ ಕುಂಞಿಚೇರನಿಗೆ ಒದೇನನನ್ನು ಕಂಡೂ ಕಾಣದಂತಾಯಿತು (ಆನೆಯ ಮೇಲೆ ಒದೇನ ಇದ್ದುದರಿಂದ). ಹಸಿಮೀನನ್ನು ಕಂಡ ಹದ್ದಿನ ಹಾಗೆ ಅವನ ಮೇಲೆರಗಲು ಚೇರನಿಗೆ ಹಂಬಲ. ಆಗ ಒದೇನನ ಮೇಲೆ ಹಾಗೆ ಎರಗಲು ಆಗದೆ ಅವನ ಕಾಲುಗಳು ನೆಲದಲ್ಲಿ ನಿಲ್ಲುತ್ತಿರಲಿಲ್ಲ. ಅನಂತನೆಂಬಾನೆ ಒದೇನನನ್ನು ಹಾಗೆ ಎತ್ತಿಕೊಂಡು ದೇವಾಲಯದ ಆವರಣದ ಒಳಗೆ ಹೋಯಿತು. ದೈವಾವೇಶವು ತಾರಕಕ್ಕೇರಿತು–ನನ್ನ ಒದೇನ ಈಗ ಆನೆಯ ಮೇಲಿದ್ದಾನೆ. ನೀನು ಏನು ಮಾಡುತ್ತಿ ಈಗ? ನನ್ನ ಕಾವ್‌ನ ಮೆಟ್ಟಿಲಿಳಿದು ನಡೆ ಚೇರ. ಆಗ ಕುಂಞಿಚೇರನೆಂದ– ಪರಂಬ್ ಕುರುಕ್ಕಾಟ್ಟ್‌ನ ನಾಯಮ್ಮಾರರೇ! ಹೋಗಿ

ನೂರೊಂದು ಬೇಡ ಬೇಡತಿಯರನ್ನು ಇಲ್ಲಿಗೆ ಕರೆದುಕೊಂಡು ಬನ್ನಿ. ಈ ದೇವಾಲಯವನ್ನು ನಾನು ಗುಣಿತೋಡಿ ಮುಚ್ಚಿಬಿಡುತ್ತೇನೆ. ಅವನು ಇನ್ನೂ ಎಂದ – ಪರಂಬ್‌ಕುರುಕ್ಕಾಟ್ಟ್‌ಗೆ ಹೋಗಿ ಹಟ್ಟಿಯಿಂದ ಹೋರಿಯನ್ನು ಬಿಚ್ಚಿ ತನ್ನಿ. ನಾಯಮ್ಮಾರರು ಹೊರಟು ಹೋದರು. ಗೂಳಿಯನ್ನು ಬಿಚ್ಚಿ ತಂದರು. ಪುಳಿಕೋಟ್ಟ್ ಪರಂಬ್ ಏರುತ್ತಿದ್ದಾಗ ಚೇರನಿಗೆ ಹುಚ್ಚು ಜ್ವರವೇರಿತು. ಬಾಚಿ ಬಾಚಿ ಎಸೆದಂತೆ ಮೈತುಂಬ ಸಿಡುಬು. ಕುಂಞಿಚೇರ ನಿಂತಲ್ಲೇ ಕುಸಿದು ಬಿದ್ದುಬಿಟ್ಟ. ದೈವಾವೇಶ ತಾರಕಕ್ಕೇರಿತು – ಈಗ ಇವನನ್ನು ನನ್ನ ಕಾವ್‌ನ ಮೆಟ್ಟಲಿಳಿಸಿ ಕರೆದೊಯ್ಯಿರಿ. ನಾಯಮ್ಮಾರರು ಚೇರನನ್ನು ಎತ್ತಿಕೊಂಡರು. ಗೂಳಿಯನ್ನು ಇತ್ತ ಕರೆತರಲೇ ಇಲ್ಲ. ಚೇರನನ್ನು ಎತ್ತಿಕೊಂಡವರು ಪುಳಿಕ್ಕೂಲ್ ಪರಂಬ್‌ಗೆ ತಲಪುವಾಗ ಅವನು ಹೆಣವಾಗಿದ್ದ.

ಹೊನ್ನನ್ನು ಗಂಟು ಕಟ್ಟಿ ತಂದರೆ
ಡೊಳ್ಳುಹೊಟ್ಟೆ ಕುಣಿಸಿ ನಗುತ್ತಾರೆ

ತಚ್ಚೋಳಿ ಕಣ್ಮಣಿ ಬಾಲಒದೇನ ಮಾಳಿಗೆಯ ಮೇಲೇರಿ ಹೋದ. ಅಣ್ಣನಿಗೆ ಗೌರವದ ಆಚಾರ ಮಾಡಿ ಬೋದಿಗೆ ಕಂಬದ ಮರೆಗೆ ನಿಂತುಕೊಂಡ. ಅಣ್ಣ ಕೋಮಕುರುಪ್ಪ್ ಕೇಳಿದ – ತಮ್ಮಾ, ತಚ್ಚೋಳಿ ಒದೇನ! ಆನೆಗೆ ಕಬ್ಬಿನ ತೋಟದ ಮೇಲೆ ಆಸೆಯಾದಂತೆ ಇಂದು ನಿನಗೆ ಎಲ್ಲಿಗೆ ಹೋಗುವ ಮನಸ್ಸಾಗಿದೆ? ಅದಕ್ಕೆ ಒದೇನನೆಂದ – ಒಂದುಂಟು ಕೇಳಬೇಕಣ್ಣ! ಹಲವರು ಹೇಳಿದ್ದನ್ನು ಕೇಳಿ ತಿಳಿದುಕೊಂಡೆ. ವಂಗಾಳರ್ ಕೋಟೆ ಎಂಬೊಂದು ಕೋಟೆಯಿದೆಯಂತೆ. ಅದನ್ನು ಒಬ್ಬಾಕೆ ಹೆಣ್ಣು ಮಗಳೇ ಕಟ್ಟಿಸಿದಳಂತೆ. ಕೋಟೆಯ ಕೆಲಸವನ್ನು ನೋಡಲು ನಾನು ಹೋಗಬೇಕು. ಅಣ್ಣ ಕೋಮಕುರುಪ್ಪ್ ಹೇಳಿದ – ಇದು ಯಾರು ಮಾಡಿದ ಮೋಸಕೆಲಸ! ವಂಗಾಳರ್ ಕೋಟೆ ನೋಡುವಂತೆ ನಿನ್ನನ್ನು ಉಬ್ಬಿಸಿದ್ದು ಯಾರು? ವಂಗಾಳರ್ ಕೋಟೆ ನೋಡಲು ಹೋದವರು ಮತ್ತೆ ಮರಳಿ ಬಂದು ತಮ್ಮ ಊರು ನೋಡುವುದಿಲ್ಲ. ತಮ್ಮ ಮನೆಗೆ ಬಂದು ಅಲ್ಲಿ ಸಾಯುವುದಿಲ್ಲ. ಇಲ್ಲಿ ಕೇಳಪ್ಪಾ ತಮ್ಮಾ! ನಾನೂ ಒಮ್ಮೆ ಅಲ್ಲಿಗೆ ಹೋಗಿದ್ದೆ–

ಪನಂಜಾಡನ್ ಚಂದು ಕುರುಪ್ಪ್ ಗೂಡಿನ ಕುಂಞಿಕೋಮನ್ ನಂಬ್ಯಾರ್, ಕೆಳಗಿನ ಮನೆ ಚಂದು ಮತ್ತು ನಾನು – ಹೀಗೆ ನಾವು ನಾಲ್ಕು ಜನ ಹೋದುದು. ಕೋಟಕ್ಕಲ್ ಕುಂಞಾಲಿ ಮರಕ್ಕಾರನಿಂದ ನಾವೆಯೊಂದನ್ನು ಬಾಡಿಗೆಗೆ ಪಡೆದೆವು. ದೋಣಿಯೇರಿ ಹೋದ ನಾವು ಅರ್ಧ ಸಮುದ್ರ ತಲಪಿದಾಗ ತೆಂಕುಭಾಗದಿಂದ ದೊಡ್ಡದೊಂದು ಗಾಳಿಬೀಸಿತು. ಆ ಗಾಳಿಗೆ ನಮ್ಮ ನಾವೆ ಸಿಲುಕಿಕೊಂಡಿತು. ಗಾಳಿಯ ಹೊಡೆತಕ್ಕೆ ಅದು ನುಚ್ಚುನೂರಾಯಿತು. ಅದರ ತುಂಡು ಹಲಗೆಗಳನ್ನು ಹಿಡಿದುಕೊಂಡು

ತೇಕುಮುಳುಕಾಗುತ್ತಿದಾಗ ಕೆಂಪು ಹದ್ದಿನ (ಕ್ರೂರಿ ಹೆಂಗಸು) ಮುದ್ದು ಮಗಳು ಕುಂಞಿಕನ್ನಿ ಏಳು ನೆಲೆ ಉಪ್ಪರಿಗೆಯ ಮೇಲಿನಿಂದ ನೋಡಿದಳು. ಕಿರುದೋಣಿಯನ್ನು ನಮ್ಮತ್ತ ಕಳುಹಿಸಿದಳು. ನಾವು ಆ ದೋಣಿಯನ್ನೇರಿದೆವು. ವಂಗಾಳರ್ ಕೋಟೆಯ ಸಮೀಪ ತೀರಕ್ಕೆ ತಲಪಿದೆವು. ಕೆಂಪು ಹದ್ದಿನ ಮುದ್ದು ಮಗಳು ಕುಂಞಿಕನ್ನಿ ನಮ್ಮನ್ನು ಜೂಜಾಡಲು ಕರೆದಳು. ನಾವು ನಮ್ಮ ಉರುಮಿಯನ್ನೂ ಕತ್ತಿಯನ್ನೂ ಪಣವಿಟ್ಟು ಆಡಿದೆವು. ಅವುಗಳನ್ನೆಲ್ಲ ಅವಳು ಜಯಿಸಿದಳು. ನಾವು ಉಂಗುರ ಪಣವಿಟ್ಟು ಆಡಿದೆವು. ಅದನ್ನೂ ಅವಳು ಗೆದ್ದಳು. ನಾವು ಮೇಲುಬಟ್ಟೆ ಕೆಳಬಟ್ಟೆಗಳನ್ನು ಪಣವಾಗಿಟ್ಟು ಆಡಿದೆವು. ಅವೆಲ್ಲವನ್ನೂ ಅವಳು ಗೆದ್ದುಬಿಟ್ಟಳು, ಒದೇನ. ಇನ್ನು ಕಾಡುಬಾಳೆಯ ತೋಟ ಮಾಡುವುದೇ ಗತಿ. ನಾವು ಹಾಗೆಯೇ ತೀರ್ಮಾನಿಸಿದೆವು, ಒದೇನ. ನಮಗೆ ಪಡಿಯಕ್ಕಿಗೂ ಮೂರುಚಿಟಿಕೆ ಉಪ್ಪಿಗೂ ಕನ್ನಿ ವ್ಯವಸ್ಥೆ ಮಾಡಿದ್ದಳು. ನಾವು ಅದೃಷ್ಟವನ್ನು ಹಳಿಯುತ್ತ ಸಾಯುವುದಕ್ಕೆಂದೇ ಹೊರಟೆವು. ಕೆಂಪು ಹದ್ದಿನ ಮುದ್ದು ಮಗಳು ಕುಂಞಿಕನ್ನಿಯ ದಾಸಿಯ ಸಾಮರ್ಥ್ಯ, ಚಾಲಾಕು, ಮಾಂತ್ರಿಕ ವಿದ್ಯೆಗಳಿಂದ ಕನ್ನಿಗೆ ಕಾಣದಂತೆ ನಮ್ಮನ್ನು ಕಳಿಸಿಕೊಟ್ಟಳು. ಹಾಗೆ ನಾವು ಮತ್ತೊಮ್ಮೆ ನಮ್ಮೂರು ಕಾಣುವಂತಾಯಿತು. ಅದನ್ನು ಕೇಳಿ ಒದೇನನೆಂದ – ನಾವು ಎಲ್ಲಿಗಾದರೂ ಹೊರಡಬೇಕೆಂದು ಭಾವಿಸುವ ಹೊತ್ತಿಗೆ ಅಣ್ಣ ಯಾವಾಗಲೂ ತಡೆಯುತ್ತಾರೆ. ಆದರೆ ಎಲ್ಲಿಗಾದರೂ ತಿರುಗಾಟ ಮಾಡಿ ಏನನ್ನಾದರೂ ತಂದರೆ ಎರಡೂ ಕೈ ನೀಡಿ ಸ್ವೀಕರಿಸುತ್ತಾನೆ. ಹೊನ್ನನ್ನು ಗಂಟು ಕಟ್ಟಿ ತಂದರೆ ಡೊಳ್ಳು ಹೊಟ್ಟೆ ಕುಣಿಸಿ ನಗುತ್ತಾರೆ. ಒದೇನ ಕೋಪ ನಟಿಸಿದ. ಅವನು ಮಾಳಿಗೆಯ ಮೆಟ್ಟಲಿಳಿದು ಹೊರಟುಬಿಟ್ಟ. ಹಾಗೆ ನಡೆದು ನಡೆದು ಲೋಕನಾರ್ ಕಾವ್‌ಗೆ ತಲಪಿದ. ಅಲ್ಲಿನ ದೊಡ್ಡ ಕೆರೆಯಲ್ಲಿ ಮಿಂದ. ಕಿರಿಯ ಕೆರೆಯಲ್ಲಿ ಕಾಲು ಮುಳುಗಿಸಿಕೊಂಡ. ಗರ್ಭಗುಡಿಯ ಬಾಗಿಲ ಬಳಿ ನಿಂತು – ತಯ್ಯಿಲ್ ನಂಬೂದಿರಿಯವರೇ! ನಮ್ಮ ಕಿರಿಯ ನಂಬೂದಿರಿಯಣ್ಣ! ಒಮ್ಮೆ ಗುಡಿಯ ಬಾಗಿಲು ತೆರೆಯಿರಿ. ಬಾಗಿಲ ಬಳಿಯ ಮೆಟ್ಟಲಲ್ಲಿ ಭಂಡಾರದ ಡಬ್ಬಿ ತಂದಿಡಿ. ಏಳು ಬತ್ತಿಗಳನ್ನು ಹಾಕಿ ದೀಪ ಉರಿಸಿರಿ ಎಂದ. ತನ್ನ ಪಂಚೆಯ ತುದಿಸೆರಗಲ್ಲಿ ಕಟ್ಟಿದ ಕಟ್ಟನ್ನು ಬಿಚ್ಚಿ ಹದಿನಾರು ಹಣವನ್ನು ಎಣಿಸಿ ತೆಗೆದು ಡಬ್ಬಿಗೆ ಕೈ ಹಾಕಿದ. ಕೈಮುಗಿದು ಗರ್ಭಗುಡಿಯ ಬಾಗಿಲಲ್ಲಿ ನಿಂತುಕೊಂಡ.

ನಂಬೂದಿರಿ ಹುಡುಗನಿಗೆ ದೈವಾವೇಶವಾಯಿತು. ತೀವ್ರವಾದ ಆವೇಶ ತುಂಬಿ ಹೀಗೆಂದ– ತಚ್ಚೋಳಿ ಕಣ್ಮಣಿ ಬಾಲಒದೇನ! ವಂಗಾಳರ್ ಕೋಟೆಗೆ ಹೋಗುವ ಬಯಕೆಯೆ? ಅಲ್ಲಿಗೆ ಹೋಗುವುದಾದರೆ ಹಿಂಜರಿಯಬೇಡ. ನಾನು ಮಾತ್ರ ನಿನ್ನ ಜತೆಗೆ ಬಂದರೆ ಸಾಲದು. ಪೊಟ್ಟನ್ ದೈವವನ್ನೂ ಕರೆದುಕೊಳ್ಳಬೇಕು. ಅರಕ್ಕಿಲ್ಲಾಟ್ಟ್

ಎಂಬ ದೇವಾಲಯದಲ್ಲಿ ಪೊಟ್ಟನ್ ದೈವವನ್ನೊಮ್ಮೆ ಸಂದರ್ಶಿಸು, ಒದೇನ. ವಂಗಳಾರ್ ಕೋಟೆಯಲ್ಲಿ ಹದಿನಾಲ್ಕು ಚಿನ್ನದ ಸೌತೆಗಳಿವೆ. ಕೋಟೆ ನೋಡಿ ಹಿಂದೆ ಬಂದಾಗ ಅವುಗಳಲ್ಲಿ ನಾಲ್ಕನ್ನು ಪೊಟ್ಟನ್ ದೈವದ ಮುಂದೆ ತೂಗಿ ಹಾಕು. ಉಳಿದುವನ್ನು ಇಲ್ಲಿಯೂ ತೂಗಹಾಕು ಒದೇನ. ಅರಕ್ಕಿಲಾಟ್ಟ್ ಎಂಬ ದೇವಾಲಯದಲ್ಲಿ ನೀನೇ ಹೋಗಿ ಹರಕೆ ಹೇಳಿಕೊಳ್ಳಬೇಕು ಹೊರತು ನಾನು ಹೋದರೆ ಪೊಟ್ಟನಿಗೆ ಇಷ್ಟವಾಗದು. ಒದೇನ ಪುನಃ ನಮಸ್ಕಾರ ಮಾಡಿದ. ಹಾಗೆ ಅಲ್ಲಿಂದ ನಡೆದು ನಡೆದು ಅರಕ್ಕಿಲಾಟ್ಟ್ ಎಂಬ ದೇವಾಲಯಕ್ಕೆ ಬಂದ. ಒದೇನ ಸ್ನಾನಮಾಡಿದ. ಗರ್ಭಗುಡಿಯ ಮುಂದೆ ಬಂದು ನಿಂತ. ಭಂಡಾರ ಪೆಟ್ಟಿಗೆಯನ್ನು ತರಿಸಿದ. ಹದಿನಾರು ಬೆಳ್ಳಿಹಣಗಳನ್ನು ತೆಗೆದು ಭಂಡಾರದ ಪೆಟ್ಟಿಗೆಗೆ ಹಾಕಿದ. ದೇವರಿಗೆ ವಂದಿಸಿ ಬಾಗಿಲ ಮುಂದೆ ನಿಂತು ಕೊಂಡ. ದೈವಪಾತ್ರಿಗೆ ಆವೇಶ ವುಂಟಾಯಿತು. ತೀವ್ರವಾದ ಆವೇಶ ತುಂಬಿ ಹೀಗೆಂದ – ಒಂದಿಷ್ಟು ಹಿಂಜರಿಯಬೇಡ ಒದೇನ, ನೀನು ಹೋಗು! ನಾವೆಯನ್ನು ಬಾಡಿಗೆಗೆ ಪಡೆದುಕೊ. ಹಾಗೆ ವಂಗಾಳರ್ ಕೋಟೆಗೆ ನೀನು ತಲಪುವಾಗ ಅಲ್ಲಿಗೆ ಪ್ರವೇಶಿಸುವುದು ಸುಲಭದ ಕೆಲಸವಲ್ಲ. ಮುಕ್ಕಾಲು ಭಾಗ ಕೋಟೆ ಕಬ್ಬಿಣದ ದಸಿಗಳಿಂದ ರಚಿತವಾಗಿದೆ. ಕಾಲುಭಾಗ ತಾಮ್ರದ ದಸಿಗಳಿಂದಲೂ. ಒಂದು ನೊಣಕ್ಕಾಗಲಿ ಇರುವೆಗಾಗಲಿ ಪ್ರವೇಶ ಅಸಾಧ್ಯ. ಕೋಟೆಯ ಬಡಗು ದಿಕ್ಕಿಗೆ ಹೋಗಿ ನಿಂತು ಅಲ್ಲಿ ನೋಡು. ಹಾಗೆ ನಿಂತಾಗ ನೀಲಿ ಬಣ್ಣದಿಂದ ಕಾಣುವುದು ನಾನೇ ಎಂದು ತಿಳಿದಿರಲಿ. ಹಳದಿ ಬಣ್ಣದಿಂದ ಕಾಣುವುದು ಕಾವಿಲ್ ಭಗವತಿ. ಅಲ್ಲಿ ಹದಿನೆಂಟು ಬಾಗಿಲುಗಳಿವೆ. ಅವುಗಳಲ್ಲಿ ಹದಿನೆಂಟನೆಯದನ್ನು ನಾನು ತೆರೆದುಕೊಡುವೆ. ನೀನು ಆ ಕೋಟೆಯಿಂದ ಹಿಂದಿರುಗು ವವರೆಗೂ ನಾವು ಆ ಕೋಟೆಯಲ್ಲಿರುತ್ತೇವೆ. ಮೊದಲು ಕತ್ತರಿಸುವ ಹೊನ್ನ ಸೌತೆಯನ್ನು ನನಗೆ ಕೊಡಪ್ಪಾ ಒದೇನ. ಬಳಿಕ ಕತ್ತರಿಸುವ ಹೊನ್ನ ಸೌತೆಯನ್ನು ಚೇರುವಿಗೆ (ಭಗವತಿಗೆ) ಕೊಡು. ಪುನಃ ವಂದಿಸಿ ಒದೇನ ಹೊರಟುಹೋದ. ಮಾಣಿಕೋತ್ತ್‌ಗೆ ತಲಪಿದ. ಚೆನ್ನಾಗಿ ಎಣ್ಣೆಸ್ನಾನ ಮಾಡಿದ. ಗಂಜಿಯುಂಡ. ಚೆನ್ನಾಗಿ ಅಲಂಕಾರ ಮಾಡಿ ಕೊಂಡ. ಚಾಪ್ಪನನ್ನೂ ಜತೆಗೆ ಕರೆದುಕೊಂಡ. ಹಾಗೆ ನಡೆದು ನಡೆದು ಪೆರಿಂಜೊಳನಾರ್ ಹೊಳೆಗೆ ಬಂದ. ಕೋಟಕ್ಕಲ್ ಕುಂಞಾಲಿ ಮರಕ್ಕಾರನಲ್ಲಿ ನಾವೆಯೊಂದನ್ನು ಬಾಡಿಗೆಗೆ ಪಡೆದುಕೊಂಡ. ಸಂಜೆ ದೀಪ ಇಡುವ ಹೊತ್ತಾದಾಗ ವಂಗಾಳರ್ ಕೋಟೆಯ ತೀರಕ್ಕೆ ತಲಪಿದ. ಸಂಜೆ ದೀಪಗಳು ಕೋಟೆಯಲ್ಲಿ ಉರಿದುವು. ಕೋಟೆಯ ಬಾಗಿಲುಗಳೆಲ್ಲ ಮುಚ್ಚಿದುವು. ಒದೇನ ಕೋಟೆಯ ಆ ತುದಿಯಿಂದ ಈ ತುದಿಗೆ ನಡೆದು ನೋಡಿದ. ಬಡಗುಭಾಗದಲ್ಲಿ ನಿಂತಾಗ ಕೋಟೆಯಲ್ಲಿದ್ದ ಎಲ್ಲರೂ ನಿದ್ರಿಸುತ್ತಿದ್ದರು. ಬಲಭಾಗದಲ್ಲಿ ನೀಲಿಬಣ್ಣ ಕಂಡಿತು. ಎಡಭಾಗದಲ್ಲಿ ಹಳದಿ ಬಣ್ಣವೂ ಕಂಡಿತು. ಹದಿನೆಂಟು ಸಾಲುಬಾಗಿಲು

ಗಳು. ಹದಿನೆಂಟನೆಯದು ತೆರೆದಿದ್ದುದು ಕಂಡಿತು. ಅವರು ಕೋಟೆಯ ಒಳಗೆ ಪ್ರವೇಶಿಸಿದರು. ಕೋಟೆಯಾದ್ಯಂತ ಒದೇನ ನಡೆದು ನೋಡಿದ ಕೋಟೆಯಲ್ಲಿದ್ದವರನ್ನೆಲ್ಲ ಕಡಿದು ಕೊಂದ. ಕೆಂಪು ಹದ್ದಿನ ಮುದ್ದು ಮಗಳು ಕುಂಞಿಕನ್ನಿಯ ತಲೆ ಕಡಿದು ಕೊಂದ. ಹದಿನಾಲ್ಕು ಹೊನ್ನ ಸೌತೆಗಳಿದ್ದುವು. ಹದಿನಾಲ್ಕನ್ನೂ ಕತ್ತರಿಸಿ ತೆಗೆದುಕೊಂಡ. ಕೋಟೆಯನ್ನು ಪೂರ್ತಿ ವಶಪಡಿಸಿಕೊಂಡ. ಕೋಟೆಹಿಡಿದುದರ ಸಂಕೇತವಾಗಿ ಮೂರು ಸಿಡಿಮದ್ದು ಸಿಡಿಸಿದ. ಮೂರು ಬಾಣಗಳನ್ನೂ ಎಸೆದ. ಹೊತ್ತಿದ್ದ ಹರಕೆಗಳನ್ನು ಮರಳಿ ಬಂದು ತೀರಿಸಿದ.

ಇದು ಹೆಡ್ಡನಲ್ಲಮ್ಮ, ಕುಲರಸಿಕ!

ಕಾವಿಲ್ ಚಾತ್ತೋತ್ತ್ ಮಾದೇಯಿ ಅಮ್ಮ ಒಂಭತ್ತು ಹಡೆದಿದ್ದಳು. ಅವುಗಳಲ್ಲಿ ಎಂಟನ್ನೂ ಆ ಭಗವಂತನೇ ಕೊಂಡುಹೋಗಿದ್ದ. ಕೊನೆಗೆ ಬಾಕಿಯಾದುದು ಒಂದೇ ಮಗು–ಕುಂಞಿಚೀರು. ಮಾದೇಯಿ ಅಮ್ಮ ಆಗಾಗ ನೆನೆದುಕೊಂಡು ಕೊರಗುತ್ತಿದ್ದಳು: ಮಗು ಚೀರುವಿಗೆ ಒಂದು ಮದುವೆ ಆಗಬೇಕಿತ್ತು.

ಒಂದುದಿನ ಮಾದೇಯಮ್ಮ ಪೊನ್ನಿಯಂನಿಂದ ಅಂಬು ಕಣಿಯನನ್ನೂ ನಿಡುಂಬೋಯಿಯಿಂದ ಎಮ್ಮನ್ ವಾರ್‍ಯರನ್ನೂ ಬರಮಾಡಿಸಿದಳು. ಅಂಬು ಕಣಿಯ ಹೊರಗೆ ಕವಡೆಯನ್ನು ಕಳೆದು ಕೂಡಿಸಿ ಲೆಕ್ಕಹಾಕಿದ; ಎಮ್ಮನ್ ವಾರ್‍ಯರ್ ಒಳಗೆ ಗ್ರಂಥದ ಕಟ್ಟು ಬಿಚ್ಚಿ ಗುಣಿಸಿ ಭಾಗಿಸಿ ಲೆಕ್ಕಹಾಕಿದರು. ಇಬ್ಬರಿಗೂ ಕಂಡುಬಂದುದು ಒಂದೇ ರಾಶಿ! ಮುಂದಿನ ಆದಿತ್ಯವಾರ ಒಳ್ಳೆಯದಿನ. ತಚ್ಚೋಳಿ ಒದೇನನೇ ಯೋಗ್ಯ ಗಂಡು. ಮಾದೇಯಮ್ಮ ವಾರ್‍ಯರಿಗೆ ನಾಲ್ಕು ಹಣ, ತಿನ್ನಲು ತಾಂಬೂಲ, ಬಳ್ಳ ಅಕ್ಕಿ ಕೊಟ್ಟು ಕಳಿಸಿಕೊಟ್ಟಳು. ಕಣಿಶನಿಗೆ ಎರಡು ಹಣ, ಎರಡು ಬಳ್ಳ ಅಕ್ಕಿ ಕೊಟ್ಟು ಕಳುಹಿಸಿಕೊಟ್ಟಳು. ಅಂದಿನ ದಿನ ಹಾಗೆ ಕಳೆಯಿತು. ಮಾದೇಯಮ್ಮನಿಗೆ ರಾತ್ರೆ ಸರಿ ನಿದ್ದೆ ಬೀಳಲಿಲ್ಲ. ಬೆಳಕು ಹರಿಯುವುದನ್ನೇ ಕಾಯುತ್ತ ರಾತ್ರೆಯನ್ನು ದೂಡಿದಳು. ಬೆಳಗ್ಗಿನ ಜಾವದ ಕೋಳಿ ಕೂಗಿದಾಗ ಎದ್ದವಳೇ ಬೇಗ ಬೇಗ ಸಿದ್ಧಳಾಗಿ ಹೊರಟು ಬಿಟ್ಟಳು. ಸರಸರ ನಡೆದು ಮಾಣಿಕ್ಕೋತ್ತ್ ಮೇಪ್ಪ ತಲಪಿದಳು. ಕಂಡಾಚ್ಚೇರಿ ಉತ್ತಮೆ ನಂಜಿಯಾರ್ ದೇವರಿಗೆ ದೀಪ ಹಚ್ಚುತ್ತಿದ್ದಳು. ಅವಳು ಮಾದೇಯಮ್ಮನನ್ನು ಕಂಡು ಬಳಿಬರಲು ಮಾದೆಯಮ್ಮ ಕೇಳಿದಳು–ಕಂಡಾಚ್ಚೇರಿ ಉತ್ತಮೆ ನಂಜಿಯಾರೇ, ತಚ್ಚೋಳಿ ಕೋಮ ಕುರುಪ್ಪ್ ಎದ್ದಿದ್ದಾರೆಯೇ? ಅದಕ್ಕೆ ನಂಜಿಯಾರಳೆಂದಳು–ಕೋಮ ಕುರುಪ್ಪ್ ಎದ್ದಿದ್ದಾರೆ. ಹೊರಗೆ ಎಲ್ಲೋ ಇದ್ದಾರೆ. ಅಷ್ಟರಲ್ಲಿ ಹೊರಹೋಗಿದ್ದ ಕೋಮಕುರುಪ್ಪ್

ಮರಳಿ ಬಂದ. ನಂಜಿಯಾರ್ ಒಂದು ಗಿಂಡಿ ನೀರು ತಂದು ಅವನಿಗೆ ಕೊಟ್ಟಳು. ಕುರುಪ್ಪನ್ನು ಕಂಡ ಮಾದೇಯಮ್ಮ ಎದ್ದುನಿಂತು ಶಿಷ್ಟಾಚಾರ ಮಾಡಿದಳು. ಕೋಮ ಕುರುಪ್ಪ್ ಕೇಳಿದ – ಕಾವಿಲ್ ಚಾತ್ತೋತ್ತ್ ಮಾದೇಯಮ್ಮ! ಇದೇನು ಹೊತ್ತುಮೂಡುವ ಮುನ್ನವೇ ಆತುರಾತುರವಾಗಿ ಬಂದುಬಿಟ್ಟಿರಿ? ಅದಕ್ಕೆ ಆಕೆಯೆಂದಳು – ಕೋಮ ಕುರುಪ್ಪರೇ! ನನ್ನ ಮಗಳು ಕುಂಞಿಚೇರುವಿಗೆ ಅರಸಿನ ಮೀಹದ ಮದುವೆ ಮಾಡ ಬೇಕಾಗಿದೆ. ತಚ್ಚೋಳಿಯ ಒದೇನ ಕುರುಪ್ಪ್ ಯೋಗ್ಯ ಗಂಡು ಎಂದು ರಾಶಿಯಲ್ಲಿ ಮೂಡಿಬಂತು. ಹಾಗೆ ಇತ್ತ ಬಂದೆ. ಆ ಮಾತುಗಳನ್ನು ಕೇಳಿ ಕೋಮಕುರುಪ್ಪನೆಂದ – ಅದಕ್ಕೇನಾಗಬೇಕು ಮಾದೇಯಮ್ಮ? ಕೋಮಕುರುಪ್ಪ್ ಆಕೆಗೆ ತಾಂಬೂಲ ನೀಡಿ ಸತ್ಕರಿಸಿದ. ಕೂಡಲೇ ತಮ್ಮ ಒದೇನನನ್ನು ಕರೆದು ಹೇಳಿದ – ನಿನಗೆ ಇದೇನು ನಿದ್ದೆಯಪ್ಪ ಒದೇನ? ಮಲಗುವ ಕೋಣೆಯ ಬಾಗಿಲು ತೆರೆದು ಇಲ್ಲಿಗೆ ಬಾರಪ್ಪ, ಆನೆಕಿವಿಯವನೇ! ಒದೇನನಿಗೆ ಅಣ್ಣನ ಮಾತೂ ಕೇಳುತ್ತಿದೆ, ಅಮ್ಮ ಮಾತನಾಡು ವುದೂ ಕಿವಿಗೆ ಬೀಳುತ್ತಿವೆ. ಅವನು ನಿದ್ದೆ ಬಿಟ್ಟು ಎದ್ದು ಬಂದ. ಆಗ ಕೋಮ ಕುರುಪ್ಪ ನೆಂದ–ಒದೇನ! ನಾವೇ ಆ ಕಡೆಗೆ ಹೋಗಬೇಕಾಗಿದ್ದುದು ಸಂಪ್ರದಾಯ. ಈಗ ನೋಡಿದರೆ ಮಾದೇಯಮ್ಮನೇ ಈ ಕಡೆ ಬಂದಿದ್ದಾರೆ. ಕಾವಿಲ್ ಚಾತ್ತೋತ್ತ್ ಕುಂಞಿಚೇರು ವಿಗೆ ಅರಸಿನ ಮೀಹದ ಮದುವೆ ಮಾಡಬೇಕಂತೆ. ನೀನೇ ಯೋಗ್ಯ ಗಂಡೆಂತಲೂ ರಾಶಿಯಲ್ಲಿ ಮೂಡಿದೆ ಯಂತೆ! ಕೂಡಲೇ ಒದೇನ ಹೇಳಿಬಿಟ್ಟ–ಕಾಗೆಯಂತೆ ಕಪ್ಪಗಿನ ಚೇರು ನನಗೆ ಬೇಡವೇ ಬೇಡಣ್ಣ. ಹಲಸಿನ, ಬೀಜದಂಥ ಹಲ್ಲಿನ ಹೇನು ಮಿಜಿಗುಡುವ ತಲೆಯ ಚೇರು ನನಗೆ ಬೇಡ. ಅವಳು ತಂದೆತಾಯಿಗೆ ಬೇಡವಾದರೆ ವಡಗರ ಮೊಕ್ಕಪ್ಪ ಜೋನಕನಲ್ಲಿಗೆ ತಿಪ್ಪೆಬಾಚುವುದಕ್ಕೋ ಕೊಬ್ಬರಿ ಕಾಯುವುದಕ್ಕೋ ಹೋಗಲಿ. ಒಂದುವೇಳೆ ಜೋನಕನಿಗೂ ಅವಳು ಬೇಡದಿದ್ದರೆ ಅವಳನ್ನು ದೋಣಿಯಲ್ಲಿ ಕುಳ್ಳಿರಿಸಿ ಹೊಳೆಯಲ್ಲಿ ಬಿಡಲಿ, ಇಲ್ಲವಾದರೆ ಕಟ್ಟಕ್ಕೆ ಹಾಕಲಿ. ಆ ಮಾತುಗಳನ್ನು ಕೇಳಿ ಮಾದೇಯಮ್ಮನ ಎದೆ ಒಡೆಯಿತು. ಅವಳು ಮೆಟ್ಟಿಲಿಳಿದು ನಡೆದೇ ಬಿಟ್ಟಳು. ಬರುವಾಗ ಮೆಟ್ಟಿಲುಗಳನ್ನು ನೆಗೆಯುತ್ತ ಏರಿದ್ದಳು.

ಮಾದೇಯಮ್ಮ ಹಾಗೆ ಹೋದ ಬಳಿಕ ಕೋಮ ಕುರುಪ್ಪನೆಂದ–ಪ್ರಿಯ ತಚ್ಚೋಳಿ ಒದೇನ! ಚೇರುವನ್ನು ನೀನು ನೋಡಿ ಒಪ್ಪಿಕೊ. ಎದೆಮೀರಿ ಮೊಲೆಗಳು ಮೂಡಿದ್ದರೂ ಹೆಗಲುಮೀರಿ ಮುಡಿ ಬೆಳೆದಿದ್ದರೂ ಅವಳ ಸಮಾನ ಬೇರೆ ಹೆಣ್ಣುಗಳಿಲ್ಲ. ತೆಂಗಿನ ಮುಂಗೆ ಸಸಿಯನ್ನು ತಂದು ನೆಟ್ಟು ಅದಕ್ಕೆ ಚೆನ್ನಾಗಿ ಗರಿಗಳು ಮೂಡುವ ಮೊದಲೇ ಯಾರಾದರೂ ಅದರ ಗರಿಯನ್ನು ತರಗೆಲೆ ತೊಟ್ಟೆಗೆಂದು ಕಡಿಯುತ್ತಾರೆಯೆ? ಚೇರುವನ್ನು ನೀನು ನೋಡಿ ಮೆಚ್ಚು, ಬಯಸು. ಒದೇನ ಮಾತನಾಡಲೇ ಇಲ್ಲ. ಮಾದೇಯಮ್ಮ

ಕಾವಿಲ್ ಚಾತ್ತೋತ್ತ್‌ಗೆ ಮರಳಿ ಬಂದಳು. ಚೀರುವನ್ನು ಬಳಿಗೆ ಕರೆದಳು – ಮಗಳೇ! ನಾನು ಇಂದೇ ಸತ್ತು ಹೋದರೂ ಒದೇನನು ಟೊಪ್ಪಿಹಾಕಿಕೊಂಡು ಬಂದನಾದರೂ ನೀನು ಕುಪ್ಪಸ ಹಾಕಿಕೊಂಡು ಅವನ ಜತೆಗೆ ಹೋಗು ಮಗಳೆ! ಇಷ್ಟು ಹೇಳಿ ಆಕೆ ಮೌನವಾದಳು.

ಅದೇ ಹೊತ್ತಿಗೆ ಇತ್ತ ಒದೇನ ಚಾಪ್ಪನಲ್ಲಿ ಹೇಳುತ್ತಿದ್ದ – ನನ್ನ ಮಗೂ ಕಂಡಾಚ್ಚೇರಿ ಚಾಪ್ಪ! ನಾವು ಕಾವಿಲ್ ಚಾತ್ತೋತ್ತ್‌ಗೆ ತಿರುಗಾಟಕ್ಕೆ ಹೋಗದೆ ಇಂದಿಗೆ ಆರು ತುಂಗಳು ಗಳೇ ಕಳೆದಿರಬಹುದಲ್ಲವೆ? ಗಾಣ ಇಟ್ಟುಕೊಂಡು ಎಣ್ಣೆ ಮಾಡುವ ಗಾಣಿನಿಂದಲೂ ಕುಂತ ಹಿಡಿದುಕೊಂಡು ನಡೆಯುವ ನಾಯರನಿಂದಲೂ ತಲೆಗೆ ಟೊಪ್ಪಿ ಧರಿಸಿಕೊಳ್ಳುವ ಜೋನಕನಿಂದಲೂ ಕಾಲಿಗೆ 'ತಳೆ' ಹಾಕುವ ತೀಯನಿಂದಲೂ ದಿನಗಳನ್ನೂ ತಿಂಗಳು ಗಳನ್ನೂ ಲೆಕ್ಕ ಹಾಕಿ ಹಣಸಂಗ್ರಹಿಸಬೇಕಾಗಿದೆ. ಒದೇನ ತಡವಿಲ್ಲದೆ ಹೊರಟು ಸಿದ್ಧನಾದ. ಪಡುಕೋಣೆಗೆ ಹೋಗಿ ಚೆನ್ನಾಗಿ ಅಲಂಕರಿಸಿಕೊಂಡ. ಹೊನ್ನಿನ ಹಿಡಿಕಟ್ಟಿಸಿದ ಉರುಮಿ ಯನ್ನೂ ಹೊನ್ನ ಟಿಕ್ಕಿಗಳನ್ನು ಕೂರಿಸಿದ್ದ ಗುರಾಣಿಯನ್ನೂ ಬಲ ಎಡಕೈಗಳಲ್ಲಿ ಧರಿಸಿ ಕೊಂಡ. ಚಾಪ್ಪನೂ ಹಿಂದೆ ಬೀಳಲಿಲ್ಲ. ನಲುವತ್ತು ತೆಂಗುಗರಿಗಳಷ್ಟು ನೀಳದ ದೋಟಿ ಯನ್ನು ಹೆಗಲಿಗೇರಿಸಿಕೊಂಡ. ದೋಟಿಯ ಕುಲುಕಾಟಕ್ಕೆ ಅನುಸಾರವಾಗಿ ಹೆಜ್ಜೆ ಇಡುತ್ತ ನಡೆದ. ಮುಂದೆ ನಾಯಕ ಕುಂಞ್ಞೋದೇನ, ಹಿಂದೆ ಅನುಯಾಯಿ ಕಂಡಾಚ್ಚೇರಿ. ಹಾಗೆ ಇಬ್ಬರೂ ಹೊರಟು ನಡೆಯುತ್ತ ಕಾವಿಲ್ ಚಾತ್ತೋತ್ತ್‌ಗೆ ತಲಪಿದರು. ಇವರು ಬರುವುದನ್ನು ಕಂಡವನೇ ಕಾವಿಲಾಯ ಕುಂಕನ್ ರಾವಾರಿ ತಾನು ನೋಡುತ್ತಿದ್ದ ಲೆಕ್ಕಪತ್ರಗಳ ಓಲೆಗರಿಗಳನ್ನು ಅವಸರದಿಂದ ಬಾಚಿ ಕಟ್ಟಿಟ್ಟ. ಎಳೆಯ ಧನಿ ಒದೇನಪ್ಪನಿಗೆ ಎದ್ದುನಿಂತು ಗೌರವದ ಆಚಾರಗಳನ್ನು ಮಾಡಿದ. ಅವನಿಗೆ ಕುಳಿತುಕೊಳ್ಳುವುದಕ್ಕಾಗಿ ನಾಲ್ಕುಕಾಲಿನ ನಾಕಾಲಿಯನ್ನೂ ಕಾಲಿರಿಸುವುದಕ್ಕೆ ಮೂರು ಕಾಲಿನ ಮುಕ್ಕಾಲಿಯನ್ನೂ ತಂದಿರಿಸಿದ. ಒದೇನ ನಾಕಾಲಿಯಲ್ಲಿ ಕುಳಿತು ಮುಕ್ಕಾಲಿಯಲ್ಲಿ ಕಾಲು ನೀಡಿದ. ಅವನೆಂದ – ಕಾವಿಲಾಯಿ ಕುಂಕ! ತಾಂಬೂಲ ಸಿದ್ಧಪಡಿಸು. ರಾವಾರಿ ಕುಂಕ ಊಟದ ಸಿದ್ಧತೆ ಮಾಡತೊಡಗಿದ.

ಕಾವಿಲ್ ಚಾತ್ತೋತ್ತ್ ಕುಂಞಿಚೀರು ಮತ್ತು ಅವಳ ಏಳು ಮಂದಿ ಗೆಳತಿಯರು ಕಿರುಬಟ್ಟಲುಗಳಿಗೆ ಬಡಿಯುತ್ತ ಅದಕ್ಕೆ ಸರಿಯಾದ ಹಾಡನ್ನು ಹಾಡುತ್ತ ಕಾವ್‌ನ ಕೆರೆಗೆ ಮೀಯಲು ಹೋಗುತ್ತಿದ್ದರು. ಒದೇನ ಚೀರುವನ್ನು ಕಣ್ಣಾರೆ ಕಂಡ. ಅವನ ಹಸಿವು ಬಾಯಾರಿಕೆಗಳು ಮಾಯವಾದುವು. ಕಾವಿಲಾಯಿ ಕುಂಕನ್ ರಾವಾರಿಯಲ್ಲಿ ಕೇಳಿದ – ಆ ಬರುತ್ತಿರುವ ಹೆಣ್ಣುಮಗಳು ಯಾರೋ? ಅದಕ್ಕೆ ಕುಂಕನೆಂದ – ತಚ್ಚೋಳಿಯ

ಒದೇನ ಕುರುಪ್ಪರೇ! ಇದೇನು ತಿಳಿದು ಕೇಳುತ್ತಿದ್ದೀರೋ ತಿಳಿಯದೆ ಕೇಳುತ್ತಿದ್ದೀರೋ? ಅದಕ್ಕೆ ಒದೇನನೆಂದ–ತಿಳಿದರೆ ಸುಮ್ಮ ಸುಮ್ಮನೆ ಕೇಳುತ್ತೇನೇನೋ? ಆಗ ಕುಂಕನೆಂದ– ತಚ್ಚೋಳಿ ಎಳೆಯ ಕುರುಪ್ಪರೇ! ಅದು ಕಾವಿಲ್ ಚಾತ್ತೋತ್ತ್ ಚೀರುವಮ್ಮನಲ್ಲವೇ? ಹಿಂದೆ ಅವರನ್ನು ತುಂಬ ಹೀನೈಸಿ ಮಾತನಾಡಿದ್ದಿರಿ. ಅದಕ್ಕೆ ಒದೇನನೆಂದ – ಕಾವಿಲಾಯಿ ಕುಂಕನ್ ರಾವಾರಿ! ಚೀರು ಎಷ್ಟೊಂದು ರಂಗೇರಿಬಿಟ್ಟಿದ್ದಾಳೋ! ಕೇಪುಳಹಣ್ಣಿನ ಬಣ್ಣವು ರಸಬಾಳೆಹಣ್ಣಿನ ಜತೆ ಬೆರೆತು ಬಿಟ್ಟಿದೆಯೇ? ಚೀರುವನ್ನು ಕಣ್ಣಾರೆ ಕಂಡ ಒದೇನ ಹಸಿ ಮೀನು ಕಂಡ ಹದ್ದಿನಂತಾದ. ಹಸಿಮೆಣಸು ಕಚ್ಚಿದ ಹೆಡ್ಡನಂತಾದ. ಚೀರುವನ್ನು ತುಂಬಾ ಆಶೆಪಟ್ಟ. ಅವನು ಕಾವಿಲಾಯಿ ಕುಂಕನ್ ರಾವಾರಿಗೆಂದ – ಕಾವಿಲಾಯಿ ಕುಂಕನ್ ರಾವಾರಿಯೇ! ನೀನು ಹೋಗಿ ಕಾವಿಲ್ ಚಾತ್ತೋತ್ತ್ ಚೀರುವಲ್ಲಿ ನನಗೆ ಒಂದು ಬಾರಿಯ ತಾಂಬೂಲ ಕೊಡಲು ಹೇಳು. ಅದಕ್ಕೆ ಕುಂಕನೆಂದ – ತಚ್ಚೋಳಿಯ ಎಳೆಯ ಕುರುಪ್ಪರೇ! ನನ್ನಲ್ಲಿ ಆ ಕೆಲಸ ಹೇಳಲೇಬೇಡಿ. ಕಾವಿಲ್ ಚಾತ್ತೋತ್ತ್ ಮಾದೇಯಮ್ಮ ನನ್ನ ಮಾನ ಕಳೆದು ಓಡಿಸಿ ಬಿಟ್ಟಾರು. ಆಗ ಒದೇನ ಕಂಡಾಚ್ಚೇರಿ ಚಾಪ್ಪನಿಗೆಂದ – ಕಂಡಾಚ್ಚೇರಿ ನೀನು ಹೋಗಿ ಕಾವಿಲ್ ಚಾತ್ತೋತ್ತ್ ಚೀರುವಲ್ಲಿ ನನಗೆ ಒಂದು ಬಾರಿಯ ತಾಂಬೂಲ ಕೊಡಲು ಹೇಳು. ಕಂಡಾಚೇರೊ ಚಾಪ್ಪ ತನ್ನಲ್ಲೆ ಹೇಳಿಕೊಂಡ – ನನಗೆ ಈ ಕುರುಪ್ಪರ ಅಕ್ಕಿಯೂ ಬೇಡ, ಅನ್ನವೂ ಬೇಡವಪ್ಪ. ಅವನು ಹಿಂಜರಿಯುತ್ತಲೇ ಕೆರೆಯ ಬಳಿಗೆ ಹೋದ. ಕಂಡಾಚ್ಚೇರಿ ಚಾಪ್ಪ ಬಳಿ ಬಂದುದನ್ನು ಕುಂಞಿಚೀರು ಗಮನಿಸಿದಳು. ತುಟಿತೆರೆದು ಮಾತನಾಡಿಸಿದಳು – ಇದ್ಯಾಕೆ ಬಂದೆಯಪ್ಪ ಕಂಡಾಚ್ಚೇರಿ ಚಾಪ್ಪ? ಎಲ್ಲಿಗೆ ಹೊರಟವನು ನೀನು? ಅದಕ್ಕೆ ಕಂಡಾಚ್ಚೇರಿ ಎಂದ – ತಚ್ಚೋಳಿಯ ಸಣ್ಣ ಕುರುಪ್ಪರೂ ನಾನೂ ಕಾವಿಲ್ ಚಾತ್ತೋತ್ತ್‌ಗೆ ತಿರುಗಾಟಕ್ಕಾಗಿ ಬಂದೆವು. ಕುಂಕನ್ ರಾವಾರಿಯ ಅಂಗಡಿಯಲ್ಲಿ ಕುಳಿತಿದ್ದೆವು. ಎಳೆಯ ಕುರುಪ್ಪರೇ ನನ್ನನ್ನು ಇಲ್ಲಿಗೆ ಕಳುಹಿಸಿರುವುದು. ಒಂದು ಬಾರಿ ವೀಳ್ಯಹಾಕುವುದಕ್ಕೆ ನಿಮ್ಮನ್ನು ಕೇಳಿ ತೆಗೆದುಕೊಂಡು ಹೋಗಲು ಕಳಿಸಿದ್ದಾರೆ. ಅದಕ್ಕೆ ಕುಂಞಿಚೀರು ಕೇಳಿದಳು – ಕಡತ್ತು ವೈನಾಡಿನ ಕಂಡಾಚ್ಚೇರಿ! ನಿನ್ನ ಕುರುಪ್ಪ್ ಎಂದರೆ ಯಾರಯ್ಯ? ಆತ ಯೋಧರ ಕುರುಪ್ಪೋ ಇತರ ಕುರುಪ್ಪೋ? ಅದಕ್ಕೆ ಕಂಡಾಚೇರಿ ಎಂದ – ಹದಿನೆಂಟು ರಾಜ್ಯ ಹದಿನೇಳು ಊರು ಹತ್ತು ತರವಾಡುಗಳಲ್ಲೂ ನನ್ನ ಕುರುಪ್ಪ್ ಪ್ರಖ್ಯಾತ ವ್ಯಕ್ತಿ. ಅವರು ಕಡತ್ತುವೈನಾಡ್‌ನ ಪಡೆನಾಯಕರು, ಗೊತ್ತೆ? ಅದಕ್ಕೆ ಚೀರು ಅಂದಳು – ನನಗೆ ಇದ್ಯಾವುದೂ ಕೇಳಿ ಕೂಡ ತಿಳಿಯದು, ಚಾಪ್ಪ. ನೀನು ಹೇಳಿದಾಗಷ್ಟೆ ಈ ಸಂಗತಿಗಳನ್ನು ಕೇಳುತ್ತಿದ್ದೇನೆ. ಈತ ತಚ್ಚೋಳಿಯ ಒದೇನ ಕುರುಪ್ಪ್ ಎಂದು ಈಗ ಗೊತ್ತಾಯಿತು. ವೀಳ್ಯಕ್ಕಾಗಿ ಆತನೇ ನಿನ್ನನ್ನು ಕಳಿಸಿದನಲ್ಲವೆ? ನನ್ನಲ್ಲಿ ಜೋನಕ

ತಿನ್ನುವ ವೀಳ್ಯದ ಎಲೆ ಮಾತ್ರ ಇದೆ. ಕುರುಪ್ಪರಿಗೆ ಕೊಡುವ ವೀಳ್ಯದೆಲೆ ಇಲ್ಲ, ಚಾಪ್ಪಾ! ಬಡಗರದ ಪೊಕ್ಕಪ್ಪ ಜೋನಕನಲ್ಲಿಗೆ ಕೊಬ್ಬರಿ ಕಾಯಲು ಹೋಗಿ ಈಗಷ್ಟೇ ಮನೆಗೆ ಬಂದೆ. ಆಗ ಚಾಪ್ಪನೆಂದ – ಹಾಗಾದರೆ ಈಗ ನಾನು ಮರಳಿ ಹೋಗಲೇ ಚೀರು ಅಮ್ಮ? ಅದಕ್ಕೆ ಅವಳೆಂದಳು – ನೀನು ಬೇಗ ಹೋಗಿ ಬಿಡು ಚಾಪ್ಪ. ಅವನು ಅಂತೆಯೆ ಅಲ್ಲಿಂದ ಮರಳಿದ. ಒದೇನನ ಬಳಿ ತಲಪಿದಾಗ ಒದೇನ ಕೇಳಿದ–ಹೋದ ಕೆಲಸ ಏನಾಯಿತು ಚಾಪ್ಪ? ಚಾಪ್ಪ ಉತ್ತರಿಸಿದ – ತಚ್ಚೋಳಿಯ ಎಳೆಯ ಕುರುಪ್ಪರೇ! ಕಾವಿಲ್ ಚಾತ್ತೋತ್ತ್ ಚೀರು ಅಮ್ಮ ಗಂಜಿಯನ್ನೂ ಕೊಟ್ಟರು, ಎಳನೀರನ್ನೂ ಕೊಟ್ಟರು (ಊಟವನ್ನೂ ಕೊಟ್ಟರು ಪಡಿಯನ್ನೂ ಕೊಟ್ಟರು). ನಾನು ನಿಮಗೆ ಮೊದಲೇ ಹೇಳಲಿಲ್ಲವೆ? ಅವರು ಮಾನ ಕಳೆದು ನಮ್ಮನ್ನು ಕಳುಹಿಸದೆ ಇರಲಾರರು – ಎಂದು? ಮತ್ತೆ ಹಾಗೇ ಅಲ್ಲವೇ? ಅಷ್ಟರಲ್ಲಿ ಕಾವಿಲಾಯಿ ಕುಂಕ ಗಿಂಡಿಯಲ್ಲಿ ನೀರು ತೆಗೆದುಕೊಂಡು ಬಂದ. ಒದೇನನನ್ನು ಎದುರ್ಗೊಂಡು ಅವನು ಹೀಗೆಂದ – ಎಳೆಯ ಕುರುಪ್ಪರೇ! ಊಟ ಸಿದ್ಧವಾಗಿದೆ. ಆ ಮಾತನ್ನು ಕೇಳಿಯೂ ಒದೇನ ಕುಳಿತಲ್ಲಿಂದ ಮೇಲೆ ಏಳಲಿಲ್ಲ. ಅವನ ಮನಸ್ಸು ಹತೋಟಿಯಲ್ಲಿರಲಿಲ್ಲ. ಅವನು ಮೇಲೆದ್ದು ನಡೆದ. ಕುಂಕ ಅವನನ್ನು ಹಿಂಬಾಲಿಸುತ್ತ ನಡೆದ. ಕಾವ್‌ನ ಗುಡಿಯ ಬಾಗಿಲ ತನಕವೂ ಕುಂಕ ಜತೆಗೆ ಬಂದ. ಒದೇನನಿಗೆ ಮಾತಿಲ್ಲ, ಕತೆಯಿಲ್ಲ. ಮನಸ್ಸು ಸ್ಥಿಮಿತದಲ್ಲಿಲ್ಲ. ಅವರು (ಒದೇನ ಮತ್ತು ಚಾಪ್ಪ) ಮಾಣಿಕೋತ್ತ್‌ಗೆ ಮುಟ್ಟಿದರು. ಮತ್ತೆ ಮುಂದುವರಿದು ತಚ್ಚೋಳಿ ಮೇಪ್ಪಕ್ಕೆ ತಲಪಿದರು. ಒದೇನ ಮೂಡು ಮೆಟ್ಟಲೇರಿ ಮನೆಯೊಳಗೆ ಹೋದ. ಸ್ಫಟಿಕ ಹೊದೆಯಿಸಿದ್ದ ಚಾವಡಿಯೇರಿದ. ತರವಾಡು ಮನೆಯ ದೇವರ ಕೋಣೆಯ ಬಾಗಿಲು ತೆರೆದು ಉರುಮಿ, ಗುರಾಣಿ, ಮಡಿಬಟ್ಟೆಗಳನ್ನು ಅಲ್ಲಿ ಇರಿಸಿ ಮರಳಿದ. ಬಳಿಕ ತನ್ನ ಕೋಣೆಗೆ ಹೋಗಿ ಬಾಗಿಲು ಮುಚ್ಚಿ ಅಗುಳಿ ಹಾಕಿಕೊಂಡ. ಸ್ನಾನವಿಲ್ಲ, ಗಂಜಿ ಊಟವಿಲ್ಲ; ಹಾಸಿಗೆಯಿಂದ ಏಳುವುದಿಲ್ಲ, ಬಾಗಿಲು ತೆರೆಯುವುದಿಲ್ಲ.

ಕೋಮ ಕುರುಪ್ಪ್‌ಗೆ ಈ ಸುದ್ದಿ ಕಿವಿಗೆ ಬಿತ್ತು. ಅವನು ಕೂಡಲೆ ಚಾಪ್ಪನನ್ನು ಕರೆಸಿದ. ಅವನನ್ನು ಹತ್ತಿರ ಕರೆದು ಕೇಳಿದ – ಕಂಡಾಚ್ಚೇರಿ ಚಾಪ್ಪಾ! ನನ್ನ ಮಗೂ! ಕಾವಿಲ್ ಚಾತ್ತೋತ್ತ್‌ನ ತಿರುಗಾಟಕ್ಕೆ ಹೋದ ಇವನಿಗೆ ಏನಾಯಿತು? ಮೀಯದೆಯೂ ಉಣ್ಣದೆಯೂ ಕೋಣೆಯ ಬಾಗಿಲು ಹಾಕಿ ಅಗುಳಿ ಹಾಕಿಕೊಂಡಿದ್ದಾನಲ್ಲ, ಯಾಕೆ? ಏನಾಯಿತು? ದಾರಿಯಲ್ಲಿ ಯಾರೊಂದಿಗೂ ತಿಕ್ಕಾಟವಾಯಿತೆ? ಯಾರ ಜತೆಗಾದರೂ 'ಪಡೆ' ನಿಶ್ಚಯವಾಯಿತೆ? ಅದಕ್ಕೆ ಕಂಡಾಚ್ಚೇರಿ ಎಂದ – ಕೋಮ ಕುರುಪ್ಪ್ ನನ್ನ ಧನೀ! ದಾರಿಯಲ್ಲಿ ಯಾರೊಂದಿಗೂ ಸೆಣಸಾಟವಾಗಿಲ್ಲ. ಯಾರೊಂದಿಗೂ ಪಡೆಯೂ ನಿಶ್ಚಯವಾಗಿಲ್ಲ. ಕಾವಿಲ್ ಚಾತ್ತೋತ್ತ್ ಚೀರು ಅಮ್ಮನನ್ನು ಕಂಡುದರ ಮೋಹಾಲಸ್ಯವಿದು.

ಆಗ ಕೋಮ ಕುರುಪ್ಪ್ ಹೇಳಿದ – ಕಾವಿಲ್ ಚಾತ್ತೋತ್ತ್‌ನ ಚೀರುವನ್ನು ಇವನು ಎಲ್ಲಿ ಕಂಡನೋ ಕಂಡಾಚ್ಚೇರಿ? ಕಂಡಾಚ್ಚೇರಿ ಚಾಪ್ಪ ಎಲ್ಲವನ್ನೂ ಇದ್ದುದನ್ನು ಇದ್ದಂತೆಯೇ ಕೋಮಕುರುಪ್ಪ್‌ಗೆ ವಿಶದಪಡಿಸಿದ. ಒಂದುಳಿಯದಂತೆ ಎಲ್ಲವನ್ನೂ ಕೇಳಿದ ಕೋಮ ಕುರುಪ್ಪ್ ಕಂಡಾಚ್ಚೇರಿಗೆಂದ – ಗಂಡೂ ಅಲ್ಲದ ಹೆಣ್ಣೂ ಅಲ್ಲದ ಕಂಡಾಚ್ಚೇರಿ! ನಾನು ಅಂದೇ ಹೇಳಿರಲಿಲ್ಲವೇ? ಅವಳಿಗೆ ಸಮನಾದ ಹೆಣ್ಣೇ ಬೇರೆ ಇಲ್ಲವೆಂದು! ಈಗ ನಾನೇನು ಮಾಡಬೇಕಂತೆ? ನಾವೇ ಆ ಕಡೆ ಹೋಗಿ ಹೆಣ್ಣು ಕೇಳಬೇಕಾಗಿದ್ದುದರಲ್ಲಿ ಕಾವಿಲ್ ಚಾತ್ತೋತ್ತ್ ಮಾದೇಯಮ್ಮನೇ ಇಲ್ಲಿ ಬಂದು ಮದುವೆಯ ಪ್ರಸ್ತಾಪ ಮಾಡಿದಾಗ ಅವರ ಮನಸ್ಸಿಗೆ ನೋವು ಮಾಡಿ ಕಳಿಸಿದೆವು. ಈಗ ಹೀಗೆ!

ಕೋಮಕುರುಪ್ಪ್ ತನ್ನ ಛತ್ರ ಮತ್ತು ಬೆತ್ತಗಳನ್ನು ತೆಗೆದುಕೊಂಡು ಹೊರಟ. ಕಾವಿಲ್ ಚಾತ್ತೋತ್ತ್‌ಗೆ ತಲಪಿ ಬಾಗಿಲು ದಾಟಿ ಒಳಗೆ ಬರುತ್ತಿರುವುದನ್ನು ಮಾದೇಯಮ್ಮ ಕಣ್ಣಾರೆ ಕಂಡಳು. ಕುಳಿತುಕೊಳ್ಳಲು ಹುಲ್ಲುಚಾಪೆ ತಂದು ಹಾಸಿದಳು. ತಾಂಬೂಲದ ಹೊನ್ನ ಪೆಟ್ಟಿಗೆಯನ್ನು ಮುಂದಿಟ್ಟಳು. ಕೋಮಕುರುಪ್ಪ್ ಹುಲ್ಲು ಚಾಪೆಯಲ್ಲಿ ಕುಳಿತುಕೊಳ್ಳಲಿಲ್ಲ, ತಾಂಬೂಲದ ಪೆಟ್ಟಿಗೆ ಎತ್ತಿಕೊಳ್ಳಿಲಲ್ಲ. ಬೋದಿಗೆ ಕಂಬದ ಮರೆಗೇ ಕುಳಿತ. ಆಗ ಮಾದೇಯಮ್ಮ ಕೇಳಿದಳು– ತಚ್ಚೋಳಿ ಕೋಮಕುರುಪ್ಪರೇ! ನಾನು ತಂದ ಹುಲ್ಲುಚಾಪೆಯಲ್ಲಿ ನೀವು ಯಾಕೆ ಕುಳಿತುಕೊಳ್ಳಲಿಲ್ಲ? ಮುಂದಿರಿಸಿದ ತಾಂಬೂಲ ಯಾಕೆ ಹಾಕಿಕೊಳ್ಳಲಿಲ್ಲ? ಕೋಮಕುರುಪ್ಪ್ ಉತ್ತರಿಸಿದ– ಕಾವಿಲ್ ಚಾತ್ತೋತ್ತ್ ಮಾದೇಯಮ್ಮ! ನೀನು ತಂದ ಹುಲ್ಲುಚಾಪೆಯಲ್ಲಿ ಕುಳಿತುಕೊಳ್ಳಬೇಕಾದರೆ, ನೀನು ಕೊಟ್ಟ ತಾಂಬೂಲ ಹಾಕಬೇಕಾದರೆ ನಾನು ಬಂದ ಉದ್ದೇಶವನ್ನು ಹೇಳುತ್ತೇನೆ. ನನ್ನ ತಮ್ಮ ಒದೇನನಿಗೆ ನಿನ್ನ ಮಗಳು ಕುಂಞಿಚೀರುವನ್ನು ಮದುವೆ ಮಾಡಿ ಕೊಡುವಂತೆ ಕೇಳಲು ನಾನು ಬಂದಿರುವುದು. ಅದಕ್ಕೆ ಮಾದೇಯಮ್ಮ ಎಂದಳು – ತಚ್ಚೋಳಿ ಕೋಮ ಕುರುಪ್ಪರೇ! ನಾನು ಹೇಳುವುದೇನಿದೆ? ನಾನು ಒಂಭತ್ತು ಮಕ್ಕಳನ್ನು ಹಡೆದೆ. ಎಂಟನ್ನೂ ಆ ಭಗವಂತನೇ ಕರೆದುಕೊಂಡ. ಉಳಿದವಳು ನನ್ನ ಚೀರು ಒಬ್ಬಾಕೆ. ಅವಳ ಮದುವೆಯ ಪ್ರಸ್ತಾಪದೊಂದಿಗೆ ನಾನೇ ಮೇಪ್ಪಕ್ಕೆ ಬಂದಿದ್ದೆನಲ್ಲ! ಅಂದು ನಿಮ್ಮ ತಮ್ಮ ಸಣ್ಣ ಕುರುಪ್ಪೇ ಅಲ್ಲವೆ ಚೀರು ತನಗೆ ಬೇಡವೆಂದೂ ಅಪ್ಪ ಅಮ್ಮನಿಗೆ ಬೇಡವಾದರೆ ವಡಗರ ಪೊಕ್ಕಪ್ಪ ಜೋನಕನಲ್ಲಿಗೆ ತಿಪ್ಪೆ ಬಾಚಲು ಹೋಗಲಿ ಅಥವಾ ಕೊಬ್ಬರಿಗೆ ಕಾಗೆ ಬಾರದಂತೆ ಕಾಯಲು ಹೋಗಲಿ. ಜೋನಕನಿಗೂ ಬೇಡವಾದರೆ ಅವಳನ್ನು ತೂತು ದೋಣಿಯಲ್ಲಿ ಕುಳ್ಳಿರಿಸಿ ಪ್ರವಾಹದಲ್ಲಿ ಬಿಡುವಂತೆ ಹೇಳಿದುದು? ನೀವು ಊರಿಗೇ ದೊಡ್ಡ ಕುರುಪ್ಪರು! ನಿಮ್ಮ ಮಾತು ಮೀರಲುಂಟೆ? ಅಂತೆಯೇ ಅವಳನ್ನು ತಿಪ್ಪೆ ಬಾಚುವುದಕ್ಕೂ ಕೊಬ್ಬರಿ ಕಾಯಲಿಕ್ಕೂ ಕಳಿಸುತ್ತಿದ್ದೇನೆ. ಆ ಮಾತುಗಳನ್ನು ಕೇಳಿ

ಕೋಮಕುರುಪ್ಪ್ ಅಲ್ಲಿಂದ ಎದ್ದು ಹೊರಟ. ಹೊರಟವನು ಎಳವಾಯ್ಲು ತೋಟಕ್ಕೆ ತಲಪಿಧ. ಅಲ್ಲಿ ಪನಂಜಾಡ್‌ನ ಚಂದು ಕುರುಪ್ಪ್, ಕೋಯಿಲೋತ್ತ್ (ಬೂಡಿನ) ಕೋಮಪ್ಪನ್ ನಂಬ್ಯಾರ್, ತೋಟತ್ತಿಲ್ ಕೇಳಪ್ಪನ್ ನಂಬ್ಯಾರ್ – ಎಂಬ ಮೂವರಲ್ಲೂ ವಿಷಯವನ್ನೆಲ್ಲ ತಿಳಿಸಿದ. ಅವರೆಲ್ಲರೂ ಮಾತನಾಡಿಕೊಂಡು ಚೀನಂ ವೀಟ್ಟಿಲ್ ತಂಜಳ್ ವಾವುನ್ನವರನ್ನು (ಒದೇನ, ಕೋಮ ಕುರುಪ್ಪರ ತಂದೆ) ಕಂಡರು. ಅಲ್ಲಿಂದ ಅವರೆಲ್ಲ ಮಾಣಿಕೋತ್ತ್ ಮೇಪ್ಪಕ್ಕೆ ಬಂದರು. ಬಂದು ನಾಲ್ವರೂ ಒಂದಾಗಿ ಒದೇನನನ್ನು ಕರೆದರು – ಒದೇನ! ಕುಂಞ್ಯೋದೇನ! ಬಾಗಿಲು ತೆರೆಯೋ ಒದೇನ! ಮಿಂದು ಬಂದು ಗಂಜಿಕುಡಿ. ಕಾವಿಲ್ ಚೀರುವನ್ನು ನಾವೇ ಹೋಗಿ ಹೇಳಿ ಮದುವೆಗೆ ಒಪ್ಪಿಸಿದ್ದೇವೆ. ಭಾನುವಾರದ ಒಳ್ಳೆ ಮುಹೂರ್ತದಲ್ಲಿ ಮದುವೆ ಎಂದು ದಿನವನ್ನು ಕೂಡ ನೋಡಿದೆ! ಆ ನಾಲ್ಕು ಮಂದಿ ಎಷ್ಟು ಪ್ರಯತ್ನಿಸಿದರೂ ಏನೇ ಹೇಳಿದರೂ ಒದೇನನ ಪ್ರತಿಕ್ರಿಯೆ ಇಲ್ಲ. ಮುಚ್ಚಿದ್ದ ಬಾಗಿಲು ತೆರೆಯಲೂ ಇಲ್ಲ. ಅವರಿಗೂ ಬೇಜಾರಾಗಿ ಅವರೆಲ್ಲ ಬಂದ ದಾರಿಯಲ್ಲೆ ತಮ್ಮ ತಮ್ಮ ಮನೆಗೆ ಹಿಂತಿರುಗಿದರು.

ಅವರೆಲ್ಲ ಹೋದ ಬಳಿಕ ಕೋಮಕುರುಪ್ಪ್ ಕುಸಿದು ಕೆಳಗೆ ಕುಳಿತ. ಮಂಡಿಯೂರಿ ಕುಳಿತುಕೊಂಡೇ ತಮ್ಮನಲ್ಲಿ ಅಂಗಲಾಚಿದ – ತಚ್ಚೋಳಿಯ ಪ್ರಿಯ ಒದೇನ! ನೀನು ಹೊರಗೆ ಬಾ! ಹೊರಬಂದು ಮಿಂದು ಗಂಜಿಯನ್ನಾದರೂ ಕುಡಿ! ಅದಕ್ಕೂ ಒದೇನ ಮಿಸುಕಾಡಲಿಲ್ಲ. ಇದನ್ನೆಲ್ಲ ನೋಡುತ್ತಿದ್ದ ಕಂಡಾಚ್ಚೇರಿ ಚಾಪ್ಪ ಉತ್ತಮೆ ನಂಜ್ಯಾರಳಲ್ಲಿ ಹೇಳಿದ – ಆ ಕಡ್ಪಕತ್ತಿ (ಮರದ ಗೆಲ್ಲುಗಳನ್ನು ಕಡಿಯಲು ಬಳಸುವ ದೊಡ್ಡ ಕತ್ತಿ) ಈಚೆ ತೆಗೆದುಕೊಂಡು ಬನ್ನಿ. ಅವಳು ಕಡ್ಪಕತ್ತಿ ತಂದಳು. ಅವನು ಒಂದೂ ಇಟ್ಟೇಣಿಯನ್ನು ಹಿತ್ತಿಲಿನಿಂದ ತೆಗೆದುಕೊಂಡು ಬಂದ. ಕಡ್ಪ ಕತ್ತಿಯನ್ನೂ ತೆಗೆದುಕೊಂಡು ಹೋಗಿ ಒಂದು ಹೊಂಗರಕನ ಮರಕ್ಕೆ ಏಣಿಇಟ್ಟು ಹತ್ತಿದ. ಅದರ ಒಂದೆರಡು ಗೆಲ್ಲುಗಳನ್ನು ಕಡಿದ. ಅದನ್ನು ಹಿಡಿಯಲು ಬೇಕಾದ ಜಾಗದ ಮುಳ್ಳುಗಳನ್ನು ಸವರಿದ. ಬಳಿಕ ಮೈಯಿಡೀ ಅದರಿಂದ ಎಳೆದಾಡಿದ. ಗರಗಸದಿಂದ ಸಿಗಿದಂತೆ ಮೈ ತುಂಬ ಗಾಯ ಗಳಾದುವುದು. ಮೈಯೂ ಬಟ್ಟೆಯೂ ಹರಿದುವು. ಬಳಿಕ ನಂಜಿಯಾರಳಿಗೆ ಹೇಳಿ ಮುಕ್ಕೂಟ್ಟ್ (ಮೂರು ವಿಧದ ಮದ್ದುಗಳನ್ನು ಸೇರಿಸಿ ಕಾಸಿದ ಎಣ್ಣೆ) ತರಿಸಿಕೊಂಡು ಅದನ್ನು ಮೈಯಿಡೀ ಲೇಪಿಸಿಕೊಂಡು ಕೊಳೆಯಾಗಿದ್ದ ನಾಲ್ಕು ಪಂಚೆಗಳನ್ನು ತೆಗೆದು ಕೊಂಡ. ಒಗೆದು ಮಡಿಮಾಡಿದ್ದು ನಾಲ್ಕು ಒಳ್ಳೆಯ ಪಂಚೆಗಳನ್ನೂ ತೆಗೆದ. ಬೆಳ್ಳಿಯ ಹದಿನಾರು ಹಣಗಳನ್ನೂ ತೆಗೆದುಕೊಂಡ. ಅವುಗಳನ್ನೆಲ್ಲ ಒಂದು ಮುಟ್ಟಗಂಟು ಮಾಡಿದ. ಹಸುಬೆಯ ಬಟ್ಟೆ ತೆಗೆದುಕೊಂಡು ಅದರಿಂದ ಒಂದು ದೊಡ್ಡ ಜೋಳಿಗೆ ತಯಾರಿಸಿದ. ಉತ್ತಮೆ ನಂಜಿಯಾರೇ! ಸ್ವಲ್ಪ ಕರಿಮೆಣಸನ್ನು ಪುಡಿಮಾಡಿ ಒಂದು ಎಲೆಯಲ್ಲಿ ಕಟ್ಟಿಕೊಂಡು

ಬನ್ನಿ. ಕಾಳುಮೆಣಸಿನ ಪುಡಿ ಅಂತೆಯೇ ಅವನ ಕೈಗೆಬಂತು. ಬಳಿಕ ಹೆಗಲಿಗೆ ಜೋಳಿಗೆಯನ್ನು ಹಾಕಿಕೊಂಡ. ಹಾಗೆ ಹೊರಟುಹೋಗಿ ಕಾವಿಲ್ ಚಾತ್ತೋತ್ತ್‌ಗೆ ತಲಪಿದ. ಕಾಳುಮೆಣಸಿನ ಪುಡಿಯನ್ನು ಕಣ್ಣಿಗೆ ಹಾಕಿಕೊಂಡ. ಚಾಪ್ಪನನ್ನು ಕಣ್ಣಾರೆ ಕಂಡ ಮಾದೇಯಮ್ಮ ಕೇಳಿದಳು – ಕಂಡಾಚೇರಿ ಚಾಪ್ಪಾ! ಇದ್ಯಾಕೆ ಹೀಗೆ ಕಣ್ಣೀರು ಸುರಿಸುತ್ತಿದ್ದಿ? ಚಾಪ್ಪನಿಗೆ ಅಳುವಿನಿಂದಾಗಿ ಮಾತನಾಡಲೇ ಆಗುತ್ತಿಲ್ಲ! ಮಾದೇಯಮ್ಮ ಎಂದಳು – ಅಳಬೇಡಪ್ಪ ಕಂಡಾಚ್ಚೇರಿ! ಅಳುನಿಲ್ಲಿಸಿ ಏನಾಯಿತು ಎಂದು ಹೇಳು. ನೀನು ಹೀಗೆ ಅಳುತ್ತಲೆ ಇದ್ದರೆ ನನಗೆ ಏನು ತಿಳಿಯುತ್ತದೆ, ಹೇಳು? ಚಾಪ್ಪ ಒಂದಿಷ್ಟು ಸುಧಾರಿಸಿಕೊಂಡು ಹೇಳಿದ – ಕಾವಿಲ್ ಚಾತ್ತೋತ್ತ್ ಮಾದೇಯಮ್ಮ! ನಾನು ಊರು ಬಿಟ್ಟು ಹೊರಟೆನಮ್ಮ! ಇನ್ನು ಸಾಧ್ಯವೇ ಇಲ್ಲ. ಮಾದೇಯಮ್ಮ ಕೇಳಿದಳು – ಏನಾಯ್ತಪ್ಪ ಚಾಪ್ಪ? ಯಾಕೆ ಊರು ಬಿಡುತ್ತಿದ್ದಿ? ಅಂಥದ್ದೇನಾ ಯಿತು? ನೀನು ಇಲ್ಲೇ ಇರು. ಅದಕ್ಕೆ ಚಾಪ್ಪನೆಂದ – ನಿಮಗೆ ತಚ್ಚೋಳಿಯಲ್ಲಿನ ಹೆಡ್ಡನನ್ನು ಗೋತ್ತೇನಮ್ಮ? ಅವನೇ ನನಗೆ ಹೀಗೆ ಮಾಡಿದ್ದು. ಆಗ ಮಾದೇಯಮ್ಮ ಎಂದಳು – ತಚ್ಚೋಳಿಯಲ್ಲಿ ಯಾರೂ ಹೆಡ್ಡರಿಲ್ಲ; ಕಾಗೆಯಲ್ಲಿ ಯಾವುದೂ ಗಂಡಿಲ್ಲ. ಅದಕ್ಕೆ ಅವನೆಂದ – ಮಾದೇಯಮ್ಮ! ಅವನು ತಚ್ಚೋಳಿ ಮನೆಯವನಲ್ಲ. ನನ್ನ ಕುರುವುಳಿ ಮಂಜೊಳಿಂ ಮನೆಯವನು, ನಮ್ಮ ಕುಟುಂಬದವನು. ಅವನನ್ನು ಕರೆತಂದರೆ ಸೌದೆಯನ್ನು ನೂರು ಹೋಳಾಗಿ ಸಿಗಿದಾನು. ನೂರು ಬಳ್ಳ ಭತ್ತವನ್ನು ಅಕ್ಕಿಮಾಡಿಕೊಟ್ಟಾನು. ಅಕ್ಕಚ್ಚಿನ ನೀರೋ ಗಂಜಿ ತಿಳಿಯೋ ಆದರೂ ಅದೀತು, ನಾಲ್ಕು ಮಡಕೆಯಷ್ಟು ಕುಡಿದಾನು. ಮಾದೇಯಮ್ಮ ಚಾಪ್ಪನ ಜೋಳಿಗೆಯನ್ನು ತೆರೆದು ನೋಡಿದಳು. ಬಳಿಕ ಉದ್ಗಾರ ತೆಗೆದಳು – ಹಾಯ್ ನನ್ನ ಚೀರು ಮಗಳೆ! ಇದೇನು ವಿಧಿ ಮಗಳೆ! ಈ ಚಾಪ್ಪ ದೊಡ್ಡದೊಂದು ಅಪಕಾರ ಮಾಡಿಬಿಟ್ಟಿದ್ದಾನೆ. ಒಂದಷ್ಟು ಹಣ ಬಾಚಿ ತಂದಿದ್ದಾನೆ! ಬೆಳ್ಳಿ ಹಣಗಳು, ಹದಿನಾರು! ಆ ಹಣವನ್ನೂ ಒಗೆಯದ ನಾಲ್ಕು ಮಾಸಲು ಪಂಚೆಗಳನ್ನೂ ನಾಲ್ಕು ಮಡಿಪಂಚೆಗಳನ್ನೂ ಜೋಳಿಗೆಯಿಂದ ಹೊರ ತೆಗೆದಳು. ಚೀರುವಿಗೆಂದಳು – ನೋಡಿದೆಯ, ನೋಡಿದೆಯ ನನ್ನ ಚೀರುಮಗಳೆ! ಚಾಪ್ಪನ ಗಳಿಕೆಯನ್ನು ನೋಡಿದೆಯ? ಇದೇನು ವಿಧಿಯಮ್ಮ ಇದು? ಇವನಿಗೆ ಹದಿನೇಳೂವರೆ ಖಂಡಿ ಹಿತ್ತಿಲಿದೆ. ಅವನ ಒಂದು ಕೊಯ್ಲಿಗೆ ಸಿಗುವ ತೆಂಗಿನ ಕಾಯಿಯಷ್ಟು ನಮಗೆ ಮೂರು ಕೊಯ್ಲು ಒಟ್ಟು ಸೇರಿದರೂ ಸಿಗಲಾರದು. ಮೂರು ಕೊಯ್ಲು ಅಡಕೆ ಕೊಯ್ದರೂ ಅವನ ಒಂದು ಕೊಯ್ಲಿನ ಅಡಕೆಯಷ್ಟು ಸಿಗದು. ಹೀಗಿದ್ದೂ.... ಬಳಿಕ ಚಾಪ್ಪನಿಗೆಂದಳು – ನನಗೊಬ್ಬ ಗಂಡು ಮಗನಿಲ್ಲದೆ ಅಡಕೆ ತೆಂಗಿನಕಾಯಿಗಳನ್ನೆಲ್ಲ ಕಳ್ಳಕಾಕರು ಒಯ್ದು ಬಿಡುತ್ತಾರೆ. ನೀನು ಅವನ್ನೆಲ್ಲ ನೋಡಿಕೊಳ್ಳುತ್ತ ಇಲ್ಲಿರು ಕಂಡಾಚ್ಚೇರಿ. ಬೇರೆಲ್ಲಿಗೂ ಹೋಗಬೇಡ.

ಮಗೂ ಚೀರು! ಇವನಿಗೆ ಒಂದು ಸ್ನಾನಕ್ಕೆ ಬೇಕಾದ ಎಣ್ಣೆ ತಂದುಕೊಡು. ಚಾಪ್ಪ ಎಣ್ಣೆಹಚ್ಚಿಕೊಂಡು ಸ್ನಾನಮುಗಿಸಿ ಬಂದ. ಅವನಿಗೆ ಅನ್ನ ಬಡಿಸಿದಳು. ಊಟಕ್ಕೆ ಕುಳಿತ ಚಾಪನಿಗೆ ಬಾಯಿಗಿಟ್ಟ ತುತ್ತು ಬಾಯಲ್ಲೆ ಉಳಿಯಿತು, ಕೈಯಲ್ಲೆತ್ತಿಕೊಂಡ ತುತ್ತು ಕೈಯಲ್ಲೆ ಉಳಿಯಿತು. ಅದನ್ನು ನೋಡಿದ ಮಾದೇಯಮ್ಮ ಕೇಳಿದಳು – ಇದೇನು ಚಾಪ್ಪ? ಏನಾಯಿತು ನಿನಗೆ? ಕೈಯ ತುತ್ತು ಕೈಯಲ್ಲೆ, ಬಾಯತುತ್ತು ಬಾಯಲ್ಲೆ ಉಳಿಯಿತಲ್ಲ? ಅದಕ್ಕೆ ಅವನೆಂದ – ಬೇರೇನೂ ಇಲ್ಲ ನನ್ನವ್ವ! ಹೆಡ್ಡನ ನೆನಪಾಗಿಬಿಟ್ಟಿತು ಅಷ್ಟೇ. ಬೇರೆ ಏನು ಸಂಕಟ ಅವ್ವ, ಈ ಚಾಪನಿಗೆ? ಅದಕ್ಕೆ ಅವಳೆಂದಳು – ಅದಕ್ಕೇನು ಮಾಡೋಣ. ನೀನು ಬೇಗಹೋಗಿ ಅವನನ್ನೂ ಜತೆಯಲ್ಲಿ ಕರೆದುಕೊಂಡು ಬಾ. ಅವನು ಇಲ್ಲೇ ಚೀರು ಮಲಗುವ ಪಡು ಕೋಣೆಯಲ್ಲಿ ಮಂಚದ ಕೆಳಗೆ ಮಲಗಿಕೊಳ್ಳಲಿ. ನೀನು ಬೇಗ ಹೊರಟುಹೋಗಿ ಅವನನ್ನೂ ಜತೆಯಲ್ಲಿ ಕರೆದುಕೊಂಡು ಬಾ. ಮುಂಜಾನೆ ದೀಪ ಇಡುವ ಹೊತ್ತಿಗೆ ಬಂದುಬಿಡು. ಕಂಡಾಚ್ಚೇರಿ ಹಾಗೆಯೇ ಕೂಡಲೆ ಅಲ್ಲಿಂದ ಹೊರಟು ಮೆಲ್ಲಗೆ ನಡೆಯುತ್ತ ಹೋದ.

ಮರೆಯಾಗುವವರೆಗೆ ಮೆಲ್ಲಮೆಲ್ಲಗೆ ನಡೆಯುತ್ತಿದ್ದವನು ತಡಮೆ ದಾಟಿದ ಕೂಡಲೇ ಬೀಸಬೀಸ ನಡೆದ. ಗಾಳಿಗೆ ತರಗೆಲೆ ಹಾರುವ ಹಾಗೆ ಓಡುತ್ತ ಹಾರುತ್ತ ಚಾಪ್ಪ ಮುಂದೆ ಸಾಗುತ್ತಿದ್ದ. ಹಾಗೆ ಸಾಗಿ ಮೇಪಕ್ಕೆ ತಲಪಿದ. ಒದೇನ ಮಲಗುವ ಕೋಣೆಯ ಬಾಗಿಲಲ್ಲಿ ಹೋಗಿ ನಿಂತ. ಒದೇನನನ್ನು ಕರೆದು ಹೇಳಿದ – ತಚ್ಚೋಳಿಯ ಎಳೆಯ ಕುರುಪ್ಪರೇ! ತಮ್ಮ ಕೋಣೆಯ ಬಾಗಿಲು ತೆರೆಯಿರಿ. ನಾವು ಕಾವಿಲ್ ಚಾತ್ತೋತ್ತ್‌ಗೆ ಹೋಗಲಿದೆ. ಅದನ್ನು ಕೇಳಿದ್ದೇ ತಡ, ಒದೇನ ಥಟ್ಟನೆ ಎದ್ದು ನಿಂತ. ತನ್ನ ಕೋಣೆಯ ಬಾಗಿಲು ತೆರೆದ. ಸ್ನಾನ ಮುಗಿಸಿದ, ದೇವ ನಮಸ್ಕಾರವನ್ನು ಮಾಡಿದ. ಇದನ್ನು ಗಮನಿಸಿ ಉತ್ತಮೆ ನಂಜಿಯಾರ್ ಒದೇನನಿಗೆ ಊಟಬಡಿಸಿದಳು. ಕುಂಞಿಚೀರುವನ್ನು ನೋಡಿದ್ದ ಪರಿಣಾಮವಾಗಿ ಉಂಟಾದ ಮೋಹಾಲಸ್ಯದಿಂದ ಅವನಿಗೆ ಊಟಬಾಯಾರಿಕೆ ಗಳಿಲ್ಲ. ಹಾಗಾಗಿ ಉಣ್ಣದೆ ಎದ್ದವನು ಕೈಬಾಯಿತೊಳೆದುಕೊಂಡ. ವೀಳ್ಯ ಬಾಯಿಗೆ ಹಾಕಿಕೊಂಡ. ಬಳಿಕ ಕಂಡಾಚ್ಚೇರಿ ಚಾಪ್ಪ ಒದೇನನಿಗೆಂದ – ತಚ್ಚೋಳಿಯ ಎಳೆಯ ಕುರುಪ್ಪರೆ! ಇಂದು ನಾವು ಹೋಗಿ ಕಾವಿಲ್ ಚಾತ್ತೋತ್ತ್‌ಗೆ ತಲಪಿದಾಗ ನೀವು ಕೊಟ್ಟಿಗೆಯ ಒಳಗೆ ಓಡಿ ಒಳಹೋಗಬೇಕು. ಕೊಡಲಿ ಎತ್ತಿಕೊಂಡು ಬೇಗಬೇಗ ಸೌದೆ ಒಡೆಯಬೇಕು. ಭತ್ತಕುಟ್ಟುವ ಕೊಟ್ಟಿಗೆಗೆ ಓಡಿಹೋಗಿ ಒಂದಷ್ಟು ಭತ್ತ ಕುಟ್ಟಬೇಕು. ಹೇಗೆ ಗೊತ್ತೆ? ಒನಕೆಯ 'ಬಳೆ' ಮೇಲೆ, ಅದರ 'ಕೊಂಬು' ಕೆಳಗೆ ಆಗುವಂತೆ ಹಿಡಿದಿ ಕೊಳ್ಳಬೇಕು. ಅದಕ್ಕೆ ಒದೇನನೆಂದು – ಹಾಗೆ ಭತ್ತಕುಟ್ಟುವಾಗ ನನಗೆ ನಗು ತಡೆದುಕೊಳ್ಳಲು ಸಾಧ್ಯವಾಗದು. ಅದಕ್ಕೆ ಚಾಪ್ಪನೆಂದ – ಹಾಗೆ ನಕ್ಕರೆ ಕಾರ್ಯ ಕೆಟ್ಟಿತು. ಕಾವಿಲ್ ಚಾತ್ತೋತ್ತ್‌ಗೆ

ತಲಪಿದ ಮೇಲೆ ನೀವು ನೇರ ಅಡುಗೆ ಮನೆಗೆ ಹೋಗಬೇಕು. ಅಕ್ಕಚ್ಚಿನ ಮಡಕೆಗೆ ಕೈಹಚ್ಚಬೇಕು, ತಿಳಿಯಿತೆ? ಬಳಿಕ ಅದನ್ನು ಕುಡಿಯಬೇಕು. ಇನ್ನೂ ಇದೆ, ಕೇಳಿಕುರುಪ್ಪರೇ! ಚಿನ್ನದ ಹಿಡಿಕಟ್ಟಿನ ಉರುಮಿ ಹಾಗೂ ಹೊನ್ನ ಚಿಕ್ಕೆ ಕೂರಿಸಿದ ಮಣಿಗುರಾಣಿಗಳನ್ನು ಜೋಳಿಗೆಯಲ್ಲಿ ಹಾಕಿ ತೆಗೆದುಕೊಳ್ಳಿ. ಜೋಳಿಗೆಯಲ್ಲಿ ಅವನ್ನೆಲ್ಲ ಇರಿಸಿಕೊಂಡು, ಮಲಗುವಾಗ ಅದರ ಮೇಲೆ ತಲೆಯಿಟ್ಟು ಮಲಗಬೇಕು. ಮಲಗುವಾಗ ಸದಾ ಸುರುಟಿಕೊಂಡೇ ಮಲಗಬೇಕು, ಬಾಗಿ ಮಲಗಬೇಕು. ನಡೆಯುವಾಗ ನಾಲ್ಕೂ ಕಡೆ ಅತ್ತಿತ್ತ ನೋಡುತ್ತಿರಬೇಕು. ಅತ್ತಿತ್ತ ತಿರುಗುತ್ತ ತಿರುಗುತ್ತ ಆಟವಾಡುತ್ತಿರಬೇಕು.

ಚಾಪ್ಪ ಒಂದು ಗಿಂಡಿನೀರು ತೆಗೆದುಕೊಂಡ. ಗಂಧದ ಕೊರಡುಗಳನ್ನು ಹಾಕಿರಿಸಿದ್ದ ಪೆಟ್ಟಿಗೆಯನ್ನು ತೆರೆದ. ಕೋಝಿಕ್ಕೋಡನ್ ಗಂಧದ ಕಲ್ಲನ್ನು ಸಿದ್ಧಪಡಿಸಿಕೊಂಡ. ಗಂಧದ ಕೊರಡನ್ನು ಎತ್ತಿಕೊಂಡು ಅದನ್ನೂ ಗಂಧದ ಕೊರಡನ್ನೂ ತೊಳೆದುಕೊಂಡ. ಗಿಂಡಿಯಿಂದ ಒಂದಿಷ್ಟು ನೀರು ಸುರಿದುಕೊಂಡು ಮುಂದಕ್ಕೆ ಶಕ್ತಿಹಾಕಿ ಗಂಧ ತೇದ.. ಹಾಗೆ ತೇಯುತ್ತ ಅದಕ್ಕೆ ಕಳಭ ಕಸ್ತೂರಿಗಳನ್ನು ಸೇರಿಸಿದ. ಕೋಝಿಕ್ಕೋಡನ್ ಚಾಂದ್ ಸೇರಿಸಿದ. ನಾಲ್ಕನ್ನೂ ಸೇರಿಸಿ ತೇದ. ಬಾಳೆ ಎಲೆಯ ಕಿರುಸೀಳು ತೆಗೆದುಕೊಂಡು ಅದರಲ್ಲಿ ಗಂಧವನ್ನು ಕಲ್ಲಿನಿಂದ ಸೀಟಿತೆಗೆದು ಹಾಕಿದ. ಅದನ್ನು ಜೋಪಾನವಾಗಿ ಮಡಚಿ ಇನ್ನೊಂದು ಸಪುರ ಸೀಳಿನಿಂದ ಕಟ್ಟಿ ಜೋಳಿಗೆಯಲ್ಲಿರಿಸಿಕೊಂಡ. ಒಂದು ತುಂಡು ಹಸಿರು ರೇಶ್ಮೆಬಟ್ಟೆ ತೆಗೆದುಕೊಂಡ. ಒಂದು ಬೈರಾಸನ್ನೂ ತುಂಡು ಪಂಚೆಯನ್ನೂ ತೆಗೆದುಕೊಂಡ. ಒದೇನನ ಉರುಮಿ ಕತ್ತಿಯನ್ನೂ ಗುರಾಣಿಯನ್ನೂ ಕಟ್ಟಿ ಆ ಜೋಳಿಗೆಗೆ ಸೇರಿಸಿಕೊಂಡ. ಸದ್ಯ ಉಟ್ಟುಕೊಳ್ಳುವುದಕ್ಕೆ ಹಳತಾಗಿ ಹರಿದಿದ್ದ ಒಂದು ಪಂಚೆಯನ್ನು ಒದೇನನಿಗೆ ಕೊಟ್ಟ. ಅವನ ಮೈ ತುಂಬ ಬೂದಿಲೇಪಿಸಿದ. ಒದೇನನಿಗೆ ಪೆದ್ದನಂತೆ ಯೋಗ್ಯವಾದ ವೇಷಮಾಡಿದ. ಹೊರಪಯಣದ ಸಿದ್ಧತೆಗಳೆಲ್ಲ ಮುಗಿದಿದ್ದುವು. ಆಗ ಚಾಪ ಜೋಳಿಗೆಯ ಕಟ್ಟನ್ನು ತೆಗೆದುಕೊಂಡ. ಅವನೆಂದ – ಕುರುಪ್ಪರೇ! ಪ್ರಯಾಣಕ್ಕೆ ಸಿದ್ಧವಾಗಿ. ಹಾಗೆ ಅವರು ನಡೆಯುತ್ತ ನಡೆಯುತ್ತ ಕಾವಿಲ್ ಚಾತ್ತೋತ್ತ್‌ಗೆ ತಲ ಪಿದರು. ಮನೆಯ ಮಾಳಿಗೆ ಮೆಟ್ಟಿಲ ಬಳಿ ತಲಪಿದಾಗ ಕಂಡಾಚೇರಿ ಎಂದ – ತಚ್ಚೋಳಿ ಎಳೆಯಕುರುಪ್ಪರೇ! ಇನ್ನು ನಿಮ್ಮ ಜೋಳಿಗೆಯನ್ನು ನೀವೇ ಎತ್ತಿಕೊಳ್ಳಿ. ನಾನು ಮುಂದೆ ನಡೆಯುತ್ತೇನೆ. ನನ್ನ ಹಿಂದೆ ನೀವು ಬರಬೇಕು. ಅಲ್ಲಿಗೆ ತಲಪಿದ ಮೇಲೆಯೂ ನೀವು ಹೊರಜಗಲಿಯ ದೀಪದ ಕೆಳಗಿನ ಕತ್ತಲಲ್ಲಿ ಜೋಳಿಗೆ ಇಟ್ಟುಕೊಂಡು ಬೋರಲಾಗಿ/ಕವುಚಿ ಕೊಂಡು ಮಲಗಬೇಕು ಆಚೆಗೊಮ್ಮೆ ಈಚೆಗೊಮ್ಮೆ ನಾಲ್ಕು ಕಡೆಗೂ ನೋಡುತ್ತ ಇರಬೇಕು. ಹೀಗೆ ಸೂಚನೆಗಳನ್ನು ಕೊಟ್ಟು ಅವನು ಮೆಟ್ಟಲೇರ ತೊಡಗಿದ. ಕಾವಿಲ್ ಚಾತ್ತೋತ್ತ್ ಮನೆಯ ಒಳಗೆ ಹೋಗಿ ಹೊರ ಜಗಲಿಯ

ದೀಪದ ಕೆಳಗಿನ ಕತ್ತಲಲ್ಲಿ ಜೋಳಿಗೆ ಕೆಳಗಿರಿಸಿದ. ತಚ್ಚೋಳಿ ಒದೇನ ಕೊಟ್ಟಿಗೆಗೆ ಹಾರಿ ಹತ್ತಿದ. ಕೊಡಲಿ ತೆಗೆದುಕೊಂಡು ಸೌದೆ ಒಡೆಯಲು ತೊಡಗಿದ. ಆಗ ಚಾತ್ತೋತ್ತ್ ಮಾದೇಯಮ್ಮ ಎಂದಳು – ಒಂದು ವಿಚಾರವುಂಟು, ಕೇಳಯ್ಯ ಹೆಡ್ಡ! ಇವತ್ತಿಗೆ ಬೇಕಾದಷ್ಟೆ ಸೌದೆ ಒಡೆದರೆ ಸಾಕು. ನಾಳೆಗೆ ಬೇಕಾದ್ದನ್ನು ಆಮೇಲೆ ನಾಳೆ ಒಡೆದುಕೊಂಡರೆ ಸಾಕು. ಒದೇನ ಓಡೋಡುತ್ತ ಹೋಗಿ ಭತ್ತಕುಟ್ಟುವ ಕೊಟ್ಟಿಗೆ ಪ್ರವೇಶಿಸಿದ. ಒನಕೆ ತೆಗೆದುಕೊಂಡ. ಅದರ ಬಳೆಯನ್ನು ಮೇಲಕ್ಕೆ ಮತ್ತು ಅದರ ಕೊಂಬು ಕೆಳಗಾಗುವಂತೆ ಹಿಡಿದು ಭತ್ತ ಕುಟ್ಟಲಾರಂಭಿಸಿದ. ಮಾದೇಯಮ್ಮ ಅದನ್ನು ಕಣ್ಣಾರೆ ಕಂಡಳು. ಅವಳಿಗೆ ನಿಯಂತ್ರಿಸಲಾರದ ನಗು – ನೋಡಿದೆಯಾ ನೋಡಿದೆಯಾ ಕಂಡಾಚ್ಚೇರಿ! ಇವನು ಒನಕೆಯ ಕೊಂಬಿನಿಂದ ಅಕ್ಕಿಮಾಡುವ ನಿಪುಣ! ಎಲ್ಲರೂ ಬಿದ್ದು ಬಿದ್ದು ನಕ್ಕರು. ಆಗ ಕಂಡಾಚ್ಚೇರಿ ಎಂದ – ನಾನು ಹೀಗಂತ ಮೊದಲೇ ಹೇಳಿರಲಿಲ್ಲವೆ? ಈ ಹೆಡ್ಡನ ಆಟವನ್ನೆಲ್ಲ ಕಂಡರೆ ನೀವು ನಕ್ಕು ನಕ್ಕು ಸತ್ತೇ ಹೋಗುತ್ತೀರಿ ಎಂದಿದ್ದೆನಲ್ಲ. ಅದಕ್ಕೆ ಕುಂಞಿಚೀರು ಕೂಡ ಹೇಳಿದಳು – ಚಾಪ್ಪ ಹೇಳಿದ್ದು ನಿಜ.

ಹೆಡ್ಡ ಓಡಿಹೋಗಿ ಅಡುಗೆ ಮನೆಹೊಕ್ಕ. ಅಕ್ಕಚ್ಚಿನ ಮಡಕೆಗೆ ಕೈ ಹಾಕಿದ. ಆಗ ಮಾದೇಯಮ್ಮ ಎಂದಳು – ಇವತ್ತಿನ ಅಕ್ಕಚ್ಚು ಚೆಲ್ಲಿಬಿಟ್ಟೆವು. ನಾಳೆ ನಿನಗೆ ಅದನ್ನು ತೆಗೆದಿಡೋಣ. ಹೆಡ್ಡ ಹೆದರುತ್ತ ಹೆದರುತ್ತ ಓಡಿ ಜೋಳಿಗೆ ಕಟ್ಟು ಎಡವಿ ಅದರ ಮೇಲೆಯೇ ಬಿದ್ದ. ಕಾವಿಲ್ ಚಾತ್ತೋತ್ತ್ ಮಾದೇಯಮ್ಮ ಕೇಳಿದರು – ಕಂಡಾಚ್ಚೇರಿ ಚಾಪ್ಪ! ಆ ಜೋಳಿಗೆಯಲ್ಲಿ ಏನಿದೆ? ಅದಕ್ಕೆ ಚಾಪ್ಪನೆಂದ – ಹೆಡ್ಡ ಅವನ ಬಟ್ಟೆಗಳನ್ನೂ ಚಲ್ಲಣ ಗಿಲ್ಲಣಗಳನ್ನೂ ಕಟ್ಟಿ ಇಟ್ಟಿದ್ದಾನೆ. ಹೆಡ್ಡ ಬಳಿಕ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ತಿರುಗುತ್ತ ಆಡುತ್ತಿದ್ದ. ಮಾದೇಯಮ್ಮ ಕೇಳಿದಳು – ಕಂಡಾಚ್ಚೇರಿ ಚಾಪ್ಪಾ! ಇದೇನಿದು ಈ ಹೆಡ್ಡ ಅದ್ಯಾಕೆ ಹಾಗೆ ಆಡುತ್ತಾನೆ? ಅದಕ್ಕೆ ಅವನೆಂದ – ಅವನು ಸಿಕ್ಕಾಬಟ್ಟೆ ಹೆದರಿರುವುದರಿಂದ ಹಾಗೆ ಮಾಡುತ್ತಾನಮ್ಮ! ಮೇಪ್ಪದಲ್ಲಿರುವಾಗಲೂ ಹಾಗೆಯೇ. ಸಂಜೆಯ ದೀಪ ಹಚ್ಚಿದ ಮೇಲೆ ಅವನು ಬೆಳಕಿಲ್ಲದ ಯಾವುದಾದರೂ ಕತ್ತಲು ಕೋಣೆಯಲ್ಲಿ ಅವಿತು ಬಿಡುತ್ತಾನೆ. ಅಷ್ಟೊಂದು ಹೆದರಿಕೆ ಅವನಿಗೆ! ಅದಕ್ಕಾಗಿಯೇ ಹೀಗೆ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ತಿರುಗಿ ತಿರುಗಿ ಆಡುತ್ತಾನೆ. ಆಗೆ ಆಕೆಯೆಂದಳು – ರಾತ್ರೆಯ ಊಟದ ಹೊತ್ತಾಯಿತು. ಅವನಿಗೆ ಊಟ ಕೊಡಿಸು. ಮಾದೇಯಮ್ಮ ಆಗ ಅವನಿಗೆ ಒಂದು ಗಿಂಡಿ ನೀರು ತಂದುಕೊಟ್ಟಳು. ಅದನ್ನು ಚಾಪ್ಪ ತೆಗೆದುಕೊಂಡ. ಆ ನೀರಲ್ಲಿ ಕೈಕಾಲುಮುಖ ತೊಳೆದುಕೊಂಡ. ಹೆಡ್ಡನಿಗೂ ಆಗ ಊಟದ ಎಲೆ ಕೊಟ್ಟರು. ಅವರಿಬ್ಬರೂ ಹತ್ತಿರ ಹತ್ತಿರವೇ ಊಟಕ್ಕೆ ಕುಳಿತರು. ಕಂಡಾಚ್ಚೇರಿಗೆ ಹಳೆ 'ಕುರಿಅಕ್ಕಿ'ಯ ಅನ್ನ ಬಡಿಸಿದರು. ಹೆಡ್ಡನಿಗೆ ಬೆಳ್ತಿಗೆ ಅಕ್ಕಿಯ ಅನ್ನವನ್ನೂ ಒಂದಿಷ್ಟು

ಮಜ್ಜಿಗೆಯನ್ನೂ ಬಡಿಸಿದರು. ಹೆಡ್ಡ ಕೂಡಲೇ ಚಾಪ್ಪನ ಎಲೆಯನ್ನು ಎಳೆದಿಟ್ಟುಕೊಂಡ. ಅದನ್ನು ಚೀರು ಕಣ್ಣಾರೆ ಕಂಡಳು. ಅವಳು ಅಮ್ಮನಿಗೆಂದಳು –ನನ್ನಮ್ಮಾ, ನನ್ನಮ್ಮಾ ಕಂಡಿರಾ? ಹೆಡ್ಡ ಅನ್ನ ಬದಲಾಯಿಸಿದ್ದನ್ನು ಕಂಡಿರಾ? ನಾನಿದನ್ನು ಮೊದಲೇ ಹೇಳಿದ್ದೆ ನಲ್ಲವೆ? ಆಗ ಕಂಡಾಚ್ಚೇರಿಯೆಂದ – ಇದು ಅವನಿಗೆ ಮೊದಲಿನಿಂದಲೂ ಅಭ್ಯಾಸವಮ್ಮ. ಒಂದು ಕಡೆ ಕುಳಿತು ನಾವಿಬ್ಬರೂ ಊಟಮಾಡುವುದಿದ್ದರೆ ಅವನು ಎಲೆಯನ್ನು ಬದಲಾಯಿಸದೆ ಇರಲೇ ಆರ. ಬೆಕ್ಕನ್ನು ಕೊರಳ ಹಿಂದಿನಿಂದ ಹಿಡಿದು ನೇತಾಡಿಸುವ ಹಾಗೆ ಚಾಪ್ಪ ಹೆಡ್ಡನ ಕೊರಳನ್ನು ಹಿಂದಿನಿಂದ ಹಿಡಿದುಕೊಂಡ. ಅವನು ಹೆಡ್ಡನಿಗೆಂದ – ಎರಡು ಎಲೆಗಳ ಅನ್ನವನ್ನೂ ನೀನು ಉಣ್ಣದೆ ಹೋದರೆ ನಿನ್ನನ್ನು ನಾನು ಹೊಡೆದು ಹೊಡೆದು ಕೊಂದೇನು. ಉಣ್ಣಲು ಈಗಾಗಲೇ ತೊಡಗಿದ್ದ ಹೆಡ್ಡನ ಮುಂದೆ ಚಾಪ್ಪ ನಿಗುರಿ ನಿಂತ. ಹೆಡ್ಡನನ್ನು ತುಳಿಯುವುದಕ್ಕಾಗಿ ಚಾಪ್ಪ ಮುಂದುವರಿದಾಗ ಮಾದೇಯಮ್ಮ ತಡೆದಳು. ಅವಳು ಕಂಡಾಚ್ಚೇರಿಗೆಂದಳು – ಬೇಡ, ಬಿಟ್ಟು ಬಿಡೋ ಕಂಡಾಚ್ಚೇರಿ! ಚೀರು ಮಗಳೇ, ಕಂಡಾಚ್ಚೇರಿಗೆ ನೀನು ಬೇರೊಂದು ಎಲೆಕೊಟ್ಟು ಊಟ ಬಡಿಸು. ಚೀರು ಅಂತೆಯೇ ಮಾಡಿದಳು. ಚಾಪ್ಪ ಕುಳಿತು ಊಟ ಮಾಡಿದ. ಊಟವಾದ ಬಳಿಕ ಕಂಡಾಚ್ಚೇರಿ ಚಾಪ್ಪನೆಂದ – ಕಾವಿಲ್ ಚಾತ್ತೋತ್ತ್‌ನ ಮಾದೇಯಮ್ಮ! ನನಗೆ ಒಂದು ಸಪುರದ ಬೆತ್ತ ಕೊಡಬೇಕಮ್ಮ. ಅದಕ್ಕೆ ಮಾದೇಯಮ್ಮ ಕೇಳಿದಳು – ನಿನಗೆ ಸಪುರದ ಬೆತ್ತ ಯಾಕೆ ಚಾಪ್ಪ? ಹಾಗೆನ್ನುತ್ತ ಅವನಿಗೆ ಒಂದು ಬೆತ್ತವನ್ನು ತಂದುಕೊಟ್ಟಳು. ಬೆತ್ತ ತೆಗೆದುಕೊಂಡು ಚಾಪ್ಪನೆಂದ – ವೀಳ್ಯದೆಲೆಯ ಹಿತ್ತಿಲಿನಿಂದ ಹೊಂಗಾರಕನ ಗೆಲ್ಲು ಕತ್ತರಿಸಿ ನನಗೆ ಹೇಗೆ ಹೊಡೆದಿದ್ದನೆಂಬುದನ್ನು ನೀವು ಕಂಡಿರುವಿರಷ್ಟೆ? ಈಗ ಇವನು ಎರಡು ಎಲೆಯ ಅನ್ನವನ್ನು ಪೂರ್ತಿ ಉಣ್ಣದಿದ್ದರೆ ಈ ಬೆತ್ತದಿಂದ ಚೆನ್ನಾಗಿ ಹೊಡೆದು ಅವನ ಮೈಯ ಚರ್ಮವನ್ನು ನಾನು ಸುಲಿಯದೆ ಇರಲಾರೆ. ಹೆಡ್ಡ ಎರಡೆಲೆಯ ಅನ್ನವನ್ನೂ ಉಂಡ. ಚಾಪ್ಪ ಅಲ್ಲಿಂದ ಎದ್ದು ಬೇರೆಡೆಗೆ ಹೋದ. ಕೈಬಾಯಿ ಮುಖಗಳನ್ನು ತೊಳೆದುಕೊಂಡ. ಹೆಡ್ಡ ಮುಖ ತೊಳೆಯಲಿಲ್ಲ. ಕೈ ಬಾಯಿಗಳನ್ನು ಜೋಳಿಗೆಯಲ್ಲೆ ಒರಸಿಕೊಂಡ. ನಾಲ್ಕು ದಿಕ್ಕುಗಳಿಗೂ ಅವನು ನೋಡುತ್ತಿದ್ದ. ಅತ್ತಿತ್ತ ತಿರುಗುತ್ತ ಆಡುತ್ತಲೂ ಇದ್ದ. ಅದನ್ನು ಕಂಡ ಎಲ್ಲರೂ ನಕ್ಕರು. ಆಗ ಮಾದೇಯಮ್ಮ ಕೇಳಿದಳು – ಈ ಹೆಡ್ಡ ಇದೇನು ಮಾಡುತ್ತಿದ್ದಾನೆ? ಅದನ್ನು ಕಂಡಾಚ್ಚೇರಿ ಕೇಳಿ ಹೀಗೆಂದ – ನಾನು ಇದನ್ನೆಲ್ಲ ಮೊದಲೇ ನಿಮಗೆ ಹೇಳಿದ್ದೆನಲ್ಲಮ್ಮ? ಈ ಆಟವನ್ನೆಲ್ಲ ಅವನು ಆಡುವುದು ಹೆದರಿಕೊಂಡ ಕಾರಣದಿಂದಲೇ. ಅವನೋ ಮಹಾ ಹೆದರುಪುಕ್ಕ. ಚೀರು ಅಮ್ಮ ಅವನನ್ನು ಅವರ ಕೋಣೆಯಲ್ಲಿ ಮಂಚದ ಕೆಳಗೆ ಎಲ್ಲಿಯಾದರೂ ಸೇರಿಸಿಕೊಳ್ಳಲಿ ನನ್ನವ್ವ! ಅದಕ್ಕೆ ಕೂಡಲೇ ಮಾದೇಯಮ್ಮ ಎಂದಳು–

ಆ ಹೆಡ್ಡನಿಗೆ ಮುಂಡಗೆ ಗರಿಯ ಚಾಪೆಯನ್ನೂ ಒಂದು ತಲೆದಿಂಬನ್ನೂ ಕೊಟ್ಟುಬಿಡಿ. ಕೂಡಲೇ ಕಂಡಾಚ್ಚೇರಿ ಎಂದ ಬೇಡಪ್ಪ, ಬೇಡಮ್ಮ. ಅವನಿಗೆ ಅದ್ಯಾವುದನ್ನೂ ಕೂಡಬೇಡಿ. ಅವನಿಗೆ ಚಾಪೆಗೀಪೆಗಳಲ್ಲಿ ಮಲಗಿ ಅಭ್ಯಾಸವೇ ಇಲ್ಲ. ಅವನು ಅವನ ಜೋಳಿಗೆಯ ಮೇಲಷ್ಟೇ ಮಲಗುವವನು. ನೀವು ಒಂದು ವೇಳೆ ಚಾಪೆಯಲ್ಲಿ ಮಲಗಿಕೊಳ್ಳಲು ಹೇಳಿದರೂ ಅವನು ಅವನ ಜೋಳಿಗೆಯನ್ನು ಎತ್ತಿಕೊಂಡಲ್ಲದೆ ಹೋಗುವವನಲ್ಲ. ಹೆಡ್ಡನ ಮುಖ ನೋಡುತ್ತಲೆ ಚಾಪ ಹಾಗೆಂದ. ಅವನು ಹೆಡ್ಡನಿಗೆ ಹೇಳಿದ–ಏನಯ್ಯ ಹೆಡ್ಡ? ನೀನು ತಿರುಗಿ ತಿರುಗಿ ಹಾಗೇನು ನೋಡುತ್ತಿ? ಚೀರು ಅಮ್ಮ ಮಲಗುವ ಕೋಣೆಯಲ್ಲಿ ಅವರ ಮಂಚದ ಕೆಳಗೆ ಎಲ್ಲಾದರೂ ಸುರುಟಿಕೋ–ಎಂದು ಹೆಡ್ಡನನ್ನು ಅತ್ತ ದೂಡಿಬಿಟ್ಟ. ಹೆಡ್ಡ ಅಂತೆಯೇ ಪೆದ್ದು ಪೆದ್ದಾಗಿ ಚೀರು ಮಲಗುವ ಮಂಚದ ಕೆಳಗೆ ಹೋಗಿ ಕವುಚಿ/ಬೋರಲಾಗಿ ಸುರುಟಿಕೊಂಡ.

ಎಲ್ಲರೂ ನಿದ್ರಿಸಿದರೆಂದು ಖಾತ್ರಿಯಾದ ಮೇಲೆ ಒದೇನ ತನ್ನ ಜೋಳಿಗೆಯ ಗಂಟುಬಿಚ್ಚಿದ. ನಿದ್ದೆ ಬರಿಸುವ ಮದ್ದನ್ನು ಅದರಿಂದ ತೆಗೆದು ಅಂಗೈಗೆ ಹಾಕಿ ಚೆನ್ನಾಗಿ ತಿಕ್ಕಿದ. ಆ ಮದ್ದಿನ ಪ್ರಭಾವದಿಂದ ಎಲ್ಲರಿಗೂ ಗಾಢನಿದ್ರೆ ಹತ್ತಿತು. ಎಂಟುನೂರು ಮುಡಿ ಭತ್ತ ತುಂಬಿಸಬಲ್ಲ ಮರದ ಕಣಜ(ಮ.ಪತ್ತಾಯ)ವನ್ನು ಸರಿಸಿ ಬಾಗಿಲಿಗೆ ಇರಿಸಿದ. ಹೋಗಿ ಚಾಪ್ಪನನ್ನು ಕರೆದು ಎಬ್ಬಿಸಿದ. ಕಂಡಾಚ್ಚೇರಿ ಚಾಪ್ಪ ಒದೇನನನ್ನು ಕರೆದುಕೊಂಡು ಹೊರಟ. ತಾಯಂಕುಳ (ಕೆಳಗಿನ ಕೆರೆ) ದ ದಡಕ್ಕೆ ತಲಪಿದ ಒದೇನ ಹುಲಿಯ ಹಾಗೆ ನೀರಿಗೆ ನೆಗೆದ. ಸ್ನಾನಮುಗಿಸಿ ಮೇಲೆದ್ದು ಬಂದ. ತೇವಾರಂ ಕಲ್ಲಿನ ಮೇಲೆ ಹೋಗಿ ಕುಳಿತು ದೇವನಮಸ್ಕಾರ, ಜಪಗಳನ್ನು ತೀರಿಸಿದ. ತೇವಾರಂ ಮುಗಿದ ಮೇಲೆ ಮಾಡಬೇಕಾದ ಸ್ನಾನವನ್ನೂ ಮಾಡಿದ. ಒದೇನನ ಅಲಂಕಾರ ಸಾಮಗ್ರಿಗಳನ್ನು ಚಾಪ್ಪ ಅವನಿಗೆ ಒಂದೊಂದಾಗಿ ನೀಡಿದ. ಬಾಳೆಯ ಸೀಳೆಲೆಯಲ್ಲಿ ಕಟ್ಟಕಟ್ಟಿ ತಂದಿದ್ದ ಸುವಾಸನೆಯ ಚಂದನವನ್ನು ತೆಗೆದುಕೊಟ್ಟ. ಚಂದನವನ್ನು ತೆಗೆದುಕೊಂಡ ಒದೇನ ಅದನ್ನು ಹದವಾಗಿ ನೀರಲ್ಲಿ ಕಲಸಿ ಐದು ನಾಯರ್ ನಾಮಗಳನ್ನು ಎಳೆದ. ಕಡತ್ತು ವೈನಾಡಿನ ವಿಶಿಷ್ಟ ನಾಮಗಳನ್ನೂ ಎಳೆದ. ಹಸಿರು ರೇಶ್ಮೆ ಪಂಚೆಯನ್ನು ನೆರಿಗೆ ಹಿಡಿದು ಉಟ್ಟುಕೊಂಡ. ಚೆನ್ನಾಗಿ ಅಲಂಕರಿಸಿಕೊಂಡು ಹೋಗಿ ಕುಂಞಚ್ಚೀರು ಮಲಗಿದ್ದ ಮಂಚದ ಮೇಲೆ ಹೋಗಿ ಕುಳಿತ. ಆಗ ಕಂಡಾಚ್ಚೇರಿ ಚಾಪ್ಪನು ಬಾಳೆಯ ತೋಟಕ್ಕೆ ಹೋಗಿ ಒಂದು ದೊಡ್ಡ ಬಾಳೆಯನ್ನು ಕಡಿದು ಆಳೆತ್ತರದ ಅದರ ಒಂದು ತುಂಡನ್ನು ತಂದು ತಾನು ಮಲಗಿದ್ದ ಚಾಪೆಯಲ್ಲಿರಿಸಿದ. ಬಳಿಕ ಅದರ ಮೇಲೆ ತಾನು ಹೊದೆಯುತ್ತಿದ್ದ ಹೊದಿಕೆಯನ್ನು ಹೊದೆಯಿಸಿದ. ಬಳಿಕ ಹಲಸಿನ ಮರವನ್ನೇರಿ ಕುಳಿತುಕೊಂಡ.

ಕುಂಞಿಚ್ಚೇರು ತಡಬಡಿಸಿ ಎದ್ದಳು – ಕಾವಿಲ್ ಚಾತ್ತೋತ್ತ್‌ನ ನನ್ನ ಹಡೆದವ್ವ! ಇದು ಹೆಡ್ಡನಲ್ಲಮ್ಮ, ಕುಲರಸಿಕ! ನಾನು ಮೊದಲೇ ಹೇಳಿರಲಿಲ್ಲವೆ, ತಚ್ಚೋಳಿಯಲ್ಲಿ ಅಂಥ ಹೆಡ್ಡ ನಿಲ್ಲವೆಂದು? ಕಾಗೆಯಲ್ಲಿ ಗಂಡು ಕಾಗೆ ಇರುತ್ತದೆಯೆ? ಕಾವಿಲ್ ಚಾತ್ತೋತ್ತ್ ಮಾದೇಯಮ್ಮ ಉದ್ಗರಿಸಿದಳು – ಅಯ್ಯೋ ಕಂಡಾಚ್ಚೇರಿ! ನನ್ನನ್ನು ವಂಚಿಸಿಬಿಟ್ಟೆಯಾ? ಎನ್ನುತ್ತ ಮುಂಡೋವು ಗರಿಕತ್ತರಿಸುವ ಕತ್ತಿಯನ್ನೆತ್ತಿಕೊಂಡು ಮಾದೇಯಮ್ಮ ಮುನ್ನುಗ್ಗಿದಳು, ಮಲಗಿದ್ದ ಚಾಪನನ್ನು ತುಂಡರಿಸಿ ಚೆಲ್ಲಿಬಿಡಲು! ಹಾಗೆ ಮುನ್ನುಗ್ಗುತ್ತಿದ್ದ ಮಾದೇಯಮ್ಮನಿಗೆ ಚಾಪ್ಪನೆಂದ–ನನ್ನವ್ವ! ನೀವು ಅಕ್ಕಿಕೊಟ್ಟು ಕೊಂಡುಕೊಂಡ ಚಾಪೆಯಲ್ಲವೇನಮ್ಮ ! ಮಾದೇಯಮ್ಮ ಶಾಪ ಹಾಕಿದಳು – ಗಂಡೂ ಹೆಣ್ಣೂ ಅಲ್ಲದ ಕಂಡಾಚ್ಚೇರಿ! ನನ್ನನ್ನು ವಂಚಿಸಿಬಿಟ್ಟೆ. ನಿನಗೆ ಸಿಡಿಲು ಬಡಿಯಲಿ. ಚಾಪ್ಪನೆಂದ –ನನಗೆ ಯಾಕಮ್ಮ ಸಿಡಿಲು ಬಡಿಯುವುದು? ನೀವು ಮುಂದೆ ಎಂದಾದರೂ ಒಂದು ದಿನ ಗದ್ದೆಹಿತ್ತಿಲುಗಳನ್ನು ಪಾಲುಮಾಡುತ್ತೀರಲ್ಲಮ್ಮ? ಆಗ ನನಗೂ ಅದರಲ್ಲಿ ಒಂದು ಪಾಲು ಕೊಟ್ಟುಬಿಡಿ!!

ಅರಸರೇ! ನಮ್ಮನ್ನು ಕೊಲ್ಲಬೇಡಿ, ಕ್ಷಮಿಸಿರಿ

ತಚ್ಚೋಳಿಯ ಕಣ್ಮಣಿ ಬಾಲ ಒದೇನನಿಗೆ ಕೋಮಕುರುಪ್ಪೆಂಬ ಅಣ್ಣ. ಅವರಿಬ್ಬರಿಗೂ ಪ್ರೀತಿಯ ತಂಗಿ ಕುಂಞಿ ಉಣ್ಣಿಚ್ಚಿರ (ಉಣ್ಣಿಚ್ಚಿರುದೇಯಿ). ಒದೇನನ ಹೆಂಡತಿ ಕಾವಿಲುಂ ಚಾತ್ತೋತ್ತ್ ಕುಂಞಿಚ್ಚೀರು. ಒದೇನನ ಬಂಟ ಕಂಡಾಚ್ಚೇರಿ ಕುಂಞಿಚಾಪ್ಪ. ಇವರೆಲ್ಲ ತಚ್ಚೋಳಿ ಮೇಪ್ಪ ಎಂದು ಹೆಸರಾಂತ ಮನೆಯಲ್ಲಿದ್ದರು. ಒಂದು ದಿನ ಅವರು ಒಂದು ಸುದ್ದಿ ಕೇಳಿದರು – ಚಿರಕ್ಕಲ್ ಅರಮನೆಯ ರಾಜ ತನ್ನ ದಿವಾನನನ್ನೂ ಜತೆಗೆ ಕರೆದುಕೊಂಡು ಪಲ್ಲಕ್ಕಿಯನ್ನೇರಿ ಒಮ್ಮೆ ಸವಾರಿ ಹೊರಟ. ಬಿಚ್ಚುಗತ್ತಿಯವರೂ ಕುಂತಧಾರಿಗಳೂ ಅಂಗರಕ್ಷಕರೂ ಅವನ ಜತೆಗೆ ಇದ್ದಾರೆ. ಒಂದಷ್ಟು ಜನ ಮುಂದೆ, ಒಂದಷ್ಟು ಜನ ಹಿಂದೆ. ಮುಂದಿನ ಜನ ಮುಂದಾದರು, ಹಿಂದಿನವರು ಹಿಂದಾದರು. ಮೆರವಣಿಗೆಯಲ್ಲಿ ಹೋಗುತ್ತಿದ್ದ ಅರಸನಿಗೆ ರಸ್ತೆಯ ಇಕ್ಕೆಲಗಳಲ್ಲೂ ಎದುರಾದ ಮಹಾಜನರು ಗೌರವ ಸಲ್ಲಿಸಿ ಸರಿದು ನಿಲ್ಲುತ್ತಿದ್ದರು. ಅವರನ್ನೆಲ್ಲ ಅರಸ ನೋಡುತ್ತಿದ್ದ. ನೋಡುತ್ತಿದ್ದಂತೆ ನಾಲ್ವರು ಜೋನಕರು ಮತು ಅವರ ಸಂಗಡಿಗರು ಕುಳಿತುಕೊಂಡು ಇಸ್ಪೀಟು ಆಡುತ್ತಿದ್ದಾರೆ. ಜೋನಕನ ಅಂಗಡಿಯ 'ಜಗಲಿ'ಯಲ್ಲಿ ಹಾಗೆ ಅವರು ಆಡುತ್ತಿದ್ದಾಗಲೇ ಮುಂದಿನಿಂದ ಅರಸು ಹಾದುಹೋದುದು. ಬಿಚ್ಚುಗತ್ತಿಯವರು, ಕುಂತಧಾರಿಗಳು, ಅಂಗರಕ್ಷಕರು, ಅರಸ – ಯಾರನ್ನು ಕಂಡರೂ ಆಟಗಾರರು ಅಳುಕಲಿಲ್ಲ, ಚಾಚಿದ್ದ ಕಾಲುಗಳನ್ನು ಮಡಚಲಿಲ್ಲ, ಕುಳಿತಲ್ಲಿಂದ ಏಳಲಿಲ್ಲ. ಶಿಷ್ಟಾಚಾರದ ಗೌರವವನ್ನಂತೂ ತೋರಲೇ ಇಲ್ಲ. ಇದನ್ನು ಗಮನಿಸಿದ ಅರಸನೆಂದ – ದಿವಾನರೇ, ನಾನು ಇನ್ನು ಅರಮನೆಗೆ ಮರಳುವುದಿಲ್ಲ. ಹಿಂದೆಲ್ಲ ಚಿರಕ್ಕಲ್ ಅರಮನೆಯಿಂದ ಅರಸರ ಸವಾರಿ ಹೋಗುತ್ತಿದ್ದಾಗ ಎಲ್ಲ ಜನರೂ ಗೌರವಿಸುತ್ತಿದ್ದರು. ಜೋನಕರು ಕೂಡ ಅರಸು ಸವಾರಿಗೆ ಗೌರವ ಕೊಡುತ್ತಿದ್ದರು. ಇಂದಾದರೋ ಈ ನಾಲ್ಕು ಜನ ಕುಳಿತು

ಕೊಂಡು ಇಸ್ಪೀಟು ಆಡುತ್ತಿದ್ದಾರೆ. ಅಂಗಡಿಯ 'ಜಗಲಿ'ಯಲ್ಲಿ ಕುಳಿತು ಇಸ್ಪೀಟು ಆಡುತ್ತ ನನ್ನನ್ನು ಕಣ್ಣಾರೆ ಕಂಡೂ ಅವರು ಯಾವುದೇ ಮರ್ಯಾದೆ ಸಲ್ಲಿಸಿಲ್ಲ. ಇದಕ್ಕೆ ಏನೆನ್ನಲಿ? ಇಂಥ ನಡತೆಗಳಿಗೆ ತಕ್ಕಶಾಸ್ತಿ ಮಾಡದೆ ಹೋದರೆ ಮುಂದೆ ಅವರು ಒಂದಿಷ್ಟೂ ಲೆಕ್ಕಿಸಲಾರರು. ಅರಮನೆಯ ಕುರಿತಾದ ಗೌರವ ಏನೇನೂ ಉಳಿಯದೆ ಹೋದೀತು. ಅರಸರನ್ನು ಪ್ರತ್ಯಕ್ಷ ಕಂಡರೂ ಅವರು ಎಳ್ಳಿನಷ್ಟು ಬೆಲೆಕೊಡಲಾರರು. ಇನ್ನೂ ಒಂದು ವಿಚಾರವಿದೆ, ದಿವಾನರೇ! ನನ್ನನ್ನು ಅವರು ಸ್ವಲ್ಪವಾದರೂ ಗೌರವಿಸಿದ್ದರೆ ನಾನು ಏನೂ ಹೇಳುತ್ತಿರಲಿಲ್ಲ. ಆದುದರಿಂದ ಅವರಲ್ಲಿ ವಿಚಾರಿಸಿರಿ. ಮರ್ಯಾದೆ ತೋರಿಸದ ಆ ಜೋನಕರನ್ನು ಕಟ್ಟಿ ಎಳೆದುಕೊಂಡು ಬನ್ನಿ. ಅರಮನೆಯ ಹೆಬ್ಬಾಗಿಲ ಬಳಿ ಅವರನ್ನು ಕಟ್ಟಿ ಎಳೆದಾಡಬೇಕು. ಚಿರಕ್ಕಲ್‌ನಲ್ಲಿ ಒಂದು ಅರಮನೆ ಇದೆಯೆಂದು ಅವರೂ ತಿಳಿಯುವಂತಾಗಬೇಕು. ಅಲ್ಲಿಯ ಅರಸರ ಬಗ್ಗೆ ಅವರು ತಿಳಿದುಕೊಳ್ಳಲಿ. ಹಿಂದಿನಿಂದ ನಡೆದುಬಂದ ಶಿಷ್ಟಾಚಾರಗಳನ್ನು ನಾವೂ ಹೇಳಬೇಕು, ಅವರೂ ತಿಳಿದು ಕೊಳ್ಳಬೇಕು. ಹಾಗಾಗಿ ನೀವು ಇಂದೇ ಹೋಗಿ ವಿಚಾರಿಸಿರಿ. ನಮ್ಮೆಲ್ಲ ಅಂಗರಕ್ಷಕರನ್ನು ಕರೆದುಕೊಳ್ಳಿ. ಜೋನಕರನ್ನು ಕಟ್ಟಿ ಎಳೆದುಕೊಂಡು ಅರಮನೆಯ ಹೆಬ್ಬಾಗಿಲ ಬಳಿ ತನ್ನಿ. ಆ ಮಾತುಗಳನ್ನು ಕೇಳಿ ಚಿರಕ್ಕಲ್ ಅರಸನ ದಿವಾನ ಹೀಗೆಂದ– ಒಂದು ವಿಚಾರವನ್ನು ಅರಸರು ಕೇಳಬೇಕು. ಹಿಂದೆ ಇದ್ದ ಮುಜುರೆ ಆಚಾರಗಳು ಯಾವುದನ್ನೂ ಇಂದಿನವರು ಯಾರೂ ಮಾಡುತ್ತಿಲ್ಲ. ಈಗ ಅವರಲ್ಲಿ ಹೋಗಿ ನಾವು ಮಾತನಾಡಿದರೆ ಅವರು ನಮ್ಮನ್ನು ಒಂದಿಷ್ಟೂ ಲೆಕ್ಕಿಸರು. ಅವರು ಹೇಳುವ ಮಾತು ಕೇಳಿದರೆ ನಮ್ಮ ಗಂಟಲು ಕಟ್ಟಿ ಹೋದೀತು. ಎಲ್ಲರನ್ನೂ ಹುಟ್ಟಿಸಿದ್ದು ದೇವರು. ಅವರಲ್ಲಿ ಯಾವುದೇ ವ್ಯತ್ಯಾಸವಿಲ್ಲವಂತೆ, ಸ್ವಾಮೀ. ಹರಕು ಗುಡಿಸಲಲ್ಲೂ ಸೂರ್ಯ ಪ್ರಕಾಶಿಸುತ್ತಾನೆ, ಅರಮನೆ ಯಲ್ಲೂ ಅವನು ಪ್ರಕಾಶಿಸುತ್ತಾನೆ. ಎರಡು ಕಡೆಯೂ ಒಂದು ರೀತಿ ಪ್ರಕಾಶಿಸುತ್ತಾನಲ್ಲವೆ? ದೇವರಿಗೆ ಭೇದವೆಂಬುದಿಲ್ಲ. ಅರಮನೆಯೂ ಗುಡಿಸಲೂ ಒಂದೇ ಹಾಗೆ. ಮಳೆಯೂ ಹಾಗೆಯೇ ತಾನೆ? ಸಂಗತಿ ಹೀಗಿರಲು ಅರಸನು ಹೋಗುವಾಗ ನಾವು ಯಾಕೆ ದಾರಿಯಿಂದ ಸರಿದು ನಿಲ್ಲಬೇಕು? – ಹೀಗೆಲ್ಲ ಅವರು ಕೇಳುತ್ತಾರೆ. ದಿವಾನನ ಈ ಮಾತುಗಳನ್ನು ಕೇಳಿ ಅರಸ ಅವನಿಗೆಂದ – ಒಂದು ಮಾತು ಕೇಳಯ್ಯ ನೀನು! ಅವರು ಹೇಳುವ ಮಾತುಗಳನ್ನು ನಾವು ಕೇಳುವುದಿದ್ದರೆ ತಾನೆ ಈ ಎಲ್ಲ ವಿಚಾರ? ಅವರ ಮಾತುಗಳನ್ನು ಕೇಳುವುದು ಬೇಡ. ಅವರನ್ನು ಹೋಗಿ ಹಿಡಿಯಬೇಕು. ಆಮೇಲೆ ಅವರಲ್ಲಿ ಕೇಳಬೇಕು – ಚಿರಕ್ಕಲ್‌ನಲ್ಲಿ ಆಳುತ್ತಿರುವ ಅರಸರನ್ನು ಕಣ್ಣಾರೆ ಕಂಡ ನೀವು ಅವರಿಗೆ ಮುಜುರೆ ಯಾಕೆ ಸಲ್ಲಿಸಿಲ್ಲ? ಅವರು ಆಗ ಏನೇ ಹೇಳಿದರೂ ಕೇಳದೆ ಅವರನ್ನು ಹಿಡಿದು ಅಲ್ಲಿಗೆ ತರಬೇಕು.

ಅರಸನು ಅರಮನೆಗೆ ಮರಳಿದ ಬಳಿಕ ದಿವಾನ ಅಲ್ಲಿಂದ ಹೊರಟು ಸಮರ್ಥರಾದ ನೂರೊಂದು ಕುಂತಧಾರಿಗಳನ್ನೂ ಕೆಲವು ಜನ ಖಡ್ಗಧಾರಿಗಳನ್ನೂ ಸುಡುಬಾಣಗಳನ್ನು ಎಸೆಯಬಲ್ಲ ಚತುರ ಬಿಲ್ಗಾರರನ್ನೂ ಇನ್ನೂ ಹಲವರನ್ನು ಜತೆಗೂಡಿಸಿಕೊಂಡು ಹೊರಟ. ತಾನೂ ಅರಸನೂ ಕಣ್ಣಾರೆ ಕಂಡಿದ್ದ ಅಂಗಡಿಯ ಬಳಿ ಹೋದ. ಅಲ್ಲಿ ನಾಲ್ಕು ಜನ ಇನ್ನೂ ಆಡುತ್ತಿದ್ದಾರೆ! ಒಂದಷ್ಟು ಜನ ಅದನ್ನು ನೋಡುವುದಕ್ಕೂ ನೆರೆದಿದ್ದಾರೆ. ಆಡುವವರು ಆಟ ಮುಂದುವರಿಸಿದ್ದರು. ಅವರೆಲ್ಲ ಚಿರಕ್ಕಲ್ ಅರಸನ ದಿವಾನನೂ ನೂರೊಂದು ಕುಂತಧಾರಿಗಳೂ ಹಲವು ಖಡ್ಗಧಾರಿಗಳೂ ಸುಡುಬಾಣ ಎಸೆಯಬಲ್ಲ ಬಿಲ್ಗಾರರೂ ಇನ್ನೂ ಒಂದಷ್ಟು ಜನರೂ ತಮ್ಮತ್ತ ಬರುತ್ತಿರುವುದನ್ನು ಕಣ್ಣಾರೆ ಕಂಡರು. ಅದನ್ನು ಕಂಡ ಜೋನಕರು ಹೀಗೆಂದರು – ಏನಯ್ಯಾ ಅರಮನೆಯ ದಿವಾನ? ಎಲ್ಲಿಗೆ ಹೋಗುತ್ತಾ ಇದ್ದಿ? ಈ ಕುಂತಧಾರಿಗಳೂ ಖಡ್ಗಧಾರಿಗಳೂ ಈ ಸುಡುಬಾಣ ಬಿಡುವ ಬಿಲ್ಗಾರರೂ ಇನ್ನೂ ಒಂದಿಷ್ಟು ಜನ ಒಟ್ಟಾಗಿ ಎಲ್ಲಿಗೆ ಹೋಗು ತ್ತಿದ್ದೀರಿ? ಅದಕ್ಕೆ ದಿವಾನನೆಂದ – ಒಳ್ಳೇದು, ಒಳ್ಳೇದು ಜೋನಕರೇ. ಚಿರಕ್ಕಲ್‌ನ ಅರಸರ ಸವಾರಿ ಇಲ್ಲೆ ಬಂದುದನ್ನು ಕಣ್ಣಾರೆ ಕಂಡೂ ನೀವು ಅವರಿಗೆ ಮುಜುರೆ ಸಲ್ಲಿಸಿ ತೋರಬೇಕಾದ ಗೌರವ ಕೂಡ ತೋರಿಸಿಲ್ಲವಲ್ಲ! ಆದ್ದರಿಂದಲೇ ನಾವು ಇಲ್ಲಿ ಬಂದುದು. ನೀವು ಈಗಲೆ ಅರಮನೆಗೆ ಬರಬೇಕು. ಅರಸರಲ್ಲಿ ನಿವೇದಿಸಿಕೊಳ್ಳಬೇಕು – ನಮಗೆ ಅರಸರು ಕ್ಷಮೆ ನೀಡಬೇಕು. ನಾವು ಬಡ ಜೋನಕರು, ಏನನ್ನೂ ತಿಳಿದವರಲ್ಲ. ನಮ್ಮನ್ನು ಮಾಫಿ ಮಾಡಬೇಕು. ಹಾಗೆ ನೀವು ಹೇಳದಿದ್ದರೆ ನಿಮ್ಮನ್ನು ಜೀವ ಸಹಿತ ಬಿಡಲಿಕ್ಕಿಲ್ಲ. ಆ ಮಾತುಗಳನ್ನು ಕೇಳಿದ ಜೋನಕರು ಏರುದನಿಯಲ್ಲೆಂದರು – ಏನಯ್ಯಾ ಏನಯ್ಯಾ ದಿವಾನ? ನಾವು ನಮ್ಮ ಮನೆಯಲ್ಲಿ ಕುಳಿತು ಕೊಂಡು ಆಡಬಾರದೆ? ಅರಮನೆಯ ಅರಸು ಹೋಗುವಾಗ ನಾವು ಹಾಗೆ ಮುಜುರೆ ಮಾಡುವು ದಿಲ್ಲ, ಗೌರವದ ಆಚಾರಗಳನ್ನು ಮಾಡುವುದಿಲ್ಲ. ನಾವು ಈಗ ಅರಮನೆಗೆ ಹೋಗಬೇಕಾದ ಅಗತ್ಯವೂ ಇಲ್ಲ, ನಾವು ಹೋಗುವುದೂ ಇಲ್ಲ. ಚಿರಕ್ಕಲ್ಲನ್ನು ಆಳುತ್ತಿರುವ ಅರಸನಿಗೆ ನಮ್ಮನ್ನು ಕಾಣಬೇಕಾದರೆ ಅರಸನ ಸವಾರಿ ಇಲ್ಲಿಗೇ ಬರಲಿ. ನಾವು ಅರಮನೆಗೆ ಹೋಗುವವರಲ್ಲ. ಅದನ್ನು ಕೇಳಿದ ದಿವಾನ ಕೂಗಿ ಹೇಳಿದ – ಒಂದು ವಿಚಾರ ತಿಳಕೊಳ್ಳಿ ಜೋನಕರೇ, ನೀವಾಗಿ ನಮ್ಮ ಜತೆ ಬರುವುದಿದ್ದರೆ ನೀವು ಏನೂ ಹೆದರ ಬೇಕಾಗಿಲ್ಲ. ಇಲ್ಲವಾದರೆ....... ಸರಿಯಾಗಿ ಕೇಳಿಸಿಕೊಳ್ಳಿ – ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಅದನ್ನು ಕೇಳಿದ ಜೋನಕರು ಸಿಟ್ಟುಗೊಂಡರು. ಅವರು ಮೇಲೆದ್ದರು. ಮೇಲೆದ್ದು ಬಂದು ದಿವಾನನನ್ನು ಹಿಡಿದರು. ಅವರೆಂದರು – ಏನೆಲೋ ಏನೆಲೋ ದಿವಾನ! ನಿನ್ನನ್ನೂ ನಿನ್ನ ಕತ್ತಿಯವರನ್ನೂ ಬಾಳೆದಿಂಡು ಕೊಚ್ಚಿಬಿಡುವ ಹಾಗೆ ನಾವು ಕೊಚ್ಚಿಬಿಟ್ಟೇವು.

ಆಗ ಕುಂತದವರೂ ಕತ್ತಿಯವರೂ ಜತೆಯಲ್ಲಿದ್ದವರೂ ಅವರನ್ನು ಹೊಡೆದರು. ಜೋನಕರೆಲ್ಲ ಒಂದುಗೂಡಿದರು. ಹಾಗೆ ಜೋನಕರಿಗೂ ಚಿರಕ್ಕಲ್ ಅರಸನ ಆಳುಗಳಿಗೂ ಹೊಡೆದಾಟವಾಗಿ ಅರಸನ ದಿವಾನ, ಅವನ ಜತೆಗಿದ್ದ ನೂರೊಂದು ಕುಂತಗಾರರು, ಖಡ್ಗಧಾರಿ ಗಳು, ಇತರ – ಎಲ್ಲರೂ ಹೊಡೆದಾಟದಲ್ಲಿ ಸೋತು ಸುಣ್ಣವಾದರು. ಅಷ್ಟರಲ್ಲಿ ಮುಸ್ಸಂಜೆ ಯಾಯಿತು. ಅರಸನ ಕುಂತಗಾರರೂ ಖಡ್ಗಧಾರಿಗಳೂ ಮತ್ತು ಅನೇಕರು ಸತ್ತುಬಿದ್ದಿದ್ದರು. ಅದನ್ನು ಕಂಡ ದಿವಾನ ಹೇಳಿದ – ಇನ್ನೂ ಇಲ್ಲಿ ನಿಂತರೆ ನಮ್ಮನ್ನೂ ಜೋನಕರು ಕೊಂದಾರು. ಹಾಗಾಗಿ ನಾವು ಇಲ್ಲಿಂದ ಹೋಗಿಬಿಡೋಣ. ಹಾಗೆ ಹೇಳುತ್ತ ದಿವಾನನೂ ಬಿಲ್ಗಾರರೂ ಕುಂತಗಾರರೂ ಬಾಕಿ ಉಳಿದ ಖಡ್ಗಧಾರಿಗಳೂ ಓಡಿಹೋದರು. ಹೀಗೆ ಅವರು ಓಡುತ್ತ ಚಿರಕ್ಕಲ್ ಅರಮನೆ ಯನ್ನು ಪ್ರವೇಶಿಸಿದರು. ಅರಸ ವರ್ತಮಾನವನ್ನೆಲ್ಲ ಕೇಳಿ ತಿಳಿದ. ದಿವಾನನೆಂದ – ಅರಸರೇ, ಒಂದು ವಿಚಾರವಿದೆ, ಆ ಜೋನಕರನ್ನು ಕಟ್ಟಿ ಎಳೆದು ತರುವುದಕ್ಕಾಗಿ ನಾವು ಅತ್ತಹೋದೆವು. ಅವರು ಒಂದಿಷ್ಟೂ ನಮ್ಮನ್ನು ಲೆಕ್ಕಿಸಲಿಲ್ಲ. ಅವರು ನೂರರಷ್ಟು ಜನವಿದ್ದಾರೆ. ಬೇರೆಯೂ ಒಂದಷ್ಟು ಜನ ಅವರ ಪೈಕಿಯವರಿದ್ದಾರೆ. ಅವರು ಹೇಳಿದ ಮಾತು ಕೇಳಿಸಿಕೊಂಡರೆ ಅರಮನೆ ಯಲ್ಲಿರುವುದೇ ಅಪಮಾನ. ಚಿರಕ್ಕಲ್ ಅರಸರಿಗೆ ಅವರು ಒಂದಿಷ್ಟೂ ಬೆಲೆಕೊಡುವುದಿಲ್ಲವಂತೆ. ಅವರು ಅರಸರಿಗೆ ಮುಜುರೆ ಸಲ್ಲಿಸುವುದಿಲ್ಲ. ಅರಸರೇ! ಅವರು ಹೇಳಿದ ಮಾತನ್ನು ಕೇಳಿದರೆ ಯಾರೂ ಪ್ರಾಣವನ್ನು ಕೂಡಾ ಇಟ್ಟುಕೊಳ್ಳುವುದಿಲ್ಲ. ಅವರಿಗೆ ಇಂದು ಯಾರೂ ಎದುರಿಲ್ಲ. ನಮ್ಮ ಖಡ್ಗಧಾರಿಗಳು ಸಮರ್ಥರೇ ಇದ್ದಾರೆ. ಕುಂತದವರೂ ಅಷ್ಟೆ. ಅವರು ಸುಮಾರು ಐವತ್ತು ಜನರಿರಬಹುದು – ಅವರು ನಮ್ಮವರನ್ನು ಕಡಿದು ಕೊಂದುಬಿಟ್ಟರು. ಉಳಿದ ಕುಂತದವರು ಮತ್ತು ಖಡ್ಗಧಾರಿಗಳು ಎಲ್ಲರೂ ಹೆದರಿ ಓಡಿದರು. ನಾವು ಇತ್ತ ಓಡಿ ಬಾರದಿರುತ್ತಿದ್ದರೆ, ನೀವು ಗಮನಿಸ ಬೇಕು ಅರಸರೇ, ನಮ್ಮನ್ನೂ ಅವರು ಬಾಕಿಮಾಡುತ್ತಿರಲಿಲ್ಲ. ಆದುದರಿಂದಲೇ ನಾವು ಅರಮನೆಗೆ ಓಡಿಬಂದುದು.

ಆ ಮಾತುಗಳನ್ನು ಕೇಳಿದ ಅರಸನ ಕಣ್ಣುಗಳಲ್ಲಿ ರಕ್ತ ಕದಡಿತು. ಆತ ಬೆವರಿನಿಂದ ಒದ್ದೆಯಾದ. ಆತನ ಸಿರಿಮೊಗ ಬಾಡಿ ಕಪ್ಪಿಟ್ಟಿತು. ಕೈಕಾಲುಗಳು ನಡುಗಲಾರಂಭಿಸಿದುವು. ಆತ ಹೇಳಿದ – ಇದೆಂಥ ಕೆಲಸವಾಯಿತು ಭಗವಂತ! ಇಂಥ ಜೋನಕರನ್ನು ಇರಿಸಿ ಕೊಂಡರೆ ಅರಮನೆಯ ಮರ್ಯಾದೆಯೇ ಹರಾಜಾದೀತು. ಆಗ ದಿವಾನನೆಂದ – ಅದಕ್ಕೊಂದು ಪರಿಹಾರವಿದೆ ಒಡೆಯರೆ! ತಚ್ಚೋಳಿ ಮನೆಯ ಒದೇನನಿಗೆ ತಾವು ಕರೆ ಕಳುಹಿಸಿರಿ. ಒಂದು ಊರನ್ನೇ ಕೊಚ್ಚಿ ಕೆಡಹಲು ಅವನು ಸಮರ್ಥ. ಅವನು ಇಲ್ಲಿಗೆ ಬಂದರೆ ಎಲ್ಲ ಸರಿಹೋದೀತು. ಹಾಗಾಗಿ ಇಂದೇ ಅವನನ್ನು ಬರಮಾಡಿರಿ, ಅರಸರೆ.

ಆ ಮಾತುಗಳನ್ನು ಕೇಳಿದ ಅರಸನೆಂದ – ಅರಮನೆಯಲ್ಲಿರುವ ಕುಟ್ಟಿಭಟ್ಟನನ್ನು ಈಗಲೇ ಇಲ್ಲಿಗೆ ಬರಹೇಳಿರಿ. ಅದನ್ನು ತಿಳಿದ ಕುಟ್ಟಿಭಟ್ಟ ಕೂಡಲೆ ಅಲ್ಲಿಗೆ ಬಂದ. ಅರಸನಿಗೆ ಗೌರವ ಸಲ್ಲಿಸಿ ನಿಂತುಕೊಂಡ. ಅರಸನಲ್ಲಿ ಕೇಳಿದ – ಯಾತಕ್ಕೆ, ಯಾತಕ್ಕೆ ಕರೆಸಿದಿರಿ ಅರಸರೆ? ಅದಕ್ಕೆ ಅರಸನೆಂದ – ಒಂದು ವಿಚಾರ ಕೇಳಿ ಕುಟ್ಟಿಭಟ್ಟರೆ. ನಾನೊಂದು ಓಲೆಯನ್ನು ಕೊಡುತ್ತೇನೆ. ನೀವು ಶೀಘ್ರವಾಗಿ ಹೋಗಿ ಅದನ್ನು ತಚ್ಚೋಳಿ ಮನೆಯ ಒದೇನನಿಗೆ ತಲಪಿಸಿ ಬರಬೇಕು. ಅರಸ ದಿವಾನನಿಗೆಂದ – ಒಂದು ವಿಚಾರವಿದೆ ದಿವಾನರೆ! ಕಂತ ಓಲೆಗಳನ್ನು ತೆಗೆದುಕೊಂಡು ಬನ್ನಿ. ಅವನು ಕೂಡಲೆ ಅವನ್ನು ತಂದ. ಓಲೆಗಳನ್ನು ಕೈಯಳತೆಗೆ ಅಳವಡಿಸಿಕೊಂಡು ಅರಸ ಓಲೆ ಬರೆದ – ತಚ್ಚೋಳಿ ಮನೆಯ ಒದೇನ. ಈ ಓಲೆ ಕಂಡಾಕ್ಷಣ ನೀನು ಅರಮನೆಗೆ ಬರಬೇಕು. ಸಂಗತಿಗಳನ್ನೆಲ್ಲ ಮುಖತಃ ಹೇಳುತ್ತೇನೆ. ಓಲೆಯನ್ನು ಕುಟ್ಟಿಭಟ್ಟನ ಕೈಗೆ ಕೊಟ್ಟು ಕಳುಹಿಸಿದ. ಅರಸನ ಓಲೆಯನ್ನು ಮರ್ಯಾದೆಯಂತೆ ತೆಗೆದುಕೊಂಡು ಕುಟ್ಟಿಭಟ್ಟ ನಡೆಯುತ್ತಲೂ ಓಡುತ್ತಲೂ ಹೋಗಿ ತಚ್ಚೋಳಿ ಮನೆಗೆ ತಲಪಿದ. ಅವನು ಹಾಗೆ ಓಲೆಯನ್ನು ಒಯ್ಯುತ್ತಿದ್ದ ಸಂದರ್ಭದಲ್ಲಿ ಜೋನಕರು ಕೂಗಿ ಹೇಳಿದರು – ಎಲ್ಲಿಗೆ ಹೋಗುತ್ತಿದ್ದೀರಿ ಭಟ್ಟರೇ? ಚಿರಕ್ಕಲ್ ಅರಮನೆಯ ಅರಸನಂತೆ! ಅವನೊಬ್ಬ ಗಂಡುಸೇ, ಕುಟ್ಟಿಭಟ್ಟರೇ? ನಾಲ್ಕು ಜನ ನಮ್ಮವರನ್ನು ಹಿಡಿಯುವುದಕ್ಕೋಸ್ಕರ ನೂರೊಂದು ಕುಂತಧಾರಿಗಳನ್ನೂ ಖಡ್ಗಧಾರಿಗಳನ್ನೂ ಸುಡುಬಾಣಬಿಡುವ ಬಿಲ್ಗಾರರನ್ನೂ ಇನ್ನೂ ಒಂದಷ್ಟು ಜನರನ್ನು ಅವನ ದಿವಾನ ಕರೆದುಕೊಂಡು ಬಂದ. ಹತ್ತೈವತ್ತು ಜನರನ್ನು ನಾವು ಕಡಿದುಕೊಂದೆವು. ಬಾಕಿಯಾದ ಸೈನಿಕರು ಮತ್ತು ಅವರ ಜತೆಗಾರರೂ ಅರಸನ ಬಳಿ ಓಡಿಹೋದರಲ್ಲ? ಮತ್ತೆ ಅರಸ ಬದುಕುವುದು ಯಾಕೆ ಭಟ್ಟರೇ? ನೀವು ಹೋಗಿ ಅರಸನಿಗೆ ಅದನ್ನೆಲ್ಲ ಹೇಳಬೇಕು. ನೀವು ಅರಮನೆಯಲ್ಲಿ ಇನ್ನು ಒಂದು ಕ್ಷಣವೂ ನಿಲ್ಲಬಾರದು. ಇದನ್ನು ಕೇಳಿದ ಕುಟ್ಟಿಭಟ್ಟ ಏನನ್ನೂ ಹೇಳದೆ ಹೋದ. ಓಡುತ್ತ ಹೋದ ಕುಟ್ಟಿಭಟ್ಟ ತಚ್ಚೋಳಿ ಮೇಪ್ಪಕ್ಕೆ ತಲಪಿದ. ಒದೇನ ಚಾವಡಿಯಲ್ಲಿ ನಿಂತಿದ್ದ. ಕುಟ್ಟಿಭಟ್ಟ ಅರಸೋಲೆಯನ್ನು ತೆಗೆದು ಅವನಿಗೆ ಕೊಟ್ಟ. ಮರ್ಯಾದೆಯಂತೆ ಒದೇನ ಅರಸೋಲೆಯನ್ನು ಪಡೆದುಕೊಂಡ. ಎರಡು ಕೈಗಳಿಂದಲೂ ಅದನ್ನು ಸ್ವೀಕರಿಸಿದ. ಓಲೆಯನ್ನು ತೆಗೆದು ಓದಿಕೊಂಡು ಒದೇನ ಹೀಗೆಂದ – ಹೇಳಿ ಭಟ್ಟರೇ! ಏನೂ ಹಿಂಜರಿಯಬೇಡಿ. ಇರುವ ವಿಚಾರವನ್ನು ತಿಳಿಸಿ. ಆ ಮಾತು ಕೇಳಿದ ಕುಟ್ಟಿಭಟ್ಟ ನಡೆದ ಎಲ್ಲವನ್ನೂ ಸಂಕ್ಷಿಪ್ತವಾಗಿ ವಿವರಿಸಿದ. ಅರಸ ಓಲೆಕೊಟ್ಟು ಕಳಿಸಿದ್ದನ್ನೂ ವಿವರಿಸಿ ನೀನು ಕೂಡಲೇ ಹೊರಟು ಬರಬೇಕು ಎಂದ. ಆ ಮಾತುಗಳನ್ನು ಕೇಳಿ ಒದೇನನೆಂದ – ನೀವು ಒಂದು ಕೆಲಸ ಮಾಡಿ ಭಟ್ಟರೇ, ನಾಳೆ ಮುಂಜಾನೆಯ ಹೊತ್ತಿಗಾಗುವಾಗ ನಾನು ಅರಮನೆಗೆ ತಲಪುವವನಿದ್ದೇನೆಂದು ಅರಸರಿಗೆ ಹೋಗಿ ತಿಳಿಸಿ. ಕುಟ್ಟಿಭಟ್ಟ

ಹೊರಟು ಹೋದ. ಬೇಗ ಬೇಗನೆ ನಡೆಯುತ್ತಲೂ ಓಡುತ್ತಲೂ ಅವನು ಅರಮನೆಗೆ ತಲಪಿದ. ಹೋದ ವಿಚಾರವೇನಾಯಿತೆಂದು ಅರಸ ವಿಚಾರಿಸಿದ. ಅದಕ್ಕೆ ಕುಟ್ಟಿಭಟ್ಟನೆಂದ – ಒಂದು ಸಂಗತಿ ನಡೆಯಿತು, ಅರಸರೇ! ನಾನು ನಿಮ್ಮ ಓಲೆಯನ್ನು ತೆಗೆದುಕೊಂಡು ತಚ್ಚೋಳಿಗೆ ಹೋಗುತ್ತಿರುವಾಗ ಆ ಜೋನಕರು ಹೇಳುತ್ತಿದ್ದರು : ಚಿರಕ್ಕಲ್ ಅರಮನೆ ಯಲ್ಲಿರುವ ಅರಸರು ಕೋಮಣ (ಕೌಪೀನ) ಕಟ್ಟುವುದು ಉಂಟೇ? ನಾಲ್ಕರಷ್ಟು ಜನರನ್ನು ಹಿಡಿಯಲು ಅವನು ನೂರಾರು ಕುಂತಧಾರಿಗಳನ್ನೂ ಖಡ್ಗಧಾರಿಗಳನ್ನೂ ಬಿಲ್ಗಾರರನ್ನೂ ದಿವಾನನ ಜತೆ ಕಳಿಸಿದನಲ್ಲ? ಆದರೂ ನಮ್ಮವರನ್ನು ಕೊಲ್ಲಲಾಗಲಿಲ್ಲ, ಬದಲಾಗಿ ಐವತ್ತರಷ್ಟು ಸೈನಿಕರೇ ಸತ್ತು ಉಳಿದವರು ಕಾಲಿಗೆ ಬುದ್ಧಿ ಹೇಳಿದರಲ್ಲ? ಇನ್ನು ಅರಸ ಬದುಕುವುದು ಯಾಕೆ? ಈ ಮಾತುಗಳನ್ನು ಕೇಳಿದ ಅರಸನ ಎದೆ ಕರಟಿತು. ಬಳಿಕ ಭಟ್ಟನೆಂದ – ತಚ್ಚೋಳಿ ಒದೇನ ನಾಳೆ ಮುಂಜಾನೆ ಹೊತ್ತಿಗೆ ಇಲ್ಲಿ ಇರುತ್ತಾನಂತೆ. ಈ ವಿಚಾರ ತಿಳಿದ ಅರಸ ಪ್ರಸನ್ನನಾದ.

ಮರುದಿನ ಮುಂಜಾನೆ ಹೊತ್ತಿಗೆ ತಚ್ಚೋಳಿ ಒದೇನ ಒಲವನ್ನೂರ್ ಕಾವಿನ ಕೆರೆಗೆ ಹೋದ. ಚೆನ್ನಾಗಿ ಮುಳುಗಿ ಸ್ನಾನ ಮಾಡಿದ. ಶ್ರೀಗಂಧವನ್ನು ಅರೆದು ಹಣೆಗೂ ಎದೆಗೂ ಹಚ್ಚಿಕೊಂಡ. ಸಿಂಧೂರವನ್ನು ತೆಗೆದುಕೊಂಡು ಹಣೆಗೆ ಬೊಟ್ಟಿಟ್ಟ. ಒಲವನ್ನೂರ್ ಕಾವಿನ ಒಳಹೋದ. ಕಾವಿನ ಭಗವತಿಗೆ ಹರಕೆ ಹೇಳಿದ. ಅಲ್ಲಿಂದ ಹೊರಟು ಮನೆಗೆ ತಲಪಿದ. ಚೆನ್ನಾಗಿ ಕಾಸಿತಣಿಸಿದ ಹಾಲನ್ನು ಗಿಂಡಿಯಲ್ಲಿ ಹಾಕಿ ಕಾವಿಲ್ ಚಾತ್ತೋತ್ತ್ ಕುಂಞಿಚೀರು (ಒದೇನನ ಮಡದಿ) ನೀಡಿದಳು. ಕುಂಞಿಚೀರು ನೀಡಿದ ಹಾಲನ್ನು ಒದೇನ ಕುಡಿದ. ಹಾಲು ಕುಡಿದು ಮುಖತೊಳೆದುಕೊಂಡು ಕಳರಿಯ ಬಾಗಿಲು ತೆಗೆದ. ಅಲ್ಲಿ ಇಪ್ಪತ್ತೆರಡರಷ್ಟು ಉರ್ಮಿಗಳಿವೆ. ಅವುಗಳಲ್ಲಿ ಪಳಪಳ ಹೊಳೆಯುವ ಒಂದು ಉರ್ಮಿಯನ್ನು ಕೈಗೆ ತೆಗೆದುಕೊಂಡ. ಬಳಿಕ ದಿರಿಸು ಧರಿಸತೊಡಗಿದ. ಗುಂಡುಹೊಡೆದರೂ ತಾಗದ ಉಕ್ಕಿನ ತಾಯಿತವನ್ನು ಸೊಂಟಕ್ಕೆ ಧರಿಸಿದ. ಚೀನ ಹೊಲಿಗೆಯ ಚೀನೀರೇಶ್ಮೆ ಬಟ್ಟೆಯನ್ನು ತೆಗೆದು ತಲೆಗೆ ಕಟ್ಟಿದ. ಮಕ್ಕದಿಂದ ತರಿಸಿದ್ದ ಹಸುರು ರೇಶ್ಮೆಬಟ್ಟೆಯನ್ನು ಸೊಂಟಕ್ಕೆ ಬಿಗಿದ, ಕಚ್ಚೆ ಕಟ್ಟಿಕೊಂಡ. ಹೀಗೆ ಸಿದ್ಧತೆ ಮಾಡಿ ಕೊಂಡು ವೇಗವಾಗಿ ನಡೆದು ಚಿರಕ್ಕಲ್ ಅರಮನೆಗೆ ಬಂದ. ಒದೇನನನ್ನು ಕಂಡ ಚಿರಕ್ಕಲ್ ಅರಸ ಕೂಗಿ ಹೇಳಿದ – ಈಚೆಗೆ ಬಾರಪ್ಪ ಒದೇನ! ನಿನ್ನಲ್ಲಿ ಒಂದಿಷ್ಟು ಮಾತಾಡಬೇಕು. ಒದೇನ ಅರಸನಿಗೆ ಸಲ್ಲಿಸಬೇಕಾದ ಗೌರವ ಸಲ್ಲಿಸಿ ಬಳಿಗೆ ಹೋದ. ವಿಚಾರ ಏನೆಂದು ಅರಸನಲ್ಲಿ ಕೇಳಿದ. ತಾನು ಸವಾರಿ ಹೊರಟಲ್ಲಿಂದ ಒದೇನನಿಗೆ ಓಲೆಕಳಿಸಿದಲ್ಲಿನ ವರೆಗೆ ನಡೆದ ಘಟನೆಗಳನ್ನೆಲ್ಲ ಅರಸ ವಿವರಿಸಿದ– ಈ ಪರಿಸ್ಥಿತಿಯಲ್ಲಿ ನಾನು ಇನ್ನು ಇಲ್ಲಿ ನಿಲ್ಲಲಾರೆ. ಅವರನ್ನು ಜೀವಸಮೇತ ಹಿಡಿದು ಕಟ್ಟಿ ಅರಮನೆಗೆ

ಎಳೆದು ತರಬೇಕು. ಹಾಗೆ ಮಾಡಿದೆಯಾದರೆ ನಿನಗೆ ಎರಡು ಕೈಗಳಿಗೂ ಚಿನ್ನದ ಬಳೆ ತೊಡಿಸುತ್ತೇನೆ. ಅಪಾರ ಹಣವನ್ನೂ ಬಂಗಾರವನ್ನೂ ಕೊಡಿಸುತ್ತೇನೆ. ಅದಲ್ಲದೆ ನಿನಗೆ ಉಂಬಳಿಯಾಗಿ ನೂರೊಂದು ಖಂಡುಗ ಹೊಲಗದ್ದೆಗಳನ್ನು ಕೊಡುತ್ತೇನೆ. ಜೋನಕರನ್ನು ನೀನು ಅರಮನೆಗೆ ಹಿಡಿದು ತರಬೇಕು.

ಆ ಮಾತುಗಳನ್ನು ಕೇಳಿದ ಒದೇನ ಗಟ್ಟಿಯಾಗಿ ಉದ್ಘೋಷಿಸಿದ – ಅರಸರೇ ಕೇಳಿ! ಕಾವಿಲ್ ಭಗವತಿಯಮ್ಮನ ಕೃಪೆಯಿಂದಲೂ ಬಲದಿಂದಲೂ ಆ ಜೋನಕರನ್ನು ಕಟ್ಟಿ ತರುತ್ತೇನೆ. ಒಂದು ವೇಳೆ ನಾನು ಸತ್ತುಹೋದೆನೆಂದಾದರೆ ಕಾವಿಲ್ ಚಾತ್ತೋತ್ತ್ ಕುಂಞಿಚ್ಚೇರುವಿಗೆ ನೀವು ಖರ್ಚಿಗೆ ಕೊಡಬೇಕು. ತಚ್ಚೋಳಿ ಮನೆಯಲ್ಲಿ ನನ್ನ ಅಣ್ಣ ತಚ್ಚೋಳಿ ಕೋಮಕುರುಪ್ಪ್ ಇದ್ದಾರೆ. ಅವರಿಗೂ ನೀವು ಖರ್ಚಿಗೆ ಕೊಡಬೇಕು. ಇದನ್ನು ಕೇಳಿದ ಅರಸನೆಂದ – ಯಾವುದಕ್ಕೂ ಹೆದರಬೇಡ ಒದೇನ. ಎಲ್ಲವನ್ನೂ ಮಾಡೋಣ.

ಆ ಮಾತುಗಳನ್ನು ಕೇಳಿದ ಒದೇನ ಬೇರೇನನ್ನೂ ಹೇಳದೆ ಹೊರಟು ನಡೆದ. ಜೋನಕರ ಬಳಿಗೆ ಹೋದ. ಅವರನ್ನು ಕಣ್ಣಾರೆ ಕಂಡಾಗ ಅವನು ಕೂಗಿ ಹೇಳಿದ – ಏನ್ರೋ ಏನ್ರೋ ಜೋನಕರೆ? ನಿಮಗೆ ಯಾರನ್ನೂ ಕಣ್ಣಿಗೆ ಕಾಣುತ್ತಿಲ್ಲವೇ? ಸಾಮಾನ್ಯ ಮರ್ಯಾದೆಯನ್ನು ಕೂಡ ತಿಳಿದು ನಡೆದುಕೊಳ್ಳದಿದ್ದರೆ ನಿಮ್ಮನ್ನು ಜೀವಸಹಿತ ಬಿಡಲಾರೆ. ಅದನ್ನು ಕೇಳಿದ ಅವರು ಕಂಪಿಸುತ್ತ ನೆಗೆಯುತ್ತ ಒದೇನನ ಬಳಿ ಬಂದರು. ಒದೇನ 'ಕಾಕಚ್ಚುವಡ್' ಎಂಬ ಕಳರಿಯ ಪಟ್ಟೊಂದರಿಂದ ನಲುವತ್ತೆರಡರಷ್ಟು ಜೋನಕರನ್ನು ಅಲ್ಲೇ ಕೊಚ್ಚಿ ಎಸೆದ. ಅಷ್ಟರಲ್ಲಿ ಉಳಿದವರು ಹೆದರಿ ಇನ್ನಷ್ಟು ನಡುಗುತ್ತ ಬಿನ್ನವಿಸ ತೊಡಗಿದರು. ಹಾಗೆ ಅವರು ಹೇಳುತ್ತಿದ್ದಾಗಲೇ ಒದೇನ ಅವರನ್ನು ಹಿಡಿದುಕೊಂಡ. ಹಗ್ಗದಿಂದ ಕೈಗಳನ್ನು ಬಿಗಿದ. ಎಲ್ಲರನ್ನೂ ಸೇರಿಸಿ ನಡೆಯಿಸಿಕೊಂಡು ಹೋದ. ಚಿರಕ್ಕಲ್ ಅರಸನ ಅರಮನೆಗೆ ಒಯ್ದ. ಇದನ್ನು ಅರಸ ಕಣ್ಣಾರೆ ನೋಡಿದ. ಒದೇನನನ್ನು ಹತ್ತಿರಕ್ಕೆ ಕರೆದು ಎರಡು ಕೈಗಳಿಗೂ ಚಿನ್ನದ ಬಳೆ, ನೂರೊಂದು ಖಂಡುಗ ಹೊಲಗದ್ದೆಗಳು, ಮತ್ತೂ ಒಂದಷ್ಟು ಹಣಬಂಗಾರಗಳನ್ನು ಕೊಟ್ಟ. ಜೋನಕರನ್ನು ಕಂಡಾಗ ಅರಸನಿಗೆ ಕೋಪವುಕ್ಕಿತು. ಅದನ್ನು ಕಂಡ ಅವರು ಅರಸನ ಕಾಲಿಗೆ ಬಿದ್ದರು. ಅವರು ಅಂಗಲಾಚಿ ಬೇಡಿದರು – ಚಿರಕ್ಕಲ್ಲನ್ನು ಆಳುವ ಅರಸರೇ, ನಮ್ಮನ್ನು ಕೊಲ್ಲಬೇಡಿ. ನಮ್ಮನ್ನು ಕ್ಷಮಿಸಬೇಕು ಅರಸರೇ! ಅದನ್ನು ಕೇಳಿದ ಅರಸ ಅವರು ನೂರೊಂದು ಹಣವನ್ನು ದಂಡವಾಗಿ ತೆರುವಂತೆ ಆಜ್ಞೆಮಾಡಿದ. ಅವರು ದಂಡ ತೆತ್ತರು. ತಚ್ಚೋಳಿ ಒದೇನ ತನ್ನ ಮನೆಗೆ ಮರಳಿದ. ಚಿರಕ್ಕಲ್ ಅರಸ ಸುಖವಾಗಿ ಬದುಕುತ್ತಿದ್ದ.

ಒಡವೆಗಳಿಂದ ಅಲಂಕಾರಗೊಂಡ ಕರಿಬೆಕ್ಕು

ಪೂತ್ತಾಳಿಎಡಂ ಮನೆಯ ಚಿರುದೇಯಿಕುಟ್ಟಿ ತನ್ನ ಮಾವನಿಗೆಂದಳು – ಪೂತ್ತಾಳಿ ಚಾತಪ್ಪಾ! ಸೋದರ ಮಾವಾ! ನನಗೊಂದು ಹಿರಿಬಯಕೆಯಾಗಿದೆ. ನಾನು ತಾವರೆಕೆರೆಯ ನಿರ್ಮಾಣ ಕೆಲಸದ ಅಂದಚಂದವನ್ನು ನೋಡಬೇಕು. ತಾವರೆ ಕೆರೆಯಲ್ಲಿ ಮೀಯಬೇಕು. ಅದಕ್ಕೆ ಮಾವ ನಂಬ್ಯಾರನೆಂದ – ಚಿರುದೇಯಿ ಕುಟ್ಟಿ, ನೀನು ಹುಟ್ಟಿ ಮೂರು ಶುಕ್ರವಾರವಾಗಿಲ್ಲ. ನೀನು ಹರಿಯುವ ಇರುವೆಗಳನ್ನು ನೋಡಿದ್ದಿಯಾ? ಹಾರುವ ಹಕ್ಕಿಗಳನ್ನು ಕಂಡಿದ್ದಿಯಾ? ಕರಿಹೇಂಟೆ ತನ್ನ ಮರಿಗಳನ್ನು ಅಡಗಿಸಿಕೊಳ್ಳುವ ಹಾಗೆ ನಿನ್ನನ್ನು ನಾನು ಮುಚ್ಚಿ ಮುಚ್ಚಿಯೆ ಸಾಕುತ್ತಿದ್ದೇನಲ್ಲ! ಚಿರುದೇಯಿಯೆಂದಳು – ಪೂತ್ತಾಳಿ ಚಾತಪ್ಪಾ! ಸೋದರ ಮಾವಾ! ತಾವರೆ ಕೆರೆಯನ್ನು ನೋಡ್ಲೇಬೇಕು. ತಾವರೆ ಕೆರೆಯಲ್ಲಿ ಮೀಯ್ಲೇಬೇಕು. ಪೂತ್ತಾಳಿ ಚಾತಪ್ಪ ನಂಬ್ಯಾರ ನಾಯಮ್ಮಾರರನ್ನು ಕರೆದು ಹೇಳಿದ – ಪೂತ್ತಾಳಿ ಮನೆಯ ನಾಯಮ್ಮಾರರೆ! ನೀವು ಬಾಲೆ ಚೇರುದೇಯಿಯನ್ನು ಕರೆದೊಯ್ದು ತಾವರೆಕೆರೆಯನ್ನು ತೋರಿಸಿರಿ. ಅವಳು ಅದರಲ್ಲಿ ಮೀಯಲಿ. ಅದನ್ನು ಕೇಳಿದ ನಾಯಮ್ಮಾರರು ನಂಬ್ಯಾರರ ಆದೇಶದ ಪ್ರಕಾರ ಚಿರುದೇಯಿಯನ್ನು ಕರೆ ದೊಯ್ದರು. ಅವಳು ಅಲ್ಲಿ ಕೆರೆಯ ಕೆಲಸದ ಅಂದಚಂದವನ್ನು ಕಂಡಳು. ತಾವರೆ ಕೆರೆಯಲ್ಲಿ ಮಿಂದಳು. ಅಷ್ಟರಲ್ಲಿ ತಾವರೆ ಕೋಟೆಯನ್ನಾಳುವ ಕುಂಞನ್ ಅರಸು ಅವಳನ್ನು ಮಾಳಿಗೆಯ ಮೇಲಿದ್ದು ಕಂಡ. ಅವನು ತನ್ನ ನಾಯಮ್ಮಾರರಿಗೆಂದ – ನಾಯಮ್ಮಾರರೇ! ಎಲ್ಲ ದಿನಗಳಲ್ಲೂ ಮೂಡುದಿಕ್ಕಿನಲ್ಲಿ ಮೂಡುವುದು ಇಂದು ಕೆರೆಯಲ್ಲಿ ಮೂಡಿದೆಯೆ? ಮೂಡು ದಿಕ್ಕಿನಲ್ಲಿ ದೇವರು ಉದಿಸಿದ ಹಾಗೆ, ಪಡುವಿನಲ್ಲಿ ಚಂದ್ರಮ ಇಳಿದ ಹಾಗೆ, ಅದು ಯಾರು ಆ ತಾವರೆಕೊಳದಲ್ಲಿ ಮೀಯುತ್ತಿರುವುದು? ನಾಯಮ್ಮಾರರು ಕೂಡಲೆ ಎಂದರು– ತಾವರೆ ಕೋಟೆಯ ಕುಂಞನೆಮ್ಮರಸು! ಮೂಡು

ದೇವರು ಉದಿಸಿದ್ದಲ್ಲ, ಪಡುದಿಕ್ಕಿನಲ್ಲಿ ಚಂದ್ರಮ ಇಳಿದದ್ದೂ ಅಲ್ಲ. ಪೂತ್ತಾಳಿ ಮನೆಯ ಚಿರುದೇಯಿ ಕುಟ್ಟಿ ತಾವರೆಕೆರೆಯಲ್ಲಿ ಮೀಯುತ್ತಿದ್ದಾಳೆ!

ಅಷ್ಟನ್ನು ಕೇಳಿದ ಕುಂಞನೆಮ್ಮರಸು ಮಾಳಿಗೆಯ ಮೆಟ್ಟಿಲಿಳಿದು ಹೊರಟ. ತಾವರೆ ಕೆರೆಗೆ ಬಂದವನು ಕೇಳಿದ – ಪೂತ್ತಾಳಿ ಮನೆಯ ನಾಯಮ್ಮಾರರೇ! ಪೂತ್ತಾಳಿಮನೆಯ ಚಿರುದೇಯಿಗೆ ಹಚ್ಚುವ ಎಣ್ಣೆಯ ಖರ್ಚಿಗೆ ಯಾರಾದರೂ ಕೊಡುತ್ತಿದ್ದಾರೆಯೆ? ಊವ್ವಂ ಹೇಳಿ (ಮದುವೆ ಯಾಗಲು) ಯಾರಾದರೂ ಬಂದಿದ್ದಾರೆಯೆ? ನಾಯಮ್ಮಾರ ರೆಂದರು – ತಾವರೆ ಕೋಟೆಯ ಕುಂಞನೆಮ್ಮರಸು! ಭೂಮಿಯ ಬೆಳಕು ಕಂಡಂದಿನಿಂದ ಚಿರುದೇಯಿ ಮನೆಯಲ್ಲೆ ಇದ್ದವಳು. ಹರಿಯುವ ಇರುವೆ ಗೊತ್ತಿಲ್ಲ. ಹಾರುವ ಹಕ್ಕಿ ಕಂಡಿಲ್ಲ. ಅದನ್ನು ಕೇಳಿದ ಕುಂಞನೆಮ್ಮ ತನ್ನ ಕೈಯ ಕಿರುಬೆರಳ ಉಂಗುರವನ್ನು ಕಳಚಿ ಚಿರುದೇಯಿಯ ಬೆರಳಿಗೆ ತೊಡಿಸಿದ. ಚಿರುದೇಯಿ ಒಂದೇ ಸಮನೆ ಅಳಲಾ ರಂಭಿಸಿದಳು. ಅದನ್ನು ನೋಡಿದ ನಾಯನ್ಮಾರರು ಅವಳನ್ನು ಕರೆದುಕೊಂಡು ಮರಳಿದರು. ಪೂತ್ತಾಳಿ ಮನೆಗೆ ತಲುಪಿದಾಗ ಚಾತಪ್ಪ ನಂಬ್ಯಾರ್ ಕೇಳಿದ – ನಾಯಮ್ಮಾರರೇ, ಪೂತ್ತಾಳಿ ಮನೆಯ ಚಿರುದೇಯಿ ಕುಟ್ಟಿ ಅಳುತ್ತಿರುವುದು ಯಾಕೆ? ಅದಕ್ಕೆ ನಾಯಮ್ಮಾರರು ನಡೆದ ಸಂಗತಿಯನ್ನೆಲ್ಲ ಹೇಳಿದರು. ನಡೆದ ಸಂಗತಿಯನ್ನು ಕೇಳಿದ ನಂಬ್ಯಾರ್ ಪ್ರಸನ್ನನಾದ. ಹಾಗೆ ಅವರೆಲ್ಲ ಅಲ್ಲಿ ಜತೆಯಲ್ಲಿದ್ದರು.

ತಾವರೆ ಕೋಟೆಯ ಕುಂಞನೆಮ್ಮರಸು ತನ್ನ ಪಡುಮನೆಯ ರತ್ನಮಂಚದಲ್ಲಿ ಹಾಸಿಗೆಯ ಮೇಲೆ ಕವುಚಿ ಮಲಗಿಕೊಂಡ. ಅವನ ತಾಯಿ ಅವನು ಹಾಗೆ ಮಲಗಿದುದನ್ನು ಕಂಡು ನಾಯಮ್ಮಾರರಲ್ಲಿ ಕೇಳಿದಳು – ತಾವರೆ ಕೋಟೆಯ ನಾಯಮ್ಮಾರರೇ! ತಾವರೆ ಕೋಟೆಯ ನಮ್ಮ ಕುಂಞನೆಮ್ಮ ತಾವರೆಕೆರೆಗೆ ಹೋದವನು ಇದ್ಯಾಕೆ ಹೀಗಿದ್ದಾನೆ? ಉಲ್ಲಾಸಕೊಡುವ (ಮದುವೆಗೆ ಯೋಗ್ಯ ಕನ್ಯೆ ಇರುವ) ಮನೆಯನ್ನೇನಾದರೂ ಕಂಡನೋ? ನಾಯಮ್ಮಾರರು ನಡೆದ ಸಂಗತಿ ಯನ್ನೆಲ್ಲ ಆಕೆಗೆ ತಿಳಿಸಿದರು. ಅದನ್ನೆಲ್ಲ ಕೇಳಿದ ಆಕೆ ಕೂಡಲೇ ಸಾಮೂದಿರಿ ಅರಸನಲ್ಲಿ ಹಿರಿಯ ಅಧಿಕಾರಿಯಾಗಿ ಕೋಝಿ ಕ್ಕೋಡಿನಲ್ಲಿದ್ದ ತನ್ನ ಗಂಡ ಎರಡನೆಯ ಶಿರಸ್ತೆದಾರರಿಗೆ ಓಲೆ ಬರೆಯಿಸಿದಳು. ವಿವರಗಳನ್ನೆಲ್ಲ ಬರೆಸಿ ಓಲೆಯನ್ನು ಕಳುಹಿಸಿಕೊಟ್ಟಳು. ಕೋಝಿಕ್ಕೋಡ್‌ನಲ್ಲಿನ ಎರಡನೆ ಶಿರಸ್ತೇದಾರನು ಓಲೆ ತಲಪುತ್ತಲೇ ಅದಕ್ಕೆ ಉತ್ತರ ಬರೆದು ಓಲೆ ತಂದವರಲ್ಲಿ ಹೀಗೆಂದ – ತಾವರೆಕೋಟೆಯ ಕುಟ್ಟಿಭಟ್ಟರೇ! ನಿಮ್ಮ ಅರಸನಿಗೆ ಉಲ್ಲಾಸಕೊಡುವ ಮನೆಯನ್ನು ನೀವು ಗುರುತಿಸಿರುವುದಾದರೆ ಪೂತ್ತಾಳಿ ಚಾತ್ತಪ್ಪನ್ ನಂಬ್ಯಾರರಿಗೆ ಓಲೆ ಕಳುಹಿಸಬೇಕು. ಅವರಿಗೆ ಓಲೆ ಕಳುಹಿಸಿ 'ಒಲವಿಲಮುರಿ'ಗೆ (ನಿಶ್ಚಿತಾರ್ಥ) ಎಲ್ಲರೂ ಸೇರಬೇಕು.

ಹಾಗೆ ಸೇರಿದಾಗ ನನಗೆ ಒಂದು ಓಲೆ ಕಳುಹಿಸಬೇಕು. ಅಂತೆಯೇ ತಾವರೆ ಕೋಟೆಯ ಕುಂಞನೆಮ್ಮ ಅರಸು ಪೂತ್ತಾಳಿ ಮನೆಯ ಚಾತ್ತಪ್ಪನ್ ನಂಬ್ಯಾರರಿಗೆ ಓಲೆ ಕಳುಹಿಸಿದ. ಆ ಓಲೆ ನಂಬ್ಯಾರನಿಗೆ ಸಿಕ್ಕಿದಾಗ ಅವನು ತುಂಬ ಪ್ರಸನ್ನನಾದ. ಮುಂದಿನ ಗುರುವಾರವೇ 'ಪುಡಮುರಿ' ಮಾಡುವುದು ಎಂದು ನಿಶ್ಚಯವಾಯಿತು. ಹಾಗೊಂದು ಓಲೆ ಬರೆದು ನಾಯಮ್ಮಾರರು ಅರಸನಿಗೆ ಒಯ್ದುಕೊಟ್ಟರು. ಆಗ ಕುಂಞನೆಮ್ಮರಸು ತಂದೆಗೊಂದು ಓಲೆ ಬರೆದ. ಅಪ್ಪ ಓಲೆಯನ್ನು ಓದಿ ಸಾಮೂದಿರಿ ಅರಸನ ಅಪ್ಪಣೆ ಪಡೆದು ಹೊರಟುಬಿಟ್ಟ. ತಾವರೆಕೋಟೆಗೆ ಬಂದಾಗ ಭಟ್ಟರಲ್ಲಿ ಕೇಳಿದ– ತಾವರೆಕೋಟೆಯ ಕುಟ್ಟಿಭಟ್ಟರೆ! ನಿಮ್ಮರಸನಿಗೆ ನೋಡಿರುವ ಹುಡುಗಿ ಯಾರು? ಅವಳು ನಮ್ಮ ಮಾಳಿಗೆ ಯನ್ನು ಏರಿ ಬಂದಾಳೇ(ಆಕೆ ಒಪ್ಪುತ್ತಾಳೆಯೇ)? ಅದಕ್ಕೆ ಭಟ್ಟರು ಉತ್ತರಿಸಿದರು– ಕೋಝಿಕ್ಕೋಡಲ್ಲಿ ಎರಡನೆಯ ಶಿರಸ್ತೇದಾರರೇ! ಆಕೆ ಮಾಳಿಗೆಯೇರಿ ಬಂದರೆ ಮಾಳಿಗೆಯ ಮೇಲೆ ಬೇರೆ ಬೆಳಕು ಬೇಡ! ಅದನ್ನು ಕೇಳಿದ ಶಿರಸ್ತೇದಾರನೂ ತುಂಬ ಪ್ರಸನ್ನನಾದ. ಊರಪ್ರಮುಖರಿಗೆ ವಿಷಯವನ್ನು ತಿಳಿಸಲಾಯಿತು. ಬೇಕಾದ ಸಕಲ ಸಿದ್ಧತೆಗಳನ್ನೂ ಮಾಡಿದರು.

ಪೂತ್ತಾಳಿ ಚಾತಪ್ಪ ನಂಬ್ಯಾರನೂ ಬೇಕಾದ ಎಲ್ಲ ಸಾಮಾನು ಸರಂಜಾಮು ಸೇರಿಸಿದ. ಅನೇಕ ತೆರನ ಬಂಗಾರದ ಒಡವೆಗಳನ್ನೂ ಮಾಡಿಸಿದ. ನಂಬ್ಯಾರ ಒಮ್ಮೆ ಹಾಸಿಗೆಯಲ್ಲಿ ಮಲಗಿಕೊಂಡಿದ್ದಾಗ ಕೆಳಗಿನ ಊರಿನಿಂದ ಮದುವೆಯಾಗಿ ತಂದಿದ್ದ ನೆಲ್ಯೋಡಿಚ್ಚಿ ಎಂಬ ಅವನ ಘಾಟಿ ಹೆಂಡತಿ ಅವನಿಗೆ ಯಾವುದೋ ಮದ್ದುಕೊಟ್ಟು ಗಾಢನಿದ್ದೆ ಬರುವಂತೆ ಮಾಡಿದಳು. ಅವಳು ಚಿರುದೇಯಿಯ ಬಳಿ ಬಂದಳು. ಅವಳನ್ನು ಹಿಂಸಿಸಿ ಚಿನ್ನವನ್ನೆಲ್ಲ ತೆಗೆದುಕೊಂಡಳು. ಬಳಿಕ ಅವಳನ್ನು ಭತ್ತಕುಟ್ಟುವ ಕೊಟ್ಟಿಗೆಗೆ ಕರೆದು ತಂದಳು. ಮೂರುವರ್ಷದಿಂದ ರಾಶಿಬಿದ್ದಿದ್ದ ಉಮಿಯಲ್ಲಿ (ಭತ್ತದ ಹೊಟ್ಟು) ಅವಳನ್ನು ಹೂತು ಬೆಂಕಿಕೊಟ್ಟಳು.

ಹೀಗಿರಲು ತಾವರೆಕೋಟೆಯಲ್ಲಿ ನಾಲ್ಕೂರು ಆಳುವ ಅರಸರೆಲ್ಲ ಸೇರಿದರು. ತಚ್ಚೋಳಿ ಕಣ್ಮಣಿ ಬಾಲ ಒದೇನನೂ ಪಯ್ಯಂಪಳ್ಳಿ ಕುಂಞಿಚಂದುವೂ ಕೀಯ್ಯರ ನೆಲಪ್ಪಾಡಿಯ ಕುಂಞಿಕಣ್ಣನೂ (ಇವರೆಲ್ಲ ಒದೇನನ ಆತ್ಮೀಯ ಬಳಗದ ವೀರರು) ಯಾವುದೋ ಯೋಗದಿಂದ ಅಲ್ಲಿ ಸೇರಿದರು. ಅವರು ಪೂತ್ತಾಳಿ ಮನೆ ಸೇರಿದಾಗ ಮೂಡು ಹೊಸ್ತಿಲಲ್ಲಿರಿಸಿದ್ದ ದೀಪದ ಪ್ರಕಾಶವು ಪಡುಕೋಣೆಯನ್ನೂ ಬೆಳಗುತ್ತಿತ್ತು. (ಸಾಯಂಕಾಲವಾಗಿತ್ತು. ಮೂಡು ದಿಕ್ಕಲ್ಲಿ ಹೊರತು ಬೇರೆ ದೀಪವಿರಲಿಲ್ಲ. ಪಡುದಿಕ್ಕಲ್ಲಿ ರಹಸ್ಯ ಕೆಲಸ ನಡೆಯುತ್ತಿತ್ತು. ಅದು ಸ್ವಲ್ಪ ಸ್ವಲ್ಪ ಇವರಿಗೂ ಕಂಡಿತು.) ಚಿರುದೇಯಿಯ

ಮೈಯಿಂದ ಕಳಚಿ ತೆಗೆಯಲಾಗಿದ್ದ ಎಲ್ಲ ಆಭರಣಗಳನ್ನು ನೆಲ್ಯೋಡಿಚ್ಚಿ ತನ್ನ ಮಗಳಿಗೆ ತೊಡಿಸಿ ಅಲಂಕರಿಸಿ ಅವಳನ್ನು ಪಡುಕೋಣೆಗೆ ಕಳುಹಿಸಿದಳು.

ಹೀಗಿರುತ್ತ ತಾವರೆಕೋಟೆಯ ಕುಂಞನೆಮ್ಮರಸು ಅಲ್ಲಿಗೆ ತಲಪಿದಾಗ ಒಂದು ಕಡೆಯಲ್ಲಿ ಮದುವೆಯ ಸಾಮೂಹಿಕ ಔತಣ ನಡೆಯುತ್ತಿತ್ತು. ಇನ್ನೊಂದೆಡೆ ಅತಿಥಿಗಳಿಗೆ ಔತಣ ಬಡಿಸುತ್ತಿದ್ದರು. ತಚ್ಚೋಳಿ ಒದೇನನೆಂದ – ಪಯ್ಯಂಪಳ್ಳಿ ಕುಂಞಿಚಂದು, ನೀನು ಇಂದು ಇಲ್ಲೇ ನಿಲ್ಲು. ಕುಂಞನೆಮ್ಮನ 'ಅಮ್ಮ' ನವರನ್ನು ನೋಡಬೇಕು. ನಾನೊಮ್ಮೆ ಹೋಗಿ ನೋಡಿ ಬರುತ್ತೇನೆ. ಒದೇನ ಪಡುಕೋಣೆಯ ಬಾಗಿಲ ಬಳಿ ಹೋದ. ಅಲ್ಲಿಗೆ ಹೋಗಿ ನೋಡಿದಾಗ ಕರಿಬೆಕ್ಕನ್ನು ಒಡವೆಗಳಿಂದ ಅಲಂಕಾರ ಮಾಡಿದಂತೆ ಅಮ್ಮನವರು ಕಂಡುಬಂದರು. ಆತ ಕೂಡಲೇ ಹಿಂತಿರುಗಿದ. ಓಡುತ್ತ ಬಾಗಿಲ ಬಳಿಯಿಂದ ಹೋದ. ಹೋಗಿ ಹೀಗೆಂದ – ತಾವರೆ ಕೋಟೆಯ ಕುಂಞನೆಮ್ಮ ರಸು! ಔತಣ ನಿಲ್ಲಿಸಿಬಿಡು ಕುಂಞರಸು! ಔತಣವನ್ನು ನಿಲ್ಲಿಸಿಬಿಡು ಕುಂಞರಸು!! ಔತಣ ಕೊಡಬೇಡ, ಹೆಣ್ಣು ಇದಲ್ಲ, ಔತಣ ಕೊಡಬೇಡ, ಹೆಣ್ಣು ಇದಲ್ಲ! ಅದನ್ನು ಕೇಳಿದ ಕುಂಞರಸು ಪಡುಕೋಣೆಗೆ ಹೋಗಿ ನೋಡಿದ. ಕರಿಬೆಕ್ಕನ್ನು ಆಭರಣಗಳಿಂದ ಅಲಂಕಾರ ಮಾಡಿದಂತೆ ಇದ್ದ ಅವಳನ್ನು ಕಂಡ. ಅವಳ ಹೆಡೆಮುಡಿ ಹಿಡಿದು ಸಾವಿರಾರು ಜನ ಉಗುಳುವ ಉಗುಳುಗುಂಡಿಗೆ ಅವಳನ್ನು ನೂಕಿಬಿಟ್ಟ. ಕೋಝಿಕ್ಕೋಡಿನ ಎರಡನೇ ಶಿರಸ್ತೇದಾರರು ಬಾಗಿಲಿಳಿದು ಹೊರಟು ಹೋದರು. ಎಲ್ಲರೂ ಅಂತೆಯೇ ಹೊರಟು ಹೋದರು. ತಾವರೆ ಕೋಟೆಯ ಅರಸು ಕುಂಞನೆಮ್ಮ ಈ ಘಟನೆಗಳಿಂದ ತುಂಬ ದುಃಖಿತನಾಗಿದ್ದ.

ಪೂತ್ತಾಳಿ ಮನೆಯ ಒಂದು ಸಾಕುಗಿಳಿ ಹೀಗೆ ಕೂಗಿ ಹೇಳಿತು – ತಾವರೆ ಕೋಟೆ ಯನ್ನಾಳುವ ಕುಂಞರಸು! ಒಬ್ಬಾತ ಗಂಡಾಗಿ ಹುಟ್ಟಿದ್ದರೆ ಏನಾದರೂ ಸಂಕಟಗಳು ಬಂದರೆ ಅದನ್ನು ಮನದಲ್ಲೇ ತಾಳಿಕೊಳ್ಳಲು ಅವನಿಗೆ ಸಾಧ್ಯವಾಗಬೇಕು. ನನ್ನ ಹೊನ್ನಗೂಡ ಬಳಿಗೆ ನೀನೊಮ್ಮೆ ಬಾ. ನಾನು ನನ್ನ ಸಂಕಟವನ್ನು ನಿನ್ನಲ್ಲಿ ಹೇಳಿಬಿಡುತ್ತೇನೆ. ಅದನ್ನು ಕೇಳಿದ ಕುಂಞರಸು ಹೊನ್ನಗೂಡ ಬಳಿಹೋಗಿ ನಿಂತ. ಗಿಳಿ ಅವನಿಗೆಂದಿತು – ತಾವರೆ ಕೋಟೆ ಯನ್ನಾಳುವ ಕುಂಞರಸು! ಇನ್ನು ನೀನು ಅಳಬಾರದು. ನಿನ್ನ ಚಿರುದೇಯಿ ಸತ್ತಿಲ್ಲ! ಈ ಹೊಂಗೂಡ ಬಾಗಿಲನ್ನು ತೆರೆಯೋ! ನಾನು ನಿನ್ನ ಸಂಗಾತಕ್ಕೆ ಬರುವೆ. ಅದನ್ನು ಕೇಳಿದ ಕುಂಞರಸು ಗಿಳಿಯನ್ನು ಗೂಡಿನಿಂದ ಬಿಟ್ಟ. ಗಿಳಿ ಕುಂಞರಸುವಿ ಗೆಂದಿತು – ತಾವರೆ ಕೋಟೆಯನ್ನಾಳುವ ಕುಂಞರಸು! ರಸಬಾಳೆ ತೋಟಕ್ಕೆ ಹೋಗಿ ಬಾಳೆರೆಂಬೆಯ ಪಟಲಗಳನ್ನು ಕಡಿದು ತಾ! ಅದನ್ನು ಕೇಳಿದ ಅವನು ಬಾಳೆರೆಂಬೆಯ

ಪಟಲಗಳನ್ನು ತಂದ. ಗಿಳಿ ಮತ್ತೆ ಎಂದಿತು – ತಾವರೆಕೋಟೆಯನ್ನಾಳು ಕುಂಞರಸು! ಭತ್ತ ಕುಟ್ಟುವ ಕೊಟ್ಟಿಗೆಗೆ ಬಾರೋ! ಕುಂಞರಸು ಭತ್ತಕುಟ್ಟುವ ಕೊಟ್ಟಿಗೆಗೆ ಹೋದಾಗ ಗಿಳಿ ಹೇಳಿತು – ತಾವರೆಕೋಟೆಯನ್ನಾಳುವ ಕುಂಞರಸು! ನಿನ್ನ ಚಿರುದೇಯಿಯನ್ನು ಭತ್ತದ ಹೊಟ್ಟಿನ ಒಳಗೆ ಹೂತಿದ್ದಾರೆ. ಕೆಳಗಿನಿಂದ ಬಂದಿರುವ ನೆಲ್ಯೋಡಿಚ್ಚಿ ಇದನ್ನೆಲ್ಲ ಮಾಡಿದವಳು. ಅದನ್ನು ಕೇಳಿದ ಕುಂಞರಸು ಬೆಂಕಿಯನ್ನೆಲ್ಲ ನಂದಿಸಿದ. ಚಿರುದೇಯಿಯನ್ನು ಈಚೆಗೆ ಎಳೆದು ತೆಗೆದು ಬಾಳೆಯ ರೆಂಬೆಯಲ್ಲಿ ಮಲಗಿಸಿ ಎಣ್ಣೆಹಚ್ಚಿ ಸ್ನಾನಮಾಡಿಸಿದ. ಆಗ ಸಾಕುಗಿಳಿಯೆಂದಿತು – ತಾವರೆಕೋಟೆಯನ್ನಾಳುವ ಕುಂಞರಸು! ಕೆಳಗಿನಿಂದ ತಂದ ನೆಲ್ಯೋಡಿಚ್ಚಿ ಪೂತ್ತಾಳಿ ಚಾತಪ್ಪನ್ ನಂಬ್ಯಾರನಿಗೆ ನಿದ್ರೆಯ ಔಷಧಕೊಟ್ಟು ನಿದ್ದೆಮಾಡುವಂತೆ ಮಾಡಿದ್ದಾಳೆ. ನೀನು ನಿದ್ದೆ ತಿಳಿಯುವ ಔಷಧಕೊಟ್ಟು ಅವನನ್ನು ಎಚ್ಚರಗೊಳಿಸು. ಕುಂಞರಸು ಅಂತೆಯೇ ಮಾಡಿದ. ಚಾತಪ್ಪನ್ ನಂಬ್ಯಾರರಿಗೆ ಎಲ್ಲ ಸಂಗತಿಗಳನ್ನು ಗಿಳಿ ತಿಳಿಹೇಳಿತು. ಅದು ಹೇಳಿದುದನ್ನೆಲ್ಲ ಕೇಳುತ್ತಿದ್ದಂತೆ ನಂಬ್ಯಾರ ತುಂಬ ಸಂಕಟಗೊಂಡು ಅತ್ತುಬಿಟ್ಟ. ಆಗ ಗಿಳಿ ಹೇಳಿತು – ತಾವರೆಕೋಟೆಯನ್ನಾಳುವ ಕುಂಞರಸು! ಪೂತ್ತಾಳಿ ಮನೆಯ ಚಿರುದೇಯಿಯನ್ನು ಕಾಲು ಘಳಿಗೆ ಹೊತ್ತು ಕೂಡ ಇಲ್ಲಿ ಇರಿಸಬೇಡ. ಪ್ರಿಯ ಚಿರುದೇಯಿಗೆ ಚಿನ್ನ ಬೇಡ. ಅವಳನ್ನು ಆನೆಯ ಮೇಲೇರಿಸಿ ಕರೆದುಕೊಂಡು ಹೋಗೋ!

ಅದನ್ನು ಕೇಳಿದ ಕುಂಞರಸು ಚಿರುದೇಯಿಯನ್ನು ಆನೆಯ ಮೇಲೇರಿಸಿಕೊಂಡು ಕರೆದೊಯ್ದ. ತಚ್ಚೋಳಿ ಮನೆಯ ಬಾಗಿಲ ಮುಂದಿನ ತಗ್ಗಿನಲ್ಲಿ ಅವರು ಹಾಗೆ ಹೋಗುತ್ತಿರಲು ತಚ್ಚೋಳಿ ಒದೇನನು ಮನೆಯ ಬಾಗಿಲಲ್ಲಿದ್ದವನು ಅವರನ್ನು ಕಂಡ. ಬಾಗಿಲಿನಿಂದ ಕೂಡಲೇ ಕೆಳನೆಗೆದ. ಸಂಗತಿಯನ್ನೆಲ್ಲ ಕೇಳಿ ತಿಳಿದ. ಮುಂಭಾಗದಲ್ಲೆ ನಡೆದ. ಎಲ್ಲರನ್ನೂ ಕರೆದು ಸೇರಿಸಿದ. ಹಿಂತಿರುಗಿ ನಡೆಯುತ್ತ ತಾವರೆಕೋಟೆಗೆ ತಲಪಿದ. ಆಗ ಕೋಝಿಕ್ಕೋಡ್‌ನ ಎರಡನೇ ಶಿರಸ್ತೇದಾರ ಬಾಗಿಲಲ್ಲಿ ದುಃಖಿಸುತ್ತ ಕುಳಿತಿದ್ದ. ತಚ್ಚೋಳಿ ಒದೇನ ಅವನಿಗೆಂದ – ಕೋಝಿಕ್ಕೋಡ್‌ನ ಎರಡನೇ ಶಿರಸ್ತೇದಾರರೇ! ಯಾಕೆ ದುಃಖಿಸುತ್ತ ಕುಳಿತಿದ್ದೀರಿ? ಪೂತ್ತಾಳಿ ಮನೆಯ ಚಿರುದೇಯಿಯನ್ನು ಆನೆಯೇರಿಸಿಕೊಂಡು ಕರೆತರುತ್ತಿದ್ದಾರೆ. ಚಿರುದೇಯಿ ಮಾಳಿಗೆಯ ಮೇಲೆ ಬಂದರೆ ಮಾಳಿಗೆಗೆ ಬೇರೆ ದೀಪಗಳ ಅಗತ್ಯವೇ ಬೀಳದು. ಉರಿಸಿದ ದೀಪ, ಭತ್ತತುಂಬಿದ ಹಾನೆ ಮುಂತಾದುವುಗಳನ್ನು ಸಿದ್ಧಪಡಿಸಿಕೊಳ್ಳಿ. ತಾವರೆಕೋಟೆಯ ಹಿರಿಯವ್ವ ಅದನ್ನು ಕೇಳಿ ಬೇಗನೆ ಎದ್ದು ಹೊರಟಳು. ಮಾಣಿಕ್ಯಗಳಿಂದಲೂ ಮುತ್ತುಗಳಿಂದಲೂ ಪುಲ್ಲೂರಿಯಿಂದಲೂ (ಒಂದು ಕಂಠಾಭರಣ) ವರಹದಿಂದಲೂ ತುಂಬಿದ ಏಳು 'ಹಾನೆ'ಗಳನ್ನು ಸಿದ್ಧಗೊಳಿಸಿದಳು. ಒಂದು ಹರಿವಾಣದಲ್ಲಿ ಅಕ್ಕಿಯನ್ನು ಇಟ್ಟಿತ್ತು. ಹಾಗೆ

ಸಿದ್ಧವಾಗಿರಲು ತುಂಬ ಜನರ ಗುಂಪು ಅಲ್ಲಿಗೆ ತಲಪಿತು. ಕುಂಞರಸು ಪೂತ್ತಾಳಿ ಚಿರುದೇಯಿಯನ್ನು ಆನೆಯಿಂದ ಕೆಳಗಿಳಿಸಿದಾಗ ತಾವರೆಕೋಟೆಯ ಹಿರಿಯವ್ವ ಅಕ್ಕಿಯನ್ನೂ ಹೂಗಳನ್ನೂ ಎರಚಿ ಸ್ವಾಗತಿಸಿದಳು. ಅಕ್ಕಿಯ ಸೇಸೆ ಹಾಕಿ ಸೊಸೆಯ ಕೈಹಿಡಿದುಕೊಂಡಳು. ಹೊನ್ನಿನ ಸೇಸೆ ಹಾಕಿ ಶುಭಹಾರೈಸಿದಳು. ಅವಳಿಗೆ ಹಾಲನ್ನೂ ಹಣ್ಣನ್ನೂ ಕೊಟ್ಟಳು. ತಚ್ಚೋಳಿ ಒದೇನನು ಒಂದಿಷ್ಟು ಜನರನ್ನು ಕೂಡಿಕೊಂಡು ಒಂದೇ ಉಸಿರಲ್ಲಿ ಓಡುತ್ತ ಪೂತ್ತಾಳಿ ಮನೆಗೆ ಬಂದು ಚಾತಪ್ಪನ್ ನಂಬ್ಯಾರರಲ್ಲಿ ಎಲ್ಲ ಸಂಗತಿಗಳನ್ನೂ ತಿಳಿಸಿದ. ಆಗ ಸಾಕುಗಿಳಿ ಸಂತಸದಿಂದ ಎಂದಿತು – ತಚ್ಚೋಳಿ ಕಣ್ಮಣಿ ಬಾಲ ಒದೇನ, ನನ್ನ ಚಿರುದೇಯಿಯ ಎದೆಪದಕವಾಗಿರುವ ಒದೇನ, ಶಹಬ್ಬಾಸ್! ಕೆಳಗಿನಿಂದ ತಂದಿದ್ದ ನೆಲ್ಯೋಡಿಯನ್ನು ಒದೇನ ಕೂಡಲೇ ಕರೆಯಿಸಿದ. ನಂಬ್ಯಾರನ ಮುಂದೆ ಅವಳನ್ನು ನಿಲ್ಲಿಸಿ ಎಲ್ಲವನ್ನೂ ಕೇಳಿ ವಿಚಾರಿಸಿದ. ಒಡವೆಗಳನ್ನೆಲ್ಲ ಕಳಚಿ ತೆಗೆಯಿಸಿದ. ಅವಳನ್ನು ಕಡಿದುಕೊಂದು ಹಾಕಿದ. ಅವಳ ಮಗಳನ್ನೂ ಕಡಿದುಕೊಂದು ಹಾಕಿದ. ಬಳಿಕ ತನ್ನ ಮನೆಗೆ ಹೊರಟ. ಮನೆಗೆ ಹೋಗಿ ಎಲ್ಲ ವಿವರಗಳನ್ನೂ ಅಣ್ಣನಿಗೆ ಹೇಳಿದ. ತಾವರೆಕೋಟೆಯ ಕುಂಞರಸು ಮತ್ತು ಪೂತ್ತಾಳಿ ಮನೆಯ ಚಿರುದೇಯಿಯರು ಸಂತಸದಿಂದಿದ್ದರು. ಎಲ್ಲರೂ ಸುಖವಾಗಿದ್ದರು.

ಕರಿಮಲೆ ಕುಂಞಿಕೋರನನ್ನು ಕೊಲ್ಲುವುದು ಹೇಗೆ?

ಕರಿಮಲೆ ನಾಡನ್ನಾಳುವ ಕುಂಞಿಕೋರ ಇಪ್ಪತ್ತೆರಡು ಜನ ತೀಯರನ್ನೂ ಕೂಡಿ ಕೊಂಡು ಹೊಸದಾಗಿ ತಿರುಗಾಟಕ್ಕೆ ಹೊರಟ. ಅವರು ಹಾಗೆ ಪೊನ್ಮಲೆ ಕೋಟೆಬಾಗಿಲ ಮುಂದೆ ಹೋಗುತ್ತಿದ್ದರು. ಕೋಟೆಗೊಡತಿ ಕನ್ನಿಯು ಬಾಗಿಲ ಬಳಿ ಕುಳಿತು ರಾಮಾಯಣ ಕಥೆ ಹಾಡುತ್ತಿದ್ದಳು. ಕುಂಞಿಕೋರ ಇಪ್ಪತ್ತೆರಡು ಮಂದಿ ತೀಯರು ಕೇಳುವಂತೆ ಹೇಳಿದ – ಇಪ್ಪತ್ತೆರಡು ಮಂದಿ ತೀಯರೇ ಕೇಳಿ! ಕಾಡುತೊರೆಯ ಬಳಿ ಯಲ್ಲಿನ ಹಾಡುಹಕ್ಕಿ ಕೂಗುವಂತೆ, ಪಂಚರಂಗಿ ಗಿಳಿರಾಮ ಓದುವಂತೆ, 'ನಾದಾಪುರಂ'ನ ಕೊಳಲ ನಾದದಂತೆ ಪಿಳ್ಳಂಗೋವಿಯ ಇಂಚರದಂತೆ ಇದಾವಲ್ಲಿಂದ ಬಂತೊಂದು ಬಂಧುರಧ್ವನಿ? ಕೂಡಲೆ ಜತೆಗಾರ ತೀಯರೆಂದರು – ಕರಿಮಲೆ ನಾಡನ್ನಾಳುವ ಕುಂಞಿಕೋರಾ! ಪೊನ್ಮಲೆ ಕೋಟೆಗೊಡತಿ ಕುಂಞಿಕನ್ನಿ ರಾಮಾಯಣ ಕಥೆ ಹಾಡುತ್ತಿದ್ದಾಳೆ. ಕೂಡಲೆ ಕುಂಞಿಕೋರನೆಂದ – ಇಪ್ಪತ್ತೆರಡು ಮಂದಿ ತೀಯರೇ ಕೇಳಿ! ಕೂಡಲೆ ಕೋಟೆಗೆ ಹತ್ತೋಣ. ಬಾಯಾರಿಕೆಗೆ ಒಂದಿಷ್ಟು ನೀರು ಕುಡಿಯಬೇಕು. ಅವರು ಪೊನ್ಮಲೆ ಕೋಟೆ ಏರಿದರು. ಕೋರನು ಬಾಗಿಲು ದಾಟಿಹೋದಾಗ ಪೊನ್ಮಲೆ ಕುಂಞಿಕನ್ನಿ ಎದ್ದು ಒಳಹೋದಳು. ಒಳಹೋಗಿ ಅಮ್ಮನಲ್ಲೆಂದಳು– ಪೊನ್ಮಲೆಕೋಟೆಗೊಡತಿ ನನ್ನ ಹಡೆದವ್ವ! ನಮ್ಮ ಬಾಗಿಲಿಗೆ ಒಂದು ಗುಂಪು ತೀಯರು ಬಂದಿದ್ದಾರೆ. ಅದನ್ನು ಕೇಳಿದ ತಾಯಿ ಒಂದು ಕೈಯಿಂದ 'ಕೊಂಗ'ಗೂದಲನ್ನು (ಬದಿಗೆ ಕಟ್ಟಿದ ಕೂದಲು) ಸಾವರಿಸಿಕೊಳ್ಳುತ್ತ ಇನ್ನೊಂದು ಕೈಯಿಂದ ಚಂದದ ಮಾಲೆಯನ್ನು ಆಧರಿಸುತ್ತ ಬಾಗಿಲಬಳಿ ಹೋದಳು. ಆಕೆ ಕೇಳಿದಳು– ಕರಿಮಲೆ ನಾಡಿಗೊಡೆಯ ಕುಂಞಿಕೋರಾ! ನೀನು ಇಲ್ಲಿಗೆ ಯಾಕೆ ಬಂದೆಯಪ್ಪ? ಕುಂಞಿಕೋರ ಕೂಡಲೆ ಹೇಳಿದ – ಬಾಯಾರಿಕೆಗೆ

ನೀರು ಕುಡಿಯುವುದಕ್ಕಾಗಿ ಪೊನ್ಮಲೆ ಕೋಟೆ ಹತ್ತಿದೆವು. ಅದನ್ನು ಕೇಳಿದ ಆಕೆ ಬೇಗ ಪಡುಕೋಣೆಗೆ ಹೋಗಿ ಹಾಲುಗಿಂಡಿಯನ್ನು ಶುಭ್ರಗೊಳಿಸಿ ಅದಕ್ಕೆ ಹಾಲಿನ ಕೆನೆ ಬೀಳದಂತೆ ಕಾಸಿ ತಣಿದ ಹಾಲನ್ನು ಎರೆದಳು. ಹಾಲಿಗೆ ಒಂದಿಷ್ಟು ಸಕ್ಕರೆಯನ್ನು ಮೇಪೊಡಿಯಾಗಿ (ಮೇಲುಹುಡಿ) ಹಾಕಿ ಕಲಸಿದಳು. ಆಗ ಕುಂಞಿಕನ್ನಿ ಕೇಳಿದಳು– ಪೊನ್ಮಲೆ ಕೋಟೆಗೊಡತಿ ನನ್ನ ಹಡೆದವ್ವ! ಹಾಲನ್ನು ತೀಯನಿಗೆ ಕೊಡುತ್ತಿದ್ದಿಯಾ? ಕೂಡಲೇ ಅಮ್ಮ ಹೇಳಿದಳು – ಮಗಳೇ ಕನ್ನೀ! ಕರಿಮಲೆ ನಾಡಿಗೊಡೆಯ ಕೋರನು ತೀಯನೆಂದು ತಿಳಿಯಬಾರದು. ಅವನು ತೀಯನಾದರೂ ಒಬ್ಬ ನಾಡ ಪ್ರಭುವಲ್ಲವೆ? ಹಾಲನ್ನು ಒಯ್ದು ಕೊಟ್ಟು ಆಕೆ ಹೂಹುಲ್ಲಚಾಪೆಯನ್ನೂ (= ಹೂವಿನಂತೆ ಮೃದುವಾದ ಹುಲ್ಲಚಾಪೆ) ರೇಶ್ಮೆಯ ದಿಂಬುಗಳನ್ನೂ ಬಾಗಿಲಬಳಿ ಇರಿಸಿ ಅವರನ್ನು ಕುಳ್ಳಿರಿಸಿದಳು. ಅಡಕೆ ವೀಳ್ಯದೆಲೆಗಳನ್ನು ತಂದು ಮುಂದಿರಿಸಿದಳು. ಕರಿಮಲೆ ಕುಂಞಿಕೋರನು ಹೂ ಹುಲ್ಲುಚಾಪೆಯಲ್ಲಿ ಕುಳಿತ. ತಂದಿರಿಸಿದ ಎಲೆ ಅಡಕೆಯನ್ನು ಮೆದ್ದ. ಬಳಿಕ ಅವನು ಕೇಳಿದ – ಪೊನ್ಮಲೆ ಕೋಟೆಗೊಡತಿ ಹಿರಿಯವ್ವ! ನಿಮ್ಮ ಮಗಳು ಕನ್ನಿಗೆ ಹಚ್ಚುವ ಎಣ್ಣೆಯ ವೆಚ್ಚ ಕೊಡಲು ಯಾರಾದರೂ ಬಂದಿದ್ದಾರೆಯೆ? ಕೂಡಲೆ ಆಕೆ ಉತ್ತರವಿತ್ತರು – ಕರಿಮಲೆ ನಾಡಿಗೊಡೆಯ ಕುಂಞಿಕೋರಾ! ಊವಂ ಬಯಂಙ್‌ಗಾಗಿ ಏಳು ಕಡೆಯಿಂದ ಬಂದಿದ್ದಾರೆ. ಅವೆಲ್ಲವನ್ನೂ ನಾನು ಹಾಗೆಯೇ ಹಿಂದೆ ಕಳುಹಿಸಿದೆ. ಕೂಡಲೆ ಕೋರ ಉತ್ತರಿಸಿದ – ಪೊನ್ಮಲೆ ಕೋಟೆಗೊಡತಿ ಹಿರಿಯವ್ವ! ನಿಮ್ಮ ಮಗಳು ಕನ್ನಿಗೆ ಹಚ್ಚುವ ಎಣ್ಣೆಯ ವೆಚ್ಚವನ್ನು ನಾನು ಕೊಡುತ್ತೇನೆ. ಊವಂ ಬಯಂಙ್‌ಗೆ ಕೇಳಿಕೊಂಡು ನಾನೇ ಬರುತ್ತೇನೆ. ಮುಂದೆ ಬರಲಿರುವ ಗುರುವಾರಕ್ಕೆ ಮುಂಚಿತವಾಗಿ ನಾನು 'ಪುಡಮುರಿ'ಗಾಗಿ ಇಲ್ಲಿಗೆ ಬಂದು ಬಿಡುತ್ತೇನೆ. ಹಾಂ! ಎಂದು ಆಕೆ ಒಪ್ಪಿಗೆಯಿತ್ತಳು. ಹಾಗೆ ಬೀಳ್ಕೊಂಡು ಕೋರ ಮರಳಿದ. ಪೊನ್ಮಲೆಕೋಟೆಯ ಹಿರಿಯವ್ವ ತುಂಬ ಅತ್ತಳು. ಅಳುತ್ತ ಹೀಗೆಂದಳು – ಮಗಳೇ ಕುಂಞಿಕನ್ನಿ! ನಿನ್ನ ದೌರ್ಭಾಗ್ಯವಿದು. ಇಷ್ಟೊಂದು ಹೆಸರುವಾಸಿ ಕೋಟೆಮನೆಯ ಹುಡುಗಿಯೊಂದಿಗೆ ತೀಯನೊಬ್ಬ ಪುಡಮುರಿ ಮಾಡುವುದಕ್ಕೆ ಮುಂದಾಗಿದ್ದಾನೆ. ಏಳು ವರ್ಷಪ್ರಾಯದ ಒಂದು ಗಂಡುಮಗುವಾದರೂ ಇರುತ್ತಿದ್ದರೆ ಕೋರನಿಗೆ ಹೀಗೆ ಹೇಳಲು ಧೈರ್ಯ ಬರುತ್ತಿತ್ತೆ? ಕನ್ನಿ ಮನೋವ್ಯಥೆಯಿಂದ ಮಲಗಿಕೊಂಡಳು. ಮುಚ್ಚಿದ ಬಾಗಿಲು ತೆರೆಯಲಿಲ್ಲ. ತೆರೆದ ಬಾಗಿಲು ಮುಚ್ಚಲಿಲ್ಲ. ತಾಯಿಮಗಳು ಮನೋವ್ಯಥೆಯಿಂದ ಮಲಗಿ ಕೊಂಡರು.

ಪಾಲ್ಘಾಟಿನಲ್ಲಿ ವಾಸವಾಗಿರುವ ಭಟ್ಟರುಗಳು ಹೊರಪಯಣ ಹೋಗುವ ಸಂದರ್ಭ ಗಳಲ್ಲಿ ಪೊನ್ಮಲೆಕೋಟೆಗೂ ಒಮ್ಮೆ ಹತ್ತಿಳಿಯುವುದು ರೂಢಿ. ಅಲ್ಲಿ ತಂಗಿಕೊಂಡು, ಅಡುಗೆಮಾಡಿ ಉಂಡು ಮುಂದುವರಿಯುತ್ತಿದ್ದರು. ಅಂದೂ ಅಂತೆಯೇ ಆ ಭಟ್ಟರುಗಳು

ಅಲ್ಲಿಗೆ ಹೋದಾಗ ಅಲ್ಲಿ ಯಾರೊಬ್ಬರೂ ಕಂಡುಬರುತ್ತಿಲ್ಲ! ಪಡುಕೋಣೆಯ ಬಾಗಿಲಿಗೆ ಹೋದರು. ಅಲ್ಲಿ ಹೋಗಿ ನೋಡಿದರೆ ಪೊನ್ಮಲೆ ಕೋಟೆಯೊಡತಿ ತಾಯಿಮಗಳು ಮನೋವ್ಯಥೆಯಿಂದ ಮಲಗಿದ್ದಾರೆ! ಭಟ್ಟರುಗಳು ಕೇಳಿದರು – ಪೊನ್ಮಲೆ ಕೋಟೆಗೊಡತಿ ಹಿರಿಯವ್ವ! ಏನು ವರ್ತಮಾನ ಹಿರಿಯವ್ವ? ಆ ಮಾತುಗಳನ್ನು ಆಕೆ ಕೇಳಿದಾಗ ತುಂಬ ಗೋಳಾಡಿದಳು. ಅಳುತ್ತ ಆಕೆ ಹೀಗೆಂದಳು – ಇಬ್ಬರು ಉಲಾದಿರಿ ಭಟ್ಟರುಗಳೆ! ಪಾಲ್ಯಾಟಿನ ಭಟ್ಟರುಗಳೆ! ಕರಿಮಲೆ ನಾಡರಸು ಕುಂಞಿಕೋರ ಇಷ್ಟೊಂದು ಹೆಸರುವಾಸಿ ಕೋಟೆಯಲ್ಲಿನ ಪೊನ್ಮಲೆ ಕನ್ನಿಮಗುವನ್ನು ಮುಂದಿನ ಗುರುವಾರದಂದು ಪೊಡಮುರಿ ಮಾಡಿಕೊಳ್ಳುತ್ತಾನಂತೆ. ಹಾಗೆಂದು ಅವನು ತೀರ್ಮಾನಿಸಿದ್ದಾನೆ. ಏಳು ವರ್ಷ ಪ್ರಾಯದ ಒಂದು ಗಂಡು ಈ ಮನೆಯಲ್ಲಿರುತ್ತಿದ್ದರೆ ಕೋರ ಹೀಗೆ ಹೇಳುತ್ತಿದ್ದನೆ? ಪಾಲ್ಯಾಟಿನ ಭಟ್ಟರುಗಳು ಅಂದು ಅಲ್ಲಿ ಅಟ್ಟುಣ್ಣಲಿಲ್ಲ. ಅವರು ಹಾಗೆಯೇ ಅಲ್ಲಿಂದ ಹೊರಟು ಹೋದರು. ತಚ್ಚೋಳಿ ಮನೆಯ ಬಾಗಿಲ ಮುಂದೆ ಅವರು ಮಾತನಾಡುತ್ತ ಹೋಗುತ್ತಿದ್ದಾಗ ತಚ್ಚೋಳಿ ಒದೇನನು ಹಳೆಯಕ್ಕಿಯ ಗಂಜಿಯುಂಡು ಮನೆ ಬಾಗಿಲಲ್ಲಿ ಕುಳಿತಿದ್ದ. ಅವನು ಒಗ್ಗಿವಿಯಲ್ಲಿ ಇದನ್ನು ಕೇಳಿಸಿಕೊಂಡ. ಒಮ್ಮೆಲೆ ದಾರಿಯ ಮುಂದೆ ನೆಗೆದ. ನಡೆದುಹೋಗುತ್ತಿದ್ದ ಭಟ್ಟರನ್ನು ತಡೆದು ನಿಲ್ಲಿಸಿದ. ಅವರಲ್ಲಿ ಹೇಳಿದ – ಪಾಲ್ಯಾಟಿನ ಭಟ್ಟರುಗಳೇ! ಏನು ಹೇಳುತ್ತಿದ್ದಿರಿ ಭಟ್ಟರುಗಳೆ? ಕೂಡಲೆ ಭಟ್ಟರುಗಳೆಂದರು – ತಚ್ಚೋಳಿ ಕಣ್ಮಣಿ ಬಾಲ ಒದೇನ! ನೀನು ಕೇಳುವಂಥಾದ್ದೇನನ್ನೂ ನಾವು ಹೇಳಿಲ್ಲ. ಅದಕ್ಕೆ ಕೂಡಲೇ ಒಂದೇನನೆಂದ – ಇಬ್ಬರು ಉಲಾದಿರಿ ಭಟ್ಟರುಗಳೆ! ಇದ್ದುದನ್ನು ಇದ್ದ ಹಾಗೆ ಹೇಳಿದರೆ ಇಬ್ಬರಿಗೆ ಎಂಟು ಹಣ ಕೊಟ್ಟೇನು. ಅದನ್ನು ಕೇಳಿದ ಭಟ್ಟರುಗಳು ಎಲ್ಲ ಸಂಗತಿಗಳನ್ನು ಬಿಡಿಸಿ ಹೇಳಿದರು. ಒದೇನ ಪಂಚೆಯ ಮುನ್ನಿಯಂಚಿನಿಂದ ಎಂಟು ಹಣವನ್ನು ತೆಗೆದು ಇಬ್ಬರು ಭಟ್ಟರುಗಳಿಗೆ ಕೊಟ್ಟ. ಭಟ್ಟರು ಬೇಗ ಬೇಗನೆ ಅಲ್ಲಿಂದ ಹೋದರು. ಒದೇನ ಮೆಟ್ಟಿಲೇರಿ ಮನೆಗೆ ಬಂದ. ಗೆಳೆಯ ಚಾಪ್ಪನನ್ನು ಕರೆದು ಹೇಳಿದ– ಕಂಡಾಚ್ಚೇರಿಯ ಪ್ರಿಯ ಚಾಪ್ಪ! ನಾವು ಪೊನ್ಮಲೆಕೋಟೆಗೆ ಹೋಗಬೇಕು. ಇಬ್ಬರೂ ಅಲ್ಲಿಗೆ ಹೊರಟು ನಿಂತರು. ನಡೆಯುತ್ತ ನಡೆಯುತ್ತ ಕೋಟೆಗೆ ತಲಪಿದರು. ಪಡುಕೋಣೆಯ ಮುಂದೆ ಹೋಗಿ ನಿಂತು ಒದೇನ ಕೂಗಿ ಹೇಳಿದ – ಪೊನ್ಮಲೆ ಕೋಟೆಗೊಡತಿ ಹಿರಿಯವ್ವ! ಏನು ವರ್ತಮಾನ ಹಿರಿಯವ್ವ? ಆ ಮಾತುಗಳನ್ನು ಕೇಳಿದಾಗ ಆಕೆ ತುಂಬ ಗೋಳಾಡಿದಳು. ಕುಂಞಿಕನ್ನಿ ಅಳುತ್ತ ಹೀಗೆಂದಳು – ತಚ್ಚೋಳಿ ಒದೇನ ನನ್ನ ಒಡಹುಟ್ಟಣ್ಣ! ಏಳು ವರ್ಷ ಪ್ರಾಯದ ಒಂದು ಗಂಡು ಈ ಮನೆಯಲ್ಲಿರುತ್ತಿದ್ದರೆ ಕರಿಮಲೆ ನಾಡರಸು ಕುಂಞಿಕೋರ ನನಗೆ ಪುಡಮುರಿ ನಿಶ್ಚೈಸುತ್ತಿರಲಿಲ್ಲ. ಪೊನ್ಮಲೆ ಕೋಟೆಯ ಹಿರಿಯೊಡತಿಯೂ ನಡೆದುದನ್ನೆಲ್ಲ ಅಳುತ್ತ ವಿವರಿಸಿದಳು.

ಎಲ್ಲವನ್ನೂ ಕೇಳಿದ ಒದೇನನೆಂದ – ಪೊನ್ಮಲೆ ಕೋಟೆಯ ಹಿರಿಯವ್ವ! ನೀವು ಪಡು ಮನೆಯಲ್ಲಿ ಹೀಗೆ ಅನ್ನ ನೀರಿಲ್ಲದೆ ಉಪವಾಸ ಮಲಗುವುದು ಬೇಡ. ನೀವು ಎದ್ದು ಸ್ನಾನ ಮಾಡಿ. ಹಳೆಯಕ್ಕಿ ಅನ್ನ ಮಾಡಿ ಉಣ್ಣಿ. ಕರಿಮಲೆಯರಸು ಕೋರನಲ್ಲಿ ನಾನು ಇದಕ್ಕೆ ಉತ್ತರವನ್ನು ಕೇಳುತ್ತೇನೆ. ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ಇಬ್ಬರೂ ಜತೆಯಲ್ಲಿ ಹೊರಟರು. ಹಾಗೆ ನಡೆಯುತ್ತ ನಡೆಯುತ್ತ ತಚ್ಚೋಳಿ ಮನೆಗೆ ಬಂದರು. ಒದೇನ ಚಾಪನಲ್ಲಿ ಕೇಳಿದ – ಕಂಡಾಚ್ಚೇರಿಯ ಪ್ರಿಯ ಗೆಳೆಯ ಚಾಪ್ಪಾ! ಕರಿಮಲೆನಾಡರಸು ಕುಂಞಿಕೋರ ನಾನು ಕಲಿತಿರುವ ಎಲ್ಲ ವಿದ್ಯೆಗಳನ್ನೂ ಕಲಿತಿದ್ದಾನೆ. ನಾನೂ ಆ ಕೋರನೂ ಗೆಳೆಯರಾಗಿದ್ದೇವೆ. ಕೋರನನ್ನು ಕೊಲ್ಲುವುದು ಹೇಗೆ? ಕಂಡಾಚ್ಚೇರಿ ಚಾಪ್ಪ ಕೂಡಲೆ ಹೇಳಿದ – ನನ್ನ ಧನೀ, ನನ್ನ ಯಜಮಾನರೆ! ನಾನು ಒಂದು ಉಪಾಯ ಹೇಳುತ್ತೇನೆ – ನೀವು ಒಂದು ಓಲೆ ಬರೆಯಬೇಕು : ಕರಿಮಲೆ ನಾಡನ್ನಾಡುವ ಕುಂಞಿಕೋರ! ಮೂರುವರ್ಷದಿಂದ ನಾನು ಸದಾ ಹಂಬಲಿಸುತ್ತಿದ್ದೇನೆ. ನಾವಿಬ್ಬರೂ ಕಾವ್‌ನ ಕೆರೆಯಲ್ಲಿ ಮೀಯಬೇಕು, ಕಾವ್‌ನ ಮುಂದೆಯೇ ಅಟ್ಟುಣ್ಣಬೇಕು.... ಎಂದು ಮುಂತಾಗಿ. ಹಾಗೊಂದು ಓಲೆಯನ್ನು ಅವರು ಬರೆದರು. ಓಲೆಯನ್ನು ಒದೇನ ಚಾಪನ ಕೈಗೆ ಕೊಟ್ಟ. ಅವನು ಓಲೆಯನ್ನು ತೆಗೆದುಕೊಂಡು ಕರಿಮಲೆಗೆ ತಲಪಿದ. ಕರಿಮಲೆ ಕೋರನ ಮನೆಗೆ ಹೋದ. ಕರಿಮಲೆ ಕೋರ ಬಾಗಿಲಲ್ಲೇ ಕುಳಿತಿದ್ದ. ಚಾಪನನ್ನು ಕಣ್ಣಾರೆ ಕಂಡಾಗ ಕುಂಞಿಕೋರ ಕೇಳಿದ – ಕಂಡಾಚ್ಚೇರಿಯ ಪ್ರಿಯ ಚಾಪ್ಪ! ಏನು ಕಾರಣ ಇಲ್ಲಿಗೆ ಬಂದೆ? ಚಾಪ್ಪ ಯಾವ ಮಾತಿನಿಂದಲೂ ಉತ್ತರ ಕೊಡದೆ ಓಲೆಯನ್ನು ಅವನಿಗೆ ಕೊಟ್ಟ. ಕುಂಞಿಕೋರ ಓಲೆಯ ವಾಚಕಗಳನ್ನು ಓದಿ ಮುಗುಳ್ನಕ್ಕ. ಓಲೆಗೆ ಉತ್ತರ ಬರೆದ – ತಚ್ಚೋಳಿಯ ಪ್ರಿಯ ಮಿತ್ರ ಕುಞ್ಞೊದೇನ! ಇದು ನಾನೂ ಬಯಸಿದ್ದ ಆಸೆ. ಅದಕ್ಕೇನಂತೆ! ನನಗೊಂದು ಬೈರಾಸು ಬೇಕು, ನಿನಗೊಂದು ಹರಕು ಬಟ್ಟೆಬೇಕು, ಅಷ್ಟೇ ತಾನೆ? – ಹೀಗೊಂದು ಓಲೆ ಬರೆದು ಚಾಪ್ಪನಿಗೆ ಕೊಟ್ಟ. ಚಾಪ್ಪ ಓಲೆಯನ್ನು ತೆಗದುಕೊಂಡು ತಚ್ಚೋಳಿ ಮನೆಗೆ ಬಂದ. ತಚ್ಚೋಳಿ ಒದೇನ ಓಲೆಯ ವಾಚಕವನ್ನು ಓದಿಕೊಂಡ. ಬಳಿಕ ಹೀಗೆಂದ – ಕಂಡಾಚ್ಚೇರಿ ಚಾಪ್ಪಾ! ಕರಿಮಲೆ ನಾಡರಸು ಕುಂಞಿಕೋರನನ್ನು ನಾನು ಕೊಲ್ಲಲಾರೆ. ಅವನನ್ನು ನಾನು ಹೇಗೆ ಕೊಲ್ಲಲಿ? ಕೂಡಲೆ ಚಾಪ್ಪನೆಂದ – ನನ್ನ ಧನೀ, ನನ್ನ ಯಜಮಾನರೆ! ನಾನು ಒಂದು ಉಪಾಯ ಹೇಳಿಕೊಡುತ್ತೇನೆ. ಕುಂಞಿಕೋರ ಇಲ್ಲಿಗೆ ಬಂದಾಗ ನೀವಿಬ್ಬರೂ ಎಣ್ಣೆ ಹಚ್ಚಿಕೊಳ್ಳುವ ಹೊತ್ತಿನಲ್ಲಿ ನಿಮ್ಮ ಉರುಮಿಯನ್ನು ತೆಗೆದುಕೊಂಡು ನಾನು ಕಾವ್‌ನ ಕೆರೆಗೆ ಹೋಗುತ್ತೇನೆ. ಕೆರೆಯಲ್ಲಿ ಉರುಮಿಯನ್ನು ನಾನು ಅಲಗು ಮೇಲಾಗಿ ಇಡುತ್ತೇನೆ. ಕೆರೆಯ ಮೂಡುಬದಿಯಲ್ಲಿ ಹಾಗೆ ಇಟ್ಟಿರುತ್ತೇನೆ. ಹೀಗೆ ಉಪಾಯ ನಿಶ್ಚೈಸಿಕೊಂಡು ಅವರು ಅಲ್ಲಿದ್ದರು.

ಮರುದಿನ ಬೆಳಕು ಹರಿವ ಹೊತ್ತಿಗೆ/ಹುಲ್ಲು ಅರಳುವ ಹೊತ್ತಿಗೆ ಕರಿಮಲೆ ನಾಡರಸು ಕುಂಞಿಕೋರ ಇಪ್ಪತ್ತೆರಡು ಮಂದಿ ಒಳ್ಳೆಯ ತೀಯರನ್ನು ಕೂಡಿಕೊಂಡು ತಚ್ಚೋಳಿ ಮನೆಗೆ ಬಂದ. ಒದೇನ ಅವನನ್ನು ಕಣ್ಣಾರೆ ಕಂಡಾಗ ಓಡಿ ಪಡುಕೋಣೆಗೆ ಹೋಗಿ ಹುಲ್ಲುಚಾಪೆಯನ್ನು ತಂದು ಬಾಗಿಲಲ್ಲಿ ಹಾಸಿದ. ಬೆಳ್ಳಿತಟ್ಟೆಯಲ್ಲಿ ತಾಂಬೂಲವನ್ನು ಒಯ್ದು ಕೋರನಿಗೆ ನೀಡಿದ. ಕುಂಞಿಕೋರ ಹುಲ್ಲುಚಾಪೆಯಲ್ಲಿ ಕುಳಿತ.ಒಂದು ಸೀಳು ವೀಳ್ಯದೆಲೆಯನ್ನೂ ತಿಂದ. ಆಚಾರದಂತೆ ಸುಖದುಃಖಗಳನ್ನು ಮಾತನಾಡಿದ. ಒದೇನ ಪಡುಕೋಣೆಗೆ ಹೋಗಿ ಮೈಗೆ ಹಚ್ಚುವ ಎಣ್ಣೆ ತಂದು ಬಾಗಿಲಲ್ಲಿ ಇರಿಸಿದ. ಬಳಿಕ ಎಣ್ಣೆಯನ್ನು ಕೈಗೆ ಸುರಿದುಕೊಂಡು ಮೈಗೆ ಹಚ್ಚಿಕೊಂಡ. ಕೋರನೂ ಎಣ್ಣೆ ಹಚ್ಚಿಕೊಂಡ. ಇಬ್ಬರೂ ಎಣ್ಣೆ ಸುರಿದು ಹಚ್ಚಿಕೊಂಡರು. ಕಂಡಾಚ್ಚೇರಿ ಚಾಪ್ಪ ಈ ಹೊತ್ತಿಗೆ ಉರುಮಿಯನ್ನು ತೆಗೆದುಕೊಂಡು ಹೋದ. ಒಲವಣ್ಣೂರ್ ಕಾವಿಗೆ ಬಂದ. ಕೆರೆಗೆ ಇಳಿದ. ಉರುಮಿಯನ್ನು ಮೇಲಲಗಾಗಿ ಕಟ್ಟಿ ಭದ್ರವಾಗಿ ಇರಿಸಿದ. ಅಲ್ಲಿಂದ ಬೇಗ ಬೇಗ ಹೊರಟುಹೋದ. ತಚ್ಚೋಳಿ ಮನೆಗೆ ತಲಪಿದ. ಬಾಗೆಹುಡಿಯನ್ನೂ ಗೊಂಪನ್ನೂ ತೆಗೆದುಕೊಂಡು ಒದೇನ ಮತ್ತು ಕೋರ ಹೊರಟರು. ಚಾಪನೂ ಜತೆಗೆ ಹೊರಟ. ಅವರು ಕಾವ್‌ನ ಕೆರೆಗೆ ಬಂದರು. ಒದೇನ ಗೊಂಪುಹಚ್ಚಿಕೊಂಡು ತಲೆಕೂದಲನ್ನು ತೊಳೆದುಕೊಂಡ. ಕೆರೆಯ ಪಡುಕಡವಿಗೆ ಹಾರಿದ. ಕರಿಮಲೆ ಕೋರನೂ ಮೂಡು ಕಡವಿಗೆ ಹಾರಿದ. ಅವನು ಹಾಗೆ ಹಾರಿದ ಸ್ವಲ್ಪ ಹೊತ್ತು ಕಳೆದು ಅಲ್ಲಿ ನೋಡಿದಾಗ ಕಾವ್‌ನ ಕೆರೆ ರಕ್ತದಿಂದ ತುಂಬಿತ್ತು. ತಚ್ಚೋಳಿ ಒದೇನನು ಬೇಗ ಬೇಗ ಸ್ನಾನತೀರಿಸಿ ಮೈ ಒರೆಸಿಕೊಂಡ. ಅವನು ಕೂಗಿ ಹೇಳಿದ–ಇಪ್ಪತ್ತೆರಡು ಜನ ತೀಯರೇ ಕೇಳಿ! ಕರಿಮಲೆ ನಾಡರಸು ಕೋರನನ್ನು ನಾನು ಕೊಂದದ್ದಲ್ಲ. ಅವನು ಕೆರೆಗೆ ಹಾರುವ ಹೊತ್ತಿಗೆ ತನ್ನಷ್ಟಕ್ಕೆ ಬಿದ್ದು ಸತ್ತಿದ್ದಾನೆ. ಅದನ್ನು ಕೇಳಿದ ತೀಯರು ಕಾವಿನ ಕೆರೆಗೆ ಹಾರಿದರು. ಕೋರನ ಶವವನ್ನು ಎತ್ತಿಕೊಂಡು ಹೋದರು. ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ಜತೆಯಾಗಿ ಪೊನ್ಮಲೆ ಕೋಟೆಗೆ ಹೋದರು. ಹಿರಿಯವ್ವೆಗೆ ಸಂಗತಿಯನ್ನೆಲ್ಲ ಹೇಳಿದರು. ಆ ಸುದ್ದಿಯನ್ನು ಕೇಳಿದ ಹಿರಿಯವ್ವ ತುಂಬ ಮುದಗೊಂಡಳು. ಒದೇನನು ಕನ್ನಿಗೂ ಸಂಗತಿಯನ್ನು ತಿಳಿಸಿದಾಗ ಅವಳು ತುಂಬ ನಕ್ಕಳು. ಅವಳಿಗೆ ತಿಳಿಸಿಕೊಟ್ಟು ಬೀಳ್ಕೊಂಡು ಒದೇನನೂ ಕಂಡಾಚ್ಚೇರಿಯೂ ತಚ್ಚೋಳಿಗೆ ಮರಳಿದರು. ಅಲ್ಲಿ ಸುಖವಾಗಿದ್ದರು.

ಎರಡು ಮದುವೆಗಳನ್ನು ಒಟ್ಟಿಗೆ ಮಾಡಿಬಿಡೋಣ

ಕೋಟೆಕ್ಕಲ್ ಉಮ್ಮರನೆಂಬ ಜೋನಕ ದಾರಿಹೋಗುತ್ತಿದ್ದ. ಓದುಬರೆಹ ಕಲಿಯುವುದಕ್ಕಾಗಿ ಹೋಗುತ್ತಿದ್ದ ಮಣಿಯೂರೆಡಂ ಕುಂಞಿಮಾತುವನ್ನು ಕಣ್ಣಾರೆ ಕಂಡ. ಕಣ್ಣಾರೆ ಕಂಡ ಅವನು ಮನದಲ್ಲೆ ನೆನೆದ– ಈ ಹೋಗುತ್ತಿರುವ ಹುಡುಗಿ ಯಾರು? ಅವಳು ನನಗೆ ಬೇಕೇ ಬೇಕು. ಅವಳು ನನಗೆ ಸಿಕ್ಕಿದರೆ ನಾನು ಅವಳನ್ನು ಮದುವೆಯೇ ಆಗಿ ಬಿಡುತ್ತೇನೆ. ಅವಳ ಮನೆ ಯಾವುದೆಂದು ತಿಳಿಯಬೇಕು. ಹೀಗೆ ಮನದಲ್ಲೇ ಮಂಡಿಗೆ ಮೆಲ್ಲುತ್ತ ಅವನು ಬೇಗಬೇಗ ಹೆಜ್ಜೆ ಹಾಕಿದ. ಮನೆಗೆ ಬಂದವನೇ ಒಂದು ಸಣ್ಣ ಕೈಪೆಟ್ಟಿಗೆಯಲ್ಲಿ ಚಿನ್ನವನ್ನು ತುಂಬಿಕೊಂಡು ನಡೆಯುತ್ತ ನಡೆಯುತ್ತ ನೇರವಾಗಿ ಮಣಿಯೂರೆಡಂ ತಲಪಿದ. ಅಲ್ಲಿನ ಹಿರಿಯ ಹೆಂಗುಸನ್ನು ಭೇಟಿಯಾಗಿ ಹೇಳಿದ – ಮಣಿಯೂರೆಡಂನ ಹಿರಿಯವ್ವ! ಮಗಳು ಕುಂಞಿಮಾತು ಓದು ಬರೆಹಕ್ಕಾಗಿ ಕಳರಿಗೆ ಹೋಗುತ್ತಿದ್ದಾಗ ನಾನು ಅವಳನ್ನು ಕಂಡೆ. ಮಣಿಯೂರೆಡಂನ ಹಿರಿಯವ್ವ! ಅವಳಲ್ಲಿ ನಾನು ಮನಸ್ಸು ಇರಿಸಿಬಿಟ್ಟೆ. ಹಾಗಾಗಿ ನಾನು ಈ ಕಡೆ ಬಂದೆ. ಅವಳನ್ನು ನನಗೆ ಕೊಡಬೇಕು. ನಿಮಗೆ ಬೇಕಾದ ಹೊನ್ನು ಕೊಡುತ್ತೇನೆ. ಉಮ್ಮರ್ ಒಂದು ಚಿಕ್ಕ ಕೈಪೆಟ್ಟಿಗೆ ಹೊನ್ನನ್ನು ಮಣಿಯೂರೆಡಂನ ಹಿರಿಯವ್ವೆಗೆ ಕೊಟ್ಟ. ಹೊನ್ನು ಕೊಟ್ಟ ಬಳಿಕ ಎಂದ – ಮಣಿಯೂರೆಡಂನ ಹಿರಿಯವ್ವ! ಇಂದು ಹೊತ್ತು ಕಂತುವ ಹೊತ್ತಿಗೆ ನಾನು ಇತ್ತ ಕಡೆ ಬರುತ್ತೇನೆ. ಪಡುಕೋಣೆಯನ್ನು ಗುಡಿಸಿ ಹಾಸಿಗೆ ಹಾಸಿಡಿ. ಬಳಿಕ ಮಾತುವಿಗೆಂದ – ಮಣಿಯೂರೆಡಂನ ಕುಂಞಿಮಾತು! ನನ್ನ ಹತ್ತಿರಕ್ಕೆ ಬಾ ಹುಡುಗಿ. ಹಾಗೆ ಹೇಳುತ್ತ ಅವಳ ಕೈ ಹಿಡಿಯಹೋದಾಗ ಮಾತು ಕೈಯನ್ನು ಕೊಡವಿ ಕೊಸರಿಕೊಂಡು ಓಡಿದಳು. ಉಮ್ಮರ್ ಮನೆಗೆ ಮರಳಿದ. ಮಾತು ಹಾಗೆ ಓಡಿದವಳು ತಚ್ಚೋಳಿ ಮನೆಗೆ ಬಂದಳು. ಅಲ್ಲಿನ ಉಣ್ಣಿಚ್ಚಿರಳೂ ಮಾತುವೂ ಜತೆಗೆ ಓದು ಬರಹ ಕಲಿಯು

ತ್ತಿದ್ದವರು, ಗೆಳತಿಯರು. ಮಾತುವು ಮನೆಗೆ ಬಂದುದನ್ನು ಕಂಡು ಉಣ್ಣಿಚ್ಚಿರ ಕೇಳಿದಳು – ಮಣಿ ಯೂರೆಡಂನ ನನ್ನ ಗೆಳತಿ! ನೀನೇಕೆ ಓಡುತ್ತ ಬಂದೆ? ನಿನಗೆಂಥ ತೊಂದರೆ ಬಂತು? ಕುಂಞಿಮಾತು ಎಂದಳು – ತಚ್ಚೋಳಿ ಉಣ್ಣಿಚ್ಚಿರ! ನನ್ನ ಗೆಳತಿ! ಕೋಟೆಕ್ಕಲ್ ಉಮ್ಮರ ಜೋನಕ ಇವತ್ತು ನಮ್ಮಲ್ಲಿಗೆ ಬಂದು ಸಣ್ಣ ಕೈಪೆಟ್ಟಿಗೆಯಲ್ಲಿ ಒಂದಿಷ್ಟು ಚಿನ್ನ ತಂದು ನನ್ನ ಅಮ್ಮನ ಕೈಗೆ ಕೊಟ್ಟಿದ್ದಾನೆ. ನನ್ನನ್ನು ಕಂಡು ಅವನಿಗೆ ಆಸೆಯಾಗಿದೆಯೆಂದೂ ನನ್ನನ್ನು ಅವನಿಗೆ ಕೊಡುವಂತೆಯೂ ಹೇಳಿದ. ಸಂಜೆಗೆ ಅವನು ಬರುವಾಗ ಪಡು ಕೋಣೆಯನ್ನು ಸಿದ್ಧ ಪಡಿಸಿಡಬೇಕಂತೆ! ನಾನು ಸಂಜೆಗೆ ಅಲ್ಲಿಗೆ ಹೋಗುವುದೇ ಇಲ್ಲ. ಅವರು ಹಾಗೆ ಮಾತನಾಡುತ್ತಿರಲು ಆ ಸಂಗತಿ ಒದೇನನ ಕಿವಿಗೆ ಬಿತ್ತು. ಉಣ್ಣಿಚ್ಚಿರ ಅಣ್ಣನಿಗೆ ಎಲ್ಲ ವಿಷಯಗಳನ್ನೂ ವಿಶದಪಡಿಸಿದಳು.

ಇತ್ತ ಕೋಟಕ್ಕಲ್ ಉಮ್ಮರ್ ಸಂಜೆಯಾದಾಗ ಮಣಿಯೂರೆಡಂಗೆ ಹೋದ. ಹೋದಾಗ ಅಲ್ಲಿನ ಹಿರಿಯವ್ವೆ ಅವನಿಗೆಂದಳು – ಉಮ್ಮರ್ ಜೋನಕನೇ! ಮಾತು ಹುಡುಗಿ ಇಲ್ಲಿಲ್ಲ. ಅವಳು ತಚ್ಚೋಳಿ ಮನೆಗೆ ಹೋಗಿದ್ದಾಳೆ. ನೀನು ಅಲ್ಲಿಗೆ ಹೋಗಿ ಒದೇನನಿಗೆ ವಿಷಯ ತಿಳಿಸು. ತಿಳಿಸಿದರೆ ಮಾತುವನ್ನು ಒದೇನ ಇಲ್ಲಿಗೆ ಕಳಿಸಬಹುದು. ಅವಳು ಇಲ್ಲಿಗೆ ಬಂದರೆ ಅವಳು ನಿನ್ನವಳಾಗುತ್ತಾಳೆ. ನಿನ್ನಿಂದ ಒಂದು ಪೆಟ್ಟಿಗೆ ಹೊನ್ನು ತೆಗೆದುಕೊಂಡು ಅವಳನ್ನು ನಾನು ನಿನಗೆ ಕೊಡದಿರುತ್ತೇನೆಯೆ? ನೀನು ಬೇಗ ಮೇಪ್ಪಕ್ಕೆ ಹೋಗು. ಅದನ್ನು ಕೇಳಿದ ಉಮ್ಮರ್ ತಚ್ಚೋಳಿ ಮೇಪಕ್ಕೆ ಹೋದ. ಹೋಗಿ ಒದೇನನಲ್ಲಿ ಎಲ್ಲವನ್ನೂ ಹೇಳಿದ. ಸಂಗತಿಯನ್ನೆಲ್ಲ ಕೇಳಿದ ಒದೇನ ಎಂದ – ಕೋಟ್ಟಕ್ಕಲ್ ಉಮ್ಮರ್ ಜೋನಕನೆ! ಮಾತುವನ್ನು ನಿನಗೆ ಕೊಡಿಸೋಣ. ಆದರೆ ಒಂದುಂಟು. ನೀನು ಅವಳ ಅಮ್ಮನ ಕೈಗೆ ಕೊಟ್ಟಿರುವ ಚಿನ್ನದ ಪೆಟ್ಟಿಗೆಯನ್ನು ಇಲ್ಲಿ ನನಗೆ ತಂದು ಕೊಡು. ಮಾತುವನ್ನು ನಿನಗೆ ಕೊಡುತ್ತೇನೆ. ಮಾತ್ರವಲ್ಲ ನಿನಗೆ ಅವಳ ಮೇಲೆ ಇಷ್ಟವಿದ್ದರೆ ನನ್ನ ತಂಗಿ ಉಣ್ಣಿಚ್ಚಿರಳನ್ನೂ ಕೊಡುತ್ತೇನೆ. ಎರಡು ಮದುವೆಗಳನ್ನು ಒಟ್ಟಿಗೆ ಮಾಡಿಬಿಡೋಣ. ಬೇಕಾದ ಸಿದ್ಧತೆಗಳನ್ನು ನೀನು ಮಾಡಿಕೊ. ನಿನಗೆ ಬೇಕಾದವರಿಗೆಲ್ಲ ಮದುವೆಯ ಹೇಳಿಕೆ ಮಾಡು. ಕೋಟೆಕಲ್ಲ್‌ನಿಂದ ಮೇಪ್ಪದವರೆಗೂ ಚಪ್ಪರ ಹಾಕಬೇಕು. ಮುಂದಿನ ಗುರುವಾರದ ಒಳ್ಳೆಯ ದಿನದಂದು ಮದುವೆ ನಡೆಯಲಿ. ಬೇಗ ಹೋಗಿ ಹೊನ್ನನ್ನು ಇತ್ತ ತಂದುಬಿಡು.

ಒದೇನನೆಂದುದನ್ನು ಕೇಳಿದ ಉಮ್ಮರ್ ಸಂತೋಷದಿಂದ ನಗುನಗುತ್ತ ಹೋದ. ಮನದಲ್ಲೆ ಹೀಗೆ ಲೆಕ್ಕಹಾಕಿದ – ಒದೇನನ ತಂಗಿಯೂ ನನಗೆ ಸಿಕ್ಕಿದಳು, ಮಾತುವೂ ಸಿಕ್ಕಿದಳು. ಇನ್ನು ಬೇಗ ಬೇಗ ಸಾಮಗ್ರಿಗಳನ್ನು ಸೇರಿಸಬೇಕು. ಹೀಗೆ ನೆನೆಯುತ್ತ

ಮಣಿಯೂರೆಡಂಗೆ ಹೋದ. ಅಲ್ಲಿ ಹಿರಿಯವ್ವೆಯಿಂದ ಚಿನ್ನವನ್ನು ಪಡೆದ. ಆಕೆಯಿಂದ ಹೊನ್ನನ್ನು ಪಡೆದುಕೊಂಡು ಬೇಕುಬೇಕಾದ ಸಾಮಾನುಗಳನ್ನು ಖರೀದಿಸಿದ. ಕೋಟೆಕ್ಕಲ್ಲ್‌ನಿಂದ ಮೇಪ್ಪದವರೆಗೂ ಚಪ್ಪರ ಹಾಕಿಸಿದ. ತನಗೆ ಬೇಕಾದವರಿಗೆಲ್ಲ ಹೇಳಿ ಕಳುಹಿಸಿದ. ಗುರುವಾರದ ಮುಂಜಾನೆಯೂ ಅರಳಿಕೊಂಡಿತು. ಉಮ್ಮರ್ ಸೊಗಸಾಗಿ ಅಲಂಕಾರ ಮಾಡಿಕೊಂಡು ಮೇಪಕ್ಕೆ ಹೋದ. ಒದೇನನೂ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸಿ, ತಚ್ಚೋಳಿಮೇಪ್ಪದ ಉಣ್ಣಿಚ್ಚಿರಳನ್ನೂ ಮಣಿಯೂರೆಡಂನ ಕುಂಞುಮಾತುವನ್ನೂ ಸಿಂಗಾರಮಾಡಿ ಕುಳ್ಳಿರಿಸಿದ. ಕೋಟೆಕ್ಕಲ್ ಉಮ್ಮರನೂ ಒಂದಷ್ಟು ಮಂದಿ ಜನರೂ ಅಲ್ಲಿಗೆ ತಲಪಿದರು. ಬಂದವರಿಗೆ ಬೇಕಾದುದನ್ನೆಲ್ಲ ಒದಗಿಸುವ ವ್ಯವಸ್ಥೆಯನ್ನು ಒದೇನನು ಮಾಡಿಸಿದ್ದ. ತಾನೂ ಸಿಂಗಾರವಾದ ಒದೇನ ಮದುವಳತಿಯರಿಬ್ಬರನ್ನೂ ಕೂಡಿಕೊಂಡು ಹೊರಟ. ಪಡು ಕೋಣೆಗೆ ಹೋಗಿ ಉರುಮಿಯನ್ನು ತೆಗೆದುಕೊಂಡ. ಕಂಡಾಚ್ಚೇರಿ ಚಾಪ್ಪನೂ ಎಲ್ಲರೂ ಜತೆಯಾಗಿ ಹೊರಟರು. ಉಮ್ಮರ್ ಜತೆಯವರೊಂದಿಗೆ ಸಾಗುತ್ತ ಮನದಲ್ಲೆ ನೆನೆದ – ತಚ್ಚೋಳಿಯ ಕಣ್ಮಣಿ ಬಾಲ ಒದೇನ ನನ್ನ ಭಾವನೆಂಟನಾದ. ಎರಡು ಹುಡುಗಿಯರೂ ನನಗೆ ಸಿಕ್ಕರು! ಹಾಗೆ ನೆನೆಯುತ್ತ ಸಾಗಿ ಕೋಟೆಕಡವಿಗೆ ತಲಪಿ ಎಲ್ಲರೂ ದೋಣಿ ಹತ್ತಿದರು. ಕೊಕ್ಕಹೊಳೆಯ ಮಧ್ಯಕ್ಕೆ ತಲಪುತ್ತಲೆ ಒದೇನನು ಉರುಮಿಯನ್ನು ಹೊರ ತೆಗೆದು ಚಾಪನಿಗೆಂದ – ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ಉಮ್ಮರನನ್ನು ನಾನು ಕಡಿದು ಹಾಕಿಬಿಡಲೆ? ಚಾಪ್ಪನೆಂದ – ಹೊಳೆಯ ಮಧ್ಯಕ್ಕೆ ತಲಪಿಬಿಟ್ಟಿದ್ದೇವೆ. ಬೇಗ ಆ ಕೆಲಸ ಮುಗಿಸಿಬಿಡು. ಅದನ್ನು ಕೇಳಿದ ಒದೇನ ಎಳನೀರಿನ ಮುಖವನ್ನು ಕಡಿಯುವಂತೆ ಕೋಟೆಕ್ಕಲ್ ಉಮ್ಮರನನ್ನು ಕಡಿದು ಹೊಳೆಗೆ ಹಾಕಿದ. ಉಳಿದ ಜೋನಕರೆಲ್ಲ ಹಾಹಾಕಾರ ಮಾಡಿದರು. ಒದೇನ ದೋಣಿಯನ್ನು ಹಿಂದಿರುಗಿಸುವಂತೆ ಅಪ್ಪಣೆಮಾಡಿದ. ದೋಣಿಗಳು ಹಿಂತಿರುಗಿದುವು. ಒದೇನನೂ ಜತೆಯವರೂ ತಚ್ಚೋಳಿ ಮೇಪಕ್ಕೆ ಬಂದು ಅಲ್ಲಿ ಸಂತೋಷ ದಿಂದಿದ್ದರು. ಅವನಿಗೆ ಹೇಳು – ಹೊತ್ತು ಮುಸ್ಸಂಜೆಯಾಗುವಾಗ ಕಪ್ಪಣ ಪರಂಬ್‌ಗೆ ಬಾ. ಬಂದರೆ ಮಾತುವನ್ನು ಕೊಡುತ್ತೇನೆ, ಎನ್ನು. ಕುಂಞಿಕುಂಬೆ! ಬಳಿಕ ಪಾರುವಲ್ಲಿ ಹೀಗೆನ್ನು – ಕಪ್ಪಣ ಪರಂಬ್‌ನ ಕುಂಞಿಪ್ಪಾರು! ನಾನು ಎಷ್ಟು ದಿನವಾಯಿತು ಹೊಟ್ಟೆನೋವಿನಿಂದ ಬಳಲುತ್ತಿರುವುದು? ನಾನು ಸಹಿಸಲಾರೆನಪ್ಪ! ಇಂದಿನ ರಾತ್ರೆಯನ್ನು ಹೇಗೆ ಕಳೆಯಲಿ? ನೀನು ಪಡುಕೋಣೆಯ ಬಾಗಿಲು ಹಾಕಬೇಡ. ನನಗೆ ಅಲ್ಲಿಂದ ಏನಾದರೂ ಬೇಕಾದರೆ ನಿನ್ನನ್ನು ಬಂದು ಕರೆಯುತ್ತೇನೆ. ಹಾಗಾಗಿ ಬಾಗಿಲ ಚಿಲಕ ಹಾಕಬೇಡ. ಬಾಗಿಲು ಚೆನ್ನಾಗಿ ಓರೆ ಮಾಡಿಕೊಂಡರೆ ಸಾಕು. ಹಾಗೆ ಅವಳಲ್ಲಿ ಹೇಳು. ಹಾಗೆ ಹೇಳಿದರೆ ಅವಳು ಬಾಗಿಲು ಓರೆ ಮಾಡಿಕೊಂಡಾಳು, ಅಷ್ಟೆ. ಆಗ ಕುಂಞ್ಯಮ್ಮದ್‌ಗೆ ಅದರೊಳಗೆ ಹೋಗಲು ಅನುಕೂಲ.

ಹೀಗೆ ಅವರು ಮಾತನಾಡುತ್ತಿದ್ದುದನ್ನು ಪಾರು ಕೇಳಿಸಿಕೊಂಡಳು. ಮನದಲ್ಲೆ ಮರುಗಿದಳು – ನನಗೆ ತಂದೆ ತಾಯಿ ಇಲ್ಲ. ಮಾವನೂ ಇಂಥವರಾಗಿ ಬಿಟ್ಟರಲ್ಲ! ರಾತ್ರೆಯನ್ನು ಹೇಗೆ ಕಳೆಯಲಿ? ನಾನು ಬಾಗಿಲು ಮುಚ್ಚಿಯೇ ಮಲಗುತ್ತೇನೆ. ಆ ಮೇಲೆ ಬರುವುದೆಲ್ಲ ಬರಲಿ! ಹಾಗೆ ನಿಶ್ಚೈಸಿಕೊಂಡ ಪಾರು ಸ್ನಾನಕ್ಕೆಂದು ಹೋದಳು. ಹಾಗೆ ಹೋದಾಗ ಕುಂಬೆ ಎಂದಳು – ಕಪ್ಪಣ ಪರಂಬ್‌ನ ಕುಂಞಿಪ್ಪಾರು! ಇದೇನಿದು, ನಡುಹಗಲು ಉರಿಬಿಸಿಲಿಗೆ ಎಲ್ಲಿಗೆ ಹೊರಟೆ? ಪಾರು ಹೇಳಿದಳು – ಕಕ್ಕಾಟು ಗುಡ್ಡೆಯ ಸೋದರತ್ತೆ! ಮೀಯಲು ಕೆರೆಗೆ ಹೋಗುತ್ತಿದ್ದೇನೆ. ಅತ್ತೆಯೆಂದಳು – ಮಿಂದು ಬೇಗ ಬಂದುಬಿಡು, ನೀನು! ಪಾರು ಮೀಯಲು ಹೋದಳು. ಅದೇ ಹೊತ್ತಿಗೆ ಕುಂಞ್ಯಾಮ್ಮದ್ ಒಂದು ಪೆಟ್ಟಿಗೆ ಹೊನ್ನನ್ನು ತೆಗೆದುಕೊಂಡು ಅವಸರವಸರವಾಗಿ ಬಂದ. ಕುಂಬೆ ಬೇಗನೆ ಅವನ ಬಳಿ ಹೋದಳು. ಸಂಗತಿಯನ್ನೆಲ್ಲ ಹೇಳಿ ಅವನಿಂದ ಚಿನ್ನ ತುಂಬಿದ ಪೆಟ್ಟಿಗೆಯನ್ನು ತೆಗೆದುಕೊಂಡಳು. ಬಳಿಕ ಹೀಗೆಂದಳು – ಕೊಟ್ಟಯಂ ಪರಂಬ್‌ನ ಕುಂಞ್ಯಮ್ಮದ್! ನೀನು ಮುಂಜಾನೆ ಬೇಗನೆ ಬಾ. ಬಂದರೆ ನಿನ್ನನ್ನು ನಾನು ಅಟ್ಟಕ್ಕೆ ಹತ್ತಿಸಿ ಬಿಡುತ್ತೇನೆ. ಮುಸ್ಸಂಜೆಯಾದಾಗ ಪಾರು ಉಂಡು ಪಡುಕೋಣೆಗೆ ಹೋದ ಹೊತ್ತಿಗೆ ನಿನ್ನನ್ನು ಅಲ್ಲಿ ಕಳಿಸಿಬಿಡುವೆ. ಅದನ್ನು ಕೇಳಿದ ಕುಂಞಾಮದ್ ನಗುನಗುತ್ತ ಹೋದ.

ಇತ್ತ ಸ್ನಾನಕ್ಕೆ ಹೋದ ಪಾರು ಅಳುತ್ತ ಸಾಗುತ್ತಿದ್ದಳು. ಆಗ ತಚ್ಚೋಳಿ ಒದೇನ ಅವಳನ್ನು ಕಣ್ಣಾರೆ ಕಂಡ. ಒದೇನ ಅವಳಲ್ಲಿ ಕೇಳಿದ – ಕಪ್ಪಣೆಪರಂಬ್‌ನ ಪಾರು! ಇದೇನಿದು ಅಳುತ್ತಿದ್ದಿಯಲ್ಲ? ಯಾಕೆ? ಎಲ್ಲಿಗೆ ಹೊರಟೆ, ಏನು ಕತೆ? ಅದನ್ನು ಕೇಳಿದ ಪಾರು ದುಃಖದಿಂದ ಇನ್ನಷ್ಟು ಜೋರಾಗಿ ಅತ್ತಳು. ಒದೇನ ಅವಳ ಕೈ ಹಿಡಿದು ಕೇಳಿದ – ಕಪ್ಪಣೆಪರಂಬ್‌ನ ಪಾರು! ಏನು ಸಂಗತಿ ಎನ್ನುವುದನ್ನು ಮರೆಮಾಚದೆ ಹೇಳು. ಆಗ ಪಾರು ಎಲ್ಲ ವಿಷಯಗಳನ್ನೂ ಒದೇನನಿಗೆ ತಿಳಿಸಿದಳು. ಅದನ್ನು ಕೇಳಿ ಒದೇನ ತುಂಬ ನಕ್ಕುಬಿಟ್ಟ, ಬಳಿಕ ಪಾರುವಿಗೆ ಹೇಳಿದ –ನೀನು ಅಳಬೇಡ ಪಾರು. ಕೊಟ್ಟಯಂ ಕುಂಞ್ಯಾಮದ್ ನಿನ್ನ ಪಡುಮನೆಗೆ ತಲಪುವ ಮೊದಲೇ ನಾನು ಅಲ್ಲಿಗೆ ತಲಪುತ್ತೇನೆ. ನೀನು ಸ್ನಾನಮಾಡಿ ಹೋಗು. ಯಾರಿಗೂ ಈ ಸಂಗತಿಯನ್ನು ಹೇಳಬೇಡ. ಅದನ್ನು ಕೇಳಿದ ಪಾರು ಹಾಂ ಎಂದು ಒಪ್ಪಿಗೆಯಿತ್ತಳು. ಕೆರೆಗೆ ಇಳಿದು ಸ್ನಾನ ಮಾಡಿದಳು. ಒದೇನ ಮೇಪ್ಪಕ್ಕೆ ಹೋದ. ಪಾರು ಸ್ನಾನ ಮಾಡಿ ಮನೆಗೆ ತಲಪಿದಾಗ ಕಕ್ಕಾಡು ಗುಡ್ಡೆಯ ಕುಂಬೆ ಎಂದಳು – ಕಪ್ಪಣೆ ಪರಂಬ್‌ನ ಕುಂಞಿಪಾರು! ನೀನು ಊಟಮಾಡಿಕೊ. ಸ್ನಾನಕ್ಕೆ ಯಾವಾಗ ಹೋಗಿದ್ದಿ ನೀನು! ಈಗಷ್ಟೆ ಮರಳಿ ಬಂದೆ ಅಲ್ಲವೆ? ಬೇಗ ಊಟಮಾಡಿಕೊ. ಪಾರು ಊಟಮಾಡಿದಳು. ಸ್ವಲ್ಪ ಹೊತ್ತಿಗೆ ಮುಸ್ಸಂಜೆ ಯಾಯಿತು. ಕಕ್ಕಾಟುಗುಡ್ಡೆಯ ಕುಂಬೆ ಎಂದಳು – ಊಟಮಾಡಿ ಮಲಗು. ಬಾಗಿಲ

ಚಿಲಕ ಹಾಕಿಕೊಳ್ಳಬೇಡ. ನನಗೆ ಒಂದು ವೇಳೆ ನಿನ್ನ ಬಳಿ ಬರಬೇಕಾಗಬಹುದು. ಪಾರು ಊಟಮಾಡಿದಳು. ಪಡುಕೋಣೆಗೆ ಹೋದಳು. ಹೋಗಿ ಬಾಗಿಲ ಚಿಲಕ ಹಾಕಿಕೊಂಡಳು.

ಕೊಟ್ಟಿಯಂ ಮನೆಯ ಕುಂಞ್ಯಾಮದ್ ಬಂದವನನ್ನು ಕುಂಬೆ ಬೆಳಗ್ಗೆಯೇ ಅಟ್ಟವೇರಿಸಿದ್ದಳು. ಸಂಜೆಯಾದಾಗ ಅವನಲ್ಲಿ ಹೇಳಿದಳು – ಕೊಟ್ಟಿಯಂ ಮನೆಯ ಕುಂಞ್ಯಾಮದೆ! ಇನ್ನೊಂದಿಷ್ಟು ಕತ್ತಲಾಗಲಿ. ಆಗ ನಿನ್ನನ್ನು ನಾನು ಕರೆದೆಬ್ಬಿಸುವೆ. ಬಳಿಕ ಪಾರುವಿನ ಬಳಿ ಕಳುಹಿಸುವೆ. ಹೀಗೆ ಅವನು ಅಲ್ಲಿರಲು ತಚ್ಚೋಳಿ ಒದೇನನೂ ಅಲ್ಲಿಗೆ ತಲಪಿದ. ಬಾಗಿಲಲ್ಲಿ ಮೆಲ್ಲಗೆ ಕರೆದ. ಕುಂಞಿಪ್ಪಾರು ಕೇಳಿದಳು! – ಯಾರದು ಬಾಗಿಲ ಬಳಿ ಕರೆಯುತ್ತಿರುವುದು? ಒದೇನ ಕೂಡಲೆ ಉತ್ತರವಿತ್ತ – ಇದು ನಾನು, ನಾನಿದು, ಕುಂಞಿಪಾರು. ತಚ್ಚೋಳಿ ಒದೇನ! ಅದನ್ನು ಕೇಳಿದ ಪಾರು ಬಾಗಿಲನ್ನು ಬೇಗ ತೆರೆದಳು. ಒದೇನ ಕೂಡಲೆ ಒಳಗೆ ಸೇರಿಕೊಂಡ. ಒಳಗೆ ಸೇರಿಕೊಂಡವನೆ ಬಾಗಿಲು ಹಾಕಿದ. ಮಂಚದ ಮೇಲೆ ಹೋಗಿ ಕುಳಿತ. ಪಾರುವೂ ಬಳಿಗೆ ಹೋಗಿ ಕುಳಿತಳು. ಇಬ್ಬರೂ ಮಾತುಕತೆಯಾಡುತ್ತ ಆಡುತ್ತ ಕೂಡಿದರು. ಕುಂಞ್ಯಾಮದ್ ಇಷ್ಟು ಹೊತ್ತಿಗೆ ಅಟ್ಟವಿಳಿಯುತ್ತಿದ್ದ. ಅಟ್ಟವಿಳಿದು ಕುಂಬೆಯಲ್ಲಿ ಹೇಳಿದ – ಕಕ್ಕಾಡು ಗುಡ್ಡೆಯ ಕುಂಬೆ! ನೀನು ಚಿನ್ನವನ್ನು ಪಡೆದು ಇರಿಸಿಕೊಂಡಿದ್ದಿ. ಈಗ ಏನೂ ಮಾತಿಲ್ಲ ನಿನ್ನದು. ತುಂಬ ಹೊತ್ತಾಯಿತಲ್ಲವೆ? ಬೇಗ ನನ್ನನ್ನು ಪಡುಕೋಣೆಗೆ ಸೇರಿಸು. ಕುಂಬೆ ಅಂತೆಯೇ ಬಾಗಿಲಬಳಿ ಹೋಗಿ ಕರೆದಳು. ಒದೇನ ಅಲ್ಲಿದ್ದುದು ಅವಳಿಗೇನು ಗೊತ್ತು! ಅವಳು ಕರೆದೇ ಕರೆದಳು – ಕಪ್ಪಣೆ ಪರಂಬ್‌ನ ಪಾರು! ಮಗೂ, ಹೊಟ್ಟೆ ನೋವಿನಿಂದ ಏಳಲಾರೆ! ಬೇಗ ಬಾಗಿಲು ತೆಗೆ ಮಗೂ. ವಾಯುವಿನ ತೊಂದರೆಯೇ ಇರಬೇಕು. ಪಡುಕೋಣೆಯ ಪೆಟ್ಟಿಗೆಯಲ್ಲಿ ವಾಯು ಮಾತ್ರೆ ಗಳಿರುವುದನ್ನು ತೆಗೆದುಕೊಟ್ಟು ಬಿಡು. ತುಂಬ ಹೊತ್ತು ಹೀಗೆ ಕರೆದು ಅಂಗಲಾಚಿದರೂ ಪಾರು ಬಾಗಿಲು ತೆರೆಯಲಿಲ್ಲ. ಇದನ್ನು ಕಂಡ ಆಮದ್ ಹೀಗೆಂದ – ಕಕ್ಕಾಡು ಗುಡ್ಡೆಯ ಕುಂಬೆ! ಪಾರುವನ್ನೇನಾದರೂ ನನಗೆ ಕೊಡದೆ ಹೋದರೆ ನಾನು ಕೊಟ್ಟ ಒಂದು ಪೆಟ್ಟಿಗೆ ಹೊನ್ನನ್ನು ಹಿಂದೆ ಕೊಡ ಬೇಕಾದೀತು. ಕುಂಬೆ ಅವನಿಗೆ ಉತ್ತರವಿತ್ತಳು! – ಕೊಟ್ಟಿಯಂ ಮನೆಯ ಕುಂಞ್ಯಾಮದೆ! ನಾನೇನು ಮಾಡಲಪ್ಪ? ಅವಳು ಬಾಗಿಲೇ ತೆರೆಯುತ್ತಿಲ್ಲ. ಇವತ್ತು ತೆರೆಯದಿದ್ದರೆ ಹೋಗಲಿ. ನಾಳೆ ನೀನು ಇನ್ನೂ ಬೇಗನೆ ಬಂದುಬಿಡು. ಪಡುಕೋಣೆಯ ಮಂಚದ ಅಡಿಯಲ್ಲೆ ನಿನ್ನನ್ನು ನಾನು ಅಡಗಿಸುತ್ತೇನೆ. ಅಲ್ಲಿ ನೀನು ಹಾಗೆ ಕುಳಿತು ಕೊಂಡರೆ ಪಾರು ಬಾಗಿಲು ಗಟ್ಟಿ ಮಾಡಿ ಮಲಗಿಕೊಂಡವಳಿಗೆ ನಿದ್ದೆ ಹತ್ತಿದಾಗ ನೀನು ಹತ್ತಿರ ಸರಿದುಕೊ. ಚಿನ್ನವನ್ನು ನಾನು ಹಿಂದೆ ಕೊಡುವವಳಲ್ಲ. ಪಾರುವನ್ನೇ ಕೊಡುವವಳು.

ಹಾಗೆ ಹೇಳಿ ಆಮದನನ್ನು ಸಾಗಹಾಕಿದಳು. ಬೆಳ್ಳಂ ಬೆಳಕಾಗುವಾಗ ತಚ್ಚೋಳಿ ಒದೇನನು ಎದ್ದು ಪಾರುವಿಗೆಂದ – ಕಪ್ಪಣೆ ಪರಂಬ್‌ನ ಪಾರು! ನಾನಿನ್ನು ಬೇಗ ಬೇಗ ಹೊರಡಲೆ, ಹುಡುಗಿ? ಇಂದು ಮುಸ್ಸಂಜೆಯಾದಾಗ ನಾನು ಬಂದು ಬಿಡುತ್ತೇನೆ. ಸಂಜೆಯಾಗುತ್ತಿದ್ದಂತೆ ಪಡುಕೋಣೆಯ ಬಾಗಿಲು ಹಾಕಿಬಿಡು. ಕೊಟ್ಟಯಂ ಮನೆಯ ಕುಂಞ್ಯಾಮದೆ ಅಲ್ಲಿಗೆ ಬಂದು ಮಂಚದ ಕೆಳಗೆ ಅಡಗಿಕೊಂಡಾನು. ಅದಕ್ಕಾಗಿ ಹೇಳುತ್ತಿದ್ದೇನೆ. ಮುಸ್ಸಂಜೆಯಾಗು ತ್ತಿದ್ದಂತೆ ನಾನು ಉರ್ಮಿಯನ್ನು ತೆಗೆದುಕೊಂಡೇ ಬರುತ್ತೇನೆ, ಸಾಕಷ್ಟು ಮೊದಲೇ ಪಡುಕೋಣೆಯನ್ನು ನೀನು ಭದ್ರಪಡಿಸಿಕೊ. ಕಕ್ಕಾಡು ಗುಡ್ಡೆಮನೆಯ ಕುಂಬೆಗೆ ಒದೇನ ಬಂದುದೇ ತಿಳಿಯಲಿಲ್ಲ. ಅಂತೆಯೇ ಅವನು ಹೋದುದೂ ತಿಳಿಯಲಿಲ್ಲ. ಅವಳು ಪಡುಕೋಣೆಗೆ ಹೋದಳು. ಅವಳು ಅಲ್ಲಿಗೆ ಹೋದಾಗ ಪಾರು ಮಲಗಿ ನಿದ್ರಿಸುತ್ತಿದ್ದಳು, ಕುಂಬೆ ಎಂದಳು – ಕಪ್ಪಣೆ ಪರಂಬ್‌ನ ಕುಂಞಿಪಾರೂ! ಇದೆಂಥ ನಿದ್ರೆ ನಿನಗೆ? ನಿನ್ನೆ ಸಂಜೆ ನನ್ನ ಹೊಟ್ಟೆನೋವು ತುಂಬ ಉಲ್ಬಣವಾಯಿತು. ನಿನ್ನನ್ನು ಎಷ್ಟು ಕರೆದೆ! ನೀನು ಏನೂ ಮಾತಾಡಲೇ ಇಲ್ಲವಲ್ಲ. ಈಗ ಮಧ್ಯಾಹ್ನವಾಯಿತು. ಇದೆಲ್ಲ ಏನಪ್ಪಾ ಹೊಸ ಹೊಸ ಪದ್ಧತಿ? ಇದೇನಿದು ವೀಳ್ಯದೆಲೆಯ ತೊಟ್ಟು ಮತ್ತು ಅದರ ತುದಿಗಳ ರಾಶಿ? ಇದೇನಿದು ಅಡಕೆಯ ಸಿಪ್ಪೆ ಮತ್ತು ಅಡಕೆ ಹೆರೆದ ಸೊಣಗು? ನಿನ್ನ ಬಳಿಗೆ ಯಾರು ಬಂದಿದ್ದರು? ಅದನ್ನು ಕೇಳಿದ ಪಾರು ಬೇಗ ಎದ್ದು ಕುಳಿತಳು. ಆದರೆ ಏನನ್ನೂ ಮಾತನಾಡಲಿಲ್ಲ. ಕುಂಬೆ ಸಿಟ್ಟಿನಿಂದ ಕೇಳಿದಳು – ಇದೇನಿದು ನಿನ್ನ ತಂತ್ರ? ರಾತ್ರೆ ನಿನ್ನನ್ನು ಅಷ್ಟೊಂದು ಕರೆದರೂ ನೀನು ಮಾತೇ ಆಡಲಿಲ್ಲವಲ್ಲ? ಹೊಲೆಯನನ್ನು ಪಡುಕೋಣೆ ಹತ್ತಿಸಿಕೊಂಡದ್ದರಿಂದಲೋ ಅಷ್ಟೊಂದು ಕರೆದರೂ ನೀನು ಮಾತನಾಡ ದಿದ್ದುದು? ಬಾಗಿಲೂ ತೆಗೆಯಲಿಲ್ಲ. ಬಂದವನ ಹೆಸರನ್ನು ನೀನು ಹೇಳದಿದ್ದರೆ ನಿನ್ನ ಮಾವನಿಗೆ ಇದನ್ನೆಲ್ಲ ಹೇಳದಿರ ಲಿಕ್ಕಿಲ್ಲ. ನಿನ್ನಲ್ಲಿ ಒಳ್ಳೆಯ ಮಾತುಗಳು ಪ್ರಯೋಜನವಿಲ್ಲ. ನಮ್ಮ ದನಮೇಯಿಸುವ ಪೊಕ್ಕಾಯಿ ಹೊಲೆಯನನ್ನೋ ನೀನು ಹತ್ತಿಸಿಕೊಂಡದ್ದು? ಅಂಥವನನ್ನು ಬರಮಾಡಿಸಿದವಳಿಗೆ ಕೊಟ್ಟಯಂ ಮನೆಯ ಕುಂಞ್ಯಾಮದ್‌ನನ್ನು ಬರಮಾಡಿಸಿಕೊಂಡರೆ ಏನು? ನಾನು ತುಂಬ ಸಲ ಕಂಡಿದ್ದೇನೆ–ನೀನು ಪೊಕ್ಕಾಯಿ ಯೊಂದಿಗೆ ಕಿಲಕಿಲ ನಗುತ್ತ ಮಾತನಾಡುತ್ತ ಇದ್ದುದನ್ನು. ಹೊಲೆಯನನ್ನು ಪಡುಕೋಣೆ ಯಲ್ಲಿ ಮಲಗಿಸಿಕೊಂಡೆ. ಇದೆಷ್ಟು ಮಾನಗೆಟ್ಟ ಕೆಲಸ, ಪಾರು? ಹಾಗೇನಾದರೂ ಯಾರಾದರೂ ಬಂದಿದ್ದರೂ ಇರಲಿ. ನಾನು ಒಂದು ಕೆಲಸ ನಿನ್ನಲ್ಲಿ ಹೇಳುತ್ತೇನೆ. ಅದನ್ನು ಕೇಳಿದರೆ ನಾನು ಮಾವನಲ್ಲಿ ಹೇಳುವುದಿಲ್ಲ. ಕಪ್ಪಣೆ ಪರಂಬ್‌ನ ಕುಂಞಿಪ್ಪಾರು! ಕೊಟ್ಟಯಂ ಮನೆಯ ಕುಂಞ್ಯಾಮದ್ ಇದ್ದಾನಲ್ಲ? ಅವನನ್ನು ಇಂದು ಸಂಜೆ ಪಡು ಕೋಣೆಗೆ ಸೇರಿಸಿಕೊ. ಕೂಡಲೆ ಪಾರು ಇದಕ್ಕೆ ಉತ್ತರಿಸಿದಳು – ನಾನು ಜೋನಕನನ್ನು

ಪಡುಕೋಣೆಗೆ ಸೇರಿಸಿಕೊಳ್ಳುವುದಿಲ್ಲ. ನೀವು ಮಾವನಲ್ಲಿ ಏನು ಬೇಕಾದರೂ ಹೇಳಿ. ಮಾವ ನನ್ನನ್ನು ಇವತ್ತು ಒಂದು ವೇಳೆ ಕೊಲ್ಲುವುದಾದರೂ ಕೊಂದುಕೊಳ್ಳಲಿ. ಕುಂಬೆಗೆ ಸಿಟ್ಟೇರಿತ್ತು. ಅವಳೆಂದಳು – ಕಪ್ಪಣೆ ಪರಂಬ್‌ನ ಪಾರು, ಕೇಳು! ನಿನಗೆ ಆ ಬಸಿರು ಏನಾದರೂ ಆದರೆ ನಿನ್ನನ್ನು ಮೆಟ್ಟಿ ಮೆಟ್ಟಿ ಕೊಲ್ಲುತ್ತೇನೆ ಅಥವಾ ಮಾವನೇ ಮೆಟ್ಟಿ ನಿನ್ನನ್ನು ಕೊಂದಾರು. ಅದಕ್ಕೆ ಪಾರುವೆಂದಳು – ಇವತ್ತೇ ನನಗೆ ಬಸಿರು ಆಗಿದ್ದರೂ ನಿಮ್ಮ ಮನೆತನಕ್ಕೆ ಏನೂ ಬಾಧೆ ಬರುವುದಿಲ್ಲವಲ್ಲ. ನೀವು ಏನೂ ಹೇಳುವುದು ಬೇಡ. ಸಿಟ್ಟೇರಿದ ಕುಂಬೆ ಅಲ್ಲಿಂದ ಹೊರಟು ಹೋದಳು.

ನಂಬ್ಯಾರನ ಬಳಿಗೆ ಹೋದ ಕುಂಬೆ ಅವನಲ್ಲೆಂದಳು – ಕಪ್ಪಣೆ ಪರಂಬ್‌ನ ನನ್ನ ಗಂಡ! ನಿಮ್ಮ ಸೊಸೆ ಪಾರು ನಮ್ಮ ದನಕಾಯುವ ಹೊಲೆಯ ಹುಡುಗ ಪೊಕ್ಕಾಯಿಯನ್ನು ನಮ್ಮ ಪಡುಕೋಣೆಗೆ ಸೇರಿಸಿಕೊಂಡ ಕಾರಣ ಅವಳು ಬಾಗಿಲು ತೆಗೆಯಲಿಲ್ಲ. ನಾನು ಅಲ್ಲಿಗೆ ಹೋದಾಗ ಪಡುಕೋಣೆಯ ಒಳಗೆ ಪಾರು ಮಲಗಿಕೊಂಡು ಗಡದ್ದು ನಿದ್ದೆ! ನಾನು ಹೋಗಿ ಕರೆದರೆ ಬೆಚ್ಚಿಬಿದ್ದು ಎದ್ದಳು. ಪಾರುವಿಗೇನಾದರೂ ಬಸಿರಾದರೆ ಅದು ಹೊಲೆಯ ಹುಡುಗನಿಂದಾದ ಬಸಿರು. ನಾನು ಅವಳಲ್ಲಿ ಇದನ್ನು ಹೇಳಿದಾಗ ಅವಳು ನನ್ನಲ್ಲಿ ಪೆದಂಬು (ಒರಟು ಉತ್ತರ) ಹೇಳಿದಳು – ಹೊಲೆಯನಿಗೆ ನಾನು ಬಸಿರಾದರೆ ನಿಮ್ಮ ತರವಾಡಿಗೆ ಏನು ಬಾಧಕ? ಅಂತ. ಅವಳು ಹಾಗೆ ಹೇಳುವುದಕ್ಕೆ ನೀವು ಅವಳಿಗೆ ಚಿಕ್ಕಂದಿನಿಂದಲೇ ಸಲಿಗೆಯ ಸೊಪ್ಪು ಗೊಬ್ಬರ ಹಾಕಿ ಬೆಳೆಸಿದ್ದು ಕಾರಣ. ಈಗ ಅವಳು ಹೊಲೆಯನನ್ನು ಹತ್ತಿರ ಮಾಡಿಕೊಳ್ಳುವಷ್ಟು ಬೆಳೆದಳು. ನಂಬ್ಯಾರ್ ಕೂಡಲೇ ಹೇಳಿದ – ಕಕ್ಕಾಟು ಗುಡ್ಡೆಯ ಕುಂಞಿಕುಂಬೆ! ಅವಳ ಹಾಂಕಾರವನ್ನು ನಾನು ಮಣ್ಣು ಮುಕ್ಕಿಸಿಯೇನು. ಅವಳನ್ನು ಕೊಂದು ಬಿಡುತ್ತೇನೆ. ಆಮದ್ ಇಂದೇ ನಾದರೂ ಬಂದರೆ ಅವಳಿಗೆ ಹೇಳಿ ಅವನನ್ನು ನೀನು ಪಡುಕೋಣೆ ಸೇರಿಸು. ಹಾಗಾದರೆ ಮಾತ್ರ ಹೊನ್ನನ್ನು ನಾವು ಇರಿಸಿಕೊಳ್ಳಬಹುದು. ಇಲ್ಲದಿದ್ದರೆ ಹಿಂತಿರುಗಿಸ ಬೇಕಾದೀತು. ಹೀಗೆ ಹೇಳಿ ನಂಬ್ಯಾರ್ ಹೊರಟುಹೋದ.

ಹೊತ್ತು ಮುಸ್ಸಂಜೆಯಾಯಿತು. ಪಾರು ಪಡುಕೋಣೆ ಸೇರಿಕೊಂಡು ಬಾಗಿಲ ಅಗುಳಿ ಹಾಕಿಕೊಂಡಳು. ಅದೇ ಹೊತ್ತಿಗೆ ಒದೇನ ಬಾಗಿಲ ಬಳಿಬಂದು ಕರೆದ. ಪಾರು ಬಾಗಿಲು ತೆರೆದಳು. ಒದೇನ ಒಳಗೆ ಸೇರಿಕೊಂಡ. ಮಂಚದ ಮೇಲೆ ಹೋಗಿ ಕುಳಿತ. ಪಾರು ಬಾಗಿಲು ಮುಚ್ಚಿ ತಾನೂ ಮಂಚ ಸೇರಿಕೊಂಡಳು. ಕೊಟ್ಟಯಂ ಕುಂಞ್ಯಾಮದೆ ಆ ಹೊತ್ತಿಗೆ ತಲಪಿದವನನ್ನು ಕಂಡು ಕುಂಬೆ ಹೇಳಿದಳು – ಕುಂಞ್ಯಾಮದೆ, ನೀನು ಬಾಗಿಲ ಬಳಿ ಹೋಗಿ ಕರೆ. ಅಂತೆಯೇ ಕುಂಞ್ಯಾಮದೆ ಬಾಗಿಲ ಬಳಿ ಹೋಗಿ

ಕರೆದ – ಕಪ್ಪಣೆ ಪರಂಬ್‌ನ ಕುಂಞಿಪ್ಪಾರು! ಬಾಗಿಲು ತೆಗೆ. ಒಂದು ರಾತ್ರೆ ನಾನಿಲ್ಲಿ ಇದ್ದು ಬಿಡುತ್ತೇನೆ. ನಿನ್ನೊಂದಿಗೆ ಒಂದು ರಾತ್ರೆ ಇರುವುದ ಕ್ಕಾಗಿ ಎಷ್ಟು ದಿವಸಗಳಾದವು ಆಸೆ ಪಡುವುದು? ನೂರೊಂದು ಹೊನ್ನಿನ ರಿಂಕಮಾಲೆಯನ್ನು ಇಂದು ನಿನಗಾಗಿ ತಂದಿದ್ದೇನೆ ಪಾರು. ಬಾಗಿಲನ್ನು ಬೇಗ ತೆರೆದುಬಿಡು ಹುಡುಗಿ! ಅವನು ಎಷ್ಟೇ ಕರೆದರೂ ಪಾರು ಮಿಸುಕಲಿಲ್ಲ. ಒದೇನ ಅಲ್ಲಿರುವುದನ್ನು ಯಾರೂ ತಿಳಿದಿಲ್ಲ. ಒದೇನ ಪಾರುವಿಗೆಂದ – ಅಲುಗಬೇಡ, ಮಿಸುಕಾಡಬೇಡ ಪಾರು. ಅವರು ಏನು ಬೇಕಾದರೂ ಹೇಳಲಿ. ಅವರು ಹೇಳುವುದನ್ನು ಕೇಳಬೇಡ. ಅವರನ್ನೆಲ್ಲ ನನ್ನ ಉರ್ಮಿಗೆ ಬಲಿಕೊಡುತ್ತೇನೆ. ಆಮದ್ ಕುಂಬೆಗೆ ಹೇಳಿದ – ನಾನು ಕೊಟ್ಟ ಪೆಟ್ಟಿಗೆ ಹೊನ್ನು ಹಿಂದೆ ಕೊಟ್ಟು ಬಿಡು. ನಾನು ನನ್ನ ಪಾಡಿಗೆ ಹೋಗಿ ಬಿಡುತ್ತೇನೆ. ನೀನೇ ಹೋಗಿ ಅವಳನ್ನು ಕರೆ. ಕುಂಬೆ ಬಾಗಿಲ ಬಳಿ ಬಂದು ಪಾರುವನ್ನು ಕರೆದಳು – ಕಪ್ಪಣೆಪರಂಬ್‌ನ ಕುಂಞಿಪ್ಪಾರು! ಬಾಗಿಲು ತೆರೆ, ಪಾರು. ನೀನು ಹೊಲೆಯನನ್ನು ಒಳಗೆ ಹತ್ತಿಸಿಕೊಂಡಿರುವುದರಿಂದಲೋ ನೀನು ಬಾಗಿಲು ತೆರೆಯದ್ದು? ಹೊಲೆಯ ಚೊಕ್ಕಾಯಿ ಯನ್ನು ಪಡುಕೋಣೆಗೆ ಎಷ್ಟು ದಿನದಿಂದ ಹತ್ತಿಸಿಕೊಳ್ಳುತ್ತ ಇದ್ದಿ? ಹೊಲೆಯ ಹುಡುಗನೊಂದಿಗೆ ಮಲಗುವ ನೀನು ಕುಂಞ್ಯಾಮದನೊಂದಿಗೆ ಮಲಗಬಾರದೆ? ಅವನು ಕಾಯುತ್ತ ಇದ್ದಾನಲ್ಲವೆ? ಅವನನ್ನು ನೀನು ಒಳಗೆ ಬಿಟ್ಟು ಕೊಳ್ಳದಿದ್ದರೆ ನಿನ್ನ ಮಾವ ನಿನ್ನನ್ನು ಜೀವಸಹಿತ ಇಡುವುದಿಲ್ಲ. ಸ್ವತಃ ನಿನ್ನ ಮಾವನೇ ನಿನ್ನನ್ನು ಪಡುಕೋಣೆಯಲ್ಲೆ ಕೊಂದುಬಿಡುತ್ತಾರೆ. ಹೀಗೆ ಹೇಳು ತ್ತಿದ್ದುದನ್ನು ಒದೇನ ಕಿವಿಯಾರೆ ಕೇಳಿದ. ಅವನಿಗೆ ಸಿಟ್ಟೇರಿತು. ಅವನೆಂದ – ಹೊತ್ತು ಮಧ್ಯರಾತ್ರಿಯಾಯಿತು. ಯಾರದು ಬಾಗಿಲಲ್ಲಿ ಕರೆಯುತ್ತಿರುವುದು? ಇಂಥ ಮಾತುಗಳನ್ನು ಆಡುತ್ತಿರುವವರು ಯಾರು? ಪಾರು, ನೀನು ಮಿಸುಕಬೇಡ. ನೀನು ಸುಮ್ಮನೆ ಮಲಗಿಕೊ. ಅವರನ್ನೆಲ್ಲ ನನ್ನ ಉರುಮಿಗೆ ತುತ್ತಾಗಿಸುತ್ತೇನೆ. ಇಷ್ಟು ಹೇಳಿ ಅವನು ಬಾಗಿಲು ತೆರೆದು ಉರುಮಿ ಹಿಡಿದುಕೊಂಡು ಓಡಿಬಂದ. ಆ ಮೂವರನ್ನೂ ಕಡಿದುಕೊಂದ. ಮೂವರನ್ನೂ ಕೊಂದು ಒಳಹೋಗಿ ಮಲಗಿ ನಿದ್ರಿಸಿದ. ಬೆಳಕು ಹರಿಯುತ್ತಿದ್ದಂತೆ ಆ ಮೂರು ಹೆಣ ಗಳನ್ನೂ ಹುಗಿದು ಹಾಕಿದ. ಬಳಿಕ ಒದೇನನೆಂದ – ಕಪ್ಪಣೆ ಪರಂಬ್‌ನ ಕುಂಞಿಪ್ಪಾರು! ನೀನು ಇಲ್ಲಿ ಇರು. ಆ ಒಂದು ಪೆಟ್ಟಿಗೆ ಹೊನ್ನನ್ನು ನನ್ನಲ್ಲಿ ಕೊಡು. ಎಚ್ಚರದಿಂದ ಇದ್ದುಕೊ. ನಾನು ಬರುತ್ತ ಹೋಗುತ್ತ ಇರುತ್ತೇನೆ. ನೀನು ಏನೂ ಅಂಜಬೇಡ. ನಾನು ನಿನ್ನನ್ನು ಮದುವೆ ಮಾಡಿಕೊಳ್ಳುತ್ತೇನೆ. ಆದರೆ ಮೇಪ್ಪಕ್ಕೆ ಕರಕೊಳ್ಳುವುದಿಲ್ಲ. ಪಾರು ಎಂದಳು – ನನಗೆ ಇಲ್ಲಿ ಯಾರೂ ಇಲ್ಲವಲ್ಲ? ತಚ್ಚೋಳಿ ಮನೆಯ ನನ್ನ ಗಂಡ! ನೀವು ಬರುತ್ತ ಹೋಗುತ್ತ ಇದ್ದರೆ ಸಾಕು. ಹಾಗೆ ಅವರು ಅಲ್ಲಿ ಜತೆಯಾಗಿದ್ದರು.

ಓಡಬೇಡ, ಅಡಗಬೇಡ, ಬೀದಿ ಸೂಳೆ!

ಇರುಡ್ಮಲೆ ಅರಮನೆಯರಸು ತನ್ನ ನಾಯರರಿಗೆ ಆಜ್ಞಾಪಿಸಿದ – ನಾಯನ್ಮಾರರೇ! ನೀವು ಚಂದನಚೋಲಕ್ಕೆ ಹೋಗಿ ಕುಂಕ್ಯಮ್ಮನನ್ನು ಇಲ್ಲಿಗೆ ಬರಹೇಳಿ. ಅದನ್ನು ಕೇಳಿ ನಾಯನ್ಮಾರರು ಹೊರಟರು. ಚಂದನಚೋಲಕ್ಕೆ ತಲಪಿದರು. ಅವರು ಅಲ್ಲಿಗೆ ತಲಪಿದಾಗ ಅವರಲ್ಲಿ ಕುಂಞಿಕುಂಕ್ಯಮ್ಮ ಕೇಳಿದಳು – ಇರುಡ್ಮಲೆ ಅರಮನೆಯ ನಾಯನ್ಮಾರರೆ! ನೀವು ಯಾಕಾಗಿ ಬಂದಿರಿ? ಅದಕ್ಕೆ ಅವರು ಉತ್ತರಿಸಿದರು – ಚಂದನಚೋಲೆಯ ಚಿಕ್ಕಮ್ಮಣ್ಣಿಯವರೆ! ಇರುಡ್ಮಲೆ ಅರಸರು ನಿಮ್ಮನ್ನು ಕರೆತರಲು ನಮ್ಮನ್ನು ಕಳಿಸಿದ್ದಾರೆ. ಆ ಮಾತನ್ನು ಕೇಳಿ ಆಕೆ ಕೂಡಲೆ ನಾಯನ್ಮಾರರೊಂದಿಗೆ ಹೊರಟುಬಿಟ್ಟಳು. ಅರಮನೆಗೆ ತಲಪಿದಳು. ಅಲ್ಲಿನ ಉಪ್ಪರಿಗೆ ಹತ್ತಿ ಬಾಯಿಯನ್ನು ಕೈಯಿಂದ ಮುಚ್ಚಿಕೊಂಡು ವಿನೀತಳಾಗಿ ಅರಸನಲ್ಲಿ ಕೇಳಿದಳು – ನನ್ನನ್ನು ಬರುವಂತೆ ಕರೆಕಳಿಸಿದಿರಂತೆ! ಯಾಕೆ? ಅದಕ್ಕೆ ಅರಸನೆಂದ – ಚಂದನಚೋಲೆಯ ಕುಂಞುಂಕ್ಯಮ್ಮ! ನಾಲ್ಕು ಬಿಳಿಯಾನೆಗಳನ್ನು ಕಟ್ಟಿ ಸಾಕುತ್ತಿದ್ದುದರಲ್ಲಿ ಒಂದು ಆನೆ ಸತ್ತು ಹೋಯಿತು. ಒಂದು ಆನೆಯನ್ನು ನಾನು ಮಾರಾಟ ಮಾಡಿದೆ. ಇನ್ನೊಂದು ಆನೆಯನ್ನು ಒದೇನ ಕದ್ದೊಯ್ದ. ಇನ್ನೊಂದು ಬಿಳಿಯಾನೆಯನ್ನು ಸಾಕುತ್ತಿದ್ದು ಅದು ಕೂಡ ಮದವೇರಿ ಕಾಡು ಸೇರಿತು. ತಚ್ಚೋಳಿಯ ಒದೇನನನ್ನು ನೀನು ಎಳೆತಂದುಕೊಟ್ಟರೆ ಇರುಡ್ಮಲೆ ಅರಮನೆಯ ಮಾಳಿಗೆಯಲ್ಲಿ ನಿನ್ನನ್ನು ನಾನು ರಾಣಿಯನ್ನಾಗಿ ಮಾಡಿ ಇಟ್ಟುಕೊಳ್ಳುತ್ತೇನೆ. ದಿನನಿತ್ಯ ಹತ್ತು ಬಳ್ಳ ಭತ್ತವನ್ನು ನಿನಗಾಗಿ ಕುಟ್ಟಿಸುತ್ತೇನೆ. ಅದರಿಂದ ನೀನು ಆರಾಮವಾಗಿ ಬದುಕು ಸಾಗಿಸ ಬಹುದು. ವಾರ ವಾರವೂ ಹೊಸಹೊಸ ಬಟ್ಟೆ ಕೊಡಿಸುತ್ತೇನೆ. ಅದಕ್ಕೆ ಕುಂಞುಂಕ್ಯಮ್ಮ ಎಂದಳು – ಇರುಡ್ಮಲೆ ಯರಸೂ! ನನ್ನ ಗಂಡನನ್ನು ಹಿಡಿದು ತರಬೇಕಾದರೆ ನಿದ್ದೆಯ ಮದ್ದನ್ನು ನನಗೆ ತರಿಸಿಕೊಡಿ. ಆ ಮಾತು ಮುಗಿಯಬೇಕಾದರೆ ನಿದ್ದೆಯ ಮದ್ದನ್ನು ಅರಸ ಒದಗಿಸಿದ. ಅವಳು ಅದನ್ನು ಪಡೆದುಕೊಂಡು ಹೊರಟುಹೋದಳು. ಚಂದನ

ಚೋಲಕ್ಕೆ ತಲಪಿದಳು. ಅಲ್ಲಿ ನಾಯನ್ಮಾರರಿ ಗೆಂದಳು – ಚಂದನಚೋಲೆಯ ನಾಯನ್ಮಾರರೆ! ನೀವು ದೂರದ ಮಾಣಿಕೋತ್ತ್‌ಗೆ ಹೋಗಬೇಕು. ನಿಮ್ಮ ಕೌಶಲದಿಂದಲೂ ಮಾಂತ್ರಿಕ ವಿದ್ಯೆಯಿಂದಲೂ ನನ್ನ ಗಂಡನನ್ನು ಇಲ್ಲಿಗೆ ಕರೆದು ತನ್ನಿರಿ. ನೀವು ಕಾಳು ಮೆಣಸನ್ನು ಅರೆದು ಕೈಯಲ್ಲಿ ಹಿಡಿದುಕೊಳ್ಳಿರಿ. ಮಾಣಿಕೋತ್ತ್‌ನ ಕೆಳಗೆ ತಲಪುವಾಗ ನೀವು ಅದನ್ನು ಅದ್ದಿದ ಬೆರಳುಗಳಿಂದ ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳಿ. ನೀವು ಅವರನ್ನು ಕಂಡು ತುಂಬ ಅಳಬೇಕು. ಆಗ ನನ್ನ ಗಂಡ ನಿಮ್ಮಲ್ಲಿ ಕೇಳುತ್ತಾರೆ – ಯಾಕಾಗಿ ಅಳುತ್ತಿದ್ದೀರಿ ನಾಯಮ್ಮಾರರೆ? ಆಗ ನೀವು ಹೀಗೆನ್ನಬೇಕು – ಚಂದನಚೋಲೆಯ ಚಿಕ್ಕಮ್ಮಣ್ಣಿಯವರಿಗೆ ತುಂಬ ಕಾಯಿಲೆ. ಅವರು ನಮ್ಮಲ್ಲಿ ಹೇಳಿ ಕಳುಹಿಸಿದ್ದಾರೆ – ನಾನು ಗಂಡನನ್ನು ಕಂಡೇ ಸಾಯಬೇಕು. ಹೀಗೆ ನೀವು ಹೇಳಿ ನೋಡಿರಿ, ನಾಯನ್ಮಾರರೆ. ನಾಯನ್ಮಾರರು ಅದನ್ನು ಕೇಳಿ ಹಿಂದಿರುಗಿದರು. ನಾಯನ್ಮಾರರು ಮಾಣಿಕೋತ್ತ್‌ಗೆ ಹೋದಾಗ ಒದೇನ ಬಾಗಿಲಲ್ಲೆ ಕುಳಿತುಕೊಂಡಿರುವುದನ್ನು ಕಂಡರು. ಅರೆದ ಕಾಳು ಮೆಣಸನ್ನು ಅದ್ದಿದ ಬೆರಳುಗಳಿಂದ ಕಣ್ಣಿಗೆ ಕಾಡಿಗೆ ಬರೆದುಕೊಂಡು ಅವರು ಕಣ್ಣೀರು ಒರಸುತ್ತ ಒಳಹೋದರು. ಸಂಕಟಪಡುವವರ ಹಾಗೆಯೇ ಅವರು ಒಳಗೆ ಪ್ರವೇಶಿಸಿದರು. ಆಗ ಒದೇನ ಕೇಳಿದ – ಚಂದನಚ್ಚೋಲೆಯ ನಾಯನ್ಮಾರರೆ! ನೀವೇಕೆ ಹೀಗೆ ಸಂಕಟ ಪಡುತ್ತಿದ್ದೀರಿ? ಯಾಕೆ ಅಳುವುದು? ಅದಕ್ಕೆ ಅವರೆಂದರು – ಒಂದು ವಿಷಯ ಕೇಳಬೇಕು ಒದೇನ ಕುರುಪ್ಪರೇ! ಚಂದನಚೋಲೆಯಲ್ಲಿ ಚಿಕ್ಕಮ್ಮಣ್ಣಿಯವರಿಗೆ ತುಂಬ ಕಾಯಿಲೆ ಆಗಿದೆ. ನಿಮ್ಮನ್ನು ಒಮ್ಮೆ ಕಾಣುವ ಆಸೆ ಅವರಿಗೆ. ಆ ಮಾತನ್ನು ಕೇಳಿದ ಒದೇನ ಬಿಸಿಲಿಗೆ ಹಿಡಿಯಲು ಓಲೆ ಕೊಡೆ ಕೂಡ ತೆಗೆದುಕೊಳ್ಳಲಿಲ್ಲ. ನಿಲ್ಲದೆ ಪಯಣ ಹೋಗಿ ಚಂದನಚೋಲೆಗೆ ತಲಪಿದ. ತಲಪಿದಾಗ ಕುಂಕ್ಯಮ್ಮ ಬಾಗಿಲಲ್ಲೆ ನಿಂತಿದ್ದಾಳೆ. ಒದೇನ ಕೇಳಿದ – ಚಂದನಚೋಲೆಯ ಕುಂಞುಂಕ್ಯಮ್ಮ! ಈಗ ಯಾಕೆ ನನಗಾಗಿ ಕರೆ ಕಳುಹಿಸಿದೆ? ಅದಕ್ಕೆ ಕುಂಕಮ್ಮನೆಂದಳು – ನಿಮ್ಮನ್ನು ಕಾಣುವ ಆಸೆಯಾಯಿತು, ಅದಕ್ಕೆ. ಅವಳು ಒದೇನನ ಕೈ ಹಿಡಿದುಕೊಂಡಳು. ಅವಳನ್ನು ಅವನು ಪಡುಕೋಣೆಗೆ ಕರೆದೊಯ್ದ. ಅವಳಿಗೆ ಕಾಸಿದ ಎಣ್ಣೆ, ಕೊಯಂಬುಗಳನ್ನು ಹಚ್ಚಿ ಸ್ನಾನ ಮಾಡಿಸಿದ. ಕತ್ತಲಾಗಲು ರಾತ್ರೆಯ ಊಟವನ್ನೂ ಮಾಡಿಸಿದ. ಅವರು ನಿದ್ರಿಸಲು ಹೋದರು. ಒದೇನ ಗಾಢವಾಗಿ ನಿದ್ರಿಸಿದ. ಅವನು ಹಾಗೆ ನಿದ್ರಿಸುತ್ತಿದ್ದಾಗ ಕುಂಕ್ಯಮ್ಮ ನಿದ್ದೆಯ ಮದ್ದನ್ನು ತಂದು ಅವನಿಗೆ ಹಾಕಿದಳು. ಅವನು ಮತಿಮರೆತು ನಿದ್ರಿಸಿದ. ಆಗ ಕುಂಕ್ಯಮ್ಮ ನೆಂದಳು – ಚಂದನಚೋಲೆಯ ನಾಯಮ್ಮಾರರೆ! ನೀವು ಒಮ್ಮೆ ನಡೆಯುತ್ತಾ ಇನ್ನೊಮ್ಮೆ ಓಡುತ್ತಾ ಇರುಡ್ಮಲೆ ಅರಮನೆಗೆ ಹೋಗಿ ಬನ್ನಿ. ಅರಸನಿಗೆ ತಿಳಿಸಿರಿ– ಗಂಡ ಒದೇನನನ್ನು ನಾನು ಮತಿ ತಪ್ಪಿಸಿದ್ದೇನೆ, ನಿದ್ದೆಯ ಮದ್ದುಕೊಟ್ಟು ನಿದ್ದೆ ಮಾಡಿಸಿದ್ದೇನೆ ಎಂದು.

ನಾಯಮ್ಮಾರರು ಅಂತೆಯೇ ಒಮ್ಮೆ ಓಡುತ್ತ ಒಮ್ಮೆ ನಡೆಯುತ್ತ ಹೋಗಿ ಇರುಡ್ಮಲೆಯರಸನಿಗೆ ಎಲ್ಲವನ್ನೂ ತಿಳಿಸಿದರು. ಆ ಮಾತುಗಳನ್ನು ಕೇಳಿದ ಅರಸ ಕಾಲು ಕೈಗಳಿಗೆ ತೊಡಿಸುವ ಸಂಕಲೆಯನ್ನು ಅವರಿಗೆ ಕೊಡಿಸಿದ. ನಾಲ್ಕು ಜನ ನಾಯಮ್ಮಾರರಿಗೆಂದ – ನೀವು ಹೋಗಿ ಅವನ ಕೈಕಾಲುಗಳಿಗೆ ಸಂಕಲೆತೊಡಿಸಿ ಇಲ್ಲಿಗೆ ಕರೆತನ್ನಿ! ಅಂತೆಯೇ ನಾಲ್ಕು ಜನ ನಾಯಮ್ಮಾರರು ಚಂದನಚೋಲೆಗೆ ಹೋದರು. ಒದೇನನ ಕೈಕಾಲುಗಳಿಗೆ ಸಂಕಲೆ ತೊಡಿಸಿದರು. ಸಂಕಲೆಗಳಿಂದ ಹಾಗೆ ಅವರು ಬಂಧಿಸುವಾಗ ಒದೇನನಿಗೆ ಫಕ್ಕನೆ ಎಚ್ಚರವಾಯಿತು. ನಾಯಮ್ಮಾರರು ಅವನ್ನು ಕರೆದುಕೊಂಡು ಇರುಡ್ಮಲೆ ಅರಮನೆ ತಲುಪಿದರು. ಇರುಡ್ಮಲೆಯಲ್ಲಿ ಅವನನ್ನು ಕಲ್ಲುಕೋಣೆಯಲ್ಲಿ ಬಂಧಿಸಿಟ್ಟರು. ಇರುಡ್ಮಲೆಯರಸ ಮರ ಕಡಿಯುವವರನ್ನು ಕರೆಸಿದ. ಬೇಕಾದ ಮರಗಳನ್ನು ಕಡಿಸಿದ. ಇಪ್ಪತ್ತೆರಡು ಮಂದಿ ಒಳ್ಳೆಯ ಬಡಗಿಗಳು ಒಂದೇ ಹೊತ್ತಿಗೆ ನೇಣುಗಂಬದ ಕೆಲಸ ಮಾಡಿದರು.

ತಾಳೆಯೋಲೆಗಳನ್ನು ಹುಡುಕುತ್ತ ಪಾಲಕ್ಕಾಡಿನ ಭಟ್ಟರು ಕಾವಿಲ್ ಚಾತ್ತೋತ್ತ್ ಚೀರುವಿನ ಮನೆಯ ತಗ್ಗಿನಲ್ಲಿ ಹೋಗುತ್ತಿದ್ದರು. ಅವರು ತಂಗಿಕೊಳ್ಳಲು ಸತ್ರಕ್ಕಾಗಿ ಹುಡುಕುತ್ತಿದ್ದರು. ಕಾವಿಲ್ ಚಾತ್ತೋತ್ತ್‌ನ ಕುಂಞಿಚೀರು ಎಡಭಾಗದ ಕೋಣೆಯನ್ನು ಗುಡಿಸುತ್ತಿದ್ದಳು. ಪರಸ್ಪರ ಸಂಭಾಷಿಸುತ್ತ ಹೋಗುತ್ತಿದ್ದ ಭಟ್ಟರ ಮಾತುಕತೆಗಳನ್ನು ಕೇಳಿದಳು. ಅವರು – ಅಯ್ಯೋ ದೇವರೇ! ಭಗವಂತಾ! ನಾವು ಈ ಕಡೆ ಬಂದು ಇಲ್ಲಿ ಬೇಡಿದರೆ ಸಾಕು, ನಮಗೆ ಬೇಕಾದಷ್ಟು ಹಣ ಸಿಗುತ್ತಿತ್ತು. ಇನ್ನು ನಮಗೆ ಯಾರು ತಾನೆ ಹಾಗೆ ಕೊಡುವವರು? ಒದೇನ ಕುರುಪ್ಪಿಗಾಗಿ ನೇಣುಗಂಬದ ಕೆಲಸ ಮುಗಿಯುತ್ತ ಬರುತ್ತಿದೆ! ಅವರು ಹಾಗೆ ಹೇಳುವುದನ್ನು ಕೇಳಿದ ಚೀರು ಮೆಟ್ಟಿಬಿದ್ದಳು. ಹಿಡಿಸೂಡಿಯನ್ನು ಹಿಂದಕ್ಕೆ ಎಸೆದಳು. ಓಡಿ ಹೋಗಿ ಬಾಗಿಲ ಕಡೆಗೆ ನೆಗೆದಳು. ಅವಳೆಂದಳು – ಪಾಲಕ್ಕಾಡ್‌ನ ಬ್ರಾಹ್ಮಣರೇ! ನೀವು ಏನು ಹೇಳುತ್ತಿದ್ದಿರಿ? ಅದಕ್ಕೆ ಅವರು – ಏನೂ ಇಲ್ಲಮ್ಮ. ನಾವು ನಾವೇ ಏನೋ ದುಃಖ ಹಂಚಿಕೊಳ್ಳುತ್ತಿದ್ದೆವು – ಎಂದರು. ಆಗ ಚೀರು ಅವರಿಗೆಂದಳು – ಏನು ದುಃಖ ಬ್ರಾಹ್ಮಣರೇ? ನೀವು ಎಲ್ಲವನ್ನೂ ಮರೆಮಾಚದೆ ಹೇಳುವಿರಾದರೆ ನೀವು ಹೊರುವಷ್ಟು ಹಣ ನಿಮಗೆ ಕೊಡುತ್ತೇನೆ. ಅನ್ನಕ್ಕೆ ಬೇಕಾದ ಅಕ್ಕಿಯನ್ನೂ ಕೊಡುತ್ತೇನೆ. ಅವರು ತಮಗೆ ತಿಳಿದುದನ್ನು ಮರೆಮಾಚದೆ ಹೇಳಿದರು – ಇರುಡ್ಮಲೆಯರಸನು ಒದೇನ ಕುರುಪ್ಪನ್ನು ನೇಣಿಗೇರಿಸಲು ನೇಣುಗಂಬದ ಕೆಲಸ ಮಾಡಿಸುತ್ತಿದ್ದ. ಅದು ಮುಗಿಯುತ್ತಾ ಬಂತು. ಭಟ್ಟರುಗಳಿಗೆ ಚೀರು ನಾಲ್ಕಾಳು ಹೊರುವಷ್ಟು ಹಣ ಕೊಟ್ಟಳು. ಅನ್ನಕ್ಕೆ ಅಕ್ಕಿಕೊಟ್ಟು ಪದಾರ್ಥಕ್ಕೆ ಬೇಕಾದ ಎಳೆ ಸೌತೆ ಕೊಟ್ಟಳು. ಅವರಿಗೆ ಊಟದ ಏರ್ಪಾಡು ಮಾಡಿದಳು. ಅವರನ್ನು ಕಳುಹಿಸಿ ಕೊಟ್ಟಳು. ಅವಳು

ಬಾಗಿಲನ್ನು ನೆಗೆದು ಓಡಿದಳು. ಹಾಗೆ ಓಡುತ್ತಾ ಮೂಡುಮಲೆಗೆ ತಲಪಿದಳು. ಅಲ್ಲಿ ಕೊರತಿಯ (ಕೊರವಂಜಿ?) ಮಗಳು ಇದ್ದಳು. ಕೊರಗ ಇರಲಿಲ್ಲ. ಬೆತ್ತ ಕಡಿದು ತರಲು ವಯನಾಡಿಗೆ ಹೋಗಿದ್ದ. ಚೀರು ಕೊರತಿಗೆಂದಳು – ಮೂಡುಮಲೆ ಕೊರತಿ! ನಿನ್ನ ಅಪ್ಪ ಅಮ್ಮ ಎಲ್ಲಿದ್ದಾರೆ? ಅದಕ್ಕೆ ಅವಳೆಂದಳು – ಅಮ್ಮಣ್ಣಿ! ಅವರು ಬೆತ್ತ ಕಡಿಯುವುದಕ್ಕೆ ವಯನಾಡಿಗೆ ಹೋಗಿದ್ದಾರೆ. ಆಗ ಚೀರು ಎಂದಳು – ಮೂಡುಮಲೆಯ ಕೊರತಿ ಹುಡುಗಿ! ನಿನ್ನ ಅಜ್ಜಿ ಉಡುವ ಬಟ್ಟೆ, ಆಕೆ ಉಪಯೋಗಿಸುವ ಬುಟ್ಟಿ ಮತ್ತು ಕೋಲು, ಇಪ್ಪತ್ತೊಂದು ಕೋಳಿಗಳನ್ನು ಈಗಲೇ ನನಗೆ ಕೊಡು. ಅವನ್ನು ತಪ್ಪದೇ ನಾನು ಮೂರು ದಿನ ಕಳೆದು ನಾಲ್ಕರಂದು ನಿನಗೆ ಮರಳಿಕೊಡುತ್ತೇನೆ. ಒಂದಿಷ್ಟೂ ವೇಳೆ ಕಳೆಯದೆ ಅವನ್ನು ಈಗಲೇ ನನಗೆ ಕೊಡು. ಕೊರತಿ ಹುಡುಗಿ ಅವೆಲ್ಲವನ್ನೂ ಅವಳಿಗೆ ಕೊಟ್ಟಳು. ಕಾವಿಲ್ ಚಾತ್ತೋತ್ತ್‌ನ ಚೀರು ಒಮ್ಮೆ ಓಡುತ್ತ ಒಮ್ಮೆ ನಡೆಯುತ್ತ ತನ್ನ ಮನೆಗೆ ತಲಪಿದಳು. ಕೊರತಿಯ ಬಟ್ಟೆಯನ್ನು ಉಟ್ಟಳು. ಎದೆಗೆ ಅದೇ ಬಟ್ಟೆಯಿಂದ ಉತ್ತರೀಯವನ್ನೂ ಕಟ್ಟಿದಳು. ಮಗು ಅಂಬಾಡಿಯನ್ನು ಉತ್ತರೀಯದಲ್ಲಿ ಹಿಂಭಾಗದಲ್ಲಿ ಇರಿಸಿಕೊಂಡಳು. ಒದೇನನ ಉರುಮಿಯನ್ನೂ ಗುರಾಣಿಯನ್ನೂ ಬುಟ್ಟಿಯಲ್ಲಿ ಇರಿಸಿ ಕೊಂಡಳು. ಇನ್ನೊಂದು ಬುಟ್ಟಿಗಂಟನ್ನು ಉರುಮಿಯ ಮೇಲೆ ಇರಿಸಿದಳು. ಕುಂಞಿಚೀರು ಕೊರತಿಯಾಗಿ ಬದಲಾದಳು. ಕೊರತಿಯಂತೆಯೇ ಕೋಲು ಹಿಡಿದುಕೊಂಡಳು. ನಿಲ್ಲದೆ ನಡೆಯುತ್ತ ಚಂದನಚೋಲೆಯ ಮನೆಯ ಬಳಿ ತಲಪಿದಳು. ಆಗ ಕುಂಞುಂಕ್ಯಮ್ಮ ಬಂದಳು – ಮೂಡು ಸೀಮೆಯಿಂದ ಬಂದ ಕಾಡುಕೊರತಿ! ಇಲ್ಲಿ ಬಾರೇ ಕೊರತಿ. ಆಗ ಕೊರತಿ ಎಂದಳು – ನನಗೆ ಅಲ್ಲಿಗೆ ಬರಲು ಸಮಯವಿಲ್ಲ. ನಾನೂ ನನ್ನ ಕೊರಗನೂ ಜತೆಗೆ ಹೊರಟವರು. ನನ್ನ ಕೊರಗ ಕಾಣುತ್ತ ಇಲ್ಲ. ಅವನಿಗೆ ಬುತ್ತಿ ಈ ಬುಟ್ಟಿಯಲ್ಲಿದೆ. ಅವನಿಗೆ ಊಟವನ್ನು ತೆಗೆದುಕೊಂಡು ನಾನು ತಿರುಗುತ್ತಿದ್ದೇನೆ. ಆಗ ಕುಂಕ್ಯಮ್ಮನೆಂದಳು – ನಿನ್ನನ್ನು ತುಂಬಾ ಹೊತ್ತು ನಿಲ್ಲಿಸಿಕೊಳ್ಳುವುದಿಲ್ಲ. ನಿನಗೆ ಬೇಗ ಹೋಗಬಹುದು ಕೊರತಿ. ಭವಿಷ್ಯವನ್ನು ಸರಿಯಾಗಿ ಹೇಳಿದೆಯಾದರೆ ರೇಶ್ಮೆನೂಲಿನ ಮೇಲೆ ಚಿನ್ನದ ನಾಣ್ಯ ಕೊಡುವೆ. ಆಗ ಕಾಡು ಕೊರತಿ ಎಂದಳು – ಬೇಗ ಬೇಗ ಅಂಗೈ ತೋರಿಸಿ ಅಮ್ಮಣ್ಣಿ! ನನಗೆ ಬೇಗ ಹೋಗಬೇಕಾಗಿದೆ. ಕುಂಕ್ಯಮ್ಮ ಅಂಗೈಯನ್ನು ಮುಂದೆ ಹಿಡಿದಳು. ಕೊರತಿ ಕೈ ನೋಡಿ ಲಕ್ಷಣ ಹೇಳಿದಳು. ಚಂದನಚೋಲೆಯ ಅಮ್ಮಣ್ಣಿ! ಕಡತ್ತು ವೈನಾಡಿನ 'ಪಡೆನಾಯರ' ನ್ನು ನೀವು ವಂಚಿಸಿ ಇರುಡ್ಮಲೆ ಅರಸರಿಗೆ ಹಿಡಿದುಕೊಟ್ಟಿರಿ. ಚಂದನಚೋಲೆಯ ಅಮ್ಮಣ್ಣಿ! ಇರುಡ್ಮಲೆ ಅರಮನೆಯ ಮಾಳಿಗೆಯ ಮೇಲೆ ನೀವು ದೊಡ್ಡಮ್ಮಣ್ಣಿಯೂ ಆಗುವ ಯೋಗ ಇದೆ. ದಿನ ನಿತ್ಯ ಹತ್ತು ಬಳ್ಳ ಭತ್ತ ಕುಟ್ಟಿಸುವ, ವಾರದಲ್ಲೊಮ್ಮೆ ಹೊಸಬಟ್ಟೆ ಉಟ್ಟುಕೊಳ್ಳುವ ಯೋಗವನ್ನೂ ಕಾಣುತ್ತಿದ್ದೇನೆ.

ಕಾಡುಕೊರತಿ ಇಷ್ಟವಾದ್ದನ್ನೆ ಹೇಳಿದಳು. ರೇಶ್ಮೆ ನೂಲಿನ ಮೇಲೆ ಹೊನ್ನ ನಾಣ್ಯವನ್ನು ಉಡುಗೊರೆಯಾಗಿ ಕುಂಕ್ಯಮ್ಮ ಕೊಟ್ಟಳು.

ಕೊರತಿ ಅಲ್ಲಿಂದ ಬೇಗ ಹೊರಹೊರಟಳು. ಎಲ್ಲೂ ನಿಲ್ಲದೆ ಹಾಗೆ ನಡೆಯುತ್ತಾ ಇರುಡ್ಮಲೆ ಅರಮನೆಯ ಮುಂದೆ ತಲಪಿದಳು. ಅಲ್ಲಿ ಅತ್ತಿತ್ತ ನಡೆದಾಡಿದಳು. ಅರಸು ಅದನ್ನು ಕಂಡ. ಅವನು ಏಳುನೆಲೆ ಉಪ್ಪರಿಗೆ ಮೇಲಿದ್ದ. ಅವನು ಅಜ್ಞಾಪಿಸಿದ. ಇರುಡ್ಮಲೆ ಅರಮನೆಯ ನಾಯಮ್ಮಾರರೇ! ಮೂಡುಸೀಮೆಯಿಂದ ಎಲ್ಲಿಂದಲೋ ಒಬ್ಬಾಕೆ ಕಾಡುಕೊರತಿ ಬಂದಿದ್ದಾಳೆ. ಅತ್ತಿತ್ತ ಸುತ್ತಾಡುತ್ತಾ ಸಂಕಟದಲ್ಲಿರುವಂತಿದೆ. ಅವಳನ್ನು ಇತ್ತ ಕರೆಸಿರಿ. ಅಂತೆಯೇ ಅವರು ಹೋಗಿ ಕೊರತಿಯನ್ನು ಕರೆದರು. ಅದಕ್ಕೆ ಅವಳೆಂದಳು – ಇರುಡ್ಮಲೆ ಅರಮನೆಯ ನಾಯಮ್ಮಾರರೇ! ನನಗೆ ಅರಮನೆಗೆ ಬರಲು ಸಮಯವಿಲ್ಲ. ನಿನ್ನೆ ರಾತ್ರೆ ನಾನೂ ನನ್ನ ಕೊರಗನೂ ಹೊರಟವರು ರಾತ್ರೆ ಏನೋ ಮಾತಿಗೆ ಮಾತು ಬೆಳೆಯಿತು. ಆದರೆ ಈಗ ಅವನು ಎಲ್ಲಿದ್ದಾನೆ ಎಂದು ತಿಳಿಯುತ್ತಿಲ್ಲ. ಅವನನ್ನು ನಾನು ಹುಡುಕುತ್ತಿದ್ದೇನೆ. ಅವನಿಗೆ ಊಟದ ಅನ್ನ ಕೂಡ ಈ ಬುಟ್ಟಿಯಲ್ಲಿದೆ. ಅವಳು ಹೇಳಿದ್ದನ್ನು ಕೇಳಿ ನಾಯಮ್ಮಾರರು ಹೊರಟುಹೋದರು. ಹೋಗಿ ಅರಸನಿಗೆ ಎಲ್ಲವನ್ನೂ ಹೇಳಿದರು. ಅರಸನೆಂದ – ಹೋಗಿ ಅವಳಲ್ಲಿ ಹೇಳಿ: ಅವಳು ಇಲ್ಲಿಂದ ಕೂಡಲೇ ಹೋಗಬಹುದು, ತಡವಾಗುವುದಿಲ್ಲ. ಅವಳು ಸರಿಯಾದ ಕಣಿಯನ್ನೇ ಹೇಳಿದಳಾದರೆ ರೇಶ್ಮೆ ನೂಲಿನ ಮೇಲೆ ಒಂಟಿಹೊನ್ನು ಉಡುಗೊರೆಯಾಗಿ ಕೊಡುತ್ತೇನೆನ್ನಿ. ಅವರು ಅಂತೆಯೇ ಹೋಗಿ ಹೇಳಿದರು. ಆ ಮಾತುಗಳನ್ನು ಕೇಳಿ ಅವಳು ಅರಮನೆಗೆ ಬಂದಳು. ಅವಳು ಮೆಟ್ಟಲೇರಿ ಬರುವಾಗ ಏಳು ಉಪ್ಪರಿಗೆಯ ಮೇಲಿಂದ ಅರಸ ಆಜ್ಞಾಪಿಸಿದ – ಸರಿಯಾದ ಕಣಿಯನ್ನೇ ಹೇಳು ಕೊರತಿ. ಹಾಗೆ ಹೇಳಿದರೆ ರೇಶ್ಮೆ ನೂಲಮೇಲೆ ಒಂಟಿ ಹೊನ್ನು ಕೊಡುತ್ತೇನೆ. ಕಾಡುಕೊರತಿ ಎಂದಳು – ಇರುಡ್ಮಲೆಯರಸರೇ! ನಾನು ಕೈನೋಡಿ ಲಕ್ಷಣ ಹೇಳುವವಳು. ಅರಸ ಮಾಳಿಗೆಯಿಳಿದು ಬಂದ. ಕೊರತಿಯ ಹತ್ತಿರ ಬಂದ. ಅವಳ ಮುಂದೆ ಕೈ ನೀಡಿದ. ಅವಳು ಕೈ ನೋಡಿ ಲಕ್ಷಣ ಹೇಳಿದಳು. ಇರುಡ್ಮಲೆ ಅರಮನೆಯ ಯಜಮಾನರೆ! ನೀವು ನಾಲ್ಕು ಬಿಳಿಯಾನೆಗಳನ್ನು ಸಾಕಿದಿರಿ. ಒಂದಾನೆ ಬಿದ್ದು ಸತ್ತಿತು. ಒಂದಾನೆಯನ್ನು ಮಾರಿ ಹಣ ತೆಗೆದುಕೊಂಡಿರಿ. ಇನ್ನೊಂದು ಮರಿಯಾನೆಯನ್ನೂ ಸಾಕಿದಿರಿ. ಅದು ದೊಡ್ಡದಾದಾಗ ಮದಿಸಿ ಮಲೆಸೇರಿತ್ತು. ಇನ್ನೊಂದು ಆನೆಯನ್ನು ಕಡತ್ತ್ ವೈನಾಡಿನ 'ಪಡೆನಾಯರ್' ಕದ್ದೊಯ್ದ. ಆ ಕಳ್ಳ ಈಗ ಎಲ್ಲಿ ಅರಸರೇ? ಕಲ್ಲುಕೋಣೆಯಲ್ಲಿ ಹಾಕಿ ಮುಚ್ಚಿದ್ದೀರಿ. ಗಲ್ಲುಗಂಬದ ಕೆಲಸ ಮುಗಿಯುತ್ತಾ ಇದೆ. ನಾಳೆ ಸುಮಾರು ಇದೇ ಹೊತ್ತಿಗೆ ಅವನನ್ನು ಗಲ್ಲಿಗೇರಿಸುತ್ತೀರಲ್ಲವೇ? ಆದರೆ ಆ ದೋಷ ಅರಮನೆಗೆ ಬಾಧಿಸೀತು. ಅರಸರಿಗೂ ಆ ದೋಷ

ಬಾಧಿಸೀತೆಂದು ಕಂಡು ಬರುತ್ತಿದೆ. ಅಂತಹ ಒಂದು ದೋಷವು ನಿವಾರಣೆಯಾಗ ಬೇಕಿದ್ದರೆ ಕಳ್ಳನನ್ನು ಬಿಚ್ಚಿ ಇಲ್ಲಿಗೆ ತನ್ನಿರಿ. ಅವನಿಗೆ ಊಟ ಕೂಡ ಕೊಡಬೇಕು. ಕಳ್ಳನು ಉಂಡು ಬಾಕಿಯಾದ ಅನ್ನವನ್ನು ನನ್ನ ಕೊರಗ ಮಗುವಿಗೆ ಕೊಟ್ಟರೆ ನಿಮ್ಮ ಬಯಕೆಗಳು ಈಡೇರುತ್ತವೆ.

ಕೊರತಿಯ ಮಾತುಗಳನ್ನು ಕೇಳಿದ ಅರಸನಿಗೆ ನಂಬುಗೆ ಬಂತು. ಅವನು ಹೋಗಿ ಕಲ್ಲುಕೋಣೆಯ ಬಾಗಿಲು ತೆರೆಯಿಸಿದ. ಒದೇನನನ್ನು ಅಲ್ಲಿಂದ ಕೆಳಗಿಳಿಸಿ ತರದರು. ಅವನನ್ನು ಕಲ್ಲುಕೋಣೆಯ ಒಂದು ಬದಿಗೆ ಕುಳ್ಳಿರಿಸಿದರು. ಎಲೆ ಹಾಕಿ ಊಟ ಬಡಿಸಲಾಯಿತು. ಒದೇನ ಅನ್ನ ಕಲಸುತ್ತಿದ್ದಾಗ ಮೂಡು ಸೀಮೆಯಿಂದ ಬಂದ ಕಾಡುಕೊರತಿ ಅಂಬಾಡಿಯನ್ನು ಚಿವುಟಿ ಕೂಗುವಂತೆ ಮಾಡಿದಳು. ಅಂಬಾಡಿ ಅತ್ತಾಗ ಆ ಬಾಳೆಯ ತೋಟದತ್ತ ಒದೇನ ನೋಡಿದ. ಆಗ ಕಾವಿಲ್ಚಾತ್ತೋತ್ತ್ ಕುಂಞಿಚೀರು ಅಂಬಾಡಿಯನ್ನು ಮಡಿಲಲ್ಲಿ ಹಾಕಿ ಸಮಾಧಾನ ಮಾಡುವುದನ್ನು ಕಂಡ. ತನ್ನ ಕೈತುತ್ತನ್ನು ತನ್ನ ಮಗುವಿಗೆ ಅವಳು ಉಣಿಸುವುದನ್ನು ಕಂಡ. ಅವನು ಉಣ್ಣುವುದನ್ನು ನಿಲ್ಲಿಸಿದ್ದ. ಅರಸ ಕೇಳಿದ – ತಚ್ಚೋಳಿ ಒದೇನ! ನೀನು ಯಾಕೆ ಅನ್ನವನ್ನೆಲ್ಲ ಉಂಡಿಲ್ಲ? ಒದೇನ ಅದಕ್ಕೆ ಉತ್ತರಿಸಿದ – ಚಿಕ್ಕಂದಿನಲ್ಲೇ ಇದ್ದ ಒಂದು ಹೊಟ್ಟೆ ನೋವು. ನಾನು ಇನ್ನು ಊಟ ಮಾಡಲಾರೆ. ಅರಸನೆಂದ – ಆ ಅನ್ನವನ್ನು ಇತ್ತ ತೆಗೆದುಕೊ. ಬಾಕಿ ಅನ್ನವನ್ನು ಕೊರಗ ಹುಡುಗನಿಗೆ ಕೊಡಬೇಡವೇ? ಒದೇನ ಅನ್ನದ ಎಲೆಯನ್ನು ತೆಗೆದುಕೊಂಡ. ಕೊರಗ ಹುಡುಗನಿಗೆ ಅದನ್ನು ಒಯ್ದುಕೊಟ್ಟ. ಅನ್ನದ ಎಲೆಯನ್ನು ಅಲ್ಲಿ ಇಡುತ್ತಿದ್ದಂತೆಯೇ ಬುಟ್ಟಿಯನ್ನು ಎಳೆದು ಚೀರುವು ಒದೇನನ ಮುಂದೆಯೇ ಇಟ್ಟಳು. ಆ ಮೇಲೆ ಕೆಳಗಿನ ಬುಟ್ಟಿಯಿಂದ ಒದೇನ ಉರುಮಿಯನ್ನು ಎಳೆದು ತೆಗೆದುಕೊಂಡ. ಬಳಿಕ ಅದನ್ನು ಹೆಗಲಲ್ಲಿ ಇರಿಸಿಕೊಂಡ. ಆ ಮೇಲೆ ಎಡಕ್ಕೊಮ್ಮೆ ಬಲಕ್ಕೊಮ್ಮೆ ಬೀಸಿದ. ಎಡಬಲದಲ್ಲಿ ಕಂಡ ಕಂಡವರನ್ನು ಕೊಚ್ಚಿ ಹಾಕಿದ. ಬಾಳೆಯ ತೋಟವನ್ನು ಪ್ರವೇಶಿಸಿದ ಹಾಗೆ ತಿರುಗಿಯೂ ಹೊರಳಿಯೂ ಕುಣಿದಾಡಿದ. ಅಲ್ಲಿದ್ದವರನ್ನೆಲ್ಲ ನಾಶಮಾಡಿದ. ಅಲ್ಲಿಂದ ಹೊರಟು ಎಲ್ಲೂ ನಿಲ್ಲದೆ ನಡೆಯುತ್ತ ಚಂದನಚೋಲೆಗೆ ಬಂದ. ಚಂದನಚೋಲೆಯ ತಗ್ಗಿಗೆ ತಲಪುವಾಗ ಕುಂಞುಂಕ್ಯಮ್ಮ ಅವನನ್ನು ಕಣ್ಣಾರೆ ಕಂಡಳು. ಒದೇನನನ್ನು ಕಂಡೂ ಕಾಣದಂತೆ ಮಾಡಿ ಓಡಿ ಅಡಗಿಕೊಂಡಳು. ಒದೇನ ಚಂದನ ಚೋಲೆಯನ್ನು ರಭಸದಿಂದ ಪ್ರವೇಶಿಸಿದ. ಓಡಬೇಡ ಅಡಗಬೇಡ ಬೀದಿ ಸೂಳೆ! ಎನ್ನುತ್ತ ಅವಳನ್ನು ಕಡಿದು ಕೊಂದು ಹಾಕಿದ. ತಿರುಗಿಯೂ ಹೊರಳಿಯೂ ಅತ್ತಿತ್ತ ಸರಿಯುತ್ತ ಕುಂಞಿಚೀರು ವಿನ ಜತೆ ಮಗು ಅಂಬಾಡಿಯನ್ನು ಸೊಂಟದಲ್ಲೆತ್ತಿಕೊಂಡು ಕಾವಿಲ್‌ಚಾತ್ತೋತ್ತ್‌ಗೆ ತಲಪಿದರು.

ಮುಂದೆ ಯಾರೂ ಹೀಗೆ ಮಾಡಬಾರದು

ಮೂಡುಮಲೆಗೊಡತಿ ಬಸುರಿ ಕುಂಞಿಮಾತು ಹೇಳಿದಳು– ಕರಿಮಲೆ ಕೋಟೆ ಯನ್ನಾಳಿದ ಅತ್ತೆಮ್ಮಾ! ನಾನು ನನ್ನ ತವರುಮನೆಗೊಮ್ಮೆ ಹೋಗಬೇಕಾಗಿದೆ. ಅದನ್ನು ಕೇಳಿ ಆಕೆಯೆಂದಳು – ಮೂಡುಮಲೆಗೊಡತಿ ಕುಂಞಿಮಾತು! ನೀನು ನಿನ್ನ ಮನೆಗೆ ಹೋಗಬೇಡ ಮಗೂ. ನೀನು ಮೂರು ಬಾರಿ ಹೆತ್ತಿದ್ದಿ. ಆಗಲೆಲ್ಲಾ ನಾನೇ ನಿನ್ನ ಬಾಣಂತನ ಮಾಡಿದೆ. ಈ ಬಾರಿಯೂ ನಾನೇ ನಿನ್ನನ್ನು ನೋಡಿಕೊಳ್ಳುವೆ. ಅದಕ್ಕೆ ಕುಂಞಿಮಾತು ಎಂದಳು – ಕರಿಮಲೆ ಕೋಟೆಯನ್ನಾಳಿದ ಅತ್ತೆಮ್ಮಾ! ನನಗೆ ಹನ್ನೆರಡು ಜನ ಅಣ್ಣಂದಿರಿದ್ದಾರಲ್ಲ. ಅವರ ಜೊತೆ ನನಗೆ ಹೊಕ್ಕು ಬಳಕೆಯೇ ಇಲ್ಲವಾದರೆ ಒಂದು ವೇಳೆ ನಾನು ತೀರಿಕೊಂಡಲ್ಲಿ ನನ್ನ ಮಕ್ಕಳಿಗೆ ಯಾರು ಗತಿ? (ಮಲೆಯಾಳಿಗಳಿಗೆ ಅಳಿಯಕಟ್ಟು). ನಾನು ಮೂಡುಮಲೆಗೆ ಹೋದೆನೆಂದಾದರೆ, ಅಲ್ಲಿಯೇ ಹೆತ್ತು ನಲ್ವತ್ತರ ಸ್ನಾನ ಮುಗಿಸಿದ ಕೂಡಲೆ, ಇಲ್ಲಿಗೆ ಬಂದೇ ಬರುವೆ ಅತ್ತೆಮ್ಮಾ.

ಹಾಗೆ ಹೇಳಿ ಕುಂಞಿಮಾತು ತನ್ನೊಡವೆಗಳನ್ನೆಲ್ಲ ಧರಿಸಿ ಸಿಂಗಾರವಾದಳು. ಮಕ್ಕಳನ್ನು ಕರೆದುಕೊಂಡು ಅವಳು ಹೊರಟಳು. ಹಾಗೆ ಪಯಣಹೊರಟು ಅವಳು ಮೂಡುಮಲೆಗೆ ತಲಪಿದಳು. ಮೂಡುಮಲೆಯ ಕಿರಿಯೊಡತಿ ಕುಂಞ್ಯುಂಕಮ್ಮ ಅಲ್ಲೇ ಬಾಗಿಲಲ್ಲಿ ಕುಳಿತಿದ್ದಳು. ಮಾತುವನ್ನು ಕಣ್ಣಾರೆ ಕಂಡದ್ದೇ ಅವಳು ಹೀಗೆ ಕೂಗಿ ಹೇಳಿ ದಳು – ಮೂಡುಮಲೆಯನ್ನಾಳುವ ನನ್ನ ಅಣ್ಣಂದಿರೇ! ಕರಿಮಲೆ ಕೋಟೆಯ ಯಜಮಾನಿ ಮಾತುಅಕ್ಕ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದಾಳೆ. ಅದನ್ನು ಕೇಳಿದ ಅಣ್ಣಂದಿರು ಓಡೋಡುತ್ತಾ ಬಾಗಿಲ ಬಳಿಗೆ ಬಂದರು. ಮಕ್ಕಳನ್ನು ಎತ್ತಿಕೊಂಡು ಮುದ್ದಾಡಿದರು. ಆಗ ಕುಂಕಿ ಮಾತುತೆಗೆದಳು – ಕರಿಮಲೆಯ ಯಜಮಾನಿ ಮಾತುಅಕ್ಕ! ಮೂರು ಮಕ್ಕಳನ್ನು ನೀನು ಹೆರುವ ವರೆಗೂ ಮೂಡುಮಲೆಗೆ ನೀನು ಬರಲೇ ಇಲ್ಲವಲ್ಲ? – ಹಾಗೆ ಅವರೆಲ್ಲಾ ಅಲ್ಲಿ ಒಂದಾಗಿ ಸಂತಸದಿಂದ ಬದುಕುತ್ತಿದ್ದರು.

ಒಂದು ದಿನ ಮೂಡುಮಲೆಯೊಡತಿ ಕುಂಞಿಮಾತು ಎಂದಳು – ಮೂಡುಮಲೆಯೊಡತಿ ಕುಂಞುಂಕ್ಕಮ್ಮಾ! ನಾನು ಕರಿಮಲೆ ಕೋಟೆಗೆ ಹೋದ ಬಳಿಕ ನಿನ್ನ ಸ್ವರವನ್ನು ಕೇಳಲೇ ಇಲ್ಲವಲ್ಲ! ನೀನೊಮ್ಮೆ ಆ ರಾಮಾಯಣ ಕಥೆಯನ್ನು ಹಾಡು ನೋಡೋಣ. ಮೂಡುಮಲೆಯೊಡತಿ ಕುಂಞ್ಯಾಂಕಮ್ಮ ಹುಲಿಯ ಚರ್ಮವನ್ನು ತಂದು ಹಾಸಿ, ಓಲೆಗ್ರಂಥದ ಕಟ್ಟು ಬಿಚ್ಚಿ ರಾಮಾಯಣ ಕಥೆಯನ್ನು ಹಾಡಿದಳು. ಮಾತು ಅದರ ಅರ್ಥವನ್ನು ಹೇಳಿದಳು. ಹೀಗಿರಲು ಹುಲಿನಾಡ ಒಡೆಯ ಅರಸು ತನ್ನ ಇಪ್ಪತ್ತೆರಡು ಜನ ನಾಯಮ್ಮಾರರ ಜತೆ ಬೇಟೆಗೆ ಹೋಗಿದ್ದ. ಅವರು ಕುಂಕಮ್ಮನ ಧ್ವನಿಯನ್ನು ಕೇಳಿದರು. ಅರಸು ಆದೇಶಿಸಿದ–ನನ್ನ ಇಪ್ಪತ್ತೆರಡು ಜನ ನಾಯಮ್ಮಾರರೇ! ಅದೇನದು! ಪಂಚರಂಗಿ ರಾಮಗಿಳಿ ಕೂಗುವಂತೆ, ಕಾಡತೊರೆಯ ಬಳಿ ಮಧುರವಾಗಿ ಹಾಡುವ ಹಾಡು ಹಕ್ಕಿಯಂತೆ, ನಾದಾಪುರದ ನಾದಸ್ವರದ ನಾದದಂತೆ, ನಾಡಕೋಗಿಲೆ ಕುಕಿಲಿದಂತೆ ಅದೆಲ್ಲಿಂದ ಆ ವಿಶೇಷ ಸದ್ದು ಹೊರಡುತ್ತಿದೆ? ಅದನ್ನು ಕೇಳಿದ ನಾಯಮ್ಮಾರರು ಹೇಳಿದರು – ಹುಲಿ ನಾಡನ್ನಾಳುವ ಅರಸೂ! ಮೂಡುಮಲೆಯೊಡತಿ ಕುಂಞ್ಯುಂಕಮ್ಮ ರಾಮಾಯಣ ಕಥೆಯನ್ನು ಹಾಡುತ್ತಿದ್ದಾಳೆ. ಅದನ್ನು ಕೇಳಿದ ಅರಸು ಕೂಡಲೇ ನಿರೂಪವಿತ್ತ – ಹುಲಿನಾಡ ನಾಯಮ್ಮಾರರೇ! ಮೂಡುಮಲೆಗೊಮ್ಮೆ ಏರಬೇಕು. ಹೀಗೆಂದು ಅವನು ಮಲೆಯೇರತೊಡಗಿದ. ಅವರು ಮೆಟ್ಟಲೇರಿ ಅಲ್ಲಿಗೆ ತಲಪಿದಾಗ ಮೂಡುಮಲೆಯೊಡತಿ ಕುಂಕ್ಯಮ್ಮ ಬೇಗ ಪಡುಕೋಣೆ ಸೇರಿಕೊಂಡಳು. ಮೂಡುಮಲೆಯ ಕುಂಞಿಮಾತು ಹೂಹುಲ್ಲ ಚಾಪೆ ತೆಗೆದುಕೊಂಡು ಬಂದು ಮುಂಭಾಗ ದಲ್ಲಿ ಹರಡಿದಳು. ಹುಲಿನಾಡರಸು ಅದರಲ್ಲಿ ಕುಳಿತ. ಕುಳಿತುಕೊಂಡು ಅವನೆಂದ – ಮೂಡುಮಲೆ ಕುಂಞಿಮಾತು! ಮೂಡುಮಲೆ ಕುಂಕ್ಯಮ್ಮನಿಗೆ ಹಚ್ಚುವ ಎಣ್ಣೆಯ ವೆಚ್ಚಕ್ಕೆ ಯಾರಾದರು ಕೊಟ್ಟಿದ್ದಾರೋ? ಮದುವೆಯ ಆಲೋಚನೆಯ ಕುರಿತು ಏನಾದರೂ ಮಾತುಕತೆಗಳಾಗಿವೆಯೆ? ಅದಕ್ಕೆ ಕುಂಞಿಮಾತುವೆಂದಳು – ಹುಲಿನಾಡರಸುವೇ! ಮೂಡುಮಲೆಯೊಡತಿ ಕುಂಕ್ಯಮ್ಮನಿಗೆ ಹಚ್ಚುವ ಎಣ್ಣೆಯ ವೆಚ್ಚಕ್ಕೆ ಯಾರೂ ಕೊಟ್ಟಿಲ್ಲ. ಮದುವೆಯ ಪ್ರಸ್ತಾಪದೊಂದಿಗೆ ಯಾರೂ ಬಂದಿಲ್ಲ. ಅದನ್ನು ಕೇಳಿದ ಅರಸ ಹೇಳಿದ – ಮೂಡುಮಲೆಯ ಕುಂಞಿಮಾತು! ಮೂಡು ಮಲೆಯ ಕುಂಕ್ಯಮ್ಮನನ್ನು ನನಗೆ ಕೊಡಬೇಕು. ಆ ಮಾತುಗಳನ್ನು ಕೇಳಿ ಕುಂಞಿಮಾತು ಎಂದಳು – ಹುಲಿನಾಡರಸುವೇ! ಮೂಡುಮಲೆಯ ನನ್ನ ಅಣ್ಣಂದಿರಿದ್ದಾರೆ. ಅವರು ಬಂದಾಗ ನೀವು ಅವರನ್ನೇ ಕೇಳಿ ಕೊಳ್ಳಿ, ಆ ಮಾತುಗಳನ್ನು ಕೇಳಿ ಹುಲಿನಾಡರಸುವೂ ಇಪ್ಪತ್ತೆರಡು ಮಂದಿ ನಾಯಮ್ಮಾರರೂ ಹಾಗೆಯೇ ಹೊರಟು ಹೋದರು. ಆ ಪಯಣ ಮುಂದುವರಿಸಿ ಅವರು ಹುಲಿನಾಡ ಅರಮನೆಯನ್ನು ಸೇರಿಕೊಂಡರು.

ಹುಲಿನಾಡ ಅರಮನೆ ಸೇರಿಕೊಂಡ ಅರಸು ಮೂಡುಮಲೆಯ ನಾಯಮ್ಮಾರರಿಗೆ ಒಂದು ಓಲೆ ಕಳುಹಿಸಿದ – ಪುಡಮುರಿ ಕಾರ್ಯಕ್ರಮ ಇಟ್ಟುಕೊಳ್ಳುವ ಬಗೆಗೆ, ಮರಳಿ ಓಲೆ ಕಳುಹಿಸುವುದು. ಆ ಓಲೆ ಸಿಕ್ಕಾಗ ಮೂಡುಮಲೆ ನಾಯಮ್ಮಾರರು ಮರು ಓಲೆ ಕಳುಹಿಸಿದರು – ಹುಲಿನಾಡರಸುವೇ! ಮೂಡುಮಲೆಯೊಡತಿ ಮಾತು ಅಕ್ಕನ ಹೆರಿಗೆಯಾದ ಮೇಲೆ ಅವಳಿಗೆ ನಲುವತ್ತರ ಸ್ನಾನ ಕಳೆದ ಬಳಿಕ ನಾವು ಪುಡಮುರಿ ಕಾರ್ಯಕ್ರಮ ಇಟ್ಟುಕೊಳ್ಳೋಣ.

ಮೂಡುಮಲೆಯ ನಾಯಮ್ಮಾರರು ಮೂಡುಮಲೆಯ ಮಕ್ಕಳನ್ನು ತೆಂಕುಮನೆಯ ಹೊರಗಿನ ಕಳರಿಯಲ್ಲಿ ಅಕ್ಷರಾಭ್ಯಾಸಕ್ಕೆ ಹಚ್ಚಿದರು. ಹಾಗೆ ಮಕ್ಕಳೆಲ್ಲಾ ಅಕ್ಷರಾಭ್ಯಾಸದಲ್ಲಿರಲು ಮಾತುವಿಗೆ ಹೆರಿಗೆ ನೋವು ಕಾಣಿಸಿಕೊಂಡಿತು. ನೋವಿಂದ ಅತ್ತು ಕರೆದು ಒಂದು ಹೆಣ್ಣನ್ನು ಹೆತ್ತಳು. ಬಾಣಂತಿಯ ಆರೈಕೆಗೆ ಮೂಡುಮಲೆಯ ನಾಯಮ್ಮಾರರು ನಾಲ್ಕು ಆಳುಗಳನ್ನು ನೇಮಿಸಿದರು. ಮಾತುವು ನಲುವತ್ತರ ಸ್ನಾನ ಮುಗಿಸಿದ ಹೊತ್ತಿಗೆ ಹುಲಿನಾಡರಸು ಮತ್ತೆ ಓಲೆ ಕಳುಹಿಸಿದ – ಮೂಡುಮಲೆಯೊಡೆಯರಾದ ನಾಯ ಮ್ಮಾರರೇ! ಮೂಡುಮಲೆ ಕುಂಕ್ಯಮ್ಮನನ್ನು ನನಗೆ ಮದುವೆ ಮಾಡಿಸಿ ಕೊಡಬೇಕು! ಅದನ್ನು ಓದಿದ ನಾಯಮ್ಮಾರರು ಮರು ಓಲೆ ಕಳುಹಿಸಿದರು – ಹುಲಿನಾಡರಸುವೇ! ಮೂಡುಮಲೆ ಕುಂಕ್ಯಮ್ಮನ ಮದುವೆ ಕುರಿತು. ಮೂಡುಮಲೆ ಮಾತು ಅಕ್ಕ ಹೆತ್ತಿದ್ದಾಳೆ. ಅವಳ ಮಗುವಿಗೆ ಆರು ತಿಂಗಳಾದಾಗ ಮದುವೆ ಮಾಡಿಕೊಡಲು ಸಿದ್ಧರಿದ್ದೇವೆ. ಹೀಗೇ ದಿನಗಳುರುಳಲು ಮೂಡುಮಲೆಯ ಮಕ್ಕಳು ತೆಂಕುಮನೆಯ ಹೊರಗಿನ ಕಳರಿಯಲ್ಲಿ ಬರೆಯುತ್ತ ಆಡುತ್ತ ಕಲಿಯುತ್ತಿರಲು ಮಲೆಮುತ್ತಪ್ಪನ್ ದೈವವು ಆವೇಶಗೊಂಡ ಹಾಗೆ ಹುಲಿಗಳು ಆ ಮಕ್ಕಳನ್ನು ಹೊತ್ತೊಯ್ದು ಕೊಂದು ತಿಂದವು. ಮೂಡುಮಲೆ ನಾಯಮ್ಮಾರರು ಮಕ್ಕಳನ್ನು ಹುಡುಕುತ್ತ ಇರಲು ಜನರೇ ಅವರಿಗೆ ಹೇಳಿದರು – ಮೂಡುಮಲೆ ನಾಯಮ್ಮಾರರೇ, ಮಕ್ಕಳನ್ನೆಲ್ಲಾ ಹುಲಿತಿಂದು ಹೋಯಿತು. ನಾಯಮ್ಮಾರರು ತುಂಬಾ ಅಳುತ್ತಾ ದುಃಖಿಸಿದರು. ಮೂಡುಮಲೆಯ ಕುಂಞಿಮಾತು ಕೂಡಾ ತುಂಬಾ ಗೋಳಾಡಿ ರೋದಿಸಿದಳು. ಹಾಗೆ ಮಕ್ಕಳು ಸತ್ತು ಹೋದ ದುಃಖದಿಂದ ಮಾತು ಎದೆಯೊಡೆದು ಸತ್ತೇ ಹೋದಳು. ಮೂಡುಮಲೆಯ ನಾಯಮ್ಮಾರರು ಮೂಡುಮಲೆಯ ಮಾತುವನ್ನು ಚಿತೆಯಲ್ಲಿಟ್ಟು ಸುಟ್ಟರು.

ಹಾಗೆ ದಿನಗಳುರುಳಲು ಮಾತು ಹೆತ್ತ ಹೆಣ್ಣು ಮಗುವಿಗೆ ಅವರು ಮಾತು ಎಂದೇ ಹೆಸರಿಟ್ಟರು. ಮಗುವಿಗೆ ಆರು ತಿಂಗಳು ಆದಾಗ ಹುಲಿನಾಡರಸು ಇನ್ನೊಮ್ಮೆ ಓಲೆ ಕಳುಹಿಸಿದ – ಮೂಡುಮಲೆಯ ನಾಯಮ್ಮಾರರೇ! ಮೂಡುಮಲೆಯೊಡತಿ

ಕುಂಕ್ಯಮ್ಮನನ್ನು ಮುಂದಿನ ಗುರುವಾರ ನನಗೆ ಮದುವೆ ಮಾಡಿಕೊಡಿ. ಮೂಡುಮಲೆ ನಾಯಮ್ಮಾರರು ಅರಸನ ಓಲೆಯನ್ನು ಓದಿ ಅಳುತ್ತಾ ಹೀಗೆಂದರು – ಮೂಡುಮಲೆ ಯೊಡತಿ ಕುಂಞುಂಕ್ಯಮ್ಮ! ನಾವೇನು ಮಾಡಲಿ? ಮೂಡುಮಲೆಯೊಡತಿ ಮಾತು ಅಕ್ಕನಿಂದ ಆರಂಭವಾದ ಅನರ್ಥವಿದು. ಅದನ್ನು ಕೇಳಿದ ಕುಂಞುಂಕ್ಯಮ್ಮ ಕೂಡಲೇ ಎಂದಳು – ಮೂಡುಮಲೆಯ ಅಣ್ಣಂದಿರೇ! ಮದುವೆಯ ಏರ್ಪಾಡು ಮಾಡಬೇಡಿ. ಎರಡುವರೆ ವರ್ಷದ ಕಣ್ಣನನ್ನೂ ಆರು ತಿಂಗಳು ಪ್ರಾಯದ ಮಾತುವನ್ನೂ ನಾನು ಸಾಕಬೇಕಾಗಿದೆ. ಅದನ್ನು ಕೇಳಿದ ನಾಯಮ್ಮಾರರು ಅಳುತ್ತ ಹೇಳಿದರು – ಮೂಡುಮಲೆ ಯೊಡತಿ ಕುಂಞುಂಕ್ಯಮ್ಮ! ನಾವೀಗ ಏನು ಮಾಡಲಿ? ಹುಲಿನಾಡರಸನಿಗೆ ನಾವು ಮದುವೆ ಮಾಡಿ ಕೊಡಬೇಕಾಗಿದೆ. ಹಾಗೆ ಮಾಡದಿದ್ದರೆ ನಮ್ಮ ತಲೆ ಹಾರಿಹೋದೀತು.

ಮೂಡುಮಲೆಯ ನಾಯಮ್ಮಾರರು ಮದುವೆಗೆ ಬೇಕಾದ ಎಲ್ಲ ಸಾಮಾನು ಸರಂಜಾಮು ಗಳನ್ನು ಸಿದ್ಧಗೊಳಿಸತೊಡಗಿದರು. ಮೂಡುಮಲೆಯೊಡತಿ ಕುಂಕ್ಯಮ್ಮಳಿಗೆ ಈಗ ಮೀಹಗೀಹಗಳಿಲ್ಲ. ಮಕ್ಕಳ ಆರೈಕೆಯಲ್ಲೇ ತಲ್ಲೀನಳು. ಹಾಗೆ ಒಂದಿಷ್ಟು ದಿನ ಕಳೆಯಲು ಆ ಗುರುವಾರದ ಮುಂಜಾನೆ ಯೂ ಅರಳಲಾರಂಭಿಸಿತು. ಮೂಡುಮಲೆ ಕುಂಕ್ಯಮ್ಮ ಆರು ತಿಂಗಳ ಮಾತುವನ್ನೂ ಎರಡೂವರೆ ವರ್ಷದ ಕಣ್ಣನನ್ನೂ ಚೆನ್ನಾಗಿ ತಿಕ್ಕಿ ಸ್ನಾನ ಮಾಡಿಸಿದಳು. ಮಕ್ಕಳನ್ನು ಎತ್ತಿಕೊಂಡು ಉಣ್ಣಿಸಿದಳು. ಪಡುಕೋಣೆಯ ರತ್ನಮಂಚದಲ್ಲಿ ಮಕ್ಕಳನ್ನು ಮಲಗಿಸಿ ತಾನೂ ಮಲಗಿಕೊಂಡಳು. ಮೂಡುಮಲೆ ನಾಯಮ್ಮಾರರು ಅತ್ತುಕೊಂಡು ಹೇಳಿದರು – ಮೂಡುಮಲೆಯೊಡತಿ ಕುಂಞುಂಕ್ಯಮ್ಮ! ನೀನೂ ಒಮ್ಮೆ ಚೆನ್ನಾಗಿ ಸ್ನಾನ ಮಾಡಬಾರದೆ? ಕೊಳೆ ಬಟ್ಟೆಯನ್ನು ಬದಲಿಸಿ ಒಳ್ಳೆಯ ದ್ದನ್ನು ಉಟ್ಟುಕೋ. ಎದೆಗುಪ್ಪಸ ಬದಲಿಸಿ ಕಟ್ಟಿಕೊ ಮಗು! ಅದನ್ನು ಕೇಳಿ ಕುಂಕ್ಯಮ್ಮ ಹೇಳಿದಳು – ಮೂಡುಮಲೆಯ ನನ್ನ ಅಣ್ಣಂದಿರೇ ಎದೆಗುಪ್ಪಸ ಬದಲಿಸಿ ಕಟ್ಟುವುದಿಲ್ಲ. ಕೊಳೆಬಟ್ಟೆಯನ್ನು ಬದಲಿಸುವುದೂ ಇಲ್ಲ. ನಾನು ಮದುವೆಯಾಗುವುದೂ ಇಲ್ಲ. ನನ್ನ ಈ ಮಕ್ಕಳನ್ನು ನಾನೇ ಆರೈಕೆ ಮಾಡಬೇಕು. ಅವರು ಅತ್ತ ಹಾಗಿರಲು ಹುಲಿನಾಡರಸು ಮುನ್ನೂರ ಮೂವತ್ತು ನಾಯಮ್ಮಾರರನ್ನು ಕೂಡಿಕೊಂಡು ಮದುವೆಗಾಗಿ ಹೊರಟು ಬಂದ. ಮೂಡುಮಲೆಯನ್ನೇರಿ ಅವರು ಬಂದರು. ಮೂಡುಮಲೆಯ ನಾಯಮ್ಮಾರರು ಅವರನ್ನು ಅಕ್ಕಿಕಾಳು ಅರಲುಗಳನ್ನು ಎರಚಿ ಬರಮಾಡಿಕೊಂಡರು ಹುಲಿ ನಾಡರಸು ಪಡುಕೋಣೆಗೆ ಹೋದ. ಅರಸು ಪಡುಕೋಣೆಗೆ ಹೋದಾಗ ಮೂಡುಮಲೆಯೊಡತಿ ಕುಂಞುಂಕ್ಯಮ್ಮ ಮಕ್ಕಳ ಜತೆಯಲ್ಲಿ ಮಲಗಿಕೊಂಡಿದ್ದಳು. ಮದುವೆಯ ಮುಹೂರ್ತವು ಒದಗಿ ಬಂದಾಗ ಹುಲಿನಾಡರಸು ಪುಡಮುರಿಯ ಕಾರ್ಯಕ್ರಮಗಳನ್ನು ಮಾಡಿದ. ಅದು ಮುಗಿದಾಗ ಒಳ್ಳೆಯ ಔತಣವನ್ನೂ ಕೊಡಿಸಿದ. ಔತಣವು ಗೌಜಿಯಲ್ಲಿ ನಡೆಯಿತು.

ಪುಡಮುರಿ ವೈಭವದಿಂದ ಮುಕ್ತಾಯವಾಯಿತು. ಅರಸ ನಿರೂಪವಿತ್ತ – ಮೂಡುಮಲೆಯ ನಾಯಮ್ಮಾರರೇ! ನಾವು ದಿಬ್ಬಣದ ಮೆರವಣಿಗೆಯಲ್ಲಿ ಹೋಗುವಾಗ ಮೂಡುಮಲೆ ಯೊಡತಿ ರಾಣಿಯನ್ನೂ ಮೆರವಣಿಗೆ ಯಲ್ಲಿ ಕಳುಹಿಸುತ್ತೀರಷ್ಟೆ? ಆ ಮಾತುಗಳನ್ನು ಕೇಳಿದಾಗ ಕುಂಕ್ಯಮ್ಮ ಅಳಲಾರಂಭಿಸಿದಳು. ಕೂಡಲೇ ನಾಯಮ್ಮಾರರೆಂದರು– ಕುಂಕ್ಯಮ್ಮ, ಯಾಕೆ ಅಳುತ್ತಿ? ಎರಡೂವರೆ ವರ್ಷದ ಕಣ್ಣನನ್ನೂ ಆರು ತಿಂಗಳ ಮಾತುವನ್ನೂ ಸಾಕುವ ವಿಚಾರದಲ್ಲಿ ಅಳುತ್ತಿದ್ದಿಯಾ? ಅವರನ್ನು ಸಾಕುವುದಕ್ಕೆ ನಾವು ಹನ್ನೆರಡು ಜನ ಮಾವಂದಿರಿದ್ದೇವಲ್ಲ? ಅಲ್ಲದೆ ಇಲ್ಲಿ ಹನ್ನೆರಡು ಮಂದಿ ಹೆಂಗಸರು ಇದ್ದಾರಲ್ಲ! ನೀನು ಅದಕ್ಕಾಗಿ ಅಳಬೇಡ ಕುಂಕ್ಯಮ್ಮ. ನಾವು ಮಕ್ಕಳ ಪಾಲನೆ ಪೋಷಣೆ ಮಾಡಿಯೇವು. ನೀನು ಈಗ ಉಟ್ಟುತೊಟ್ಟು ಸಿದ್ಧವಾಗು. ಅದನ್ನು ಕೇಳಿದ ಕುಂಕಿ ಎಂದಳು – ಮೂಡುಮಲೆಯೊಡಯ ನನ್ನ ಅಣ್ಣಂದಿರೇ! ನನಗೆ ಅಲಂಕಾರ ಮಾಡಿಕೊಳ್ಳುವುದೇನೂ ಬೇಕಾಗಿಲ್ಲ. ಅವಳು ಎದೆಗುಪ್ಪಸ ಬದಲಾಯಿಸಿ ಕಟ್ಟಿಕೊಳ್ಳಲಿಲ್ಲ. ಕೊಳೆ ಬಟ್ಟೆಯನ್ನು ಬದಲಾಯಿಸಿ ಉಟ್ಟುಕೊಳ್ಳಲೂ ಇಲ್ಲ. ಅದೇ ಬಟ್ಟೆಯಲ್ಲಿ ಅವಳು ಹೊರಟುನಿಂತಳು. ಹುಲಿನಾಡರಸುವೂ ಮೂಡುಮಲೆಯ ರಾಣಿಯೂ ಹುಲಿನಾಡಿಗೆ ತಲಪಿದರು. ಅವರು ಅಲ್ಲಿ ಸುಖವಾಗಿ ವಾಸಿಸುತ್ತಿದ್ದರು. ಮೂಡುಮಲೆಯ ನಾಯಮ್ಮಾರರು ಎರಡುವರೆ ವರ್ಷದ ಕಣ್ಣನನ್ನೂ ಆರು ತಿಂಗಳ ಮಾತವನ್ನೂ ಚೆನ್ನಾಗಿಯೇ ಸಾಕಿ ಸಲಹಿದರು. ಬಾಯಾರಿದಾಗ ಹಾಲಿತ್ತು, ಹಸಿವಾದಾಗ ಅನ್ನವಿತ್ತು ಅವರು ಆ ಮಕ್ಕಳನ್ನು ಬೆಳೆಸಿದರು.

ದಿನಗಳುರುಳಿದುವು. ಮೂಡುಮಲೆಯ ನಾಯಮ್ಮಾರರಿಗೆ ಒಂದು ದಿನ ಪಾಲಾಯಿಲರಶಿ ಎಂಬ ಅರಸನಿಂದ ಒಂದು ಓಲೆ ಬಂತು. ಅನ್ಯರಾಜ್ಯವನ್ನು ಹಿಡಿದು ಕೊಡಬೇಕೆಂದು ಅರಸ ಓಲೆ ಬರೆಸಿದ್ದ. ಅದರಂತೆ ಅವರು ಹೊರಟು ಸನ್ನದ್ಧರಾದರು. ಅವರು ತಮ್ಮ ಹನ್ನೆರಡು ಜನ ಹೆಂಗುಸರನ್ನೂ ಕರೆದು ಹೀಗೆಂದರು– ಹನ್ನೆರಡು ಮಂದಿ ಪ್ರಿಯ ಹೆಂಗುಸರೆ! ಪಾಲಾಯಿಲರಶಿಯ ಓಲೆಯ ಪ್ರಕಾರ ನಾವು ಅನ್ಯರಾಜ್ಯವನ್ನು ಹಿಡಿಯಲು ಹೊರಟಿದ್ದೇವೆ. ಪಾಲಯಲ್ಲಿನ ರಾಜ್ಯವನ್ನು ನಾವು ಹಿಡಿಯಬೇಕಾಗಿದೆ. ಆರು ತಿಂಗಳ ಮಾತುವಿಗೆ ಬಾಯಾರಿದಾಗ ಹಾಲು ಕೊಡಿ, ಹಸಿವಾದಾಗ ಅನ್ನ ಕೊಡಿ. ಎರಡೂವರೆ ವರ್ಷದ ಕಣ್ಣನಿಗೆ ಹಸಿವಾದಾಗ ಅನ್ನಕೊಡಿ. ಚೆನ್ನಾಗಿ ಮಕ್ಕಳನ್ನು ನೋಡಿಕೊಳ್ಳಿ – ಎಂದು ನಾನಾ ರೀತಿಯಲ್ಲಿ ತಿಳಿಸಿಕೊಟ್ಟು ಅವರು ದಂಡಿಗೆ ಹೊರಟು ಹೋದರು.

ಅವರು ಹೊರಟು ಹೋಗಿ ತುಂಬ ಹೊತ್ತು ಕಳೆದಾಗ ಮಾತು ಎಚ್ಚರವಾಗಿ ಎದ್ದು ಅಳತೊಡಗಿತು. ಅದಕ್ಕೆ ಹಾಲು ಕೊಡಬೇಕು. ಅದಕ್ಕೆ ಅಲ್ಲಿನ ಹೆಂಗಸರು

ಹೇಳಿದರು – ಮೂಡುಮಲೆಯ ಕುಂಞಿಕಣ್ಣಾ! ನಾವು ಮಾತುವಿಗೆ ಹಾಲು ಕುಡಿಸುವುದಕ್ಕೆ ಇರಿಸಿದ ಆಳುಗಳು ಅಲ್ಲವಲ್ಲ? ಅದನ್ನು ಕೇಳಿ ಕುಂಞಿಕಣ್ಣ ಮಾತುವನ್ನು ಎತ್ತಿಕೊಂಡು ರಮಿಸಿದ. ಮತ್ತೆ ಅಳುತ್ತ ಹೇಳಿದ – ಮೂಡುಮಲೆಯ ನನ್ನ ಅತ್ತೆಯಂದಿರೆ! ಮಗು ಮಾತು ಎಚ್ಚರವಾಗಿ ಎದ್ದು ಅಳುತ್ತಿದೆ. ಒಂದಿಷ್ಟು ಹಾಲು ಕೊಡಬೇಕಾಗಿತ್ತು. ಅದನ್ನು ಕೇಳಿದ ಅತ್ತೆಯಂದಿರು ಹೇಳಿದರು – ಕುಂಞಿಕಣ್ಣಾ! ಮಾತುವನ್ನು ಎತ್ತಿಕೊಂಡು ಸಾಕಲು, ಅವಳಿಗೆ ಹಾಲು ಕುಡಿಸಲು, ನಾವು ಅವಳನ್ನು ಸಾಕುವ ಕೆಲಸದವರಲ್ಲವಲ್ಲ? ಅದನ್ನು ಕೇಳಿದ ಕಣ್ಣ ಮಾತುವನ್ನು ಎತ್ತಿಕೊಂಡು ಈಚೆಗೆ ಬಂದ. ಅವನೆಂದ – ಕುಂಞಿಮಾತೂ! ನಮ್ಮನ್ನು ಹೆತ್ತಮ್ಮ ಸತ್ತುಹೋದಳು. ನಮಗೊಬ್ಬ ಸಾಕಮ್ಮಳಾದರೂ ಇದ್ದಳು. ಅವಳೂ ಈಗ ಎಲ್ಲಿದ್ದಾಳೆ ಎಂದು ತಿಳಿಯದು. ನಮಗೆ ಮಾವಂದಿರಿದ್ದೂ ಹೀಗೆ ಯಾಕಾಯಿತು? ಅವರು ಹೋದದ್ದು ಯಾವ ಊರಿಗೆ ಎಂದೂ ಗೊತ್ತಿಲ್ಲ. ನಾವು ಎಲ್ಲಾದರೂ ಹೋಗಿ ಸತ್ತುಬಿಡೋಣ.

ಹಾಗೆ ಹೇಳುತ್ತ ಅವರು ಹೊರಟುಬಿಟ್ಟರು. ಕಣ್ಣನು ಹಾಗೆ ನಡೆಯುತ್ತ ನಡೆಯುತ್ತ ಓಡಕಾಟ್ಟಿಲ್ಲಂ ಕುಡಿಯರ ಮನೆಯ ಮುಂದೆ ತಲಪಿದ. ಅಲ್ಲಿ ಆರು ತಿಂಗಳ ಕೂಸು ಮಾತುವನ್ನು ಕುಳಿತುಕೊಳ್ಳಿಸಿದ. ಅವನೂ ಅಲ್ಲಿಯೇ ಕುಳಿತ. ಓಡಕಾಟ್ಟಿಲ್ಲಂ ಕುಡಿಯಾನರ ದನಗಳನ್ನು ಕಾಯುವ ಪಾಣ ಹುಡುಗ ದನಕಾಯಲು ಹೊರಟವನು ಮಕ್ಕಳನ್ನು ಕಣ್ಣಾರೆ ಕಂಡ. ಪಾಣರ ಹುಡುಗ ಕೇಳಿದ– ನೀವು ಎಲ್ಲಿಯ ಮಕ್ಕಳು? ಏ ಹುಡುಗ! ನೀವು ಎಲ್ಲಿಂದ ಬರುತ್ತಿದ್ದೀರಿ? ಯಾಕೆ ಅಳುತ್ತಿದ್ದೀರಿ? ಕೂಡಲೇ ಕುಂಞಿಕಣ್ಣ ಉತ್ತರಿಸಿದ – ದನಗಳನ್ನು ಕಾಯುವ ಪಾಣಾ! ಕೇಳು. ನಮ್ಮ ಹೆತ್ತಮ್ಮ ಸತ್ತುಹೋದಳು. ನಮಗೆ ಸಾಕಮ್ಮ ಒಬ್ಬಾಕೆಯಿದ್ದಳು. ಮನೆ ಯಾವುದೆಂದು ತಿಳಿಯದು. ನಮಗೆ ಮಾವಂದಿರೂ ಇದ್ದರು. ಅವರು ಯಾವ ಊರಿಗೆ ಹೋದರೆಂದು ಗೊತ್ತಿಲ್ಲ. ಹೀಗೆ ಹೇಳುತ್ತ ಕಣ್ಣ ಅತ್ತು ಬಿಟ್ಟ. ಅದನ್ನು ನೋಡಿದ ಪಾಣರ ಹುಡುಗ ಹೇಳಿದ – ಮಕ್ಕಳೇ! ನೀವು ಒಂದು ಮಾತನ್ನು ಕೇಳಿ. ಓಡಕ್ಕಾಡಿನ ಕುಡಿಯರ ದನಗಳನ್ನು ಮೇಯಿಸಿ ನಾನು ಬಂದರೆ ಅವರು ಉಂಡ ಎಲೆಯಲ್ಲಿ ನನಗೆ ಊಟವನ್ನು ಕೊಡುತ್ತಾರೆ. ಅದನ್ನು ನಾನು ನಿಮಗೂ ಕೊಡುವೆ. ನೀವು ಈ ಬಾಗಿಲಲ್ಲಿ ಕುಳಿತುಕೊಳ್ಳಿ. ಅದನ್ನು ಕೇಳಿದ ಮಕ್ಕಳು ಬಾಗಿಲಲ್ಲೆ ಕುಳಿತರು. ಅವರು ಅಲ್ಲಿ ಕುಳಿತಾಗ ಮಾತು ಪುನಃ ನಿದ್ದೆ ಮಾಡಿತು. ಕಣ್ಣ ಅಲ್ಲಿಯೇ ಇದ್ದ. ಸ್ವಲ್ಪ ಹೊತ್ತಿನ ಬಳಿಕ ದನಗಳನ್ನು ಮೇಯಿಸಲು ಹೋದ ಪಾಣ ಹುಡುಗ ಬಂದ. ಓಡಕಾಟ್ಟ್‌ನ ಕುಡಿಯರು ಅವನಿಗೆ ಉಂಡೆಲೆಯೂಟ ಕೊಟ್ಟರು. ಎಲ್ಲ ದಿನಗಳಲ್ಲೂ ಅದನ್ನು ಅಲ್ಲೇ ಉಣ್ಣುತ್ತಿದ್ದ ಪಾಣರ ಹುಡುಗ ಅಂದು ಊಟವನ್ನೆತ್ತಿಕೊಂಡು ಹೋದ. ಮನೆ ಬಾಗಿಲಿಗೆ ಅದನ್ನು ತಂದ. ಆರು ತಿಂಗಳ

ಮಗು ಮಾತುವಿಗೆ ಅದನ್ನು ಉಣ್ಣಿಸಿದ. ಕಣ್ಣನಿಗೂ ಕೊಟ್ಟ. ಪಾಣರ ಹುಡುಗನೆಂದ – ಮಕ್ಕಳೇ ಒಂದು ವಿಚಾರವನ್ನು ಕೇಳಿ – ಹೊತ್ತು ಎಂಟುಗಂಟೆ ರಾತ್ರೆಯಾದರೆ ಓಡಕ್ಕಾಡಿನ ಕುಡಿಯರು ಉಂಡೆಲೆಯೂಟವನ್ನು ನನಗೆ ಕೊಡುತ್ತಾರೆ. ನಿಮಗೆ ನಾನು ಆ ಊಟವನ್ನು ಕೊಡುತ್ತೇನೆ. ನನ್ನ ನಿದ್ದೆ ಇಂದು ಆ ಮನೆ ಬಾಗಿಲಲ್ಲೇ. ನಾನು ಅಲ್ಲಿನ ಬಾಗಿಲಲ್ಲೇ ಮಲಗುತ್ತೇನೆ. ನನ್ನ ಬಳಿಯಲ್ಲೇ ನೀವು ಮಲಗಿಕೊಳ್ಳಬಹುದು. ನಾನು ನಿಮ್ಮನ್ನು ಚೆನ್ನಾಗಿಯೇ ನೋಡಿಕೊಂಡೇನು. ಹಾಗೆಂದು ಅವನು ಅಲ್ಲಿ ಕುಳಿತಿದ್ದ. ಹೊತ್ತು ಮಯಮಯ ಸಂಜೆಯಾದಾಗ ಓಡಕ್ಕಾಟ್ಟ್‌ನ ಕುಡಿಯರು ಮಿಂದು ಊಟ ಮುಗಿಸಿದರು. ಪಾಣಹುಡುಗನನ್ನು ಬಳಿಗೆ ಕರೆದರು. ಆಗ ಅವನು ಹೋಗಿ ಅನ್ನವನ್ನು ತೆಗೆದುಕೊಂಡು ಬಂದ. ಅನ್ನವನ್ನು ತಂದು ಮಕ್ಕಳಿಗೂ ಉಣ್ಣಿಸಿದ. ತಾನೂ ಉಂಡ. ಕುಡಿಯರು ಒಂದೊಂದೇ ಬಾಗಿಲು ಮುಚ್ಚಿದರು. ಮಕ್ಕಳನ್ನು ಕರೆದುಕೊಂಡು ಪಾಣ ಹೋದ. ಮನೆ ಬಾಗಿಲಿಗೆ ಬಂದು ಅಲ್ಲೇ ಮಲಗಿದ. ಮಧ್ಯರಾತ್ರಿಯಾಯಿತು. ಮಾತು ಎಚ್ಚರವಾಗಿ ಅಳಲಾರಂಭಿಸಿತು. ಆಗ ಓಡಕ್ಕಾಟ್ಟ್‌ನ ಕುಡಿಯರು ಹೇಳಿದರು – ನಮ್ಮ ಬಾಗಿಲಲ್ಲಿರುವ ದನಗಾಹಿ ಹುಡುಗ ಮನೆಯನ್ನೇ ಗುಂಡಾಂತ್ರ (ಸರ್ವನಾಶ) ಮಾಡಿ ಬಿಡುತ್ತಾನೆ. ಮರುದಿನ ಮಯಮಯ ಬೆಳಗಾದಾಗ ಬಂದು ಪಾಣ ಹುಡುಗನಲ್ಲೆಂದರು – ದನಗಳನ್ನು ಮೇಯಿಸುವ ಪಾಣರ ಹುಡುಗ! ಇದೆಲ್ಲಿಂದ ಮಕ್ಕಳನ್ನು ತಂದೆ? ಒಳ್ಳೆ ಮಾತಲ್ಲಿ ಮಕ್ಕಳನ್ನು ಕರೆದುಕೊಂಡು ಮನೆಬಿಟ್ಟು ಹೊರಡು. ನಿನ್ನನ್ನು ಮನೆ ಸೇರಿಸಿ ಕೊಳ್ಳುವುದಿಲ್ಲ. ಅದನ್ನು ಕೇಳಿದ ಪಾಣರ ಹುಡುಗ ಅಳುತ್ತಾ ಹೇಳಿದ – ಅಯ್ಯೋ ವಿಧಿಯೇ! ನನ್ನ ಬಂಗಾರು ಮಕ್ಕಳೇ! ನಾನಾದರೂ ನಿಮ್ಮನ್ನು ಸಾಕುತ್ತಿದ್ದೆನಲ್ಲ. ನಾನೀಗ ಏನು ಮಾಡಲಿ? ರಾತ್ರೆ ಎಚ್ಚರ ಆಗಿ ಮಾತು ಹಾಗೆ ಅತ್ತುದರಿಂದಲೇ ಹೀಗಾಯಿತು. ಇನ್ನು ಓಡಕ್ಕಾಟ್ಟಿಲ್ಲಂ ಕುಡಿಯರು, ಅಮ್ಮಾವರು ನನ್ನನ್ನು ಉಳಿಸರು. ನೀವು ಎಲ್ಲಿಯಾದರೂ ಹೋಗಿ ಬದುಕಿಕೊಳ್ಳಿ.

ಎರಡುವರೆ ವರ್ಷದ ಕುಂಞಿಕಣ್ಣ ಮಾತುವನ್ನು ಎತ್ತಿಕೊಂಡ. ಮಾತುವಿಗೆಂದ – ಮೂಡು ಮಲೆಯೊಡತಿ ಕುಂಞಿಮಾತು! ನೀನು ಎಂಥ ಭಾಗ್ಯಹೀನಳು! ನಮ್ಮ ಹೆತ್ತಮ್ಮ ಸತ್ತುಹೋದಳು. ಇನ್ನೊಬ್ಬಾಕೆ ನಮ್ಮನ್ನು ಸಾಕುತ್ತಿದ್ದ ಸಾಕಮ್ಮ ಈಗ ಎಲ್ಲಿಗೆ ಹೋದಳೆಂದೇ ತಿಳಿಯದು. ಮಗುವನ್ನೆತ್ತಿಕೊಂಡ ಕಣ್ಣ ನಡೆಯುತ್ತ ನಡೆಯುತ್ತ ಮಲೆ ಇಳಿಯುತ್ತಿದ್ದ. ಒಬ್ಬಾಕೆ ಮಲೆಕೊರತಿ ಮಕ್ಕಳನ್ನು ಕಣ್ಣಾರೆ ಕಂಡು ಹೀಗೆಂದುಕೊಂಡಳು – ಅಯ್ಯೋ ದೇವರೇ! ಭಗವಂತ! ಒಳ್ಳೇ ಐಸಿರಿಯ ಮಕ್ಕಳು! ನಾನು ಕೊಂಡುಹೋಗಿ ಈ ಮಕ್ಕಳನ್ನು ಸಲಹುತ್ತೇನೆ. ಯಾವ ಮನೆಯ ಮಕ್ಕಳೆಂದು ಗೊತ್ತಾಗಲಿಲ್ಲ. ಎಲ್ಲಿ

ಯಾದರೂ ಹೋಗಿ ಬದುಕಿಕೊಳ್ಳಲಿ! ಅದನ್ನು ಕೇಳಿ ಇಬ್ಬರು ಮಕ್ಕಳೂ ಮುಂದೆ ಹೋದರು.

ಕುಂಞಿಕಣ್ಣ ಹಾಗೆ ನಡೆಯುತ್ತ ನಡೆಯುತ್ತ ಸೌತೆ ಕೊಯ್ದುಳಿದ ಕೋಯಿನಾಡರಸನ ಗದ್ದೆಯಲ್ಲಿ ಸೌತೆ ಮಿಡಿಗಳನ್ನು ಕಂಡ. ಮಗು ಮಾತುವನ್ನು ಹುಲಿನಾಡರಸುವಿನ ಮನೆಬಾಗಿಲ ಮುಂದೆ ಕುಳಿತುಕೊಳ್ಳಿಸಿದ. ಸೌತೆ ಕೊಯ್ದುಳಿದ ಗದ್ದೆಗೆ ಹೋಗಿ ಸೌತೆ ಮಿಡಿಯನ್ನು ಕಣ್ಣ ಕೊಯ್ಯುವಾಗ ಹುಲಿನಾಡರಸನ ಅರಮನೆಯ ನಾಯಮ್ಮಾರರು ಮಾತುವನ್ನು ಚಿವುಟಿ ಅಳಿಸಿದರು. ಮಾತುವಿನ ಅಳುವನ್ನು ಕೇಳಿದಾಗ ಕಣ್ಣನು ತಾನು ಕೊಯ್ದಿದ್ದ ಸೌತೆಮಿಡಿಯನ್ನು ಕೆಳಹಾಕಿ ಓಡಿಬಂದು ಮಾತುವನ್ನೆತ್ತಿಕೊಂಡ. ಬಳಿಕ ಅವಳನ್ನು ಎತ್ತಿಕೊಂಡು ಮುಂದೆ ನಡೆದ. ಹಾಗೆ ನಡೆಯುತ್ತ ನಡೆಯುತ್ತ ದೊಡ್ಡ ತಿರುವೊಂದರ ಬಳಿಯ ಆಲುಂಕಲ್ ಎಂಬಲ್ಲಿಗೆ ತಲಪಿದ. ಆಲುಂಕಲ್‌ಗೆ ತಲಪಿದಾಗ ಭೋರನೆ ಮಳೆ ಸುರಿಯಿತು. ಮೂಡುಮಲೆಯೊಡೆಯ ಕಣ್ಣ ಮಾತುವನ್ನು ಅಲ್ಲೇ ಇಳಿಸಿದ. ತಾನೂ ಮಳೆಯಲ್ಲೇ ಕುಳಿತ. ಇರುಳೆನ್ನದೆ ಹಗಲೆನ್ನದೆ ಮಳೆ ಒಂದೇ ಸಮನೆ ಸುರಿಯಿತು. ಆ ಮಳೆಯಲ್ಲಿ ಮಕ್ಕಳು ನೆನೆಯುತ್ತಲೇ ಇದ್ದವು.

ಹಾಗೆ ಅವು ಅಲ್ಲಿರಲು ಸತ್ತ ಮೂಡುಮಲೆಯೊಡತಿ ಕುಂಞಿಮಾತು ನೆರಳಾಗಿಯೇ ಮಕ್ಕಳ ಬಳಿ ಹೋದಳು. ಮೂಡುಮಲೆ ಕುಂಕ್ಯಮ್ಮನ ಬಳಿಗೆ ಬಂದು ಅವಳಿಗೆ 'ಸೊಪುನ' ಬೀಳಿಸಿದಳು. ನಡೆದ ಸುದ್ದಿಯನ್ನೆಲ್ಲಾ ಕನಸಲ್ಲಿ ಅವಳಿಗೆ ಹೇಳಿದಳು – ಮೂಡುಮಲೆಯೊಡತಿ ನನ್ನ ತಂಗಿ! ನೀನು ಸುಖವಾಗಿದ್ದಿ ತಂಗಿ. ಆದರೆ ನಾನು ಸುಖವಾಗಿಲ್ಲ. ಹೀಗೆ ಕನಸು ಬೀಳಿಸಿದಳು. ಮೂಡುಮಲೆಯ ಕುಂಞುಂಕ್ಯಮ್ಮ ನಿದ್ದೆಯಿಂದ ತಟಕ್ಕನೆ ಎದ್ದಳು. ತುಂಬ ಅತ್ತಳು. ಹುಲಿ ನಾಡರಸುವಿನಲ್ಲಿ ಹೇಳಿದಳು – ಹುಲಿನಾಡರಸು! ಮೂಡುಮಲೆಯ ಮುದ್ದುಮಕ್ಕಳನ್ನು, ನನ್ನ ಮಕ್ಕಳನ್ನು ನಾನು ಸದ್ಯ ಕಂಡೇ ಇಲ್ಲ. ಅವರನ್ನು ಕಾಣದೆ ನಾನು ನೀರು ಕುಡಿಯುವುದಿಲ್ಲ, ಕೋಣೆಯ ಬಾಗಿಲು ತೆರೆಯುವು ದಿಲ್ಲ. ಹೀಗೆ ಹೇಳಿ ಕುಂಞುಂಕ್ಯಮ್ಮ ಕೋಣೆಯ ಬಾಗಿಲು ಮುಚ್ಚಿದಳು. ಕಿಟಿಕಿಗಳನ್ನೂ ಮುಚ್ಚಿ ಅಲ್ಲಿ ಸೇರಿಕೊಂಡಳು. ಹುಲಿನಾಡರಸು ತನ್ನ ನಾಯಮ್ಮಾ ರರನ್ನು ಕಳುಹಿಸಿದ. ಅವರು ಹೊರಟು ಮೂಡುಮಲೆಗೆ ತಲಪಿದರು. ಮೂಡುಮಲೆಯ ನಾಯಮ್ಮಾರರು ಅಲ್ಲೇ ಬಾಗಿಲ ಬಳಿ ಕುಳಿತಿದ್ದರು. ಪರಸ್ಪರರು ಕಣ್ಣಲ್ಲೇ ಕಂಡಾಗ ಕೇಳಿದರು – ಹುಲಿ ನಾಡಿನ ನಾಯಮ್ಮಾರರೇ! ನೀವು ಈ ಕಡೆ ಏನು ಬಂದಿರಿ? ಅದನ್ನು ಕೇಳಿದ ಹುಲಿನಾಡ ನಾಯಮ್ಮಾರರು ಉತ್ತರಿಸಿದರು – ಮೂಡುಮಲೆಯ ನಾಯಮ್ಮಾರರೇ! ಹುಲಿನಾಡ ಅಮ್ಮಣ್ಣಿ ಬಾಯಾರಿಕೆಗೆ ನೀರು ಕುಡಿಯರು, ಕೋಣೆಯ ಬಾಗಿಲು

ತೆರೆಯರು. ಬೇಗ ಮಕ್ಕಳನ್ನು ಕರೆದುಕೊಂಡು ಹೋಗಲು ಅರಸರು ಆಜ್ಞಾಪಿಸಿದ್ದಾರೆ. ಅದನ್ನು ಕೇಳಿದ ನಾಯಮ್ಮಾರರು ಎದೆ ಬಡಿದುಕೊಂಡು ಅತ್ತರು. ಅಳುತ್ತ ಹೀಗೆಂದರು – ಹುಲಿನಾಡ ನಾಯಮ್ಮಾರರೇ! ಮಕ್ಕಳು ಎಂದೋ ಸತ್ತು ಹೋದರು. ಆದರೆ ಹುಲಿನಾಡಮ್ಮಣ್ಣಿಗೆ ಅದನ್ನು ಹೇಳಬೇಡಿ.

ಅದನ್ನು ಕೇಳಿದ ನಾಯಮ್ಮಾರರು ಬೇಗ ಹಿಂದಿರುಗಿದರು. ನಡೆಯುತ್ತ ಓಡುತ್ತ ಅವರು ಹುಲಿನಾಡಿಗೆ ತಲಪಿದರು. ಹುಲಿನಾಡರಸು ಅವರನ್ನು ಕಂಡಾಗ ಕೇಳಿದ – ನಾಯಮ್ಮಾರರೇ! ಏನು ಸಮಾಚಾರ? ಅದನ್ನು ಕೇಳಿದ ನಾಯಮ್ಮಾರರು ಸಂಗತಿಯನ್ನು ತಿಳಿಸಿದರು. ಆಗ ಅರಸನ ಸಿರಿಗಣ್ಣುಗಳು ಕಲಕಿ ಕೆಂಪಾದುವು. ಅವನೂ ತುಂಬ ಅತ್ತುಬಿಟ್ಟ.

ಹೀಗಿರಲು ಮಗು ಕಣ್ಣನು ಆರು ತಿಂಗಳ ಮಗು ಮಾತುವನ್ನು ಎತ್ತಿಕೊಂಡು ನಡೆಯುತ್ತ ನಡೆಯುತ್ತ ನಾದಾಪುರದ ಪೇಟೆಯಲ್ಲಿ ಹೋಗುತ್ತಿದ್ದ. ಆಗ ತಚ್ಚೋಳಿ ಚಂದು ಎಂಬ ನಾಯರ್‌ನೂ (ಒದೇನನ ಅಳಿಯ) ಇಾಲಿಕ್ಕರಮ್ಮಲ್‌ನ ಕುಂಞಿಕುಂಕನೂ ಅಂಗಡಿಯ ಸಾಲುಬಾಗಿಲು ಹಲಗೆಗಳ ಮೇಲೆ ಕುಳಿತು ಕೊಂಡಿದ್ದರು. ಕುಂಞಿಚಂದು ಹೇಳಿದ – ಇಾಲಿಕ್ಕರಮ್ಮಲ್‌ನ ಕುಂಞಿಕುಂಕಾ! ಇಬ್ಬರು ಮಕ್ಕಳು ಹೋಗುತ್ತಿರುವುದನ್ನು ಕಂಡೆಯಾ? ಆ ಮಕ್ಕಳು ಯಾರು? ಎಂದು ಹೇಳಿ ಕುಂಞಿಚಂದುವು ರಸ್ತೆಯ ಆಚೆಗೆ ಓಡಿದ. ಓಡಿ ಹೋಗಿ ಮಕ್ಕಳನ್ನು ತಡೆದು ಮಾತುವನ್ನು ಕೂಡಲೇ ಎತ್ತಿಕೊಂಡ. ಎತ್ತಿಕೊಂಡು ಹೇಳಿದ – ಕೇಳಿರೋ ಮಕ್ಕಳೇ! ನೀವು ಬರುವುದೆಲ್ಲಿಂದ? ನೀವು ಯಾವ ಮನೆಯವರು? ಅದಕ್ಕೆ ಮಗು ಕಣ್ಣ ಉತ್ತರಿಸಿದ– ನಿಮ್ಮ ಹೆಸರೇನು ನಾಯರರೇ? ನಿಮ್ಮ ಹೆಸರನ್ನು ಕೂಡಲೇ ಹೇಳಿದರೆ ನಾನು ಎಲ್ಲವನ್ನೂ ಹೇಳುತ್ತೇನೆ. ಅದಕ್ಕೆ ಕುಂಞಿಚಂದುವೆಂದ – ಕೇಳಿಮಕ್ಕಳೇ! ತಚ್ಚೋಳಿ ಚಂದು ಎಂಬ ನಾಯರ್ ನಾನೇ. ಈತ ಇಾಲಿಕರಮ್ಮಲ್ ಕುಂಞಿಕುಂಕ. ನಾಯರ ಹೆಸರನ್ನು ಕೇಳಿದ ಮೂಡು ಮಲೆಯ ಕುಂಞಿಕಣ್ಣ ಎಲ್ಲವನ್ನೂ ತಿಳಿಸಿದ. ಆ ಸಂಗತಿಗಳನ್ನೆಲ್ಲ ಕೇಳಿ ಚಂದುವಿಗೆ ತುಂಬ ಕೋಪವೇರಿತು. ಕೋಪಗೊಂಡ ಅವನು ಬೈರಾಸನ್ನು ಹಾಸಿ ಕುಳಿತ. ಹಾಸಿ ಕುಳಿತು ಎಲ್ಲ ವಿವರಗಳನ್ನು ತಿಳಿದ. ತಿಳಿದಾಗ ಅವನಿಗೆ ಸಿಟ್ಟೇರಿ ಥರಥರ ನಡುಗಿತು. ಅವನು ಮಾತುವನ್ನು ಸೊಂಟವೇರಿಸಿಕೊಂಡ. ಕಣ್ಣನ ಕೈ ಹಿಡಿದುಕೊಂಡ. ಹಾಗೆಯೇ ನಡೆಯತೊಡಗಿದ. ಹಾಗೆ ನಡೆಯುತ್ತ ನಡೆಯುತ್ತ ಹುಲಿನಾಡರಮನೆಗೆ ತಲಪಿದ. ಅವರು ಅಲ್ಲಿಗೆ ತಲಪಿದಾಗ ಅರಸ ಬಾಗಿಲಲ್ಲೇ ಕುಳಿತಿದ್ದ. ತಚ್ಚೋಳಿ ಚಂದುವೂ ಇಾಲಿಕ್ಕರಮ್ಮಲ್ ಕುಂಞಿಕುಂಕನೂ ಮೆಟ್ಟಲೇರಿ ಹೋದಾಗ ಅರಸ ಕೇಳಿದ – ನೀವು

ಎಲ್ಲಿಂದ ಬರುತ್ತಿದ್ದೀರಿ ನಾಯಮ್ಮಾರರೇ? ಯಾಕೆ ಬಂದಿರಿ ನಾಯಮ್ಮಾರರೇ? ಕುಂಞಿಚಂದು ಕೂಡಲೇ ಎಲ್ಲಾ ವಿಷಯಗಳನ್ನು ತಿಳಿಸಿದ. ಎಲ್ಲವನ್ನೂ ಕೇಳಿಸಿಕೊಂಡ ಅರಸನೆಂದ – ತಚ್ಚೋಳಿ ಚಂದು ಎಂಬ ನಾಯರನೇ ಕೇಳು! ಇಾಲಿಕರಮ್ಮಲ್ ಕುಂಞಿಕುಂಕಾ! ಹುಲಿನಾಡೊಡತಿ ಅಮ್ಮಣ್ಣಿ ಕೋಣೆಯ ಬಾಗಿಲು ಹಾಕಿದ್ದಾಳೆ. ಬಾಗಿಲ ಬಳಿ ಹೋಗಿ ಕರೆಯಬೇಕು. ತಚ್ಚೋಳಿ ಚಂದು ಅಂತೆಯೇ ಮಾಡಿದ – ಹುಲಿನಾಡೊಡತಿ ಅಮ್ಮಣ್ಣಿಯವರೇ! ಬಾಗಿಲು ತೆರೆಯಿರಿ ಒಡತಿಯರೇ! ನಿಮ್ಮ ಮಕ್ಕಳಿದೋ ಬಂದಿದ್ದಾರೆ! ಅಷ್ಟು ಮಾತುಗಳನ್ನು ಕೇಳಿದ ರಾಣಿ ಎಂದಳು – ಹುಲಿನಾಡರಸುವೇ! ನಾನು ನನ್ನ ಕೋಣೆಯ ಬಾಗಿಲನ್ನು ತೆರೆಯಬೇಕಾದರೆ ಮೂಡುಮಲೆಯ ಕಣ್ಣ ಈ ಬಾಗಿಲ ಬಳಿ ಬಂದು ಕರೆಯಲಿ. ಆಗ ತೆರೆಯುತ್ತೇನೆ. ಆ ಮಾತುಗಳನ್ನು ಕೇಳಿದ ಚಂದುವು ಮಗು ಮಾತುವನ್ನು ಎತ್ತಿಕೊಂಡು ಸೊಂಟವೇರಿಸಿಕೊಂಡ. ಕಣ್ಣನ ಕೈ ಹಿಡಿದುಕೊಂಡ. ಚಂದುವೆಂದ – ಮೂಡುಮಲೆಯ ಕಣ್ಣಾ! ನೀನು ಬಾಗಿಲ ಬಳಿಗೆ ಹೋಗಿ ಕರೆ! ಕಣ್ಣ ಅಂತೆಯೇ ಬಾಗಿಲ ಬಳಿಗೆ ಹೋಗಿ ಕರೆದ – ಹುಲಿನಾಡೊಡತಿ ನಮ್ಮಮ್ಮ! ಒಮ್ಮೆ ಬಾಗಿಲು ತೆರೆ ನಮ್ಮಮ್ಮ! ಅದನ್ನು ಕೇಳಿದ ಕುಂಞಿಕುಂಕಿ ಬಾಗಿಲನ್ನು ತೆರೆದಳು. ಚಂದುವಿನ ಸೊಂಟವೇರಿದ್ದ ಮಾತುವನ್ನು ತೋಳುಗಳಿಗೆ ಏರಿಸಿಕೊಂಡಳು, ಕಣ್ಣನ ಕೈ ಹಿಡಿದುಕೊಂಡಳು. ಹಾಗೆ ಕರೆದುಕೊಂಡು ಅವಳು ಮಲಗುವ ಕೋಣೆಯ ಒಳಗೆ ಹೋದಳು. ಅಲ್ಲಿನ ಹಾಸಿಗೆಯಲ್ಲಿ ಮಕ್ಕಳನ್ನು ಮಲಗಿಸಿದಳು.

ತಚ್ಚೋಳಿ ಚಂದು ಅರಸನಲ್ಲೆಂದ – ಹುಲಿನಾಡರಸುವೇ! ಮೂಡುಮಲೆಯ ನಾಯಮ್ಮಾರರು ಅವರ ಹೆಂಗಸರ ಸಮೇತ ಬರಬೇಕೆಂದು ಒಂದು ಓಲೆ ಕಳುಹಿಸಿರಿ. ಅರಸು ಅಂತೆಯೇ ಓಲೆಬರೆದು ನಾಯಮ್ಮಾರರ ಕೈಗಿತ್ತು ಕಳುಹಿಸಿದ. ಅವರು ನಡೆಯುತ್ತ ನಡೆಯುತ್ತ ಮೂಡುಮಲೆ ತಲಪಿದರು. ಅವರು ಅಲ್ಲಿಗೆ ತಲಪಿದಾಗ ಮೂಡುಮಲೆಯ ನಾಯಮ್ಮಾರರು ಬಾಗಿಲ ಬಳಿಯೇ ಕುಳಿತಿದ್ದರು. ಇವರು ಅವರಿಗೆ ಓಲೆಯನ್ನಿತ್ತರು. ಓಲೆಯ ವಿವರಗಳನ್ನು ಓದಿ ನಾಯಮ್ಮಾರರೆಂದರು – ಹುಲಿನಾಡ ನಾಯಮ್ಮಾರರೇ! ಮಕ್ಕಳು ಸತ್ತು ಹೋಗಿರುವುದರಿಂದ ನಾವು ಹೇಗೆ ಬರಲಿ? ಅವರು ಹೆಂಗುಸರಿಗೆಂದರು– ಮೂಡುಮಲೆಯ ಹೆಂಗುಸರೇ! ಹುಲಿನಾಡ ರಾಣಿ ನಿಮ್ಮನ್ನು ನೋಡಲು ಬಯಸುತ್ತಿದ್ದಾಳೆ. ನಾವು ಬೇಗನೇ ಅಲ್ಲಿಗೆ ಹೋಗಬೇಕು. ಅವರು ಹೊರಡಲು ಸಿದ್ಧರಾದರು. ತಚ್ಚೋಳಿ ಚಂದುವು ಊರವರಿಗರೆಲ್ಲ ಓಲೆ ಕಳುಹಿಸಿದ. ಅದು ನಾಲ್ಕು ಊರುಗಳಿಗೂ ತಲಪಿದಾಗ ಎಲ್ಲರೂ ಬೇಗ ಬೇಗನೆ ಹೊರಟರು. ತಚ್ಚೋಳಿ ಚಂದುವು ನಾಯಮ್ಮಾರರನ್ನು ಕಾಯುತ್ತ ಕುಳಿತ. ಅವನು ಹಾಗಿರಲು ಮೂಡುಮಲೆಯ ನಾಯಮ್ಮಾರರು, ಹನ್ನೆರಡು ಜನ ಹೆಂಗುಸರು ಅಲ್ಲಿಗೆ

ಬಂದರು. ಅವರನ್ನು ಕಣ್ಣಾರೆ ಕಂಡಾಗ ಚಂದುವು ರಸಬಾಳೆ ತೋಟ ಹೊಕ್ಕ. ಹಸಿ ಬಾಳೆದಿಂಡುಗಳನ್ನು ಕಡಿದ. ಅವನ್ನು ತಂದು ಅಂಗಳದಲ್ಲಿ ರಾಶಿ ಹಾಕಿದ (ಅನರ್ಥ ಸೂಚಕ). ಹೆಂಗಸರಿಗೆಂದ – ಹನ್ನೆರಡು ಮಂದಿ ಸ್ತ್ರೀಯರೇ! ತಚ್ಚೋಳಿ ಮನೆಯ ಸಣ್ಣಮಾವ ಯಾವುದೇ ಕಳಕ್ಕೆ ಹೋದರೂ ತೆಂಗಿನ ಸೀಳೋಲೆಯಲ್ಲಿಯೇ ಕುಳಿತು ಕೊಳ್ಳುತ್ತಾರೆ (ಇದು ರಣವ್ರತ). ಅದನ್ನು ಕೇಳಿ ಹೆದರಿದ ಹೆಂಗುಸರು ಅಲ್ಲಿಯೇ ಕುಳಿತರು.

ತಚ್ಚೋಳಿ ಚಂದುವಿಗೆ ಸಿಟ್ಟೇರುತ್ತಿತ್ತು. ಅಷ್ಟರಲ್ಲಿ ತಚ್ಚೋಳಿ ಒದೇನ ಮಾತುವನ್ನು ಎತ್ತಿ ಸೊಂಟವೇರಿಸಿಕೊಂಡು ಕಣ್ಣನ ಕೈಯನ್ನು ಹಿಡಿದುಕೊಂಡು ಸಭೆಗೆ ಬಂದ – ಮೂಡುಮಲೆಯ ನಾಯಮ್ಮಾರರೇ! ಈ ಮಕ್ಕಳು ಯಾರು? ಹೇಳಿ. ಅದನ್ನು ಕೇಳಿದ ನಾಯಮ್ಮಾರರು ಮಾತುವನ್ನು ಎತ್ತಿಕೊಳ್ಳ ಹೊರಟಾಗ ಒದೇನ ಮಗುವನ್ನು ಕೊಡಲಿಲ್ಲ. ಅವನು ಕಣ್ಣನಿಗೆಂದ – ಮೂಡುಮಲೆಯ ಕಣ್ಣಾ! ತುಂಬ ಜನ ಸೇರಿದ ಈ ಕೂಟದಲ್ಲಿ ನಿನ್ನ ಸಂಕಟವನ್ನೆಲ್ಲ ಹೇಳಿಕೊ ಮಗು! ಕಣ್ಣಾ ಅಳುತ್ತಾ ಎಲ್ಲಾ ವಿಷಯಗಳನ್ನೂ ತಿಳಿಸಿದಾಗ ನಾಯಮ್ಮಾರರು ತುಂಬಾ ಅತ್ತರು. ತಚ್ಚೋಳಿ ಚಂದುವು ಉರುಮಿಯನ್ನು ಝಳಪಿಸಿದ. ಒದೇನ ಅದನ್ನು ಒಂದು ಕಣ್ಣಲ್ಲಿ ನೋಡುತ್ತಲೆ ಇದ್ದ. ಮಾತುವನ್ನು ಎತ್ತಿ ಕೆಳಗಿರಿಸಿದ. ಚಂದುವಿನ ಕೈಯಿಂದ ಉರುಮಿಯನ್ನು ತೆಗೆದುಕೊಂಡ. ಹೆಂಗಸರ ಬಳಿ ಹೋಗಿ ನಿಂತು ಹೇಳಿದ– ಪಯ್ಯಂಪಳ್ಳಿ ಚಂದು (ಈತ ಒದೇನನ ಆತ್ಮೀಯ ಗೆಳೆಯ)! ಇನ್ನು ಮುಂದೆ ಯಾರೂ ಹೀಗೆ ಮಾಡಬಾರದು – ಎಂದು ಆ ಹನ್ನೆರಡು ಜನ ಹೆಂಗಸರನ್ನೂ ತುಂಡರಿಸಿ ಚೆಲ್ಲಿದ. (ತಪ್ಪು ಮಾಡಿದವರು ಸ್ತ್ರೀಯರೇ ಆಗಿದ್ದರೂ ಅವರಿಗೆ ಮರಣದಂಡನೆಯ ಶಿಕ್ಷೆ ನೀಡುವ ಅಧಿಕಾರ ಕೂಡ ಒದೇನನಿಗೆ ಇತ್ತು ಎಂದು ತಿಳಿಯಬೇಕು).

ನಾದಾಪುರಂನ ವಾಲಗ ಊದಿದಂತೆ
ಅದಾವ ಹುಡುಗಿ ಹಾಡುತ್ತಿರುವುದು!

ಏಳಿಮಲೆಯೊಡೆಯ ಕುಂಞಕಣ್ಣ ನಾಲ್‌ಪುರತ್ತ್ ಚಿರುದೈಕುಟ್ಟಿಯನ್ನು ಪುಡಮುರಿ ವಿವಾಹ ಮಾಡಿಕೊಂಡ. ಪುಡಮುರಿ ಮಾಡಿಕೊಂಡು ನಾಲ್ಕು ದಿವಸ ಅಲ್ಲಿ ಸೇರಿಕೊಂಡ ಅವನು ಅಲ್ಲಿಂದ ಏಳಿಮಲೆಗೆ ಮರಳಿದ. ಹಾಗೆ ತುಂಬ ದಿನ ಕಳೆಯಿತು. ಕುಂಞಕಣ್ಣ ರಾತ್ರೆಯ ಊಟಮಾಡಿ ಪಡುಕೋಣೆಗೆ ಹೋದ. ಅಲ್ಲಿ ರತ್ನಮಂಚದಲ್ಲಿ ಮಲಗಿ ನಿದ್ದೆಮಾಡಿದ. ಅವನಿಗೆ ಒಂದು ಹೊಂಗನಸು ಬಿತ್ತು. ಮೇಲಿನ ಕೈದೇರಿ ಕುಂಞಮಾದೆಯ ಕುರಿತ ಕನಸು. ಎಡಭಾಗದಲ್ಲಿ ಕುಳಿತು ಅವಳು ವೀಳ್ಯಮಡಿಸಿ ಕೊಟ್ಟ ಕನಸು. ಬಲಭಾಗದಲ್ಲಿ ನಿಂತು ವರಣ/ವರನ್‌ಮಾಲೆ ಹಾಕಿ ಎದೆಗೆ ಅವಳು ಒರಗಿದ ಕನಸು. ಹೀಗೆ ಸವಿಗನಸು ಕಾಣುತ್ತಿದ್ದ ಅವನಿಗೆ ಫಕ್ಕನೆ ಎಚ್ಚರವಾಯಿತು. ಎಚ್ಚರವಾಗಿ ನೋಡುತ್ತಾನೆ– ಹತ್ತಿರದಲ್ಲೆಲ್ಲೂ ಮಾದೆ ಇಲ್ಲ. ಅವಳನ್ನೆ ನೆನೆಯುತ್ತ ಕುಂಞಕಣ್ಣ ಅತ್ತುಬಿಟ್ಟ! ಏಳಿಮಲೆಗೊಡೆಯ ಕುಂಞಕಣ್ಣ ಮಧ್ಯರಾತ್ರೆ ಬೇಗ ಎದ್ದವನೇ ತಾಯ ಬಳಿಗೆ ಹೋದ. ತಾಯ ಬಳಿ ಹೋಗಿ ಎಂದ – ಏಳಿಮಲೆಗೊಡತಿ ನನ್ನ ಹೆತ್ತವ್ವ! ನಾನು ನಿದ್ದೆಯಲ್ಲಿ ಒಂದು ಸವಿಕನಸು ಕಂಡೆ. ಮೇಲಿನ ಕೈದೇರಿ ಮನೆಯ ಕುಂಞಮಾದೆಯ ಕುರಿತಾದ ಕನಸು. ಅಮ್ಮಾ, ನಾನು ಕೈದೇರಿ ಮನೆಗೆ ಹೋಗಬೇಕು. ಅವಳನ್ನು ನಾನು ಪುಡಮುರಿ ಮಾಡಿಕೊಳ್ಳುವೆ. ಅಂತಹ ಮಾತನ್ನು ಕೇಳಿದ ಹಿರಿಯವ್ವ ಹೇಳಿದಳು – ಏಳಿಮಲೆಗೊಡೆಯ ಕುಂಞಕಣ್ಣ! ಮೇಲಿನ ಕೈದೇರಿ ಕುಂಞಮಾದೆಯನ್ನು ನೀನೆಂದಿಗೂ ಪುಡಮುರಿ ಮಾಡಿಕೊಳ್ಳಬಾರದು. ಹಾಗೇನಾದರೂ ಮಾಡಿದೆಯಾದರೆ ದೊಡ್ಡ ಒಂದು ಅನರ್ಥ ನಿನಗೆ ಉಂಟಾದೀತು. ನಿನಗೆ ಅದೆಂದಿಗೂ ಯೋಗ್ಯವಾದುದಲ್ಲ ಕಣ್ಣ! ಅಂತಹ ಮಾತನ್ನು ಕೇಳಿದ ಕಣ್ಣನಿಗೆ ಸಿಟ್ಟೇರಿತು. ಅಮ್ಮನೆಂದ ಮಾತುಗಳು ಯಾವುದನ್ನೂ

ಅವನು ಕೇಳಲಿಲ್ಲ. ಅವನು ಪಡುಕೋಣೆಗೆ ಹೋದ. ಒಳ್ಳೆಯ ಬಟ್ಟೆ ಬರೆಗಳನ್ನು ಹಾಕಿಕೊಂಡು ಶೃಂಗಾರವಾದ. ನೂರೊಂದು ವರಹಗಳನ್ನು ನೆಯ್ದ ಮಾಲೆಯನ್ನು ತೆಗೆದುಕೊಂಡ. ಅದು ಚಿಕ್ಕಂದಿನಲ್ಲಿ ಅವನ ಅಮ್ಮ ಧರಿಸಿದ್ದ ಮಾಲೆ. ಅದನ್ನು ತೆಗೆದುಕೊಂಡು ಕಣ್ಣ ಹೊರಟುಹೋದ. ಹಾಗೆ ಹೋಗುತ್ತಿದ್ದಾಗ ಮೇಲಿನ ಕಳರಿಯಲ್ಲಿ ಪೊಯ್ತ್ ನಡೆಯುತ್ತಿತ್ತು. ಅದನ್ನು ನೋಡುತ್ತಿದ್ದ ಕುಂಞ್ಞಾಮ ಕಣ್ಣನನ್ನು ಪೊಯ್ತ್‌ನೋಡಲು ಕರೆದ. ಕಣ್ಣ ಪೊಯ್ತ್ ನೋಡಲು ಭಾಗವಹಿಸಲು ಅತ್ತ ಹೋದ.

ಅದೇ ಹೊತ್ತಿನಲ್ಲಿ ತಚ್ಚೋಳಿ ಒದೇನ ತನ್ನ ಸಹಚರ ಕಂಡಾಚ್ಚೇರಿ ಚಾಪ್ಪನನ್ನು ಕೂಡಿಕೊಂಡು ತಿರುಗಾಟಕ್ಕೆ ಹೋಗುತ್ತಿದ್ದವನು ಮೇಲಿನ ಕೈದೇರಿ ಮನೆಬಾಗಿಲ ಮುಂದಿನಿಂದ ಸಾಗುತ್ತಿದ್ದಾಗ ಕೈದೇರಿ ಮಾದೆ ತಾಡವಾಲೆ ಗ್ರಂಥಗಳ ಕಟ್ಟನ್ನು ತೆಗೆದು ರಾಮಾಯಣ ಕಥೆಯನ್ನು ಹಾಡುತ್ತಿದ್ದಳು. ಕಾಡುತೊರೆಯ ಬಳಿಯ ಹಾಡುಹಕ್ಕಿ ಕೂಗುವಂತೆ, ಪಂಚರಂಗಿ ಗಿಳಿ ಹಾಡುವಂತೆ ರಾಮಾಯಣ ಕಥೆಯನ್ನು ಹಾಡುತ್ತಿದ್ದಳು. ತಚ್ಚೋಳಿ ಒದೇನನು ಮುಂದಕ್ಕೆ ಇರಿಸಲಿದ್ದ ಕಾಲನ್ನು ಮೆಲ್ಲಗೆ ಹಿಂದಕ್ಕೆ ಎತ್ತಿಟ್ಟ. ಒದೇನ ಹೀಗೆಂದ – ಕಂಡಾಚ್ಚೇರಿಯ ಪ್ರಿಯಚಾಪ್ಪ! ಕಾಡುತೊರೆಯ ಬಳಿಯಲ್ಲಿ ಹಾಡುಹಕ್ಕಿಯಂತೆ, ಪಂಚರಂಗಿ ರಾಮಗಿಳಿಯ ಹಾಡಿನಂತೆ, ನಾದಾಪುರಂನ ವಾಲಗ ಊದಿದಂತೆ ಅದಾವ ಹುಡುಗಿ ಹಾಡುತ್ತಿರುವುದು? ಆ ಮಾತನ್ನು ಕೇಳಿದ ಚಾಪ್ಪನೆಂದ – ಅದು ಮೇಲಿನ ಕೈದೇರಿ ಕುಂಞಿಮಾದೆಯ ದನಿಯದು ಧನಿಗಳೆ! ಮೇಲಿನ ಕೈದೇರಿ ಕುಂಞಿಚಂದುವಿನ ತಂಗಿ ಚಿರುದೆ ಕುಟ್ಟಿಯವರ ಮಗಳು ಈಕೆ. ಚಾಪ್ಪನ ಮಾತನ್ನು ಕೇಳಿದ ಒದೇನ ಕೈದೇರಿ ಮನೆಯ ಮುಂದೆ ಹೋಗಿ ನಿಂತ. ಮಾದೆ ಒಂದು ಕಣ್ಣಲ್ಲಿ ಅವನನ್ನು ಕಂಡು ಚಾಚಿದ ಕಾಲನ್ನು ಒಳಗೆಳೆದುಕೊಂಡಳು. ಬೇಗ ಎದ್ದು ನಿಂತು ತಾಡವಾಲೆಯ ಗ್ರಂಥವನ್ನು ಮಡಚಿದಳು. ಆಚಾರಕ್ಕೆ ಅನುಸಾರವಾಗಿ ಎದ್ದು ನಿಂತುಕೊಂಡಳು. ಬಳಿಕ ಬೇಗ ಪಡುಕೋಣೆಯಲ್ಲಿ ಗ್ರಂಥದ ಕಟ್ಟನ್ನಿಟ್ಟು ಬರುವಾಗ ಹುಲ್ಲುಚಾಪೆಯನ್ನು ತಂದು ಬಾಗಿಲ ಬಳಿ ಹಾಸಿದಳು. ಬಳಿಕ ಹೀಗೆಂದಳು – ತಚ್ಚೋಳಿಯ ಪ್ರಿಯ ಒದೇನ! ಮೇಲಿನ ಕೈದೇರಿ ಮನೆಯ ನನ್ನ ಮಾವ ಗೇಣಿ ವಸೂಲಿಗಾಗಿ ಹೋಗಿದ್ದಾರೆ. ಆದುದರಿಂದ ನೀವು ಈ ಹುಲ್ಲುಚಾಪೆಯಲ್ಲಿ ಕುಳಿತುಕೊಳ್ಳ ಬೇಕು. ಹೀಗೆ ಹೇಳಿ ಅವಳು ಉಗ್ರಾಣ ಕೋಣೆಗೆ ಹೋದಳು. ಅಲ್ಲಿದ್ದ ಹಾಲಗಿಂಡಿಯನ್ನು ಚೆನ್ನಾಗಿ ಒರಸಿ ಕಾಸಿ ತಣಿಸಿದ್ದ ಹಾಲನ್ನು ಅದರಲ್ಲಿ ಹಾಕಿ ತಂದಿತ್ತಳು. ಒದೇನ ಹಾಲು ಕುಡಿದ. ಹಾಲುಕುಡಿದು ಅವನು ಅಲ್ಲಿರಲು ಮಾದೆ ಬೆಳ್ತಿಗೆ ಅನ್ನವನ್ನು ಬೇಗ ಸಿದ್ಧಪಡಿಸಿ ದಳು. ಸಿದ್ಧಪಡಿಸಿ ಬಾಗಿಲಬಳಿ ಬಂದು ಹೇಳಿದಳು – ತಚ್ಚೋಳಿ ಕಣ್ಮಣಿ ಬಾಲಒದೇನರೆ! ಊಟಮಾಡಿಕೊಳ್ಳಿ ಯಜಮಾನರೆ. ಹಾಗೆ ಹೇಳಿ ಮಾದೆ ಮಣೆಯಿರಿಸಿದಳು. ಎಲೆಹಾಸಿ

ದಳು. ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ಏತದ ಬಳಿಗೆ ಹೋಗಿ ಅಲ್ಲಿ ಬದಿಯಲ್ಲಿದ್ದ ಹೂಗಿಡಗಳ ಮೇಲೆ ನೀರು ಬೀಳುವಂತೆ ಕೈತೊಳೆದುಕೊಂಡರು. ಬಾಯಿಗೆ ನೀರು ಹಾಕಿ ಮುಕ್ಕುಳಿಸಿಕೊಂಡರು. ಆಗ ಮಾದೆ ರಸಬಾಳೆಯ ತುದಿ ಎಲೆಯನ್ನು ಕತ್ತರಿಸಿ ತಂದಳು. ಅದನ್ನು ಒರಸಿ, ಹುಲ್ಲುಚಾಪೆಯನ್ನು ಮಡಚಿ ಕುಳಿತುಕೊಳ್ಳಲು ಹಾಸಿ ಅದರ ಮುಂದೆ ಎಲೆ ಹಾಕಿದಳು. ಒದೇನನು ಬಂದು ಕುಳಿತ. ಮಾದೆ ತುಂಬೆಹೂವಿನಂಥ ಅನ್ನ ಬಡಿಸಿದಳು. ಬಾಳೆ, ತೊಂಡೆ, ಮಿಡಿಸೌತೆ, ಮಾವಿನ ಮಿಡಿ, ಶುಂಠಿ, ಎಳೆನಿಂಬೆ ಮುಂತಾದುವುಗಳಿಂದ ಸಿದ್ಧಪಡಿಸಿದ ಆರೇಳು ಬಗೆಯ ಪದಾರ್ಥ ಗಳನ್ನು ಬಡಿಸಿದಳು. ಕುಪ್ಪೆ ಸುವರ್ಣಗಡ್ಡೆಯ ಉಪ್ಕರಿ ಬಡಿಸಿದಳು. ಅರಸಿನ ನೀರಿನಂಥ ಕಾಸಿದ ತುಪ್ಪವನ್ನು ಮಳೆ ನೀರಿನಂತೆ ಎರೆದಳು. ಎಲ್ಲವನ್ನೂ ತಂದು ಪ್ರೀತಿಯಿಂದ ಬಡಿಸಿದಳು. ಚಾಪ್ಪನಿಗೂ ಹೊಟ್ಟೆತುಂಬ ಅನ್ನವನ್ನೂ ಮೊಸರನ್ನೂ ತಂದು ಬಡಿಸಿದಳು. ಇಬ್ಬರೂ ಚೆನ್ನಾಗಿ ಉಂಡರು. ಉಂಡು ಎದ್ದರು. ಎದ್ದುಹೋಗಿ ಏತದ ಬಳಿ ಸಾಗಿ ಕೈತೊಳೆದುಕೊಂಡರು. ಬಾಯಿ ಮುಕ್ಕುಳಿಸಿದರು. ಕೈಬಾಯಿ ಶುದ್ಧಗೊಳಿಸಿದ ಬಳಿಕ ಒಂದು ಸೀಳು ವೀಳ್ಯದೆಲೆಯನ್ನು ತಿಂದರು. ಬಳಿಕ ಬಾಗಿಲ ಬಳಿ ಹೋದರು. ಆಗ ಹೊತ್ತು ಮುಸ್ಸಂಜೆಯಾಗುತ್ತ ಬಂತು.

ಮೇಲಿನ ಕೈದೇರಿ ಮನೆಯ ಮಾದೆ ಪಡುಕೋಣೆಗೆ ಬಂದಳು. ಪಡುಕೋಣೆ ಗುಡಿಸಿ ಹಾಸಿಗೆ ಹಾಸಿದಳು. ಪಡುಕೋಣೆಯ ಮಂಚಕ್ಕೂ ಹಾಸು ಹಾಸಿದಳು. ಬಳಿಕ ಹೋಗಿ ಒದೇನನನ್ನು ಕರೆದಳು – ತಚ್ಚೋಳಿ ಒದೇನ! ಪಡುಕೋಣೆ ಗುಡಿಸಿ ಹಾಸಿಗೆ ಹಾಸಿದೆ. ಆ ಮಾತುಗಳನ್ನು ಕೇಳಿದ ಒದೇನ ಮುಗುಳ್ನಕ್ಕ. ಎದ್ದು ಪಡುಕೋಣೆಗೆ ಹೋದ. ಅಲ್ಲಿನ ಹೊಂಬೆತ್ತದ ಮಂಚದಲ್ಲಿ ಕುಳಿತ. ಅಷ್ಟರಲ್ಲಿ ಕೈದೇರಿ ಮನೆಯ ಮಾದೆಯೂ ಪಡುಕೋಣೆಗೆ ಬಂದಳು. ಅವರು ಅಲ್ಲಿ ಒಂದಾದರು. ಮರುದಿನ ಬೆಳಕು ಹರಿಯುತ್ತಿದ್ದಂತೆ ಕೈದೇರಿ ಮಾದೆ ಬೇಗ ಎದ್ದಳು. ಒದೇನನನ್ನು ಬೇಗ ಕಳುಹಿಸಿಕೊಟ್ಟಳು.

ಅವಳಿಂದ ಬೀಳ್ಕೊಂಡು ಹೊರಟು ಹೋಗಿ ಅರ್ಧ ದಾರಿಗೆ ತಲಪಿದಾಗ ಒದೇನ ಹೀಗೆಂದ – ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ಮೇಲಿನ ಕೈದೇರಿಯ ಮನೆಯಲ್ಲಿ ನನ್ನ ಚಕ್ರಸರ ಮರೆತುಬಂದೆ. ಪಡುಮನೆಯ ಮಂಚದ ಕೆಳಗೆ ಇರಿಸಿದ್ದೆ. ಅದಕ್ಕೆ ಕಂಡಾಚೇರಿ ಎಂದ – ನನ್ನ ಧನೀ, ನನ್ನ ಯಜಮಾನರೇ! ನೀವು ಚಕ್ರಸರವನ್ನು ತರುವುದಕ್ಕಾಗಿ ಈಗ ಹೋಗುವುದು ಬೇಡ. ಇನ್ನೊಮ್ಮೆ ಹೀಗೆಯೇ ಅಲ್ಲಿಗೆ ಹೋದಾಗ ತರಬಹುದು. ಹಾಗೆ ಅವರು ಮುಂದೆ ನಡೆದರು. ಅವರು ತಚ್ಚೋಳಿ ಮೇಪಕ್ಕೆ ತಲಪಿದರು.

ಇತ್ತ ಕುಂಞಿಕಣ್ಣನು ಕಳರಿಪೊಯ್ತ್ ಮುಗಿಸಿ ಕೈದೇರಿ ಮನೆಗೆ ಹೋದ. ಅವನು ಅಲ್ಲಿ ತಲಪುವಾಗ ಸಂಜೆಯ ದೀಪವಿರಿಸಿ ಅದನ್ನು ಮರಳಿ ಒಯ್ದಾಗಿತ್ತು. ಕತ್ತಲು ದಟ್ಟವಾಗಿತ್ತು. ಮಾದೆ ಪಡುಕೋಣೆಗೆ ಹೋಗಿ ಬಾಗಿಲು ಮುಚ್ಚಿ ಚಿಲಕ ಹಾಕಿದ್ದಳು. ಬಾಗಿಲುಗಳೆಲ್ಲಾ ಮುಚ್ಚಿದ್ದುವು. ಅದನ್ನು ಕಂಡು ಕಣ್ಣ ಮನೆಯ ನಾಲ್ಕು ಕಡೆಗೂ ನಡೆದಾಡಿದ. ನಾಲ್ಕು ಕಡೆಯ ಬಾಗಿಲುಗಳೂ ಮುಚ್ಚಿವೆ. ಎಲ್ಲ ಬಾಗಿಲುಗಳೂ ಮುಚ್ಚಿರುವುದನ್ನು ಕಂಡು ಮಾಡನ್ನೇರಿದ. ಮಾಡನ್ನೇರಿ ಮಾಡಿಗೆ ತೂತುಕೊರೆದ. ಪಡುಕೋಣೆಯ ಹಾಸುಹಲಗೆಯನ್ನು ಎಬ್ಬಿಸಿ ಕೆಳಗಿಳಿದ – ಮೇಲಿನ ಕೈದೇರಿ ಮನೆಯ ಕುಂಞಿಮಾದೆ! ಬೇಗ ಏಳು, ನನ್ನ ಕುಂಞಿಮಾದೆ. ಹಾಗೆ ಹೇಳುತ್ತಾ ಅವಳ ಬಳಿ ಕುಳಿತ. ಮತ್ತೂ ಅವಳನ್ನು ಕರೆದ, ಮಾದೆಗೆ ಎಚ್ಚರವಾಯಿತು. ಅವಳೆಂದಳು – ಈ ಸಮರಾತ್ರೆ ಹೊತ್ತಿನಲ್ಲಿ ನನ್ನ ಪಡುಕೋಣೆಗೆ ಬಂದವರು ಯಾರು? ನನ್ನ ಮಂಚದ ಮೇಲೆ ಕುಳಿತಿರುವವರು ಯಾರು? ಅದಕ್ಕೆ ಕಣ್ಣನೆಂದ – ಮೇಲಿನ ಕೈದೇರಿ ಮಾದೆಕುಂಞಿ! ನಾನು ಕಣೆ, ನಾನು ಕಣೆ ನನ್ನ ಮಾದೆ! ಏಳಿಮಲೆಗೊಡೆಯ ಕುಂಞಿಕಣ್ಣ! ಅವನು ಮುಂದುವರಿಸಿ ಹೇಳಿದ – ಮೇಲಿನ ಕೈದೇರಿ ಕುಂಞಿಮಾದೆ! ವೀಳ್ಯದೆಲೆ ಮಡಿಸಿಕೊಡು ಕುಂಞಿಮಾದೆ! ನಿನ್ನ ಕುರಿತು ಸವಿಗನಸು ಕಂಡು ಬಂದವನು ನಾನು. ನನ್ನನ್ನು ಹಿಂದೆ ಕಳಿಸಬೇಡ ಕುಂಞಿಮಾದೆ. ಅಂತಹ ಮಾತುಗಳನ್ನು ಕೇಳಿದ ಮಾದೆ ಹೇಳಿದಳು – ಏಳಿಮಲೆಗೊಡೆಯ ಕುಂಞಿಕಣ್ಣ! ತಚ್ಚೋಳಿ ಮೇಪದ ಒದೇನ ನನ್ನ ಬಂಧು. ಅವರಿಗೆ ನಾನು ವೀಳ್ಯದೆಲೆ ಸುರುಟಿ ಕೊಟ್ಟೆ, ಹಾಗಾಗಿ ನಿನಗೆ ವೀಳ್ಯ ಸುರುಟಿ ಕೊಡಲಾರೆ. ಅದನ್ನು ಕೇಳಿದ ಕುಂಞಿಕಣ್ಣ ತನ್ನಲ್ಲಿದ್ದ ನೂರೊಂದು ವರಹಗಳನ್ನು ನೆಯ್ದ ಮಾಲೆಯನ್ನು ತೆಗೆದುಕೊಟ್ಟ. ಅದನ್ನು ಕಂಡ ಮಾದೆ ಮಾಲೆಯನ್ನು ಬೇಗ ತೆಗೆದುಕೊಂಡಳು. ಮಾಲೆಯನ್ನು ನೋಡಿದಳು. ಅದನ್ನು ಹಾಸಿಗೆಯ ಕೆಳಗೆ ಇಟ್ಟುಕೊಂಡಳು. ಕಣ್ಣನಿಗೆ ವೀಳ್ಯದೆಲೆ ಸುರುಟಿಕೊಟ್ಟಳು. ಇಬ್ಬರೂ ಜತೆಗೆ ಮಲಗಿದರು. ಮಲಗಿ ಒಂದಾದರು. ಹಾಗೆ ನಾಲ್ಕು ರಾತ್ರೆ ಅವಳೊಂದಿಗಿದ್ದು ಕಳುಹಿಸಿಕೊಂಡ ಕಣ್ಣ ಹೊರಟುಹೋದ.

ತುಂಬ ದಿನಗಳು ಸಂದವು. ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ಒಂದು ದಿನ ಮೇಪದಿಂದ ತಿರುಗಾಟಕ್ಕಾಗಿ ಹೊರಟರು. ಹಾಗೆ ನಡೆಯುತ್ತ ನಡೆಯುತ್ತ ಅವರು ಕೈದೇರಿ ಮನೆಗೆ ತಲಪಿದರು. ಕೈದೇರಿ ಮಾದೆ ಬಾಗಿಲಲ್ಲೆ ಕುಳಿತಿರುವುದನ್ನು ಅವರು ಕಂಡರು. ಒದೇನನನ್ನು ಕಂಡ ಮಾದೆಯೂ ಫಕ್ಕನೆ ಎದ್ದು ನಿಂತಳು. ಆಚಾರಾನುಸಾರ ನಿಂತುಕೊಂಡ ಬಳಿಕ ಗಿಂಡಿಯಲ್ಲಿ ನೀರು ತಂದು ಒದೇನನಿಗೆ ಕೊಟ್ಟಳು. ಚಾಪನಿಗೂ ಕೊಟ್ಟಳು. ಒದೇನ ಕೈಕಾಲುಮುಖ ತೊಳೆದುಕೊಂಡ. ಪಡುಕೋಣೆಗೆ ಹೋದ. ಪಡುಕೋಣೆಯ ಹೊಂಬೆತ್ತದ ಮಂಚದಲ್ಲಿ ಕುಳಿತುಕೊಂಡ. ಕೈದೇರಿ ಮಾದೆ

ಹಾಲಿನ ಗಿಂಡಿಯಲ್ಲಿ ಹಾಲು ತಂದಿತ್ತಳು. ಒದೇನ ಹಾಲು ಕುಡಿದು ಅಲ್ಲಿ ಮಲಗಿಕೊಂಡ. ಒದೇನ ಮಾದೆಗೆಂದ – ಮೇಲಿನ ಕೈದೇರಿ ಮನೆಯ ಮಾದೆ! ನಾನು ಇಲ್ಲಿಂದ ಹೋದಾಗ ಹಾಸಿಗೆಯ ಅಡಿಯಲ್ಲಿ ನನ್ನ ಚಕ್ರಸರವನ್ನು ಇರಿಸಿದ್ದೆ. ಆಮೇಲೆ ತೆಗೆದು ಕೊಳ್ಳಲು ಮರೆತೆ ಎನ್ನುತ್ತಾ ಹಾಸಿಗೆಯ ಅಡಿಯಿಂದ ತನ್ನ ಚಕ್ರಸರವನ್ನು ಹೊರತೆಗೆದ. ಹಾಗೆ ಹೊರತೆಗೆಯುವಾಗ ಹಾಸಿಗೆಯ ಅಡಿಯಲ್ಲಿದ್ದ ವರಹದ ಮಾಲೆಯನ್ನು ಕಂಡ. ಆ ಮಾಲೆಯನ್ನು ಕೈಗೆತ್ತಿಕೊಂಡು ನೋಡುತ್ತ ಮಲಗಿಕೊಂಡಿರಲು ಮಾಡು ತೂತಾಗಿರು ವುದನ್ನೂ ಹಾಸುಹಲಗೆ ಹಾರು ಹೊಡೆದಿರುವುದನ್ನೂ ಕಂಡ. ಇದನ್ನೆಲ್ಲ ಕಂಡ ಒದೇನನಿಗೆ ಸಿಟ್ಟೇರಿತು. ಸಿಟ್ಟಿನಿಂದಲೇ ಎಂದ – ಮೇಲಿನ ಕೈದೇರಿ ಮನೆಯ ಮಾದೆ! ನಾನು ಇಲ್ಲಿಂದ ಹೋದಮೇಲೆ ಇಲ್ಲಿಗೆ ಬಂದವನು ಯಾರು? ನಿಜವನ್ನು ಈಗಲೇ ಹೇಳಬೇಕು. ಆ ಮಾತುಗಳನ್ನು ಕೇಳಿ ಮಾದೆ ಎಂದಳು – ತಚ್ಚೋಳಿ ಮೇಪ್ಪದ ನನ್ನ ಗಂಡ! ನೀವು ಇಲ್ಲಿಂದ ಹೋದಮೇಲೆ ಇಲ್ಲಿಗೆ ಯಾರೂ ಬಂದಿಲ್ಲ. ಆ ಮಾತುಗಳನ್ನು ಕೇಳಿ ಒದೇನ ಹೊರಗಿಳಿದ. ಬಲಿತ ಮಾದೆರಿಯ ಬಳ್ಳಿಯೊಂದನ್ನು ಕತ್ತರಿಸಿ ಅದರಿಂದ ಒಂದು ಕೋಲನ್ನು ತಯಾರಿಸಿದ. ಪುನಃ ಪಡುಕೋಣೆಗೆ ಹೋಗಿ ಎಂದ– ಮೇಲಿನ ಕೈದೇರಿ ಮನೆಯ ಮಾದೆ! ಹಾಸಿಗೆಯ ಅಡಿಯಲ್ಲಿ ನೂರೊಂದು ವರಹ ಪೋಣಿಸಿದ ಮಾಲೆಯನ್ನು ನಾನು ನೋಡಿದ್ದೇನೆ. ನಿನಗೆ ಆ ಮಾಲೆಯನ್ನು ಕೊಟ್ಟದ್ದು ಯಾರು? ಎನ್ನುತ್ತ ಕೋಲೆತ್ತಿಕೊಂಡು ಹತ್ತಿರ ಹೋಗಲು ಮಾದೆ ಹೇಳಿದಳು – ತಚ್ಚೋಳಿ ಮೇಪ್ಪದ ನನ್ನ ಗಂಡ ! ನೀವು ಇಲ್ಲಿಂದ ಹೋದಮೇಲೆ ನಾನು ಪಡುಕೋಣೆಯಲ್ಲಿದ್ದ ಹೊತ್ತಲ್ಲಿ ಏಳಿಮಲೆಗೊಡೆಯ ಕುಂಞಿಕಣ್ಣ ಮಾಡಿಗೆ ತೂತು ಕೊರೆದು ಹಾಸು ಹಲಗೆ ಯನ್ನೆಬ್ಬಿಸಿ ಪಡುಕೋಣೆಗೆ ಇಳಿದ. ಬಳಿಕ ನಡೆದ ಮಾತುಕತೆಯನ್ನೂ ಘಟನೆಗಳನ್ನೂ ಹೇಳುತ್ತ – ಮಾದೆ ತಾನು ವೀಳ್ಯದೆಲೆ ಸುರುಟಿ ಕೊಡುವುದಿಲ್ಲ ಎಂದಾಗ ತನ್ನ ಉರುಮಿಯನ್ನು ಹೊರಗೆಳೆದು ತನ್ನನ್ನು ಕೊಲ್ಲಲು ಬಂದನೆಂದೂ ನೂರೊಂದು ವರಹದ ಮಾಲೆಯನ್ನು ಹಾಸಿಗೆಯ ಕೆಳಗಿರಿಸಿದನೆಂದೂ ಹೇಳಿದಳು. ಒದೇನ ಸಿಟ್ಟು ಗೊಂಡು ಮಾದೆರಿಯ ಕೋಲಿನಿಂದ ಮಾದೆಯ ಅಡಿಯಿಂದ ಮುಡಿಯವರೆಗೂ ಹೊಡೆದು ಬಿಟ್ಟ. ಅವಳು ನಡನಡುಗಿ ಜೋಲಾಡುತ್ತ ಬಿದ್ದುಬಿಟ್ಟಳು. ಬಳಿಕ ಒದೇನನೂ ಚಾಪ್ಪನೂ ಬಾಗಿಲು ದಾಟಿ ಹೊರನಡೆದರು. ಹಾಗೆ ನಡೆಯುತ್ತ ನಾಲ್‌ಪುರಕ್ಕೆ ತಲಪಿದರು. ನಾಲ್‌ಪುರತ್ತ್ ಚಿರುದೈಕುಟ್ಟಿ ಪಡುಕೋಣೆಯಲ್ಲಿ ನಿದ್ರಿಸುತ್ತಿರಲು ಒದೇನನೂ ಚಾಪ್ಪನೂ ಅದನ್ನು ಕಂಡರು. ಇಬ್ಬರೂ ಸೇರಿ ಮನೆಯ ನಾಲ್ಕು ಕಡೆಯೂ ಸುತ್ತಾಡಿದರು. ಸುತ್ತಾಡುತ್ತ ಮನೆಯ ನಾಲ್ಕು ಕಡೆಯ ಬಾಗಿಲುಗಳೂ ಹಾಕಿರುವುದನ್ನು ಕಂಡರು. ಒದೇನ ಮನೆಯ ಮಾಡನ್ನೇರಿದ. ಮಾಡನ್ನು ಕಡಿದು ಮುರಿದು ಹಾಕಿದ. ಹಾಸು

ಹಲಗೆಯನ್ನು ಕಿತ್ತೆಸೆದ. ನೇರವಾಗಿ ಪಡುಕೋಣೆಗೆ ಇಳಿದ. ಅಲ್ಲಿನ ಹೊಂಬೆತ್ತದ ಮಂಚದಲ್ಲಿ ಹೋಗಿ ಕುಳಿತ. ಮಂಚದಲ್ಲಿ ಕುಳಿತುಕೊಂಡು ಹೀಗೆಂದ – ನಾಲ್‌ಪುರ ಮನೆಯ ಚಿರುದೆಕುಟ್ಟಿ! ಬೇಗ ಎದ್ದೇಳು. ಆಕೆಗೆ ಎಚ್ಚರವಾಗದಿರಲು ಅವಳನ್ನು ತಟ್ಟಿಕರೆದ. ಚಿರುದೆ ಕೂಡಲೆ ಎದ್ದಳು. ಅವಳೆಂದಳು – ಯಾರದು ಯಾರದು ಕರೆದವರು? ಸಮರಾತ್ರೆಯ ಈ ಹೊತ್ತಲ್ಲಿ ನನ್ನ ಪಡುಕೋಣೆಗೆ ಬಂದವರು ಯಾರು? ಆಗ ಒದೇನನೆಂದ – ನಾಲ್‌ಪುರ ಮನೆಯ ಚಿರುದೆಕುಟ್ಟಿ! ನಾನಲ್ವೆ ನಾನಲ್ವೆ ಚಿರುದೆಕುಟ್ಟಿ? ಏಳಿಮಲೆಗೊಡೆಯ ಕುಂಞಿಕಣ್ಣ. ನೂರೊಂದು ವರಹದ ಮಾಲೆಯನ್ನು ತಂದಿದ್ದೇನೆ. ಆ ಮಾತುಗಳನ್ನು ಕೇಳಿದ ಚಿರುದೆ ಎಂದಳು – ಏಳಿಮಲೆಗೊಡೆಯ ನನ್ನ ಗಂಡ! ನಾಳೆ ಬೆಳಕು ಹರಿದ ಕೂಡಲೆ ಮಾಲೆಯನ್ನು ನೋಡುವೆ. ಹೀಗೆ ಹೇಳಿ ಅವಳು ಮಾಲೆಯನ್ನು ತೆಗೆದುಕೊಂಡು ಹಾಸಿಗೆಯ ಅಡಿಯಲ್ಲಿಟ್ಟುಕೊಂಡಳು. ಚಿರುದೆ ವೀಳ್ಯದೆಲೆ ಸುರುಟಿ ಕೊಟ್ಟಳು. ಒದೇನ ಅದನ್ನು ತೆಗೆದುಕೊಂಡು ಸವಿದ. ಬಳಿಕ ಪಡುಕೋಣೆಯ ಹೊಂಬೆತ್ತದ ಮಂಚದಲ್ಲಿ ಮಲಗಿಕೊಂಡ. ನಟ್ಟ ನಡುರಾತ್ರೆಯ ಹೊತ್ತು ಜನ ಯಾರೆಂದು ತಿಳಿಯದೆ ಚಿರುದೆ ಒದೇನನ ಕಾಲೊತ್ತಿದಳು. ಬಳಿಕ ಅವರು ಜತೆಯಾದರು. ಮುಂಜಾನೆ ಬೆಳ್ಳಂಬೆಳಕಾಗಲು ಒದೇನ ಕಳುಹಿಸಿಕೊಂಡು ಹೊರಟುಹೋದ. ಕಂಡಾಚ್ಚೇರಿ ಚಾಪ್ಪ ನನ್ನೂ ಜತೆಗೂಡಿಸಿಕೊಂಡು ತಚ್ಚೋಳಿ ಮೇಪ್ಪಕ್ಕೆ ಹೋದ.

ದಿನಗಳುರುಳಿದುವು. ಚಿರುದೆಗೆ ಮುಟ್ಟು ನಿಂತಿತು. ಬಸುರಾಯಿತು. ನಾಲ್ಕೈದು ತಿಂಗಳಾದುವು. ನಾಲ್‌ಪುರತ್ತ್ ನಂಬಿಯಾರ್ ಸೀಮಂತಕ್ಕೆ ಬೇಕಾದ ಮುಹೂರ್ತ ನಿಶ್ಚೈಸಲು ವಾರಿಯರನ್ನೂ ಕಣಿಶನನ್ನೂ ಬರಮಾಡಿಸಿದ. ಒಳಗಿನ 'ಪ್ರಶ್ನೆ'ಯನ್ನು ವಾರಿಯರೂ ಹೊರಗಿನ 'ಪ್ರಶ್ನೆ'ಯನ್ನೂ ಕಣಿಶನೂ ಇಟ್ಟುನೋಡಿದರು. ಮುಹೂರ್ತ ನಿಶ್ಚಯವಾಯಿತು. ಅವರಿಬ್ಬರಿಗೂ ನಂಬಿಯಾರ್ ಸಾಕಷ್ಟು ಹಣ ಕೊಟ್ಟು ಕಳುಹಿಸಿದ. ನಂಬಿಯಾರ್ ಏಳಿಮಲೆ ಕಣ್ಣನಿಗೆ ಓಲೆ ಬರೆಯಿಸಿದರು – ಏಳಿಮಲೆಗೊಡೆಯ ಕುಂಞಿಕಣ್ಣ! ನಾಲ್‌ಪುರದ ಚಿರುದೆಯ ಸೀಮಂತ ಮುಹೂರ್ತ ನಿಶ್ಚೈಸಲಾಗಿದೆ. ಮುಂದಿನ ಗುರುವಾರದ ಒಳ್ಳೆಯ ದಿನ ಸೀಮಂತ. ಹೀಗೆ ಓಲೆ ಬರೆಯಿಸಿ ನಂಬಿಯಾರ ನಾಯಮ್ಮಾರನೊಬ್ಬನ ಕೈಗೆ ಕೊಟ್ಟು ಕುಂಞಿಕಣ್ಣನಿಗೆ ಕಳುಹಿಸಿದ. ಓಲೆಯ ನಾಯಮ್ಮಾರ ಏಳಿಮಲೆಗೆ ತಲಪಿದಾಗ ಕುಂಞಿಕಣ್ಣ ಬಾಗಿಲಲ್ಲೆ ಕುಳಿತಿದ್ದ. ನಾಯಮ್ಮಾರನನ್ನು ಕಂಡ ಕುಂಞಿಕಣ್ಣ ಕೇಳಿದ – ನಾಲ್‌ಪುರತ್ತ್ ನಾಯಮ್ಮಾರನೇ! ಇತ್ತ ಏನು ಕಾರ್ಯ ನಿಮಿತ್ತ ಬಂದೆ? ನಾಯಮ್ಮಾರ ಓಲೆ ತೆಗೆದುಕೊಟ್ಟ. ಕುಂಞಿಕಣ್ಣ ಓಲೆಯನ್ನು ತೆಗೆದುಕೊಂಡು ಓದಿದ. ಬಳಿಕ ಮನದಲ್ಲೇ ನೆನೆದ – ನಾನು ನಾಲ್‌ಪುರತ್ತ್ ಮನೆಗೆ ಹೋಗಿ ಒಂದು ವರ್ಷದ ಮೇಲಾಯಿತು. ಚಿರುದೆ ಬಸುರಿಯಾಗಿರುವುದು ನನ್ನಿಂದಲ್ಲ. ಆ ಗರ್ಭ

ನನ್ನದಲ್ಲ. ಹೀಗೆ ನೆನೆದು ಕುಂಞಿಕಣ್ಣ ಒಂದು ಮಾರೋಲೆ ಬರೆದ. ಬರೆದು ನಾಲ್‌ಪುರದ ನಾಯಮ್ಮಾರನ ಕೈಗೆ ಕೊಟ್ಟು ಕಳುಹಿಸಿದ. ನಾಲ್‌ಪುರಕ್ಕೆ ತಲಪಿದ ನಾಯಮ್ಮಾರನ ಕೈಯಿಂದ ನಂಬ್ಯಾರ್ ಮರುಓಲೆಯನ್ನು ಪಡೆದು ಅದನ್ನು ಓದಿದ. ಅವನು ಓಲೆಯನ್ನು ಓದಿ ದಂಗಾಗಿ ಹೋದ. ಸ್ವಲ್ಪ ಹೊತ್ತಿನಲ್ಲೇ ಚಿರುದೆಯನ್ನು ಕರೆಸಿದ. ಚಿರುದೆ ಕೂಡಲೇ ಬಂದು ನಂಬ್ಯಾರನ ಮುಂದೆ ನಿಂತುಕೊಂಡಳು. ಅವಳನ್ನು ಕಂಡ ನಂಬ್ಯಾರನೆಂದ – ನಾಲ್‌ಪುರತ್ತ್ ಮನೆಯ ಚಿರುದೆಕುಟ್ಟಿ! ಏಳಿಮಲೆಯ ಕಣ್ಣ ಮಾರೋಲೆ ಕಳುಹಿಸಿದ್ದಾನೆ. ಹಾಗೆ ಹೇಳಿ ಓಲೆಯನ್ನು ಅವಳಿಗೆ ಕೊಟ್ಟ. ಚಿರುದೆ ಓಲೆಯನ್ನು ಓದಿಕೊಂಡು ತುಂಬಾ ಅತ್ತುಬಿಟ್ಟಳು. ಅದನ್ನು ಕಂಡು ನಂಬ್ಯಾರ್ ಕೇಳಿದ – ನಾಲ್‌ಪುರತ್ತ್ ಮನೆಯ ಚಿರುದೆ! ಯಾಕೆ ಅಳುತ್ತಿದ್ದಿ? ಆ ಮಾತು ಕೇಳಿದ ಚಿರುದೆ ಕಂಗಾಲಾದಳು. ಅವಳೆಂದಳು – ನಾಲ್‌ಪುರಂನ ಮನೆಯ ದೊಡ್ಡಮಾವ! ನಾನು ಮಲಗಿನಿದ್ರಿಸುತ್ತಿದ್ದೆ. ಆಗ ಏಳಿಮಲೆ ಯೊಡೆಯ ನನ್ನ ಗಂಡ ಬಂದು ನೂರೊಂದು ವರಹದ ಮಾಲೆಯನ್ನು ತೆಗೆದುಕೊಂಡು ನನ್ನ ಪಡುಕೋಣೆಗೆ ಬಂದಿದ್ದ. ಹೀಗೆ ಹೇಳಿ ಚಿರುದೆ ಹೋಗಿ ಆ ಮಾಲೆಯನ್ನು ತಂದು ನಂಬ್ಯಾರನಿಗೆ ತೋರಿಸಿದಳು. ಅದನ್ನು ಕಂಡ ನಂಬ್ಯಾರನ ಮುಖ ಅರಳಿತು. ಕೂಡಲೆ ನೀಲಕಪ್ಪು ಬಣ್ಣದ ತಾಳೆಯೋಲೆ ತೆಗೆದುಕೊಂಡು ಒಂದು ಓಲೆ ಬರೆದ. ಆ ಓಲೆಯನ್ನು ಪುನಃ ನಾಯಮ್ಮಾರರ ಕೈಯಲ್ಲಿ ಕೊಟ್ಟು ಕಳುಹಿಸಿದ. ಅವರು ವೇಗವಾಗಿ ಹೋಗಿ ಏಳಿಮಲೆಗೆ ತಲಪಿದರು. ಆಗ ಕುಂಞಿಕಣ್ಣ ಬಾಗಿಲಲ್ಲೆ ಕುಳಿತಿದ್ದ. ನಾಯಮ್ಮಾರ ರನ್ನು ಕಣ್ಣಾರೆ ಕಂಡ ಕುಂಞಿಕಣ್ಣ ಕೇಳಿದ – ನಾಲ್‌ಪುರದ ನಾಯಮ್ಮಾರರೇ! ಏನು ಕಾರ್ಯ ನಿಮಿತ್ತ ಇತ್ತ ಬಂದಿರಿ? ನಾಯಮ್ಮಾರರು ಓಲೆ ತೆಗೆದುಕೊಟ್ಟರು. ಓಲೆಯನ್ನು ತೆಗೆದುಕೊಂಡ ಕುಂಞಿಕಣ್ಣ ಅದರ ವಾಚಕಗಳನ್ನು ಓದಿದ. ಓದಿಕೊಂಡು ಮನಸ್ಸಲ್ಲೆ ಲೆಕ್ಕಹಾಕಿದ– ತಚ್ಚೋಳಿ ಒದೇನ ಮಾಡಿದ ವಂಚನೆಯಿದು. ನೂರೊಂದು ವರಹ ಕೋದಮಾಲೆಯನ್ನು ಕೈದೇರಿ ಮಾದೆಗೆ ನಾನು ಕೊಟ್ಟಿದ್ದೆ. ಅದನ್ನೇ ನನ್ನ ಹೆಂಡತಿ ಚಿರುದೆಗೆ ಒದೇನ ಕೊಟ್ಟಿದ್ದಾನೆ. ಚಿರುದೆಗೆ ಒದೇನನದೇ ಗಬ್ಬ. ನನ್ನ ಅಮ್ಮ ಹೇಳಿದ ಮಾತು ನನಗೆ ಸರಿಯಾಗಿ ಅನುಭವಕ್ಕೆ ಬಂತು. ಅಯ್ಯೋ ದೇವರೇ ಭಗವಂತ! ಒದೇನನ ಹೆಣ್ಣಿನ ಬಳಿ ನಾನು ಹೋದುದಕ್ಕೆ ಅವನು ನನ್ನ ಹೆಂಡತಿಯನ್ನು ಕೊಂಡು ಹೋದ. ಹೀಗೆ ನೆನೆದು ಕಣ್ಣ ಅತ್ತು ಬಿಟ್ಟ.

ನಾಲ್‌ಪುರತ್ತ್ ಮನೆಯ ಸುದ್ದಿಯೆಲ್ಲ ಒದೇನನಿಗೆ ಒಂಟಿ ಕಿವಿಯ ಮೂಲಕ ಬೀಳುತ್ತಿತ್ತು. ಸೀಮಂತಕ್ಕೆ ಬೇಕಾದ ಹಣವನ್ನು ತೆಗೆದುಕೊಂಡ ಒದೇನ ಕಂಡಾಚ್ಚೇರಿ ಚಾಪ್ಪನನ್ನು ಕೂಡಿಕೊಂಡು ಅಲ್ಲಿಗೆ ಹೋದ. ನಾಲ್‌ಪುರತ್ತ್ ಮನೆಗೆ ತಲಪುವಾಗ ಚಿರುದೆಯ ಮಾವ ನಂಬ್ಯಾರ್ ಬಾಗಿಲಲ್ಲೆ ಕುಳಿತಿದ್ದ. ಒಂದೇನನನ್ನು ಕಣ್ಣಾರೆ ಕಂಡ

ನಂಬ್ಯಾರ್ ಒದೇನನಲ್ಲಿ ಕೇಳಿದ – ತಚ್ಚೋಳಿ ಕಣ್ಮಣಿ ಬಾಲ ಒದೇನ! ನೀನು ಏನಪ್ಪಾ ಈ ಕಡೆ ಬಂದುಬಿಟ್ಟೆ? ಆಗ ಒದೇನ ಉತ್ತರಿಸಿದ – ನಾಲ್‌ಪುರದ ನಂಬ್ಯಾರರೇ, ನಾಲ್‌ಪುರತ್ತ್ ಮನೆಯ ಚಿರುದೆಗೆ ಸೀಮಂತದ ದಿನ ನಿಶ್ಚಯವಾಗಿದೆಯಂತೆ. ನಂಬ್ಯಾರ್ ಆ ಮಾತನ್ನು ಒಂಟಿ ಕಿವಿಯಲ್ಲೆ ಕೇಳಿದ. ಒದೇನ ಮುಂದುವರಿಸಿದ – ಅದಕ್ಕಾಗಿ ಬಂದೆ ನಾನು. ನಾಲ್‌ಪುರ ಮನೆಯ ಚಿರುದೆಗೆ ನನ್ನಿಂದ ಬಸುರಾಗಿದೆ. ನೂರೊಂದು ವರಹ ಕೋದಮಾಲೆಯನ್ನು ನಾನು ಅವಳಿಗೆ ಕೊಟ್ಟೆ. ಏಳಿಮಲೆಗೊಡೆಯ ಕುಂಞಿಕಣ್ಣ ನನಗೆ ವಂಚನೆ ಮಾಡಿದ್ದ. ಮೇಲಿನ ಕೈದೇರಿ ಮನೆಯ ಮಾದೆಯನ್ನು ನಾನು ಸಂಬಂಧ ಮಾಡಿಕೊಂಡಿದ್ದೆ. ಕುಂಞಿಕಣ್ಣ ನನಗೆ ತಿಳಿಯದಂತೆ ನೂರೊಂದು ವರಹ ಕೋದಮಾಲೆಯನ್ನು ಮಾದೆಗೆ ತಂದುಕೊಟ್ಟಿದ್ದ. ಆ ಮಾಲೆಯನ್ನು ನಾನು ತೆಗೆದುಕೊಂಡು ನಾಲ್‌ಪುರತ್ತ್ ಚಿರುದೆಯ ಪಡುಕೋಣೆಯನ್ನು ಸೇರಿ ಮಲಗಿದ್ದ ಚಿರುದೆಯನ್ನು ಎಬ್ಬಿಸಿದೆ. ನಾನು ಏಳಿಮಲೆಗೊಡೆಯ ಕುಂಞಿಕಣ್ಣನೇ ಎಂದು ಆ ನಡುರಾತ್ರಿ ಚಿರುದೆಗೆ ಹೇಳಿದೆ. ಮಾಲೆಯನ್ನು ತೆಗೆದು ಅವಳಿಗೆ ಕೊಟ್ಟೆ. ಮುಂಜಾನೆ ಬೆಳಕು ಹರಿಯುವ ಹೊತ್ತಿಗೆ ನಾಲ್‌ಪುರತ್ತ್ ಮನೆಯ ಚಿರುದೆಗೆ ಗೊತ್ತಾಗದಂತೆ ನಾನು ಅಲ್ಲಿಂದ ಹೊರಟು ಬಿಟ್ಟೆ, ನಂಬ್ಯಾರರೆ. ಹೀಗೆ ಎಲ್ಲ ವಿಷಯಗಳನ್ನು ನಂಬ್ಯಾರ್‌ಗೆ ತಿಳಿಸಿ ಒದೇನ ಅಲ್ಲಿಯೇ ಕುಳಿತುಕೊಂಡ. ನಾಲ್‌ಪುರತ್ತ್ ನಂಬ್ಯಾರನು ಸೀಮಂತದ ದಿವಸ ಸೀಮಂತದ ಮುಹೂರ್ತ ಕಳೆಯುತ್ತಿದ್ದ ಹಾಗೆಯೇ ತಾನು ಬರಹೇಳಿದವರನ್ನೆಲ್ಲ ಮಾತನಾಡಿಸಿ ಅವರಿಗೆ ಬೇಕುಬೇಕಾದ ಉಡುಗೊರೆಗಳನ್ನೆಲ್ಲ ಕೊಟ್ಟು ಕಳುಹಿಸಿಕೊಟ್ಟ. ಸೀಮಂತದ ಔತಣ ಮುಗಿಸಿಕೊಂಡು ಎಲ್ಲರೂ ಹೊರಟುಹೋದರು. ತಚ್ಚೋಳಿಯ ಕಣ್ಮಣಿ ಬಾಲ ಒದೇನ ಮಾತ್ರ ಅಲ್ಲಿಂದ ಹೋಗದೆ ಅಲ್ಲೇ ಸೇರಿಕೊಂಡ. ಕಂಡಾಚ್ಚೇರಿ ಚಾಪ್ಪ ತಚ್ಚೋಳಿ ಮೇಪ್ಪಕ್ಕೆ ಹೊರಟುಹೋದ. ಎಲ್ಲರೂ ಸುಖವಾಗಿದ್ದರು.

ಗಂಡಾಗಿ ಹುಟ್ಟಿದರೆ ಹೊಡೆದಾಟವೂ ಯುದ್ಧವೂ ಇದ್ದದ್ದೇ

ಕುಟ್ಟಿಪುರಂ ರಾಜ ಹೀಗೆಂದ – ಕೈದೇರಿ ಮನೆಯ ಪಾರುಪತ್ಯಗಾರನೇ! ಗ್ರಂಥದ ಪೆಟ್ಟಿಗೆ ತೆರೆದುನೋಡು. ಗೇಣಿ ಕೊಡುವುದಕ್ಕೆ ಯಾರೆಲ್ಲ ಬಾಕಿ ಎಂದು ಗುರುತಿಸು. ಕೊಡಗು ಮಲೆಯೊಡೆಯ ಕುಂಞಿಕಣ್ಣ ಹಣವನ್ನೂ ಕೊಡುವುದಿಲ್ಲ. ಗೇಣಿಯನ್ನೂ ಸಂದಾಯ ಮಾಡುವುದಿಲ್ಲ. ನೋಡಪ್ಪಾ ಪಾರುಪತ್ಯಗಾರ! ಓಲೆಕಟ್ಟುಗಳನ್ನು ತೆಗೆದುನೋಡು. ಕುಂಞಿಕಣ್ಣನ ಲೆಕ್ಕಾಚಾರ ನೋಡಿ ಹೇಳು. ಸುಮಾರು ಎರಡು ಮೂರು ವರ್ಷವಾಯಿತು, ಹೀಗೇ! ಅವನು ಇತ್ತ ಬರುವುದೂ ಇಲ್ಲ, ಏನನ್ನೂ ಸಂದಾಯ ಮಾಡುವುದೂ ಇಲ್ಲ. ಏನು ಮಾಡಬೇಕೆಂದು ತಿಳಿಸು. ಅದಕ್ಕೆ ಪಾರುಪತ್ಯಗಾರ ಹೇಳಿದ – ಅವನಿಂದ ಹತ್ತು ಸಾವಿರದಷ್ಟು ಹಣ ಬರಬೇಕು. ಅದಲ್ಲದೆ ಇನ್ನೂ ಕೆಲವು ಗೇಣಿ ಸಂದಾಯ ಆಗಬೇಕಾಗಿದೆ. ಅದನ್ನು ಕೇಳಿದ ಅರಸನೆಂದ – ಕೈದೇರಿ ಮನೆಯವನೇ ಪಾರುಪತ್ಯಗಾರಾ! ಯಾರನ್ನಾದರೂ ಒಬ್ಬನನ್ನು ಕಳುಹಿಸಬೇಕು. ಕೊಡಗು ಮಲೆ ಯೊಡೆಯ ಕುಂಞಿಕಣ್ಣ ಒಂದು ರಾಜ್ಯವನ್ನೇ ಮಾಡಿಕೊಂಡಿದ್ದಾನೆ. ಅವನೊಬ್ಬ ತುಂಡರಸನೇ ಆಗಿದ್ದಾನೆ. ಅವನಿಗೆ ಇಂದು ಯಾರೂ ಎದುರಿಲ್ಲ. ಅವನಲ್ಲಿಗೆ ಯಾರನ್ನು ಕಳುಹಿಸೋಣ? ಅದಕ್ಕೆ ಪಾರುಪತ್ಯಗಾರನೆಂದ – ನಮ್ಮ ಅರಮನೆಗೆ ಸಮೀಪ ವಾಸ ಮಾಡುತ್ತಿರುವ ಜೋನಕ ಮಮ್ಮದ್ ಮತ್ತು ಪೋಕ್ಕರ್‌ರನ್ನು ಕಳುಹಿಸಬಹುದು. ಅದಕ್ಕೆ ತಾವು ಒಂದು ಓಲೆ ಕಳುಹಿಸಬೇಕು. ಅದಕ್ಕೆ ಅರಸನೆಂದ – ಕೈದೇರಿ ಮನೆಯವನೆ ಪಾರುಪತ್ಯಗಾರಾ! ನಾವು ಆ ಜೋನಕರನ್ನು ಕಳಿಸಿದೆವಾದರೆ ಅವರನ್ನು ಅವನು ಕಡಿದುಕೊಂದಾನು. ಇದಕ್ಕೇನು ಮಾಡೋಣ? ಅದಕ್ಕೆ ಪಾರುಪತ್ಯಗಾರನೆಂದ – ಏನೂ ಮಾಡುವುದು ಬೇಡ. ಜೋನಕರು ಹೋಗಿ ಬರಲಿ. ಆಗ ಎಲ್ಲ ಗೊತ್ತಾಗುತ್ತದೆ.

ಆ ಮಾತುಗಳನ್ನು ಕೇಳಿ ಕುಟ್ಟಿಪುರಂನ ಅರಸ ಓಲೆ ಬರೆಯುವುದಕ್ಕಾಗಿ ತಾಳೆಗರಿ ತೆಗೆದುಕೊಂಡ. ಅದರ ತುದಿ ಬುಡ ಕತ್ತರಿಸಿದ. ತಡಮಾಡದೆ ಕಂಠವನ್ನೂ (ಮ. ನಾರಾಯಂ –ನಾರಾಚ?) ತೆಗೆದುಕೊಂಡ. ಹೀಗೆ ಓಲೆ ಬರೆದ – ಕೊಡಗು ಮಲೆ ಗೊಡೆಯ ಕತ್ತರಿಸಿದ. ತಡಮಾಡದೆ ಕಂಠವನ್ನೂ (ಮ. ನಾರಾಯಂ – ನಾರಾಚ?) ತೆಗೆದುಕೊಂಡ. ಹೀಗೆ ಓಲೆ ಬರೆದ – ಕೊಡಗು ಮಲೆಗೊಡೆಯ ಕುಂಞಿಕಣ್ಣಾ! ಸುಮಾರು ಮೂರುವರ್ಷಕ್ಕಿಂತ ಹೆಚ್ಚು ಕಾಲವಾಯಿತು. ನೀನು ಸಂದಾಯ ಮಾಡಬೇಕಾದ ಹಣವನ್ನು ಕೊಟ್ಟಿಲ್ಲ. ಗೇಣಿಯೂ ಇಲ್ಲ, ಭತ್ತವೂ ಇಲ್ಲ. ಅದಕ್ಕಾಗಿ ಇಬ್ಬರು ಜೋನಕರನ್ನು ಕಳಿಸುತ್ತಿದ್ದೇನೆ. ಅವರಲ್ಲಿ ಗೇಣಿಯನ್ನೂ ಹಣವನ್ನೂ ಕೊಡಬೇಕು. ಅವರ ಖರ್ಚನ್ನೂ ನೀನು ಕೊಡಬೇಕು. ನೀನು ಹತ್ತು ಸಾವಿರ ಪರೆ ಭತ್ತ ಕೊಡಬೇಕಾಗಿದೆ. ಇನ್ನೂ ಕೆಲವು ಗೇಣಿಗಳು ಬಾಕಿಯಿವೆ. ಎಲ್ಲವನ್ನೂ ನೀನು ಹೊಂದಿಸಿ ಸಂದಾಯಮಾಡು. ಜೋನಕರ ಕೈಯಲ್ಲೇ ಕೊಟ್ಟುಬಿಡು. ಹೀಗೆ ಓಲೆಯನ್ನು ಬರೆದು ಜೋನಕರನ್ನು ಕರೆಕಳಿಸಿ ಬರಮಾಡಿಸಿದ. ಅವರು ಬಾಗಿಲ ಬಳಿ ಬಂದು ನಿಂತರು. ಅರಸನಲ್ಲಿ ಹೇಳಿದರು – ಅಯ್ಯೋ ಪಡೆದವನೇ, ಭಗವಂತಾ! ಅರಸರೇ! ಕೊಡಗು ಮಲೆಯೊಡೆಯ ಕುಂಞಿಕಣ್ಣನ ಬಳಿಗೆ ಹೋಗಬೇಕಾದರೆ ನಾವು ಒಂದು ವಿಷಯ ಹೇಳಿಕೊಳ್ಳಬೇಕು. ನಮಗೆ ನಾಲ್ಕು ಮಕ್ಕಳಿದ್ದಾರೆ. ಅವರನ್ನೂ ನಮ್ಮ ಹೆಂಗುಸರನ್ನೂ ನೀವು ನೋಡಿ ಕಾಪಾಡಬೇಕು. ನಾವು ಪ್ರಾಣಸಹಿತ ಹಿಂದಿರುಗಲಾರೆವು. ಕುಂಞಿಕಣ್ಣ ನಮ್ಮನ್ನು ಹಾಗೆಯೇ ಬಿಡುವವನಲ್ಲ. ನಾವೇನಾದರೂ ಸತ್ತು ಹೋದರೆ ನಮ್ಮ ಹೆಣವನ್ನು ಕಲ್ಲಮರಿಗೆಯಲ್ಲಿಟ್ಟು ಮಣ್ಣುಮಾಡಲು (ಮುಸ್ಲಿಂ ಪದ್ಧತಿ) ನೀವು ವ್ಯವಸ್ಥೆ ಮಾಡಬೇಕು. ಅಥವಾ ತಾವು ಗಮನಿಸಬೇಕು: ನಮ್ಮ ಹೆಣವೇ ಕಾಣಸಿಗದೆ ಕೂಡ ಇರಬಹುದು. ಅದನ್ನು ಕೇಳಿದ ಅರಸನೆಂದ – ಅಯ್ಯೋ ಜೋನಕರೇ! ಹೆದರಬೇಡಿ. ನಾನಿದ್ದೇನೆ ಹೆದರಬೇಡಿ! ನೀವು ಹೋಗಿ ಬರಬೇಕು.

ಆ ಮಾತುಗಳನ್ನು ಕೇಳಿದ ಜೋನಕರು ಹೊರಟುಹೋದರು. ಕೊಡಗುಮಲೆ ತಲಪಿದರು. ಕೊಡಗು ಮಲೆಯೊಡೆಯ ಕಣ್ಣ ಇವರನ್ನು ಕಡೆಗಣ್ಣಲ್ಲೇ ನೋಡಿ ಹೇಳಿದ – ಏನಪ್ಪಾ ಜೋನಕರೇ ಬಂದ ಕಾರ್ಯ? ಅದಕ್ಕೆ ಜೋನಕರು ಕುಟ್ಟಿಪ್ಪುರದರಸ ತನ್ನ ಸ್ವಂತ ಕೈಯಿಂದ ಕೊಟ್ಟ ಓಲೆಯನ್ನು ಅವನ ಕೈಗಿತ್ತರು. ಕುಂಞಿಕಣ್ಣ ಓಲೆಯನ್ನೋದಿದ. ಓದುತ್ತ ಹೋದಂತೆ ಸಿಟ್ಟೇರಿದ ಅವನು ಓಲೆಯನ್ನು ಹರಿದೆಸೆದ. ಜೋನಕರನ್ನು ಕಡಿದು ಕೊಂದು ಹಾಕಿದ. ಕುಟ್ಟಿಪುರ ದರಸನಿಗೆ ಈ ಯಾವುದೇ ವರ್ತಮಾನ ಸಿಗಲಿಲ್ಲ. 'ಮೂರುವರ್ಷಕ್ಕೂ ಹೆಚ್ಚು ಕಾಲವಾಯಿತು. ಜೋನಕರಿಬ್ಬರೂ ಇನ್ನೂ ಮರಳಿ ಬಂದಿಲ್ಲ. ಅವರ ಸಂಗತಿ ಕೂಡ ಏನೂ ತಿಳಿಯಲಿಲ್ಲ. ಏನಾಗಿಹೋಯಿತು

ಅರಸರೇ!" ಎಂದು ಪಾರುಪತ್ಯಗಾರ ಅರಸನಲ್ಲಿ ಮಾತು ತೆಗೆದ. ಅವರನ್ನು ಕುಂಞಿಕಣ್ಣ ಕೊಂದಿರಬಹುದು. ಏನು ಹೇಳಲಿ ಪಾರುಪತ್ಯಗಾರ! ಎಂದು ಅರಸನೂ ಕೈಚೆಲ್ಲಿದ.

ಹೀಗಿರಲು ಜೋನಕರನ್ನು ಕುಂಞಿಕಣ್ಣ ಕೊಂದ ಸುದ್ದಿ ಕರ್ಣಾಕರ್ಣಿಕೆಯಾಗಿ ಊರ ಜನರಿಗೆ ತಲಪಿತು. ಕಯ್ದೇರಿ ಮನೆಯ ಪಾರುಪತ್ಯಗಾರನಿಗೂ ಈ ಸುದ್ದಿ ತಲಪಿತು. ಅಂತೆಯೇ ಕುಟ್ಟಿಪುರಂ ಅರಸನಿಗೂ. ಆತ ಪಾರುಪತ್ಯಗಾರನನ್ನು ಕರೆದು ಹೇಳಿದ – ಕಯ್ದೇರಿ ಮನೆಯ ಪಾರುಪತ್ಯಗಾರ, ಎಂಥ ಅವಮಾನವಾಗಿ ಹೋಯಿತು! ಕುಟ್ಟಿಪುರಂನ ಅರಸನಾದ ನನಗೆ ಭತ್ತದ ಗೇಣಿಯನ್ನೂ ಕಂದಾಯವನ್ನೂ ವಸೂಲು ಮಾಡಲು ಅಸಾಧ್ಯವಾದರೆ ನಾನಿನ್ನು ಬದುಕಿ ಪ್ರಯೋಜನವಿದೆಯೆ? ಅದನ್ನು ಕೇಳಿದ ಪಾರುಪತ್ಯಗಾರನೆಂದ – ಒಂದು ವಿಚಾರ ಕೇಳಬೇಕು ಅರಸರೇ. ತಚ್ಚೋಳಿ ಮನೆಯ ಕುಂಞ್ಯೊದೇನನಿದ್ದಾನೆ. ಅವನಲ್ಲದೆ ಬೇರಾರಿಗೂ ಈ ಕೆಲಸ ಸಾಧ್ಯವಿಲ್ಲ. ಅವನನ್ನು ಗೆಲ್ಲುವವರು ಇಂದು ಯಾರೂ ನಮ್ಮ ಸುತ್ತುಮುತ್ತಲಲ್ಲಿ ಇಲ್ಲ. ಅವನಿಗೆ ಕರೆಕಳುಹಿಸುವುದು ಒಳ್ಳೆಯದು. ಅದನ್ನು ಕೇಳಿದ ಅರಸ ಅಂತೆಯೇ ಓಲೆಕಳುಹಿಸಿದ – ತಚ್ಚೋಳಿ ಮನೆಯ ಬಾಲ ಒದೇನ! ನಿನ್ನನ್ನು ನಾನೊಮ್ಮೆ ಕಂಡು ಮಾತನಾಡಬೇಕು. ಹಾಗೆ ಬರೆದು ಪಾರುಪತ್ಯಗಾರನಲ್ಲಿ ಕೊಟ್ಟ. ಓಲೆಯನ್ನು ಪಡೆದುಕೊಂಡ ಪಾರುಪತ್ಯಗಾರ ಕುಟ್ಟಿಪ್ಪುರದಲ್ಲಿದ್ದ ಜೋನಕನೊಬ್ಬನನ್ನು ಅರಮನೆಗೆ ಕರೆಯಿಸಿದ. ಅವರಲ್ಲೆಂದ – ನೋಡಪ್ಪಾ ಜೋನಕನೇ! ನೀನು ಈ ಓಲೆಯನ್ನು ತಚ್ಚೋಳಿ ಮನೆಗೆ ಒಯ್ದು ಒದೇನನ ಕಯ್ಗೆ ಕೊಟ್ಟು ಬರಬೇಕು. ಅದನ್ನು ಕೇಳಿದ ಜೋನಕ ಎರಡು ಕೈಗಳನ್ನೂ ನೀಡಿ ಓಲೆಯನ್ನು ಪಡೆದುಕೊಂಡ. ಓಲೆಯನ್ನು ತೆಗೆದುಕೊಂಡು ಹೊರಟ. ಹಾಗೆ ಹೋಗುತ್ತಿರಲು ಮಹಾಲೋಕರು ಅವನನ್ನು ಕರೆದರು– ಏನಪ್ಪಾ! ಏನಪ್ಪಾ ಜೋನಕನೇ! ಎಲ್ಲಿಗೆ ಹೋಗುತ್ತಿದ್ದಿಯಾ? ಅದಕ್ಕೆ ಅವನು ಉತ್ತರಿಸಿದ – ಕುಟ್ಟಿಪುರಂನ ಅರಸರ ಓಲೆಯನ್ನು ತೆಗೆದುಕೊಂಡು ನಾನು ಹೋಗುತ್ತೇನೆ. ತಚ್ಚೋಳಿ ಮನೆಗೆ ಹೋಗಬೇಕಾಗಿದೆ. ಒದೇನನನ್ನು ಕಂಡು ಅವನಿಗೆ ಓಲೆಯನ್ನು ಕೊಡಬೇಕು. ಆಗ ಮಹಾಲೋಕರೆಂದರು – ಓಲೆ ಯಾಕಪ್ಪಾ ಬರೆಸಿದ್ದಾರೆ? ಅದಕ್ಕೆ ಅದೇನೂ ತನಗೆ ತಿಳಿದಿಲ್ಲವೆಂದೂ ತಾನು ಏನೋ ಕೆಲವು ಸಂಗತಿಗಳನ್ನು ಕೇಳಿದ್ದೇನೆ ಅಷ್ಟೆ! ಎಂದ. ಅದಕ್ಕೆ ಅವರು ಸುಮ್ಮನಾಗದೆ – ಏನಯ್ಯಾ ಪ್ರಿಯನಾದ ಜೋನಕನೇ! ನೀನು ಕೇಳಿದ್ದು ಏನು ಎಂಬುವುದನ್ನು ನಮಗೆ ಹೇಳು. ಆಗ ಜೋನಕನು ಹೇಳಿದ– ಕುಟ್ಟಿಪುರಂನ ಅರಸನಿಗೆ ಕೊಡಗುಮಲೆ ಕುಂಞಿಕಣ್ಣನಿಂದ ಹತ್ತು ಸಾವಿರ ಪರೆ ಭತ್ತ ಬರಬೇಕಾಗಿದೆ. ಹತ್ತು ಸಾವಿರ ಹಣವೂ ಬಾಕಿಯಾಗಿದೆ. ಅವನಾದರೆ ಅಲ್ಲಿಯ ಮಾರಾಜ. ಅವನ ವಿಚಾರವನ್ನು ಹೇಳಲೇಬಾರದು – ಎಂದು ಹೇಳಿ ಅರಸನು ಗೇಣಿ ವಸೂಲಿಗಾಗಿ ಜೋನಕರನ್ನು ಕಳಿಸಿದ್ದು ಆ

ಬಳಿಕದ ಘಟನೆಗಳನ್ನೆಲ್ಲ ಹೇಳಿದ ಬಳಿಕ – ಕೊಡಗುಮಲೆ ಕುಂಞಿಕಣ್ಣನಿಗೆ ಇಂದು ಯಾರೂ ಇದಿರಿಲ್ಲ. ಅವನು ಕಳರಿಪಯಟ್ಟ್ ಕಲಿತಿದ್ದಾನೆ. ಕತ್ತಿವರಸೆ ಕಲಿತಿದ್ದಾನೆ. ಮರಳೆರಚಿ ಹೊಡೆಯುವ ವರಸೆಗಳನ್ನೂ ಕಲಿತಿದ್ದಾನೆ. ಯಾರೂ ಅವನಿಗೆ ಇದಿರಿಲ್ಲ. ಕುಟ್ಟಿಪುರಂನ ಅರಸ ಇನ್ನು ಜೀವವಿಟ್ಟುಕೊಂಡು ನಿಲ್ಲುವವರಲ್ಲ. ಕುಂಞಿಕಣ್ಣನಿಂದ ಗೇಣಿಯನ್ನೂ ಕಂದಾಯವನ್ನೂ ವಸೂಲು ಮಾಡಬೇಕು. ಕೊಡಗುಮಲೆಗೆ ಕಳುಹಿಸುವ ಕಾರ್ಯ ನಿಮಿತ್ತ ಅರಸರು ಓಲೆಬರೆದು ಕೊಟ್ಟುದನ್ನು ನಾನಿದೋ ಒಯ್ಯುತ್ತಿದ್ದೇನೆ. ತಚ್ಚೋಳಿ ಮನೆಗೆ ಹೋಗಬೇಕಾಗಿದೆ. ಆಗ ಮಹಾಲೋಕರೆಂದರು– ಒಂದು ವಿಚಾರ ಕೇಳಬೇಕಪ್ಪ ಜೋನಕನೆ! ನೀನು ತಚ್ಚೋಳಿ ಮನೆಗೆ ಹೋಗಿ ಒದೇನನನ್ನು ಕಂಡೆಯಾದರೆ ಅವನಲ್ಲಿ ಅಗತ್ಯ ಒಂದು ವಿಷಯ ತಿಳಿಸಬೇಕು – ಅವನು ಕತ್ತರಿಸಿದ. ತಡಮಾಡದೆ ಕಂಠವನ್ನೂ (ಮ. ನಾರಾಯಂ – ನಾರಾಚ?) ತೆಗೆದುಕೊಂಡ. ಹೀಗೆ ಓಲೆ ಬರೆದ – ಕೊಡಗು ಮಲೆಗೊಡೆಯ ಕುಂಞಿಕಣ್ಣಾ! ಸುಮಾರು ಮೂರುವರ್ಷಕ್ಕಿಂತ ಹೆಚ್ಚು ಕಾಲವಾಯಿತು. ನೀನು ಸಂದಾಯ ಮಾಡಬೇಕಾದ ಹಣವನ್ನು ಕೊಟ್ಟಿಲ್ಲ. ಗೇಣಿಯೂ ಇಲ್ಲ, ಭತ್ತವೂ ಇಲ್ಲ. ಅದಕ್ಕಾಗಿ ಇಬ್ಬರು ಜೋನಕರನ್ನು ಕಳಿಸುತ್ತಿದ್ದೇನೆ. ಅವರಲ್ಲಿ ಗೇಣಿಯನ್ನೂ ಹಣವನ್ನೂ ಕೊಡಬೇಕು. ಅವರ ಖರ್ಚನ್ನೂ ನೀನು ಕೊಡಬೇಕು. ನೀನು ಹತ್ತು ಸಾವಿರ ಪರೆ ಭತ್ತ ಕೊಡಬೇಕಾಗಿದೆ. ಇನ್ನೂ ಕೆಲವು ಗೇಣಿಗಳು ಬಾಕಿಯಿವೆ. ಎಲ್ಲವನ್ನೂ ನೀನು ಹೊಂದಿಸಿ ಸಂದಾಯಮಾಡು. ಜೋನಕರ ಕೈಯಲ್ಲೇ ಕೊಟ್ಟುಬಿಡು. ಹೀಗೆ ಓಲೆಯನ್ನು ಬರೆದು ಜೋನಕರನ್ನು ಕರೆಕಳಿಸಿ ಬರಮಾಡಿಸಿದ. ಅವರು ಬಾಗಿಲ ಬಳಿ ಬಂದು ನಿಂತರು. ಅರಸನಲ್ಲಿ ಹೇಳಿದರು – ಅಯ್ಯೋ ಪಡೆದವನೇ, ಭಗವಂತಾ! ಅರಸರೇ! ಕೊಡಗು ಮಲೆಯೊಡೆಯ ಕುಂಞಿಕಣ್ಣನ ಬಳಿಗೆ ಹೋಗಬೇಕಾದರೆ ನಾವು ಒಂದು ವಿಷಯ ಹೇಳಿಕೊಳ್ಳಬೇಕು. ನಮಗೆ ನಾಲ್ಕು ಮಕ್ಕಳಿದ್ದಾರೆ. ಅವರನ್ನೂ ನಮ್ಮ ಹೆಂಗುಸರನ್ನೂ ನೀವು ನೋಡಿ ಕಾಪಾಡಬೇಕು. ನಾವು ಪ್ರಾಣಸಹಿತ ಹಿಂದಿರುಗಲಾರೆವು. ಕುಂಞಿಕಣ್ಣ ನಮ್ಮನ್ನು ಹಾಗೆಯೇ ಬಿಡುವವನಲ್ಲ. ನಾವೇನಾದರೂ ಸತ್ತುಹೋದರೆ ನಮ್ಮ ಹೆಣವನ್ನು ಕಲ್ಲಮರಿಗೆಯಲ್ಲಿಟ್ಟು ಮಣ್ಣುಮಾಡಲು (ಮುಸ್ಲಿಂ ಪದ್ಧತಿ) ನೀವು ವ್ಯವಸ್ಥೆ ಮಾಡಬೇಕು. ಅಥವಾ ತಾವು ಗಮನಿಸಬೇಕು: ನಮ್ಮ ಹೆಣವೇ ಕಾಣಸಿಗದೆ ಕೂಡ ಇರಬಹುದು. ಅದನ್ನು ಕೇಳಿದ ಅರಸನೆಂದ – ಅಯ್ಯೋ ಜೋನಕರೇ! ಹೆದರಬೇಡಿ. ನಾನಿದ್ದೇನೆ ಹೆದರಬೇಡಿ! ನೀವು ಹೋಗಿ ಬರಬೇಕು.

ಅದನ್ನು ಕೇಳಿಸಿಕೊಂಡ ಜೋನಕನು ಮೆಲ್ಲಗೆ ಅಲ್ಲಿಂದ ಹೊರಟ. ತಚ್ಚೋಳಿಗೆ ತಲಪಿ ಒದೇನನ ಮನೆಯ ಮೆಟ್ಟಿಲೇರಿದ. ತಚ್ಚೋಳಿಯ ಮನೆಯ ಕುಂಞಿಚ್ಚೀರು

ಕಾಡುತೊರೆಯಂತೆ ಇದ್ದ ತನ್ನ ಕೂದಲನ್ನು ಬಾಚುತ್ತ ಹೊರಜಗಲಿಯಲ್ಲಿ ಕುಳಿತಿದ್ದಳು. ಬೋದಿಗೆ ಕಂಭದ ಬಳಿ ಇನ್ನೊಬ್ಬಾಕೆ ಹೆಂಗಸೂ ಇದ್ದಳು. ಆಗ ಜೋನಕನೆಂದ – ಒಂದು ವಿಚಾರವನ್ನು ಅಮ್ಮನವರು ಕೇಳಬೇಕು. ಕುಟ್ಟಿಪುರಂನ ಅರಸರು ನನ್ನಲ್ಲಿ ಒಂದು ಓಲೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಒದೇನಪ್ಪನವರ ಕೈಗೆ ಕೊಡಬೇಕಾಗಿದೆ. ಆಗ ಕುಂಞಿಚ್ಚೀರುವೆಂದಳು – ಎಲ್ಲಿದೆ ಎಲ್ಲಿದೆ ಜೋನಕನೇ! ಅರಸರ ಓಲೆಯನ್ನು ಇತ್ತಕೊಡು. ಆಗ ಅವನು ಓಲೆಯನ್ನು ತೆಗೆದು ಅವಳ ಕೈಗಿತ್ತ. ಕಾವಿಲ್ ಚಾತ್ತೋತ್ತ್‌ನ ಕುಂಞಿಚ್ಚೀರು ಅದನ್ನು ತೆಗೆದುಕೊಂಡು ಒಳಹೋದಳು. ಓಲೆತಂದವನಿಗೆ ಅವಲಕ್ಕಿ ಬಾಳೆಹಣ್ಣುಗಳನ್ನು ತಂದುಕೊಟ್ಟಳು. ಬಳಿಕ ಒದೇನನ ಬಳಿಹೋಗಿ ಕುಟ್ಟಿಪುರಂ ಅರಸರು ಓಲೆ ಕಳಿಸಿರುವುದನ್ನು ಹೇಳಿ ಅದನ್ನು ಅವನ ಕೈಗಿತ್ತಳು. ಓಲೆಯನ್ನು ತೆಗೆದುಕೊಂಡ ಒದೇನ ಅದನ್ನು ಓದಿದ. ಬಳಿಕ ಜೋನಕನಿಗೆಂದ – ಒಂದು ಸಂಗತಿ ಯುಂಟು ಕೇಳಬೇಕು ಜೋನಕನೇ! ಅರಸರು ಯಾಕೆ ಕರೆಕಳುಹಿಸಿದ್ದಾರೆ? ನನ್ನಲ್ಲಿ ನೀನು ಅದನ್ನು ಹೇಳಬೇಕು. ಆಗ ಜೋನಕನೆಂದ – ಒಂದು ಸಂಗತಿಯುಂಟು ಕೇಳಬೇಕು ಒದೇನಪ್ಪ! ವಿಷಯ ನಾನು ಹೇಳಿದೆನಾದರೆ ಅರಸರು ನನ್ನನ್ನು ಬಾಕಿ ಉಳಿಸಲಾರರು. ಆಗ ಒದೇನನೆಂದ – ಏನೂ ಹಿಂಜರಿಯಬೇಡ. ನಾನು ಅರಸನಿಗೆ ಏನನ್ನೂ ಬಾಯಿ ಬಿಡುವವನಲ್ಲ. ನೀನು ವಿಷಯ ಹೇಳಿದರೆ ನಿನಗೆ ನೂರು ಹಣಕೊಡು ತ್ತೇನೆ. ಆಗ ಜೋನಕನೆಂದ – ಹಾಗಾದರೆ ಕೇಳಯ್ಯಾ ಒದೇನಪ್ಪ! ಕೊಡಗುಮಲೆಯ ನ್ನಾಳುವ ಕುಂಞಿಕಣ್ಣ ಒಬ್ಬ ಪಾಳಯಗಾರ! ಅವನಿಗೆ ಇಂದು ಯಾರೂ ಇದಿರಿಲ್ಲ. ಅವನು ಅರಸರಿಗೆ ಪ್ರತಿವರ್ಷ ಸಂದಾಯ ಮಾಡಬೇಕಾಗಿದ್ದ ಸಾವಿರ ಪರೆ ಭತ್ತ, ಅದರ ಮೇಲೆ ಸಾವಿರ ಹಣ ಬೇರೆ – ಇದಾವುದನ್ನೂ ಕಳೆದ ಮೂರು ವರ್ಷಗಳಿಂದ ಸಂದಾಯ ಮಾಡಿಲ್ಲ. ಭತ್ತವೆಂದರೆ ಭತ್ತವೂ ಇಲ್ಲ, ಹಣವೆಂದರೆ ಹಣವೂ ಇಲ್ಲ. ಆದರೂ ಅರಸರು ಮತ್ತೂ ಕಾದುನೋಡಿದರು. ಬಳಿಕ ಇಬ್ಬರು ಜೋನಕರನ್ನು ಅವನಲ್ಲಿಗೆ ಕಳುಹಿಸಿದರು. ಮೂರುವರ್ಷಕ್ಕಿಂತ ಹೆಚ್ಚಾಯಿತು. ಅವರೂ ಹಿಂತಿರುಗಿ ಬಂದಿಲ್ಲ. ಇದೇನು ವಿಶೇಷವೆಂದು ಅರಸರು ನೆನೆಯುತ್ತ ಇದ್ದಾಗ ಜೋನಕರನ್ನು ಕುಂಞಿಕಣ್ಣ ಕೊಂದಿದ್ದಾನೆಂಬ ಸುದ್ದಿ ಬಂದಿದೆ. ಸುದ್ದಿ ತಿಳಿದ ಅರಸರ ಎದೆ ಬೆಂದು ಹೋಯಿತು. ಅವರು ಹೇಳುತ್ತಾರೆ – ನಾನು ಈ ಹಣವನ್ನು ವಸೂಲು ಮಾಡದಿದ್ದರೆ ಜೀವ ಇಟ್ಟುಕೊಂಡು ಬದುಕುವುದೇಕೆ? ಹಾಗಾಗಿ ನಿನಗೆ ಓಲೆ ಬರೆದು ಕಳುಹಿಸಿದ್ದಾರೆ. ನಾನು ಓಲೆಯನ್ನು ತೆಗೆದುಕೊಂಡು ಇತ್ತ ಬರುವಾಗ ದಾರಿಯಲ್ಲಿ ಮಾಲೋಕರು ಹೇಳಿದ್ದಾರೆ – ಒದೇನನಲ್ಲಿ ಹೇಳಬೇಕು! ಕೊಡಗು ಮಲೆಗೊಡೆಯ ಕುಂಞಿಕಣ್ಣನಿಗೆ ಇಂದು ಯಾರೂ ಇದಿರು ನಿಲ್ಲುವವರಿಲ್ಲ. ಅರಸರ ಮಾತನ್ನು ಒದೇನ ಕೇಳಿದರೆ

ಅವನ ಕರುಳು ಮಾಲೆ ಹೊರಬಿದ್ದೀತು. ಅವನ ಒಡಲೂ ಪ್ರಾಣವೂ ಒಂದಾಗಿರುವುದಿಲ್ಲ. ಜೀವದಾಸೆಯಿರುವ ಯಾವನೇ ಒಬ್ಬ ಕೊಡಗುಮಲೆಗೆ ಹೋಗುವುದು ಬೇಡ. ಹಾಗಾಗಿ ಒದೇನ! ನೀನು ಖಂಡಿತ ಅಲ್ಲಿಗೆ ಹೋಗಲೇಬಾರದು.

ಅದನ್ನು ಕೇಳಿದ ಒದೇನ ಕೂಗಿ ಹೇಳಿದ – ಕುಟ್ಟಿಪುರಂ ಅರಸರ ಬಯಕೆಯಂತೆ ನಾನು ಅಲ್ಲಿಗೆ ಹೋಗಲು ಹಿಂಜರಿಯುವವನಲ್ಲ. ನನ್ನ ಒಡಲ ಬಗ್ಗೆ ನನಗೆ ಆಸೆ ಇಲ್ಲ. ಜೀವದ ಕುರಿತಾಗಿಯೂ ಯಾವ ಹೆದರಿಕೆಯೂ ಇಲ್ಲ. ಅದನ್ನು ಕೇಳಿದ ಕಾವಿಲ್ ಚಾತ್ತೋತ್ತ್ ಕುಂಞಿಚೀರು ಎದೆ ಬಿರಿಯುವಂತೆ ಅತ್ತಳು. ಅಳುತ್ತ ಆಕೆಯೆಂದಳು – ತಚ್ಚೋಳಿ ಮನೆಯ ನನ್ನ ಗಂಡ! ನೀವು ಅರಮನೆಗೆ ಹೋಗಬೇಡಿ. ಅರಸರಿಗಾಗಿ ಗೇಣಿ ವಸೂಲು ಮಾಡುವುದು ಬೇಡ. ನಮಗೆ ಹಣವೂ ಬೇಡ ಹೊನ್ನೂ ಬೇಡ. ಕೊಡಗುಮಲೆಗೆ ಹೋಗಬೇಡಿ. ಅದನ್ನು ಕೇಳಿದ ಒದೇನ ಮತ್ತೆ ಕೂಗಿ ಹೇಳಿದ – ಯಾಕೆ ಅಳುತ್ತಿದ್ದಿ ಚೀರು? ಗಂಡಾಗಿ ಹುಟ್ಟಿದರೆ ಹೊಡೆದಾಟವೂ ಯುದ್ಧವೂ ಇದ್ದದ್ದೇ ಅಲ್ಲವೇ? ಒಂದಿಷ್ಟೂ ಹೆದರಬೇಡ ಚೀರು. ಕುಟ್ಟಿಪುರಂನ ಅರಸರ ಅರಮನೆಗೆ ಒಮ್ಮೆ ಹೋಗುತ್ತೇನೆ. ಅವರನ್ನೊಮ್ಮೆ ಕಾಣಬೇಕು. ಮತ್ತೂ ಮುಂದುವರಿಸಿ ಅವನೆಂದ – ಒಂದು ಸಂಗತಿ ಕೇಳಬೇಕು ಜೋನಕನೇ! ನೀನು ಇಂದೇ ಹಿಂತಿರುಗಿ ಹೋಗು. ಅರಸರಲ್ಲಿ ಹೇಳು – ನಾಳೆ ಮಯಮಯ ಬೆಳಗಾಗುವಾಗ ನಾನು ಅರಮನೆ ಯಲ್ಲಿರುತ್ತೇನೆ.

ಆ ಮಾತುಗಳನ್ನು ಕೇಳಿದ ಜೋನಕ ಹಿಂತಿರುಗಿ ಹೋದ. ಹೋಗಿ ಅರಮನೆಗೆ ತಲಪಿದ. ಅರಸ ಕೇಳಿದ– ಏನಪ್ಪಾ ಏನಪ್ಪಾ ಜೋನಕನೇ! ನೀನು ತಚ್ಚೋಳಿ ಮನೆಗೆ ಹೋದೆಯಾ? ಒದೇನನಿಗೆ ಓಲೆಕೊಟ್ಟೆಯಾ? ಅದಕ್ಕೆ ಜೋನಕನೆಂದ – ಕೇಳಬೇಕು ಪ್ರಭುಗಳೇ! ಅವರಿಗೆ ಓಲೆ ಕೊಟ್ಟಿದ್ದೇನೆ. ಅವರು ನಾಳೆ ಮಯಮಯ ಬೆಳಗಾಗುವಾಗ ಅರಮನೆಗೆ ತಲಪುತ್ತಾರಂತೆ. ಅದನ್ನು ಕೇಳಿದ ಅರಸನಿಗೆ ಸಂತಸವಾಯಿತು. ಕೈದೇರಿ ಮನೆಯ ಪಾರುಪತ್ಯಗಾರನನ್ನು ಕರೆಸಿದ. ಜೋನಕನಿಗೆ ಮೂರು ಹಣಕೊಡುವಂತೆ ಹೇಳಿ ಜೋನಕನನ್ನು ಕಳುಹಿಸಿಕೊಟ್ಟ. ಮರುದಿನ ಮುಂಜಾನೆ ಮಯಮಯ ಬೆಳಗಾಗಲು ಎಚ್ಚರಗೊಂಡ ಒದೇನ ಕೂಗಿ ಹೇಳಿದ – ಕುಂಞಿಚ್ಚೀರು! ನೀರು ಕೊಡು ಉಮಿಕರಿ ಕೊಡು. ಕುಟ್ಟಿಪುರಂ ಅರಮನೆಗೆ ಹೋಗಬೇಕು. ಚೀರು ನೀರನ್ನೂ ಉಮಿಕರಿಯನ್ನೂ ತಂದು ಹೊರಜಗಲಿಯಲ್ಲಿಟ್ಟಳು. ಅವನು ಉಮಿಕರಿಯಿಂದ ಹಲ್ಲುಜ್ಜಿಕೊಂಡು ಬಾಯಿ ಮುಕ್ಕಳಿಸಿ ಕೈ ಕಾಲು ಮುಖ ತೊಳೆದು ಬಂದ. ಆಗ ಅವಳು ಒದೇನನಿಗೆಂದಳು – ತಚ್ಚೋಳಿ ಮನೆಯ ನನ್ನ ಗಂಡ! ಹಾಲುಕುಡಿದೇ ನೀವು ಹೋಗಬೇಕು. ಅವಳು

ಹಾಲಿನ ಗಿಂಡಿ ತೊಳೆದಳು. ಕಾಸಿತಣಿಸಿದ ಹಾಲನ್ನು ಅದಕ್ಕೆ ಸುರಿದು ಬೇಕಾದಷ್ಟು ಸಕ್ಕರೆ ಹಾಕಿ ಕೊಟ್ಟಳು. ಜತೆಗೆ ಗೋಧಿಯ ರೊಟ್ಟಿಯನ್ನೂ ತಂದಿಟ್ಟಳು. ಅದರ ಮೇಲೆ ತುಪ್ಪ ಸಕ್ಕರೆಗಳನ್ನು ಹಾಕಿದಳು. ಅವನ ಬಳಿಹೋಗಿ ಹೀಗೆಂದಳು – ತಚ್ಚೋಳಿ ಮನೆಯ ನನ್ನ ಗಂಡ! ನೀವು ಇಂದು ಅರಮನೆಗೆ ಹೋದರೂ ವಯನಾಡಿಗೆ(ಕೊಡಗು?) ಹೋಗಬೇಡಿ. ಅರಸರು ಏನೇ ಹೇಳಲಿ. ವಯನಾಡಿಗೆ ನೀವು ಹೋಗಲೇಬಾರದು. ಅದನ್ನು ಕೇಳಿದ ಒದೇನ ಹೂಗಿ ಹೇಳಿದ – ಎಲ್ಲವನ್ನೂ ಆಮೇಲೆ ಹೇಳುತ್ತೇನೆ, ನನ್ನ ಕುಂಞಿಚ್ಚೀರು. ಅರಮನೆಗೆ ಹೋಗಿ ಹಿಂತಿರುಗಿಕೊಳ್ಳುತ್ತೇನೆ. ಆಗ ಚೀರುವೆಂದಳು – ಹಾಲು ಹಣ್ಣುಗಳನ್ನು ತಿನ್ನಿ. ಸುಟ್ಟಿರುವ ರೊಟ್ಟಿಗಳನ್ನೂ ತಿನ್ನಬೇಕು.

ಒದೇನ ಹಾಲು ಹಣ್ಣುಗಳನ್ನು ಸೇವಿಸಿದ. ರೇಶ್ಮೆ ಬಟ್ಟೆಗಳ ಪೆಟ್ಟಿಗೆಯನ್ನು ತೆರೆದಿಟ್ಟ. ನೂರೊಂದು ಮೊಳದ ರೇಶ್ಮೆಕಚ್ಚೆಯನ್ನು ಹೊರತೆಗೆದ. ಅದನ್ನು ತೆಂಗಿನ ಮರಕ್ಕೆ ಕಟ್ಟಿ ನೆರಿನೆರಿಯಾಗಿ ಮಾಡಿಕೊಂಡು ಕಚ್ಚೆ ಹಾಕಿ ಉಟ್ಟ. ಹಣೆಗೆ ಸಿಂಧೂರದ ಬೊಟ್ಟಿಟ್ಟ. ಖಡ್ಗವನ್ನೂ ಗುರಾಣಿಯನ್ನೂ ಕೈಗಳಲ್ಲಿ ಹಿಡಿದುಕೊಂಡ. ಕುಟ್ಟಿಪುರಂ ಅರಸನ ಅರಮನೆಗೆ ಹೋದ. ಹಿತ್ತಾಳೆ ಹೊದೆಸಿದ್ದ ಉಪ್ಪರಿಗೆಯ ಮೇಲೆ ರತ್ನಮಂಚದಲ್ಲಿ ಮಲಗಿದ್ದ ಅರಸ ಒದೇನ ಬರುತ್ತಿರುವುದನ್ನು ಕಣ್ಣಾರೆ ಕಂಡ. ಒದೇನನು ಕೆಳ ಚಾವಡಿಯಲ್ಲಿ ಕುಳಿತುಕೊಂಡ. ಅರಸ ಮಾಳಿಗೆಯ ಮೆಟ್ಟಲಿಳಿದು ಬಂದ. ಒದೇನ ಎದ್ದುನಿಂತು ಅರಸನಿಗೆ ಗೌರವ ಸಲ್ಲಿಸಿದ. ಬಳಿಕ ಅರಸನಲ್ಲೆಂದ– ಕುಟ್ಟಿಪ್ಪುರಂನ ಅರಸರೇ! ನನ್ನನ್ನು ಯಾಕೆ ಕರೆಸಿದಿರಿ? ಅದಕ್ಕೆ ಅರಸನೆಂದ – ಕೇಳಯ್ಯಾ ಕೇಳಯ್ಯಾ ಒದೇನ! ಕೊಡಗು ಮಲೆಗೊಡೆಯ ಕುಂಞಿಕಣ್ಣ ನಮಗೆ ಕೊಡಬೇಕಾದ ಗೇಣಿಯನ್ನು ಕಳೆದ ಮೂರುವರ್ಷ ಗಳಿಗಿಂತ ಹೆಚ್ಚು ಕಾಲವಾಯಿತು, ಕೊಟ್ಟಿಲ್ಲ. ಹಾಗಾಗಿ ಇಬ್ಬರು ಜೋನಕರನ್ನು ನನ್ನ ಓಲೆ ಸಮೇತ ಅವನಲ್ಲಿಗೆ ಕಳುಹಿಸಿದೆ! ಅವರು ಹೋಗಿ ಕಾಲ ತುಂಬ ಸಂದಿತು. ಕೊನೆಗೂ ಗೇಣಿಯೂ ಇಲ್ಲ ಹಣವೂ ಇಲ್ಲ. ಇದೀಗ ಜೋನಕರಿಬ್ಬರನ್ನೂ ಅವನು ಕೊಂದಿದ್ದಾನೆಂಬ ಸುದ್ದಿ ನನಗೆ ಬಂದಿದೆ. ನಾನೇನು ಮಾಡಲಿ ಒದೇನ? ನೀನೇ ನನಗೆ ಬೆಂಬಲವಾಗಿರುವವನು. ನೀನೇ ಹೋಗಿ ವಸೂಲು ಮಾಡಬೇಕು. ನೀನು ಹಾಗೆ ವಸೂಲು ಮಾಡಿದೆಯೆಂದಾದರೆ ಸಾವಿರದೊಂದು ಹೊನ್ನು ನಿನಗೆ ಕೊಟ್ಟೇನು. ಎರಡು ಕೈಗಳಿಗೂ ಕಡಗ ಕೊಟ್ಟೇನು. ಶ್ರೇಷ್ಠವಾದ ರೇಶ್ಮೆಯ ಬಟ್ಟೆಗಳನ್ನೂ ಕೊಡು ವುದುಂಟು. ನಾಲ್ಕು ಖಂಡಿ ವಿಸ್ತಾರದ ಆಸ್ತಿ ಕೊಡುತ್ತೇನೆ. ಇನ್ನೂ ಕೇಳಪ್ಪಾ ಒದೇನ. ಏನೇನು ಬೇಕು ಅದೆಲ್ಲವನ್ನೂ ಕೊಡುತ್ತೇನೆ. ಅದಕ್ಕೆ ಒದೇನ ಹೇಳಿದ– ಕುಟ್ಟಿಪುರಂನ ಅರಸರೇ! ಇದಕ್ಕೆ ನಾನೇನೂ ಹಿಂದೇಟು ಹಾಕುವವನಲ್ಲ. ನಾನು ಈಗಲೇ ಹೊರಡಲು ಸಿದ್ಧ. ಒಂದು ವೇಳೆ ನಾನು ಮರಳಿ ಬಾರದೆ ಹೋದರೆ ಕಾವಿಲ್ ಚಾತ್ತೋತ್ತ್‌ನ

ಕುಂಞಿಚ್ಚೀರುವಿಗೆ ತಾವು ಜೀವನಾಂಶ ಕೊಡಿಸಬೇಕು. ಇನ್ನೂ ಒಂದು ವಿಚಾರ ನಿವೇದಿಸಿಕೊಳ್ಳುತ್ತೇನೆ. ನನ್ನ ಮಗ ಅಂಬಾಡಿಯನ್ನು ನೀವು ಸಲಹಬೇಕು. ಬೇರಾವುದರ ಬಗೆಗೂ ನನಗೆ ಭಯವಿಲ್ಲ ಅರಸರೇ!

ಒದೇನ ಅಲ್ಲಿಂದ ಹೊರಟ. ಖಡ್ಗ ಗುರಾಣಿಗಳನ್ನು ತೆಗೆದುಕೊಂಡ. ವೀರಕಚ್ಚೆಯನ್ನು ಬಿಗಿದ. ಅರಸನಿಂದ ಆಣತಿ ಪಡೆದು ಹೊರಟುಹೋದ. ಕೊಡಗುಮಲೆಗೆ ತಲಪಿ ಕುಂಞಿಕಣ್ಣನ ಮುಂದೆ ಹೋಗಿ ನಿಂತ. ಕುಂಞಿಕಣ್ಣ ಕಣ್ಣಾರೆ ಒದೇನನನ್ನು ಕಂಡಾಗ ಹೀಗೆಂದು ಕೂಗಿ ಹೇಳಿದ– ತಚ್ಚೋಳಿ ಮನೆಯ ಕುಂಞ್ಯೋದೇನ! ನೀನು ಇಲ್ಲಿಗೆ ಯಾಕೆ ಬಂದೆ? ಕುಟ್ಟಿಪುರಂ ಅರಸನ ಗೇಣಿ ವಸೂಲಿಗಾಗಿ ಬಂದೆಯಾ? ಅದಕ್ಕಾಗಿ ಬಂದವನಾದರೆ ಜೀವದ ಕುರಿತು ಲಕ್ಷ್ಯವಿರಲಿ. ಅದಕ್ಕೆ ಒದೇನನೆಂದ – ಒಂದು ವಿಚಾರ ತಿಳಿದುಕೊ ಕುಂಞಿಕಣ್ಣ! ಜೀವದ ಕುರಿತು ನನಗೆ ಒಂದಿಷ್ಟೂ ಹೆದರಿಕೆಯಿಲ್ಲ. ದೇಹದ ಕುರಿತೂ ಅಂಜಿಕೆಯಿಲ್ಲ. ಗೇಣಿ ವಸೂಲಿ ಮಾಡದೆ ಹೋಗುವವನಲ್ಲ. ಕುಟ್ಟಿಪುರಂನ ಅರಸನಿಗೆ ನೀನು ಕೊಡಬೇಕಾದ ಗೇಣಿಯನ್ನು ಕೊಡತಕ್ಕದ್ದು. ಒದೇನ ಜೋನಕನಲ್ಲವೆಂಬುದು ನೆನಪಿನಲ್ಲಿರಲಿ ಕುಂಞಿಕಣ್ಣ! ಅದನ್ನು ಕೇಳಿದ ಕುಂಞಿಕಣ್ಣನಿಗೆ ಸಿಟ್ಟೇರಿತು. ಅವನು ಕೂಗಿಕೊಂಡ – ಹೊರಟು ನಡೆಯೋ ನಿನ್ನ ತಚ್ಚೋಳಿ ಮನೆಗೆ. ನೀನು ಗೇಣಿ ವಸೂಲಿ ಮಾಡುವುದನ್ನು ನೋಡೋಣ. ಅದನ್ನು ಕೇಳಿದ ಒದೇನ ಕಚ್ಚೆಯನ್ನು ಬಿಗಿಕಟ್ಟಿಕೊಂಡು ಖಡ್ಗಗುರಾಣಿಗಳನ್ನು ಕೈಗೆತ್ತಿಕೊಂಡ. ರಭಸದಿಂದ ಅಂಗಳಕ್ಕೆ ನೆಗೆದ. ಕೊಡಗು ಮಲೆಗೊಡೆಯ ಕುಂಞಿಕಣ್ಣನೂ ಅಂಗಳಕ್ಕೆ ನೆಗೆದ. ಪರಸ್ಪರ ಹೋರಾಟ ತೊಡಗಿತು. ಬೆಳಗ್ಗೆ ತೊಡಗಿದ ಹೋರಾಟ ಸಂಜೆಯಾದರೂ ಮುಗಿಯುವ ಲಕ್ಷಣವಿಲ್ಲ! ಒದೇನ ಒಂದು ಪಟ್ಟುತೆಗೆದು ಮಗುಚಿದರೆ ಕುಂಞಿಕಣ್ಣ ಎರಡು ಪಟ್ಟುಗಳನ್ನು ಪ್ರಯೋಗಿಸಿ ಮಗುಚುತ್ತಿದ್ದ. ಸಂಧ್ಯಾದೀಪದ ಬೆಳಕನ್ನು ನೋಡಿದ ಕುಂಞಿಕಣ್ಣ ಒದೇನನಿಗೆಂದ – ಒದೇನಾ! ಒಂದು ಗುಟುಕು ನೀರು ಕುಡಿಯಬೇಕಾಗಿದೆ. ಕೈಕಾಲುಗಳು ಬಳಲುತ್ತಿವೆ. ಗುರಾಣಿ ಎತ್ತಲೂ ಸಾಧ್ಯವಾಗುತ್ತಿಲ್ಲ. ನಿಲ್ಲಯ್ಯಾ ನಿಲ್ಲಯ್ಯಾ ಕುಂಞ್ಯೋದೇನ! ಅದಕ್ಕೆ ಒದೇನನೆಂದ – ಹಾಗೆ ನಿಲ್ಲಿಸುವುದರಲ್ಲೇನಿದೆ ಸೊಗಸು? ಗೇಣಿ ಸಂದಾಯ ಮಾಡುತ್ತೇನೆಂದು ಒಪ್ಪುವುದಾದರೆ ನಾನು ಹೋರಾಟ ನಿಲ್ಲಿಸಿಬಿಡುತ್ತೇನೆ. ಅದಕ್ಕೆ ಕುಂಞಿಕಣ್ಣನೆಂದ– ತಚ್ಚೋಳಿ ಮನೆಯ ಕುಂಞ್ಯೋದೇನ! ಎಲ್ಲವನ್ನೂ ಕೊಡುತ್ತೇನೆ, ಒದೇನ! ಅದನ್ನು ಕೇಳಿದ ಒದೇನ ಹೋರಾಟವನ್ನು ನಿಲ್ಲಿಸಿ ನಿಂತುಬಿಟ್ಟ. ಒದೇನನು ಅವೆಲ್ಲವನ್ನೂ ಸಾವಕಾಶವಾಗಿ ಸಂಗ್ರಹಿಸಿ ಹೊರೆಯಾಳು ಜೋನಕರಿಂದ ಹೊರಿಸಿಕೊಂಡು ಕುಟ್ಟಿಪ್ಪುರಂ ಅರಮನೆಗೆ ತಲಪಿದ. ಅರಸನಲ್ಲಿ ಒದೇನ ಹೇಳಿದ – ಕುಟ್ಟಿಪುರಂನ ಅರಸರೇ! ಗೇಣಿ ವಸೂಲಿ ಮಾಡಿ ತಂದಿದ್ದೇನೆ. ಲೆಕ್ಕ ಸರಿಯಿದೆಯೇ ಅಳೆಯಿಸಿ ತೆಗೆಸಿಕೊಳ್ಳಿ. ಆಗ

ಅರಸ ಕೈದೇರಿ ಮನೆಯ ಪಾರುಪತ್ಯಗಾರನನ್ನು ಕರೆಯಿಸಿದ. ಅವನಿಗೆಂದ – ಪಾರುಪತ್ಯ ಗಾರ! ತಚ್ಚೋಳಿ ಮನೆಯ ಒದೇನ ಕೊಡಗುಮಲೆ ಕುಂಞಿಕಣ್ಣನಿಂದ ನಮಗೆ ಸಂದಾಯ ವಾಗಬೇಕಾದ ಗೇಣಿಯನ್ನೂ ಹಣವನ್ನೂ ವಸೂಲಿ ಮಾಡಿ ತಂದಿದ್ದಾನೆ. ಲೆಕ್ಕನೋಡಿ ತೆಗೆಸಿಕೊ. ಪಾರುಪತ್ಯಗಾರನು ಅಂತೆಯೇ ಲೆಕ್ಕನೋಡಿ ಅರಸನಿಗೆ ಹೇಳಿದ – ಅರಸರೇ! ತಚ್ಚೋಳಿ ಒದೇನನಿಗೆ ಕೊಡಬೇಕಾದ ಇನಾಮು ಬಹುಮಾನಗಳನ್ನು ಕೊಡಬೇಡವೇ? ಆಗ ಅರಸನೆಂದ – ತಚ್ಚೋಳಿ ಮನೆಯ ಕುಂಞ್ಯೋದೇನನೇ ಅಲ್ಲಿಗೆ ಹೋಗದಿದ್ದರೆ ಇಂದೂ ಗೇಣಿ ಸಿಗುತ್ತಿರಲಿಲ್ಲ. ನಾವು ಅವನಿಗೆ ಕೊಡಬೇಕಾದ್ದನ್ನು ಕೊಡಲೇಬೇಕು. ಕೈದೇರಿ ಮನೆಯ ಪಾರುಪತ್ಯಗಾರ ಅಂತೆಯೇ ಒದೇನನಿಗೆ ಸಾವಿರದೊಂದು ಹಣ, ಎರಡು ಕೈಗಳಿಗೂ ಕಡಗ, ಶ್ರೇಷ್ಠವಾದ ರೇಶ್ಮೆಯ ಬಟ್ಟೆ ಮುಂತಾದುವುಗಳನ್ನು ಕೊಡಿಸಿದ. ಹಾಗೆ ಅಲ್ಲಿಂದ ಒದೇನನು ಹೊರಟು ಕಾವಿಲ್ ಚಾತ್ತೋತ್ತ್‌ಗೆ ತಲಪುವಾಗ ಕುಂಞಿ ಚ್ಚೇರುವು ತನ್ನ ಗಂಡನು ಹೋದಂದಿನಿಂದ ದುಃಖಗೊಂಡು ಊಟ ನಿದ್ದೆಗಳನ್ನು ಬಿಟ್ಟು ಕುಳಿತಿದ್ದ ಅವಳನ್ನು ಕರೆದ – ಕಾವಿಲ್ ಚಾತ್ತೋತ್ತ್‌ನ ಕುಂಞಿಚ್ಚೇರು! ಇತ್ತ ಬಾ ಕುಂಞಿಚ್ಚೇರು. ಕುಂಞಿಚ್ಚೇರು ಅಲ್ಲಿಗೆ ಬಂದು ನಿಂತಳು. ಒದೇನ ಅವಳಿಗೆ ಸಾವಿರ ದೊಂದು ಹಣಕೊಟ್ಟ, ಹೊನ್ನಿನ ಎರಡು ಕಡಗಗಳನ್ನು ಕೊಟ್ಟ, ಇನ್ನೂ ಬೇರೆ ಬೇರೆ ಉಡುಗೊರೆಗಳನ್ನು ಕೊಟ್ಟ. ಹಾಗೆ ಅವರು ಅಲ್ಲಿ ಸುಖವಾಗಿದ್ದರು.

ನಿನಗೆ ಕುಂಞುಮ್ಮಮ್ಮ ಬೇಕೋ ಪ್ರಾಣಬೇಕೋ?

ಮಾಮಾಲ ಮನೆಯ ಕುಂಞ್ಯುಮ್ಮಮ್ಮಳಿಗೆ ಒಂದೂವರೆ ವರ್ಷ ಪ್ರಾಯವಾದಾಗ ತಂದೆ ತೀರಿಕೊಂಡ. ಎರಡು ವರ್ಷವಾದಾಗ ತಾಯಿ ಸತ್ತಳು. ಮಾಮಾಲ ಮನೆಯ ಮಾವ ಮಗುವನ್ನು ಎದೆಯ ಮೇಲೆ ಮಲಗಿಸಿ ಸಾಕಿದಾಗ ಅವರ ಮೂಗನ್ನು ಮೊಲೆ ಯುಣ್ಣುವಂತೆ ಅದು ಚೀಪಿ ಚೀಪಿ ಅವರ ಮೂಗು ಮೊಂಡಾಯಿತು. ಮಾವನ ಪ್ರಿಯ ಸೊಸೆಯಾಗಿ ಬೆಳೆಯುತ್ತಿದ್ದ ಅವಳು ಚಿನ್ನದ ಕಡಗದ ಸದ್ದು ಮಾಡುತ್ತ ಕಿರುಕೊಡೆಯಿಂದ ಮೈಮುಚ್ಚುತ್ತ ಹದಿನಾಲ್ಕು ವರ್ಷದ ಹುಡುಗಿಯಾಗಿ ಬಳೆದಳು. ಶಾಲೆ ಕಲಿಯುವುದಕ್ಕಾಗಿ ಶಾಲೆ ಸೇರಿದಳು. ಈಗ ಕುಂಞ್ಯುಮ್ಮಮ್ಮನಿಗೆ ಹದಿನಾಲ್ಕರ ವಯಸ್ಸು. ಅವಳು ತುಂಬ ಆತುರಾತುರವಾಗಿ ನಡೆಯುತ್ತಿದ್ದಳು. ಕೋಟೆಕ್ಕಲ್ ಕುಂಞಾಲಿ ಮರಕ್ಕಾರನ ಕೋಟೆಯ ಬಾಗಿಲಬಳಿ ಉಮ್ಮಮ್ಮ ತಲುಪಿದಳು. ಅವಳನ್ನು ಕಣ್ಣಾರೆ ಕಂಡ ಮರಕ್ಕಾರ್ ಹೀಗೆಂದ– ಮಾಮಾಲ ಮನೆಯ ಕುಂಞ್ಯುಮ್ಮಮ್ಮ ಶಾಲೆ ಕಲಿಯು ವುದಕ್ಕಾಗಿ ಹೋಗುವುದನ್ನು ಕಂಡಿರಾ? ಹೋಗೋ ಹೋಗೋ ಚೇಕೋಂಕುಟ್ಟಿ! ಅವಳನ್ನು ಎಳನೀರು ಕುಡಿದು ಹೋಗಲು ಹೇಳು. ಕೋಟೆಕಟ್ಟುವುದನ್ನು ನೋಡಿ ಹೋಗಲು ಹೇಳು. ಚೇಕೋಂಕುಟ್ಟಿ ಅಂತೆಯೇ ಅಲ್ಲಿಗೆ ಹೋದ. ಉಮ್ಮಮ್ಮನಿಗೆಂದ – ಮಾಮಾಲ ಮನೆಯ ಕುಂಞುಮ್ಮಮ್ಮ! ಒಂದು ಸಂಗತಿ ಇದೆ ಕೇಳಿರಿ ಕುಂಞುಮ್ಮಮ್ಮ. ಕೋಟೆಕ್ಕಲ್ ಕುಂಞಾಲಿ ಮರಕ್ಕಾರ ಹೇಳುತ್ತಾರೆ – ನೀವು ಎಳನೀರು ಕುಡಿದು ಹೋಗಬಹುದಂತೆ! ಕೋಟೆಯ ಕೆಲಸ ನಡೆಯುತ್ತಿರುವುದನ್ನು ನೋಡಿ ಹೋಗಬಹು ದಂತೆ! ಆಕೆ ಕೋಪ ನಟಿಸಿ ಹೀಗೆಂದಳು– ನನಗೆ ಕೋಟೆಯ ಕೆಲಸವನ್ನು ನೋಡಿ ಹೋಗಲು ಸಮಯವಿಲ್ಲ. ಎಳನೀರು ಕುಡಿಯುವುದಕ್ಕೂ ಸಮಯವಿಲ್ಲ. ಮರಕ್ಕಾರ ಅವನ ಪಾಡಿಗೆ ಅವನು ಹೋಗಲಿ! ಹೋಗಿ ಅವನಲ್ಲಿ ಹೇಳು. ಚೇಕೋಂಕುಟ್ಟಿ

ಮರಳಿದ. ಮರಕ್ಕಾರ ಕೇಳಿದ –ಏನು ಹೇಳಿದಳೋ ಆಕೆ? ಚೇಕೋಂಕುಟ್ಟಿ ವರದಿ ಒಪ್ಪಿಸಿದ – ಕೋಟೆಯ ಕೆಲಸ ನೋಡಲು ಸಮಯವಿಲ್ಲವಂತೆ. ಎಳನೀರು ಕುಡಿಯುವುದಕ್ಕೂ ಸಮಯವಿಲ್ಲವಂತೆ. ನಿಮ್ಮ ಕೆಲಸ ನೀವು ನೋಡಬೇಕಂತೆ! ಮರಕ್ಕಾರನಿಗೆ ಸಿಟ್ಟೇರಿತು. ಅವನು ನೇರವಾಗಿ ಹೋಗಿ ಉಮ್ಮಮ್ಮನ ಮುಂದೆ ನಿಂತು ಅವಳಿಗೆಂದ– ಮಾಮಾಲೆಯಮ್ಮಮ್ಮ ಕುಂಞಉಮ್ಮಮ್ಮ! ನನ್ನ ಮಾತನ್ನು ನೀನು ತಿರಸ್ಕರಿಸಿದ್ದು ಯಾಕೆ? ಕುಂಞಉಮ್ಮಮ್ಮ ಹೌಹಾರಿದಳು. ಅವಳು ತಿರುಗಿ ನೋಡಿದಳು. ಸೂಕ್ತವಾದೊಂದು ಉಪಾಯ ಕೈಗೊಂಡಳು. ಮರಕ್ಕಾರನಲ್ಲೆಂದಳು – ಕೋಟೆಕ್ಕಲ್ ಕುಂಞಾಲಿ ಮರಕ್ಕಾರನೇ ಕೇಳು! ಹೊತ್ತು ಹೋದದ್ದೇ ಗೊತ್ತಾಗಲಿಲ್ಲ. ಮದಿಲೂರ್ ಕುರಿಕ್ಕಳ್ (ಅಂದಿನ ಕಾಲದ ಪ್ರಖ್ಯಾತ ಗರಡಿ ಗುರು) ಮತ್ತು ಶಿಷ್ಯರು ಶಾಲೆಗೆ ಬಂದು ತಲಪುವುದರೊಳಗಾಗಿ ಶಾಲೆಯನ್ನೆಲ್ಲ ಗುಡಿಸಿ ಶುಚಿಮಾಡಿ ಹೂಗಳನ್ನೆರಚಬೇಕು. ಬೇಗ ಹೋಗಿ ಬೇಗ ಬಂದು ಬಿಡುತ್ತೇನೆ. ಆಗದೆ? ಶಾಲೆಯ ಕಲಿಕೆ ಮುಗಿಸಿ ಹಿಂತಿರುಗುವಾಗ ಎಳನೀರು ಕುಡಿಯಲು ನಾನು ಬರುತ್ತೇನೆ. ಕೋಟೆಯ ಕೆಲಸವನ್ನೂ ಆಗ ನೋಡುತ್ತೇನೆ. ದಿಟ್ಟತನದಿಂದಲೂ ಉಪಾಯದಿಂದಲೂ ಆತನನ್ನು ಮಾತಿನಿಂದಲೇ ಅವಳು ಒಲಿಸಿದಳು. ಮರಕ್ಕಾರನೆಂದ – ಮಾಮಾಲ ಮನೆಯ ಕುಂಞ್ಯುಮ್ಮಮ್ಮಾ! ಓದು ಬರೆಹ ಕಳೆದು ಮರಳುವಾಗ ಹಣ್ಣಡಕೆಯಂಥ ಮುಖದೊಂದಿಗೆ ಇದೇ ದಾರಿಯಾಗಿ ಬಂದೇ ಬರಬೇಕು ಕುಂಞ್ಯುಮ್ಮಮ್ಮ! ಹಾಂ! ಎಂದು ಒಪ್ಪಿಗೆಯಿತ್ತು ಅವಳು ವೇಗವಾಗಿ ಅಲ್ಲಿಂದ ಸಾಗಿದಳು. ಆಭರಣದ ಭಾರದಿಂದ ಆಕೆ ಓಡಲಾರಳು, ಸೀರೆ ಎಡೆಕಟ್ಟಿ ನಡೆಯಲಾರಳು.

ಹೊತ್ತು ಸಂಜೆಯಾಗುತ್ತಾ ಬಂತು. ಮರಕ್ಕಾರ ಎಲೆಅಡಕೆ ಹಾಕಿಕೊಂಡು ಹೊಟ್ಟೆಯ ಮೇಲೆ ಕೈಯಾಡಿಸಿ ನಗುತ್ತ ಕೋಟೆಯ ಬಾಗಿಲಲ್ಲೆ ಅಡ್ಡಾಡುತ್ತಿದ್ದ. ಕುಂಞ್ಯುಮ್ಮಮ್ಮನನ್ನು ಕಾಯುತ್ತ ನಿಂತಿದ್ದ. ಕುಂಞಉಮ್ಮಮ್ಮನ ಕಾಲಗೆಜ್ಜೆಯ ಕಿರುದನಿ ಮರಕ್ಕಾರನಿಗೆ ಆನೆಯ ಗಂಟೆಯ ಸದ್ದಿನ ಹಾಗೆ ಕೇಳತೊಡಗಿತು. ಅವನಿಗೆ ತುಂಬ ಸಂತೋಷವಾಯಿತು. ಅವಳಿಗೆ ಕಾಡ ತೊರೆಯ ಹರಿವಿನಂಥ ತಲೆಗೂದಲು, ಇಟ್ಟುಕೊಂಡ ಅಂದದ ಚಂದನ ಬೊಟ್ಟು, ಗಿಣಿಯಂತೆ ಕೆಂಪಾದ ತುಟಿಗಳು, ಸ್ಫಟಿಕದ ಹರಳುಗಳಂಥ ಹಲ್ಲುಗಳು, ಸಿಬ್ಬ ಬಿದ್ದು (ಇದು ಸೌದರ್ಯವರ್ಧಕ ಎಂದು ಜನಪದರ ಅಭಿಪ್ರಾಯ ಕ.ಬಿಳಿಜಿಬ್ಬು?) ಸುಂದರವಾದ ಕೊರಳು, ಎಳೆಯ ಸಣ್ಣ ಮುಖ. ಕೈಗಳೆರಡೂ ಸುವರ್ಣಗಡ್ಡೆಯ ದಂಡುಗಳಂತೆ, ಕಾಲುಗಳೆರಡೂ ಕಡೆದಿಟ್ಟ ಕಂಬಗಳಂತೆ. ಎಂಥ ಚೆಂದದ ಹುಡುಗಿ ಕುಂಞಉಮ್ಮಮ್ಮ!...... ಮರಕ್ಕಾರ ಮನದಲ್ಲೇ ನೆನೆಯುತ್ತಿದ್ದ. ಮೆಲ್ಲಗೆ ನಡೆಯುತ್ತ ನಡೆಯುತ್ತ ಅವನು ಅವಳ ಬಳಿಸಾರಿದ. ಆದರೇನು? ಅವಳ ಜತೆಯಲ್ಲೇ ಮದಿಲೂರು ಕುರಿಕ್ಕಳೂ! ಕುರಿಕ್ಕಳನ್ನು ಮರಕ್ಕಾರ್ ಕಂಡ. ಅವನಿಗೆ ಸಿಟ್ಟೇರತೊಡಗಿತ್ತು. ಕರಿಗಣ್ಣನ್ನು ಹೊರಳಿಸಿ,

ಉರುಳಿಸಿದ. ಕರಿತೊಡೆಗಳ ರೋಮವನ್ನು ಕುಣಿಸಿದ. ಓಡಿಹೋಗಿ ಮಾಳಿಗೆ ಸೇರಿಕೊಂಡ. ಚೇಕ್ಕೋನ್ ಕುಟ್ಟಿಯನ್ನು ಕರೆದು ಹೀಗೆಂದ – ಚಂಗರನ್ ಕುಟ್ಟಿ ಒಳ್ಳೆಯ ಆನೆ. ಕೋಟೆಯ ಬಾಗಿಲಿಗೆ ಆನೆಯನ್ನು ಒಯ್ದು ಅಲ್ಲಿ ಬಾಗಿಲಲ್ಲಿ ಕಟ್ಟು. ಚೇಕೋನ್ ಕುಟ್ಟಿ ಅಂತೆಯೇ ಆನೆಯನ್ನು ದಾರಿಗೆ ಅಡ್ಡವಾಗಿ ಕಟ್ಟಿದ. ಮದಿಲೂರು ಕುರಿಕ್ಕಳೂ ಕುಂಞುಮ್ಮಮ್ಮನೂ ಆನೆಯ ಹತ್ತಿರಕ್ಕೆ ತಲಪಿದರು. ಕುರಿಕ್ಕಳ್ ಹೇಳಿದರು – ಒಂದು ಸಂಗತಿ ಕೇಳೋ ನೀನು ಆನೆಕಾರ! ಆನೆಯನ್ನು ದಾರಿಯಿಂದ ಆಚೆಗೆ ಕಟ್ಟು. ಅದಕ್ಕೆ ಅವನೆಂದ – ಆನೆಯನ್ನು ಬೇರೆಡೆ ಕಟ್ಟುವುದು ಸಾಧ್ಯವಿಲ್ಲ. ತಾಕತ್ತಿದ್ದರೆ ಬೇರೆ ಕಡೆ ನೀವೇ ಕಟ್ಟಿ. ಕುರಿಕ್ಕಳಿಗೆ ಸಿಟ್ಟೇರುತ್ತಿತ್ತು. ಕೈಯಿಂದ ಸಂಜ್ಞೆ ತೋರಿಸುತ್ತ ಅವರೆಂದರು –ಚಂಗರನ್ ಕುಟ್ಟಿ! ನೀನು ಒಳ್ಳೆಯವ! ನೀನು ದಾರಿ ಬಿಟ್ಟು ಸರಿಯದೆ ಹೋದರೆ ನಿನ್ನ ನಾಲ್ಕು ಕಾಲುಗಳನ್ನೂ ಕಡಿದು ನಾನು ಕಂಬ ಹಾಕಿಸಿಯೇನು. ನಿನ್ನ ಸೊಂಡಿಲು ಕತ್ತರಿಸಿ ಬಳೆಗಳನ್ನು ತಟ್ಟಿಸಿಯೇನು. ನಿನ್ನ ಬಾಲ ತುಂಡರಿಸಿ ಶೂಲದ ದಸಿ ಕಟ್ಟಿಸಿಯೇನು. ನಿನ್ನ ಎರಡು ಕಿವಿಗಳನ್ನೂ ಕತ್ತರಿಸಿ ಮನೆ ಮಾಡಿಗೆ ಹಾಸಿಸಿಯೇನು!! ಸಿಡಿಲಿನಂಥ ದನಿ ಕೇಳಿ ಆನೆ ಹಿಂತಿರುಗಿ ನಿಂತು ಓಡಲಾರಂಭಿಸಿತು. ಮದಿಲೂರು ಕುರಿಕ್ಕಳೂ ಕುಂಞುಮ್ಮಮ್ಮಳೂ ಮಾಮಾಲ ಮನೆಗೆ ಹೋಗಿ ತಲಪಿದರು. ಮಾಮಾಲ ಮನೆಯಲ್ಲಿ ಅವಳ ಅತ್ತೆಯಲ್ಲಿ ಕುರಿಕ್ಕಳ್ ಹೇಳಿದರು– ಒಂದು ಸಂಗತಿಯುಂಟು ಕೇಳಬೇಕು ಹೆತ್ತಮ್ಮಾ! ನೀವು ಇನ್ನು ಈ ಮಗುವನ್ನು ಶಾಲೆಗೆ ಅಲ್ಲಿಗೆ ಕಳುಹಿಸಬೇಡಿ. ನಾನು ಇಲ್ಲಿಗೇ ಬಂದು ಅವಳಿಗೆ ಹೇಳಿಕೊಡುತ್ತೇನೆ.

ಅಲ್ಲಿ ಹಾಗಿರಲು ಕೋಟೆಕ್ಕಲ್ ಕುಂಞಾಲಿ ಮರಕ್ಕಾರ ಒಂದು ಪೆಟ್ಟಿಗೆ ಹೊನ್ನು ತೆಗೆದುಕೊಂಡು ಮನೆಯ ಯಜಮಾನ (ಕಾರಣೋರ್) ಇಲ್ಲದ ಸಮಯ ನೋಡಿ ಕೊಂಡು ಮಾಮಾಲ ಮನೆಗೆ ಹೋದ. ಹೊತ್ತು ಮೀರಿ ಸಂಜೆಯಾಗುತ್ತಿದ್ದಂತೆ ಮಾಮಾಲ ಮನೆಯಲ್ಲಿ ಅತ್ತೆ ತೆಂಕುದಿಕ್ಕಿನ ಬೈಹುಲ್ಲ ರಾಶಿಗಳೆಡೆಯಲ್ಲಿ ಮರಕ್ಕಾರನಲ್ಲಿ ಹೇಳಿದಳು – ಒಂದು ಸಂಗತಿಯುಂಟು ಕೇಳಬೇಕು ಮರಕ್ಕಾರ! ಹುಡುಗಿಯನ್ನು ನಿನಗೆ ಕೊಡಬೇಕಾದರೆ ನೀನು ಒಂದು ಪೆಟ್ಟಿಗೆ ಹೊನ್ನು ಕೊಟ್ಟರೆ ಸಾಲದು. ಮಾಮಾಲ ಮನೆಯ ಅವಳ ಮಾವ ಇದನ್ನೇನಾದರೂ ತಿಳಿದರಾದರೆ ನನ್ನ ಎರಡು ಕಣ್ಣುಗಳನ್ನೂ ಕುತ್ತಿ ಒಡೆದಾರು. ಒಟ್ಟೆ(ರಂಧ್ರಬಿದ್ದ) ದೋಣಿಯಲ್ಲಿ ಕುಳಿತುಕೊಳ್ಳಿಸಿ ಪ್ರವಾಹದಲ್ಲಿ ಬಿಟ್ಟಾರು. ಅದಕ್ಕೆ ಮರಕ್ಕಾರನೆಂದ – ಇಂದೇ ನೀವು ಆ ಹುಡುಗಿಯನ್ನು ಹಿಡಿದುಕೊಟ್ಟರೆ ಒಂದಲ್ಲ ನಾಲ್ಕು ಪೆಟ್ಟಿಗೆ ಹೊನ್ನು ಕೊಟ್ಟೇನು. ಅತ್ತೆಗೆ ಮನಸ್ಸು ತಿಳಿಯಾಯಿತು.

ಅಯ್ಯೋ ವಿಧಿಯೆ! ಕುಂಞುಮ್ಮಮ್ಮ ಕಿವಿಯಾರೆ ಇದನ್ನೆಲ್ಲ ಕೇಳಿದಳು. ಆಕೆ

ಒಮ್ಮೆಗೇ ನೆಲಕ್ಕೆ ಕುಸಿದಳು. ನೆಲಕ್ಕೆ ಕವುಚಿ ಬಿದ್ದಳು. ಮನದಲ್ಲೇ ಹೀಗೆ ನೆನೆಯುತ್ತಿದ್ದಳು – ಅಯ್ಯೋ ದೇವರೇ, ಭಗವಂತ! ನಾನೀಗ ಏನು ಮಾಡಲಿ? ಮಾಮಾಲ ಮನೆಯ ನನ್ನ ಅತ್ತೆ ನನ್ನನ್ನು ಜೋನಕನೊಬ್ಬನಿಗೆ ಹಿಡಿದುಕೊಡುತ್ತಿದ್ದಾಳೆ. ಇಂದೇ ನಾನು ಕದ್ದು ಓಡಿಹೋಗದಿದ್ದರೆ ನನ್ನನ್ನು ಅವರು ಹಿಡಿದು ಕೊಟ್ಟು ಬಿಡುತ್ತಾರೆ!

ಉಟ್ಟ ಬಟ್ಟೆಯನ್ನು ಬದಲಿಸದೆಯೂ ಬದಲಿಸಲು ಬೇರೆ ಬಟ್ಟೆಯನ್ನು ತೆಗೆದುಕೊಳ್ಳದೆಯೂ ಚಾಮುಂಡಿ ದೈವಗಳು ಸಂಚರಿಸುವ ಮಧ್ಯರಾತ್ರೆ ಹೊತ್ತಿನಲ್ಲಿ ಕಣ್ಣಿಗೊಂಬೆಯೇ ಕಾಣದ ಕರ್ಗುಟ್ಟಿ ಕತ್ತಲಲ್ಲಿ, ಓಡುತ್ತ ಹಾರುತ್ತ ಆಕೆ ಹೋದಳು. ಯಾಕೆ ಹೋಗುತ್ತಿದ್ದೇನೆ? ಎಲ್ಲಿಗೆ ಹೋಗುತ್ತಿದ್ದೇನೆ? ಇದರ ಆದ್ಯಂತಗಳೇನು? ಎಂಬುದು ಯಾವುದೂ ತಿಳಿಯದೆ ಹೋಗುತ್ತಲೆ ಇದ್ದಳು, ಕುಂಞುಮ್ಮಮ್ಮ. ಹಾಗೆ ಸಾಗುತ್ತಾ ಸಾಗುತ್ತಾ ಆಕೆ ಮಾಣಿಕ್ಕೋತ್ತ್‌ಗೆ ತಲಪಿದಳು. ಅಲ್ಲಿಯ ಒಳ್ಳೆಯ ಮನೆ ಬಾಗಿಲೊಂದರ ಮುಂದೆ ನಿಂತು ಬಾಗಿಲು ತಟ್ಟಿ ಕರೆದಳು. ಮಾಣಿಕ್ಕೋತ್ತ್ ಮನೆಯಲ್ಲಿದ್ದ ಒಬ್ಬಾಕೆ ಕೆಲಸದವಳು ಬಾಗಿಲು ತೆರೆದಳು. ಮಾಮಾಲ ಮನೆಯ ಕುಂಞುಮ್ಮಮ್ಮಳನ್ನು ಆಕೆ ಕಂಡಾಗ 'ಇದೇನು ಕಥೆ ಕುಂಞುಮ್ಮಮ್ಮ?' 'ಅಲುಗಾಡಬೇಡ, ಮಾತಾಡಬೇಡ ಕೆಲಸದಾಕೆ ಹೆಣ್ಣೇ! ಕಾವಿಲ್ ಚಾತ್ತೋತ್ತ್‌ನ ಚೀರು ಅಮ್ಮನ ಬಳಿಗೆ ನನ್ನನ್ನು ಕರೆದುಕೊಂಡು ಹೋಗು'. ಮಾಣಿಕೋತ್ತ್ ಮನೆಯಲ್ಲಿನ ಕೆಲಸದ ಹೆಣ್ಣು ಚೀರುವಿನ ಬಳಿಗೆ ಅವಳನ್ನು ಕರೆದೊಯ್ದು ಬಿಟ್ಟಳು.

ಹಾಗೆ ಅವಳು ಅಲ್ಲಿರಲು ಇತ್ತ ಕೋಟೆಕ್ಕಲ್ ಕುಂಞಾಲಿ ಮರಕ್ಕಾರನು ನಾಲ್ಕಾರು ಊರುಗಳಲ್ಲಿ ನಡೆದಾಡುತ್ತ ಕುಂಞುಮ್ಮಮ್ಮಳನ್ನು ಹುಡುಕಾಡುತ್ತಿದ್ದ. ಎಲ್ಲಿಯೂ ಅವಳು ಕಾಣಸಿಗಲಿಲ್ಲ. ಹಾಗಿರಲು ಅವನಿಗೆ ಒಂದು ಸುದ್ದಿ ಸಿಕ್ಕಿತು – ಮಾಮಾಲ ಕುಂಞುಮ್ಮಮ್ಮ ಒದೇನನ ಮನೆ ಮಾಣಿಕ್ಕೋತ್ತ್‌ನಲ್ಲಿದ್ದಾಳಂತೆ! ಮರಕ್ಕಾರ ಮನದಲ್ಲೇ ನೆನೆದ – ತಚ್ಚೋಳಿ ಒದೇನನಿಗೂ ನನಗೂ ಬಹಳ ಹಿಂದಿನಿಂದಲೆ ಇರುವ ಪರಿಚಯ. ಅವನಲ್ಲಿ ನೇರವಾಗಿ ವಿಷಯ ತಿಳಿಸಿದರೆ ಅವನು ಆ ಹುಡುಗಿಯನ್ನು ನನಗೆ ಕೊಟ್ಟಾನು. ಒಂದು ಪೆಟ್ಟಿಗೆ ಹೊನ್ನನ್ನು ಮರಕ್ಕಾರ ತೆಗೆದುಕೊಂಡ. ಹೊತ್ತು ಸಂಜೆಯಾಗುತ್ತಿದ್ದಂತೆ ಮಾಣಿಕ್ಕೋತ್ತ್‌ಗೆ ಹೋಗಿ ಹಾಜರಾದ. ತಚ್ಚೋಳಿ ಒದೇನಪ್ಪ ಕುರುಪ್ಪ್ ತಲೆಬಾಗಿಲಲ್ಲೇ ಕುಳಿತುಕೊಂಡಿದ್ದಾನೆ. ಒದೇನ ಕೇಳಿದ – ಏನು ಹೀಗೆ ಬಂದಿರಿ ಮರಕ್ಕಾರರೇ? ಮರಕ್ಕಾರ ಬಂದ ಸಂಗತಿ ಹೇಳಿದ. ಒಂದು ಪೆಟ್ಟಿಗೆ ಹೊನ್ನನ್ನು ಮುಂದಿರಿಸಿದ. ಅದಕ್ಕೆ ಒದೇನನೆಂದ – ಹೇಳುವುದನ್ನು ಅರ್ಥಮಾಡಿಕೊಳ್ಳಿ ಮರಕ್ಕಾರರೇ! ಈ ಹುಡುಗಿಯನ್ನು ನಾನೀಗ ಕೊಡಬಹುದು. ಅದಕ್ಕೇನು. ಅದು ದೊಡ್ಡ ಸಂಗತಿಯಲ್ಲ. ಮಾಮಾಲ ಮನೆಯ ಕುಂಞುಮ್ಮಮ್ಮ ಹೆಸರಾಂತ ಮನೆಯಾಕೆ. ನಮ್ಮ ಸಾಮಾನ್ಯ

ಕ್ರಮಕ್ಕೆ ಅನುಸಾರವಾಗಿ ಹುಡುಗಿಗೆ ಹೊಸ ವಿವಾಹ ವಸ್ತ್ರವನ್ನು ಕೊಟ್ಟು ಮದುವೆಯಾಗುವುದು ರೂಢಿಯಾಗಿದ್ದರೂ ಹಿಂದಿನಿಂದಲೇ ನಮ್ಮೊಳಗಿರುವ ಪರಿಚಯದ ಕಾರಣ ನಿಮಗೆ ನಾನು ಹುಡುಗಿಯನ್ನು ಕೊಡುತ್ತೇನೆ. ಮರಕ್ಕಾರನಿಗೆ ತುಂಬ ಸಂತೋಷವಾಯಿತು. 'ಆ' ಎಂಬ ಸಮ್ಮತಿಯ ಉದ್ಗಾರ ಮಾಡಿ ಆತ ಕೂಡಲೇ ಬೀಳ್ಗೊಂಡು ಹೊರಟ. ಹೊರಡುವಾಗ ಇನ್ನೊಂದು ಪೆಟ್ಟಿಗೆ ಚಿನ್ನವನ್ನು ಅಲ್ಲಿ ಇರಿಸಿದ. ಕಲಿತ ವರಸೆ ಹದಿನೆಂಟನ್ನೂ ಅಲ್ಲಿ ಪ್ರಯೋಗಿಸಿದ. ಒದೇನ ಆ ಚಿನ್ನದ ಪೆಟ್ಟಿಗೆಯನ್ನು ಮುಟ್ಟಲೇ ಇಲ್ಲ. ಮುಂದಿನ ಭಾನುವಾರದ ಒಳ್ಳೆಯ ದಿನಕ್ಕೆ 'ಊವಂ ಪೊರುಕ್ಕಲ್' ಎಂದು ನಿಶ್ಚೈಸಲಾಯಿತು. ಹಾಗೆ ಪರಸ್ಪರ ಮಾತನಾಡಿಕೊಂಡು ಅವರು ಹೊರಟು ಹೋದರು.

ಆ ಭಾನುವಾರ ಮುಂಜಾನೆ ಅರಳಿಯೇ ಬಿಟ್ಟಿತು. ಬೇಕಾದ ಸಕಲ ಸಿದ್ಧತೆಗಳೊಂದಿಗೆ ಹೊತ್ತು ಕಂತುವ ಹೊತ್ತಿಗೆ ಸರಿಯಾಗಿ ಕೋಟಕ್ಕಲ್ ಕುಂಞಾಲಿ ಮರಕ್ಕಾರನೂ ಅವನ ಕಡೆಯವರೂ ಮಾಣಿಕ್ಕೋತ್ತ್‌ಗೆ ಬಂದು ಸೇರಿದರು. ಕಂಡಾಚ್ಚೇರಿ ಚಾಪ್ಪನು ಅವರನೆಲ್ಲ ಕೈಹಿಡಿದು ಬರಮಾಡಿಸಿಕೊಳ್ಳುವವನಾಗಿದ್ದ. ಅವನಲ್ಲಿ ಮರಕ್ಕಾರ ಹೇಳಿದ – ಕಂಡಾಚ್ಚೇರಿ ಚಾಪ್ಪಾ! ಒದೇನ ಎಲ್ಲಿದ್ದಾನೆ ಚಾಪ್ಪ? ಅದಕ್ಕೆ ಅವನು – ತಚ್ಚೋಳಿಯ ಒದಯಚ್ಚ ಕುರುಪ್ಪ್ ಕುಟ್ಟಿಪುರಂನ ಅರಸರು ಹೇಳಿ ಕಳಿಸಿದ್ದರಿಂದ ಆ ಕಡೆಗೆ ಹೋಗಿದ್ದಾರೆ. ಮರಕ್ಕಾರನು ಪಡುಮನೆ ಹೊಕ್ಕು ಪುಡವಗಳನ್ನು ಕೊಟ್ಟ. ತೆಂಕುಮನೆಯಲ್ಲಿ ಹಾಸುವಸ್ತ್ರ ಹಾಸಿ ಮಾಮಾಲ ಮನೆಯ ಕುಂಞುಮ್ಮನ್ನನ್ನು ಶೃಂಗರಿಸಿ ಕರೆದುಕೊಂಡು ಬಂದರು. ಹೊನ್ನಸಂಕಲೆ ಹೊನ್ನ ಸಂಕಲೆಯ ಮುಂಗೈ ಸರಪಣಿ. ಹತ್ತು ಬೆರಳುಗಳಿಗೆ ಎಂಟು ಹೊನ್ನುಂಗುರಗಳು. ಕುಂಞುಮ್ಮಮ್ಮಳನ್ನು ತೆಂಕುಕೋಣೆಗೆ ದೂಡಿ ಕಳುಹಿಸಿದರು. ಬಾಗಿಲು ಮುಚ್ಚಿಕೊಂಡರು. ಉಮ್ಮಮ್ಮನನ್ನು ಕಂಡೂ ಕಾಣದ ಹಾಗಿದ್ದೂ ಮರಕ್ಕಾರನಿಗೆ ತುಂಬ ಸಂತಸವಾಯಿತು. ತೆಂಕುಮನೆಯಲ್ಲಿದ್ದ ರತ್ನಮಂಚದಿಂದ ಅವನು ನೆಗೆದೆದ್ದ. ಕುಂಞುಮ್ಮಮ್ಮಳನ್ನು ಹೋಗಿ ಹಿಡಿದುಕೊಂಡ. ಅವಳನ್ನು ಮುಟ್ಟಬೇಕು – ಅಷ್ಟರಲ್ಲಿ ತಚ್ಚೋಳಿ ಒದೇನನು ಮರಕ್ಕಾರನ ಪುಲ್ಲೂರಿ ಕಂಠಾಭರಣವನ್ನು ಕತ್ತರಿಸಿ ಎಸೆದ. ಕಿವಿಯ ಎರಡು 'ಪೊಂಗೊ'ಗಳನ್ನ ತೆಗೆದೆಸೆದ. ತಾನು ಕಟ್ಟಿಕೊಂಡಿದ್ದ ಕಚ್ಚೆಯನ್ನೂ ಕೃತಕ ಮಾಲೆಗಳನ್ನೂ ಕಿತ್ತೆಸೆದ. ಸೊಂಟದಿಂದ ಉರುಮಿಯನ್ನು ಎಳೆದು ಹೊರತೆಗೆದ, ಮರಕ್ಕಾರನ ಎದೆಯಮೇಲೆ ಹಾರಿ ಕುಳಿತ. ಹಾರಿ ಕುಳಿತುಕೊಂಡು ಅವನಲ್ಲೆಂದ – ಕೋಟ್ಟಕ್ಕಲ್ ಕುಂಞಾಲಿ ಮರಕ್ಕಾರನೇ! ಈಗ ನಿನಗೆ ಏನು ಅನಿಸುತ್ತಿದೆ? ಉಮ್ಮಮ್ಮ ಬೇಕೆನಿಸುತ್ತಿದೆಯೋ ಪ್ರಾಣ ಬೇಕೆನಿಸುತ್ತಿದೆಯೋ? ಎರಡರಲ್ಲಿ ಒಂದನ್ನು ಹೇಳು. ಕೋಟಕ್ಕಲ್‌ನ ನಾಯಿಬುದ್ಧಿಯ ಜೋನಕನೇ! ತಚ್ಚೋಳಿ ಮಾಣಿಕೋತ್ತ್‌ನ ಒದೇನ

ಒಳ್ಳೆಯ ಕೆಂಪಗಿನ ಒಂದು ಚಿನ್ನವನ್ನು ನೋಡಿದರೂ ತುಂಬ ಬಿಳಿಬಿಳಿಯಾಗಿರುವ ಹೆಣ್ಣನ್ನು ನೋಡಿದರೂ ಕೈ ಮೈ ಮರೆಯುತ್ತಾನೆಂಬ ಮಾತನ್ನು ನಿನಗೆ ಯಾರು ಹೇಳಿಕೊಟ್ಟರು? ಆಗಲಿ, ಇರಲಿ, ಮರಕ್ಕಾರನೇ! ನಾನು ಒಂದು ವಿಚಾರವನ್ನೀಗ ನಿನ್ನಲ್ಲಿ ಹೇಳುತ್ತೇನೆ. ನಿನಗೆ ಪ್ರಾಣದ ಮೇಲೆ ಆಸೆಯಿದ್ದರೆ ನಾಯರರಂಥ ಮೇಲುಜಾತಿಯ ಹೆಂಗುಸರನ್ನು ಇನ್ನುಮುಂದೆ ತಿರುಗಿಯೂ ನೋಡುವುದಿಲ್ಲವೆಂದು ಅಲ್ಲಾನ ಹೆಸರಲ್ಲಿ ಆಣೆ ಇಡಬೇಕು. ಒದೇನ ಹೇಳಿದುದಕ್ಕೆ ಒಪ್ಪುತ್ತ ಅವನ ಮಾತಿಗೆ ಉತ್ತರವಾಗಿ ಮರಕ್ಕಾರನೆಂದ – ತಚ್ಚೋಳಿ ಒದೇನಪ್ಪ ಕುರುಪ್ಪೇ! ಮಾಸ್ವಾಮಿ! ನನಗೆ ಹೆಣ್ಣೂ ಬೇಡ ಹೆಮ್ಮೆಯೂ ಬೇಡ. ನನಗೆ ನನ್ನ ಪ್ರಾಣವನ್ನು ಉಳಿಸಿ ಕೊಟ್ಟರೆ ಸಾಕು. ಕೋಟೆಕ್ಕಲ್ ಕುಂಞಾಲಿ ಮರಕ್ಕಾರನು ನಾಯರ್ ಮುಂತಾದ ಮೇಲು ಜಾತಿಯ ಹೆಂಗುಸರನ್ನು ಇನ್ನು ಮೇಲೆ ಕತ್ತು ಹೊರಳಿಸಿಯೂ ನೋಡುವುದಿಲ್ಲವೆಂದು ಅಲ್ಲಾನ ಹೆಸರಲ್ಲಿ ಆಣೆ ಮಾಡಿದ. ಒದೇನ ತನ್ನ ಉರುಮಿಯನ್ನು ಸೊಂಟದಲ್ಲಿ ಮತ್ತೆ ಸಿಕ್ಕಿಸಿಕೊಂಡ. ಮರಕ್ಕಾರನ ಎದೆಯಮೇಲೆ ಕುಳಿತಿದ್ದವನು ಎದ್ದು ನಿಂತ. ಬಳಿಕ ಮರಕ್ಕಾರನಿಗೆಂದ – ಕೋಟೆಕ್ಕಲ್ ಕುಂಞಾಲಿ ಮರಕ್ಕಾರನೇ ಕೇಳು! ನನಗೂ ನಿನಗೂ ಬಹಳ ಹಿಂದಿನಿಂದಲೇ ಇರುವ ಪರಿಚಯ. ಈ ಘಟನೆಯ ಕಾರಣವಾಗಿ ಹಗೆತನ ಉಂಟಾಗಬಾರದು. ಅದಕ್ಕೆ ನಗುತ್ತಾ ಮರಕ್ಕಾರನೆಂದ – ತಚ್ಚೋಳಿಯ ಒದೇನಪ್ಪ ಕುರುಪ್ಪೇ! ಮಾಸ್ವಾಮಿ! ನಾನೂ ಹೇಳುತ್ತಿರುವುದು ಅದನ್ನೇ. ಹೀಗೆನ್ನುತ್ತ ಅವರಿಬ್ಬರೂ ನಕ್ಕರು. ಬಳಿಕ ಇಬ್ಬರೂ ಪರಸ್ಪರ ಕೈ ಹಿಡಿದುಕೊಂಡು ವಿದಾಯ ಹೇಳಿ ಹೊರಟರು.

ಕುಂಬೆ! ನೀನು ಮಾಡಿದುದೆಲ್ಲ ಚೆನ್ನಾಯಿತು

ಪನ್ಯಂಕರ ಮನೆಯ ಕುಂಬೆ ಮನೆ ಬಾಗಿಲು ದಾಟಿ ಹೊರ ಹೊರಟಾಗ ಅವಳ ಅಮ್ಮ ಹೇಳಿದಳು – ಪನ್ಯಂಕರ ಮನೆಯ ಕುಂಞಿಕುಂಬೆ! ಎಲ್ಲಿಗೆ ಹೊರಟೆ? ನಿನಗೀಗ ಹದಿಮೂರು ವರ್ಷ. ದೊಡ್ಡವಳಾದ ಹುಡುಗಿ ನೀನು. ಹೊರಟು ಎಲ್ಲಿಗೆ ಹೋಗುತ್ತಿದ್ದಿ? ಅದಕ್ಕೆ ಕುಂಬೆಯೆಂದಳು – ಪನ್ಯಂಕರ ಮನೆಯ ನನ್ನವ್ವ! ನನ್ನ ಒಬ್ಬಾಕೆ ಗೆಳತಿಯಲ್ಲಿಗೆ ಹೋಗಿ ಬೇಗ ಬಂದು ಬಿಡುತ್ತೇನೆ. ಅದಕ್ಕೆ ಹಿರಿಯವ್ವೆಯೆಂದಳು – ಮಗೂ ಕುಂಬೆ! ನೀನೀಗ ಹೋಗಬೇಡ. ನಿನ್ನ ಮಾವ ಈಗ ಬರುವವನಿದ್ದಾನೆ. ಅವನು ಬರುವಾಗ ನಿನ್ನನ್ನು ಕಾಣದಿದ್ದರೆ ನನ್ನನ್ನು ಬೈದಾನು. ಹಾಗಾಗಿ ನೀನು ಹೋಗಬೇಡ ಮಗಳೇ! ಅದಕ್ಕೆ ಕುಂಬೆಯೆಂದಳು – ಪನ್ಯಂಕರ ಮನೆಯ ನನ್ನವ್ವ! ನಾನು ಬೇಗ ಬರುತ್ತೇನಮ್ಮ. ಮಾವ ಬರುವ ಮೊದಲೇ ನಾನು ಇಲ್ಲಿ ಇದ್ದು ಬಿಡುತ್ತೇನೆ. ಹಿರಿಯವ್ವ ಹೇಳಿದಳು – ಕುಂಞಿಕುಂಬೆ! ಚೆರುಕುನ್ನ್‌ನ ಕುಂಞಿಚಂದು ನಿನ್ನನ್ನು ಕಾಣುವುದು ಬೇಡ. ಅವನು ನಿನ್ನನ್ನು ನೋಡಿದನಾದರೆ ಅವನು ಇಲ್ಲಿಗೂ ಬರುತ್ತಾನೆ. ಚೆರುಕುನ್ನ್ ಚಂದು ಐದು ಹೆಣ್ಣುಗಳನ್ನು ಈಗಾಗಲೆ ಇಟ್ಟುಕೊಂಡವ. ಐದು ಜನರೂ ಸತ್ತು ಹೋದರಲ್ಲ! ಐದು ಜನರೂ ಗರ್ಭಿಣಿಯರಾದರು. ಹೆತ್ತ ಬಳಿಕ ಅವರೆಲ್ಲ ತೀರಿಕೊಂಡರು. ಅವನು ಇಟ್ಟುಕೊಂಡ ಯಾವುದೇ ಹೆಣ್ಣು ಬಾಳುವುದಿಲ್ಲ. ಚಂದುವಿನ ಎದೆಯಲ್ಲಿ ಕುಜದೋಷವಿದೆ. ಅವನು ನಮ್ಮ ಧನಿಯೂ ಹೌದು. ಅವನೆಲ್ಲಾದರೂ ಬಂದು ನಿನ್ನನ್ನು ಕೊಡುವಂತೆ ಕೇಳಿದರೆ ಅವನ ಜತೆ ನೀನು ಹೋಗಬೇಕಾದೀತು. ಚಂದು ಎಂಬ ಚಂದು ತುಂಬ ಕೋಪಿಷ್ಠ ಕೂಡ. ನಿನ್ನನ್ನೆಲ್ಲಿಯಾದರೂ ಅವನು ಕಂಡರೆ ನಿನ್ನನ್ನು ಊವಂ ಬಯಂಜ್ ಮಾಡದೆ ಬಿಡುವವನಲ್ಲ. ಅದಕ್ಕಾಗಿ ಹೇಳುತ್ತಿದ್ದೇನೆ. ಅದಕ್ಕೆ ಕುಂಬೆಯೆಂದಳು – ಪನ್ಯಂಕರ ಮನೆಯ ನನ್ನವ್ವ! ನಾನು

ಬೇಗ ಬಂದುಬಿಡುತ್ತೇನವ್ವ! ಕೂಡಲೆ ಹಿರಿಯವ್ವೆಯೆಂದಳು – ನನಗೆ ಬೇರೆ ಏನೂ ಉದ್ದೇಶವಿಲ್ಲ ಕುಂಬೆ. ನೀನು ಒಂಟಿಯಾಗಿ ಆ ಕಡೆ ಹೋಗುವಾಗ ಪೆರುಮಲಯ ಕೋಮ ಪಣಿಕ್ಕರ್ ನಿನ್ನನ್ನು ಕಂಡಾನು. ಕಂಡರೆ ನಿನ್ನ ಸಂಗ ಮಾಡಲು ಬಂದಾನು. ಅವನಿಗೆ ನಿನ್ನನ್ನು ಕೊಡದೆ ಹೋದರೆ, ನೀನು ಅದಕ್ಕೆ ಒಪ್ಪದೆ ಹೋದರೆ, ಅವನು ಮಾಟಮಾರಣ ಮಾಡಿ ನಿನಗೆ ತೊಂದರೆ ಕೊಟ್ಟಾನು. ನಿನಗೆ ಒಂಬತ್ತು ವರ್ಷ ಪ್ರಾಯವಾದಾಗಲೇ ಅವನು ಹೇಳಿಟ್ಟಿದ್ದ. ನನ್ನಲ್ಲೂ ಹೇಳಿದ್ದ – ಹುಡುಗಿಗೆ ಹದಿಮೂರು ವರ್ಷ ಪ್ರಾಯವಾದಾಗ ನೀವು ಅವಳನ್ನು ನನಗೆ ಕೊಡಬೇಕು, ಒಂದು ರಾತ್ರೆಯ ಸಂಗಕ್ಕೆ. ಅವನು ತುಂಬ ಹಣವನ್ನೂ ನನಗೆ ಕೊಟ್ಟಿದ್ದಾನೆ. ಹಾಗಾಗಿ ಹೇಳುತ್ತಿದ್ದೇನೆ– ಅವನು ನಿನ್ನನ್ನು ಕಾಣುವುದೇ ಬೇಡ. ಕುಂಞಿಕುಂಬೆ ಕೂಡಲೇ ಹೇಳಿದಳು– ಪನ್ಯಂಕರ ಮನೆಯ ನನ್ನವ್ವ! ನಾನು ಹೇಗೆ ಇಲ್ಲಿ ಕುಳಿತುಕೊಳ್ಳಲಿ? ನಾನು ಹೋಗದೆ ಸಾಧ್ಯವೇ ಇಲ್ಲ. ನನ್ನ ಗೆಳತಿ ನನ್ನನ್ನು ಕಾಯುತ್ತಾ ಕುಳಿತಿದ್ದಾಳೆ. ಆಗ ಹಿರಿಯವ್ವ ಹೇಳಿದಳು – ಪನ್ಯಂಕರ ಮನೆಯ ಕುಂಞಿಕುಂಬೆ! ನೀನು ಆ ದಾರಿಯಾಗಿ ಹೋಗುವಾಗ ಅಲ್ಲೇ ದಾರಿಯಲ್ಲಿ ಪನ್ಯಂಕರ ಅರಸು ನಿನ್ನನ್ನು ಕಂಡರೆ ನಿನ್ನ ಜತೆ ಸಂಗ ಮಾಡಿಯೇ ಬಿಡುವವರು. ಅವರು ನಮ್ಮ ಧನಿಗಳ ಧನಿ. ಅದಕ್ಕೆ ಕುಂಞಿಕುಂಬೆ ಎಂದಳು– ನಾನು ಹೋಗಿ ಬೇಗ ಬಂದು ಬಿಡುತ್ತೇನಮ್ಮ. ಯಾರಿಗೂ ನಾನು ಸಂಗಕ್ಕೆ ಅವಕಾಶ ಕೊಡು ವವಳಲ್ಲ. ಆಗ ಹಿರಿಯವ್ವ ಹೇಳಿದಳು – ಪನ್ಯಂಕರ ಮನೆಯ ಕುಂಞಿಕುಂಬೆ! ನೀನು ಹೋಗುವಾಗ ಪರಂಬತ್ತ್ ಮನೆಯ ಪೋಕರ್ ಕಂಡಾನು. ನಾವು ಮನೆಗೆ ಬೇಕಾದ ಸಾಮಾನುಗಳನ್ನೆಲ್ಲ ಅವನ ಅಂಗಡಿಯಿಂದ ತಂದು ಸ್ವಲ್ಪವೂ ಹಣ ಕೊಟ್ಟಿಲ್ಲ. ನಿನ್ನನ್ನು ನೋಡಿ ಅವನು ಸಾಮಾನುಗಳನ್ನು ಕೊಡುತ್ತಾನೆ. ನನ್ನಲ್ಲಿ ಅವನು ಹೇಳಿದ್ದ– ನಿಮ್ಮ ಕುಂಬೆ ದೊಡ್ಡವಳಾದರೆ ಅವಳನ್ನು ನನಗೆ ಕೊಡಬೇಕು. ಅವನೂ ನಿನಗಾಗಿ ಕಾಯು ತ್ತಿದ್ದಾನೆ. ಕೂಡಲೆ ಕುಂಬೆಯೆಂದಳು– ಪನ್ಯಂಕರ ಮನೆಯ ನನ್ನವ್ವ! ಎಲ್ಲರೂ ಇಲ್ಲಿಗೆ ಬಂದು ಎಲ್ಲರೂ ಒಟ್ಟಿಗೆ ಸಂಗ ಮಾಡಲಿ! ನಾನು ಈಗ ಹೋಗದೆ ಇರಲು ಸಾಧ್ಯವಿಲ್ಲ. ಹಾಗೆ ಹೇಳಿ ಅವಳು ಹೊರಟುಹೋದಳು. ಅವಳು ಹಾಗೆ ಹೋಗುತ್ತಿದ್ದಾಗ ಚೆರುಕುನ್ನ್ ಚಂದು ಕಣ್ಣಾರೆ ಕಂಡ. ಕಂಡು ಕುಂಬೆಯ ಬಳಿ ಬಂದು ಅವಳಲ್ಲಿ ಹೇಳಿದ– ಪನ್ಯಂಕರ ಮನೆಯ ಕುಂಞಿಕುಂಬೆ! ನಿನ್ನನ್ನು ಚಿಕ್ಕಂದಿನಲ್ಲಿ ಕಂಡಿದ್ದೆ. ಮೊಲೆ ಮುಡಿಗಳು ಬಂದ ಮೇಲೆ ನಿನ್ನನ್ನು ನೋಡಿಯೇ ಇಲ್ಲ. ಹಾಗಾಗಿ ಫಕ್ಕನೆ ನಿನ್ನ ಗುರುತು ಸಿಗಲಿಲ್ಲ. ಅಂದ ಹಾಗೆ ನೀನು ದೊಡ್ಡವಳಾದೆಯಾ, ಹೇಗೆ? ಯಾರಾದರೂ ಈಗಾಗಲೇ ನಿನ್ನನ್ನು ಮೀಸಲು ಮಾಡಿಕೊಂಡಿದ್ದಾರೆಯೆ? ಅದಕ್ಕೆ ಕುಂಬೆಯೆಂದಳು– ಚೆರುಕುನ್ನ್‌ನ ಪ್ರಿಯ ಚಂದು! ನಾನು ದೊಡ್ಡವಳಾಗಿದ್ದೇನೆ. ನನಗೆ ಗಂಡನಾಗುವವನು ಈವರೆಗೆ

ಬಂದಿಲ್ಲ. ನಾನು ನನ್ನ ಗೆಳತಿಯನ್ನು ಕಾಣುವುದಕ್ಕೋಸ್ಕರ ಈಗ ಹೋಗುತ್ತಿದ್ದೇನೆ. ಚಂದು ಮತ್ತೂ ಕೇಳಿದ – ನಿನಗೀಗ ವಯಸ್ಸೆಷ್ಟು ಕುಂಬೆ? ಪನ್ಯಂಕರ ಮನೆಯ ಹಿರಿಯವ್ವೆಯಲ್ಲಿ ನಾನು ಹೇಳಿದ್ದೆ – ಕುಂಬೆ ಪ್ರಾಯಕ್ಕೆ ಬಂದಾಗ ನಾನು ಅವಳನ್ನು ಮದುವೆ ಮಾಡಿಕೊಳ್ಳುತ್ತೇನೆಂದು. ಅವಳನ್ನು ನನಗೆ ಕೊಡದಿದ್ದರೆ ಹಿರಿಯವ್ವೆ ಯನ್ನೂ ನಿನ್ನನ್ನೂ ಕೊಂದುಬಿಡುತ್ತೇನೆಂದೂ ಹೇಳಿದ್ದೆ. ಅದಕ್ಕೆ ಕುಂಬೆಯೆಂದಳು – ಪ್ರಿಯ ಚಂದು! ನೀನು ಬೆಳಗ್ಗೆ ಬೇಗ ಮನೆಗೆ ಬಾ! ಅದನ್ನು ಕೇಳಿ ಚಂದು ನಗುತ್ತ ಹೊರಟು ಹೋದ. ಕುಂಬೆ ಬೇಗಬೇಗ ಮುಂದೆ ಹೋದಳು. ಆಗ ಪೆರುಮಲೆಯ ಕೋಮ ಪಣಿಕ್ಕರ್ ಕುಂಬೆಯನ್ನು ಕಂಡ. ಕುಂಬೆಯನ್ನು ತುಂಬ ಹೊತ್ತು ನೋಡುತ್ತ ನಿಂತಿದ್ದು ಬಳಿಕ ಅವಳಲ್ಲಿ ಕೇಳಿದ – ಪನ್ಯಂಕರ ಮನೆಯ ಕುಂಞಿಕುಂಬೆ! ನಿನ್ನನ್ನು ಚಿಕ್ಕಂದಿನಲ್ಲಿ ಕಂಡಿದ್ದೆ ಅಷ್ಟೆ. ಮೊಲೆ ಮುಡಿ ಬಂದ ಬಳಿಕ ನಿನ್ನನ್ನು ಇಂದಷ್ಟೆ ಕಾಣುತ್ತಿದ್ದೇನೆ. ಹಾಗಾಗಿ ಫಕ್ಕನೆ ಗೊತ್ತಾಗಲಿಲ್ಲ. ಆಮೇಲೆ ತಿಳಿಯಿತು ನೀನು ಎಂದು. ಪನ್ಯಂಕರ ಮನೆಯ ಹಿರಿಯವ್ವೆಗೆ ನಾನು ತುಂಬ ಹಣವನ್ನು ಕೊಟ್ಟು ಇಟ್ಟಿದ್ದೇನೆ, ನಿನ್ನ ಮೇಲಿನ ಆಸೆಯಿಂದ. ನೀನು ದೊಡ್ಡವಳಾದ ಮೇಲೆ ನಿನ್ನನ್ನು ನನಗೆ ಊವಂಬಯಂಜ್ ಮಾಡಲು ಕೊಡಬೇಕೆಂದೂ ಹಿರಿಯವ್ವೆಗೆ ಹೇಳಿದ್ದೆ. ಆಗಲೇ ಅವರು ನಿನ್ನನ್ನು ನನಗೆ ಊವಂಬಯಜ್ಞ್‌ಗೆ ಕೊಟ್ಟರೆ ಬೇರಾರಿಗೂ ಮದುವೆಮಾಡಿ ಕೊಡಲು ತೊಡಕಾಗುತ್ತದೆ ಎಂದು ಅಡ್ಡಿ ಹೇಳಿದ್ದರು. ನಿನ್ನನ್ನು ನನಗೆ ಕೊಡದೆ ಹೋದರೆ ಅವರನ್ನೂ ನಿನ್ನನ್ನೂ ನಾನು ಕೊಂದು ಹಾಕುತ್ತೇನೆ ಎಂದು ಹೇಳಿದ್ದೆ. ಅದಕ್ಕೆ ಕುಂಬೆಯೆಂದಳು – ಪೆರುಮಲಯ ಕೋಮ ಪಣಿಕ್ಕರೇ, ಕೇಳಿ! ನೀವು ಇಂದು ಮುಸ್ಸಂಜೆಯ ಹೊತ್ತಿಗೆ ಬನ್ನಿ. ನನ್ನ ಅಂಗಸಂಗ ಮಾಡಿ ಹಿಂದಿರುಗಿ ಹೋಗಿ! ಅದನ್ನು ಕೇಳಿ ಪಣಿಕ್ಕರ್ ನಗುತ್ತ ಹೊರಟು ಹೋದ. ಕುಂಬೆ ಬೇಗ ಬೇಗ ಮುಂದೆ ಹೋದಳು. ಆಗ ಪನ್ಯಂಕರ ಮನೆಯ ಅರಸು ಕುಂಬೆಯನ್ನು ಕಣ್ಣಾರೆ ಕಂಡ. ಅರಸು ಹೇಳಿದ – ಪನ್ಯಂಕರ ಇಲ್ಲಂನ ಕುಂಞಿಕುಂಬೆ! ಇಂದು ಸಂಜೆ ಹೊತ್ತಿಗೆ ನಿಮ್ಮ ಮನೆಗೆ ನಾನು ಬರುತ್ತೇನೆ. ನಿನ್ನನ್ನು ಊವಂ ಬಯಂಜ್ ಮಾಡಿ ಹಿಂತಿರುಗುತ್ತೇನೆ. ನಿಮ್ಮ ಮನೆಯ ಹಿರಿಯವ್ವೆಗೆ ಹೇಳು. ನೀನು ನನಗೆ ಇಂದು ಸಿಗದೆ ಹೋದರೆ ನಿಮ್ಮ ಮನೆಗೆ ನಾನು ಬೆಂಕಿಕೊಡಿಸಿ ಅವಳನ್ನೂ ನಿನ್ನನ್ನೂ ಕೊಂದು ಬಿಡುತ್ತೇನೆ. ಕುಂಬೆ ಕೂಡಲೆ ಅಂದಳು – ಪನ್ಯಂಕರ ಇಲ್ಲಂನ ಅರಸರೇ! ಸಂಜೆ ಹೊತ್ತಾಗುವಾಗ ನೀವು ಅಲ್ಲಿಗೆ ಬಂದುಬಿಡಿ. ಊವಂ ಬಯಂಜ್ ಮಾಡಿ ಮರಳಿರಿ! ಅದನ್ನು ಕೇಳಿ ಅರಸು ಬೇಗನೆ ಹೊರಟುಹೋದ. ಕುಂಬೆಯೂ ಬೇಗ ಬೇಗನೆ ಮುಂದೆ ಹೋದಳು. ಅವಳು ಹಾಗೆ ಹೋಗುವಾಗ ಪರಂಬತ್ತ್ ಮನೆಯ ಪೋಕರ್ ಅವಳನ್ನು ಕಣ್ಣಾರೆ ಕಂಡ. ಓಡಿ ಬಳಿ ಬಂದು

ಅವಳಿಗೆ ಹೇಳಿದ – ಪನ್ಯಂಕರ ಮನೆಯ ಕುಂಞಿಕುಂಬೆ! ನಿನ್ನನ್ನು ಕಂಡೇ ನಾನು ತುಂಬ ಹಣವನ್ನೂ ಸಾಮಾನುಗಳನ್ನೂ ನಿನ್ನ ತಾಯಿಗೆ ಕೊಟ್ಟುದು. ಅವರು ತುಂಬ ಹಣ ನನಗೆ ಕೊಡಬೇಕಾಗಿದೆ. ನಾನು ಅದನ್ನು ಇಷ್ಟುಕಾಲ ಕೇಳಿಲ್ಲ. ನನಗೆ ನಿನ್ನ ಅಂಗಸಂಗ ಸಿಕ್ಕರೆ ಸಾಕು. ಅಂಗಸಂಗ ಮಾಡಲು ನೀನು ಸಿಗದೇ ಹೋದರೆ ನಿನ್ನನ್ನೂ ನಿನ್ನ ಅಮ್ಮನನ್ನೂ ಆಮೇಲೆ ಜೀವಸಹಿತ ಬಿಡುವವನಲ್ಲ. ಅದನ್ನು ಕೇಳಿದ ಕುಂಬೆ ನಗುತ್ತ ಹೇಳಿದಳು – ಪರಂಬತ್ತ್ ಮನೆಯ ಪೋಕರೇ, ಕೇಳಿ! ಇಂದು ಸಂಜೆಯ ಹೊತ್ತಿಗೆ ನೀವು ಪನ್ಯಂಕರ ಮನೆಗೆ ಬಂದುಬಿಡಿ. ಬಂದು ನನ್ನ ಅಂಗಸಂಗಮಾಡಿ ಹೊರಟು ಬಿಡಿ. ಕೂಡಲೇ ಪೋಕರನೆಂದ – ಪನ್ಯಂಕರ ಮನೆಯ ಕುಂಞಿಕುಂಬೆ! ನಾನೊಂದು ಸುದ್ದಿ ಕೇಳಿದೆ. ನೀನು ಯಾರನ್ನೂ ಊವಂ ಬಯಂಜ್ ಮಾಡಲು ಬಿಡುವುದಿಲ್ಲವಂತೆ! ಅದಕ್ಕೆ ಕುಂಬೆಯೆಂದಳು – ಪರಂಬತ್ತ್ ಮನೆಯ ಪೋಕರೇ, ಕೇಳಿ! ಹೆಚ್ಚು ಹೇಳುವುದು ಯಾಕೆ? ನನಗೆ ತಡವಾಗುತ್ತಿದೆ. ನಿಮಗೆ ಇಂದು ನನ್ನ ಅಂಗಸಂಗವಾದರೆ ಸಾಕಲ್ಲ? ಅದನ್ನು ಕೇಳಿದ ಪೋಕರ್ ಅಲ್ಲಿಂದ ಬೇಗನೆ ಹೊರಟುಹೋದ. ಕುಂಬೆಯೂ ಬೇಗನೆ ಹೊರಟು ಹೋಗಿ ನಾಲ್ಕು ಕೋಣೆಗಳಲ್ಲಿ ನಾಲ್ಕು ಹಾಸಿಗೆಗಳನ್ನು ಬಿಡಿಸಿಟ್ಟಳು. ವೀಳ್ಯದ ಹರಿವಾಣಗಳನ್ನಿಟ್ಟಳು. ನಾಲ್ಕು ಕೋಣೆಗಳಲ್ಲಿ ಪೀಕದಾನಿಗಳನ್ನೂ ನಾಲ್ಕು ಕೋಣೆಗಳ ಬಾಗಿಲುಗಳಿಗೆ ಬೀಗಗಳನ್ನೂ ಸಿದ್ಧಪಡಿಸಿ ಕೊಂಡಳು.

ಹೊತ್ತು ಕಂತಿತು. ಮುಸ್ಸಂಜೆ ಕವಿಯುತ್ತಿದ್ದಂತೆ ಚೆರುಕುನ್ನು ಚಂದು ಅಲ್ಲಿಗೆ ತಲಪಿದ. ಚಂದು ತಲಪಿದಾಗ ಕುಂಬೆಯೇ ಬಂದು ಕರೆದೊಯ್ದಳು. ಮಂಚದ ಮೇಲೆ ಕುಳ್ಳಿರಿಸಿದಳು. ಬಳಿಕ ಚಂದುವಿಗೆಂದಳು – ಚೆರುಕುನ್ನ್‌ನ ಪ್ರಿಯ ಚಂದು! ನಾನಿನ್ನೂ ಊಟ ಮಾಡಿಲ್ಲ. ನಾನು ಬೇಗ ಊಟಮಾಡಿಬರಲೆ? ಅಷ್ಟು ಹೊತ್ತು ಇಲ್ಲಿ ಕುಳಿತಿರಿ. ನಿಮ್ಮನ್ನು ಯಾರೂ ಕಾಣುವುದು ಬೇಡ. ನಾನೇ ಬಾಗಿಲು ಹಾಕಿಕೊಂಡು ಬಿಡುತ್ತೇನೆ. ಅದಕ್ಕೆ ಚಂದುವೆಂದ – ಮಾತು ಆಮೇಲೆ ಆಡೋಣ. ಬೇಗ ಊಟ ಮಾಡಿ ಇತ್ತ ಬಾ. ಕುಂಬೆ ಬೇಗ ಅಲ್ಲಿಂದ ಹೋದಳು. ಅಷ್ಟರಲ್ಲಿ ಪೆರುಮಲಯ ಕೋಮಪಣಿಕ್ಕರ್ ತಲಪಿದ. ಅವನು ಅಲ್ಲಿ ತಲಪಿದಾಗ ಕುಂಬೆ ಅವನನ್ನು ಬೇಗ ಇನ್ನೊಂದು ಕೋಣೆಗೆ ಕರೆದೊಯ್ದಳು. ಮಂಚದ ಮೇಲೆ ಕುಳ್ಳಿರಿಸಿದಳು. ಬಳಿಕ ಅವನಲ್ಲಿ ಹೇಳಿದಳು– ಪೆರುಮಲಯ ಕೋಮಪಣಿಕ್ಕರೆ ಕೇಳಿರಿ! ನಾನು ಊಟಮಾಡಿ ಬಂದು ಬಿಡಲೆ? ನಾನು ಊಟಮಾಡಿ ಬರುವವರೆಗೆ ನೀವು ಮಂಚದಲ್ಲೆ ಕುಳಿತಿರಿ. ನಿಮ್ಮನ್ನು ಯಾರೂ ಕಾಣುವುದು ಬೇಡ. ಬಾಗಿಲನ್ನು ನಾನೇ ಹಾಕಿಕೊಂಡು ಬಿಡುತ್ತೇನೆ. ಅವಳು ಬಾಗಿಲು ಭದ್ರಪಡಿಸಿ ಹೊರಟುಹೋದಳು. ಅವಳು ಅಲ್ಲಿ ಹಾಗಿರಲು ಪನ್ಯಂಕರ

ಮನೆಯ ಅರಸು ಬೇಗ ಬೇಗನೆ ಬಂದ. ಕುಂಬೆ ಅವನನ್ನು ಪಡುಮನೆಗೆ ಕರೆದುಕೊಂಡು ಹೋಗಿ ಕುಳಿತುಕೊಳ್ಳಿಸಿದಳು. ಬಳಿಕ ಅವನಿಗೆಂದಳು – ಪಯ್ಯಂಕರ ಇಲ್ಲಂನ ಅರಸರೇ! ನಾನೀಗ ಬೇಗ ಬಂದು ಬಿಡುತ್ತೇನೆ. ಆಮೇಲೆ ಊವಂ ಬಯಂಜ್ ಮಾಡಿದರಾಗದೆ? ಅದಕ್ಕೆ ಅರಸನೆಂದ – ಬೇಗ ಹೋಗಿ ಬಾರೇ ಹುಡುಗಿ! ಕುಂಬೆ ಹೊರಹೋಗಿ ಬಾಗಿಲನ್ನು ಎಳೆದು ಹಾಕಿಕೊಂಡಳು. ಅವಳು ಅಲ್ಲಿ ಹಾಗೆ ನಿಂತಿರಲು ಪರಂಬತ್ತ್ ಮನೆಯ ಪೋಕರೆ ಬೀಸು ಹೆಜ್ಜೆ ಹಾಕುತ್ತ ಬಂದು ತಲಪಿದ. ಅವನನ್ನೂ ಒಂದು ಜಗಲಿಗೆ ಕರೆದುಕೊಂಡು ಹೋಗಿ ಕುಳಿತುಕೊಳ್ಳಿಸಿದಳು. ಪೋಕರನೆಂದ – ಹೊತ್ತು ಚೆನ್ನಾಗಿ ಮುಸ್ಸಂಜೆಯಾಗಿದೆ. ಬಾಗಿಲನ್ನು ಸರಿಯಾಗಿ ಮುಚ್ಚು. ನಾವು ಬೇಗ ಅಂಗಸಂಗ ಮಾಡೋಣ. ಕುಂಬೆ ಅದಕ್ಕೆಂದಳು– ಪರಂಬತ್ತ್ ಮನೆಯ ಪೋಕರೇ ಕೇಳಿ! ನಾನು ಊಟಮಾಡಿ ಬಂದು ಬಿಡಲೆ? ಆಮೇಲೆ ಸಂಗ ಮಾಡಿದರಾಗದೆ? ನಿಮ್ಮನ್ನು ಯಾರೂ ಇಲ್ಲಿ ಕಾಣಬಾರದು. ನಾನು ಬಾಗಿಲು ಹಾಕಿ ಬಿಡುತ್ತೇನೆ. ಹಾಗೆಯೇ ಅವಳು ಬಾಗಿಲು ಹಾಕಿದಳು. ಬಳಿಕ ಅಮ್ಮನಿಗೆಂದಳು – ಪನ್ಯಂಕರ ಮನೆಯ ಹೆತ್ತವ್ವ! ನಿನ್ನ ಕಾರಣದಿಂದ ಇದೀಗ ಸರ್ವನಾಶ ಆಗಲಿದೆ. ಹಾಗೆ ಹೇಳಿದ ಕುಂಬೆಯು ಇನ್ನಷ್ಟು ರಾತ್ರೆಯಾದಾಗ ತಾಯಿಯನ್ನು ಹಿಡಿದು ಹೊರಗೆ ಮಾಡಿ ಮನೆಗೆ ಬೆಂಕಿಕೊಟ್ಟಳು. ಮನೆಗೆ ಬೆಂಕಿಬಿದ್ದಾಗ ಒಳಗಿದ್ದ ನಾಲ್ಕು ಮಂದಿಯೂ ಹಾಹಾಕಾರಮಾಡಿದರು. ನಾಲ್ಕು ಜನರೂ ಸುಟ್ಟು ಕರಿಕಲಾಗಿ ಸತ್ತು ಹೋದರು.

ಸನ್ನಿವೇಶವು ಹಾಗೆ ನಿರ್ಮಾಣವಾಗಲು ತಚ್ಚೋಳಿ ಒದೇನ ಅಲ್ಲಿ ಕಾಣಿಸಿಕೊಂಡ. ಅವನು ಬಂದು ಮೆಟ್ಟಿಲೇರಿದ. ಅವನು ಕುಂಬೆಯಲ್ಲಿ ಕೇಳಿದ – ಪನ್ಯಂಕರ ಮನೆಯ ಕುಂಬೆ! ಎಲ್ಲವೂ ಸತ್ತುವೋ ಕುಂಬೆ? ನಿನ್ನ ದುಃಖ ಮಾಯವಾಯಿತಲ್ಲವೆ? ಅದಕ್ಕೆ ಕುಂಬೆ ಎಂದಳು– ತಚ್ಚೋಳಿಯ ಕಣ್ಮಣಿ ಬಾಲಒದೇನ! ನನಗೆ ಇನ್ನು ಸಣ್ಣ ಮನೆ ಮಾತ್ರ ಉಳಿದಿದೆ. ಇನ್ನು ನಾನು ಅಲ್ಲಿ ಉಳಕೊಳ್ಳುತ್ತೇನೆ. ಇನ್ನು ಆ ಮನೆ ನಿಮ್ಮದೇ. ನೀವು ಅಲ್ಲಿಗೆ ಬರಬೇಕು. ಎಲ್ಲರೂ ಅಲ್ಲಿಗೆ ಹೋದರು. ಒದೇನನೂ ಅಲ್ಲಿ ಸೇರಿಕೊಂಡ. ಸತ್ತವರ ಬೂದಿ ಎತ್ತಿಸಿದರು. ಅವರ ಸಾವು ಬೊಜ್ಜಗಳನ್ನು ಮಾಡಿಸಿದರು. ಕುಟ್ಟಿಪುರಂನ ಅರಸನೂ ಕೊಟ್ಟಯಂನ ಅರಸನೂ ಪುರಮೇರಿ ಅರಮನೆಯ ಅರಸರೂ ಚಿರಕ್ಕಲ್ ಅರಮನೆಯ ಅರಸನೂ ಎಲ್ಲರೂ ಈ ಸುದ್ದಿಯನ್ನು ಕೇಳಿ ನಕ್ಕು ಬಿಟ್ಟರು. ಎಲ್ಲ ಆದ ಬಳಿಕ ಒದೇನನೆಂದ – ಪನ್ಯಂಕರ ಮನೆಯ ಕುಂಞಿಕುಂಬೆ! ನೀನು ಮಾಡಿದ್ದೆಲ್ಲ ಚೆನ್ನಾಯಿತು. ಹಾಗೆ ಸರಸವಾಡುತ್ತ ಅವರು ಅಲ್ಲಿ ಸುಖವಾಗಿದ್ದರು.

ಅವನಿಗೆ ಒಂದು ಸ್ನಾನಕ್ಕೆ ಬೇಕಾದ ಎಣ್ಣೆ ಕೊಡಿಸಿರಿ

ತಚ್ಚೋಳಿ ಕಣ್ಮಣಿ ಬಾಲಒದೇನ ಒಮ್ಮೆ ಕೋಝಿಕ್ಕೋಡ್‌ನ ಅಂಗಡಿಗೆ ಹೊರಟ. ರೇಶ್ಮೆ, ರೇಶ್ಮೆಯ ನೂಲು, ತನ್ನ ಖಡ್ಗಕ್ಕೆ ಅಲಂಕಾರ ಸಾಧನಗಳಾದ ಉಮ್ಮ–ಚೆಂಡ್–ಕೈಪ್ಪಡತ್ತಂಡ್(ಕೈತಳಪಟ್ಟಿಕೆ?) – ಹಗ್ಗ – ಹೀಗೆ ಏಳುನೂರು ಹಣದ ಸಾಮಗ್ರಿಗಳನ್ನು ಅವನು ಕೊಂಡುಕೊಳ್ಳಬೇಕಾಗಿತ್ತು. ಹೊಚ್ಚಹೊಸವಸ್ತುಗಳು ಅವನಿಗೆ ಬೇಕಾಗಿದ್ದುವು. ಕೋಝಿಕ್ಕೋಡಲ್ಲಿ ಅಂಬುಸೆಟ್ಟಿಯಲ್ಲಿ ಇವೆಲ್ಲ ಲಭ್ಯ. ಸೆಟ್ಟಿಯ ಅಂಗಡಿಗೆ ಹೋಗಬೇಕು. ಒದೇನ ತನ್ನ ಸಹಚರ ಕಂಡಾಚ್ಚೇರಿ ಚಾಪ್ಪನನ್ನೂ ಕರೆದುಕೊಂಡ. ಹುಲಿಯ ಚಿತ್ರ ಕೆತ್ತಿದ ಕುಂತ ಹಿಡಿದ ಚಾಪ್ಪ ಮುಂದೆ ಹಿಂದೆ ಒದೇನ – ಇಬ್ಬರೂ ಒಂದಾಗಿ ಹೊರಟರು. ಅವರು ಪುರಮೇರಿ ಅರಮನೆಯ ಮುಂದಿನ ತಗ್ಗಿನಲ್ಲಿ ಸಾಗುತ್ತಿದ್ದರು. ಆಗ ಪುರಮೇರಿ ಅರಸ ಮೊಗಸಾಲೆಯ ಮೇಲಿನ ಮಾಳಿಗೆಯಲ್ಲಿ ನಿಂತುಕೊಂಡಿದ್ದವನ ಕಣ್ಣೊಂದರ ದೃಷ್ಟಿಗೆ ಒದೇನ ಬಿದ್ದ. ಒದೇನನನ್ನು ಕಂಡು ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕನಿಗೆ ಅರಸ ಆಜ್ಞಾಪಿಸಿದ – ತಚ್ಚೋಳಿ ಒದೇನ ನಮ್ಮ ಹೆಬ್ಬಾಗಿಲ ಮುಂದಿನಿಂದ ಸಾಗುತ್ತಿದ್ದಾನೆ. ಅವನನ್ನು ಇತ್ತ ಕರೆಯಬೇಕಲ್ಲ! ಅದನ್ನು ಕೇಳಿದ ಕುಂಞಿಕುಂಕ ಮಾಳಿಗೆ ಮೆಟ್ಟಿಲಿಳಿದು ಹೋದ. ಹೋಗಿ ಒದೇನನನ್ನು ಕರೆದ– ತಚ್ಚೋಳಿ ಒದೇನ! ಪುರಮೇರಿ ಅರಸು ನಿನ್ನನ್ನು ಈಗಲೇ ಬರುವಂತೆ ಕರೆಯುತ್ತಿದ್ದಾರೆ. ಒದೇನ ಕೂಡಲೆ ಮೆಟ್ಟಲೇರಿ ಹೋದ. ಅರಸನನ್ನು ಕಣ್ಣಾರೆ ಕಂಡು ಅರಸನ ತಿರುವಡಿಗೂ ಮುಡಿಗೂ ಸಿರಿಯೊಡಲಿಗೂ ಗೌರವದಿಂದ ಎರಡು ಕೈಗಳನ್ನು ಜೋಡಿಸಿ ಹತ್ತು ಬೆರಳ ವಂದನೆ ಮಾಡಿದ. ಅರಸ ಕೂಡಲೆ ಹೇಳಿದ – ತಚ್ಚೋಳಿ ಕುಂಞ್ಯೋದೇನ! ಯಾವ ಕಡೆ ಹೊರಟೆ? ಒದೇನ ಉತ್ತರಿಸಿದ – ಪುರಮೇರಿಯ ಒಡೆಯರೇ! ಕುಂಭ

ಮಾಸ ಹತ್ತರಂದೂ ಹನ್ನೊಂದರಂದೂ ಮಾಹೆಯಲ್ಲಿ ಅಂಕಕಳರಿ ನಡೆಯುವುದಕ್ಕಿದೆ. ಅಂಕತ್ತುಳುನಾಡನ್ ಕಣ್ಣನೊಂದಿಗೆ ನನ್ನ 'ಪೊಯ್ತ್' ನಿಶ್ಚಯ ವಾಗಿದೆ. ರೇಶ್ಮೆಯಾಗಿಯೂ ರೇಶ್ಮೆಯ ನೂಲಾಗಿಯೂ ಖಡ್ಗಕ್ಕೆ ಉಮ್ಮವಾಗಿಯೂ ಚೆಂಡಾಗಿಯೂ ಕೈಪ್ಪಡತ್ತಂಡ್‌ಗೆ ಹಗ್ಗವಾಗಿಯೂ ಏಳುನೂರು 'ಹಣ'ದ ವಸ್ತುಗಳು ಬೇಕಾಗಿವೆ. ಹೊಚ್ಚಹೊಸವೇ ನನಗೆ ಬೇಕು. ಅದಕ್ಕಾಗಿ ಕೋಝಿಕ್ಕೋಡ್ ನಗರದ ಅಂಬುಸೆಟ್ಟಿಯ ಅಂಗಡಿಗೆ ಹೋಗುತ್ತಿದ್ದೇನೆ. ಅದನ್ನು ಕೇಳಿದ ಅರಸ ಕೂಡಲೇ ಆದೇಶವಿತ್ತ – ತಚ್ಚೋಳಿ ಒದೇನ! ಕೋಝಿಕ್ಕೋಡು ನಗರದಲ್ಲಿ ನೀನು ಹೇಳುವ ಅಂಬುಸೆಟ್ಟಿ ತುಂಬ ನಿಷ್ಠುರಿ ಎಂದು ಕೇಳಿದ್ದೇವೆ. ನೀನು ಆ ನಗರಕ್ಕೆ ಹೋಗಬೇಡ. ನೀನು ಅಲ್ಲಿಗೆ ಹೋದರೆ ನಗರವೇ ಧ್ವಂಸವಾದೀತು! ನೀನಾದರೋ ಅಧಿಕಕೋಪಿ. ಹಾಗಾಗಿ ನೀನು ಅಲ್ಲಿಗೆ ಹೋಗುವುದು ಬೇಡ. ವೆನ್ನಪ್ಪಾಲನ್ ಕೋರೊತ್ತ್ ಕುಂಕನನ್ನು ನಾನು ಹೇಳಿ ಕಳುಹುತ್ತೇನೆ. ಅರಸ ವೆನ್ನಪ್ಪಾಲನಿಗೆಂದ – ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕಾ! ಕೋಝಿ ಕ್ಕೋಡ್ ನಗರಕ್ಕೆ ನೀನು ಹೋಗಬೇಕು. ಅಲ್ಲಿ ಅಂಬು ಚೆಟ್ಟಿಯ ಅಂಗಡಿಗೆ ಹೋಗಬೇಕು. ರೇಶ್ಮೆಯಾಗಿಯೂ ರೇಶ್ಮೆಯನೂಲಾಗಿಯೂ ಕೈಪ್ಪಡತ್ತಂಡ್‌ಗೆ ಹಗ್ಗವಾಗಿಯೂ ಖಡ್ಗಕ್ಕೆ ಉಮ್ಮ ವಾಗಿಯೂ ಚೆಂಡಾಗಿಯೂ ಏಳ್ನೂರು ಹಣದ ಸಾಮಾನುಗಳನ್ನು ಕೊಂಡು ಎರಡು ದಿನ ಅಲ್ಲಿದ್ದು ಮೂರರಂದು ನೀನು ಇಲ್ಲಿಗೆ ತಲಪತಕ್ಕದ್ದು. ಅದನ್ನು ಕೇಳಿದ ಕುಂಞಿಕುಂಕನು ಹೇಳಿದ – ಪುರಮೇರಿ ಆಳುವ ಅರಸರೇ! ನನ್ನ ಧನಿ, ನನ್ನ ಒಡೆಯರೇ! ನಾನು ಆ ನಗರಕ್ಕೆ ಹೋಗುತ್ತೇನೆ. ಆದರೆ ಹಾಗೆ ಹೋಗಬೇಕಾದರೆ ನನಗೆ ತಚ್ಚೋಳಿ ಒದೇನನು ಉರ್ಮಿಯನ್ನು ಕೊಡಬೇಕು. ಕೂಡಲೆ ಒದೇನನೆಂದ – ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕಾ! ನನ್ನ ಉರ್ಮಿ ಖಡ್ಗವನ್ನು 'ಪಡುಕೋಣೆ' ಯಿಂದ ಹೊರಗೆಲ್ಲಾದರೂ ಇಳಿಸಿದರೆ ಅದು ರಕ್ತವನ್ನು ಕಂಡೇ ಮರಳಬೇಕು! ಕುಂಕಾ! ನೀನು ನಗರವನ್ನು ಹಾಳುಮಾಡಿಬಿಡಬೇಡ! ಆದರೂ ಒದೇನ ಉರ್ಮಿಯನ್ನು ತೆಗೆದು ಕುಂಕನಿಗೆ ಕೊಟ್ಟ. ಕುಂಕನೂ ಸಿಂಗರಿಸಿ ಕೊಂಡು ಒದೇನನ ಉರ್ಮಿಯನ್ನು ತೆಗೆದು ಕೊಂಡು ಎಲ್ಲೂ ನಿಲ್ಲದೆ ನಡೆದ.

ಹಾಗೆ ನಡೆಯುತ್ತ ಮಡಕ್ಕೇರಿ ಕೋಟೆಯ ಹೆಬ್ಬಾಗಿಲ ಮುಂದಿನ ತಗ್ಗಿನಲ್ಲಿ ಕುಂಕನು ಹೋಗುತ್ತಿದ್ದಾಗ ಮಡಕ್ಕೇರಿ ಕೋಟೆಯನ್ನಾಳುವ ಹಿರಿಯಮ್ಮ ಅಳುತ್ತ ಹೀಗೆಂದಳು – ನನ್ನ ಮಗ ಕುಂಞಿಕಣ್ಣನು ಇಂದೇ ತೀರಿಕೊಂಡ. ಜಂತಿ (ಅಯಕ್ಕೋಲ್ ಮ.) ಯಲ್ಲಿ (ಬಟ್ಟೆ ಒಣಗಲು ಹಾಕುವ ಬೆತ್ತದ/ಸಪುರ ಬಿದಿರಿನ ಉದ್ದನೆಯ ಕೋಲು. ತು. ಅಜಕ್ಕೋಲು) ನೇತಾಡಿಸಿದ ಅವನ ಉರ್ಮಿ ಯೋಗ್ಯನಾದ ಒಬ್ಬ ವೀರನನ್ನು ಕಂಡರೆ ಅಲ್ಲಿಂದಲೇ ಹೊಡಚಲು ತೊಡಗುತ್ತದೆ. ಹಾಗೆ ಯಾರಾದರೊಬ್ಬ

ವೀರನು ಈ ದಾರಿಯಾಗಿ ಬರುವುದಿದ್ದರೆ ನನ್ನ ಮನೆಗೆ ಬಂದು ಒಂದರ್ಧ ವೀಳ್ಯವನ್ನಾದರೂ ತಿಂದುಹೋಗಲಿ. ಅದನ್ನು ಕೇಳಿದ ಕುಂಞಿಕುಂಕನು ಕೂಡಲೇ ಮೆಟ್ಟಿಲೇರಿ ಮನೆಯನ್ನು ಪ್ರವೇಶಿಸಿದ. ಹಾಗೆ ಪ್ರವೇಶಿಸಿ ಆಕೆಯ ಅಳಲಿನ ತೊರೆಯನ್ನು ಕಾಲುಕುತ್ತಿ ನೋಡಿದ. ಆಕೆ ತನ್ನ ಮಗ ಕಣ್ಣನು ತೀರಿಕೊಂಡದ್ದನ್ನೂ ಅವನ ಉರ್ಮಿ ಹೊಡಚಲು, ತಂತಾನೆ ಕಂಪಿಸಲು ಆರಂಭಿಸುವ ವಿಚಾರವನ್ನೂ ಇನ್ನೊಮ್ಮೆ ವಿವರವಾಗಿ ತಿಳಿಸಿದಳು. ಆಗ ಕುಂಕನೆಂದ – ಮಡಕ್ಕೇರಿ ಕೋಟೆಯನ್ನಾಳುವ ಹಿರಿಯಮ್ಮ! ನಾನೊಮ್ಮೆ ಆ ಉರ್ಮಿಯನ್ನು ನೋಡಬಹುದೆ? ಆಕೆ ಅವನನ್ನು ತೆಂಕು ಕೋಣೆಯ ಬಾಗಿಲಿಗೆ ಒಯ್ದಳು. ಅದರ ಬಾಗಿಲು ತೆರೆದಳು. ಕುಂಕನು ಉರ್ಮಿಯನ್ನು ನೋಡಲು ಅದು ಅಯಕ್ಕೋಲ್‌ನ ಮೇಲಿನಿಂದ ತಾನಾಗಿ ಕಂಪಿಸುತ್ತಿತ್ತು. ಹಾಗೆ ಕಂಪಿಸುತ್ತ ಅದು ಇತ್ತಲೇ ನೆಗೆಯಿತು. ಉರ್ಮಿ ಹಾಗೆ ಮೇಲೆ ಹರಿದುಬೀಳಲು ಅದನ್ನು ಕುಂಞಿಕುಂಕ ಹಾರಿಹಿಡಿದ. ಕುಂಞಕುಂಕನೆಂದ – ಮಡಕ್ಕೇರಿ ಕೋಟೆಯನ್ನಾಳುವ ಹಿರಿಯಮ್ಮ! ಈ ಉರ್ಮಿಯನ್ನು ನನಗೆ ಕೊಡಬೇಕು. ಅದಕ್ಕೆ ಆಕೆಯೆಂದಳು – ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕಾ! ನಿನಗೆ ಈ ಉರ್ಮಿಯನ್ನು ಕೊಡಬೇಕಾದರೆ ಅದಕ್ಕೆ ಬೇರೆಯೇ ಹಣವನ್ನು ಒಡ್ಡಬೇಕು. ಅದನ್ನು ಕೇಳಿದ ಕುಂಞಿಕುಂಕ ಉರ್ಮಿಗೆ ಬೇರೆಯೇ ಹಣವನ್ನು ಒಡ್ಡಿದ. ಆಗ ಆಕೆಯೆಂದಳು – ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕಾ! ಕೋಝಿಕ್ಕೋಡು ನಗರಕ್ಕೆ ನೀನೇನಾದರೂ ಹೋಗುವುದಿದ್ದರೆ ಆ ನಗರವನ್ನು ನೀನು ಹಾಳುಗೆಡವಿಬಿಡಬೇಡ ಕುಂಕಾ! ಅದಕ್ಕೆ ಅವನೆಂದ – ನಾನು ಹಾಗೇನೂ ಮಾಡುವವನಲ್ಲ. ಬೇಗ ಹೋಗಿ ಬೇಗ ಬಂದು ಬಿಡುತ್ತೇನೆ.

ಕುಂಞಿಕುಂಕ ಪಯಣ ಮುಂದುವರಿಸಿದ. ಕೋಝಿಕ್ಕೋಡು ನಗರದಲ್ಲಿ ಅವನು ಅಂಬು ಸೆಟ್ಟಿಯ ಅಂಗಡಿಗೆ ಹೋದ. ಅಂಬುಸೆಟ್ಟಿ ಅವನಲ್ಲಿ ಕೇಳಿದ – ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕಾ! ನೀನು ಈ ಕಡೆ ಯಾಕೆ ಬಂದೆ? ಕುಂಕನು ಉತ್ತರವಿತ್ತ – ಕೋಝಿಕ್ಕೋಡ್‌ನ ಅಂಬುಸೆಟ್ಟಿ! ಬೇರೇನೂ ಅಲ್ಲ, ರೇಶ್ಮೆಯಾಗಿಯೂ ರೇಶ್ಮೆಯ ನೂಲಾಗಿಯೂ ಖಡ್ಗಕ್ಕೆ ಉಮ್ಮ ವಾಗಿಯೂ ಚೆಂಡಾಗಿಯೂ ಕೈಪ್ಪಡತ್ತಂಡಾಗಿಯೂ ಹಗ್ಗವಾಗಿಯೂ ಏಳ್ನೂರು ಹಣದ ವಸ್ತುಗಳು ಬೇಕು. ಹೊಚ್ಚ ಹೊಸ ವಸ್ತುಗಳೇ ನನಗೆ ಬೇಕು. ಕೂಡಲೇ ಅಂಬುಸೆಟ್ಟಿಯೆಂದ – ವೆನ್ನಪ್ಪಾಲನ್ ಕುಂಞಿಕುಂಕಾ! ನಾಳೆಯ ದಿವಸ ಕೋಝಿಕ್ಕೋಡು ಬಂದರಿಗೆ ಹಡಗು ಬಂದು ತಂಗುತ್ತದೆ. ಅನೇಕ ಸರಕುಗಳು ಅದರಲ್ಲಿ ಬರುವುದಕ್ಕಿದ್ದು ಇಲ್ಲಿಗೆ ತಲಪಲಿವೆ. ನಾಡಿದ್ದು ನೀನು ಹೇಳುವ ಎಲ್ಲ ಸರಕುಗಳನ್ನೂ ಒಯ್ಯಲು ಸಾಧ್ಯವಾದೀತು. ಆತ ಮತ್ತೂ ಹೇಳಿದ – ವೆನ್ನಪ್ಪಾಲನ್ ಕುಂಞಿಕುಂಕಾ! ನೀನು ಅಷ್ಟರವರೆಗೆ ಉಪವಾಸ ಬೀಳಬೇಡ. ಕೋಯಿಕ್ಕಾಲ್ ಮನೆಯಲ್ಲಿ ಅಕ್ಕಿಪಡಿ

ಕೊಟ್ಟರೆ ಹೋಗಿ ಅಲ್ಲಿ ರಾತ್ರೆಯೂಟ ಮಾಡಬಹುದು. ಅದಕ್ಕೆ ಕುಂಕನೆಂದ – ಕೋಝಿಕ್ಕೋಡ್‌ನ ಅಂಬು ಸೆಟ್ಟಿ! ನಾನು ಅಕ್ಕಿ ಕೊಟ್ಟು ಕೋಯಿಕ್ಕಾಲಲ್ಲಿ ರಾತ್ರೆಯೂಟ ಮಾಡುವವನಲ್ಲ. ನಾನು ರಾತ್ರೆ ಅಂಗಡಿಯಲ್ಲೆ ಉಪವಾಸ ಮಲಗುತ್ತೇನೆ. ಅದಕ್ಕೆ ಅಂಬುಸೆಟ್ಟಿ ಎಂದ – ವೆನ್ನಪ್ಪಾಲನ್ ಕುಂಞಿಕುಂಕಾ! ಹಾಗಾದರೆ ನನ್ನ ಅಂಗಡಿಯಲ್ಲಿ ನೂರೊಂದು ಚಿಪ್ಪುಳ್ಳ ರಸಬಾಳೆಗೊನೆ ಕಟ್ಟಿತೂಗಿದ್ದೇನೆ. ನೀನು ಅದರಿಂದ ಬಾಳೆಹಣ್ಣು ಕೀಳಬಾರದು. ಅದಕ್ಕೆ ಕುಂಕನೆಂದ –ಕೋಝಿಕ್ಕೋಡ್‌ನ ಅಂಬುಸೆಟ್ಟಿ! ನಾನು ಆಟಕ್ಕಾದರೂ ಒಂದು ಹಣ್ಣು ಕಿತ್ತೇನು. ಅದಕ್ಕೆ ಅಂಬುಸೆಟ್ಟಿಯೆಂದ–ವೆನ್ನಪ್ಪಾಲನ್ ಕುಂಞಿಕುಂಕಾ! ನೀನು ಆಟಕ್ಕಾದರೂ ಒಂದು ಹಣ್ಣು ಕಿತ್ತೆಯಾದರೆ ನಾನು ಉಳಿದ ಹಣ್ಣಿನಿಂದಲೂ ದಿಂಡಿನಿಂದಲೂ ಆಟಕ್ಕಾದರೂ ನಿನ್ನನ್ನು ಹೊಡೆದೇನು. ಹಾಗೆ ನಗು ನಗುತ್ತಲೆ ಅವನಿಗೊಂದು ಏಟು ಹೊಡೆದ. ವೆನ್ನಪ್ಪಾಲನ್ ಕುಂಞಿಕುಂಕ ಉರ್ಮಿ ತೆಗೆದುಕೊಂಡು ಅಂಬುಸೆಟ್ಟಿಯನ್ನು ಕಡಿದ. ಕೋಝಿಕ್ಕೋಡನ್ ಅಂಬುಸೆಟ್ಟಿ ರಾತ್ರೋ ರಾತ್ರೆ(=ಕ್ಷಣಮಾತ್ರದಲ್ಲಿ) ಎರಡು ತುಂಡಾಗಿ ಬಿದ್ದ! ನಗರದಲ್ಲಿದ್ದ ಸೆಟ್ಟಿಗಳೆಲ್ಲ ಬಂದು ಮುತ್ತಿಕೊಂಡರು. ಬಂದವರನ್ನೆಲ್ಲ ವೆನ್ನಪ್ಪಾಲನ್ ಕುಂಕನು ಕಡಿದುಕೊಂದ. ಕೊಂದು ಹೆಣಗಳ ರಾಶಿ ಹಾಕಿದ. ರಕ್ತದ ಹೊನಲು ಹರಿಯಿತು. ಸಾಮೂದಿರಿ ಅರಸನಿಗೆ ಸುದ್ದಿಮುಟ್ಟಿತು. ಅರಸನು ಆಜ್ಞಾಪಿಸಿದ–ಮುನ್ನೂರಮೂವತ್ತು ನಾಯಮ್ಮಾರರು ಆಯುಧ ಸಲಕರಣೆಗಳೊಂದಿಗೆ ಒಂದಾಗಿ ಹೋಗಿ ಆ ಪುಂಡನನ್ನು ಬಂಧಿಸಿರಿ. ಅಂತೆಯೇ ಮುನ್ನೂರ ಮೂವತ್ತು ನಾಯಮ್ಮಾರರು ಕೋಝಿಕ್ಕೋಡು ನಗರಕ್ಕೆ ತೆರಳಿದರು. ಹಾಗೆ ನಾಯಮ್ಮಾರರು ಅಲ್ಲಿಗೆ ಹೋದಾಗ ವೆನ್ನಪ್ಪಾಲನ್ ಕುಂಕ ಅವರನ್ನೆಲ್ಲ ಕಡಿದು ಕೊಂದು ಹೆಣಗಳ ರಾಶಿ ಹಾಕಿದ. ಹೆಣಗಳ ರಾಶಿ ಹಾಕಿ ಕುಂಕನು ಅಲ್ಲಿ ಕುಳಿತುಕೊಂಡ.

ಮರುದಿನ ಮುಂಜಾನೆ ಬೆಳಕು ಹರಿದಾಗ ಸಾಮೂದಿರಿ ಅರಸನಿಗೆ ಸುದ್ದಿಮುಟ್ಟಿತು. ಅರಸ ಕೂಡಲೇ ಆಜ್ಞಾಪಿಸಿದ – ಇಪ್ಪತ್ತೆರಡು ಜನ ನಾಯಮ್ಮಾರರು ಕೂಡಲೇ ಅಲ್ಲಿಗೆ ಹೋಗಲಿ. ಕೆಳಗಿನಿಂದ ಬಂದ ನಾಯರನೊಬ್ಬ ನಮ್ಮ ನಗರವನ್ನು ಸರ್ವನಾಶ ಮಾಡಿದ್ದಾನೆ! ನಾಯರನನ್ನು ಕೊಲ್ಲದೆ ಇರಬಾರದು. ಹಾಗೆ ಇಪ್ಪತ್ತೆರಡು ಜನ ನಾಯಮ್ಮಾರ ರನ್ನು ಆಯುಧ ಸಮೇತವಾಗಿ ಅಲ್ಲಿಗೆ ಕಳುಹಿಸಿದ. ಇಪ್ಪತ್ತೆರಡು ಜನ ನಾಯಮ್ಮಾರರು ಕೋಝಿಕ್ಕೋಡನ್ ಅಂಬುಸೆಟ್ಟಿಯ ಅಂಗಡಿಗೆ ತಲಪಿದಾಗ ವೆನ್ನಪ್ಪಾಲನ್ ಕುಂಕ ಅಲ್ಲಿ ಕುಳಿತುಕೊಂಡಿದ್ದ. ಅವನು ಅವರಿಗೆಂದ –ಇಪ್ಪತ್ತೆರಡು ಜನ ನಾಯಮ್ಮಾರರೇ, ನೀವು ನನ್ನ ಬಳಿ ಬರಬೇಡಿ! ಅದನ್ನು ಕೇಳಿಸಿಕೊಂಡ ಅವರು ಆ ಎಚ್ಚರಿಕೆಗೆ ಬೆಲೆಕೊಡಲಿಲ್ಲ. ಅವರು ಕುಂಕನ ಬಳಿಗೆ ಹೋದರು. ವೆನ್ನಪ್ಪಾಲನ್ ಕುಂಕ ಆ ಇಪ್ಪತ್ತೆರಡು ನಾಯಮ್ಮಾರ ರನ್ನೂ ಕೊಂದು ಹಾಕಿದ. ಸಾಮೂದಿರಿ ಅರಸನಿಗೆ ಮತ್ತೆ ಈ ಸುದ್ದಿ ತಲುಪಿತು.

ಮುನ್ನೂರ ಮೂವತ್ತು ನಾಯಮ್ಮಾರರು ಸಕಲ ಆಯುಧ ಸಲಕರಣೆಗಳೊಂದಿಗೆ ಒಂದಾಗಿ ಕುಂಕನ ಬಳಿಗೆ ಹೋದರು. ವೆನ್ನಪ್ಪಾಲನ್ ಕುಂಕ ಮುನ್ನೂರ ಮೂವತ್ತು ನಾಯಮ್ಮಾರರು ಬಳಿಗೆ ಬರುವುದನ್ನು ಕಂಡ. ಅವರು ಕುಂಕನನ್ನು ಹಿಡಿದು ಕಟ್ಟಲು ಪ್ರಯತ್ನಿಸಿದರು. ಅದನ್ನು ಕಂಡ ಕುಂಕನು ಮುನ್ನೂರ ಮೂವತ್ತು ನಾಯಮ್ಮಾರರನ್ನೂ ಕಡಿದು ಕೊಂದು ಹಾಕಿದ. ಅವರ ಹೆಣಗಳನ್ನು ಎಳೆದು ರಾಶಿ ಹಾಕಿದ. ಸಾಮೂದಿರಿ ಅರಸ ಮತ್ತೆ ಆಜ್ಞಾಪಿಸಿದ – ನನ್ನ ಬಳಿಯೇ ನಿಂತಿರುವ ದಿವಾನರೇ! ಕೆಳಗಿನಿಂದ ಒಬ್ಬ ನಾಯರ್ ಬಂದವನು ನಮ್ಮ ನಗರವನ್ನೇ ಸರ್ವನಾಶ ಮಾಡಿದ್ದಾನೆ. ನನ್ನ ಅರಮನೆ ಅಂತಸ್ತು ಧ್ವಂಸವಾಯಿತು. ಆ ನಾಯರರನ್ನು ಹಿಡಿದು ಕಟ್ಟಿ ತರಬೇಕು. ನನ್ನ ಹದಿನೆಂಟು ಮಂದಿ ಪಾರುಪತ್ಯಗಾರರೇ! ನೀವು ಹೋಗಿ ಅವನನ್ನು ಹಿಡಿದು ತನ್ನಿ. ಅದನ್ನು ಕೇಳಿದ ಅವರೆಲ್ಲ ಅಲ್ಲಿಗೆ ಹೋದರು. ಅವರು ಅಲ್ಲಿಗೆ ತಲಪಿದಾಗ ವೆನ್ನಪ್ಪಾಲನ್ ಕುಂಕನು ಅವರನ್ನೂ ಕೊಂದು ಹಾಕಿದ. ಆಗ ಸಾಮೂದಿರಿ ಅರಸ ಆಜ್ಞಾಪಿಸಿದ – ಕೆಳಗಿನಿಂದ ಒಬ್ಬ ನಾಯರ್ ಬಂದವನು ನನ್ನೊಂದು ಅರಮನೆಯನ್ನು ನಾಶಮಾಡಿದ. ನಗರವೂ ಕೂಡ ಸರ್ವನಾಶವಾಯಿತು. ಅವನನ್ನು ಹೇಗೆ ಹಿಡಿಯೋಣ? ಕೂಡಲೇ ಅಲ್ಲಿ ಸೇರಿದ್ದ ಅರಸುಕುಮಾರನೂ ಅಳಿಯ ರಾಜಕುಮಾರನೂ ನಗರಕ್ಕೆ ಹೋದರು. ಅವರಿಬ್ಬರೂ ಒಂದಿಷ್ಟು ದೂರದಲ್ಲೆ ನಿಂತುಕೊಂಡು ಎಂದರು – ಕೆಳಗಿನಿಂದ ಬಂದಿರುವ ನಾಯರನೇ ಕೇಳು! ಸಾಮೂದಿರಿ ಅರಸುವಾಗಿರುವ ನನ್ನ ತಂದೆ ನಿನ್ನನ್ನು ಬರಹೇಳಿದ್ದಾರೆ. ಅದನ್ನು ಕೇಳಿದ ಕುಂಞಿಕುಂಕ ಕುಮಾರರ ಜತೆ ಹೊರಟ. ಸಾಮೂದಿರಿ ಅರಮನೆಗೆ ಬಂದ ಅವನು ಅರಸನನ್ನು ಕಣ್ಣಾರೆ ಕಂಡು ಅವನ ತಿರುವಡಿಗೂ ಮುಡಿಗೂ ಸಿರಿಯೊಡಲಿಗೂ ಎರಡು ಕೈಗಳನ್ನು ಜೋಡಿಸಿ ಹತ್ತು ಬೆರಳ ವಂದನೆ ಮಾಡಿದ. ಆಗ ಅರಸ ನಿರೂಪಿಸಿದ – ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕ! ನೀನು ಇಲ್ಲಿಗೆ ಬಂದು ನನ್ನೊಂದು ಅರಸೊತ್ತಿಗೆಯನ್ನು ಹಾಳುಗೆಡ ವಿದೆ. ನಗರವನ್ನೂ ಸರ್ವನಾಶ ಮಾಡಿದ್ದಿ. ಹೀಗೆ ಹೇಳಿ ನೆಲಮಾಳಿಗೆಯಲ್ಲಿ ಅವನನ್ನು ಬಂಧಿಸಿದ. ಕುಂಕನಿಗೆ ಶೂಲ ಸಿದ್ಧವಾಯಿತು.

ತಚ್ಚೋಳಿ ಕಣ್ಮಣಿ ಬಾಲ ಒದೇನನಿಗೆ ಪುರಮೇರಿ ಅರಸು ನಿರೂಪವಿತ್ತ – ತಚ್ಚೋಳಿ ಒದೇನ! ವೆನ್ನಪ್ಪಾಲನ್ ಕುಂಕ ನಗರಕ್ಕೆ ಹೋದವನು ಮರಳಿ ಬಂದಿಲ್ಲ. ಇಂದಿಗೆ ಅನೇಕ ದಿನಗಳಾದುವು, ಕುಂಕನನ್ನು ಯಾರೋ ಕೊಂದ ಹಾಗಿದೆ. ಒದೇನ ಕೂಡಲೇ ಅದಕ್ಕೆಂದ –ಪುರಮೇರಿ ಅರಸರೇ! ನಾನೊಮ್ಮೆ ಕೋಝಿಕ್ಕೋಡು ನಗರಕ್ಕೆ ಹೋಗಿಬರುತ್ತೇನೆ, ಆಗದೆ? ಹಾಗೆ ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ಕೋಝಿಕ್ಕೋಡು ನಗರಕ್ಕೆ ತಲಪಿದಾಗ ಗೋಧೂಳಿಯ ಹೊತ್ತಾಗಿತ್ತು. ಒದೇನ ಚಾಪನಿ

ಗೆಂದ – ಕಂಡಾಚ್ಚೇರಿಯ ಪ್ರಿಯಚಾಪ್ಪ! ಇದೀಗ ಮಯಮಯ ಸಂಜೆಯಾಗಿದೆ. ನಾವು ಇಂದು ಉಳಿದುಕೊಳ್ಳುವುದೆಲ್ಲಿ? ಅದಕ್ಕೆ ಕಂಡಾಚೇರಿಯೆಂದ – ಕೋಯಿಕ್ಕಾಲ ಮನೆಗೆ ಹೋಗೋಣ. ಅಂತೆಯೇ ಅವರು ಕೋಯಿಕ್ಕಾಲ ಮನೆಗೆ ಹೋದರು. ಅವರು ಅಲ್ಲಿಗೆ ತಲಪಿದಾಗ ಆ ಮನೆಯಾಕೆ ಕುಂಞಿಮಾಕ್ಕ ಹೊಸಿಲ ಬಳಿಯೇ ಕುಳಿತಿದ್ದಾಳೆ. ಕಂಡಾಚೇರಿ ಚಾಪ್ಪನೂ ತಚ್ಚೋಳಿ ಒದೇನನೂ ಒಂದು ಮೆಟ್ಟಿಲೇರಿ ಹೋದರು. ಆಕೆ ಕಂಡೂ ಕಾಣದಂತಿದ್ದಳು. ಎದ್ದು ನಿಂತು ಗೌರವ ತೋರಿಸಲಿಲ್ಲ. ಒದೇನನಿಗೆ ಕೋಪ ಬರುತ್ತಿತ್ತು. ಕೂಡಲೆ ಕಂಡಾಚ್ಚೇರಿ ಚಾಪ್ಪನೆಂದ – ಸಿಟ್ಟು ಬಂದರೆ ಏನೂ ಉಪಯೋಗವಿಲ್ಲ. ಆತ ಕೇಳಿದ – ಕೋಯಿಕ್ಕಾಲ್ ಮನೆಯ ಮಾಕಮ್ಮಾ! ಅಕ್ಕಿಪಡಿ ಕೊಟ್ಟರೆ ರಾತ್ರೆಯ ಊಟ ಸಿದ್ಧಪಡಿಸಬಹುದೆ? ಕುಂಞಿಮಾಕ್ಕ ಕೂಡಲೇ ಎಂದಳು – ಕೆಳಗಿನಿಂದ ಬಂದ ನಾಯರನೇ ಕೇಳು. ಅಕ್ಕಿ ಕೊಟ್ಟರೆ ಊಟ ಸಿದ್ಧಪಡಿಸು ವುದಿಲ್ಲ. ಸಾಮೂದಿರಿ ಅರಸನ ಏಳುಜನ ಪಣಿಕ್ಕ ಆಶಾನರು (ಕಳರಿ ಗುರುಗಳು) ಇಲ್ಲಿ ಇದ್ದಾರೆ. ಮುಂಜಾನೆಯಿಂದ ಮಧ್ಯರಾತ್ರೆಯ ತನಕ ಮೂಟೆ ಮೂಟೆ ಕೆಂಭತ್ತವನ್ನೂ ಮಾಂಸಲ ಮೀನನ್ನೂ ಅವರು ಇಲ್ಲಿ ತಂದು ಹಾಕಿದರೆ ಸಾಕೆ? ಬೆಳಗ್ಗಿನವರೆಗೂ ಕುಟ್ಟೋದು ಕೇರೋದು ಮಾಡಿ ನನಗೆ ಸಾಕಾಯ್ತು. ಇಲ್ಲಿಂದ ಊಟ ತಯಾರಿಸಿ ಕೊಡಲು ಸಾಧ್ಯವಿಲ್ಲ. ಅದನ್ನು ಕೇಳಿದ ಒದೇನ ಸಿಟ್ಟುಗೊಂಡ. ಅವನು ತನ್ನ ಕಿರುಬೆರಳಿನ ಚಿನ್ನದ ಉಂಗುರವನ್ನು ತಿರುಗಿಸಿಯೂ ನೂಕಿಯೂ ತೊಡುತ್ತಿರಲು ಮಾಕಮ್ಮ ಉಟ್ಟಬಟ್ಟೆ ಒಮ್ಮೆಗೇ ಅವಳ ಕೊರಳೇರಿತು. (ಒದೇನ ಮಂತ್ರವಾದಿ ಕೂಡ). ಅದನ್ನು ಕಂಡ ಮಾಕಮ್ಮ ಕೂಗಿ ಹೇಳಿದಳು – ಕೆಳಗಿಂದ ಬಂದಿರುವ ನಾಯರನೇ ಕೇಳಿ! ಉಡುಬಟ್ಟೆ ಕೊರಳಿಂದ ಇಳಿದರೆ ನಿಮ್ಮಿಂದ ಅಕ್ಕಿ ತೆಗೆದುಕೊಂಡು ಊಟ ಸಿದ್ಧಪಡಿಸಿ ಕೊಡುವೆ. ಒದೇನ ಅದನ್ನು ಕೇಳಿ ಉಂಗುರವನ್ನು ಕೈಗೆ ತೆಗೆದುಕೊಂಡ. ಉಡುಬಟ್ಟೆ ಕೊರಳಿಂದ ಇಳಿಯಿತು. ಕೋಯಿಕ್ಕಾಲ್ ಮನೆಯ ಕುಂಞಿಮಾಕ್ಕ ಬೇಗನೆ ಪಡುಕೋಣೆಗೆ ಹೋದಳು. ಸೊಗಸಿನದೊಂದು ಹುಲ್ಲುಚಾಪೆ ತೆಗೆದುಕೊಂಡಳು. ತಂದು ಬಾಗಿಲ ಬಳಿ ಹಾಸಿದಳು. ವೀಳ್ಯದೆಲೆ ಅಡಕೆಯನ್ನೂ ತಂದಿಟ್ಟಳು. ಹಳೆಯಕ್ಕಿ ಅನ್ನವನ್ನು ಬೇಗನೆ ಸಿದ್ಧಪಡಿಸಿದಳು. ನೀರು ಕಾಸಿಟ್ಟಳು. ಆಕೆಯೆಂದಳು – ತಚ್ಚೋಳಿ ಒದೇನಪ್ಪಾ ಧನಿಯೇ, ಕೇಳಿ! ನೀವೀಗ ಅಭ್ಯಂಜನ ಮಾಡಿಕೊಳ್ಳಿ. ಅದನ್ನು ಕೇಳಿದ ಒದೇನ ಬೇಗನೆ ಹೋಗಿ ಸ್ನಾನ ಮಾಡಿಬಂದ. ಚಾಪ್ಪನೂ ಸ್ನಾನಮಾಡಿ ಬಂದ. ಕೋಯಿಕ್ಕಾಲ ಕುಂಞಿಮಾಕ್ಕ ಹಳೆಯಕ್ಕಿ ಅನ್ನ ಬಡಿಸಿದಳು. ಸೊಗಸಾದ ನಾಲ್ಕು ತೆರನ ಪದಾರ್ಥಗಳನ್ನೂ ಬಡಿಸಿದಳು. ತಚ್ಚೋಳಿ ಒದೇನ ಬೇಕಷ್ಟು ಅನ್ನವನ್ನು ಬಾಚಿ ಬಾಚಿ ಉಂಡ. ಅನ್ನ ಸಾಕೆನಿಸಿದಾಗ ಕೈ ತಗ್ಗಿಸಿದ. ಬೆಳಗಿದ ಕಂಚಿನ ಗಿಂಡಿಯಲ್ಲಿ ನೀರು ತೆಗೆದುಕೊಂಡು ಏತದ ಬಳಿಹೋಗಿ ಕೈಗಳನ್ನು ತೊಳೆದು

ಕೊಂಡ. ಕೈಬಾಯಿ ತೊಳೆದುಕೊಂಡು ಶುದ್ಧವಾದ ಬಳಿಕ ಒಂದು ಕವಳ ವೀಳ್ಯವನ್ನು ಬಾಯಿಗೇರಿಸಿದ. ರೂಢಿಯಂತೆ ಸ್ವಲ್ಪ ಹೊತ್ತು ಹಾಗೆಯೇ ಕುಳಿತುಕೊಂಡ. ಕೋಯಿಕ್ಕಾಲ್ ಮನೆಯ ಕುಂಞಿಮಾಕ್ಕ ಪಡುಕೋಣೆಯನ್ನು ಗುಡಿಸಿ ಚಾಪೆ ಹಾಸಿದಳು. ಒದೇನನಿಗೆಂದಳು – ತಚ್ಚೋಳಿ ಒದೇನಪ್ಪಾ, ಧನಿಯೇ ಕೇಳಿ! ಪಡುಕೋಣೆಗೆ ಹೋಗಿ ಮಲಗಿಕೊಳ್ಳಿ. ಆಗ ಒದೇನ ಚಾಪ್ಪನಲ್ಲೆಂದ – ಕಂಡಾಚ್ಚೇರಿಯ ಪ್ರಿಯಚಾಪ್ಪಾ ಕೇಳು. ಸಾಮೂದಿರಿ ಅರಸನ ಏಳುಮಂದಿ ಪಣಿಕ್ಕ ಆಶಾನರು ಮೂಟೆ ಮೂಟೆ ಕೆಂಭತ್ತವನ್ನೂ ಮಾಂಸಲ ಮೀನನ್ನು ಮಧ್ಯರಾತ್ರೆಯ ಹದಿನಾರು ಗಳಿಗೆಗೆ ತೆಗೆದುಕೊಂಡು ಇಂದು ಇಲ್ಲಿಗೆ ಬರುವಾಗ ನೂರೊಂದು ತೆಂಗಿನ ಹೆಡೆಗಳಿಂದ ಮಾಡಿದ ಈಳ್ ಕುಂತಗಳನ್ನು (ಬೆತ್ತದ ಕುಂತ?) ತೆಗೆದುಕೊಂಡು ನೀನು ಕುಲುಕಿಬಿಡು. ಚಾಪ ಹೊಸ್ತಿಲ ಬಳಿಯೇ ಮಲಗಿಕೊಂಡ. ಒದೇನ ಪಡುಕೋಣೆಗೆ ಹೋದ. ಅವನೆಂದ–ಕೋಯಿಕ್ಕಾಲ ಮನೆಯ ಕುಂಞಿಮಾಕ್ಕ! ಸಾಮೂದಿರಿ ಅರಸನ ಏಳು ಜನ ಪಣಿಕ್ಕ ಆಶಾನರಿದ್ದೂ ತಾವರೆಮೊಗ್ಗು ಬಿರಿಯಲಿಲ್ಲವಲ್ಲ! ಹಾಗೆ ಅವನು ಅಲ್ಲಿ ಅವಳನ್ನು ಸೇರಿದ.

ಹೊತ್ತು ಮಧ್ಯರಾತ್ರೆಯಾದಾಗ ಸಾಮೂದಿರಿಯ ಏಳು ಜನ ಪಣಿಕ್ಕಾಶಾನರು ಮೂಟೆ ಮೂಟೆ ಕೆಂಭತ್ತವನ್ನೂ ಮಾಂಸಲಮೀನನ್ನೂ ಕೋಯಿಕ್ಕಾಲ ಮನೆಗೆ ತಂದರು. ಹಾಗೆ ಅವರು ಬಂದು ಹೊಸ್ತಿಲು ದಾಟುವಾಗ ಚಾಪ್ಪ ನೂರೊಂದು ಹೆಡೆಗಳ ಈಳ್ ಕುಂತಗಳನ್ನು ತೆಗದುಕೊಂಡು ಕುಲುಕಿದಾಗ ಆ ಏಳು ಜನರೂ ಹೆದರಿ ನಡುಗುತ್ತ ಸರಭರನೆ ಓಡಿದರು. ಅವರು ಅರಮನೆಗೆ ಹೋಗಿ ಎಂದರು – ಸಾಮೂದಿರಿ ಅರಸರೇ! ಅನೇಕ ಸಲ ನಾವು ಅಲ್ಲಿಗೆ ಹೋದದ್ದಿದೆ. ಇಂದೂ ನಾವು ಹಾಗೆ ಹೋದಾಗ ಅಲ್ಲಿಯ ಬಾಗಿಲಲ್ಲಿ ಒಬ್ಬಾತ ನಾಯರನಿದ್ದ. ಅವನು ಕುಂತವನ್ನು ತೆಗೆದು ಕುಲುಕಿದಾಗ ನಾವೆಲ್ಲ ಹೆದರಿ ನಡುಗಿ ಹೋದೆವು.

ಮರುದಿನ ಬೆಳಕು ಹರಿಯುವ ಹೊತ್ತಿಗೆ ತಚ್ಚೋಳಿ ಒದೇನನು ಇನ್ನೊಂದು ಕಡೆಯಿಂದ ಮನೆಯ ಹೊರಗೆ ಬಂದ. ಕೋಯಿಕ್ಕಾಲ ಮೂಡುಮನೆಯ ನಾಲ್ಕುದಿಕ್ಕುಗಳನ್ನೂ ನೋಡಿದ. ಅದೇ ಅಂಬಾಯಕಂಡಿ ಪರಂಬ್ ಎಂಬ ಜಾಗ. ಅದನ್ನು ಸರಿಯಾಗಿ ನೋಡಿದ ಒದೇನ ಕುಂಞಿಮಾಕ್ಕಳಲ್ಲಿ ಕೇಳಿದ–ಮಾಕ್ಕ! ಕೋಯಿಕ್ಕಾಲ ಮೂಡುಮನೆಯ ಅಂಬಾಯಕಂಡಿ ಪರಂಬ್ ಯಾರದ್ದು? ಕುಂಞಿಮಾಕ್ಕ ಎಂದಳು – ತಚ್ಚೋಳಿ ಒದೇನಪ್ಪಾ, ನನ್ನ ಗಂಡ! ಆ ಮನೆಯೂ ಜಾಗವೂ ಸಾಮೂದಿರಿ ಅರಸನದು. ಪದಾರ್ಥಕ್ಕೆ ಬೇಕಾದ ತೆಂಗಿನಕಾಯನ್ನು ಅವರು ಅಲ್ಲಿದಂಲೇ ಕೊಯ್ಯಿಸುತ್ತಾರೆ. ಹೆಣ್ಣಾಸೆಯ ನೀವು ಮಣ್ಣಾಸೆಯವರೂ ಆದಿರಾ? ಆ ಮನೆ ಹಿತ್ತಿಲ ಕುರಿತು

ಆಸೆ ಇರಿಸಬೇಡಿ. ಅದೇನೂ ನಿಮಗೆ ಸಿಗುವಂಥದ್ದಲ್ಲ. ಅದಕ್ಕೆ ಒದೇನನೆಂದ – ಕೋಝಿಕ್ಕೋಡವಳೇ, ಕುಂಞಿಮಾಕ್ಕ! ಯೋಗವಿದ್ದರೆ ನನಗೆ ಈ ಅಂಬಾಯಕಂಡಿಯ ಮನೆ ಹಿತ್ತಿಲು ಸಿಕ್ಕೇ ಸಿಗುವುದು. ಅದನ್ನು ನಿನಗೇ ಕೊಡಿಸುತ್ತೇನೆ ಮಾಕ್ಕ! ಅವನು ಮುಂದುವರಿಸಿ ಎಂದ – ಮಾಕ್ಕ! ನಾನು ಸಾಮೂದಿರಿಯ ಅರಮನೆಗೆ ಹೋಗಬೇಕು.

ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ಹೊರಟು ನಡೆದರು. ಎಲ್ಲೂ ನಿಲ್ಲದೆ ನಡೆಯುತ್ತ ಸಾಗಿ ಸಾಮೂದಿರಿಯ ಅರಮನೆಗೆ ತಲಪಿದರು. ಅರಸನನ್ನು ಕಣ್ಣಾರೆ ಕಂಡಾಗ ತಿರುವಡಿಗೂ ಮುಡಿಗೂ ಸಿರಿಯೊಡಲಿಗೂ ಗೌರವದಿಂದ ಎರಡು ಕೈ ಜೋಡಿಸಿ ಹತ್ತು ಬೆರಳ ವಂದನೆ ಮಾಡಿದರು. ಅರಸ ಕೇಳಿದ – ತಚ್ಚೋಳಿ ಒದೇನ! ಇದೇನಪ್ಪ ಹೀಗೆ ಬಂದು ಬಿಟ್ಟೆ? ಒದೇನನೆಂದ–ಸಾಮೂದಿರಿ ಅರಸರೇ, ತಾವು ಉದಾರ ಮನಸ್ಸು ಮಾಡಬೇಕು. ತಮ್ಮ ಮನಸ್ಸು ಒಂದಿಷ್ಟೂ ಬರಡಾಗಬಾರದು. ನಾನೊಂದು ಪಡೆಮಾತು ಕೇಳಿದೆ – ಕೆಳಗಿನಿಂದ ಒಬ್ಬ ನಾಯರ್ ಈ ಕಡೆ ಬಂದು ಕೋಝಿಕ್ಕೋಡ್ ನಗರವನ್ನು ಸರ್ವನಾಶ ಮಾಡಿದನಂತೆ. ಅರಮನೆಯನ್ನೂ ಹಾಳುಗೆಡ ವಿದನಂತೆ. ನಾನು ಅವನನ್ನೊಮ್ಮೆ ನೋಡಬೇಕಾಗಿತ್ತು. ಅದನ್ನು ಕೇಳಿ ಅರಸ ಕೂಡಲೇ ಹೇಳಿದ– ತಚ್ಚೋಳಿ ಒದೇನ! ನಾಯರ್ ಅಲ್ಲಿದ್ದಾನೆ. ಅವನನ್ನು ಶೂಲಕ್ಕೇರಿಸಬೇಕಿದೆ. ಒದೇನ ಕೂಡಲೇ ಹೇಳಿದ–ಸಾಮೂದಿರಿ ಅರಸರೇ! ಶೂಲಕ್ಕೇರಿಸಲಿರುವ ನಾಯರನನ್ನು ನಾನು ಒಂದು ಬಾರಿ ನೋಡಬೇಕು. ಅರಸ ಆಜ್ಞಾಪಿಸಿದ–ಸಾಮೂದಿರಿ ಅರಮನೆಯ ರಾಜಕುಮಾರರೇ! ನಗರವನ್ನು ಸರ್ವನಾಶ ಮಾಡಿದ ನಾಯರನನ್ನು ಕರೆದುಕೊಂಡು ಬನ್ನಿ. ಅವರು ಅವನನ್ನು ಕರೆದುಕೊಂಡು ಬಂದರು. ಅದನ್ನು ಕಂಡ ಒದೇನನೆಂದ – ಸಾಮೂದಿರಿ ಅರಸರೇ! ನಿಮಗೆ ಈತನಾರೆಂದು ಗೊತ್ತಾಯಿತೇ? ಕಾಯಕ್ಕೋಡಿಯ ಶಂಖಪಾಲ, ವೆನ್ನಪ್ಪಾಲನ್ ಕೊರೋತ್ತ್ ಕುಂಞಿಕುಂಕ! ಪುರಮೇರಿ ಅರಸನ ಪಾರುಪತ್ಯ ಗಾರ ಕುಂಕ! ಅರಸರ ಬಲಗೈಬಂಟ ಈ ಕುಂಞಿಕುಂಕ! ಅದನ್ನು ಕೇಳಿದ ಅರಸ ಏನೊಂದನ್ನು ಹೇಳಲಿಲ್ಲ. ತಚ್ಚೋಳಿ ಒದೇನನೆಂದ – ಸಾಮೂದಿರಿ ಅರಸರೇ! ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕನಿಗೆ ಒಂದು ಸ್ನಾನಕ್ಕೆ ಬೇಕಾದ ಎಣ್ಣೆ ಕೊಡಿಸಿರಿ. ಕುಂಕ ಸ್ನಾನಮಾಡಿಬಂದಾಗ ಅವನಿಗೆ ಹಳೆಯಕ್ಕಿ ಅನ್ನವನ್ನು ಕೊಡಿಸಬೇಕು. ಇದನ್ನು ಕೇಳಿದ ಅರಸ ಆಜ್ಞಾಪಿಸಿದ – ನನ್ನ ಬಳಿಯೇ ಕುಳಿತುಕೊಂಡಿರುವ ದಿವಾನರೇ, ವೆನ್ನಪ್ಪಾಲನ್ ಕೋರೋತ್ತ್ ಕುಂಞಿಕುಂಕನಿಗೆ ಒಂದು ಬಾರಿಯ ಸ್ನಾನಕ್ಕೆ ಬೇಕಾದ ಎಣ್ಣೆ ಕೊಡಿಸಿ. ಅವನು ಸ್ನಾನ ತೀರಿಸಿ ಬಂದಾಗ ಅವನಿಗೆ ಹಳೆಯಕ್ಕಿಯ ಅನ್ನವನ್ನೂ ಕೊಡಿಸಿ. ಅದನ್ನು ಕೇಳಿದ ಅವರು ಒಂದು ಸ್ನಾನಕ್ಕೆ ಬೇಕಾದ ಎಣ್ಣೆಕೊಡಿಸಿದರು. ಕುಂಞಿಕುಂಕ ಚೆನ್ನಾಗಿ ಎಣ್ಣೆ ಹಚ್ಚಿ ತಿಕ್ಕಿತೊಳೆದು ಸ್ನಾನ ತೀರಿಸಿ ಬಂದ. ಅವನಿಗೆ

ಒಳ್ಳೆಯ ಹಳೆಯಕ್ಕಿ ಅನ್ನವನ್ನು ಕೊಡಿಸಲಾಯಿತು. ಕುಂಕನು ಹಳೆಯಕ್ಕಿ ಅನ್ನವನ್ನು ಗಡದ್ದಾಗಿ ಉಂಡ. ತಚ್ಚೋಳಿ ಒದೇನನೆಂದ – ಸಾಮೂದಿರಿ ಅರಸರೇ! ನಾನು ಬೇಗನೇ ಇಲ್ಲಿಂದ ಹೋಗಬೇಕಾಗಿದೆ. ಅದಕ್ಕೆ ಅರಸನೆಂದ – ತಚ್ಚೋಳಿ ಒದೇನ! ವೆನ್ನಪ್ಪಾಲನ್ ಕುಂಕ ಇಲ್ಲಿಯೇ ಇರಲಿ. ಅದಕ್ಕೆ ಒದೇನನೆಂದ – ಸಾಮೂದಿರಿ ಅರಸರೇ, ಪುರಮೇರಿಯನ್ನಾಳುವ ಅರಸರ ಪಾರುಪತ್ಯಗಾರ ಈ ಕುಂಞಿಕುಂಕ. ಕುಂಕನನ್ನು ಕರೆದುಕೊಂಡು ಹೋಗುವುದಕ್ಕಾಗಿಯೇ ಬಂದವನು ನಾನು! ನಾನವನನ್ನು ಈಗಲೇ ಕರೆದೊಯ್ಯಬೇಕಾಗಿದೆ. ಕುಂಭಮಾಸ ಹತ್ತು, ಹನ್ನೊಂದರಂದು ಮಾಹಿಯ ಅಂಕಕಳರಿಯಲ್ಲಿ ನಾನು ತುಳುನಾಡನ್ ಕಣ್ಣನೊಂದಿಗೆ ಪೊಯ್ತ್ ನಡೆಸುವುದೆಂದು ತೀರ್ಮಾನವಾಗಿದೆ. ಪೊಯ್ತ್ ಮುಗಿಯಿತೆಂದಾದರೆ ಅವನು ಅಂದೇ ಇಲ್ಲಿಗೆ ಬರುವವ ನಿದ್ದಾನೆ.

ಹೀಗೆ ಹೇಳಿದ ಒದೇನನು ಕುಂಕನನ್ನು ಜತೆಗೆ ಕರೆದುಕೊಂಡ. ಅರಸನಿಗೆ ಪುನಃ ವಂದಿಸಿ ಅವರು ಹೊರಟರು. ಅವರು ಮೂರು ಜನರೂ ಸೇರಿ ಹಾಗೆ ನಡೆಯುತ್ತ ನಡೆಯುತ್ತ ಪುರಮೇರಿ ಅರಮನೆಗೆ ತಲಪಿದಾಗ ಪುರಮೇರಿ ಅರಸ ಅವರನ್ನು ಕಣ್ಣಾರೆ ಕಂಡ. ಒದೇನ ಅರಸನಿಗೆಂದ –ವೆನ್ನಪ್ಪಾಲನ್ ಕೊರೋತ್ತ್ ಕುಂಕನನ್ನು ಇದೋ ನಾನು ಕರೆದುಕೊಂಡು ಬಂದಿದ್ದೇನೆ. ಅದನ್ನು ಕೇಳಿದ ಅರಸ ತುಂಬ ಸಂತಸಗೊಂಡ. ಅವನೆಂದ – ತಚ್ಚೋಳಿ ಒದೇನ! ಕುಂಕನು ಇಲ್ಲಿ ಇಲ್ಲದೆ ನಾನು ನೀರಾಟವನ್ನೇ (ಸ್ನಾನ) ಮಾಡಿಲ್ಲ. ಅಮೃತಪಡಿಯನ್ನೂ (ಊಟ) ಮುಟ್ಟಿಲ್ಲ. ತಚ್ಚೋಳಿ ಒದೇನ! ತುಂಬ ಸಂತೋಷವಾಯಿತು. ಒದೇನ ಅಲ್ಲಿಂದಲೂ ಬೇಗನೆ ಹೊರಟ. ಜತೆಗೆ ಕಂಡಾಚ್ಚೇರಿ ಚಾಪ್ಪನೂ ಇದ್ದ. ಅವರಿಬ್ಬರೂ ತಚ್ಚೋಳಿ ಮನೆಗೆ ಬಂದರು. ಅಲ್ಲಿ ಎಲ್ಲರೂ ಜತೆಯಾಗಿ ಸುಖವಾಗಿದ್ದರು.

ಏನೇ ಇರಲಿ ನನ್ನ ಹಲ್ಲು ಕಳಚಬೇಡ

ತಚ್ಚೋಳಿ ಒದೇನ ತಿರುಗಾಟ ಮುಗಿಸಿ ಹಿಂದಿರುಗಿ ಬರುವಾಗ ಪರಂದುಕುಳಿ ಅಂಬು ಪಣಿಕ್ಕರನ ಮನೆಯಲ್ಲಿ ಬಂಗಾರದ ಟೊಪ್ಪಿಯ ಕೆಲಸ ನಡೆಯುತ್ತಿರುವುದನ್ನು ಕಂಡ. ಅಂಬು ಪಣಿಕ್ಕರನಿಗಾಗಿ ಟೊಪ್ಪಿಯ ಕೆಲಸ ನಡೆಯುತ್ತಿದೆ. ಅಲ್ಲಿಗೆ ಒದೇನ ಹೋಗಿ ಕೆಲಸ ನಡೆಯುತ್ತಿರುವುದನ್ನು ನೋಡಿದ. ಆಮೇಲೆ ಅಕ್ಕಸಾಲಿಗನಲ್ಲಿ ಕೇಳಿದ – ಒಂದು ವಿಚಾರ ಕೇಳಪ್ಪ ಅಕ್ಕಸಾಲಿ! ನೀವು ಇಪ್ಪತ್ತೆರಡು ಜನ ಕೆಲಸದವರಿದ್ದೀರಿ. ಧನಿಯೊಬ್ಬನ ತಲೆಗೆ ಯೋಗ್ಯವಾದ ಹೊನ್ನ ಟೊಪ್ಪಿ! ಈ ಟೊಪ್ಪಿಯನ್ನು ಯಾರಿಗಾಗಿ ತಯಾರಿಸುತ್ತಿದ್ದೀರಿ? ಆಗ ಅವರ ಮುಖಂಡನೆಂದ – ತಚ್ಚೋಳಿಮನೆಯ ಒದೇನ! ಪರಂದುಂಕುಳಿಯ ಪ್ರಿಯ ಪಣಿಕ್ಕರ್ ಹದ್ದಿನೊಂದಿಗೂ ಹಾರಿ ಹೋರಾಡಬಲ್ಲರು. ಯಾರೂ ಅವರನ್ನು ಇದುರಿಸಿ ನಿಲ್ಲಲಾರರು. ಹಾಗಾಗಿ ಈ ಟೊಪ್ಪಿಯ ಕೆಲಸವನ್ನು ತೊಡಗಿದೆ. ಸುಮಾರು ಮೂರು ವರ್ಷವಾಯಿತು. ಹಾಗಿದ್ದೂ ಟೊಪ್ಪಿಯ ಕೆಲಸ ಮುಗಿದಿಲ್ಲ, ಅದರ ಸಂದು ಸೇರಿಬರುತ್ತಿಲ್ಲ. ಅದನ್ನು ಕೇಳಿದ ಒದೇನ ಹೀಗೆಂದ – ಒಂದು ವಿಚಾರವುಂಟು, ಕೇಳಬೇಕಪ್ಪ ಅಕ್ಕಸಾಲಿ! ಹಾಗೆ ಅದರ ಸಂದು ಸೇರುವಂತೆ ನಾನೊಂದು ಪ್ರಾರ್ಥನೆ ಮಾಡುತ್ತೇನೆ. ಇನ್ನು ಸಂದು ಸೇರದಿರಲಾರದು. ಅದರ ಸಂದು ಚೆನ್ನಾಗಿ ಸೇರಿಬಂದರೆ ಟೊಪ್ಪಿಯನ್ನು ನನಗೆ ಕೊಡಬೇಕು. ಅದನ್ನು ಕೇಳಿದ ಅಕ್ಕಸಾಲೆ ಒಪ್ಪಿಗೆ ಸೂಚಿಸಿದ. ಹಾಗೆ ಅವರು ಕೆಲಸ ಮುಂದುವರಿಸಿದಾಗ ಅದರ ಸಂದು ಕೂಡಿಬಂತು. ಆಗ ಒದೇನನೆಂದ – ಒಂದು ವಿಚಾರವುಂಟು, ಕೇಳಿರಪ್ಪ ಅಕ್ಕಸಾಲೆಯರೆ! ಆ ಟೊಪ್ಪಿಯನ್ನು ಇತ್ತ ಕೊಟ್ಟುಬಿಡಿ. ಅವರು ಟೊಪ್ಪಿಯನ್ನು ಒದೇನನಿಗೆ ಕೊಟ್ಟರು. ಈ ವಿಚಾರ ಪರಂದುಕುಳಿ ಪಣಿಕ್ಕರಿಗೆ ತಿಳಿಯಿತು. ಅವನು ಅಕ್ಕಸಾಲೆಯರ ಬಳಿಗೆ ಬಂದ. ಅವರ ಮುಖಂಡನಲ್ಲಿ ಕೇಳಿದ ಏನಯ್ಯ, ಏನಯ್ಯ ಅಕ್ಕಸಾಲೆ? ನೀನು ಏನೂ ಮಾತಾಡುತ್ತಲೇ ಇಲ್ಲವಲ್ಲ? ಟೊಪ್ಪಿಯ ಕೆಲಸ ಮುಗಿಯಿತೇನಯ್ಯ? ಆಗ

ಅಕ್ಕಸಾಲೆಯೆಂದ – ಪರಂದುಂಕುಳಿಯ ಅಂಬು ಪಣಿಕ್ಕರೇ ಕೇಳಿ! ತಚ್ಚೋಳಿ ಒದೇನ ಇಲ್ಲಿ ಬಂದವನು ಟೊಪ್ಪಿಯನ್ನು ನೋಡಿದ. ಅದರ ಸಂದು ಸೇರಿದರೆ ಅದನ್ನು ತನಗೆ ಕೊಡಬೇಕು ಎಂದಿದ್ದ. ಅದಕ್ಕೆ ನಾನು ಒಪ್ಪಿಬಿಟ್ಟೆ. ಹಾಗೆ ಟೊಪ್ಪಿಯ ಕೆಲಸ ಮುಂದುವರಿಸಿದಾಗ ಅದರ ಸಂದು ಸೇರಿತು! ಆಗ ಒದೇನ ಆ ಟೊಪ್ಪಿಯನ್ನು ತೆಗೆದುಕೊಂಡು ಹೋಗಿಯೇ ಬಿಟ್ಟ. ಅಂಬು ಪಣಿಕ್ಕರಿಗೆ ಸಿಟ್ಟೇರಿತು. ಅವನು ಕೂಗಿ ಹೇಳಿದ – ತಚ್ಚೋಳಿ ಮನೆಯ ಒದೇನ! ಮೋಸದ ಕೆಲಸ ಮಾಡಿರುವ ಒದೇನ! ನಾನು ಮಾಡಿಸಲು ಹಾಕಿದ ಟೊಪ್ಪಿಯನ್ನು ನೀನು ಯಾಕಾಗಿ ತೆಗೆದುಕೊಂಡೆ? ನಿನಗೆ ಹೇಳಿದ ಕೆಲಸವೋ ಇದು? ಅದಕ್ಕೆ ಒದೇನನೆಂದ – ನಿನ್ನೊಂದು ಟೊಪ್ಪಿಯೂ ನಿನ್ನೊಂದು ಕೆಲಸಗಾರರೂ! ಮೂರು ವರುಷದಷ್ಟು ಕಾಲ ಕೆಲಸಮಾಡಿ ಅವರಿಗೆ ತುದಿಮೊದಲು ಏನಂತ ಸಿಗಲಿಲ್ಲ. ಅದರ ಸಂದನ್ನು ಸೇರಿಸಲು ಆಗಿಲ್ಲ. ಒಳವಣ್ಣೂರ್ ಭಗವತಿಯನ್ನು ನಾನು ಪ್ರಾರ್ಥಿಸಿದ ಬಳಿಕವಷ್ಟೆ ಸಂದು ಸೇರಿದೆ. ಹಾಗಾಗಿಯೇ ನಾನು ಹೋಗಿ ಅದನ್ನು ತೆಗೆದುಕೊಂಡೆ. ಅದಕ್ಕೆ ಪಣಿಕ್ಕರನೆಂದ – ಒಳವಣ್ಣೂರ್ ಭಗವತಿಗೆ ನಾನೂ ಹೊನ್ನಮಾಲೆಯೊಂದನ್ನು ಹರಕೆ ಹೇಳಿಕೊಂಡಿದ್ದೇನೆ. ಅದನ್ನು ನಾನು ಕಾವ್‌ಗೆ ಒಪ್ಪಿಸುತ್ತೇನೆ. ಅದಕ್ಕೆ ಒದೇನನೆಂದ – ನಿನ್ನ ಮಾಲೆಯನ್ನು ಭಗವತಿಗೆ ನೀನು ಕೊಡಬೇಕಾಗಿಲ್ಲ. ನಾನು ಅದಕ್ಕೆ ಒಂದಿಷ್ಟೂ ಒಪ್ಪುವವನಲ್ಲ. ಅಂಥ ಮಾತುಗಳನ್ನು ಕೇಳಿದಾಗ ಪಣಿಕ್ಕರ್ ಹೇಳಿದ – ಒಂದು ವಿಚಾರವುಂಟು, ಕೇಳಬೇಕಪ್ಪ ಒದೇನ! ನಮಗೆ ಪರಸ್ಪರ ಒಂದು 'ಪೊಯ್ತ್'ನ ಅಗತ್ಯ ಕಾಣುತ್ತದೆ. ಮಾಹಿಯ ಅಂಕ ಕಳರಿಯಲ್ಲೆ ಅದು ನಡೆಯಲಿ. ಪರಂದುಕುಳಿ ಅಂಬು ಪಣಿಕ್ಕರ್ ಅಂತೆಯೇ ಮಾಹಿಯ ಅಂಕ ಕಳರಿಯಲ್ಲೆ ಒಂದು ಪೊಯ್ತ್‌ನ ಏರ್ಪಾಡು ಮಾಡಿ ಪೊಯ್ತ್‌ಗೆ ಸಿದ್ಧನಾದ. ನಿಗದಿಯಾದ ದಿನದಂದು ತಚ್ಚೋಳಿ ಒದೇನ ಪೊಯ್ತ್‌ಗೆ ಸಿದ್ಧನಾಗಿ ಅಲ್ಲಿಗೆ ಹೋದ. ಪಣಿಕ್ಕರನೂ ಕಳರಿಗೆ ತಲಪಿದ. ಇಬ್ಬರೂ ಪೊಯ್ತ್ ಆರಂಭಿಸಿದರು. ಹೊತ್ತು ಹನ್ನೆರಡು ಹೆಜ್ಜೆ ದಾಟುವವರೆಗೂ ಪೊಯ್ತ್ ಮಾಡುತ್ತ ಇದ್ದರು. ಆಗ ಒದೇನ 'ಕಾಕತ್ತರು' ಎಂಬ ಪಟ್ಟನ್ನು ಪ್ರಯೋಗಿಸಿ ಪರಂದುಂಕುಳಿ ಪಣಿಕ್ಕರನ್ನು ಬೀಸಿ ಹೊಡೆದ. ಪಣಿಕ್ಕರನ್ನು ಮಗುಚಿಹಾಕಿ ಅವನ ಎದೆಯ ಮೇಲೆ ಕುಳಿತ. ಎದೆಯಲ್ಲಿ ಕುಳಿತು ಪಣಿಕ್ಕರನ ಹಲ್ಲು ಕಳಚುವವನಿದ್ದ. ಅಷ್ಟರಲ್ಲಿ ಪಣಿಕ್ಕರ್ ಒದೇನನಿಗೆ ಕೂಗಿ ಹೇಳಿದ – ಒಂದು ಸಂಗತಿಯುಂಟು, ಕೇಳಪ್ಪ ಒದೇನ! ನೀನೀಗ ನನ್ನ ಹಲ್ಲುಕಳಚಿದೆಯೆಂದಾದರೆ ನಾನು ಮತ್ತೆ ಮನೆಯಿಂದ ಹೊರಗಿಳಿಯಲಾರೆ. ನೀನು ಏನಿದ್ದರೂ ನನ್ನ ಹಲ್ಲು ಕಳಚಬೇಡ! ನನ್ನನ್ನು ಅಂತೆಯೇ ಬಿಟ್ಟುಬಿಡು. ಆ ಮಾತುಗಳನ್ನು ಕೇಳಿದ ಒದೇನ ಪರಂದುಂಕುಳಿ ಪಣಿಕ್ಕರನನ್ನು ಹಾಗೆಯೇ ಬಿಟ್ಟುಬಿಟ್ಟ. ಪೊಯ್ತ್ ಮುಗಿಯಿತು. ಪೊಯ್ತ್‌ನಲ್ಲಿ ಗೆದ್ದ ಒದೇನ ತಚ್ಚೋಳಿ ಮನೆಗೆ ಹೊರಟುಹೋದ.

ನನ್ನ ಕಥೆ ಮುಗಿಯುತ್ತಿತ್ತು, ತಚ್ಚೋಳಿ ಮನೆ ನಾಶವಾಗುತ್ತಿತ್ತು!

ಕಂಡಾಚ್ಚೇರಿಯ ಚಾಪ್ಪನೂ ತಚ್ಚೋಳಿಯ ಕಣ್ಮಣಿ ಬಾಲಒದೇನನೂ ಅವನಣ್ಣ ಕೋಮಕುರುಪ್ಪನೂ ಎಲ್ಲರೂ ಮನೆಯಲ್ಲಿ ಜತೆಯಲ್ಲಿ ಕುಳಿತಿದ್ದರು. ಅವರು ಒಂದು ಸುದ್ದಿ ಕೇಳಿದರು. ಅದರ ಮೂಲ ತಲಶ್ಶೇರಿ. ಉಂಗುರದಂತೆ ಉರುಟಾದ ನಾಡು. ಹಣ ಹೊನ್ನುಗಳು ತುಂಬಿದ ನಾಡು. ಮೈದಾನದಂತೆ ಸಮತಟ್ಟಾದ ನಾಡು. ಭತ್ತ ಮುಂತಾದ ಧಾನ್ಯಗಳು ತುಂಬಿ ತುಳುಕುವ ನಾಡು. ಹೊನ್ನು ಬೆಳೆಯುವಂಥ ಜಾಗಗಳಿವೆ ಅಲ್ಲಿ. ಬೆಳ್ಳಿಯನ್ನೂ ಅಲ್ಲಿ ಬೆಳೆಯುತ್ತಾರೆ. ಅಲ್ಲಿ ಯಾರಿಗೂ ಹೊಟ್ಟೆ ಬಟ್ಟೆಗಳಿಗೆ ತತ್ವಾರ ಇಲ್ಲ.

ಹಾಗೆ ಇರುವ ಒಂದು ಊರಲ್ಲಿ ಬಿಳಿಯರು ಬಂದು ತುಂಬಿಕೊಂಡರು. ಅವರು ಹಡಗುಗಳಲ್ಲಿ ಇಲ್ಲಿ ಬಂದು ಇಳಿದರು. ಇಲ್ಲಿನ ಹೆಂಗುಸರು ತಮ್ಮ ತುಂಬಿದ ಎದೆಯನ್ನು ತೆರೆದಿಟ್ಟು ಹೋಗುವುದು ಅವರಿಗೆ ಕಣ್ಣಾರೆ ಕಾಣಿಸಿತು. ಅದನ್ನು ಕಂಡು ಬಿಳಿಯರು ಅವರ ಹಿಂದೆಯೇ ಓಡಿದರು. ಅವರನ್ನು ಕಂಡ ಹೆಂಗುಸರು ಹೆದರಿ ಓಡಿ ಅಡಗಿಕೊಂಡರು. ಅವರು ಅತ್ತ ಹೋಗಿ ಒಂದೆಡೆ ಸೇರಿದರು. ಹಾಗೆ ಮುನ್ನೂರ ಮೂವತ್ತು ಬಿಳಿಯರು ತಲಶ್ಶೇರಿಗೆ ಬಂದು ಮೂಲೆ ಮೂಲೆಗೂ ನುಸುಳಿ ಒಬ್ಬೊಬ್ಬ ಹೆಂಗುಸಿನ ಹಿಂದೆ ಬಿದ್ದು ಬೆನ್ನಟ್ಟಿಕೊಂಡು ಹೋದರು. ಹಾಗೆ ಕೆಲವು ದಿನಗಳು ಕಳೆದುವು. ಮುನ್ನೂರ ಮೂವತ್ತು ಬಿಳಿಯರನ್ನು ಎಲ್ಲರೂ ಗಮನಿಸಿದರು. ಬಿಳಿಯರು ತಚ್ಚೋಳಿ ಪಡಿಪ್ರೆಗೆ ತಾಗಿಕೊಂಡಿರುವ ನಾಲ್ಕುಸೂತ್ರದ ಒಳಾಂಗಣ ಮತ್ತು ಮಾಳಿಗೆಗಳನ್ನು ಕಂಡರು. ಬೋದಿಗೆ ಕಂಬಗಳನ್ನೂ ವಿಶೇಷ ಕಿಟಿಕಿಗಳನ್ನೂ ಕಂಡರು. ರಾಮಾಯಣದ ಶಿಲ್ಪಗಳನ್ನು ಕೊರೆದ ಮಂಚಗಳನ್ನು ಕಂಡರು. ಆಮೇಲೂ ಅವರು ದೂರದರ್ಶಕದಿಂದ

ನೋಡಿದಾಗ ತಚ್ಚೋಳಿಮನೆಯ ಉಣ್ಣಿಚೀರಳನ್ನೂ ಕಾವಿಲ್ ಚಾತ್ತೋತ್ತ್‌ನ ಕುಂಞಿಚ್ಚೀರುವನ್ನೂ (ಒದೇನನ ತಂಗಿ ಮತ್ತು ಹೆಂಡತಿ) ಕಂಡರು. ಅವರು ಹಾಗೆ ನೋಡುವುದನ್ನು ತಿಳಿದ ಈ ಹೆಂಗುಸರು ಬೋದಿಗೆ ಕಂಬಗಳ ಮರೆಗೆ ನಿಂತರು. ಬಿಳಿಯರನ್ನು ನೋಡಿದರು. ಅದನ್ನು ಗಮನಿಸಿದ ಬಿಳಿಯರು, ಮುನ್ನೂರಮೂವತ್ತು ಮಂದಿ ತಚ್ಚೋಳಿ ಹೊರಮನೆಗೆ ಪ್ರವೇಶಿಸಿದರು. ಅವರು ಹಾಗೆ ಪ್ರವೇಶಿಸಿದಾಗ ತಚ್ಚೋಳಿ ಮನೆಯ ಉಣ್ಣಿಚ್ಚೀರಳೂ ಕಾವಿಲ್ ಚಾತ್ತೋತ್ತ್‌ನ ಕುಂಞಿಚೀರುವೂ ಓಡಿಹೋದರು. ಓಡಿಹೋಗಿ ತಚ್ಚೋಳಿ ಕೋಮಕುರುಪ್ಪ್‌ನ ಬಳಿಹೋಗಿ ಎಂದರು – ಒಂದು ವಿಷಯವಿದೆ, ಕೇಳಬೇಕು ಭಾವ ಕುರುಪ್ಪರೇ! ಮುನ್ನೂರ ಮೂವತ್ತು ಬಿಳಿಯರು ಕೋವಿ ಕುಂತ ಖಡ್ಗಗಳೊಂದಿಗೆ ಈ ಮನೆಗೆ ಬರುತ್ತಿದ್ದಾರೆ. ಅವರನ್ನು ಕಂಡರೆ ಹೆದರದ ಮಂದಿ ಯಾರೂ ಇಲ್ಲ. ಬಿಸಿಲಿಗೆ ನಡೆದುದು ಮತ್ತು ಹೆಂಡ ಕುಡಿದದ್ದರಿಂದ ಇರಬೇಕು, ರಕ್ತತೊಟ್ಟಿಕ್ಕಿ ಬೀಳುವ ಹಾಗೆ ಅವರ ಮುಖವಿದೆ. ಅವರು ಇತ್ತ ತಚ್ಚೋಳಿ ಮನೆಗೆ ಬಂದರೆ ನಮ್ಮನ್ನು ಜೀವಸಹಿತ ಬಿಡಲಾರರು. ಏನು ಮಾಡೋಣ ದೇವರೇ? ಅದನ್ನು ಕೇಳಿದ ಕೋಮಕುರುಪ್ಪ್ ಹೆದರಿ ನಡುಗಲಾರಂಭಿಸಿದ. ಅವನಿಗೆ ನಡೆಯುವುದಕ್ಕೇ ಆಗುತ್ತಿಲ್ಲ. ಅವನು ಹೆಂಗುಸರಿಗೆಂದ – ಒಂದು ವಿಷಯವಿದೆ, ಕೇಳಬೇಕು ಕುಂಞಿಚ್ಚೀರು, ನೀನು ಮತ್ತು ಉಣ್ಣಿಚ್ಚಿರಿಯೂ ಬೇಗ ಹೋಗಿ ಬಾಗಿಲುಗಳನ್ನೆಲ್ಲ ಚೆನ್ನಾಗಿ ಹಾಕಿ ಬಂದುಬಿಡಿ. ಬಿಳಿಯರು ಬಂದು ಕರೆದರೆ ನೀನು ಬಾಗಿಲು ತೆರೆಯಲೇ ಬಾರದು. ಹಾಗೆ ಅವರು ಮಾತನಾಡುತ್ತಿದ್ದಾಗ ಮುನ್ನೂರ ಮೂವತ್ತು ಬಿಳಿಯರು ತಚ್ಚೋಳಿ ಒಳಮನೆಯ ಮೆಟ್ಟಲೇರಿ ಬಂದರು. ಮೇಲೇರಿ ಬಂದು ಬಾಗಿಲ ಬಳಿ ನಿಂತು ಕರೆದರು. ಬಾಗಿಲು ಬಡಿದು ಕರೆದರು. ಯಾರೂ ಬಾಗಿಲು ತೆರೆಯಲಿಲ್ಲ. ಆಗ ಎಲ್ಲ ಬಿಳಿಯರೂ ಸೇರಿ ಬಾಗಿಲನ್ನು ಗುದ್ದುವುದು ಒದೆಯುವುದು ಮುಂತಾದ್ದನ್ನು ಮಾಡಲಾರಂಭಿಸಿದರು. ಅವರೆಲ್ಲ ಹಾಗೆ ಮಾಡುತ್ತಿದ್ದುದನ್ನು ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ದೂರದಿಂದ ಕಂಡರು. ಅವರು ಅಲ್ಲಿಗೆ ಹೋದರು. ಬಿಳಿಯರು ಅವರಲ್ಲಿಯೇ ಕೇಳಿದರು – ಈ ಕಾಣುತ್ತಿರುವುದು ಯಾರ ಮನೆ? ಮನೆಯ ಬಾಗಿಲು ತೆರೆಯಲು ಹೇಳೋ. ಬಾಗಿಲು ತೆರೆದು ತೋರಿಸದೆ ಹೋದರೆ ಮನೆಯನ್ನೆಲ್ಲ ನೆಲಸಮ ಮಾಡಿಯೇವು. ಹಾಗಾಗಿ ಹೋಗಿ ನೀನು ಹೇಳು – ಮತ್ತೂ ಬಾಗಿಲು ತೆರೆಯದಿದ್ದರೆ ಮನೆಗೆ ನಾವು ಬೆಂಕಿಹಚ್ಚುತ್ತೇವೆ. ಅದನ್ನು ಕೇಳಿದ ಒದೇನ ಸಿಟ್ಟುಗೊಂಡ. ಅವನೆಂದ – ಒಂದು ವಿಷಯವುಂಟು ಕೇಳಬೇಕು, ಬಿಳಿಯರೇ! ಯಾರದೋ ಮನೆಯ ಬಾಗಿಲು ತೆಗೆಯಿಸುವುದಕ್ಕೆ ನಿಮಗೆ ಏನು ಅಧಿಕಾರ? ನೀವು ಹೇಳಿದರೆ ಬಾಗಿಲು ತೆರೆಯುವುದು ಸಾಧ್ಯವಿಲ್ಲ. ಹಾಗಾಗಿ ಕೇಳಿರಿ – ನೀವು ಮುನ್ನೂರ ಮೂವತ್ತು ಜನರೂ ಕೂಡಲೇ

ಇಲ್ಲಿಂದ ಹೋಗಬೇಕು. ನೀವು ಇಲ್ಲಿಂದ ಹೋಗದೆ ಇದ್ದರೆ ನಿಮ್ಮನ್ನೆಲ್ಲ ದೀವಿ ಹಲಸನ್ನು ಕತ್ತರಿಸಿದ ಹಾಗೆ ಕತ್ತರಿಸಿ ಹಾಕುತ್ತೇನೆ. ಅದನ್ನು ಕೇಳಿದ ಬಿಳಿಯರು ಕುಂತವನ್ನು ತಿರುಗಿಸಿಹಿಡಿದರು. ತಚ್ಚೋಳಿ ಒದೇನನತ್ತ ಅವರು ಮುಂದುವರಿದರು. ಅದನ್ನು ಕಂಡ ಒದೇನ ನಿಂತಲ್ಲಿಂದಲೇ ಒಂದು ಕತ್ತರಿಲಾಗ ಹಾಕಿದ. ಮತ್ತೆ ಭೂಮಿಯನ್ನು ಸ್ಪರ್ಶಿಸಬೇಕಾದರೆ ಮುನ್ನೂರ ಮೂವತ್ತು ಬಿಳಿಯರ ತಲೆಯನ್ನು ಕತ್ತರಿಸಿ ಎಸೆದ. ಅವರ ತಲೆಯನ್ನು ಕಡಿದು ಬಾಗಿಲನ್ನು ತಟ್ಟಿ ಅವನು ಕರೆದು ಹೇಳಿದ – ಒಂದು ವಿಷಯವಿದೆ ಕೇಳಬೇಕು, ಕುಂಞಿಚ್ಚೀರು. ಯಾವುದಕ್ಕೂ ಅಂಜಬೇಡ ಅಳುಕಬೇಡ. ಇದು ನಾನು, ನಾನು ಕುಂಞಿಚೀರು, ಒದೇನ! ಅದನ್ನು ಕೇಳಿದ ಕುಂಞಿಚೀರು ಬಾಗಿಲನ್ನು ಬೇಗ ಬೇಗ ತೆರೆದಳು. ಬಾಗಿಲು ತೆರೆದು ನೋಡಿದಾಗ ನೆತ್ತರ ಹೊಳೆಯೇ ಹರಿಯುವಂತಿದ್ದ ರಕ್ತದಲ್ಲಿ ಮುನ್ನೂರ ಮೂವತ್ತು ಬಿಳಿಯರು ಮುಳುಗಿ ಸತ್ತಿರುವುದನ್ನು ಕಣ್ಣಾರೆ ಕಂಡಳು. ಅದನ್ನು ಅವಳು ಕಂಡ ಹೊತ್ತಲ್ಲೆ ತಚ್ಚೋಳಿ ಉಣ್ಣಿಚ್ಚಿರಿಯೂ ಕೋಮಕುರುಪ್ಪನೂ ಎಲ್ಲರೂ ಬಂದು ನೋಡಿದರು. ಕೋಮಕುರುಪ್ಪ್ ಕೂಗಿ ಹೇಳಿದ– ತಚ್ಚೋಳಿ ಒದೇನಾ ಪ್ರಿಯ ತಮ್ಮಾ! ನೀನು ಇಂದು ಇಲ್ಲಿಗೆ ಬಾರದಿರುತ್ತಿದ್ದರೆ ನನ್ನ ಕಥೆ ಮುಗಿಯುತ್ತಿತ್ತು, ತಚ್ಚೋಳಿಮನೆ ನಾಶವಾಗುತ್ತಿತ್ತು. ತಚ್ಚೋಳಿಯ ಉಣ್ಣಿಚೀರುವೂ ಎಲ್ಲರೂ ಸತ್ತುಹೋಗುತ್ತಿದ್ದರು. ನೀನು ಇವತ್ತು ಬಂದುದರಿಂದ ಎಲ್ಲರೂ ಸುರಕ್ಷಿತ ವಾಗಿದ್ದಾರೆ ಒದೇನ! ಹೀಗೆ ಹೇಳುತ್ತಿದ್ದುದನ್ನು ಎಲ್ಲರೂ ಕೇಳಿದರು, ಎಲ್ಲರೂ ಜತೆಯಾಗಿ ಸಂತಸದಲ್ಲಿದ್ದರು.

ನಿನ್ನಾಣೆ, ನನ್ನಾಣೆ! ನಾನು ನಿನ್ನ ಗಂಡನನ್ನು ಕೊಲ್ಲಲಿಲ್ಲ

ಮೂರುನಗರಗಳಲ್ಲಿ ನಮಾಜಿಗಾಗಿ ಮಸೀದಿಗಳನ್ನು ನಿರ್ಮಿಸಿಕೊಳ್ಳಲು ಅನುಮತಿ ಪಡೆಯಲು ಮೂರು ಸಾವಿರ ಹೊನ್ನುಗಳನ್ನು ಗಂಟುಕಟ್ಟಿ ಜೋನಕರು ವಾದ್ಯಘೋಷಗಳೊಂದಿಗೆ ಕಡತ್ತು ನಾಡು ಮತ್ತು ವಯನಾಡಿನ ಗಡಿಭಾಗದಲ್ಲಿ ಹೋಗು ತ್ತಿದ್ದರು. ಅವರು ಹಾಗೆ ಹೋಗು ತ್ತಿದ್ದಾಗ ತಚ್ಚೋಳಿ ಒದೇನನು ಹಳೆಯಕ್ಕಿ ಗಂಜಿ ಯುಂಡು ಬಾಗಿಲಲ್ಲೇ ಕುಳಿತಿದ್ದವನು ತನ್ನ ಗೆಳೆಯ ಚಾಪ್ಪನಲ್ಲಿ ಕೇಳಿದ – ಕಂಡಾಚ್ಚೇರಿಯ ಚಾಪ್ಪಾ! ಕಡತ್ತು ವಯನಾಡುಗಳ ಗಡಿಯಲ್ಲಿ ಏನದು ವಾದ್ಯಘೋಷ ಕೇಳುತ್ತಿದೆಯಲ್ಲ? ಹೋಗಿ ತಿಳಿದುಕೊಂಡು ಬಾ! ಕಂಡಾಚ್ಚೇರಿ ಚಾಪ್ಪನು ಒದೇನನ ಇಷ್ಟಾನುಸಾರವಾಗಿ ಅಲ್ಲಿಂದ ಎದ್ದು ಬೇಗ ಬೇಗನೆ ನಡೆಯುತ್ತ ಓಡುತ್ತ ಕಡತ್ತು ವಯನಾಡಿನ ಗಡಿಗೆ ತಲಪಿ ಅಲ್ಲಿದ್ದವರೊಡನೆ ಕೇಳಿದ – ಮೂರು ನಗರದ ಜೋನಕರೇ! ಎಲ್ಲಿಗೆ ಹೊರಟ ವರು ನೀವು? ಅದಕ್ಕೆ ಅವರೆಂದರು – ಕಂಡಾಚ್ಚೇರಿ ಪ್ರಿಯ ಚಾಪ್ಪಾ! ನಾವು ಕುಟ್ಟಿಪುರಂನ ಅರಸ ರಿಗೆ ಕಾಣಿಕೆಯ ಹೊನ್ನನ್ನು ಕೊಂಡೊಯ್ಯುತ್ತಿದ್ದೇವೆ. ಚಾಪ್ಪ ಕೂಡಲೇ ಅಲ್ಲಿಂದ ಓಡುತ್ತ ಹೋಗಿ ಒದೇನನಿಗೆಂದ – ನನ್ನ ಧನೀ, ನನ್ನ ಯಜಮಾನರೇ! ನಿಮಗೆ ಸಂಗತಿ ಗೊತ್ತಾಯಿತೆ? ಮೂರು ನಗರದ ಜೋನಕರು ಮೂರು ಸಾವಿರ ಹೊನ್ನನ್ನು ಎಣಿಸಿ ಗಂಟುಕಟ್ಟಿ ಕುಟ್ಟಿಪುರಂನ ಅರಸರಿಗೆ ಕಾಣಿಕೆಹೊನ್ನು ಒಯ್ಯುತ್ತಿದ್ದಾರೆ. ಅದನ್ನು ಕೇಳಿದ ಒದೇನ ತಾನೇ ಖುದ್ದಾಗಿ ಅಲ್ಲಿಗೆ ಓಡುತ್ತ ಬಂದು ಜೋನಕರನ್ನು ತಡೆದು ನಿಲ್ಲಿಸಿದ. ಬಳಿಕ ಅವರಲ್ಲೆಂದ – ಮೂರು ನಗರಗಳ ಜೋನಕರೆ! ಎಲ್ಲಿಗೆ ಹೊರಟವರು ನೀವು? ಅದಕ್ಕೆ ಅವರು ಉತ್ತರವಿತ್ತರು – ತಚ್ಚೋಳಿಯ ಪ್ರಿಯ ಒದೇನ! ನಾವು ಕುಟ್ಟಿಪುರಂಗೆ ಹೋಗುತ್ತಿದ್ದೇವೆ. ಕಾಣಿಕೆ ಹೊನ್ನನ್ನು ಜತೆಗೊಯ್ಯುತ್ತಿದ್ದೇವೆ. ಕೂಡಲೇ

ಒದೇನ ಅದಕ್ಕುತ್ತರಿಸಿದ – ಕಾಣಿಕೆ ಹಣವನ್ನು ಕೂಡಲೇ ನನಗೊಪ್ಪಿಸಿರಿ! ಆಗ ಜೋನಕರೆಂದರು – ತಚ್ಚೋಳಿ ಒದೇನ! ಇದು ನಿನಗೆ ಕೊಡುವುದಕ್ಕಿರುವ ಹೊನ್ನಲ್ಲವಲ್ಲ! ಇದು ಅರಸರಿಗೆ ಕೊಡಲಿರುವ ಹೊನ್ನು. ಒದೇನ ಪ್ರತಿ ನುಡಿದ – ಹೊನ್ನನ್ನು ಕೂಡಲೇ ನನಗೆ ಕೊಡದಿದ್ದರೆ ನಿಮ್ಮನ್ನು ಜೀವ ಸಹಿತ ಬಿಡಲಾರೆ! ಅದನ್ನು ಕೇಳಿದ ಜೋನಕರು ಹೊನ್ನನ್ನು ಅವನಿಗೆ ಒಪ್ಪಿಸಿ ಕೊಟ್ಟರು. ಬಳಿಕ ಅಳುತ್ತ ಹೋದರು. ಹಾಗೆ ನಡೆಯುತ್ತ ನಡೆಯುತ್ತ ಅವರು ಕುಟ್ಟಿಪುರಂಗೆ ಹೋದರು. ಅವರನ್ನು ಮಾಳಿಗೆಯ ಮೇಲಿನಿಂದ ಅರಸ ಕಂಡ. ಕಂಡ ಕೂಡಲೆ ಇಳಿದು ಬಾಗಿಲಬಳಿಗೆ ಹೋದ. ಬಾಗಿಲಿಗೆ ಹೋದವನು ಕೇಳಿದ – ಮೂರು ನಗರದ ಜೋನಕರೆ! ಯಾಕಾಗಿ ಅಳುತ್ತಿದ್ದೀರಿ ಜೋನಕರೆ? ಕೂಡಲೆ ಅಳುತ್ತ ಅವರೆಂದರು – ಕುಟ್ಟಿಪುರಂ ಅರಸರೇ! ನಾವು ಮೂರು ಸಾವಿರ ಹೊನ್ನನ್ನು ಎಣಿಸಿ ಗಂಟುಕಟ್ಟಿ ಇಲ್ಲಿಗೆ ತರುತ್ತಿದ್ದೆವು. ವಾದ್ಯಘೋಷ ದೊಂದಿಗೆ ಅದನ್ನು ತರುತ್ತಿದ್ದಾಗ ತಚ್ಚೋಳಿ ಒದೇನನು ಅದನ್ನೆಲ್ಲ ದರೋಡೆ ಮಾಡಿ ಒಯ್ದ. ಅರಸ ಕೂಡಲೇ ಎಂದ – ನೀವು ಅಳಬೇಡಿ ಜೋನಕರೇ! ನೀವು ಮಸೀದಿ ಕಟ್ಟಿಸಿಕೊಳ್ಳಿ. ಇದರ ವಿಚಾರಣೆಯನ್ನು ನಾನು ಮಾಡಿಸುತ್ತೇನೆ. ಜೋನಕರು ಕೂಡಲೇ ಹೊರಟು ಹೋದರು.

ಅರಸನೆಂದ – ಅರವುಲಕಾವ್‌ನ ಕುಂಞ್ಯುಂಡಪ್ಪ! ತಚ್ಚೋಳಿ ಒದೇನನೊಬ್ಬನ ಕಾರಣದಿಂದ ನಾನು ಇನ್ನು ಅರಮನೆಯಲ್ಲಿ ನಿಲ್ಲದಂತಾಗಿದೆ. ಕುಂಞ್ಯುಂಡಪ್ಪ ಕೂಡಲೇ ಅಂದ –ಕುಟ್ಟಿಪುರಂ ಅರಸರೆ! ನೀವು ಒದೇನನನು ಕೊಲ್ಲುವುದಕ್ಕೆ ನನಗೆ ಸಮ್ಮತಿ ಕೊಡುವುದಾದರೆ ಅವನನ್ನು ಇಂದೇ ನಾನು ಕೊಲ್ಲುತ್ತೇನೆ. ಕುಟ್ಟಿಪುರಂ ಅರಸು ಗೋಪಾಲ ಕಣ್ಣನನ್ನು ಕರೆದ. ಒದೇನನನ್ನು ಕೊಲ್ಲುವುದಕ್ಕೆ ಅಪ್ಪಣೆಯನ್ನು ಬರೆಯಿಸಿ ಕಂಡಪ್ಪನಿಗೆ ಕೊಟ್ಟ. ಈ ಸುದ್ದಿ ಹೇಗೋ ಒದೇನನ ಕಿವಿಗೆ ಬಿತ್ತು. ತನ್ನನ್ನು ಕೊಲ್ಲುವುದಕ್ಕೆ ಆಜ್ಞೆಯಾಗಿದೆ! ಒದೇನ ಕೂಡಲೇ ಚಾಪ್ಪನನ್ನು ಕರೆದು ಅವನಲ್ಲೆಂದ – ನನ್ನ ಮಗೂ ನನ್ನ ಕಂಡಾಚ್ಚೇರಿ! ಕುಟ್ಟಿಪುರಂನ ಅರಸ ನನ್ನನ್ನು ಕೊಲ್ಲುವ ಆಜ್ಞೆ ಮಾಡಿದ್ದಾನೆ. ನಾವು ಹೋಗೋಣ ನನ್ನ ಕಂಡಾಚ್ಚೇರಿ! ನಾವು ಕಳಸರಂ ಮನೆಗೆ ಹೋಗೋಣ! ಒದೇನ ತನ್ನ ಬಟ್ಟೆಬರೆಗಳನ್ನು ಹಾಕಿಕೊಂಡ. ಜೊತೆಯಲ್ಲಿ ಚಾಪ್ಪನೂ ಹೊರಟ. ಇಬ್ಬರೂ ಹೊರಟು ಎಲ್ಲೂ ನಿಲ್ಲದೆ ನಡೆಯುತ್ತ ಕಳಸರಂ ಮನೆಗೆ ತಲಪಿದಾಗ ಬಾಗಿಲುಗಳೆಲ್ಲ ಮುಚ್ಚಿವೆ! ಒದೇನ ಬಾಗಿಲ ಮುಂದೆ ನಿಂತು ಕರೆದ–ಕಳಸರಂ ಮನೆಯ ಕುಂಞಿಮಾತು! ಕೂಡಲೇ ಅವಳಿಂದ ಉತ್ತರ ಬಂತು– ಯಾರದು, ಬಾಗಿಲ ಬಳಿ ಕರೆಯುತ್ತಿರುವುದು? ಒದೇನ ಕೂಡಲೆ ಉತ್ತರಿಸಿದ–ಅರವುಲಕಾವ್‌ನ ನಿನ್ನ ಗಂಡ! ಅದಕ್ಕೆ ಮಾತು ಉತ್ತರಿಸಿದಳು – ಅರವುಲಕಾವ್‌ನ ನನ್ನ ಗಂಡ ಯಾವಾಗಲೂ ಬರಬೇಕಾದರೆ ಮಧ್ಯರಾತ್ರೆ ಹದಿನಾರು

ಗಳಿಗೆ ಕಳೆಯಬೇಕು. ಇಂದೇನು ಮೊದಲೇ ಬಂದು ಬಿಟ್ಟಿರಿ? ನಾನು ಬಾಗಿಲು ತೆರೆಯಬೇಕಾದರೆ ಹುಲಿಕಚ್ಚಿದ ಕೈಯನ್ನೂ ವೀರಕಂಕಣವನ್ನೂ ಬಾಗಿಲಸಂದಿಯಿಂದ ತೋರಿಸಬೇಕು. ಆಗ ಬಾಗಿಲು ತೆರೆದೇನು. ಒದೇನ ಹುಲಿಕಚ್ಚಿದ ಕೈಯನ್ನೂ ವೀರಕಂಕಣ ವನ್ನೂ (ಮಂತ್ರ ತಂತ್ರದಿಂದ) ಬಾಗಿಲ ಸಂದಿಯಿಂದ ತೋರಿಸಿದ. ಮಾತು ಕೂಡಲೇ ಬಾಗಿಲು ತೆರೆದಳು. ಅವಳಿಗೆ ಒದೇನನ ಗುರುತು ಹತ್ತಿತು. ಒದೇನ ಬಾಗಿಲು ದೂಡಿ ದೀಪವಾರಿಸಿ ಪಡುಕೋಣೆಗೆ ಹೋದ. ಒದೇನ ಮಾತುವಿಗೆಂದ–ಕಳಸರಂ ಮನೆಯ ಕುಂಞಿಮಾತು! ಅರವುಲಕಾವ್‌ನ ನಿನ್ನ ಗಂಡನಿಗೆ ಹಳೆಯಕ್ಕಿ ಅನ್ನ ನೀನು ಮಾಡಿಲ್ಲವೆ? ಕೂಡಲೆ ಮಾತುವೆಂದಳು – ತಚ್ಚೋಳಿ ಮನೆಯ ಒದೇನ! ಗಂಡನಿಗಾಗಿ ಇರಿಸಿದ ಅನ್ನವಿದು. ಅದನ್ನು ನಿನಗೆ ಕೊಟ್ಟರೆ ಗಂಡನಿಗೇನು ಕೊಡಲಿ? ಕೂಡಲೇ ಒದೇನನೆಂದ – ಕಳಸರಂ ಮನೆಯ ಕುಂಞಿಮಾತು! ನೀನು ಅನ್ನವನ್ನು ಈಗ ಕೊಡದೆ ಹೋದರೆ ನಿನ್ನನ್ನು ಜೀವ ಸಹಿತ ಇಡಲಾರೆ! ಅದನ್ನು ಕೇಳಿದ ಮಾತು ಅನ್ನವನ್ನು ಅವನಿಗೆ ಕೊಟ್ಟಳು. ಒದೇನ ಅನ್ನವನ್ನು ತೆಗೆದುಕೊಂಡು ಉಂಡ. ನೀರು ಕುಡಿದ. ಬಳಿಕ ಹೇಳಿದ – ಕಳಸರಂ ಮನೆಯ ಕುಂಞಿಮಾತು, ನಿನ್ನಾಣೆ, ನನ್ನಾಣೆ. ನಿನ್ನ ಗಂಡನನ್ನು ನಾನು ಕೊಲ್ಲುವುದಿಲ್ಲ. ನಾನು ಇಲ್ಲಿಗೆ ಬಂದ ವಿಚಾರವನ್ನು ನಿನ್ನ ಗಂಡನಿಗೆ ಹೇಳಬೇಡ. ಕಂಡಪ್ಪ ಇಲ್ಲಿಗೆ ಬಂದರೆ ನೀನು ಇಂದೇ ಅವನಿಗೆ ತಿಳಿಸು – ಅರವುಲಕಾವ್‌ನ ನನ್ನ ಗಂಡ! ನೀವು ಇಲ್ಲಿಂದ ಹೋದ ಹೊತ್ತಿನಲ್ಲಿ ನನಗೆ ನೆತ್ತಿಸಿಡಿತ ಮತ್ತು ತಲೆನೋವು. ಆಗಾಗ ಒಳಗಿನಿಂದಲೂ ನೋವು. ಹಾಗಾಗಿ ರಾತ್ರೆಗೆ ಅನ್ನ ನಾನು ಮಾಡಿಲ್ಲ. ಕುಡಿಯುವ ನೀರೂ ಕಾಸಿಟ್ಟಿಲ್ಲ. ಬೆಂಕಿ ದೀಪಗಳನ್ನೂ ನಾನು ನೋಡಲಾರೆ. ಹಾಗಾಗಿ ಸಂಜೆಗೆ ದೀಪವನ್ನೂ ಇಟ್ಟಿಲ್ಲ. ಅಷ್ಟನ್ನು ಹೇಳಿ ಒದೇನನು ದೀಪವನ್ನೂ ಊದಿ ನಂದಿಸಿದ. ಅವನು ಪಡುಕೋಣೆಗೆ ಸೇರಿಕೊಂಡ. ಅವರಿಬ್ಬರೂ ಸೇರಿದರು. ಅವರು ಹಾಗೆ ಸೇರಿದಾಗ ಅರವುಲಕಾವ್‌ನ ಕಂಡಪ್ಪ ಕುಟ್ಟಿಪುರಂ ಅರಸ ನಿದ್ದೆ ಮಾಡಿದಾಗ ಬೇಗ ಬೇಗ ಮನೆಗೆ ಹೊರಟ. ಮುನ್ನೂರ ಮೂವತ್ತು ನಾಯನ್ಮಾರರನ್ನು ಸೇರಿಸಿಕೊಂಡ. ಅವರು ಕಳಸರಂ ಮನೆಗೆ ಬಂದರು. ಬಾಗಿಲಿಗೆ ಬಂದು ಕರೆದರು – ಕಳಸರಂ ಮನೆಯ ಕುಂಞಿಮಾತು! ಬಾಗಿಲು ತೆಗೆ! ಅದನ್ನು ಕೇಳಿದ ಮಾತು ಬಾಗಿಲು ತೆರೆದಳು. ಕುಂಞಿಕುಂಡಪ್ಪ ಅವಳಲ್ಲಿ ಕೇಳಿದ – ಇದೇನು ಮಾತು? ಈ ಮನೆಯಲ್ಲಿ ಬೆಂಕಿಯಾಗಲಿ ದೀಪವಾಗಲಿ ಇಲ್ಲವೆ? ಕೂಡಲೇ ಮಾತುವೆಂದಳು –ಅರವುಲಕಾವ್‌ನ ನನ್ನ ಗಂಡ! ನೀವು ಇಲ್ಲಿಂದ ಹೋದ ಬಳಿಕ ನನಗೆ ನೆತ್ತಿಸಿಡಿತ ಮತ್ತು ತಲೆನೋವು. ಆಗಾಗ ಒಳಗಿನಿಂದಲೂ ನೋವು. ಹಾಗಾಗಿ ಬೆಂಕಿಯನ್ನಾಗಲಿ ದೀಪವನ್ನಾಗಲಿ ನಾನು ನೋಡ ಲಾರೆ. ಸಂಜೆಯ ದೀಪವನ್ನೂ ನಾನು ಇಟ್ಟಿಲ್ಲ. ರಾತ್ರೆಗೆ ಅನ್ನವನ್ನೂ ಮಾಡಿಲ್ಲ.

ಕುಡಿಯಲು ನೀರನ್ನೂ ಕಾಸಿಟ್ಟಿಲ್ಲ. ಕೂಡಲೇ ಕುಂಞಿಕಂಡಪ್ಪನೆಂದ – ಕಳಸರಂ ಮನೆಯ ಕುಂಞಿಮಾತು! ನನಗೀಗ ತುಂಬ ಹಸಿವಾಗಿದೆ. ಫಲಾಹಾರವನ್ನಾದರೂ ನೀನು ಮಾಡಿಟ್ಟಿಲ್ಲವೆ? ಕೂಡಲೆ ಮಾತು ಎಂದಳು – ಅರವುಲಕಾವ್‌ನ ನನ್ನ ಗಂಡ! ನಾನು ಕೆಂಡದೋಸೆ ಮಾಡಿಟ್ಟಿದ್ದೇನೆ. ಕೂಡಲೆ ಕಂಡಪ್ಪನೆಂದ – ಕಳಸರಂ ಮನೆಯ ಕುಂಞಿಮಾತು! ಕೆಂಡದೋಸೆಯಾದರೆ ಕೆಂಡದೋಸೆ. ತೆಗೆದುಕೊಂಡು ಬಾ. ಅದನ್ನು ಕೇಳಿದ ಮಾತು ದೋಸೆಯನ್ನು ತುಂಡು ತುಂಡು ಮಾಡಿ ಮಂಚದ ಮೇಲೆ ತೆಗೆದು ಕೊಂಡು ಹೋಗಿ ಇಟ್ಟಳು. ಕಂಡಪ್ಪ ಒಂದು ತುಂಡು ಅಪ್ಪವನ್ನು ತಿಂದಾಗ ಒದೇನ ಕಂಡಪ್ಪನ ಕಣ್ಣಿಗೆ ಬೀಳದೆ ಎರಡು ತುಂಡು ತಿಂದ. ಕಂಡಪ್ಪ ಎರಡು ತುಂಡು ತಿಂದಾಗ ಒದೇನ ನಾಲ್ಕು ತುಂಡು ತಿಂದ. ಕಂಡಪ್ಪ ಅಪ್ಪದೊಂದಿಗೆ ಒದೇನನ ಕೈಯನ್ನು ಹಿಡಿದುಕೊಂಡು ಕೇಳಿದ – ಕಳಸರಂ ಮನೆಯ ಕುಂಞಿಮಾತು! ಇದು ಉರುಮಿ ಹಿಡಿದ ದಡ್ಡೋ ಇದು ಒನಕೆ ಹಿಡಿದ ದಡ್ಡೋ? ಅದಕ್ಕೆ ಕುಂಞಿಮಾತುವೆಂದಳು (=ಒದೇನ) – ಇದು ಒನಕೆ ದಡ್ಡು ಅರವುಲಕಾವ್‌ನ ನನ್ನ ಗಂಡ. ಇದು ಉರುಮಿಯ ದಡ್ಡಲ್ಲ. ಅದನ್ನು ಕೇಳಿದ ಕಂಡಪ್ಪ ಅಪ್ಪದೊಂದಿಗೆ ಹಿಡಿದಿದ್ದ ಕೈಯನ್ನು ಬಿಟ್ಟುಬಿಟ್ಟ. ಕೈ ಬಿಟ್ಟು ಹೇಳಿದ – ಕಳಸರಂ ಮನೆಯ ಕುಂಞಿಮಾತು! ನಿನಗೆ ಇಷ್ಟೊಂದು ಹಸಿವೆಯೆ? ನಾನು ಇದೀಗ ಎರಡು ತುಂಡು ತಿಂದಾಗ ನೀನು ನಾಲ್ಕು ತುಂಡು ತಿನ್ನುತ್ತಿಯಲ್ಲ? ಅವನು ಮುಂದುವರಿಸಿ ಹೇಳಿದ – ಕಳಸರಂ ಮನೆಯ ಕುಂಞಿಮಾತು! ಕಡವತ್ತು ವಯನಾಡಿನ ತಚ್ಚೋಳಿಯನ್ನು ಕೊಲ್ಲುವ ಅನುಮತಿಯನ್ನು ನಾನು ಪಡೆದಿದ್ದೇನೆ. ಅವನನ್ನು ಹಣಿಯುವುದಕ್ಕಾಗಿ (=ಕೊಲ್ಲಲು) ನಾನು ಹೊರಡಬೇಕಾಗಿದೆ. ಕಂಡಪ್ಪ ಬೇಗಬೇಗ ಮೆಟ್ಟಲಿಳಿದು ಹೊರಟ. ಮುನ್ನೂರ ಮೂವತ್ತು ನಾಯನ್ಮಾರರೂ ಅವನ ಜತೆ ಹೊರಟರು. ಕುಂಞಿಮಾತುವೂ ಒದೇನನೂ ಬಳಿಕ ಸಂತಸದಿಂದ ಕೂಡಿದರು. ಅವರು ಹಾಗೆ ಸುಖವಾಗಿ ಸೇರಿ ಹೊತ್ತು ಮಧ್ಯರಾತ್ರೆಯಾದಾಗ ಒದೇನ ಪಡುಕೋಣೆ ಯಿಂದ ಮೆಲ್ಲ ಇಳಿದು ಬಂದ. ಅರವುಲಕಾವ್‌ನ ಕಂಡಪ್ಪ ಮತ್ತು ಇಪ್ಪತ್ತೆರಡು ಮಂದಿ ನಾಯಮ್ಮಾರರ ಮುಂಜುಟ್ಟು ಹಿಡಿದುಕೊಂಡು – ಹೊಡೆದಲ್ಲ ಬಡಿದಲ್ಲ – ಎಲ್ಲರನ್ನೂ ಹಿಡಿದು ಕಟ್ಟಿ ಹಾಕಿದ. ಬಳಿಕ ಬಾಳೆಯ ತೋಟಕ್ಕೆ ಹೋಗಿ ನಾಲ್ಕಾರು ಬಾಳೆದಿಂಡುಗಳನ್ನು ಕಡಿದು ತಂದು ಮನೆಯ ಮುಂದಿನ ಬತ್ತಿದ ಕೀರುತೊರೆಗೆ ಹಾಕಿದ್ದ ಮರದ ದಿಂಡುಗಳನ್ನು ತೆಗೆದು ಅದರ ಜಾಗದಲ್ಲಿ ಬಾಳೆದಿಂಡುಗಳನ್ನು ಇಟ್ಟು ಅವುಗಳ ಕೆಳಗೆ ಕಾರೆಮುಳ್ಳುಗಳ ದಂಟುಗಳನ್ನು ಹರಡಿದ. ಒದೇನ ಕುಂಞ್ಯಂಡಪ್ಪನನ್ನೂ ನಾಯನ್ಮಾರರನ್ನೂ ಕಟ್ಟಿಹಾಕಿದ್ದ ಹಗ್ಗ ಬಿಚ್ಚಿದ. ಬಳಿಕ ಕೂಗಿ ಹೇಳಿದ – ಅರವುಲಕಾವಿನ ಕುಂಞ್ಯಂಡಪ್ಪಾ! ಕುಟ್ಟಿಪುರಂನ ಅರಸನಿಂದ ನನ್ನನ್ನು ಕೊಲ್ಲುವ ಆಜ್ಞೆಪಡೆದು ನಿನ್ನ ಮನೆ ಬಾಗಿಲಲ್ಲಿ ಮಲಗಿರುವೆಯಲ್ಲ?

ಅದನ್ನು ಕೇಳಿದ ನಾಯನ್ಮಾರರ ನಿದ್ರೆಯೆಲ್ಲ ಹಾರಿಹೋಯಿತು. ಕಂಡಪ್ಪನೆಂದ – ತಚ್ಚೋಳಿ ಒದೇನ! ಅರಸುತ್ತಿದ್ದ ಬಳ್ಳಿ ಕಾಲಿಗೆ ತೊಡರಿದಂತಾಯಿತು. ನಿನ್ನು ಕೊಲ್ಲದ ಬಿಡುವವನಲ್ಲ ಹೀಗೆ ಎನ್ನುತ್ತ ಎಲ್ಲರೂ ನಾಲ್ಕಾರು ದಿಕ್ಕಿಗೆ ಒದೇನನ್ನು ಹುಡುಕುತ್ತ ಓಡಿ ಹೋದರು. ಕಿರುತೊರೆಯ ಸೇತುವೆಯ ಮೇಲಿಂದ ಓಡುತ್ತಿದ್ದ ಅರುವುಲಕಾವ್‌ನ ಕುಂಞಿಕಂಡಪ್ಪ ಬಾಳೆಯ ದಿಂಡುಗಳು ಮುರಿದು ಕೆಳಗೆ ಬಿದ್ದ. ಕಾರೆಮುಳ್ಳುಗಳೆಲ್ಲ ಚುಚ್ಚಿದುವು. ಆಗ ಒದೇನ ಕೂಗಿಕೊಂಡ – ಇಪ್ಪತ್ತೆರಡು ಮಂದಿ ನಾಯನ್ಮಾರರೆ! ಅಷ್ಟೊಂದು ಸೊಕ್ಕಿದ ಒದೇನ ಇದೋ ಹೊಂಡಕ್ಕೆ ಬಿದ್ದು ಬಿಟ್ಟಿದ್ದಾನೆ. ಕಲ್ಲುಗಳನ್ನು ಹೆಕ್ಕಿಕೊಳ್ಳಿ. ಹೊಂಡಕ್ಕೆ ಬಿದ್ದ ಒದೇನನನ್ನು ಕಲ್ಲೆಸೆದು ಕೊಂದುಬಿಡಿರೋ! ಅದನ್ನು ಕೇಳಿದ ನಾಯನ್ಮಾರರು ಕೂಡಲೆ ಸಿಕ್ಕಸಿಕ್ಕ ಕಲ್ಲುಗಳನ್ನು ಹೆಕ್ಕಿಕೊಂಡರು. ಹೊಂಡಕ್ಕೆ ಬಿದ್ದಿದ್ದ ಕಂಡಪ್ಪನನ್ನು ಕಂಡಪ್ಪನೆಂದು ಗೊತ್ತಾಗದೆ ಕಲ್ಲೆಸೆದು ಕೊಂದರು. ಕಂಡಪ್ಪ ಹಾಗೆ ಸತ್ತಾಗ ಒದೇನ ಬೇಗೆ ಬೇಗ ಹೋಗಿ ಮಾತುವಿಗೆಂದ – ನಿನ್ನಾಣೆ ನನ್ನಾಣೆ ಕುಂಞಿಮಾತು! ನಾನು ನಿನ್ನ ಗಂಡನನ್ನು ಕೊಲ್ಲಲಿಲ್ಲ. ಅವನ ಜತೆಗೇ ಇದ್ದ ನಾಯನ್ಮಾರರು ಅವನನ್ನು ಕಲ್ಲೆಸೆದು ಕೊಂದಿದ್ದಾರೆ. ಹಾಗೆ ಅವನು ಅಲ್ಲೇ ಉಳಿದುಕೊಂಡು ಹುಲ್ಲರಳಿ ಬೆಳಕು ಹರಿದಾಗ ಮಾತುವಿಗೆಂದ – ಕಳಸರಂ ಮನೆಯ ಕುಂಞಿಮಾತು! ನಿನಗೆ ಇನ್ನಾರೂ ಗೆಳತಿಯರಿಲ್ಲ. ಇನ್ನು ನನ್ನ ಜತೆಗೆ ಬಂದುಬಿಡು. ಅದನ್ನು ಕೇಳಿದ ಮಾತು ಅಳುತ್ತ ಹೋದಳು. ಅವರು ಇಬ್ಬರೂ ಜತೆಯಾಗಿ ಹೋದರು. ಹಾಗೆ ನಡೆಯುತ್ತ ನಡೆಯುತ್ತ ಅವರು ಕಾವಿಲ್ ಚಾತ್ತೋತ್‌ಗೆ ಬಂದರು. ಮಾತುವನ್ನು ಒದೇನ ಬಾಗಿಲ ಬಳಿಯೇ ನಿಲ್ಲಿಸಿದ. ಬಳಿಕ ಮೆಟ್ಟಲೇರಿ ಹೋದ. ಕಾವಿಲ್ ಚಾತ್ತೋತ್ ಕುಂಞಿಚೇರುವಿಗೆ ಹೇಳಿದ – ಕಾವಿಲ್ ಚಾತ್ತೋತ್ತ ಚೇರು, ನಿನಗೆ ಇಲ್ಲಿ ಯಾರೂ ಜತೆಗಿಲ್ಲವಲ್ಲ! ನಾನೊಬ್ಬಳನ್ನು ಕರೆತಂದಿದ್ದೇನೆ. ನೀನು ಹೋಗಿ ಅವಳನ್ನು ಕರೆದುಕೊಂಡು ಬಾ! ಅದನ್ನು ಕೇಳಿದ ಕುಂಞಿಚ್ಚೇರು ಬಾಗಿಲಬಳಿಗೆ ಹೋದಳು. ಮಾತುವಿನ ಕೈಹಿಡಿದು ಕೊಂಡು ಕೂಡಲೇ ಮೆಟ್ಟಲು ಹತ್ತಿಸಿ ಕರೆದೊಯ್ದಳು. ತಚ್ಚೋಳಿ ಒದೇನನು ಚೇರುವಿನ ಈ ಕಾರ್ಯವನ್ನು ಕಣ್ಣಾರೆ ಕಂಡ. ಚೇರು ಅವನಿಗೆಂದಳು – ತಚ್ಚೋಳಿ ಮನೆಯ ನನ್ನ ಗಂಡ! ನಿಮ್ಮಷ್ಟು ಬುದ್ಧಿ ನನಗಿಲ್ಲವಾದರೂ ನಿಮ್ಮ ಅನ್ನವನ್ನು ನಾನು ಉಣ್ಣುತ್ತಿರುವೆನಷ್ಟೆ? ಆ ಮಾತುಗಳನ್ನು ಕೇಳಿ ಒದೇನ ಮುಗುಳ್ನಕ್ಕ. ನಗುತ್ತ ಹೀಗೆಂದ – ಕಾವಿಲ್‌ಚಾತ್ತೋತ್ತ ಚೇರು! ಕಳಸರಂ ಮನೆಯ ಕುಂಞಿಮಾತುವಿಗೆ ಯಾರೂ ಜತೆಗಾರ್ತಿಯರಿಲ್ಲ. ನೀನು ಅವಳನ್ನು ಚೆನ್ನಾಗಿ ನೋಡಿಕೊ. ಹೀಗೆ ಅವರೆಲ್ಲ ಅಲ್ಲಿ ಜತೆಯಾಗಿ ಸೇರಿಕೊಂಡು ಇದ್ದರು.

ಇದೆಂಥ ಒದೆ ಸಿಕ್ಕಿತು ನಿಮಗೆ!

ತಚ್ಚೋಳಿ ಕಣ್ಮಣಿ ಬಾಲ ಒದೇನ, ಕಂಡಾಚ್ಚೇರಿ ಚಾಪ್ಪ, ಕಾವಿಲ್ ಚಾತ್ತೋತ್ತ್‌ನ ಕುಂಞಿಕುಂಕ, ಇನ್ನೂ ಇಬ್ಬರು ನಾಯಮ್ಮಾರರು ಒಂದಾಗಿ ಹೋಗುತ್ತಿದ್ದಾಗ ಒಂದೆಡೆ ಗುಂಪು ಸೇರಿದ್ದ ಬೇರೆ ಹದಿನೆಂಟು ನಾಯಮ್ಮಾರರು ಹೀಗೆಂದರು – ತಚ್ಚೋಳಿಯ ಒದೇನ ಅನೇಕ ವರಸೆಗಳನ್ನು ಕಲಿತಿದ್ದಾನೆ. ಹೆಚ್ಚಿನ ಪಟ್ಟುಗಳನ್ನೂ ಕಲಿತಿದ್ದಾನೆ. ಕತ್ತಿವರಸೆ ಕಲಿತಿದ್ದಾನೆ. ಉರುಮಿ ವರಸೆಗಳನ್ನೂ ಕಲಿತಿದ್ದಾನೆ. ಇಷ್ಟೆಲ್ಲ ಕಲಿತಿದ್ದರೂ ಏನು ಉಪಯೋಗ? ಬಿಳಿಯರಲ್ಲಿ ಸೋತು ಸುಣ್ಣವಾದ. ಅವನು ಯಾಕಾದರೂ ಇನ್ನು ಬದುಕಿದ್ದಾನೋ? ಅವನಿಗೆ ಎಷ್ಟು ಅಪಮಾನದ ಸಂಗತಿ ಇದು. ಬಿಳಿಯರಲ್ಲಿ ಸೋತು ಹೋದ. ಅವರನ್ನು ಇನ್ನು ಇದಿರಿಸುವವರು ಯಾರು? ಸೋತದ್ದಾದರೂ ಹೋಗಲಿ, ನನ್ನ ಗೆಳೆಯರೆ! ಒದೇನನ ಸುರ್ಪವನ್ನೇ ಅವರು ಬದಲಿಸಿಬಿಟ್ಟರು! ಸೊಂಟದ ಬೇನೆಗಿರಬೇಕು, ಎರಡು ತಿಂಗಳ ಕಾಲ ಎಣ್ಣೆ ಒತ್ತಿಸಿದನಲ್ಲ! ಹೀಗೆ ಆ ನಾಯಮ್ಮಾರರು ಹೇಳಿದ್ದನ್ನು ಒದೇನ ಕಿವಿಯಾರೆ ಕೇಳಿದ. ಕೇಳಿಯೂ ಕೇಳದವನಂತೆ ನಡೆದ. ಮನದಲ್ಲೆ ನೆನೆದುಕೊಂಡ – ಎಷ್ಟೊಂದು ಹೀನಾಯವಾಗಿ ಹೋಯಿತು ನನಗೆ! ಗೆಳೆಯರ ಮಾತು ಕೇಳಿ ಹಾಗಾಯಿತು. ಕಾವಿಲ್ ಚಾತ್ತೋತ್ತ್‌ನ ಚೇರುವಿನ ಮಾವ ಈ ಸುದ್ದಿ ತಿಳಿದರೆ ಏನೆಂದಾರೋ! ನಾನೇನು ಮಾಡಲಿ ದೇವರೆ? ಹೀಗೆ ಚಿಂತಿಸುತ್ತ ನಡೆಯುತ್ತಿರಲು ಕಾವಿಲ್ ಚಾತ್ತೋತ್ತ್‌ನ ಕುಂಞಿಕುಂಕ ಕೇಳಿದ – ತಚ್ಚೋಳಿ ಒದೇನ! ನಾವು ಇತ್ತ ಬರುತ್ತಿದ್ದಾಗ ಆ ನಾಯಮ್ಮಾರರು ಹೇಳಿದ್ದೇನು? ಒದೇನ ಎಲ್ಲ ಸಂಗತಿಗಳನ್ನು ವಿವರವಾಗಿ ಹೇಳಿದ. ಅವನು ಅದನ್ನು ಕೇಳಿ ಹೀಗೆಂದ – ತಚ್ಚೋಳಿ ಒದೇನ! ಯಾರು ಏನು ಬೇಕಾದರೂ ಹೇಳಲಿ. ಬಿಳಿಯರಿಗೆ ಸಮನಾಗಿ ನಿಲ್ಲುವವರು ನಮ್ಮ ಊರಲ್ಲೇ ಯಾರೂ ಇಲ್ಲ. ಅವರು ಇಲ್ಲಿಗೆ ಸುಮ್ಮನೆ ಬಂದರೆ? ಊರುಗಳನ್ನೆಲ್ಲ

ಹಿಡಿಯುವುದಕ್ಕೆ ಬಂದರಲ್ಲವೆ? ಅವರು ತುಂಬ ಮಂದಿ ಬಂದಿದ್ದಾರೆ. ಅರಸರ ಅರಮನೆಗೂ ಹೋಗಿದ್ದಾರೆ. ಅವರಿಗೆ ಯಾರೂ ಮೈಲಿಗೆಯವರಲ್ಲ. ಅರಮನೆಗೆ ಹೋಗಿ ಅವರು ಅರಸರನ್ನು ಕಂಡಾಗ ಅರಸರೇ ದಂಗಾಗಿಬಿಟ್ಟರು. ಅರಸರೇ ಅವರಲ್ಲಿ ಹೇಳಿದರು – ನಿಮಗೆ ಏನೆಲ್ಲ ಬೇಕಾಗಿದೆಯೋ ಅವನ್ನೆಲ್ಲ ನಾನು ಒದಗಿಸುತ್ತೇನೆ – ಎಂದು ಹೇಳಿ ಬಿಳಿಯರನ್ನು ಕಳಿಸಿಕೊಟ್ಟರಲ್ಲವೆ? ಹೆಂಗುಸರನ್ನು ಕಂಡರೆ ಅವರು ಹಿಂದೆಯೇ ಓಡುತ್ತ ಹೋಗುತ್ತಾರೆ. ಕೂಡಲೇ ಒದೇನನೆಂದ – ಬಿಳಿಯರು ಮಾಡಿದ್ದನ್ನೆಲ್ಲ ನಾನು ಇನ್ನೂ ಮರೆತಿಲ್ಲ. ನಾನು ಆ ಹಗೆಯನ್ನು ತೀರಿಸದೆ ಬಿಡಲಾರೆ. ಹೀಗೆ ಮಾತ ನಾಡುತ್ತ ಹೋಗಿ ಅವರು ತಚ್ಚೋಳಿ ಮನೆಗೆ ತಲಪಿದರು. ಮೇಪ್ಪಕ್ಕೆ ತಲಪಿದ ಬಳಿಕ ಕಂಡಾಚ್ಚೇರಿ ಚಾಪ್ಪನನ್ನು ಕರೆದು ಒದೇನನೆಂದ – ಕಂಡಾಚ್ಚೇರಿಯ ಪ್ರಿಯಚಾಪ್ಪ! ಸರಿಯಾಗಿ ಕೇಳಿಸಿಕೊ. ನಾವು ಇಂದು ಹೋಗುತ್ತಿದ್ದಾಗ ನಾಯಮ್ಮಾರರು ಹೇಳಿದ್ದನ್ನು ಕೇಳಿದೆಯಲ್ಲವೆ? ನನಗೆಷ್ಟು ಅಪಮಾನವಾಯಿತು ಗೊತ್ತೆ? ಅವರು ಹದಿನೆಂಟು ಮಂದಿ ಇದ್ದಾರೆ. ಅವರಿಗೆ ಗೊತ್ತಾಗದಂತೆ ನಾನು ಅವರಿಗೆ ಪಾಠ ಕಲಿಸುತ್ತೇನೆ. ಅವರೆಲ್ಲರ ಮನೆಗಳಿಗೂ ಬಿಳಿಯರನ್ನು ಹತ್ತಿಸುತ್ತೇನೆ. ಕೂಡಲೆ ಚಾಪ್ಪನೆಂದ – ತಚ್ಚೋಳಿ ಒದೇನ! ನೀನು ಬಿಳಿಯರನ್ನು ಹೇಗೆ ಹತ್ತಿಸುತ್ತಿ? ಆಗ ಒದೇನನೆಂದ – ಕಂಡಾಚ್ಚೇರಿಯ ಪ್ರಿಯ ಚಾಪ್ಪ! ಕೈದೇರಿ ಎಡಂನ ಚಾಪ್ಪನಿಗೆ ಬಿಳಿಯರೆಂದರೆ ತುಂಬ ಇಷ್ಟ. ಅವನ ಜನರನ್ನೆಲ್ಲರನ್ನೂ – ತಂಗಿಯಂದಿರು ಸೊಸೆ ಯಂದಿರು – ಎಲ್ಲರನ್ನೂ ಬಿಳಿಯರಿಗೆ ಅವನು ಕೊಟ್ಟಿದ್ದು, ಅವರ ಮೇಲೆ ಅಭಿಮಾನವುಳ್ಳವನಾಗಿದ್ದಾನೆ. ಅವನಲ್ಲಿ ಹೇಳಿ ಹೇಗಾದರೂ ಬಿಳಿಯರನ್ನು ಎಲ್ಲ ಮನೆಗಳಲ್ಲೂ ಹತ್ತಿಸುತ್ತೇನೆ. ಅಂತೆಯೇ ಒದೇನ ಕೈದೇರಿ ಚಾಪ್ಪನನ್ನು ಕರೆದು ನಾಯಮ್ಮಾರರು ತನ್ನನ್ನು ಅಪಮಾನಿಸಿದ್ದನ್ನು ಹೇಳಿದ. ತನ್ನ ಗೆಳೆಯರ ಮುಂದೆ ಅವರು ಹಾಗೆ ಹೇಳಿದ್ದರಿಂದ ತನಗೆ ತುಂಬ ಅವಮಾನ ವಾಯಿತು. ತಾನು ಆ ಹಗೆಯನ್ನು ತೀರಿಸಲೇಬೇಕಾಗಿದೆ. ಅದಕ್ಕೆ ಏನು ಮಾಡೋಣ? ಎಂದು ಕೈದೇರಿ ಚಾಪ್ಪನಲ್ಲಿ ಸಲಹೆ ಕೇಳಿದ. ಕೈದೇರಿ ಚಾಪ್ಪ ಕೂಡಲೇ ಉತ್ತರವಿತ್ತ – ತಚ್ಚೋಳಿ ಒದೇನ! ಇಷ್ಟು ಬೇಗ ಮರೆತು ಬಿಟ್ಟೆಯಾ? ನನ್ನಲ್ಲಿಗೆ ಬಿಳಿಯರು ಬಂದಾಗ ನೀನೇ ಅವರಿಗೆ ಹೊಡೆಯಬಂದೆ ಅಲ್ಲವೇ? ಹದಿನೆಂಟು ಜನ ನಾಯಮ್ಮಾರರ ಮಾತು ಕೇಳಿ ನೀನು ಪೆಟ್ಟುತಿಂದು ಅಂದು ಯಾಕೆ ಸುಮ್ಮನಿದ್ದೆ? ಈಗ ಅದೇ ಹದಿನೆಂಟು ಜನ ನಿನ್ನನ್ನು ಪರಿಹಾಸ ಮಾಡುತ್ತಿದ್ದಾರೆ. ನಿನಗೆ ಹಾಗೇ ಆಗಬೇಕು. ಅದಕ್ಕೆ ಒದೇನನೆಂದ – ಆದದ್ದು ಆಗಿ ಹೋಯಿತಲ್ಲ ಚಾಪ್ಪ! ಆಗಿ ಹೋದದ್ದನ್ನೇ ಹೇಳಬೇಡ. ನನ್ನಿಂದ ಆ ತಪ್ಪು ನಡೆದುಹೋಯಿತು. ಚಾಪ್ಪ ಆಗ ಹೇಳಿದ –ತಚ್ಚೋಳಿ ಒದೇನ! ಬಿಳಿಯರು ಬಂದುದು ರಾಜ್ಯ ಹಿಡಿಯುವುದಕ್ಕೆ. ಹದಿನೆಂಟು ಮನೆಗಳ

ಮುಂಡರನ್ನೆಲ್ಲ ಒದ್ದು ಕೆಡವದೆ ಅವರು ಇರಲಾರರು. ನಾನು ಒಂದು ಉಪಾಯವನ್ನು ಹೇಳುತ್ತೇನೆ, ಕೇಳು. ಒದೇನ ಕೂಡಲೆ ಕೇಳಿದ–ಏನು ಉಪಾಯ, ಹೇಳು. ಕೈದೇರಿ ಚಾಪ್ಪನೆಂದ – ಹದಿನೆಂಟು ನಾಯಮ್ಮಾರರೂ ಸೇರಿ ಪಟ್ಟಾಂಗ ಹೊಡೆಯುವ ಹೊತ್ತಿಗೆ ಅವರಿಗೆ ತಿಳಿಯದಂತೆ ಪೆರುಮಲಯ ಕಣ್ಣ ಪಣಿಕ್ಕರನ್ನು ಅವರ ಮುಂದೆ ನಿಲ್ಲಿಸಬೇಕು. ಅವನ ಕೂದಲು ಮತ್ತು ಪಂಚೆ ಉಡುವ ಕ್ರಮದಿಂದ ಅವನು ಹೆಣ್ಣೆಂದೇ ಯಾರಾದರೂ ಭಾವಿಸಬೇಕು, ಹಾಗಿದ್ದಾನೆ! ಆ ಹೊತ್ತಿಗೆ ಬಿಳಿಯರು ಅಲ್ಲೆ ಹೋಗುತ್ತಿರುತ್ತಾರೆ. ಪಣಿಕ್ಕರನ್ನು ಹೆಣ್ಣೆಂದೇ ಭಾವಿಸಿದ ಅವರು ಅವನ ಹಿಂದೆಯೇ ಓಡುತ್ತಾರೆ. ಆಗ ಬಿಳಿಯರು ಮೋಸಹೋದುದಕ್ಕೆ ನಾಯಮ್ಮಾರರು ನಗದೆ ಇರಲಾರರು. ಆಗ ಅವರನ್ನು ಬಿಳಿಯರು ಹಿಡಿದುಕೊಂಡು ಒದೆಯದೆ ಇರಲಾರರು. ಒದೇನ! ನಾನೂ ಬಿಳಿಯರೂ ಅತ್ಯಂತ ನಿಕಟವಾಗಿದ್ದೇವೆ, ನಿನಗೂ ಗೊತ್ತು. ಈಗ ನಾವು ಮಾಡಿರುವ ಏರ್ಪಾಡುಗಳೆಲ್ಲ ನಾಯಮ್ಮಾರರು ಬಿಳಿಯರಿಗಾಗಿ ಮಾಡಿದ ಸಂಚೆಂದು ನಾನು ಅವರಿಗೆ ಹೇಳುತ್ತೇನೆ. ಅದು ಹೆಣ್ಣಲ್ಲವೆಂದೂ ಮಲೆಯರೆಂಬ ಜಾತಿಯ ಒಬ್ಬ ಗಂಡುಸೆಂದೂ ನಿಮ್ಮನ್ನು ವಂಚಿಸುವುದಕ್ಕಾಗಿಯೇ ಈ ಸಂಚು ರೂಪಿಸಿದ್ದಾರೆಂದೂ ತಿಳಿಸುತ್ತೇನೆ. ಒದೇನ! ಹದಿನೆಂಟು ನಾಯಮ್ಮಾರರೂ ಅಶ್ವತ್ಥ ಕಟ್ಟೆಯಲ್ಲಿ ಕುಳಿತು ಪಟ್ಟಾಂಗ ಹೊಡೆಯುವ ಹೊತ್ತಿಗೆ ಕಣ್ಣ ಪಣಿಕ್ಕರನ್ನು ಹೇಳಿ ನೀನು ಕಳುಹಿಸು. ಆದರೆ ಒಳಗುಟ್ಟನ್ನು ಅವನಿಗೆ ಹೇಳಬೇಡ. ಅವನು ಹೆದರಿಕೊಂಡಾನು. ನೀನು ಅಶ್ವತ್ಥ ಕಟ್ಟೆಯ ಬಳಿಗೆ ಬರುವ ತನಕ ಅವನು ಕಾದುನಿಲ್ಲಬೇಕು. ನೀವಿಬ್ಬರು ಜತೆಯಾಗಿ ಎಲ್ಲಿಗೋ ಹೋಗುವುದಕ್ಕಿದೆ ಎಂದಷ್ಟೇ ಅವನಿಗೆ ಹೇಳು. ಈ ಏರ್ಪಾಡನ್ನು ನೆನೆದು ಒದೇನ ಬಿದ್ದು ಬಿದ್ದು ನಕ್ಕ. ಬಳಿಕ ಅಲ್ಲಿಂದ ಹೊರಟು ಹೋಗಿ ಪೆರುಮಲಯ ಕಣ್ಣನನ್ನು ಕರೆಸಿ ಮೊದಲೇ ನಿಶ್ಚಯಿಸಿದಂತೆ ಅವನಲ್ಲಿ ಅಶ್ವತ್ಥಕಟ್ಟೆಯ ಬಳಿ ಕಾದುನಿಲ್ಲಲು ಹೇಳಿದ. ಪಣಿಕ್ಕರ್ ಅದಕ್ಕೊಪ್ಪಿ ಅಲ್ಲಿಂದ ಹೊರಟುಹೋದ.

ಕೈದೇರಿ ಚಾಪ್ಪನೂ ಮೊದಲೇ ನಿಶ್ಚೈಸಿದಂತೆ ಬಿಳಿಯರಲ್ಲಿ ವಿಷಯಗಳನ್ನು ಹೇಳಿದ. ಅವರು ಸಿಟ್ಟಿನಿಂದ ಕುದಿಯುತ್ತಿದ್ದರು. ಅವರು ಆ ದಾರಿಯಾಗಿ ಹೋಗುತ್ತಿರಲು ಹದಿನೆಂಟು ನಾಯಮ್ಮಾರರೂ ಅಶ್ವತ್ಥ ಕಟ್ಟೆಯಲ್ಲಿ ಕುಳಿತಿದ್ದರು. ಒದೇನ ಮರೆಯಲ್ಲಿ ನಿಂತಿದ್ದ. ಬಿಳಿಯರು ಹತ್ತು ಜನರಿದ್ದರು. ಚಾಪನು ಹೇಳಿದ್ದಂತೆ ಬಿಳಿಯರು ಮಲೆಯನ ಹಿಂದೆಯೇ ಓಡಿದರು. ನಾಯಮ್ಮಾರರು ಕುಳಿತಿದ್ದ ದಾರಿಯಾಗಿಯೇ ಓಡಿದರು. ಆಗ ನಾಯಮ್ಮಾರರೂ ಎದ್ದು ಓಡಿದರು. ಮಲೆಯನನ್ನೂ ಓಡುತ್ತಿದ್ದ ನಾಯಮ್ಮಾರರನ್ನೂ ಬಿಳಿಯರು ಹಿಡಿದುಕೊಂಡರು. ಆಗ ಮಲೆಯನೆಂದ–ಅಯ್ಯಯ್ಯೋ! ನಾನೊಬ್ಬ ಪಣಿಕ್ಕರ್. ನಾನು ಹೆಣ್ಣಲ್ಲ. ನಾನು ಕಣ್ಣ ಪಣಿಕ್ಕರ್, ಬಿಳಿಯರು ಪಣಿಕ್ಕರನನ್ನು ಬಿಟ್ಟು ಬಿಟ್ಟರು.

ನಾಯಮ್ಮಾರರನ್ನೆಲ್ಲ ಹಿಡಿದು ಸಿಟ್ಟು ತಣಿಯುವವರೆಗೂ ಒದ್ದರು. ನಾಯಮ್ಮಾರರೆಲ್ಲ ಗೋಳಿಡುತ್ತ ಹೇಳಿದರು – ಅಯ್ಯೋ ನಮ್ಮನ್ನೇನೂ ಮಾಡಬೇಡಿ, ಬಿಟ್ಟುಬಿಡಿ. ಅದನ್ನು ಕೇಳಿದ ಬಿಳಿಯರು ಇನ್ನೂ ಚೆನ್ನಾಗಿ ಒದ್ದರು. ಒದೆತಿಂದು ಎಲ್ಲ ನಾಯಮ್ಮಾರರೂ ಬಿದ್ದರು. ಹಾಗೆ ಬಿದ್ದಾಗ ಬಿಳಿಯರು ನಗುತ್ತ ಹೊರಟುಹೋದರು. ಅದನ್ನು ನೋಡಿದ ಒದೇನ ನಗುತ್ತ ಅಲ್ಲಿಗೆ ಬಂದ. ಅಲ್ಲಿಗೆ ಬಂದು ನೋಡಿದಾಗ ಹದಿನೆಂಟು ಜನ ನಾಯಮ್ಮಾರರೂ ಕೆಳಗೆ ಬಿದ್ದಿದ್ದರು. ಮೂಗಿನಿಂದಲೂ ಬಾಯಿಯಿಂದಲೂ ರಕ್ತ ಸುರಿಯುತ್ತಿತ್ತು. ಅವರಿಗೆ ಪ್ರಜ್ಞೆ ತಪ್ಪಿತ್ತು. ಆಗ ಒದೇನ ಅವರಲ್ಲಿ ಕೇಳಿದ – ಇದೆಲ್ಲ ಏನಪ್ಪ ಹೊಸದು? ಇದೆಂಥ ಒದೆ ನಿಮಗೆ ಸಿಕ್ಕಿತು? ಪಕ್ಕಗಳಲ್ಲೂ ಬೆನ್ನಲ್ಲೂ ಬೂಟ್ಸಿನ ಆಣಿಗಳು ನಾಟಿಬಿಟ್ಟಿವೆ. ಆಗ ನಾಯಮ್ಮಾರರೆಂದರು – ತಚ್ಚೋಳಿ ಒದೇನ! ನಾವು ಎದ್ದು ನಡೆದು ಹೋಗಲು ಸಾಧ್ಯವಾಗದು. ಚರಮಂಚವನ್ನೇ (ಸ್ಟ್ರೆಚ್ಚರ್) ತರಿಸಬೇಕಾದೀತು. ಕೂಡಲೇ ಒದೇನನೆಂದ – ನನ್ನ ಬಗೆಗೆ ಏನೆಲ್ಲ ಹೇಳಿದ್ದಿರಿ! ಆದುದರಿಂದಲೇ ನಿಮಗೆ ಹೀಗಾಯಿತು. ಬಿಳಿಯರೊಂದಿಗೆ ನಾನು ಹೊಡೆದಾಟ ಮಾಡಿದ್ದರೂ ನಿಮ್ಮ ಹಾಗೆ ನನಗೆ ಆಗಲಿಲ್ಲ. ನಿಮಗೆ ಹಾಗೆಯೇ ಆಗಬೇಕು. ಹದಿನೆಂಟು ಮನೆಗಳ ನಾಯಮ್ಮಾರರೆ! ವಿಲಾಯಿತಿಯಿಂದ ಬಂದಿರುವ ಬಿಳಿಯರು ರಾಜ್ಯ ಹಿಡಿಯುವುದಕ್ಕಾಗಿ ಬಂದಿದ್ದಾರೆ. ಅರಕ್ಕಲ್ ಮತ್ತು ಚಿರಕ್ಕಲ್ (ಮಲಬಾರ್‌ನ ಎರಡು ಪ್ರಸಿದ್ಧ ಅರಸು ಮನೆತನಗಳು) ಅರಮನೆಗಳಿಗೂ ತಲಚ್ಚೇರಿ ಕೋಟೆಯ ಒಳಗೂ ಅವರು ಹೋಗಿದ್ದಾರೆ. ಅವರು ಕೋಟೆಗಳನ್ನೂ ಹಿಡಿದಾರು, ಅರಸುಗಳನ್ನೂ ಹಿಡಿದಾರು. ಊರುಗಳನ್ನೂ ಹಿಡಿದಾರು. ಅವರ ಸಮಾನ ಯಾರೂ ಇಲ್ಲ. ಅವರು ರಾಜ್ಯವಾಳದೆ ಬಿಡಲಾರರು. ಕೂಡಲೇ ನಾಯಮ್ಮಾರರೆಂದರು – ಕೈದೇರಿಯ ಚಾಪ್ಪ, ಕೇಳು! ನೀನು ಒದೇನನಿಗೋಸ್ಕರ ನಮಗೆ ಒದೆ ಕೊಡಿಸಿದೆ. ನಾವು ನಡೆದು ಹೋಗಲಾರೆವು. ಚರಮಂಚದಲ್ಲಿಯೇ ಹೋಗಬೇಕಷ್ಟೆ. ಆಗ ಒದೇನನೆಂದ–ನೀವೇ ಅದನ್ನು ತರಿಸಿಕೊಳ್ಳಿ. ನಾನು ಕೂಡಲೇ ಹೊರಡುತ್ತೇನೆ. ಹೀಗೆ ಹೇಳಿ ಅವನು ಹೊರಟುಹೋದ. ಅವನನ್ನು ನೋಡಿ ಕೈದೇರಿ ಚಾಪ ನಕ್ಕ. ಕಂಡಾಚೇರಿ ಚಾಪ್ಪನೆಂದ – ಹದಿನೆಂಟು ಮನೆಗಳ ನಾಯಮ್ಮಾರರೇ! ತಚ್ಚೋಳಿ ಒದೇನನನ್ನು ನೀವು ಹೀನೈಸಿದ್ದಕ್ಕೆ ಪ್ರತಿಯಾಗಿ ನಿಮಗೆ ಸಿಕ್ಕಿತಲ್ಲವೆ? ನೀವು ಇನ್ನು ಬೇಗ ಮನೆಗಳಿಗೆ ಹೊರಡಿ. ಏಳಲಾಗದೆ ಬಿದ್ದುಕೊಂಡಿದ್ದ ನಾಯಮ್ಮಾರರು ಬೊಬ್ಬಿಟ್ಟರು. ಅವರ ಬೊಬ್ಬೆ ಕೇಳಿ ಜನರೆಲ್ಲ ಬಂದರು. ಜನರು ಅವರನ್ನು ಮಂಚಿಲುಗಳಲ್ಲಿ ಹೊತ್ತುಕೊಂಡು ಹೋದರು. ಜನರು ಹೀಗೆ ಉದ್ಗರಿಸಿದರು – ಬಿಳಿಯರೊಂದಿಗೆ ಸರಸ ಆಡಿದರೆ ಆಗುವುದು ಹೀಗೆಯೇ! ಕೈದೇರಿ ಎಡಂನ ಚಾಪ್ಪನೂ ತನ್ನ ಮನೆಗೆ ಹೋದ. ಎಲ್ಲರೂ ಸಂತಸದಿಂದಿದ್ದರು.

ನನ್ನ ಕೆರೆಯಲ್ಲಿ ಮೀಯಲು ನಿನಗೆ ಅಧಿಕಾರ ಕೊಟ್ಟವರು ಯಾರು?

ಕಕ್ಕಾಡು ಕುಟ್ಟೇರಿ ನಂಬಿಯಾರ ತನ್ನ ಶ್ಯಾನುಭೋಗನನ್ನು ಕರೆದೆಂದ – ಅಯ್ಯಾ ಕಕ್ಕಾಡು ಶ್ಯಾನುಭೋಗ! ನಾವು ಬರುವ ಹೊತ್ತಿಗೆ ನಮ್ಮ ಕೆರೆಯಲ್ಲಿ ಅದು ಯಾವಾಕೆ ಹೆಣ್ಣು ಮಗಳು ಯಾವಾಗಲೂ ಮೀಯುತ್ತಿರುವುದು? ಅವಳನ್ನು ಇಂದು ಕಣ್ಣಾರೆ ಕಂಡಾಗ ನನಗೆ ಒಂದು ಬಯಕೆಯುಂಟಾಗಿದೆ ಕಣಯ್ಯ! ಅವಳಿಗೆ ನಾನು ಪೊಡಮುರಿ ಕೊಡುತ್ತೇನೆ. ಅದನ್ನು ಕೇಳಿದ ಶ್ಯಾನುಭೋಗನೆಂದ – ಕಕ್ಕಾಡು ಕುಟ್ಟೇರಿ ನಂಬ್ಯಾರರೆ! ನಾವು ಬರುವ ಹೊತ್ತಿಗೆ ಯಾವಾಗಲೂ ಕೆರೆಯಲ್ಲಿ ಮೀಯುತ್ತಿರುವವಳು ಮಣಲೂರ ಮನೆಯ ಕುಂಞಿಕುಂಬೆ. ಮಣಲೂರ ಕುಂಞಿಮಾತು ಇದ್ದಾಳಲ್ಲವೆ? ಅವಳ ಮಗಳು ಕುಂಞಿಕುಂಬೆ. ಹದಿಮೂರು ವರ್ಷ ಅವಳಿಗೆ. ಹನ್ನೆರಡು ವಯಸ್ಸಲ್ಲೆ ದೊಡ್ಡವಳಾಗಿದ್ದಾಳೆ. ಮಣಲೂರ ಮನೆಯ ಕುಂಞಿಕೋಮ ಅವಳನ್ನು ಮೀಸಲು ಮಾಡಿಕೊಂಡಿದ್ದಾನೆ. ಅವಳು ದೊಡ್ಡವಳಾದಾಗಲೂ ಎಲ್ಲ ಖರ್ಚನ್ನೂ ಕೋಮನೇ ಕೊಟ್ಟಿದ್ದ. ಅವಳಿಗೆ ಬೇಕಾದುದನ್ನೆಲ್ಲ ಕೋಮನೇ ಕೊಡಿಸುತ್ತಿದ್ದಾನೆ. ಅವಳು ಬೇರೆ ಯಾರಿಗೂ ಸಿಗುವವಳಲ್ಲ. ಕೂಡಲೆ ನಂಬ್ಯಾರನೆಂದ – ಕಕ್ಕಾಡು ಶ್ಯಾನುಭೋಗ! ಅವಳನ್ನು ಇಂದು ಕಂಡ ನಾನು ಆಸೆ ಪಟ್ಟಿದ್ದೇನೆ. ಕೋಮನಲ್ಲ ಇನ್ನು ಯಾರೇ ಬಂದರೂ ಮಣಲೂರು ಮನೆಗೆ ಹೋಗಿ ಒಂದು ರಾತ್ರೆ ನಾನು ಅವಳನ್ನು ಅನುಭವಿಸದೆ ಇರುವವನಲ್ಲ. ನೀನು ಮಣಲೂರಿಗೆ ಹೋಗು. ಹೋಗಿ ಮಣಲೂರು ಮಾತುವಿಗೆ ತಿಳಿಸು – ಕಕ್ಕಾಡು ಕುಟ್ಟೇರಿಯ ನಂಬ್ಯಾರರು ಇಲ್ಲಿಗೆ ಬರುತ್ತಾರೆ. ಒಂದು ರಾತ್ರೆಯ ಅವಕಾಶಕ್ಕಾಗಿ ಅವರು ಇಲ್ಲಿಗೆ ಬರುತ್ತಾರೆ. ಪಡುಕೋಣೆಯನ್ನು ಗುಡಿಸಿ ಸಾರಿಸಿ ಹಾಸು ಸಿದ್ಧಪಡಿಸಿಡು. ಕುಂಞಿಕುಂಬೆಗೆ ಬೇಕಾದ ಹೊನ್ನನ್ನು ನಂಬ್ಯಾರರೇ ಕೊಡುತ್ತಾರೆ. ಮತ್ತೆ ಯಾಕೆ ನಿನಗೆ

ಹಿಂಜರಿಕೆ? ಶ್ಯಾನುಭೋಗ ಅಂತೆಯೇ ಎಲ್ಲ ಸಂಗತಿಗಳನ್ನು ಮಣಲೂರು ಹಿರಿಯವ್ವೆಗೆ ಹೇಳಿದ. ಕೂಡಲೇ ಕುಂಞಿಮಾತು ಎಂದಳು – ಕಕ್ಕಾಡು ಶ್ಯಾನುಭೋಗರೇ! ಮಣಲೂರು ಮನೆಯ ಕೋಮನಿಗೆ ಇದೇನಾದರೂ ಗೊತ್ತಾದರೆ ನನ್ನನ್ನು ಜೀವಸಮೇತ ಇಡಲಾರ. ಕೂಡಲೆ ಶ್ಯಾನುಭೋಗನೆಂದ – ಕೋಮ ಇಲ್ಲಿಗೆ ಬರುತ್ತಾನೆಯೇ? ಅದಕ್ಕೆ ಕುಂಞಿಮಾತು ಎಂದಳು – ಎರಡೆರಡು ದಿನ ಕಳೆದ ಮೇಲೆ ಒಂದು ದಿನ ಬಂದು ಇಲ್ಲಿ ಇರುತ್ತಾನೆ. ಇವತ್ತೂ ನಾಳೆಯೂ ಅವನು ಇಲ್ಲಿಗೆ ಬರುವುದಿಲ್ಲ. ನಾನೀಗ ಏನು ಮಾಡಲಿ ಶ್ಯಾನುಭೋಗರೇ? ಹುಡುಗಿಗೆ ಹದಿಮೂರು ವರ್ಷ ವಯಸ್ಸು. ಶ್ಯಾನುಭೋಗನೆಂದ – ಮಣಲೂರು ಮನೆಯ ಹಿರಿಯವ್ವ! ಕುಂಬೆಯನ್ನು ಕಂಡವರೇ ನಂಬ್ಯಾರರು ಹೀಗೆ ಹೇಳಿದ್ದರು – ಕೆರೆಯಲ್ಲಿ ಮೀಯುವ ಈ ಹುಡುಗಿಗೆ ಹದಿನೆಂಟರ ಒಡ್ಡಾರ. ಮೊಲೆ ಗಳನ್ನೂ ಮುಡಿಯನ್ನೂ ಕಂಡರೆ ಹದಿನೆಂಟಕ್ಕಿಂತ ಹೆಚ್ಚಲ್ಲದೆ ಕಡಿಮೆಯಿಲ್ಲ. ಕೂಡಲೇ ಮಾತು ಎಂದಳು – ಅವಳ ಬೆಳವಣಿಗೆಯಿಂದ ಹಾಗೆ ಕಾಣುವುದು, ಅಷ್ಟೆ. ಅವಳಿಗೆ ಹದಿಮೂರು ವಯಸ್ಸಷ್ಟೆ ಆಗಿದೆ. ಕಕ್ಕಾಡು ಕುಟ್ಟೇರಿ ನಂಬ್ಯಾರರಲ್ಲಿ ಇಂದೇ ಬರಲು ಹೇಳಿ. ಅದನ್ನು ಕೇಳಿದ ಶ್ಯಾನುಭೋಗ ಬೇಗ ಅಲ್ಲಿಂದ ಹೊರಟು ಕುಟ್ಟೇರಿಗೆ ತಲಪಿ ನಂಬ್ಯಾರನಿಗೆ ಎಲ್ಲ ಸಂಗತಿಗಳನ್ನು ಹೇಳಿ ಬೇಗನೆ ಮಣಲೂರ ಮನೆಗೆ ಹೋಗಬೇಕಂತೆ – ಎಂದೂ ತಿಳಿಸಿದ. ಅಷ್ಟು ಮಾತುಗಳನ್ನು ಹೇಳಿದವನೇ ಅಲ್ಲಿಂದ ಬೇಗ ಬೇಗನೆ ನಡೆದು ತಚ್ಚೋಳಿ ಒದೇನನ ಬಳಿಗೆ ಬಂದ. ಶ್ಯಾನುಭೋಗನನ್ನು ಕಣ್ಣಾರೆ ಕಂಡ ಒದೇನ ಕೇಳಿದ – ಶ್ಯಾನುಭೋಗರ ಸವಾರಿ ಎತ್ತ? ಗುಣುಗುಣಿಸುತ್ತ ಏನು ಹೇಳುತ್ತಿದ್ದೀರಿ? ಅದಕ್ಕೆ ಶ್ಯಾನುಭೋಗ ಎಲ್ಲ ಸಂಗತಿಗಳನ್ನೂ ತಿಳಿಸಿ ಕಕ್ಕಾಡು ಕುಟ್ಟೇರಿ ನಂಬ್ಯಾರನು ಅಂದೇ ಸಂಜೆ ಕುಂಬೆಯ ಬಳಿ ಹೋಗಲಿರುವುದನ್ನೂ ತಿಳಿಸಿದ. ಒದೇನ ಶ್ಯಾನುಭೋಗ ನಿಗೆಂದ – ಇಷ್ಟು ವಯಸ್ಸಾದ ನಂಬಿಯಾರ ಹೇಗಯ್ಯ ಹೆಣ್ಣ ಸಹವಾಸ ಮಾಡುವುದು? ಅದನ್ನು ಕೇಳಿದ ಶ್ಯಾನುಭೋಗ ನಗುತ್ತ ಬೇಗ ಬೇಗ ಸಾಗಿದ. ಒದೇನ ಮನದಲ್ಲೆ ನೆನೆದ – ಕಕ್ಕಾಡು ಕುಟ್ಟೇರಿ ನಂಬ್ಯಾರ ಇಂದು ಸಂಜೆ ಮಣಲೂರು ಮನೆಗೆ ತಲಪುವ ಮೊದಲೇ ನಾನು ಹೋಗಿ ಕುಂಬೆಯ ಅಂಗಸಂಗ ಮಾಡಿ ಬಂದು ಬಿಡಬೇಕು. ಹಾಗೆ ನೆನೆದು ಒದೇನ ಅಲ್ಲಿಂದ ಕೂಡಲೆ ಹೊರಟ. ಮಣಲೂರು ಮನೆ ತಲಪಿದ. ಹಿರಿಯವ್ವೆ ಕಕ್ಕಾಡು ನಂಬ್ಯಾರನೇ ಬಂದನೆಂದು ತಿಳಿದುಕೊಂಡು ಹೇಳಿದಳು – ಕಕ್ಕಾಡು ನಂಬ್ಯಾರರೇ! ಕುಂಬೆ ಪಡು ಕೋಣೆಯಲ್ಲಿದ್ದಾಳೆ. ಪಡುಕೋಣೆಯನ್ನು ಸಜ್ಜುಗೊಳಿಸಿದೆ. ಅದನ್ನು ಕೇಳಿದ ಒದೇನ ಬೇಗ ಪಡುಕೋಣೆ ಸೇರಿಕೊಂಡ. ಸುಮಾರು ಮಧ್ಯರಾತ್ರೆಯ ಹೊತ್ತಿಗೆ ಕಕ್ಕಾಡು ನಂಬ್ಯಾರ ಇಪ್ಪತ್ತೆರಡು ಮಂದಿ ನಾಯಮ್ಮಾರರ ಜತೆ ಹೊರಟು ಮಣಲೂರು ತಲಪಿದಾಗ ಹಿರಿಯವ್ವ ಹೇಳಿದಳು – ಇದೆಂಥ ಆಶ್ಚರ್ಯವಪ್ಪ! ಕಕ್ಕಾಡು

ಕುಟ್ಟೇರಿ ನಂಬ್ಯಾರರು ಪಡುಕೋಣೆಯಲ್ಲಿ ನಿದ್ರಿಸುತ್ತಿದ್ದಾರೆ. ಈಗ ಬಂದಿರುವುದು ಯಾವ ನಂಬ್ಯಾರ? ನನಗೇನೂ ತಿಳಿಯುತ್ತಿಲ್ಲ. ಆಗ ನಾಯಮ್ಮಾರರೆಂದರು – ಈಗ ಬಂದವರು ಕಕ್ಕಾಡು ಕುಟ್ಟೇರಿ ನಂಬ್ಯಾರರು. ಪಡುಕೋಣೆಯಲ್ಲಿರುವವರು ಯಾರೆಂದು ತಿಳಿಯೆವು. ಆಗ ಹಿರಿಯವ್ವ ಹೇಳಿದಳು – ಏನಿದ್ದರೂ ನೀವು ಕೂಡಲೇ ಹಿಂತಿರುಗಿ. ಪಡುಕೋಣೆಯಲ್ಲಿ ಮಣಲೂರು ಕುಂಞಿಕೋಮನೇ ಇದ್ದಾನೆಂದು ಕಾಣುತ್ತದೆ. ಬೆಳ್ಳಂಬೆಳಗಾಗುವಾಗ ಅದು ಯಾರೆಂದು ನನಗೆ ತಿಳಿದೀತು. ಅದನ್ನು ಕೇಳಿದ ನಂಬಿಯಾರ ನಿಗೆ ಸಿಟ್ಟೇರಿತು. ಅವನು ಕೂಗಿ ಹೇಳಿದ – ನಾನು ಎಷ್ಟೊಂದು ದೂರ ಕ್ರಮಿಸಿ ಬಂದೆ! ನಾಳೆ ಕೂಡ ಅವಳ ಸಹವಾಸ ತಪ್ಪಿದರೆ ಮಣಲೂರು ಕುಂಬೆಯನ್ನು ಹೊಲೆಯನಿಂದ ಕೆಡಿಸುವಂತೆ ಮಾಡಿಸುತ್ತೇನೆ, ಎಚ್ಚರ! ಹಾಗೆ ಹೇಳಿ ಅವರೆಲ್ಲ ಹೊರಟು ಹೋದರು. ಬೆಳ್ಳಂಬೆಳಗಾಗುವ ಹೊತ್ತಿಗೆ ಒದೇನ ಕುಂಬೆಗೆಂದ – ಮಣಲೂರು ಮನೆಯ ಕುಂಞಿಕುಂಬೆ! ಇಂದು ಸಂಜೆಯಾಗುತ್ತಿದ್ದಂತೆ ನಾನು ಇಲ್ಲಿಗೆ ಬರಲೆ ಕುಂಬೆ? ಇಂದು ರಾತ್ರೆಯೂ ನಾವು ಒಂದಾಗೋಣವೇ? ನಾಳೆ ನಾನು ಅರಮನೆಗೆ ಹೋಗ ಬೇಕಾಗಿದೆ. ಹಾಗೆ ಹೇಳಿ ಅವನು ಹೊರಟುಹೋದ. ಹೇಳಿದ ಮಾತಿನಂತೆ ಅಂದು ಮುಸ್ಸಂಜೆಯಾಗುತ್ತಿದ್ದಂತೆ ಒದೇನ ಕುಂಬೆಯ ಪಡುಕೋಣೆಗೆ ಹೋದ. ಅವರು ಅಲ್ಲಿ ಕೂಡಿಕೊಂಡರು. ಆಗ ಕಕ್ಕಾಡು ನಂಬ್ಯಾರ ಇಪ್ಪತ್ತೆರಡು ಮಂದಿ ನಾಯಮ್ಮಾರರ ಜತೆ ಅಲ್ಲಿಗೆ ತಲಪಿದ. ನಾಯಮ್ಮಾರರು ಮಾತುವಿನಲ್ಲಿ ಕೇಳಿದರು – ಮಣಲೂರು ಮನೆಯ ಹಿರಿಯವ್ವ! ಕಕ್ಕಾಡು ನಂಬ್ಯಾರರು ರಾತ್ರೆ ಕಳೆಯುವುದಕ್ಕೆ ಬಂದಿದ್ದಾರೆ. ಅದಕ್ಕೆ ಮಾತು ಎಂದಳು – ಇವತ್ತು ನನ್ನಲ್ಲಿ ಏನೂ ಹೇಳುವುದು ಬೇಡ. ಎಂದಿನಂತೆ ಕೋಮ ಇಲ್ಲಿಗೆ ಬಂದಾನು. ಅವನು ಬಂದರೆ ಅವನಲ್ಲೆ ಎಲ್ಲವನ್ನೂ ಕೇಳಿಕೊಳ್ಳಿ. ಅದನ್ನು ಕೇಳಿದ ನಾಯಮ್ಮಾರರು ಸಿಟ್ಟುಗೊಂಡು ಮರಳಿದರು. ಬೆಳ್ಳಂ ಬೆಳಗಾದಾಗ ಒದೇನ ಪಡುಕೋಣೆಯಿಳಿದ. ಅವನೆಂದ – ಮಣಲೂರು ಮನೆಯ ಹಿರಿಯವ್ವ! ಎರಡು ದಿನ ನಾನು ಇಲ್ಲಿ ರಾತ್ರೆ ಕಳೆದೆ. ಇನ್ನು ನಾನು ಬರುವುದಿಲ್ಲವೆಂದು ನಂಬ್ಯಾರನಿಗೆ ಹೋಗಿ ಹೇಳಿ. ಆಗ ಆಕೆಯೆಂದಳು – ತಚ್ಚೋಳಿ ಕಣ್ಮಣಿ ಬಾಲ ಒದೇನ! ನಂಬ್ಯಾರರು ಸಿಟ್ಟು ಮಾಡಿ ಹೋಗಿದ್ದಾರೆ. ಒದೇನ ಹೇಳಿದ – ನಂಬಿಯಾರ್ ಸಿಟ್ಟುಮಾಡಿದ್ದು ಯಾಕೆ? ನಾಳೆ ಅವನು ರಾತ್ರೆ ಕಳೆಯಲಿ. ಹಾಗೆ ಹೇಳಿ ಅವನು ಹೊರಟುಹೋದ.

ಒಂದುದಿನ ಕಕ್ಕಾಡು ನಂಬ್ಯಾರ ಎಂದಿನಂತೆಯೇ ಆ ದಾರಿಯಾಗಿ ಹೋಗುತ್ತಿರಲು ಕಕ್ಕಾಡು ಕೆರೆಯಲ್ಲಿ ಕುಂಬೆ ಮೀಯುವುದನ್ನು ಕಂಡ. ಆಗ ಅವನೆಂದ – ನನ್ನ ಕೆರೆಯಲ್ಲಿ ಮೀಯುವುದಕ್ಕೆ ನಿನಗೆ ಅಧಿಕಾರ ಕೊಟ್ಟವರು ಯಾರು ಹೆಣ್ಣೆ? ಕೆರೆಯಿಂದ ಕೂಡಲೇ ನೀನು ಹೋಗದಿದ್ದರೆ ನಿನ್ನನ್ನು ಹೊಲೆಯನಿಂದ ಹಿಡಿಯಿಸುತ್ತೇನೆ. ಬೇಗ

ಎದ್ದು ಇಲ್ಲಿಂದ ನಡೆ. ಅದಕ್ಕೆ ಕುಂಬೆ ಎಂದಳು–ನಾನು ಬೇಗ ಇಲ್ಲಿಂದ ಎದ್ದು ಹೋಗ ಬೇಕಾದರೆ ಮಣಲೂರು ಮನೆಯ ನನ್ನ ಗಂಡ ಬರಬೇಕು. ಇದು ಎಲ್ಲರೂ ಮೀಯುವ ಕೆರೆ. ನಾನು ಇಲ್ಲಿಂದ ಹೋಗುವುದಿಲ್ಲ. ಅದನ್ನು ಕೇಳಿದ ನಂಬ್ಯಾರನಿಗೆ ಸಿಟ್ಟೇರಿತು. ಅವನೆಂದ–ಮಣಲೂರು ಮನೆಯ ಕಳ್ಳಿಕುಂಬೆ! ನಿನ್ನ ಅಮ್ಮ ನನ್ನನ್ನು ಬರಹೇಳಿ ತಚ್ಚೋಳಿ ಒದೇನನನ್ನು ಪಡುಕೋಣೆಗೆ ಸೇರಿಸಿಕೊಳ್ಳಲಿಲ್ಲವೆ? ನನ್ನನ್ನು ಹೊರಗೆ ನಿಲ್ಲಿಸಿದವಳಲ್ಲವೆ? ಇದೆಲ್ಲ ಯಾರಿಗೆ ಹೇಳಿದ ಕೆಲಸ? ಅದಕ್ಕೆ ಕುಂಬೆ ಉತ್ತರಿಸಿದಳು– ನಿಮ್ಮೊಂದಿಗೆ ರಾತ್ರೆ ಕಳೆಯಲು ನನಗೆ ಒಂದಿಷ್ಟೂ ಇಷ್ಟವಿಲ್ಲ, ಅದಕ್ಕೆ. ಅದಕ್ಕೆ ನಂಬ್ಯಾರನೆಂದ – ನೀನು ಮಿಂದು ಕೂಡಲೇ ಎದ್ದು ಹೋಗು. ನಂಬ್ಯಾರ್ ಒಬ್ಬ ಹೊಲೆಯನನ್ನು ಕರೆದ. ಕರೆದು ಅವನಿಗೆಂದ – ಚಾಳೆಯ ಚೋಯಿ ಹುಡುಗಾ! ಅಲ್ಲಿ ಮೀಯುತ್ತಿರುವ ಕುಂಬೆಯ ಕೈ ಹಿಡಿದುಕೊಂಡು ಇಲ್ಲಿಗೆ ಕರೆದುಕೊಂಡು ಬಾ! ಆಗ ಚೋಯಿ ಎಂದ – ಕಕ್ಕಾಡು ಒಡೆಯರೆ! ನಾನು ಒಡತಿಯ ಕೈ ಹಿಡಿದರೆ ಒಡೆಯರೆಲ್ಲ ಸೇರಿ ನನ್ನನ್ನು ಕೊಂದುಹಾಕಿಯಾರು. ಅದಕ್ಕೆ ಸಿಟ್ಟುಗೊಂಡ ನಂಬ್ಯಾರನೆಂದ – ಚಾಳೆಯ ಚೋಯಿ ಹುಡುಗಾ! ನಾನು ಹೇಳಿದಂತೆ ಮಾಡು ನೀನು. ಮಣಲೂರು ಮನೆ ನನಗೆ ಸೇರಿದ್ದು. ಅವರು ನನ್ನ ಒಕ್ಕಲುಗಳು. ಬೇಗ ಹೋಗಿ ಕೈ ಹಿಡಿದುಕೊ. ಕೈಹಿಡಿದು ಇಲ್ಲಿಗೆ ಕರೆದು ತಾ. ಅವಳ ಅಹಂಕಾರಕ್ಕೆ ಮದ್ದು ಮಾಡಬೇಕು. ಅದಕ್ಕೆ ಚೋಯಿಯೆಂದ – ಕಕ್ಕಾಡು ಒಡೆಯರೆ! ಒಡೆಯರೆಲ್ಲ ನನ್ನನ್ನು ಹೊಡೆದಾರು. ಅದಕ್ಕೆ ನಂಬ್ಯಾರನೆಂದ – ಚಾಳೆಯ ಚೋಯಿ ಹುಡುಗಾ! ನಿನ್ನನ್ನು ಯಾರೂ ಹೊಡೆಯಲಾರರು. ಬೇಗ ಹೋಗಿ ಕೈಯಲ್ಲೆ ಹಿಡಿದುಕೊ. ಅದನ್ನು ಕೇಳಿದ ಅವನು ಕೆರೆಯ ಮೆಟ್ಟಲಲ್ಲಿ ನಿಂತಿದ್ದ ಕುಂಬೆಯ ಕೈಯನ್ನು ಹಿಡಿದ. ಕುಂಬೆ ಬೊಬ್ಬಿಟ್ಟಳು. ಅವಳ ಬೊಬ್ಬೆಗೆ ನಾಯಮ್ಮಾರರೆಲ್ಲ ಓಡಿಬಂದರು. ಹೊಲೆಯ ಹುಡುಗನನ್ನು ಕಂಡ ಅವರು ಹೇಳಿದರು –ಕುಂಬೆಯನ್ನು ಹೊಲೆಯ ಹೊಲೆಗೊಳಿಸಿದ. ಯಾರೂ ಅವಳನ್ನು ಹತ್ತಿರ ಸೇರಿಸಿಕೊಳ್ಳಬೇಡಿ. ಅವಳು ಹಾಗೆಯೇ ಇದ್ದುಕೊಳ್ಳಲಿ. ಕಕ್ಕಾಡು ನಂಬ್ಯಾರನೆಂದ–ಚಾಳೆಯ ಚೋಯಿ ಹುಡುಗಾ! ಅವಳನ್ನು ನಿನ್ನ ಮನೆಗೆ ಕರೆದುಕೊಂಡು ಹೋಗು. ಅದನ್ನು ಕೇಳಿದ ಅವನು ಕುಂಬೆಯ ಕೈಹಿಡಿದ. ಅವನೆಂದ–ಮಣಲೂರು ಮನೆಯ ಒಡತಿ! ನಾವು ನಮ್ಮ ಮನೆಗೆ ಹೋಗೋಣ. ಅವನು ಅವಳ ಒಂದು ಕೈಹಿಡಿದುಕೊಂಡು ಮನೆಗೆ ಕರೆದೊಯ್ದ. ಮನೆಗೆ ತಲುಪಿದಾಗ ಅವನ ತಾಯಿಯನ್ನು ಕರೆದು ಹೇಳಿದ – ಅಮ್ಮಾ! ಈವತ್ತು ನನಗೊಬ್ಬ ಒಡತಿ/ರಾಣಿ ಸಿಕ್ಕಿದ್ದಾಳಮ್ಮ. ಇನ್ನು ಅವಳು ನನ್ನ ಹೆಂಡತಿ. ಅವಳಿಗೆ ಹದಿಮೂರು ವರ್ಷ ಕಳೆದು ಹದಿನಾಲ್ಕು. ಅವಳು ದೊಡ್ಡವಳೂ ಆಗಿದ್ದಾಳೆ. ಅದನ್ನು ಕೇಳಿದ ತಾಯಿ ಗಂಜಿಯನ್ನೂ ತೊಗರಿ ಪದಾರ್ಥವನ್ನೂ ತಂದುಕೊಟ್ಟಳು. ಕುಂಬೆ ಹಾಗೆ ಅಲ್ಲಿ ವಾಸಿಸಿದಳು. ಅವಳಿಗೆ

ಈಗ ನಾಲ್ಕು ತಿಂಗಳ ಬಸುರು. ಅವರು ಅವಳಿಗೆ ಸೀಮಂತ ಮಾಡಿದರು. ಕುಂಬೆಗೆ ಹತ್ತು ತಿಂಗಳು ತುಂಬಿತು. ಅವಳು ಒಂದು ಮಗುವನ್ನು ಹಡೆದಳು. ಚೋಯಿ ತುಂಬ ಸಂತಸಗೊಂಡ. ಈ ಸಂಗತಿಯನ್ನೆಲ್ಲ ಕುಂಬೆಯ ತಾಯಿ ಕೇಳಿದಾಗ ತುಂಬ ಸಂಕಟ ಗೊಂಡಳು. ಕುಂಬೆ ಹೆತ್ತು ನಲುವತ್ತು ಮಿಂದಳು. ಹಾಗೆ ಅವಳು ಸಂತಸದಿಂದಿರಲು ಚೋಯಿ ಹೇಳಿದ – ಕುಂಬೆ! ಹೀಗೆಲ್ಲ ಆದುದು ನಿನ್ನ ಅದೃಷ್ಟದಿಂದ. ಅದಕ್ಕೆ ಕುಂಬೆ ಯೆಂದಳು –ಚಾಳೆಯ ನನ್ನ ಗಂಡ! ಹೊಲೆಯನಿಂದ ನಾನು ಬಸುರಾದೆ. ಹೊಲೆಯ ಮಗುವನ್ನು ಹೆತ್ತೆ. ಇನ್ನು ನನಗೇನು ಬೇಕು? ಅದಕ್ಕೆ ಚೋಯಿಯೆಂದ – ಹೇಳಿ ಏನು ಉಪಯೋಗ ಕುಂಬೆ? ಆಗ ಕುಂಬೆ ಎಂದಳು – ಕಕ್ಕಾಡು ನಂಬ್ಯಾರ ನನ್ನನ್ನು ಹೀಗೆ ವಂಚಿಸಿದ. ಮಣಲೂರು ಮನೆಯ ನನ್ನ ಗಂಡ ಕೂಡ ನನ್ನನ್ನು ಕೈಬಿಟ್ಟರು. ನನಗೆ ಇನ್ನೀಗ ಎಲ್ಲವೂ ನೀವೇ. ಆಗ ಚೋಯಿ ಹೇಳಿದ –ಮಣಲೂರು ಮನೆಯ ಕುಂಬೆ! ನೀನು ಏನೂ ದುಃಖಿಸಬೇಡ. ಮಗುವನ್ನು ಚೆನ್ನಾಗಿ ನೋಡಿಕೊ. ನಿನಗೆ ಬೇಕಾದಷ್ಟು ಹೊನ್ನನ್ನು ನಾನು ಮಾಡಿಸುತ್ತೇನೆ. ನನಗೊಂದು ತಾಮ್ರದ ಓಲೆ ಸಿಕ್ಕಿದೆ. ಸೌದೆಗಾಗಿ ಕಾಡಿಗೆ ಹೋಗಿದ್ದಾಗ ಅದು ನನಗೆ ಕಂಡಿತು. ನಾನು ಸೌದೆ ಎಂದು ಭಾವಿಸಿ ಕಡಿದಾಗ ತಾಮ್ರದ ದೊಡ್ಡ ಓಲೆ! ಅದನ್ನು ನೀನು ಇಟ್ಟುಕೊ. ನಾನು ಇಂದೇ ಸತ್ತುಹೋದರೂ ನೀನು ಅದರಲ್ಲಿ ಹೇಳಿರುವ ಆಸ್ತಿಯನ್ನೆಲ್ಲ ಪಡೆದುಕೊ.

ಹಾಗೆ ಕಾಲಸಂದಿತು. ಕುಂಬೆ ಇನ್ನೂ ಎರಡು ಮೂರು ಮಕ್ಕಳನ್ನು ಹೆತ್ತಳು. ಚೋಯಿಯ ತಾಯಿ ಮಕ್ಕಳನ್ನೆಲ್ಲ ಚೆನ್ನಾಗಿ ಸಾಕಿ ಸಲಹಿದಳು. ಅವನೂ ಬೇಕಾದ ಅಕ್ಕಿ ಭತ್ತಗಳನ್ನೂ ರಾಗಿ ತೊಗರಿಗಳನ್ನೂ ತಂದುಕೊಡುತ್ತಿದ್ದ. ಹಾಗೆ ಎಲ್ಲರೂ ಸುಖವಾಗಿದ್ದರು. ಕುಂಬೆಯೂ ಅಷ್ಟೆ, ಮಕ್ಕಳನ್ನು ಮುದ್ದು ಮಾಡುತ್ತ ಸಂತಸದಿಂದಿದ್ದಳು.

ಮಗುವನ್ನು ಚೆನ್ನಾಗಿ ಸಾಕಿ ಸಲಹಿಕೊ

ತಚ್ಚೋಳಿಯ ಕಣ್ಮಣಿ ಬಾಲಒದೇನನೂ ಅವನ ಗೆಳೆಯ ಕಂಡಾಚ್ಚೇರಿ ಚಾಪ್ಪನೂ ತಿರುಗಾಟಕ್ಕೆ ಹೋದರು. ಅವರು ಹಾಗೆ ಹೋಗುತ್ತಿದ್ದಾಗ ಓಡತ್ತಿಲ್ ಚೀರು ಕೆರೆಯಲ್ಲಿ ಮೀಯುತ್ತಿದ್ದಳು. ಒದೇನ ಅದನ್ನು ಕಣ್ಣಾರೆ ಕಂಡ. ಚಾಪ್ಪನಲ್ಲಿ ಅವನೆಂದ – ಕೆರೆಯಲ್ಲಿ ಮೀಯುತ್ತಿರುವವಳು ಯಾರು ಚಾಪ್ಪ? ಇಷ್ಟು ಚಂದದ ಹುಡುಗಿ ನಮ್ಮ ಮನೆಯಲ್ಲೂ ಇಲ್ಲವಲ್ಲೇನೋ? ಅರಮನೆಯಲ್ಲಿ ಕೂಡ ಇಲ್ಲ ಗೊತ್ತೆ? ಇವಳು ಯಾರು ಕಂಡಾಚ್ಚೇರಿ? ಕೂಡಲೆ ಚಾಪ್ಪ ಉತ್ತರಿಸಿದ – ತಚ್ಚೋಳಿ ಒದೇನ! ಓಡತ್ತಿಲ್ ಕುಂಞಿಚಂದುವಿನ ಮಗಳು ಅವಳು, ಕುಂಞಿಚೀರು! ಪೂರಂ ಪರಂಬಿನ ರೈರು ಅವಳಿಗೆ ಪೊಡವ ಕೊಡಿಸಿದ್ದಾನೆ. ಅವನೂ ತಿರುಗಾಟಕ್ಕೆ ಹೋಗಿದ್ದಾನಷ್ಟೆ? ಹಾಗೆ ಹೋಗುವಾಗ ಅವಳಿಗೆ ಹೇಳಿದ್ದ – ತಾನು ತಿರುಗಾಟಕ್ಕೆ ಹೋಗಿ ಬರುವ ತನಕವೂ ಎಲ್ಲಿಗೂ ಹೊರಗೆ ಹೋಗಬಾರದು. ಅವಳು ರೈರುವಿನ ಮಗಳೇನೋ ಎನ್ನುವ ಹಾಗೆ ಪ್ರಾಯದಲ್ಲಿ ಸಣ್ಣವಳು. ಹಾಗೆಯೇ ಅವಳನ್ನು ನಡೆಸಿಕೊಳ್ಳುತ್ತಲೂ ಇದ್ದಾನೆ. ತಿರುಗಾಟ ಮುಗಿಸಿ ಬಂದ ಬಳಿಕ ಚೀರುವನ್ನು ಒಂದು ಸಂಜೆಯೂ ಬಿಟ್ಟಿರುವವನಲ್ಲ. ಸ್ನಾನ ಊಟ ಎಲ್ಲ ಜತೆಯಲ್ಲೇ. ಜತೆಗೆ ಕುಳಿತುಕೊಳ್ಳಿಸಿ ಅವನೂ ಕುಳಿತುಕೊಳ್ಳುವ. ಹೀಗೆ ಅವನ ಸಂಗತಿ ಒದೇನ! ಈ ಮಾತುಗಳನ್ನು ಕೇಳಿ ಒದೇನ ಕೂಡಲೇ ಎಂದ – ಕಂಡಾಚ್ಚೇರಿ ಚಾಪ್ಪ! ಅವಳಿಗೆ ಮೊಲೆ ಮುಡಿಗಳು ಬಂದು ಹದಿನಾಲ್ಕು ವರ್ಷ ತುಂಬಿರುವುದನ್ನು ಸಾರುತ್ತಿವೆ. ನನ್ನ ಮಗೂ ಕಂಡಾಚ್ಚೇರಿ! ನಾನು ಅವಳನ್ನು ಊವಂ ಬಯಂಜ್ ಮಾಡಿಕೊಳ್ಳಬಯಸು ತ್ತೇನೆ. ಅದಕ್ಕಾಗಿ ಏನು ಮಾಡಲಿ? ಪೂರಂ ಪರಂಬ್‌ನ ರೈರು ತಿರುಗಾಟದಿಂದ ಮರಳುವ ಮುನ್ನವೇ ನಾನು ಅವಳನ್ನು ಊವಂ ಬಯಂಜ್ ಮಾಡಿಕೊಳ್ಳಬೇಕು. ಕಂಡಾಚ್ಚೇರಿ ಕೂಡಲೇ ಎಂದ –ತಚ್ಚೋಳಿ ಕಣ್ಮಣಿ ಬಾಲ ಒದೇನ! ಓಡತ್ತಿಲ್ ಚೀರುವಿಗೆ

ರೈರು ಒಂದಿಷ್ಟೂ ಲೆಕ್ಕಕ್ಕಿಲ್ಲ. ಅವನು ಹೇಳಿದ ಹಾಗೆ ಅವಳು ಕೇಳುವುದಿಲ್ಲ. ಅವಳು ಏನಾದರೂ ಮಾಡುವುದಿದ್ದರೂ ಅವನು ಇಲ್ಲೇ ನಿಲ್ಲುವಂತಿಲ್ಲವಲ್ಲ! ಅವಳು ಇಂದು ಮಿಂದು ನಿಂತಿದ್ದಾಳೆ. ನೀನು ಸ್ವತಃ ಹೋಗಿ ಅವಳಲ್ಲಿ ಕೇಳು. ಅದನ್ನು ಕೇಳಿ ಒದೇನ ಚೀರುವಿನ ಬಳಿಗೆ ಹೋಗಿ ನಿಂತ. ಅವಳಲ್ಲಿ ಕೇಳಿದ – ಓಡತ್ತಿಲ್ ಮನೆಯ ಪ್ರಿಯ ಚೀರು! ನೀನು ದೊಡ್ಡವಳಾಗಿದ್ದಿಯಾ? ನಿನ್ನ ಗಂಡ ಯಾರು? ನೀನು ಅಂಜಳುಕದೆ ಹೇಳು. ಅದಕ್ಕೆ ಚೀರು ಉತ್ತರಿಸಿದಳು – ತಚ್ಚೋಳಿಯ ಕಣ್ಮಣಿ ಪ್ರಿಯ ಒದೇನ! ನನ್ನ ಗಂಡನ ಹೆಸರು ಪೂರಂಪರಂಬ್‌ನ ಕುಂಞನ್ ರೈರು. ಹನ್ನೆರಡನೆಯ ವಯಸ್ಸಲ್ಲೆ ನಾನು ದೊಡ್ಡವಳಾಗಿದ್ದೇನೆ. ನನಗೀಗ ಹದಿನಾಲ್ಕು ವರ್ಷ ನಡೆಯುತ್ತಿದೆ. ಹದಿಮೂರನೇ ವಯಸ್ಸಲ್ಲಿ ನಾನು ಹೆತ್ತೆನಾದರೂ ನಲುವತ್ತರ ಸ್ನಾನದ ಮೊದಲೇ ಮಗು ತೀರಿಕೊಂಡಿತು. ಪೂರಂ ಪರಂಬ್‌ನ ನನ್ನ ಗಂಡ ಇನ್ನು ಬರಬೇಕಾದರೆ ನಾಲ್ಕೈದು ತಿಂಗಳು ಕಳೆಯಬೇಕು. ಕೂಡಲೆ ಒದೇನನೆಂದ– ಓಡತ್ತಿಲ್ ಮನೆಯ ಪ್ರಿಯಚೀರು! ನಾನು ನಿನ್ನ ಮನೆಗೆ ಬಂದು ಒಂದು ಸಂಜೆ ಊವಂ ಬಯಂಜ್ ಮಾಡಿಕೊಳ್ಳಲೆ? ಕೂಡಲೇ ಚೀರುವೆಂದಳು – ತಚ್ಚೋಳಿಯ ಕಣ್ಮಣಿ ಪ್ರಿಯ ಒದೇನ! ನನ್ನ ಗಂಡ ಇದನ್ನು ತಿಳಿದನಾದರೆ ನನ್ನನ್ನು ಜೀವಸಹಿತ ಇಡಲಾರ. ಗಂಡನಿಗೆ ತಿಳಿಯದಂತೆ ನೀನು ಬಾ. ಅದನ್ನು ಕೇಳಿದ ಒದೇನ – ಹೂಂ ಎಂದು ಒಪ್ಪಿಗೆಯ ಹೂಂಗುಟ್ಟಿದ. ಕುಂಞಿಚ್ಚೀರು ಸ್ನಾನ ಮುಗಿಸಿ ಮನೆಗೆ ಹೋದಳು. ಮನೆಗೆ ಹೋಗಿ ಪಡುಕೋಣೆಯನ್ನು ಚೆನ್ನಾಗಿ ಗುಡಿಸಿ ಹಾಸಿಗೆ ಹಾಸಿದಳು. ಅವಳು ಹಾಗಿರಲು ತಚ್ಚೋಳಿ ಒದೇನ ಹೊತ್ತು ಮುಸ್ಸಂಜೆಯಾಗುತ್ತಿದ್ದಂತೆ ಓಡತ್ತಿಲ್ ಮನೆಗೆ ತಲಪಿದ. ಬೇಗ ಪಡುಕೋಣೆಯತ್ತ ಹೋದ. ಪಡುಕೋಣೆಯ ರತ್ನಮಂಚದಲ್ಲಿ ಹೋಗಿ ಕುಳಿತ. ಆಮೇಲೆ ಹೀಗೆಂದ – ಓಡತ್ತಿಲ್ ಮನೆಯ ಪ್ರಿಯಚೀರು! ಪೂರಂ ಪರಂಬ್‌ನ ನಿನ್ನ ಗಂಡ ಹಿಂತಿರುಗಿ ಬರುವ ತನಕವೂ ಊವಂ ಬಯಂಜ್ ಮಾಡಿಕೊಂಡು ನಾನು ಇಲ್ಲೇ ಇರುವೆ. ಹಾಗೆ ಹೇಳಿ ಅವನು ಅಲ್ಲೇ ಸೇರಿಕೊಂಡ. ಮಯಮಯ ಬೆಳಕು ಹರಿದಾಗ ಒದೇನನೆಂದ – ಓಡತ್ತಿಲ್ ಮನೆಯ ಪ್ರಿಯಚೀರು! ವೀಳ್ಯದೆಲೆ ಮಡಚಿ ಬೇಗ ಕೊಡೇ! ನಾನು ಕೂಡಲೇ ಹೊರಡಬೇಕು! ಹೊತ್ತು ಮುಸ್ಸಂಜೆಯಾಗುವಾಗ ನಾನು ಮರಳಿ ಇಲ್ಲಿಗೆ ಬರುವೆ! ಓಡತ್ತಿಲ್ ಚೀರು ವೀಳ್ಯದೆಲೆ ಮಡಚಿ ಕೊಟ್ಟಳು. ಬಳಿಕ ಒದೇನ ಕಳುಹಿಸಿಕೊಂಡು ಹೋದ. ಹಾಗೆ ಹೋದವನು ಸಂಜೆ ಬಂದ. ಹಾಗೆ ಬರುತ್ತ ಹೋಗುತ್ತ ಇದ್ದಂತೆ ಕುಂಞಿಚ್ಚೀರುವಿಗೆ ನಾಲ್ಕು ತಿಂಗಳ ಬಸಿರಾಯಿತು.

ನಾಲ್ಕು ತಿಂಗಳ ಗರ್ಭಿಣಿಯಾದಾಗ ಒಂದುದಿನ ಕುಂಞಿಚ್ಚೀರುವೆಂದಳು – ತಚ್ಚೋಳಿ ಕಣ್ಮಣಿ ನನ್ನ ಗಂಡ! ನಾನು ನಾಲ್ಕು ತಿಂಗಳ ಗರ್ಭಿಣಿ. ಗಂಡನಿಗೆ ಇದು

ತಿಳಿಯಿತಾದರೆ ನನ್ನನ್ನು ಜೀವಸಹಿತ ಬಿಡಲಾರ! ನಾನೇನು ಮಾಡಲಿ ಈಗ! ಕೂಡಲೆ ಒದೇನನೆಂದ – ಓಡತ್ತಿಲ್ ಮನೆಯ ಪ್ರಿಯಚೀರು! ಪೂರಂ ಪರಂಬ್‌ನ ನಿನ್ನ ಗಂಡ ಇಲ್ಲಿಗೆ ಬಂದಾಗ ನಾನು ಹೇಳಿಕೊಟ್ಟ ಹಾಗೆ ಅವನಲ್ಲಿ ಹೇಳು ಚೀರು: ಓಡತ್ತಿಲ್ ಮನೆಯ ನನ್ನ ಪ್ರಿಯಗಂಡ! ನೀವು ತಿರುಗಾಟಕ್ಕೆ ಹೊರಟು ಹೋದಿರಲ್ಲ! ಆಗ ನನಗೆ ನಿಮ್ಮ ಕುರಿತಾಗಿ ಒಳ್ಳೆಯ ಕನಸೊಂದು ಬಿತ್ತು. ನೀವು ನನ್ನ ಗಂಡನಾಗಿ ನನ್ನ ಬಳಿ ಬರುತ್ತ ಹೋಗುತ್ತ ಇದ್ದಿರಿ. ಹಾಗೆ ನಾಲ್ಕೈದು ತಿಂಗಳು ಕನಸುಕಂಡೆ. ನಾಲ್ಕೈದು ತಿಂಗಳು ಹಾಗೆ ಕಳೆದಾಗ ನಾನು ನಾಲ್ಕು ತಿಂಗಳ ಗರ್ಭಿಣಿಯೂ ಆದೆ. ನನ್ನ ಮೊದಲ ಮಗು ತೀರಿಕೊಂಡಿದೆಯಷ್ಟೆ? ಇನ್ನೊಂದು ಮಗುವನ್ನು ಹಡೆಯಬೇಕಂತ ನನಗೆ ತುಂಬ ಆಸೆ. ಹಾಗೆ ನಿಮಗೂ ಆಸೆಯಿಲ್ಲವೆ? ನಿಮ್ಮ ನೆರಳಾಗಿ ನಾನು ಬಂದೆ. ಹದಿಮೂರು ವರ್ಷ ಪ್ರಾಯಕ್ಕೆ ಮಗುವನ್ನೂ ಹಡೆದೆ. ಆ ಮಗುವನ್ನು ಹಡೆದು ಅದನ್ನು ಎತ್ತಿಕೊಂಡು ಅದಕ್ಕೆ ಮೊಲೆಯೂಡುವ ಆಸೆ ತೀರಲಿಲ್ಲ. ಅಂದೇ ನಾನು ಹರಕೆ ಹೊತ್ತೆ. ಒಲವಣ್ಣೂರ್‌ಕಾವ್‌ನ ಭಗವತಿ ಮುಡಿ ಧರಿಸಿ ಮೂಡುದಿಕ್ಕಿಗೆ ತಿರುಗುವ ಹೊತ್ತಲ್ಲಿ ಕಾವ್‌ನ ನಾಲ್ಕು ಗೋಡೆಗಳ ಒಳಗೆ ಸಿಡಿಮದ್ದು ಸಿಡಿಸುತ್ತೇನೆ, ಸಾವಿರ ತೆಂಗಿನಕಾಯಿಗಳನ್ನು ಒಡೆಸಿ ಪಾಟ್ಟು ಮಾಡಿಸುತ್ತೇನೆ ಎಂದು. ಈ ಬಾರಿಯ ಸ್ನಾನದ ಬಳಿಕ ಗರ್ಭಿಣಿಯಾದರೆ ಆ ಒಲವಣ್ಣೂರ್‌ಕಾವ್‌ನ ಭಗವತಿಗೆ ಎಕ್ಕ ಹೂವಿನ ಚಿನ್ನದ ಮಾಲೆ ಹಾಕಿಸುತ್ತೇನೆಂದೂ ದೊಡ್ಡ ಹರಕೆ ಹೊತ್ತಿದ್ದೇನೆ ನನ್ನ ದೇವರೇ! ಹಾಗೆ ನಾನು ಹರಕೆ ಹೊತ್ತು ಮಲಗಿ ನಿದ್ರಿಸಿದಾಗ ನಿಮ್ಮ ಕುರಿತ ಒಳ್ಳೆಯ ಕನಸು ನನಗೆ ಬಿತ್ತು. ಹಾಗೆ ಗರ್ಭಿಣಿಯಾದ ನಾನು ಮಲಗಿ ನಿದ್ರಿಸುವಾಗ ತೀರಿಕೊಂಡವರೂ ಕುಟುಂಬದ ಹಿರಿಯರಾಗಿದ್ದು ಈಗ ಇಲ್ಲವಾಗಿರು ವವರೂ ಎಲ್ಲರೂ ಬಂದು ಏನು ಹೇಳುತ್ತಾರೆ ಗೊತ್ತೆ? ಓಡತ್ತಿಲ್ ಮನೆಯ ಮಗು ಚೀರು! ನೀನು ಹದಿಮೂರು ವರ್ಷ ಪ್ರಾಯದಲ್ಲೆ ಮಗುವನ್ನು ಹಡೆದೆ. ಮಗುವನ್ನು ಎತ್ತಿಕೊಂಡು ಮೊಲೆಯೂಡಿದೆ. ಆದರೆ ನಿನಗೆ ಆಸೆ ತೀರಿಲ್ಲ. ಈ ಮಗುವನ್ನು ನೀನು ಹಡೆದು ನಲುವತ್ತು ಮಿಂದು ಭಗವತಿ ಮುಡಿಧರಿಸಿ ಮೂಡುದಿಕ್ಕಿಗೆ ತಿರುಗುವ ಹೊತ್ತಿಗೆ ಮಗುವನ್ನು ನೀನು ಆ ದೈವದ ಪಾದಗಳಲ್ಲಿ ಇಡು. ಬಳಿಕ ಹೇಳಿದ ಹರಕೆಗಳನ್ನೆಲ್ಲ ತೀರಿಸು. ಬಳಿಕ ಮಗುವಿಗೆ ಮೊಲೆ ಉಣ್ಣಿಸು. ಅದು ತನಕ ನೀನು ಮೊಲೆ ಕೊಡಬಾರದು. ಬೇರೆ ಏನನ್ನಾದರೂ ಕೊಡು. ನಿನ್ನ ಗಂಡ ಬಂದನಾದರೆ ಈ ಸಂಗತಿಗಳನ್ನೆಲ್ಲ ಅವನಿಗೂ ಹೇಳು. ಹೀಗೊಂದು ಒಳ್ಳೆಯ ಕನಸನ್ನು ಕಂಡೆ ನನ್ನ ಗಂಡಾ! ಚೀರು! ನೀನು ಹೀಗೆ ನಿನ್ನ ಗಂಡನಿಗೆ ಹೇಳು. ಒದೇನನ ಉಪಾಯವನ್ನು ಕೇಳಿದ ಚೀರು ಜೋರಾಗಿ ನಕ್ಕಳು.

ಹಾಗೆ ಅವರು ಅಲ್ಲಿರಲು ಆರು ತಿಂಗಳು ಕಳೆಯಿತು. ರೈರು ತಿರುಗಾಟ ಮುಗಿಸಿ

ಓಡತ್ತಿಲ್ ಮನೆಗೆ ಬಂದ. ಬರುವಾಗಲೇ ಸಂಗತಿಗಳು ಅವನ ಕಿವಿಗೆ ಬಿದ್ದುವು. ಅವನು ಬೇಗಬೇಗನೆ ಮನೆಗೆ ತಲಪಿದ. ರೈರು ಮನೆಗೆ ಬಂದ ಕೂಡಲೆ ಕುಂಞಿಚೀರು ಗಿಂಡಿಯಲ್ಲಿ ನೀರು ತಂದು ಅವನಿಗೆ ಕೊಟ್ಟಳು. ನೀರು ತೆಗೆದುಕೊಳ್ಳುತ್ತ ರೈರು ಕೇಳಿದ – ಓಡತ್ತಿಲ್‌ನ ಪ್ರಿಯ ಚೀರು! ಇದೆಲ್ಲ ಏನು ಹೊಸ ವಿಶೇಷಗಳು? ನಿನಗೆ ಎಷ್ಟು ತಿಂಗಳು? ನಾನು ತಿರುಗಾಟಕ್ಕೆ ಹೋಗಿ ಇಂದಿಗೆ ಆರು ತಿಂಗಳಾಯಿತು. ನೀನು ಐದು ತಿಂಗಳ ಗರ್ಭಿಣಿ ಎಂದು ಕೇಳಿದೆ! ಇದೆಲ್ಲ ಏನು ಹೊಸ ವಿಶೇಷಗಳು? ನನಗೆ ಯಾವುದೂ ಅರ್ಥವಾಗುತ್ತಿಲ್ಲ. ಅದಕ್ಕೆ ಕೂಡಲೆ ಚೀರು ಎಂದಳು – ಪೂರಪರಂಬ್‌ನ ನನ್ನ ಗಂಡಾ! ನೀವು ತಿರುಗಾಟಕ್ಕೆ ಹೋದಿರಿ, ನಾನು ಒಂದು ಹರಕೆ ಕೇಳಿಕೊಂಡೆ. ಈ ಬಾರಿ ಮುಟ್ಟು ನಿಂತು ಗಬ್ಬವಾದರೆ ಒಲವಣ್ಣೂರ್ ಕಾವ್‌ನ ಭಗವತಿಗೆ ಎಕ್ಕಹೂವಿನ ಹೊನ್ನಮಾಲೆ ಹಾಕಿಸುತ್ತೇನೆ. ಆವರಣದೊಳಗೆ ಸಿಡಿಮದ್ದಿನ ಸೇವೆ ಮಾಡಿಸುತ್ತೇನೆ. ದೇವಿ ಮುಡಿಧರಿಸಿ ಮೂಡುದಿಕ್ಕಿಗೆ ತಿರುಗುವಾಗ ಮಗುವನ್ನು ಒಯ್ದು ತೋರಿಸುತ್ತೇನೆ. ಮಗುವಿಗೆ ಅಲ್ಲೆ ಮೊಲೆ ಕೊಡುತ್ತೇನೆ. ಹೀಗೆಲ್ಲ ಹರಕೆ ಹೊತ್ತಿದ್ದೆ ನನ್ನ ದೇವರೆ! ಹದಿಮೂರನೆ ವಯಸ್ಸಲ್ಲಿ ಒಮ್ಮೆ ನಾನು ಹಡೆದೆ. ಮಗುವನ್ನು ಎತ್ತಿಕೊಳ್ಳುವ ಆಸೆಯೇ ತೀರಿಲ್ಲ. ಮೊಲೆಕೊಡುವ ಬಯಕೆಯೂ ಹಿಂಗಿಲ್ಲ. ಹಾಗೆ ಭಾವಿಸಿದ ನಾನು ಹರಕೆಗಳನ್ನು ಹೊತ್ತು ಮಲಗಿದ್ದಾಗ ನಿಮ್ಮ ಕನಸು ಕಂಡೆ. ನೀವು ಬರುತ್ತ ಹೋಗುತ್ತ ಇದ್ದಿರಿ. ಪಡುಕೋಣೆಯಲ್ಲಿ ಇರುತ್ತಿದ್ದಿರಿ. ನಿದ್ದೆಯಲ್ಲಿ ಕೆಲವೊಮ್ಮೆ ನಾನು ಗಾಬರಿಯಿಂದ ಎದ್ದು ಕೂತದ್ದಿದೆ. ಹಾಗೆ ಎದ್ದು ಕೂತು ನಿಮ್ಮನ್ನೆ ನೆನೆಯುತ್ತಿದ್ದೆ. ಮತ್ತೆ ನಿದ್ದೆಗೆ ಸರಿದಾಗ ಸಂದು ಹೋದ ಹಿರಿಯರೂ ಇತರರೂ ಮಣ್ಣಾದವರೂ ಸತ್ತವರೂ ಎಲ್ಲರೂ ಕಾಣಿಸಿಕೊಂಡು ಹೇಳಿದರು – ಓಡತ್ತಿಲ್ ಪ್ರಿಯ ಕುಂಞಿಚ್ಚೀರು! ನೀನು ಗರ್ಭಿಣಿ. ಹರಕೆಯ ಮಗುವಿದು. ನಿನಗೆ ಐದು ತಿಂಗಳಾಯಿತು. ನೀನು ಈ ಮಗುವನ್ನು ಹೆತ್ತ ಬಳಿಕ ನಲುವತ್ತು ಮಿಂದು ಮಗುವಿಗೆ ಮೊಲೆ ಕೊಡಬೇಕಾದರೆ ಒಲವಣ್ಣೂರ್ ಕಾವಿನ ಭಗವತಿಯ ಪಾದಗಳಲ್ಲಿ ಮಗುವನ್ನು ಇಡು. ಬಳಿಕ ಅಲ್ಲಿಂದ ತೆಗೆದು ಅದಕ್ಕೆ ಮೊಲೆಕೊಡು. ಮಗುವನ್ನು ಎತ್ತಿಕೊಳ್ಳುವ, ಮೊಲೆಯುಣ್ಣಿಸುವ ಆಸೆ ನಿನಗೆ ನೀಗಿಲ್ಲ. ಈ ಮಗುವನ್ನು ನೀನು ಹಡೆದು ಚೆನ್ನಾಗಿ ಸಲಹು. ಹೀಗೆ ಅವರು ಹೇಳಿ ಮುಗಿಸಿದಾಗ ನನಗೆ ಒಮ್ಮೆಲೆ ಎಚ್ಚರವಾಯಿತು. ನಾನು ಆಗಲೆ ಮನದಲ್ಲಿ ನೆನೆದೆ – ಎಂಥ ಒಳ್ಳೆಯ ಕನಸು ಕಂಡೆನಪ್ಪ! ಇದೆಲ್ಲ ಏನು ಹೊಸತು ಹೊಸತು! ಪೂರಂಪರಂಬ್‌ನ ನನ್ನ ಗಂಡ! ಹದಿಮೂರನೇ ವಯಸ್ಸಲ್ಲಿ ನನಗೆ ಬಸುರಾದಾಗ ನನಗೆ ತುಂಬ ಬಯಕೆಗಳು ಮೂಡಿದ್ದುವು. ಅವನ್ನೆಲ್ಲ ನೀವು ತೀರಿಸಿಕೊಟ್ಟಿರಿ. ಈಗ ಹರಕೆಯ ಬಸಿರು. ನನಗೆ ಯಾವುದೇ ಬಯಕೆ ಮೂಡುತ್ತಿಲ್ಲ. ನಿಮ್ಮನ್ನು ಕಾಣಬೇಕೆಂಬ ಬಯಕೆ ಮಾತ್ರ! ನನಗೆ

ಬೇರಾವುದೇ ಕಡೆಗೂ ಮನಸ್ಸು ಹರಿಯುತ್ತಿಲ್ಲ. ಅವಳು ಹೇಳಿದ್ದೆಲ್ಲ ನಿಜವೆಂದೇ ಭಾವಿಸಿ ಕೂಡಲೆ ರೈರು ಎಂದ– ಓಡತ್ತಿಲ್ ಮನೆಯ ಕುಂಞಿಚ್ಚೀರು! ನೀನೊಂದು ಮಗುವನ್ನು ಹಡೆದಾಗ ನಾವು ಮಗುವನ್ನೆತ್ತಿಕೊಂಡು ಹೋಗೋಣ. ನೀನು ಮನಸ್ಸಲ್ಲಿ ನೆನೆದ ಹಾಗೆ ಎಲ್ಲ ಹರಕೆಗಳನ್ನು ತೀರಿಸೋಣ. ನಿನಗೆ ಬೇರೇನಾದರೂ ಬಯಕೆಗಳಿದ್ದರೆ ಹೇಳು. ಎಲ್ಲವನ್ನೂ ನಾನು ತೀರಿಸಿಕೊಡುತ್ತೇನೆ. ಕುಂಞಿಚ್ಚೀರುವೆಂದಳು – ಪೂರಂಪ ರಂಬ್‌ನ ನನ್ನ ಗಂಡ! ಈ ಬಾರಿ ಮುಟ್ಟು ನಿಂತು ಗರ್ಭಿಣಿಯಾದ ಮೇಲೆ ನನಗೆ ಯಾವುದೇ ಬಯಕೆಗಳು ಮೂಡುತ್ತಿಲ್ಲ. ಹಿಂದೆ ನಾನು ಗರ್ಭಿಣಿಯಾಗಿದ್ದಾಗ ಇಷ್ಟು ದಪ್ಪಗೆ ಇರಲಿಲ್ಲ. ಈಗ ಒಳ್ಳೆ ದಪ್ಪಗಿದ್ದು ಶಕ್ತಿ ತುಂಬಿಕೊಂಡಿದೆ. ನನಗೆ ಯಾವುದೋ ದಯೆ ಲಭ್ಯವಾಗಿದೆ ಅನಿಸುತ್ತದೆ. ಒಲವಣ್ಣೂರ್ ಭಗವತಿ ನನಗೆ ಪ್ರಸನ್ನವಾಗಿದ್ದಾಳೆ. ತಿಂಗಳು ತುಂಬುತ್ತ ಬಂದ ಹಾಗೆ ನಾನು ಏನನ್ನಾದರೂ ಮಾಡಿದ್ದರೂ ಎಲ್ಲವೂ ಒಳ್ಳೆಯದಾಗಿಯೇ ತೋರಿಬರುತ್ತಿವೆ. ಈ ಮಗು ಜನ್ಮಾಂತರ ಋಣದ್ದೆಂದು ನನಗೆ ಕಾಣುತ್ತಿದೆ. ರೈರು ಈ ಮಾತುಗಳನ್ನು ಕೇಳಿದ ಬಳಿಕ ಎಂದ– ನಿನಗೆ ಹತ್ತು ತಿಂಗಳು ತುಂಬುವ ಹೊತ್ತಿಗೆ ಬಾಣಂತಿ ನೋಡಲು ನಾನು ನಾಲ್ಕು ಜನರನ್ನು ನೇಮಿಸುತ್ತೇನೆ. ಯಾವುದಕ್ಕೂ ತೊಂದರೆಯಿಲ್ಲ ಚೀರು. ಹೀಗೆ ಮಾತನಾಡುತ್ತ ಅವರು ಇರಲು ತಚ್ಚೋಳಿ ಒದೇನ ಮೆಟ್ಟಿಲೇರಿ ಬಂದ. ಆಗ ರೈರು ಕೇಳಿದ – ಏನಪ್ಪಾ ಬಂದೆ ಒದೇನ! ಅದಕ್ಕೆ ಒದೇನನೆಂದ – ಪೂರಪರಂಬ್ ಮನೆಯ ರೈರು! ನೀನು ತಿರುಗಾಟಕ್ಕೆ ಹೊಗಿಬಿಟ್ಟೆ. ಈ ಚೀರು ಆಗ ತುಂಬ ಹರಕೆಗಳನ್ನು ಹೇಳಿಕೊಂಡಿದ್ದಾಳೆ. ಅವಳು ಗರ್ಭಿಣಿ ಎಂದು ಕೇಳಿದೆ. ನಿಜವೇ ಎಂದು ತಿಳಿದುಕೊಳ್ಳೋಣ ಅಂತ ಬಂದೆ! ಒಲವಣ್ಣೂರ ಕಾವ್‌ನ ಭಗವತಿ ಮುಡಿಧರಿಸಿ ಮೂಡುದಿಕ್ಕಿಗೆ ತಿರುಗಿ ನಿಲ್ಲುವಾಗ ಯಾವುದೇ ಹರಕೆ ನಾವು ಹೇಳಿಕೊಂಡಿದ್ದರೂ ಎಲ್ಲವೂ ಅವಳ ದಯೆಯಿಂದ ನಡೆದೀತು. ಹಾಗೆ ನಡೆದದ್ದನ್ನು ನಾನು ಕಂಡವನೇ. ಹರಕೆ ಹೇಳಿರುವುದು ನಿಜವೇ ಎಂದು ತಿಳಿಯಲು ಬಂದೆ. ಕೂಡಲೆ ರೈರು ಚೀರು ಹದಿಮೂರನೇ ವರ್ಷದಲ್ಲಿ ಹೆತ್ತದ್ದು ಮಗು ಸತ್ತದ್ದು, ದುಃಖಿತೆ ಚೀರು ಭಗವತಿಗೆ ಹರಕೆ ಹೊತ್ತದ್ದು ಹೊಂಗನಸು ಕಂಡದ್ದು, ಮತ್ತೆ ಗರ್ಭಿಣಿಯಾದದ್ದು, ಸದ್ಯ ಅವಳಿಗೆ ಯಾವುದರಲ್ಲೂ ಬಯಕೆ ಇಲ್ಲದ್ದು ಏನೂ ತಿನ್ನದಿರುವುದು ಇತ್ಯಾದಿ ವಿವರಗಳನ್ನು ಒದೇನನಿಗೆ ಹೇಳಿದ. ಬಳಿಕ ನೀನು ಅವಳಲ್ಲೆ ಮಾತನಾಡಿಕೊ ಒದೇನ! ಎಂದ.ಆ ಮಾತನ್ನು ಕೇಳಿ ಒದೇನ ನಕ್ಕುಬಿಟ್ಟ. ಏನೂ ತಿಳಿಯದವನ ಹಾಗೆ ಕೇಳಿದ – ಓಡತ್ತಿಲ್ ಮನೆಯ ಪ್ರಿಯಚೀರು! ವಿಶೇಷಗಳನ್ನು ನಾನು ತಿಳಿದೆ. ಕೂಡಲೇ ಚೀರು ರೈರುವಿಗೆ ಕೇಳಿಸದಂತೆ ಹೇಳಿದಳು – ತಚ್ಚೋಳಿಯ ನನ್ನ ಪ್ರಿಯ ಗಂಡ! ನೀವು ನನ್ನಲ್ಲಿ ಹೇಳಿದ ಹಾಗೆ ನನ್ನ ಗಂಡನಿಗೆ ನಾನು ಹೇಳಿದೆ.

ಅವರು ಅದನ್ನು ನಿಜವೆಂದೇ ನಂಬಿದ್ದಾರೆ. ಹಾಗಂತಲೇ ನಿಮ್ಮಲ್ಲಿ ಅದನ್ನು ಹೇಳಿದುದು. ಅದಕ್ಕೆ ಒದೇನನೆಂದ – ಓಡತ್ತಿಲ್ ಮನೆಯ ಪ್ರಿಯಚೀರು! ನೀನು ಹೆತ್ತು ನಲುವತ್ತು ಮಿಂದಾಗ ಮಗುವನ್ನು ನೋಡಲು ನಾನು ಬರುತ್ತೇನೆ. ನಿನ್ನ ಈ ಬಸುರಿನ ಕಾಲದಲ್ಲಿ ನಿನ್ನ ಅನೇಕ ಬಯಕೆಗಳನ್ನು ನಾನು ತೀರಿಸಿದೆ. ನಿನಗೆ ಇನ್ನು ಯಾವುದೇ ಬಯಕೆಗಳಿಲ್ಲ. ಓಡತ್ತಿಲ್ ಮನೆಯ ಪ್ರಿಯಚೀರು! ಪೂರಪರಂಬ್‌ನ ರೈರುವನ್ನು ನಾವಿಬ್ಬರೂ ಸೋಲಿಸಿಬಿಟ್ಟೆವಲ್ಲ! ಮಗುವನ್ನು ನೀನು ಚೆನ್ನಾಗಿ ಸಾಕಿ ಸಲಹು. ಹೀಗೆ ಹೇಳಿ ಒದೇನ ವೀಳ್ಯಹಾಕಿ ಅಲ್ಲಿಂದ ಹೊರಟ. ಹೀಗೆ ಎಲ್ಲರೂ ಇರಲು ಚೀರುವಿಗೆ ಹತ್ತು ತಿಂಗಳು ತುಂಬಿ ಅವಳು ಒಳ್ಳೆ ಗಂಡು ಮಗುವೊಂದನ್ನು ಹೆತ್ತಳು. ಹೆರಿಗೆಗೆ ಬೇಕಾದ ಎಲ್ಲ ಖರ್ಚನ್ನೂ ರೈರುವೇ ನೀಡಿದ. ತುಂಬ ಸಾಮಾನು ಸರಂಜಾಮುಗಳನ್ನು ಮಗುವಿಗಾಗಿ ಸಂಗ್ರಹಿಸಿ ವಿಜೃಂಭಣೆಯಿಂದ ಕಾರ್ಯಕ್ರಮವನ್ನು ನಡೆಸಿದ. ರೈರು ಹೇಳಿದ – ಓಡತ್ತಿಲ್ ಮನೆಯ ಪ್ರಿಯ ಚೀರು! ಮಗುವಿಗೆ ನೀನು ಮೊಲೆ ಕೊಟ್ಟು ಬಿಡಬೇಡ! ಹಸುವಿನ ಹಾಲುಕೊಟ್ಟರೆ ಸಾಕು. ಕೂಡಲೆ ಕುಂಞಿಚೀರುವೆಂದಳು – ಪೂರಂಪರಂಬಿನ ನನ್ನ ಗಂಡ! ಒಲವಣ್ಣೂರ್ ಕಾವ್‌ನ ಭಗವತಿಗೆ ಬೇರೆಯೂ ಒಂದು ಹರಕೆ ನಾನು ಹೇಳಿಕೊಂಡಿದ್ದೇನೆ. ಯುದ್ಧ ವಿದ್ಯೆ ಮತ್ತು ಕಲಿಕೆಗಳಲ್ಲಿ ಹೆಸರು ಪಡೆದಿರುವ ತಚ್ಚೋಳಿಯ ಒದೇನನ ಹಾಗಿರುವ ಮಗನನ್ನು ನನಗೆ ನೀನು ಕೊಡಬೇಕೆಂದು ಹರಕೆ ಹೊತ್ತಿದ್ದೇನೆ! ಹೇಳಿದ ಹರಕೆಗಳೆಲ್ಲ ನನಗೆ ಈಡೇರಿವೆ. ಇದೆಲ್ಲ ಎಂಥ ವಿಶೇಷ ಸಂಗತಿಗಳು! ಮಗುವನ್ನು ನೀವು ಈಗ ನೋಡಿದರೆ ಮಗು ಒದೇನನನ್ನು ಸುಲಿದು ಕೊಂಡು ಬಂದ ಹಾಗೆ ಇದೆ! ಅದನ್ನು ಕೇಳಿದ ರೈರು ಮಗುವನ್ನು ಕೈಗೆ ತೆಗೆದುಕೊಂಡು ಬೆಳಕಿಗೆ ಒಯ್ದು ನೋಡಿದ. ಬಳಿಕ ಹೇಳತೊಡಗಿದ – ಓಡತ್ತಿಲ್ ಮನೆಯ ಪ್ರಿಯ ಚೀರು! ನೀನು ಹೇಳಿರುವುದು ನಿಜ. ಒದೇನನನ್ನು ನೋಡಿದರೆ ಈ ಮಗುವನ್ನು ನೋಡ ಬೇಕಾಗಿಯೇ ಇಲ್ಲ! ಹಾಗೆ ಹೇಳಿ ಕುಳಿತುಕೊಂಡ. ಚೀರು ನಲುವತ್ತು ಮಿಂದಾಗ ರೈರು ಹೇಳಿದ – ಓಡತ್ತಿಲ್ ಮನೆಯ ಪ್ರಿಯ ಚೀರು! ಒಲವಣ್ಣೂರ್ ಕಾವಿಗೆ ನಾವು ಮಗುವನ್ನೂ ಕರೆದುಕೊಂಡು ಹೋಗೋಣ. ಚೀರು ಹರಕೆಯ ಹಣವನ್ನೂ ಹೊನ್ನನ್ನೂ ತೆಗೆದುಕೊಂಡಳು. ಮಗುವನ್ನು ಎತ್ತಿಕೊಂಡಳು. ಅವರು ಕಾವ್‌ಗೆ ತಲಪಿದರು. ಅಲ್ಲಿ ತಲಪಿ ಕಾವಿನ ಭಗವತಿ ಮುಡಿಧರಿಸಿ ಮೂಡುದಿಕ್ಕಿಗೆ ತಿರುಗಿ ಕುಳಿತಾಗ ಎಕ್ಕಹೂವಿನ ಹೊನ್ನಮಾಲೆಗಳನ್ನು ಚೀರು ಭಗವತಿಯ ಕೊರಳಿಗೆ ಹಾಕಿದಳು. ನಾಲ್ಕು ಆವರಣಗೋಡೆಯೊಳಗೆ ಸಿಡಿಮದ್ದು ಸಿಡಿಸಿದಳು. ತೆಂಗಿನಕಾಯಿ ಒಡೆಯಿಸಿ ಪಾಟ್ಟು ಉತ್ಸವ ನಡೆಯಿಸಿದಳು. ಬೇಕಾದುದೆಲ್ಲವನ್ನೂ ಮಾಡಿಸಿದಳು. ಮಗುವನ್ನು ಎತ್ತಿ ಭಗವತಿಯ ಮುಂದೆ ಮಲಗಿಸಿದಳು. ಭಗವತಿ ಮಗುವಿನ ತಲೆಗೆ ಅಕ್ಕಿ ಕಾಳುಗಳನ್ನು ಎರಚಿದಾಗ ಚೀರು

ಮಗುವನ್ನು ಎತ್ತಿಕೊಂಡಳು. ಅಲ್ಲೇ ಮಗುವಿಗೆ ಮೊಲೆ ಉಣ್ಣಿಸಿದಳು. ಮಗುವಿಗೆ ಮೊಲೆಕುಡಿದು ಕುಡಿದು ಸಾಕಾಗಲಿಲ್ಲ. ಆಗ ರೈರುವೆಂದ – ಓಡತ್ತಿಲ್ ಮನೆಯ ಪ್ರಿಯ ಚೀರು! ನೀನು ಹಡೆದ ಬಳಿಕ ಈ ವರೆಗೆ ಮಗುವಿಗೆ ಮೊಲೆಕೊಡಲಿಲ್ಲವಲ್ಲ? ಹಾಗಾಗಿ ಅದಕ್ಕೆ ಈಗ ಆಸೆ ಬಿಡುವುದಿಲ್ಲ. ನಾವು ಇನ್ನು ಬೇಗ ಇಲ್ಲಿಂದ ಹೊರಡೋಣ. ಅಂತೆಯೇ ಅವರು ಅಲ್ಲಿಂದ ಹೊರಟರು. ಓಡತ್ತಿಲ್ ಮನೆಗೆ ತಲಪಿದರು. ಅಲ್ಲಿ ಸುಖವಾಗಿದ್ದರು. ಅವರು ಹೀಗೆ ಸುಖವಾಗಿರಲು ತಚ್ಚೋಳಿ ಒದೇನ ಅಲ್ಲಿಗೆ ಬಂದ. ಒದೇನನನ್ನು ಕಂಡ ರೈರು ಹೀಗೆಂದ – ತಚ್ಚೋಳಿಯ ಕಣ್ಮಣಿ ಬಾಲ ಒದೇನ! ನನ್ನ ಮಗುವನ್ನು ನೀನು ನೋಡಿದ್ದಿಯಾ? ನನ್ನ ಚೀರು ಹತ್ತು ತಿಂಗಳು ತುಂಬುತ್ತ ಬಂದಾಗ ಒಲವಣ್ಣೂರ್ ಕಾವ್‌ನ ಭಗವತಿಗೆ ತಾನು ಮುಂದೆ ಹೆರಲಿರುವ ಮಗು ತಚ್ಚೋಳಿ ಒದೇನನ ಹಾಗೆ ಯುದ್ಧ ವಿದ್ಯೆ ಮತ್ತು ಕಲಿಕೆಗಳಲ್ಲಿ ಅಂದಚಂದದಲ್ಲಿ ಇದ್ದರೆ ಎಕ್ಕಹೂವಿನ ಹೊನ್ನಮಾಲೆ ಒಪ್ಪಿಸುತ್ತೇನೆಂದು ಹರಕೆ ಹೇಳಿದ್ದಳು. ಏನು ಹೇಳುವುದು! ಹತ್ತು ತಿಂಗಳು ತುಂಬಿ ಅವಳು ಹೆತ್ತಾಗ ಮಗು ನಿನ್ನನ್ನು ಸುಲಿದುಕೊಂಡು ಬಂದಿದೆ! ಅವಳು ನಲುವತ್ತು ಮಿಂದು ಹರಕೆ ಒಪ್ಪಿಸುವುದಕ್ಕೆ ಕಾವ್‌ಗೆ ಹೋಗಿದ್ದೆವು. ಹರಕೆ ಎಲ್ಲ ತೀರಿಸಿದೆವು. ಹರಕೆ ತೀರಿಸಿ ಮಗುವಿಗೆ ಮೊಲೆಕೊಟ್ಟಳು. ಮಗುವನ್ನು ನೀನು ಇನ್ನೊಮ್ಮೆ ನೋಡು ಒದೇನ! ಇದನ್ನು ಕೇಳಿದ ಒದೇನ ಮಗುವನ್ನು ಎತ್ತಿ ಮಡಿಲಲ್ಲಿ ಇರಿಸಿಕೊಂಡ. ಚೀರುವಿನ ಮುಖವನ್ನೊಮ್ಮೆ ನೋಡಿ ನಕ್ಕ. ಬಳಿಕ ಹೇಳಿದ – ಓಡತ್ತಿಲ್ ಮನೆಯ ಪ್ರಿಯ ಚೀರು! ಇದು ರೈರುವಿನ ಮಗುವೆಂದು ತಿಳಿಯಬೇಡ. ಹರಕೆಯಿಂದ ದೊರೆತ ಮಗು! ಮಗುವನ್ನು ಚೆನ್ನಾಗಿ ಸಾಕಿ ಸಲಹಿಕೊ. ಹದಿಮೂರನೇ ವಯಸ್ಸಲ್ಲಿ ನೀನು ಹಡೆದಿದ್ದರೂ ಮಗುವನ್ನು ಸಾಕಲು ಅವಕಾಶವಾಗಲಿಲ್ಲ. ಮಗುವನ್ನು ಚೆನ್ನಾಗಿ ಸಾಕು. ಹರಕೆಯ ಮಗುವನ್ನು ಕೆಳಗೆ ನೆಲದಲ್ಲಿ ಇಡಬೇಡ. ಹಾಗೆ ಹೇಳಿ ಒದೇನ ಇನ್ನೊಮ್ಮೆ ಚೀರುವಿನ ಮುಖ ನೋಡಿದ. ಮಗುವನ್ನು ಮೆಲ್ಲ ಎತ್ತಿ ಚೀರುವಿನ ಮಡಿಲಲ್ಲಿ ಮಲಗಿಸಿದ. ಆಗ ರೈರು ಎಂದ – ತಚ್ಚೋಳಿ ಕಣ್ಮಣಿ ಬಾಲ ಒದೇನ! ವೀಳ್ಯ ಹಾಕಿ ಹೋಗಬಹುದಲ್ಲ! ಅದನ್ನು ಕೇಳಿದ ಒದೇನ ವೀಳ್ಯಹಾಕಿ ಹೊರಟುಹೋದ. ಹಾಗೆ ಅವರೆಲ್ಲ ಸುಖವಾಗಿ ಇದ್ದರು.

ಸುಣ್ಣಕೊಟ್ಟ ಸನ್ಯಾಸಿ ಮುಟ್ಟಿದ್ದು ಸತ್ಯ

ತಚ್ಚೋಳಿಯ ಕಣ್ಮಣಿ ಬಾಲಒದೇನ ತಿರುಗಾಟ ಮಾಡುತ್ತ ಕದಿರೂರ್‌ಗೆ ಹೋದ. ಜತೆಗೆ ಕಂಡಾಚ್ಚೇರಿ ಚಾಪ್ಪನೂ ಇದ್ದಾನೆ. ಅವರು ಕದಿರೂರು ಅರಮನೆಯ ಮುಂದೆ ತಲಪಿದಾಗ ಏಳಂತಸ್ತಿನ ಉಪ್ಪರಿಗೆಯ ಮೇಲಿಂದ ಕದಿರೂರರಸ ಅವರನ್ನು ಕಂಡ. ಅವನು ತನ್ನ ನಾಯಮ್ಮಾರರಲ್ಲಿ ಕೇಳಿದ – ಯಾರವನು? ಯಾವುದೇ ಆಚಾರ ವಿಚಾರಗಳಿಲ್ಲದೆ ಅರಮನೆಗೆ ಒಂದಿಷ್ಟು ಗೌರವ ತೋರದೆ ಸಾಗುತ್ತಿರುವವನು? ಅವನನ್ನು ಹಿಡಿದು ಕಟ್ಟಿ ತನ್ನಿ. ನಾಯನ್ಮಾರರು ಅಂತೆಯೇ ಹೋಗಿ ಇವರನ್ನು ತಡೆದರು. ಒದೇನ ಕೇಳಿದ – ಕದಿರೂರರಸನ ನಾಯಮ್ಮಾರರೇ! ನನ್ನನ್ನು ಯಾಕಾಗಿ ತಡೆಯು ತ್ತಿದ್ದೀರಿ? ಅದಕ್ಕೆ ಅವರೆಂದರು – ನಮ್ಮ ಅರಸರು ಹಾಗೆ ಆಜ್ಞೆ ಮಾಡಿದ್ದಾರೆ. ನೀನು ಅವರನ್ನು ಒಮ್ಮೆ ಕಂಡು ಹೋಗು. ಅದಕ್ಕೆ ಒದೇನನೆಂದ – ನಿಮ್ಮ ಅರಸನಿಗೆ ನಾನು ಏನನ್ನೂ ಕೊಡಬೇಕಾದುದಿಲ್ಲ. ಅಥವಾ ಅರಸನೂ ನನಗೆ ಏನೂ ಕೊಡುವುದಕ್ಕಿಲ್ಲ. ನಾಯಮ್ಮಾರರು ಹೋಗಿ ಅಂತೆಯೇ ಹೇಳಿದರು. ಒದೇನನೂ ಚಾಪ್ಪನೂ ಒಂದಷ್ಟು ದೂರ ಸಾಗಿದ್ದರು. ಒದೇನ ಚಾಪ್ಪನಿಗೆಂದ– ಕಂಡಾಚ್ಚೇರಿ ಚಾಪ್ಪಾ! ಅರಸರೇ ನಮ್ಮನ್ನು ಕರೆಸಿದ್ದಲ್ಲವೆ? ನಾವು ಹೋಗಿ ಕರೆಸಿದ್ದು ಯಾಕೆಂದು ಕೇಳದಿದ್ದರೆ ನಾವೂ ಒಂದಿಷ್ಟು ತಪ್ಪಿದಂತಾಗುತ್ತದಲ್ಲವೆ? ನಾವೊಮ್ಮೆ ಹೋಗಿ ಬಂದು ಬಿಡೋಣ, ಆಗದೆ? ಹಾಗೆಯೇ ಅವರು ಬೂಡಿಗೆ ಹೋದರು. ಹೆಬ್ಬಾಗಿಲು ಪಡಿಪ್ರೆ ದಾಟಿ ಒಳಹೋಗುತ್ತಿದ್ದಂತೆ ತನ್ನ ಪಾಗು/ಮುಂಡಾಸು ತೆಗೆದು ಗೌರವ ಸಲ್ಲಿಸಿದ. ಅರಸನನ್ನು ಕಂಡು ತನ್ನನ್ನು ಕರೆಸಿದ್ದು ಯಾಕೆಂದು ಕೇಳಿದ. ಅದಕ್ಕೆ ಅರಸನೆಂದ ನಿನ್ನ ಕುಲನಾಮದ ಹೆಸರು ನನಗೆ ತಿಳಿಯದು. ಹಾಗೆ ಯಾರೆಂದು ತಿಳಿಯಲು ಕರೆಸಿದ್ದು ಎಂದ ಅರಸ. ಒದೇನನೆಂದ – ನಾನು ತಚ್ಚೋಳಿಒದೇನ. ಅರಸನಿಗೆ ಅವನನ್ನು ಕಪಟದಿಂದ ವಂಚಿಸ ಬೇಕೆಂದೆನಿಸಿತು.

ಅವನೆಂದ–ತಚ್ಚೋಳಿ ಕಣ್ಮಣಿ ಒದೇನ! ನೀನು ನಿನ್ನ ಉರುಮಿಯನ್ನೂ ಗುರಾಣಿಯನ್ನೂ ಬಾಗಿಲ ಹೊರಗೆ ಇಟ್ಟು ಮಾಳಿಗೆಗೆ ಬಾ. ಅದಕ್ಕೆ ಒದೇನನೆಂದ – ನನ್ನ ಉರುಮಿ ಗುರಾಣಿಗಳನ್ನು ಇಲ್ಲಿ ಹೊರಗೆ ಇಡಲಾರೆ. ನಮ್ಮ ಅರಸರಾದರೆ ಹಾಗೆ ಮಾಡುತ್ತಿದ್ದೆ. ಆಗ ಅರಸನೆಂದ–ಆಗಲಿ ಅವುಗಳನ್ನು ತೆಗೆದುಕೊಂಡೇ ಬಾ. ಒದೇನ ಮಾಳಿಗೆಗೆ ಹೋದ. ಅರಸನೆಂದ – ನಿನಗೆ ಹೊನ್ನೆಂದರೆ ಪ್ರಾಣ. ನನಗೂ ಹೊನ್ನೆಂದರೆ ಇಷ್ಟವೆ. ನಾವು ಏನಾದರೂ ಪಂಥ ಇಟ್ಟು ಜೂಜು ಆಡೋಣ. ಒದೇನ ಕೇಳಿದ – ಏನನ್ನು ಪಣವಾಗಿ ಇಡೋಣ? ಅರಸನೆಂದ – ಆಟದಲ್ಲಿ ನಾನು ಗೆದ್ದರೆ ನಿನ್ನ ಉರುಮಿಯನ್ನು ನನಗೆ ಕೊಡಬೇಕು. ನೀನು ಗೆದ್ದರೆ ನನ್ನ ಕಿರುಬೆರಳ ಉಂಗುರವನ್ನು ನಿನಗೆ ಕೊಡುತ್ತೇನೆ. ಅದು ನನ್ನ ಜೀವವನ್ನು ಪೊರೆಯುತ್ತಿರುವ ಉಂಗುರ. ಅದು ನಿನಗೆ ಸಿಕ್ಕರೆ ನಿನ್ನನ್ನೂ ಅದು ಪೊರೆದೀತು. ಒದೇನನೆಂದ–ಹಾಗಾದರೆ ಹಾಸಂಗಿಗಳನ್ನು ಹಾಸಿಸಿರಿ. ಹಾಸಂಗಿ ಹಾಸಿದರು, ದಾಳವೂ ಬಂತು. ಇಬ್ಬರೂ ಕುಳಿತರು. ಏಳು ಆಟ ಜೂಜು ಆಡಿದರು. ಏಳರಲ್ಲೂ ಒದೇನನೇ ಗೆದ್ದ. ಹಾಸಂಗಿ ಮಡಚಿತು, ದಾಳ ಪೆಟ್ಟಿಗೆ ಸೇರಿತು. ಒದೇನ ಮೇಲೆದ್ದ. ಒದೇನನೆಂದ – ಕದಿರೂರರಸರೇ! ನಿಮ್ಮ ಉಂಗುರ ಕೊಟ್ಟು ಬಿಡಿ. ಅರಸ ಉಂಗುರವನ್ನು ಒದೇನನಿಗೆ ಕೊಟ್ಟುಬಿಟ್ಟ. ಒದೇನ ಮಾಳಿಗೆ ಇಳಿದ. ಹೆಬ್ಬಾಗಿಲು ದಾಟಿ ಹೊರಬಂದ. ಹೊರಬಂದವನೇ ಚಾಪ್ಪನಲ್ಲಿ ಕೇಳಿದ – ಕಂಡಾಚ್ಚೇರಿ ಚಾಪ್ಪ! ಕದಿರೂರ ಅರಮನೆಯ ಮೆಟ್ಟಲೇರಿ ನಾವು ಹೋದಾಗ ಕದಿರೂರ ಕೆರೆಯ ಮೆಟ್ಟಲು ಗಳನ್ನು ಚಿನ್ನದಿಂದ ಕಟ್ಟಿಸುತ್ತಿರಲಿಲ್ಲವಲ್ಲ. ಆದರೆ ನಾವು ಮರಳುವಾಗ ಅದು ಚಿನ್ನದ ಕಾಂತಿ ಪಡಕೊಂಡದ್ದು ಹೇಗೆ? ಅದಕ್ಕೆ ಚಾಪ್ಪನೆಂದ – ನನ್ನ ಧನಿ! ನೀವು ತಿಳಿದು ಕೇಳುತ್ತಿದ್ದೀರಾ? ತಿಳಿಯದೆ ಕೇಳುತ್ತೀದ್ದೀರಾ? ಒದೇನನೆಂದ – ತಿಳಿದಿದ್ದರೆ ಸುಮ್ಮ ಸುಮ್ಮನೆ ಕೇಳುತ್ತಿದ್ದೆನೇನೋ? ಆಗ ಚಾಪ್ಪನೆಂದ– ಕದಿರೂರು ಕೆರೆಯ ನೀರು ಚಿನ್ನದಂತಾಗಲು ಮೆಟ್ಟಿಲು ಚಿನ್ನದಲ್ಲಿ ಕಟ್ಟಿಸಿದ್ದಲ್ಲ ಕಾರಣ. ಅರುಣಾದಿರಿ ಕೋಟೆಯ ಕುಂಞಿಕನ್ನಿ ಅಲ್ಲಿ ಸ್ನಾನಮಾಡುತ್ತಿರುವುದರಿಂದ ಹಾಗೆ. ಒದೇನ ಕೇಳಿದ – ಚಾಪ್ಪಾ! ಅರುಣಾದಿರಿ ಕನ್ನಿಗೆ ಹಚ್ಚುವ ಎಣ್ಣೆಗೆ ಉಡುವ ಬಟ್ಟೆಗೆ ಯಾರಾದರೂ ವೆಚ್ಚಕ್ಕೆ ಕೊಡು ತ್ತಿದ್ದಾರೆಯೇ? ಅದಕ್ಕೆ ಚಾಪ್ಪನೆಂದ– ಅವಳಿಗೆ ಏಳು ವರ್ಷ ಪ್ರಾಯವಾದಾಗಲೇ ಮದುವೆ ಮಂಟಪದಲ್ಲಿ ಕೊಟ್ಟಾಯದ ಅರಸು ಕುಂಞುಣ್ಣಿ ತಂಬ್ರಾನ್ ರೇಶ್ಮೆ ಸೀರೆಯನ್ನೂ ಚಿನ್ನದ ಬಳೆಯನ್ನೂ ಕೊಡಿಸಿದ್ದಾನೆ. ಅಂದೇ ಕಾರಣಿಕದ ಹೊನ್ನ ಬಳೆಯನ್ನೂ ಕೊಟ್ಟನಲ್ಲವೇ? ಅಂದೇ ಕಿವಿಗಳಿಗೆ ಓಲೆಯನ್ನೂ ಕೊಡಿಸಿದ್ದಾನೆ. ಎಂದಾದರೂ ವಿಶ್ವಾಸ ದ್ರೋಹ ಮಾಡಿದರೆ ಆ ಬಳೆ ಒಡೆಯುತ್ತದೆ, ಕಿವಿಯ ಓಲೆ ನಜ್ಜುಗುಜ್ಜಾ ಗುತ್ತದೆ. ಒದೇನನಿಗೆ ಸಹಿಸಲಾಗಲಿಲ್ಲ. ಅವನೆಂದ – ಬೇರೇನೂ ಹೇಳಬೇಡ, ನಿಲ್ಲಿಸು. ಅರುಣಾ

ದಿರಿ ಕೋಟೆಯ ಕುಂಞಿಕನ್ನಿಯಲ್ಲಿ ಒಮ್ಮೆ ತಾಂಬೂಲ ಕೊಡುವಂತೆ ಕೇಳಬೇಕು. ಆಗ ಚಾಪ್ಪನೆಂದ – ಅವಳು ಒರಟು ಭಾಷೆಯಲ್ಲೇ ಹೊಡೆದು ಬಿಡುತ್ತಾಳೆ. ಒದೇನನೆಂದ – ಅದೇನೂ ಪರವಾಗಿಲ್ಲ ಚಾಪ್ಪಾ! ನೀನು ಅವಳಲ್ಲಿಗೆ ಹೋಗಿ ಬಾ. ಚಾಪ್ಪ ಹೊರಟು ಹೋದ. ಕೆರೆಯ ಬಳಿಗೆ ತಲಪಿದ. ಆಗ ಕನ್ನಿ ಕೇಳಿದಳು – ಕಂಡಾಚ್ಚೇರಿ ಚಾಪ್ಪ, ಏನು ಬಂದೆ? ಚಾಪ್ಪನೆಂದ– ಅರುಣಾದಿರಿ ಕೋಟೆಯ ಕುಂಞಿಕನ್ನಿ! ನನ್ನ ಯಜಮಾನರಿಗೆ ಒಮ್ಮೆ ತಾಂಬೂಲ ಕೊಡುವೆಯಾ? ಅದಕ್ಕೆ ಅವಳೆಂದಳು – ನಿನ್ನ ಯಜಮಾನನೆಂದರೆ ಯಾರು? ಅಗಸ ಯಜಮಾ ನನೋ ಜಾತಿ ಕುರುಪ್ಪೋ? ಅಥವಾ ಬೇಟ್ವರ ಯಜಮಾನನೋ? ಅದಕ್ಕೆ ಚಾಪ್ಪ ಉತ್ತರಿಸಿದ – ನನ್ನ ಯಜಮಾನ ಇವರಾರೂ ಅಲ್ಲ. ತಚ್ಚೋಳಿ ಮನೆಯ ಕಿರಿಯ ಯಜಮಾನ. ಹದಿನೆಂಟು ನಾಡುಗಳಲ್ಲೂ ಹೆಸರುವಾಸಿ. ಅದಕ್ಕೆ ಕನ್ನಿಯೆಂದಳು – ಹದಿನೆಂಟು ನಾಡುಗಳಲ್ಲೂ ಹೆಸರುವಾಸಿ ಯಾದರೆ ಸಾಲದು. ನಾನು ಅವನಿಗೆ ತಾಂಬೂಲ ಸುರುಟಿ ಕೊಡಬೇಕಾದರೆ ಅವನ ಅಪ್ಪನನ್ನು ಕೂಡಿಕೊಂಡು, ಅವನ ಅಮ್ಮನನ್ನು ಕರೆದುಕೊಂಡು, ಅವನ ತಂಗಿಯನ್ನು ಕರಕೊಂಡು ಬರಲಿ. ಈ ಮಾತುಗಳನ್ನು ಕೇಳಿ ಚಾಪ್ಪ ಕೂಡಲೇ ಒದೇನನ ಬಳಿ ಬಂದ. ಅವನಿಗೆ ನಡೆದ ಎಲ್ಲವನ್ನೂ ಹೇಳಿದ. ಒದೇನ ಕೂಡಲೇ ಕೊಳದ ಬಳಿ ಬಂದ. ಕನ್ನಿಗೆ ಹೇಳಿದ – ಅರುಣಾದಿರಿ ಕೋಟೆಯ ಕುಂಞಿಕನ್ನಿ! ನೀನು ನನ್ನ ಅಪ್ಪನನ್ನು ಹೇಳಿದಿ. ಹೋಗಲಿ. ಅಮ್ಮನನ್ನು ಹೇಳಿದಿ. ಬಿಟ್ಟು ಬಿಡೋಣ. ಆದರೆ ನನ್ನ ಸಹೋದರಿಯ ಬಗೆಗೆ ಹೇಳಿದೆ ಯಲ್ಲಾ? ಅದಕ್ಕೆ ನಿನ್ನನ್ನು ಏಳು ಸುರುಳಿ ವೀಳ್ಯದೆಲೆಯನ್ನು ಸುರುಟುವಂತೆ ಮಾಡುತ್ತೇನೆ. ನೆನಪಿಟ್ಟುಕೋ. ಅದಕ್ಕೆ ಅವಳೆಂದಳು -- ತಚ್ಚೋಳಿ ಮನೆಯ ಒದೇನ! ನನ್ನನ್ನು ನೀನು ಏನು ಮಾಡಬಲ್ಲೆ? ಊದಿ ಹಾರಿಸಿ ಬಿಡುತ್ತಿಯಾ? ಅರುಣಾದಿರಿ ಕೋಟೆಯೆಂದರೆ ಏನಂದುಕೊಂಡೆ. ಅದು ಏಳು ಸುತ್ತಿನ ಕೋಟೆ. ಏಳು ಸುತ್ತು ಕಬ್ಬಿಣದ ದಸಿಗಳು. ಏಳು ಸುತ್ತಿನ ಅಡಿಕೋಟೆಯಲ್ಲಿ ನಾನು ತಾಮ್ರದಿಂದ ಒಂದು ಕೋಣೆಯನ್ನು ನಿರ್ಮಿಸಿ ಕೊಂಡಿದ್ದೇನೆ. ಅದರ ಒಳಗೆ ಒಂದು ಹೊನ್ನ ಕೋಣೆ ಇದೆ. ಅದರೊಳಗೆ ನನ್ನ ನಿದ್ದೆ. ಹೊನ್ನಕೋಣೆಗೆ ಹದಿನೆಂಟು ದಿಕ್ಕಲ್ಲೂ ಸರ್ಪಗಾವಲು. ಹದಿನೆಂಟು ತೆರನ ಆಯುಧ ಗಳನ್ನು ಹಿಡಿದ ಕಾವಲುಗಾರರು. ನನ್ನನ್ನೇನು ಮಾಡುತ್ತಿ? ಊದಿ ಹಾರಿಸುತ್ತಿಯಾ? ಕೋಟೆಯ ನಾಲ್ಕು ದಿಕ್ಕಲ್ಲೂ ಏಳು ಸುತ್ತು ಬಿದಿರ ಹಿಂಡಿಲು ಬೆಳೆದಿದೆ. ಒಂದೇ ಒಂದು ನೊಣವಾಗಲಿ ಇರುವೆಯಾಗಲಿ ದಾಟಿ ಬರಲು ಅಸಾಧ್ಯ. ಇಬ್ಬರಿಗೂ ಮಾತು ಬೆಳೆಯಿತು. ವಾಸಿಪಂಥ ಮುಪ್ಪುರಿಗೊಂಡಿತು. ಒದೇನ ಕದಿರೂರು ತಿರುಗಾಟವನ್ನೂ ಮರೆತ. ಅವನು ಹಿಂತಿರುಗಿ ಹೊರಟ.

ಹಾಗೆ ನಡೆದವನು ತಲಪಿದ್ದು ಲೋಕನಾರ್ ಕಾವ್‌ಗೆ. ಅಲ್ಲಿನ ಹಿರಿಕೆರೆಯಲ್ಲಿ ಮಿಂದ. ಕಿರಿಕೆರೆಯಲ್ಲಿ ಕಾಲು ತೊಳೆದುಕೊಂಡ. ಗರ್ಭಗುಡಿಯ ಮುಂದೆ ಬಂದು ನಿಂತ. ಅರ್ಚಕರಲ್ಲಿ ವಿನಂತಿಸಿದ– ತಯ್ಯಿಲ್ ನಂಬೂದಿರಿಯವರೆ, ಚಿಕ್ಕ ನಂಬೂದಿರಿ ಯವರೆ! ಗರ್ಭಗುಡಿಯ ಬಾಗಿಲು ತೆರೆಯಿರಿ. ಮೆಟ್ಟುಕಲ್ಲಿನಲ್ಲಿ ಭಂಡಾರ ಪೆಟ್ಟಿಗೆ ತಂದಿಡಿ. ನಂಬೂದಿರಿ ಅಂತೆಯೇ ಮಾಡಿದ. ಒದೇನ ಪಂಚೆಯ ತುದಿ ಸೆರಗಿನ ಗಂಟನ್ನು ಬಿಚ್ಚಿ ಹದಿನಾರು ಬೆಳ್ಳಿಯ ಹಣ ತೆಗೆದು ಭಂಡಾರ ಪೆಟ್ಟಿಗೆಗೆ ಹಾಕಿದ. ದೇವರಿಗೆ ಉದ್ದಂಡ ನಮಸ್ಕಾರ ಮಾಡಿದ. ದೇವ ಪಾತ್ರಿಗೆ ದೈವಾ ವೇಶವಾಯಿತು. ತೀವ್ರ ದೈವಾವೇಶವಾದಾಗ ಹೀಗೆಂದ – ತಚ್ಚೋಳಿ ಮನೆಯ ಒದೇನ! ಕದಿರೂರು ತಿರುಗಾಟ ಮುಗಿಯಿತು. ಈಗ ಎದ್ದು ನಿಲ್ಲು. ನಾನು ಹೇಳಿ ಕೊಡುವೆ. ಇಂದು ಯಾರೋ ಹೆಂಗುಸು ನಿನ್ನ ಮಾನ ಕಳೆದಳೇ? ಕಿವಿಗೊಟ್ಟು ಎಲ್ಲವನ್ನೂ ಕೇಳು. ಅರುಣಾದಿರಿ ಕೋಟೆಗೆ ಹೋಗಬೇಕೆಂಬ ಆಸೆಯೇ? ಹಾಗಾದರೆ ಹಿಂಜರಿಯಬೇಡ. ಸಂಜೆ ದೀಪ ಇಡುವ ಹೊತ್ತಿಗೆ ಅರುಣಾದಿರಿ ಕೋಟೆಗೆ ತಲಪಬೇಕು. ಹಾಗೆ ತಲಪಿದಾಗ ಕೋಟೆಯ ಆದ್ಯಂತವಾಗಿ ನಡೆದು ನೋಡು. ಬಳಿಕ ಬಡಗು ಭಾಗದಲ್ಲಿ ನಿಂತುಕೋ. ಬಡಗು ಭಾಗದ ಬಿದಿರ ಹಿಂಡಿಲನ್ನು ನಾನು ಸರಿಸುವೆ. ಆಗ ನೀನು ಮೇಲೆ ನೋಡು. ಹಸುರು ಬಣ್ಣದ ಒಂದು ಪಕ್ಷಿ ಬಂದೀತು. ಅದು ಕೋಟೆ ದಸಿಯ ಮೇಲೆ ಬಿದ್ದೀತು. ನೀನು ಆಗ ಅಂಜಬೇಡ, ಅಳುಕಬೇಡ. ಬಿದಿರಿನ ತುದಿ ನಿನ್ನ ಹತ್ತಿರ ಬಾಗಿ ಬಂದೀತು. ಅದನ್ನು ಹಿಡಿದುಕೊ. ನಿನ್ನ ಬಳಿಯೇ ಚಾಪ್ಪನೂ ಹಿಡಿದುಕೊಳ್ಳಲಿ. ಹದಿನೆಂಟು ಕೋಟೆಗಳ ಅಡಿಕೋಟೆಗೆ ಬಿದಿರು ನಿನ್ನನ್ನು ಎತ್ತಿ ಒಯ್ದೀತು. ಹದಿನೆಂಟು ದಿಕ್ಕಿನ ಕಾವಲವರು ಗಾಢವಾಗಿ ನಿದ್ರಿಸುವಂತೆ ನಾನು ಮಾಡುತ್ತೇನೆ. ಹದಿನೆಂಟು ತೆರನ ಆಯುಧ ಸಾಮಾಗ್ರಿಗಳಲ್ಲಿ ಕೋವಿ ಮತ್ತು ಗುಂಡುಗಳನ್ನು ಇಟ್ಟಲ್ಲಿಗೆ ಹೋಗಿ ಕೋವಿ ಮದ್ದನ್ನು ನಾನು ಕೆಳಗೆ ಸುರಿದು ಕೋವಿಗಳಲ್ಲಿ ನೀರು ತುಂಬಿಸಿಡುತ್ತೇನೆ. ಹದಿನೆಂಟು ಸಾಲು ಬಾಗಿಲುಗಳನ್ನು ನಾನು ಹೋಗಿ ತೆರೆದಿಡುತ್ತೇನೆ. ಚಿನ್ನದ ಕೋಣೆಗೆ ನಾನು ತಲಪಿದಾಗ ಅಲ್ಲಿರುವ ಬೀಗ ಮುದ್ರೆಗಳನ್ನು ಒಡೆದು ನಾನು ಹೊನ್ನ ಕೋಣೆಯನ್ನು ತೆರೆದಿಡುತ್ತೇನೆ. ಅದನ್ನು ನೀನು ದಾಟಿ ಒಳಹೋದಾಗ ಈ ಭಗವತಿ ಕೋಣೆಯಿಂದ ಹೊರಟುಹೋದಳೆಂದು ಮನದಲ್ಲಿ ಭಾವಿಸು. ಇಷ್ಟು ಹೇಳಿ ದೈವಾವೇಶವು ನಿಂತು ಹೋಯಿತು. ಒದೇನ ಇನ್ನೊಮ್ಮೆ ದೇವರಿಗೆ ನಮಸ್ಕಾರ ಮಾಡಿ ಅಲ್ಲಿಂದ ಹೊರಟು ಬಿಟ್ಟ. ಕಂಡಾಚ್ಚೇರಿ ಚಾಪ್ಪನಿಗೆಂದ – ಕಾವಿಲ್ ಚಾತ್ತೋತ್ತ್‌ನ ಕುಂಞಿಚೀರು ಳಲ್ಲಿ ನಿನ್ನ ಚಾಲಾಕುವಿದ್ಯೆ ಮತ್ತು ಚಾಕಚಕ್ಯತೆಯಿಂದ ರಾತ್ರಿಯ ಊಟ ನಮಗೆ ಸಿಗುವಂತೆ ಮಾಡು. ಚಾಪ್ಪ ಮಾಣಿಕೋತ್ತ್‌ಗೆ ಹೋದ. ಅಡುಗೆ ಮನೆಗೆ ಹೋಗಿ ಅವನೆಂದ–

ಕಾವಿಲ್ ಚಾತ್ತೋತ್ತ್ ಕುಂಞಿಚೀರಮ್ಮ! ಯಜಮಾನರು ಹೇಳುವುದನ್ನು ಕೇಳಿರಿ– ಒಂದೂವರೆ ವರ್ಷವಾಯಿತು, ರಾತ್ರೆ ಹಂದಿ ಬೇಟೆಗೆ ಹೋಗದೆ! ಈಗ ಯಜಮಾನರು ಬೇಟೆಗೆ ಹೋಗುತ್ತಾರಂತೆ. ಸಂಜೆಯ ದೀಪ ಹಚ್ಚುವ ಹೊತ್ತಿಗೆ ಊಟ ಸಿದ್ಧವಾಗಿರಲಿ ಎಂದು ಹೇಳಿ ಕಳಿಸಿದ್ದಾರೆ.

ಅಂತೆಯೇ ಒದೇನ ಮತ್ತು ಚಾಪ್ಪ ಊಟವನ್ನು ಸಂಜೆಗೆ ಮೊದಲೇ ಮುಗಿಸಿ ಹೊರಟುಬಿಟ್ಟರು. ಸಂಜೆಯ ದೀಪ ಹಚ್ಚುವ ಹೊತ್ತಿಗೆ ಅರುಣಾದ್ರಿ ಕೋಟೆಗೆ ತಲಪಿದರು. ಕೋಟೆಯ ಆದ್ಯಂತ ನಡೆದು ನೋಡಿದರು. ಒಂದು ನುಸಿಯೂ ಇರಲಿಲ್ಲ. ಮುಕ್ಕಾಲು ಪಾಲು ಕೋಟೆ ಕಬ್ಬಿಣದ ದಸಿಗಳದ್ದು. ಕಾಲು ಭಾಗ ತಾಮ್ರದ ದಸಿಗಳಿಂದ ಕಟ್ಟಿದ್ದು. ಏಳುಸಾಲು ಬಿದಿರ ಮೆಳೆಗಳು ಪರಸ್ಪರ ಹೆಣೆದಿವೆ. ಒದೇನ ಕೋಟೆಯನ್ನೆಲ್ಲ ನಡೆದು ನೋಡಿದ. ಬಡಗು ಭಾಗಕ್ಕೆ ಬಂದು ನಿಂತು ಭಗವತಿಯನ್ನು ನೆನೆದ. ಆಗ ಹಸಿರುಬಣ್ಣದ ಪಕ್ಷಿಬಂತು. ಕೋಟೆಯ ದಸಿಯ ಮೇಲೆ ಬಿತ್ತು. ಇನ್ನೂ ಮೇಲೆ ನೋಡಿದಾಗ ಬಿದಿರ ತುದಿಯೊಂದು ಬಾಗಿ ಬಂತು. ಒದೇನ ಅದನ್ನು ಹಿಡಿದುಕೊಂಡ. ಚಾಪ್ಪನೂ ಒದೇನನ ಜೊತೆಯಲ್ಲಿ ಹಿಡಿದುಕೊಂಡ. ಅವರು ಕೋಟೆಯೇರಿ ನಡೆದರು. ಹದಿನೆಂಟು ಸಾಲು ಬಾಗಿಲುಗಳಿಗೆ ಒಂದೇ ಹಗ್ಗ. ಹದಿನೆಂಟು ಬಾಗಿಲುಗಳೂ ತೆರೆದುವು. ಅವರು ಕೋಟೆಯ ಒಳಗೆ ಹೋದರು. ಹದಿನೆಂಟು ದಿಕ್ಕಲ್ಲೂ ಹದಿನೆಂಟು ಆಯುಧಗಳಿಂದ ಸಜ್ಜಿತರಾದ ಕಾವಲುಗಾರರೂ ಇದ್ದರು. ಮದ್ದು ಗುಂಡು ತುಂಬಿಸಿದ ಕೋವಿಗಳಲ್ಲಿ ಮದ್ದು ಗುಂಡುಗಳನ್ನು ಕೆಳಗೆ ಸುರುವಿ ಕೋವಿಗಳಲ್ಲಿ ನೀರು ತುಂಬಿದೆ. ನಿದ್ರಿಸುತ್ತಿದ್ದ ಹದಿನೆಂಟು ಬಾಗಿಲ ಕಾವಲುಗಾರರ ಕೂದಲ ಮುಂಗಂಟುಗಳನ್ನು ಸೇರಿಸಿ ಒದೇನ ಒಂದಾಗಿ ಕಟ್ಟಿದ. ಹದಿನೆಂಟು ಕೋಟೆಗಳ ಅಡಿಕೋಟೆಯ ಕಲ್ಲಕೋಣೆಗೆ ಹೋದ. ಅದೂ ತೆರೆದಿತ್ತು. ಅಲ್ಲಿಂದ ಚಿನ್ನದ ಕೋಣೆಗೆ ಹೋದ. ಅದೂ ತೆರೆದಿತ್ತು. ಅಲ್ಲಿ ಮನೆದಲ್ಲೇ ನೆನೆದ – ಭಗವತಿ ಕೋಟೆಯಿಂದ ಹೋಗಿಬಿಟ್ಟಳಲ್ಲ? ನನಗೆ ಇನ್ನಾರೂ ಸಹಾಯಕರಿಲ್ಲ! ಹೊನ್ನ ಕೋಣೆಯ ಒಳಗೊಂದು ಹೊನ್ನ ಮಂಚ. ಒದೇನ ಅದರ ಮೇಲೆ ಹೋಗಿ ಕುಳಿತ. ಆಗ ಕುಂಞಿಕನ್ನಿ ಕೇಳಿದಳು – ನನ್ನ ಮಂಚದ ಮೇಲೆ ಕುಳಿತವರು ಯಾರು? ಉತ್ತರವಾಗಿ ಒದೇನನೆಂದ – ಅರುಣಾದ್ರಿ ಕೋಟೆಯ ಕುಂಞಿಕನ್ನಿ! ಇದು ತಚ್ಚೋಳಿಯ ಸಣ್ಣ ಕುರುಪ್ಪ್. ಆಗ ಅವಳೆಂದಳು – ತಚ್ಚೋಳಿಯ ಸಣ್ಣ ಕುರುಪ್ಪ್ ಅವರೇ! ನೀವು ಹೊನ್ನ ಕೋಣೆಯೊಳಗೆ ಬಂದುದೂ ಸರಿ. ಚಿನ್ನದ ಮಂಚದ ಮೇಲೆ ಕುಳಿತದ್ದೂ ಸರಿ. ಆದರೆ ನನ್ನ ಮೈ ಮುಟ್ಟಬೇಡಿ. ನಾನು ಹೇಳುವುದನ್ನು ದಯವಿಟ್ಟು ಕೇಳಿ. ನಾನು ಏಳು ವರ್ಷದವಳಿದ್ದಾಗ ಕೋಟ್ಟದ ಕುಂಞುಣ್ಣಿ ಅರಸರು ಮದುವೆಯ ಸೀರೆ

ಮತ್ತು ಚಿನ್ನದ ಒಡವೆಗಳನ್ನು ಕೂಡಿಸಿದ್ದಾರೆ. ಮದುವೆ ಮಂಟಪದಲ್ಲಿ ನನಗೆ ಪೊಡವ ಗಳನ್ನು ಕೊಟ್ಟರು. ಮಾತ್ರವಲ್ಲ ಕಾರಣಿಕದ ಹೊನ್ನಬಳೆಗಳನ್ನು ಕೊಟ್ಟಿದ್ದಾರೆ. ಕಿವಿಯ ಓಲೆಗಳನ್ನು ಕೊಟ್ಟಿದ್ದಾರೆ. ಆ ಬಳೆಗಳು ಒಡೆದರೆ, ಆ ಓಲೆಗಳು ನಜ್ಜುಗುಜ್ಜಾದರೆ ಸಾಕಿದ ಕೋಳಿಯ ಕತ್ತು ಕೊಯ್ಯುವ ಹಾಗೆ ಅವರು ತಾವೇ ನನ್ನನ್ನೂ ಕಾಲುಗಳಲ್ಲಿ ಹಾಕಿಕೊಂಡು ಕೊಂದಾರು. ಅದಕ್ಕೆ ಒದೇನನೆಂದ – ಉಪಯೋಗವಿಲ್ಲದ ನಿನ್ನ ಜಳ್ಳು ಮಾತುಗಳನ್ನು ಬಿಟ್ಟುಬಿಡು. ನೀನು ಏಳು ಸುರುಳಿ ವೀಳ್ಯ ಸುರುಟಿಕೊಡದಿದ್ದರೆ ನನ್ನ ಉರುಮಿಗೆ ತುತ್ತಾಗುವೆ. ಕನ್ನಿ ಹೆದರಿ ನಡುಗಿ ಹೋದಳು. ಏಳು ಸುರುಳಿ ವೀಳ್ಯದೆಲೆ ಸುತ್ತಿದಳು. ಬಳಿಕ ಮತಿಗೆಟ್ಟು ಮಲಗಿಬಿಟ್ಟಳು.

ಇದೇ ಹೊತ್ತಿಗೆ ಕೋಟ್ಟಯದರಸ ಕುಂಞುಣ್ಣಿ ನಂಬ್ಯಾರ್ ತನ್ನ ಬೆಳ್ಳಿ ಪಲ್ಲಕ್ಕಿಯ ಮೇಲೆ ಕುಳಿತು ಬೋವಿಗಳಿಂದ ಹೊರಿಸಿಕೊಂಡು ಹೆಬ್ಬಾಗಿಲು ದಾಟಿ ಒಳಬಂದಾಗ ಹದಿನೆಂಟು ಬಾಗಿಲುಗಳೂ ತೆರೆದಿವೆ! ಹದಿನೆಂಟು ದಿಕ್ಕಿನ ಕಾವಲವರೂ–ನನ್ನನ್ನು ಇತ್ತಬಿಡು, ನನ್ನನ್ನು ಇತ್ತಬಿಡು ಎಂದು ಪರಸ್ಪರ ಎಳೆದಾಡುತ್ತಿದ್ದಾರೆ. ಅರಸ ಇದನ್ನೆಲ್ಲ ನೋಡಿದ. ಅವರ ಕೂದಲ ಗಂಟುಗಳನ್ನು ಒಂದಾಗಿ ಕಟ್ಟಿದ್ದನ್ನು ಬಿಚ್ಚಿದ. ಆಮೇಲೆ ನೋಡಿದರೆ ಹದಿನೆಂಟು ತೆರನ ಆಯುಧಗಳಲ್ಲಿ ಕೋವಿ ಮದ್ದುಗುಂಡುಗಳು ಕೆಳಗೆ ಸುರಿದಿವೆ, ಕೋವಿಗಳಲ್ಲಿ ನೀರು ತುಂಬಿದೆ. ಅರಸ ಇತ್ತ ಹೊರಳಿ ಕನ್ನಿಯ ಚಿನ್ನದ ಕೋಣೆಯತ್ತ ಹೊರಟ. ಕನ್ನಿ ಎದೆಯೊಡೆಯುವಂತೆ ಅಳುತ್ತ ಒದೇನನಿಗೆಂದಳು – ತಚ್ಚೋಳಿಯ ಸಣ್ಣ ಕುರುಪ್ಪರೇ! ನಾನು ನಿಮಗೆ ಹೇಳಿದ್ದೆನಲ್ಲವೆ? ನಂಬುಗೆಯ ನನ್ನ ಬಳೆಗಳು ಒಡೆದಿವೆ. ಕಿವಿಯ ಓಲೆಗಳು ನಜ್ಜುಗುಜ್ಜಾಗಿವೆ. ನನ್ನ ಗಂಡ ಈ ಕೋಣೆಗೆ ತಲುಪಿಬಿಟ್ಟರು. ನನ್ನನ್ನು ಇನ್ನು ಕಾಲಮೇಲೆ ಹಾಕಿಕೊಂಡು ಕೋಳಿ ಕೊಯ್ಯುವಂತೆ ಕೊಯ್ಯದಿರಲಾರರು. ನಾನೇನು ಮಾಡಲಿ? ಅದಕ್ಕೆ ಒದೇನನೆಂದ – ನಿನ್ನಲ್ಲಿ ಅರಸ ಬಳೆ ಯಾಕೆ ಒಡೆಯಿತು, ಓಲೆ ಯಾಕೆ ನಜ್ಜುಗುಜ್ಜಾಯಿತು ಎಂದು ಕೇಳಿದರೆ ನೀನು ಹೀಗೆನ್ನು : ಕೊಟ್ಟಾಯಂನ ಅರಸರೇ, ನನ್ನ ಗಂಡ! ಕಾಸಿದ ಎಣ್ಣೆ ನನಗೆ ಇಲ್ಲಿಪೂರ್ತಿ ಮುಗಿದಿದೆ. ಹಾಗಾಗಿ ಹಸಿಎಣ್ಣೆ ಹಚ್ಚಿ ಮಿಂದೆ. ಯಾಕೋ ಅತಿಯಾದ ನಿದ್ದೆ ಬಂತು. ಹಾಗೆ ನಿದ್ರಿಸುತ್ತಿದ್ದಾಗ ಅಟ್ಟದಿಂದೊಂದು ಬೆಕ್ಕು ನೆಗೆಯಿತು. ಕಿವಿಯ ಓಲೆ ನಜ್ಜುಗುಜ್ಜಾ ಯಿತು. ನಾನು ಬೆಕ್ಕನ್ನು ಅಟ್ಟುವಾಗ ಬಳೆಸಮೇತ ನನ್ನ ಕಿರುಕೈಗಳು ಮಂಚಕ್ಕೆ ಬಡಿದು ಬಳೆಗಳು ಒಡೆದುವು – ಎನ್ನು. ಒದೇನ ಅಷ್ಟನ್ನು ಹೇಳುತ್ತಿ ದ್ದಂತೆಯೇ ಅರಸ ಅಲ್ಲಿಗೆ ಬಂದೇ ಬಿಟ್ಟ. ಅರಸನ ಕಾಲುಗಳಿಗೆ ಬೆಕ್ಕೊಂದು ಮೈಯೊರಸುತ್ತಿತ್ತು! (ಒದೇನನಿಗೆ ಇಂಥ ವಿದ್ಯೆಗಳು/ಮಂತ್ರವಾದ ತಿಳಿದಿತ್ತು). ಮೈಗೆ ಒರಸುವ ಬೆಕ್ಕನ್ನು ನೋಡಿ ಅರಸನೆಂದ–

ಎಲ್ಲಿಂದ ಬಂತು ಈ ಹೊಲೆಬೆಕ್ಕು? ಬೆಕ್ಕಿಗೆ ಗುಂಡು ಹೊಡೆಯಬೇಕು. ನೀವೇನು ನೋಡುತ್ತಿದ್ದೀರಿ ನಾಯಮ್ಮಾರರೇ? ಅರಸನ ಈ ಮಾತುಗಳನ್ನು ಕೇಳಿದ ಬೆಕ್ಕು ಅಟ್ಟ ಹತ್ತಿ ಹೋಗಿಬಿಟ್ಟಿತು. ಅರಸ ಹೋಗಿ ಮಂಚದ ಮೇಲೆ ಕುಳಿತ. ಕನ್ನಿಯ ಮುಖವನ್ನು ನೋಡಿದ. ಬಳಿಕ ಕೇಳಿದ – ಅರುಣಾದ್ರಿ ಕೋಟೆಯ ಕುಂಞಿಕನ್ನಿ! ಹೊನ್ನಬಳೆ ಒಡೆಯಿತೇಕೆ? ಕಿವಿಯೋಲೆ ನಜ್ಜುಗುಜ್ಜಾದ್ದೇಕೆ? ಅದಕ್ಕೆ ಒದೇನ ಹೇಳಿಕೊಟ್ಟಂತೆಯೇ ಕನ್ನಿ ಎಲ್ಲವನ್ನೂ ಹೇಳಿದಳು. ಆಗ ಅರಸನೆಂದ– ಕನ್ನೀ! ಸುಳ್ಳು ಸುಳ್ಳೇ ಏನಾದರೂ ಹೇಳಬೇಡ. ನಿನ್ನ ಕಪಟ ನನಗೆ ಗೊತ್ತಾಯಿತು. ಕಟ್ಟುಕಥೆಗಳು ನನಗೆ ಬೇಡ. ಮುಂದಿನ ಆದಿತ್ಯವಾರ ಮಾಡಪ್ಪರಂಬ್‌ನ ಕೊಂಡದಲ್ಲಿ ನಾನು ದೊಡ್ಡ ಕಟ್ಟಿಗೆ ರಾಶಿ ಹಾಕಿಸುವೆ. ಅದಕ್ಕೆ ಬೆಂಕಿಕೊಡಿಸಿ ನಿಗಿ ನಿಗಿ ಕೆಂಡದರಾಶಿ ಸಿದ್ಧವಾಗುತ್ತದೆ. ಅದಕ್ಕೆ ಹಾರಿಕೊಳ್ಳುವುದಕ್ಕೆ ನೀನು ಸಿದ್ಧವಾಗಿ ಬಾ. ನೀನು ಕೆಂಡದ ರಾಶಿಯ ಕೊಂಡ ಹಾಯುವಂತೆ ಮಾಡುವೆ. ಹೀಗೆ ಹೇಳಿ ಕೈದಣಿಯುವಷ್ಟು ಅವಳಿಗೆ ಹೊಡೆದು ಅರಸ ಅಲ್ಲಿಂದ ಹೊರಟುಹೋದ. ಅರಸ ಹೋದ ಸ್ವಲ್ಪ ಹೊತ್ತಲ್ಲೇ ಅಟ್ಟದಿಂದ ಬೆಕ್ಕು ಕೆಳನೆಗೆಯಿತು! ಒದೇನ ಪಡುಕೋಣೆ ಯಲ್ಲಿ ಪ್ರತ್ಯಕ್ಷನಾದ. ಕುಂಞಿಕನ್ನಿ ಧೊಪ್ಪನೆ ಬೀಳುತ್ತ ಎದೆಕರಗುವಂತೆ ಗೋಳಿಟ್ಟಳು. ಒದೇನ ಅವಳನ್ನು ಹೇಗೋ ಸಂತೈಸಿದ–ಅರುಣಾದ್ರಿ ಕೋಟೆಯ ಕುಂಞಿಕನ್ನಿ! ಕೊಟ್ಟಯಂ ಅರಸ ನಿನಗೆ ಹೊಡೆದ ಹೊಡೆತವೆಲ್ಲ ತಾಗಿದ್ದು ನನಗೆ. ನನ್ನ ಬಲಭಾಗವನ್ನು ನೀನೇ ನೋಡು. ಹೊಡೆತ ಯಾವುದೂ ನಿನಗೆ ಬಿದ್ದಿಲ್ಲ. ಇರಲಿ. ಇನ್ನು ನೀನು ಅಳಬೇಡ. ಮುಂದಿನ ಭಾನುವಾರಕ್ಕೆ ಮಾಡಪರಂಬದಲ್ಲಿ ಅಗ್ನಿಕುಂಡ ಸಿದ್ಧವಾಗುತ್ತದೆ. ನೀನು ಕೊಂಡದ ಕೆಂಡ ಹಾಯಲು ಹೋಗುವಾಗ ಏಳು ಪಲ್ಲ ವೀಳ್ಯದೆಲೆ ಸಂಗಡ ತೆಗೆಯಿಸಿಕೊ. ಬಲಿತು ಹಣ್ಣಾಗುತ್ತಿರುವ ಸಾವಿರ ಅಡಕೆಯನ್ನೂ ಹೋಳುಮಾಡಿಸಿ ತೆಗೆಸಿಕೊ. ಅಂದು ಮಾಡಪರಂಬ್‌ನಲ್ಲಿ ಸಾಧಾರಣ ಮೂರು ಸಾವಿರ ಮಂದಿ ಜನ ಸೇರಬಹುದು. ಕೆಂಡದ ರಾಶಿಯಲ್ಲಿ ಹಾಗೆ ನೀನು ಬೀಳುವುದನ್ನು ನೋಡಲು ಸೇರುವ ಜನರಾಶಿ ಅದು. ಕೋಟ್ಯದ ಅರಸನೂ ಅವನ ಕಡೆಯವರೂ ಅಲ್ಲಿ ಸೇರಿರುತ್ತಾರೆ. ನೀನು ಜತೆಗೆ ಒಯ್ದ ಏಳು ಪಲ್ಲ ವೀಳ್ಯದೆಲೆಯನ್ನು ಅಲ್ಲಿ ಹಾಗೆ ನೆರೆದ ಜನರಿಗೆಲ್ಲ ಹಂಚು. ಒಂದೇ ಒಂದು ಎಲೆಯನ್ನು ಕೊನೆಗೆ ಕಯ್ಯಲ್ಲಿರಿಸಿಕೊ. ಬಳಿಕ ಆ ಸೇರಿದ ಮೂರು ಸಾವಿರ ಜನರ ಬಳಿಗೆ ನೀನು ಹೋಗಿ ಹೇಳು 'ಇಲ್ಲಿ ಸೇರಿರುವ ಮೂರುಸಾವಿರ ಮಹಾಜನರೆ! ನಾನು ಇನ್ನೊಂದಿಷ್ಟು ಹೊತ್ತಲ್ಲಿ ಕೆಂಡದ ರಾಶಿಗೆ ಬೀಳುವವಳು. ಕೊನೆಗೆ ಒಂದು ಬಾರಿ ತಾಂಬೂಲ ಹಾಕಿಕೊಂಡು ಕೆಂಡದ ರಾಶಿಗೆ ಹಾರಿಕೊಳ್ಳುವೆ, ಒಪ್ಪಿಗೆಯೆ? ಹಾಗಾದರೆ ನನಗೆ ಒಂದಿಷ್ಟು ಸುಣ್ಣ ಕೊಡಿ'. ನಿನಗೆ ಯಾರೂ ಸುಣ್ಣಕೊಡುವುದಿಲ್ಲ. ನಾನು ತೋರುಬೆರಳ ತುದಿಗೆ ಸುಣ್ಣ ಹಚ್ಚಿರುತ್ತೇನೆ. ನಾನು ಅಲ್ಲೇ ದೂರ ಪ್ರತ್ಯೇಕವಾಗಿ

ನಿಂತಿರುತ್ತೇನೆ. ನೀನು ನನ್ನಲ್ಲೂ ಬಂದು ಕೇಳಬೇಕು – ಭಿಕ್ಷಾಟನೆ ಮಾಡುವ ಸಂನ್ಯಾಸಿಯೇ! ಬಾಯಿಗೆ ಹಾಕಿಕೊಂಡ ವೀಳ್ಯದೆಲೆಗೆ ಒಂದಿಷ್ಟು ಸುಣ್ಣ ಕೊಡುವೆಯ? ಹಾಗೆ ನೀನು ಬಂದು ನನ್ನಲ್ಲಿ ಕೇಳುವಾಗ ನಿನ್ನ ಕೈಯನ್ನು ನಾನು ಹಿಡಿಯುವೆ. ವೀಳ್ಯದೆಲೆಯನ್ನು ಮುಟ್ಟಿಯೇ ಸುಣ್ಣ ಕೊಡುವೆ. ಹಾಗೆ ಕೊಟ್ಟಾಗ ಕವುಳೇ ಉಬ್ಬುವ ಹಾಗೆ ವೀಳ್ಯವನ್ನು ಹಾಕಿಕೊ. ಹಾಗೆ ವೀಳ್ಯಹಾಕಿಕೊಂಡು ಕೆಂಡದರಾಶಿಯ ಬಳಿಹೋಗಿ ಕೆಂಡದ ರಾಶಿಯನ್ನು ಮೂರು ಬಾರಿ ವಂದಿಸು. ಆ ಬಳಿಕ ಎಲ್ಲರಿಗೂ ಕೇಳುವಂತೆ ಕೋಟ್ಯಂ ಅರಸನ ಸಮೀಪ ಹೋಗಿ ಹೀಗೆನ್ನು– ಸುಣ್ಣ ಕೊಟ್ಟ ಸನ್ಯಾಸಿ ಮುಟ್ಟಿದ್ದು ನಿಜ. ಉಳಿದವರು ಯಾರಾದರೂ ನನ್ನನ್ನು ಮುಟ್ಟಿದ್ದರೆ ನಾನು ಈ ಬೆಂಕಿಯ ರಾಶಿಯಲ್ಲಿ ಕರುಕಲಾಗಿ ಹೋಗುವಂತಾಗಲಿ. ಹಾಗೆ ಕೇಳಿ ಕೆಂಡದ ರಾಶಿಯ ಮೇಲೆ ನೆಗೆದು ಬಿಡು. ಈಗ ನಾನು ಹೋಗುತ್ತೇನೆ ಕುಂಞಿಕನ್ನಿ. ಮೂಡಪರಂಬ್‌ನ ಕೆಂಡದ ರಾಶಿ ಸಿದ್ಧವಾದಾಗ ಮತ್ತೆ ಪರಸ್ಪರ ಕಾಣೋಣ.

ಆ ಭಾನುವಾರ ಬಂದೇಬಂತು. ಮುಂಜಾನೆಯ ಬೆಳಕು ಹರಿಯಿತು. ಕೋಟ್ಯದ ಕುಂಞುಣ್ಣಿ ಅರಸು ಚೆನ್ನಾಗಿ ಬಲಿತ ಏಳು ಹಲಸಿನ ಮರಗಳನ್ನು ಕಡಿಸಿದ್ದ. ಮಾಡ ಪರಂಬ್‌ನ ಬೆಂಕಿಕೊಂಡಕ್ಕೆ ದೊಡ್ಡ ಕಟ್ಟಿಗೆ ರಾಶಿ ಸೇರಿಸಿದ್ದ. ಅರುಣಾದ್ರಿ ಕೋಟೆಯ ಕುಂಞಿಕನ್ನಿ ಏಳು ಪಲ್ಲ ವೀಳ್ಯದೆಲೆ ತೆಗೆಯಿಸಿಕೊಂಡಳು. ಹಣ್ಣಾಗ ಹೊರಟಿರುವ ಸಾವಿರ ಅಡಕೆಗಳನ್ನೂ ಹೋಳುಮಾಡಿಸಿ ತೆಗೆಸಿಕೊಂಡಳು. ಎಲ್ಲವನ್ನೂ ತೆಗೆಸಿಕೊಂಡು ಅವಳು ಮಾಡಪರಂಬ್ ತಲಪಿದಾಗ ಸಾವಿರಾರು ಜನ ಸೇರಿದ್ದರು! ಕೋಟ್ಯಂ ಅರಸು ಮತ್ತು ಅವನ ಪರಿವಾರವೂ ಅಲ್ಲಿ ಸೇರಿದ್ದಾರೆ. ಎಲ್ಲರಿಗೂ ಅವಳು ವೀಳ್ಯದೆಲೆ ಅಡಕೆ ಗಳನ್ನು ಕೊಟ್ಟಳು. ಒಂದು ಎಲೆಯನ್ನು ಉಳಿಸಿಕೊಂಡಳು. ಬಳಿಕ ಕೇಳಿದಳು– ಮಹಾಜನರೆ! ಹೇಗಿದ್ದರೂ ಬೆಂಕಿಗೆ ಬೀಳುವವಳು ನಾನು. ಒಂದು ಬಾರಿ ತಾಂಬೂಲ ಹಾಕಿಕೊಂಡು ಈ ಕೆಂಡದ ರಾಶಿಗೆ ಬೀಳುತ್ತೇನೆ, ಒಪ್ಪಿಗೆಯೆ? ನನಗೆ ಒಂದಿಷ್ಟು ಸುಣ್ಣಕೊಡಿ. ಯಾರೊಬ್ಬರೂ ಅವಳಿಗೆ ಸುಣ್ಣ ಕೊಡಲಿಲ್ಲ.ಅವಳ ಕುರಿತು ಯಾರಿಗೂ ಅನುಕಂಪವಿರಲಿಲ್ಲ. ಸಂನ್ಯಾಸಿ ದೀಕ್ಷೆಯಲ್ಲಿದ್ದ ಒಬ್ಬಾತ ಮಾತ್ರ ತೋರು ಬೆರಳಿಗೆ ಸುಣ್ಣ ಹಾಕಿಕೊಂಡಿದ್ದ. ಅವಳು ಸನ್ಯಾಸಿಯ ಬಳಿಗೆ ಹೋದಳು–ದೀಕ್ಷೆಯಲ್ಲಿರುವ ಸನ್ಯಾಸಿಗಳೇ! ನೀವು ನನಗೆ ಒಂದಿಷ್ಟು ಸುಣ್ಣ ಕೊಡುವಿರಾ? ಎಂದಳು. ಆ ಮಾತುಗಳನ್ನು ಕೇಳಿದ ಸನ್ಯಾಸಿ ವೀಳ್ಯದೆಲೆ ಹಿಡಿದಿದ್ದ ಅವಳ ಕೈ ಹಿಡಿದು ಸುಣ್ಣವನ್ನು ಕೊಟ್ಟುಬಿಟ್ಟ. ಕನ್ನಿ ಕೆನ್ನೆ ಉಬ್ಬುವಂತೆ ತಾಂಬೂಲ ಹಾಕಿಕೊಂಡಳು. ಕೆಂಡದ ರಾಶಿಗೆ ಮೂರು ಬಾರಿ ಸುತ್ತು ಬಂದು ವಂದಿಸಿದಳು. ಬಳಿಕ ಹೀಗೆ ಕೂಗಿ ಹೇಳಿದಳು – ಕೋಟ್ಯಂನ ಕುಂಞುಣ್ಣಿ

ಅರಸರೇ! ನೀವು ನನ್ನನ್ನು ಮುಟ್ಟಿದ ಬಳಿಕ ನನ್ನನ್ನು ಯಾರೂ ಮುಟ್ಟಿದವರಿಲ್ಲ. ಸುಣ್ಣಕೊಟ್ಟ ಸನ್ಯಾಸಿ ಮುಟ್ಟಿರುವುದು ಸತ್ಯ. ಬೇರೆ ಯಾರಾದರೂ ನನ್ನನ್ನು ಮುಟ್ಟಿರುವುದಾದರೆ ಈ ಬೆಂಕಿಗೆ ನಾನು ಹಾರಿದಾಗ ಅದರಲ್ಲಿ ಸುಟ್ಟು ಕರಕಲಾಗಿ ಹೋಗಲಿ – ಎನ್ನುತ್ತ ಅವಳು ಬೆಂಕಿಗೆ ಬಿದ್ದಳು. ಹಾಗೆ ಏಳು ಬಾರಿ ಹಾರಿಕೊಂಡು ಎಂಟನೇ ಬಾರಿ ಹಾರಿ ಕೆಂಡದ ರಾಶಿಯ ತುದಿಯಲ್ಲಿ ಕುಳಿತಳು. ಕೋಟ್ಯಂನ ಕುಂಞುಣ್ಣಿ ಅರಸ ಬೆಂಕಿಯ ರಾಶಿಯ ಮೇಲಿಂದ ಕನ್ನಿಯನ್ನು ಮೆಲ್ಲಗೆ ಕೈನೀಡಿ ಕರೆಸಿಕೊಂಡ. ಹಾಗೆ ಕೈನೀಡಿ ಇಳಿಸಿಕೊಂಡು ಆನೆಯ ಮೇಲೆ ಏರಿಸಿಕೊಂಡು ಅರಮನೆಗೆ ಕರೆದುಕೊಂಡು ಹೋದ.

ಐನೂರು ಹೊನ್ನು ತಂದಿದ್ದೇನೆ, ಬೇಗ ಬಾಗಿಲು ತೆರೆ

ಚಂದ್ರೋತ್ತ್ ಮನೆಯ ಕುಂಕನ್ ನಂಬಿಯಾರ್ ಹೇಳಿದ– ಒಲವಿಲ್ ಒದಯೊತ್ತ ಚೀರು! ನಾನು ನನ್ನ ಮನೆಗೆ ಹೋಗುತ್ತಿದ್ದೇನೆ (ಇಷ್ಟುದಿನ ಹೆಂಡತಿಯ ಮನೆಯಲ್ಲಿದ್ದ). ಮೂರು ನಾಲ್ಕು ದಿನ ಕಳೆದೀತು, ಮರಳಿ ಬರುವಾಗ. ಅಲ್ಲಿ ಆಸ್ತಿಯ ಪಾಲುಪಟ್ಟಿ ಆಗುತ್ತದೆ. ಒಂದಿಷ್ಟು ಗೇಣಿ ವಸೂಲಿ ಇದೆ. ನಾನು ಇಲ್ಲದಾಗ ಯಾರಾದರೂ ಬಂದರೆ ಅವರನ್ನು ಇಲ್ಲಿ ನಿಲ್ಲಿಸಿಕೊಳ್ಳಬೇಡ. ಸಂಜೆಯಾದ ಮೇಲೆ ಮನೆಯ ಬಾಗಿಲು ತೆರೆಯಬೇಡ. ಯಾರಾದರೂ ಬಾಗಿಲ ಬಳಿ ಬಂದು ಕರೆದರೆ 'ಗಂಡ ಮನೆಯಲ್ಲಿಲ್ಲ. ಬಾಗಿಲು ತೆರೆಯುವುದಿಲ್ಲ' ಎನ್ನು. ಚೀರು ಆದೀತೆಂದು ಒಪ್ಪಿದಳು. ಬಳಿಕ ಎಂದಳು– ಚಂದ್ರೋತ್ತ್ ಮನೆಯ ನನ್ನ ಗಂಡ! ನೀವು ಹೇಳದಿದ್ದರೂ ನನಗೆ ಇದೆಲ್ಲ ಗೊತ್ತು. ನೀವು ಆದಷ್ಟು ಬೇಗ ಹೊರಡಿ. ನೀವು ನಿಮ್ಮ ಮನೆ ತಲಪುವಾಗ ಕತ್ತಲಾದೀತಲ್ಲವೆ? ನಂಬಿಯಾರ್ ಹೇಳಿದ – ನಿನ್ನನ್ನು ಒಬ್ಬಂಟಿಯಾಗಿ ಬಿಟ್ಟು ನಾನು ಹೇಗೆ ಹೋಗಲಿ ಚೀರು! ಹದಿನೈದು ವರ್ಷ ಪ್ರಾಯದ ಹುಡುಗಿ ನೀನು! ನಿನ್ನನ್ನು ಒಂಟಿಯಾಗಿ ಹೇಗೆ ಬಿಡಲಿ? ಅದಕ್ಕೆ ಚೀರು ಎಂದಳು – ಚಂದ್ರೋತ್ತ್ ಮನೆಯ ನನ್ನ ಗಂಡ! ನೀವು ಬೇಗ ಹೋಗಿ ಬನ್ನಿ. ನನಗೆ ಏನೂ ಹೆದರಿಕೆಯಿಲ್ಲ. ನಾಲ್ಕುದಿನ ಕಳೆದಾಗ ಬೇಗನೆ ಬಂದುಬಿಡಿ.

ನಂಬಿಯಾರ್ ಹಾಗೆ ಬೀಳ್ಕೊಂಡು ಹೋದ ಬಳಿಕ ಚೀರು ಬಾಗಿಲು ಹಾಕಿ ಚಿಲಕ ಹಾಕಿಕೊಂಡಳು. ಸ್ವಲ್ಪ ಹೊತ್ತಿನ ಬಳಿಕ ಕೆರೆಗೆ ಸ್ನಾನಕ್ಕೆ ಹೋದಳು. ಆಗ ಕೆರೆ ಬದಿಯ ಹೊಲೆಯರ ಒಣಕ್ಕನ್ ಅವಳು ಸ್ನಾನಮಾಡುವುದನ್ನು ಕಂಡ. ಅವಳನ್ನು ಕಣ್ಣಾರೆ ಕಂಡ ಅವನು ಕೇಳಿದ – ಒಲವಿಲ್ ಒದಯೊತ್ತ ಚೀರು! ನೀನು ಸ್ನಾನಕ್ಕೆ

ಹೋಗುವುದನ್ನು ನಾನು ಯಾವಾಗಲೂ ಕಾಣುತ್ತೇನೆ. ನಿನ್ನಲ್ಲಿ ನನಗೆ ಮನಸ್ಸಾಗಿದೆ. ನಿನ್ನ ಸಂಗ ಮಾಡುವುದಕ್ಕಾಗಿ ನಾನು ಬರಲೆ, ಕುಂಞಿಚ್ಚೀರು? ಐನೂರು ಹೊನ್ನು ನನ್ನಲ್ಲಿದೆ. ಕುಂಞಿಚ್ಚೀರು ಕೂಡಲೇ ಎಂದಳು – ಕೆರೆಬದಿಯ ಹೊಲೆಯರ ಒಣಕ್ಕ! ಐನೂರು ಹೊನ್ನು ನಿನಗೆ ಹೇಗೆ ಸಿಕ್ಕಿತು? ಅದಕ್ಕೆ ಅವನೆಂದ – ಒಲವಿಲ್ ಒದಯೊತ್ತ ಕುಂಞಿಚ್ಚೀರು! ಐನೂರು ಹೊನ್ನಲ್ಲ, ನನಗೆ ಸಾವಿರ ಹೊನ್ನು ಸಿಕ್ಕಿಬಿಟ್ಟಿದೆ. ನಾನು ಕುಮರಿ ಕಡಿಯಲು ಹೋಗಿದ್ದಾಗ ಅಲ್ಲಿ ಅದು ಸಿಕ್ಕಿತು. ಅದರಲ್ಲಿ ಐನೂರು ಹೊನ್ನನ್ನು ಎರಿಮನೆ ಕುಂಞಿಮಾತುವಿಗೆ ಕೊಟ್ಟು ಒಂದು ರಾತ್ರೆ ಅವಳ ಸಂಗ ಮಾಡಿದೆ. ಐನೂರು ಹೊನ್ನನ್ನು ನಿನಗೂ ಕೊಡುವೆ. ಆಗ ಚೀರು ಕೇಳಿದಳು – ಎರಿಮನೆಯ ಮಾತುವಿಗೆ ಗಂಡನಿಲ್ಲವೆ ಒಣಕ್ಕಾ? ಅದಕ್ಕೆ ಒಣಕ್ಕನೆಂದ – ಒಲವಿಲೊದಯೊತ್ತ ಕುಂಞಿಚ್ಚೀರು! ಅವಳನ್ನು ಮದುವೆ ಮಾಡಿಕೊಳ್ಳಲು ಒಬ್ಬಾತ ಬಂದಿದ್ದಾನೆ. ಅವನ ಜತೆ ಮಾತುಕತೆಯೂ ಆಗಿದೆ. ಮಾತುವಿಗೆ ಹದಿಮೂರು ವರ್ಷ. ನಾನು ಅವಳ ಸಂಗ ಮಾಡಿದ ಮೇಲೆ ಅವಳು ದೊಡ್ಡವಳೂ ಆದಳು. ನಾನು ಹೋದುದು ಬಂದುದು ಯಾವುದೂ ಅವಳ ಮನೆಯವರಿಗೆ ತಿಳಿಯದು. ಅವಳೂ ಸ್ನಾನಕ್ಕೆಂದು ಹೋದಾಗಲೇ ನಾನು ಅವಳನ್ನು ಕಂಡು ಮಾತನಾಡಿಸಿದ್ದು. ಈಗ ನಿನ್ನ ಗಂಡ ಇದ್ದಾರೋ ಚೀರು? ನಾನು ಇಂದು ನಿನ್ನಲ್ಲಿಗೆ ಬರುವಾಗ ನಿನ್ನ ಗಂಡನೇನಾದರೂ ಕಂಡುಬಿಡಬಹುದೆ? ಕೂಡಲೇ ಚೀರು ವೆಂದಳು – ಕೆರೆಬದಿಯ ಹೊಲೆಯರ ಒಣಕ್ಕಾ, ಕೇಳು! ನನ್ನ ಗಂಡ ಈಗ ಮನೆಯಲ್ಲಿಲ್ಲ. ಅವರು ಅವರ ಮನೆಗೆ ಹೋಗಿದ್ದಾರೆ. ಅವರು ಹಿಂದಿರುಗಬೇಕಾದರೆ ಮೂರು ನಾಲ್ಕು ದಿನ ಕಳೆಯಬೇಕು. ನೀನು ಇವತ್ತೇ ಬರುವುದಾದರೆ ಮುಸ್ಸಂಜೆಯಾಗುತ್ತಿದ್ದಂತೆ ಬೇಗ ಬಂದುಬಿಡು. ನೀನು ಬರುವುದನ್ನು ಯಾರೂ ಕಾಣುವುದು ಬೇಡ. ಐನೂರು ಹೊನ್ನು ತಂದು ಬಿಡು. ನಾನು ಈಗ ಸ್ನಾನಕ್ಕೆ ಹೋಗಲೆ ಒಣಕ್ಕಾ? ಅದನ್ನು ಕೇಳಿದ ಒಣಕ್ಕ ಹಾಂ ಎಂದು ಒಪ್ಪಿದ. ಇಬ್ಬರೂ ಪರಸ್ಪರ ನಕ್ಕು ಹೊರಟು ಹೋದರು.

ಸಂಜೆಯಾಯಿತು. ಒಣಕ್ಕ ಐನೂರು ಹೊನ್ನನ್ನು ತೆಗೆದು ಒಂದು ಬಟ್ಟೆಯ ತುಂಡಿನಲ್ಲಿ ಕಟ್ಟಿಕೊಂಡ. ಬೇಗ ಬೇಗ ಹೊರಟ. ಅವನು ಹಾಗೆ ಹೋಗುತ್ತಿದ್ದಾಗ ಅವನ ಧನಿ ಕಾರಪರಂಬ್‌ನ ಕುಂಞಾಮ್ಮದ್ ಕಂಡ. ಕಂಡವನೇ ಒಣಕ್ಕನಲ್ಲಿ ಕೇಳಿದ – ಒಣಕ್ಕಾ! ಎಲ್ಲಿಗೆ ಹೊರಟೆ ಸಂಜೆಯಾಗುವಾಗ? ಏನು ತೆಂಗಿನ ಕಾಯಿ ಕೊಯ್ಯಲು ಹೊರಟೆಯಾ, ಅಲ್ಲ ಹಲಸಿನ ಕಾಯಿ ಕೊಯ್ಯಲು ಹೊರಟೆಯಾ? ಎಲ್ಲಿಗೆ ಹೋಗುತ್ತಿದ್ದಿ ಎಂದು ನನ್ನಲ್ಲಿ ಹೇಳು. ಹೇಳದಿದ್ದರೆ ನಿನ್ನನ್ನು ಬಿಡಲಾರೆ. ಹಾಗೆನ್ನುತ್ತ, ಒಣಕ್ಕನ ಕೈಗಳನ್ನು ಹಿಡಿದ. ಹಾಗೆ ಹಿಡಿದಾಗ ಹೊನ್ನಿನ ಗಂಟು ಕೆಳಗೆ ಬಿತ್ತು. ಕುಂಞಾಮ್ಮದ್ ಕೇಳಿದ – ಆ ಕಟ್ಟು ಎಂಥದ್ದು, ಒಣಕ್ಕಾ? ಎಲ್ಲವನ್ನೂ ನೀನು ನನಗೆ ಹೇಳದಿದ್ದರೆ

ನಿನ್ನನ್ನು ಸುಮ್ಮನೆ ಬಿಡುವುದಿಲ್ಲ. ಆಗ ಒಣಕ್ಕ ಎಲ್ಲವನ್ನೂ ಹೇಳಿದ. ಎಲ್ಲವನ್ನೂ ಕೇಳಿ ಕುಂಞಾಮ್ಮದ್ ಎಂದ – ಕೆರೆಬದಿ ಒಣಕ್ಕಾ! ನೀನು ಒಲವಿಲ್ ಒದೆಯೋತ್ತ್‌ಗೆ ಹೋಗು ವುದು ಬೇಡ. ನಾನು ಹೋಗಿ ಬರುತ್ತೇನೆ. ಕೂಡಲೆ ಒಣಕ್ಕನೆಂದ – ಕಾರಾಪರಂಬ್‌ನ ಮದುಮಗ! ನೀವು ಹಾಗೆ ಹೇಳಬಾರದು. ನೀವು ಆ ಹೊನ್ನನ್ನೂ ತೆಗೆದುಕೊಳ್ಳಬಾರದು. ನೀವು ಹೊನ್ನನ್ನು ತೆಗೆದುಕೊಂಡರೆ ನನಗೆ ಚೀರು ಸಿಗುವವಳಲ್ಲ. ಅದಕ್ಕೆ ಕುಂಞಾಮ್ಮದೆ ಯೆಂದ – ಹೊನ್ನನ್ನು ನಿನಗೆ ಕೊಡುವುದಿಲ್ಲ. ನಾನು ಬೇಗ ಅಲ್ಲಿಗೆ ಹೋಗಿ ಬರುತ್ತೇನೆ. ಒಂದು ರಾತ್ರೆ ಹೆಣ್ಣಸಂಗದಲ್ಲಿ ಇದ್ದು ಬಿಡುತ್ತೇನೆ. ನಾಳೆ ಬೇಗ ಬಂದು ಬಿಡುವೆ. ನೀನು ಹೊನ್ನು ನನಗೆ ಕೊಡದೆ ಹೋದರೆ ಗುಡಿಸಲಲ್ಲಿ ನಿನ್ನನ್ನು ಇರಗೊಡೆನು. ಗುಡಿಸಲಿಗೆ ಬೆಂಕಿ ಕೊಟ್ಟು ಬಿಡುತ್ತೇನೆ. ಇದನ್ನೆಲ್ಲ ಕೇಳಿ ಒಣಕ್ಕ ತುಂಬ ಅತ್ತುಬಿಟ್ಟ. ಆಗ ಕುಂಞಾಮ್ಮದ್ ಆ ಹೊನ್ನನ್ನು ಕಸಿದುಕೊಂಡು ಹೊರಟುಹೋದ.

ಕುಂಞಾಮ್ಮದ್ ಹಾಗೆ ಹೋಗುತ್ತಿರಲು ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ತಿರುಗಾಟಕ್ಕೆ ಹೋದವರು ಆ ದಾರಿಯಾಗಿ ಮರಳುತ್ತ ಒಣಕ್ಕ ಮತ್ತು ಕುಂಞಾಮ್ಮದರ ಮಾತುಕತೆಗಳನ್ನು ಕಿವಿಯಾರೆ ಕೇಳಿಸಿಕೊಂಡರು. ಒದೇನ ಕುಂಞಾಮ್ಮದ್ ನನ್ನು ತಡೆದ. ತಡೆದು ಕೇಳಿದ – ಕಾರಪರಂಬ್‌ನ ಕುಂಞಾಮ್ಮದೆ! ಹೊತ್ತು ಮುಸ್ಸಂಜೆ ಯಾಯಿತು. ನೀನು ಕೆರೆಬದಿಯ ಒಣಕ್ಕನಲ್ಲಿ ಏನು ಹೇಳುತ್ತಿದ್ದೆ? ಎಲ್ಲವನ್ನೂ ನಾವು ಕೇಳಿಸಿಕೊಂಡಿದ್ದೇವೆ. ಅವನು ಯಾಕೆ ಅಳುತ್ತಿದ್ದಾನೆ? ಅಳುತ್ತ ಅವನು ಯಾಕೆ ಹೊರಟು ಹೋದ? ನೀನು ಎಲ್ಲವನ್ನೂ ನಮ್ಮ ಮುಂದೆ ಹೇಳದೆಹೋದರೆ ನಿನ್ನನ್ನು ನನ್ನ ಉರುಮಿಗೆ ಬಲಿಕೊಟ್ಟೇನು! ಅದನ್ನು ಕೇಳಿದ ಕುಂಞಾಮ್ಮದ್ ಹೆದರಿ ನಡುಗುತ್ತ ಹೀಗೆಂದ – ತಚ್ಚೋಳಿ ಕಣ್ಮಣಿ ಬಾಲಒದೇನ! ಎಲ್ಲವನ್ನೂ ಇದ್ದಂತೆ ಹೇಳಿಬಿಡುತ್ತೇನೆ ಎಂದು ಎಲ್ಲ ಸಂಗತಿಗಳನ್ನೂ ಒದೇನನಿಗೆ ಹೇಳಿದ. ಎಲ್ಲವನ್ನೂ ಕೇಳಿದ ಒದೇನನೆಂದ – ಆ ಹೊನ್ನನ್ನು ಇತ್ತ ಕೊಟ್ಟುಬಿಡು! ನಾನೊಮ್ಮೆ ಅಲ್ಲಿಗೆ ಹೋಗಿ ಬರುವೆ. ಕುಂಞಾಮ್ಮದ್ ಹೊನ್ನಿನ ಗಂಟನ್ನು ಕೊಟ್ಟುಬಿಟ್ಟ. ಬೇಗ ಅಲ್ಲಿಂದ ಜಾಗ ಖಾಲಿ ಮಾಡಿದ. ಅವನು ಹೋದ ಮೇಲೆ ಕಂಡಾಚೇರಿ ಚಾಪ್ಪನೆಂದ – ಒದೇನ! ನೀನು ಹೋಗಿ ಚೀರುವಿನ ಸಂಗ ಮಾಡು. ಎಡೆಬಿಡದೆ ಮೂರು ರಾತ್ರಿ ಅವಳ ಜತೆ ಇರು. ಆಮೇಲೆ ಐದು ಹೊನ್ನನ್ನಷ್ಟೆ ಅವಳಿಗೆ ಕೊಡು. ಎಲ್ಲ ಹೊನ್ನನ್ನೂ ಅವಳಿಗೆ ಕೊಟ್ಟು ಬಿಡಬೇಡ. ಮೂರು ರಾತ್ರೆ ಅವಳ ಸಂಗ ನೀನು ಮಾಡಿ ಚಂದ್ರೋತ್ ಮನೆಯ ನಂಬಿಯಾರ್ ಮರಳಿ ಬಂದಾಗ ಅವನಲ್ಲಿ ಎಲ್ಲವನ್ನೂ ತಿಳಿಸು. ಅದನ್ನು ಕೇಳಿದ ಒದೇನ ಚಾಪನಲ್ಲಿ ತನ್ನ ಆತಂಕವನ್ನು ಹೇಳಿದ – ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ಹಾಗೆ ಎಲ್ಲವನ್ನೂ ನಂಬಿಯಾರನಿಗೆ ತಿಳಿಸಿದರೆ ಅವಳನ್ನು ಜೀವಸಹಿತ ಬಿಟ್ಟಾನೆಯೆ? ಆಗ ಚಾಪ್ಪನೆಂದ–

ತಚ್ಚೋಳಿಯ ಒದೇನ! ಅವರು ಏನಾದರೂ ಮಾಡಿಕೊಳ್ಳಲಿ. ನಾವು ಈ ಸಂಗತಿ ಹೇಳಿದರೆ ಸಾಕಲ್ಲವೆ? ಅವರು ಹಾಗೆ ಮಾತನಾಡಿಕೊಂಡರು. ಒದೇನ ಒಲವಿಲ್ ಒದಯೋತ್ತ ಕುಂಞಿಚೀರುವಿನ ಬಳಿಗೆ ಹೋಗಿ ಬಾಗಿಲಲ್ಲಿ ನಿಂತು ಕರೆದ – ಒಲವಿಲ್ ಒದಯೊತ್ತ್‌ನ ಕುಂಞಿಚ್ಚೀರು! ಐನೂರು ಹೊನ್ನು ತಂದಿದ್ದೇನೆ ಬೇಗ ಬಾಗಿಲು ತೆರೆ! ಅದನ್ನು ಕೇಳಿದ ಚೀರು ಕೆರೆಬದಿ ಒಣಕ್ಕನೇ ಬಂದನೆಂದು ತಿಳಿದು ಬಾಗಿಲು ತೆರೆದಳು. ಒದೇನ ಕೂಡಲೆ ಒಳಗೆ ಸೇರಿಕೊಂಡ. ಒದೇನ ಪಡುಕೋಣೆಯಲ್ಲಿ ಸೇರಿಕೊಂಡಾಗ ಚೀರು ಮನದಲ್ಲೆ ನೆನೆದಳು – ಒಣಕ್ಕನಾದರೆ ಇಷ್ಟು ದಪ್ಪ ಇಲ್ಲವಲ್ಲ! ಯಾರೋ ನನ್ನನ್ನು ವಂಚಿಸಿದರೆ? ಹಾಗೆ ಮನದಲ್ಲೇ ನೆನೆದರೂ ಸೇರಿಕೆಯಲ್ಲಿ ಅವಳು ಸಂತಸ ದಿಂದಲೆ ಪಾಲ್ಗೊಂಡಳು. ರಾತ್ರೆ ಕಳೆದು ಬೆಳ್ಳಂಬೆಳಗಾದಾಗ ಕುಂಞಿಚ್ಚೀರು ಒದೇನನನ್ನು ಕಣ್ಣಾರೆ ಕಂಡಳು. ಚೀರುವಿಗೆ ತುಂಬ ನಗುಬಂತು. ಒದೇನ ಅದನ್ನು ಗಮನಿಸಿ ಹೇಳಿದ– ಒಲಿವಿಲೊದಯೊತ್ತ್ ಕುಂಞಿಚ್ಚೀರು! ನಾನು ಮೂರು ರಾತ್ರೆ ನಿನ್ನ ಸಂಗ ಮಾಡುವೆ. ಆಮೇಲೆ ಇಲ್ಲಿಂದ ಹೋಗುತ್ತೇನೆ. ಆಗ ಚೀರು ಹೇಳಿದಳು – ತಚ್ಚೋಳಿ ಒದೇನ! ನೀವು ಒಂದು ರಾತ್ರೆ ನನ್ನ ಸಂಗ ಮಾಡಿದಿರಿ. ಇನ್ನೆರಡು ರಾತ್ರೆ ಮಾತ್ರ ಸಾಕು. ಇನ್ನೂ ಮೂರು ರಾತ್ರೆ ಸಂಗ ಮಾಡಿದಿರಾದರೆ ಚಂದ್ರೋತ್ತ್ ಮನೆಯ ನನ್ನ ಗಂಡ ಎಲ್ಲಿಯಾದರೂ ಬಂದು ಬಿಟ್ಟರೆ ನನ್ನನ್ನು ಜೀವಸಹಿತ ಬಿಡಲಿಕ್ಕಿಲ್ಲ. ಆಗ ಒದೇನನೆಂದ– ಒಲಿವಿಲೊದಯೋತ್ತ್ ಕುಂಞಿಚ್ಚೀರು! ಹೊಲೆಯ ಒಣಕ್ಕನನ್ನು ಹತ್ತಿಸಿಕೊಳ್ಳುವ ನಿನಗೆ ತಚ್ಚೋಳಿ ಮನೆಯ ಒದೇನನ ಸಂಗ ಆಗದೆ? ನಾನು ಇನ್ನೂ ಮೂರು ರಾತ್ರೆ ನಿನ್ನೊಂದಿಗೆ ಇರುತ್ತೇನೆ. ಹಾಗೆ ಹೇಳಿದ ಒದೇನ ಆಮೇಲೂ ಮೂರು ರಾತ್ರೆ ಅವಳ ಸಂಗಮಾಡಿದ. ಆ ಬಳಿಕ ಅವಳಿಗೆಂದ – ಒಲವಿಲೊದಯೋತ್ತ್ ಕುಂಞಿಚೀರು! ನಾನು ನಾಲ್ಕು ರಾತ್ರೆ ಇಲ್ಲಿ ಸೇರಿಕೊಂಡೆ. ನಿನಗೆ ಐದು ಹೊನ್ನು ಹಣ ಕೊಡುತ್ತೇನೆ. ಒದೇನ ಅವಳಿಗೆ ಐದು ಹೊನ್ನು ಕೊಟ್ಟ. ಕುಂಞಿಚೀರು ತುಂಬ ಅತ್ತುಬಿಟ್ಟಳು. ಅದನ್ನು ಕಂಡ ಒದೇನ ಹೇಳಿದ – ಒಲವಿಲ್‌ಒದಯೋತ್ತ್ ಕುಂಞಿಚೀರು! ಯಾಕೆ ಅಳುತ್ತ ಇದ್ದಿ? ಚಂದ್ರೋತ್ತ್ ಮನೆಯ ನಂಬಿಯಾರರಲ್ಲಿ ನಾನು ಏನನ್ನೂ ಹೇಳುವುದಿಲ್ಲ. ಕಂಡಾಚ್ಚೇರಿ ಚಾಪ್ಪ ಎಲ್ಲವನ್ನೂ ಹೇಳಿಯಾನು. ಅವನು ಅಂಥವನೇ! ಅದಕ್ಕೆ ಚೀರುವೆಂದಳು – ತಚ್ಚೋಳಿಯ ಪ್ರಿಯ ಒದೇನ! ಇದೆಲ್ಲ ನನ್ನ ಯೋಗ! ಊಟಮಾಡಿ ಇಲ್ಲಿಂದ ಹೋಗಿರಿ. ಅದಕ್ಕೆ ಒದೇನನೆಂದ – ನನಗೆ ಅನ್ನ–ಸಾರು ಏನೂ ಬೇಡ. ನಾನು ಕೂಡಲೇ ಹೋಗಬೇಕು. ಅಷ್ಟು ಹೇಳಿ ಒದೇನ ಕೂಡಲೆ ಹೊರಟು ಹೋದ. ಕಂಡಾಚೇರಿ ಚಾಪ್ಪ ಚಂದ್ರೋತ್ತ್ ಮನೆಯ ನಂಬ್ಯಾರರಲ್ಲಿ ಎಲ್ಲ ವಿವರಗಳನ್ನೂ ಬಚ್ಚಿಡದೆ ಹೇಳಿದ. ಅದನ್ನು ಕೇಳಿದ ಆತ ಒಲವಿಲ್‌ಒದಯೊತ್ತ್‌ನವರಿಗೆಲ್ಲ,

ಚೀರುವನ್ನೂ ಒಳಗೊಂಡು ಚೆನ್ನಾಗಿ ಒದೆಕೊಟ್ಟ. ಚೆನ್ನಾಗಿ ಒದ್ದು ಚೀರುವಿಗೆಂದ– ಒಲವಿಲೊದಯೊತ್ತ್ ಕುಂಞಿಚೀರು! ನೀನು ಒಣಕ್ಕನನ್ನೆ ಇಟ್ಟುಕೊ. ನಾನು ಇನ್ನು ಇತ್ತ ಸುಳಿಯಲಾರೆ. ಅಷ್ಟು ಹೇಳಿ ನಂಬ್ಯಾರ್ ಅಲ್ಲಿಂದ ಕೂಡಲೆ ಹೊರಟುಹೋದ. ಚಂದ್ರೋತ್ತ್ ಮನೆಯ ಹಿರಿಯವ್ವೆಯೂ ಚೀರುವೂ ತುಂಬ ಅತ್ತರು. ಚೀರು ಮನಸ್ಸಲ್ಲೇ ಹೀಗೆ ನೆನೆದಳು– ಅಯ್ಯೋ, ದೇವರೇ, ಭಗವಂತ! ಇದೆಲ್ಲ ನನ್ನ ತಪ್ಪಿನ ಪರಿಣಾಮ. ನನ್ನ ಗಂಡನೂ ನನ್ನಲ್ಲಿ ಕೋಪಿಸಿಕೊಂಡು ಹೋದರು. ನಾನಿನ್ನು ಏನು ಮಾಡಲಿ, ಎಲ್ಲಿಗೆ ಹೋಗಲಿ? ಚೀರು ಹಾಗೆ ದುಃಖಿಸುತ್ತ ಅಲ್ಲಿದ್ದಳು.

ಯಾರು ಕಳರಿ ಸ್ಪರ್ಧೆಯಲ್ಲಿ ಗೆಲ್ಲುವರೋ ಅವನನ್ನು ಮದುವೆಯಾಗುತ್ತೇನೆ

ಪಯ್ಯಂಪಳ್ಳಿ ಚಂದು ಮಾಹಿಯ ಕಳರಿಗೆ ಹೋಗುತ್ತಿದ್ದ. ಆಗ ಚೇಟ್ಟ್ವಾಯಿ ಕಡವ್‌ನ ಕುಂಞಿಮಾತು ಸ್ನಾನಕ್ಕಾಗಿ ಹೋಗುತ್ತಿದ್ದವಳು ಚಂದುವನ್ನು ಕಣ್ಣಾರೆ ಕಂಡಳು. ಅವನೂ ಅವಳನ್ನು ನೋಡಿದ. ಚಂದು ಕುಂಞಿಮಾತುವಿನಲ್ಲಿ ಕೇಳಿದ – ಚೇಟ್ಟ್ವಾಯಿ ಕಡವಿನ ಕುಂಞಿಮಾತು, ಎಲ್ಲಿಗೆ ಹೋಗುತ್ತಿದ್ದಿ? ನಿನ್ನನ್ನು ನಾನು ಚಿಕ್ಕಂದಿನಲ್ಲಷ್ಟೆ ಕಂಡಿದ್ದೆ. ನಿನಗೀಗ ವಯಸ್ಸೆಷ್ಟು? ನೀನು ದೊಡ್ಡವಳಾಗಿದ್ದಿಯಾ? ಮೊಲೆ ಮುಡಿಗಳು ನಿನಗೆ ಬಂದಿವೆ, ಹುಡುಗಿ! ಹಾಗಾಗಿ ನನಗೆ ಗುರುತು ಹತ್ತಲಿಲ್ಲ. ಅದಕ್ಕೆ ಕುಂಞಿಮಾತು ಎಂದಳು – ನನಗೆ ಈಗ ಹದಿಮೂರು ವರ್ಷ. ನಾನು ದೊಡ್ಡ ವಳಾಗಿ ಹದಿಮೂರು ದಿನಗಳಾದುವು, ಅಷ್ಟೆ. ನನ´ಗೆ ಇನ್ನೂ ಗಂಡು ಬಂದಿಲ್ಲ. ಕೂಡಲೆ ಕುಂಞಿಚಂದುವೆಂದ – ಚೇಟ್ಟ್ವಾಯಿ ಕಡವಿನ ಕುಂಞಿಮಾತು! ಮಾಹಿಯ ಕಳರಿಗೆ ಸ್ಪರ್ಧೆಗಾಗಿ ಹೋಗುತ್ತಿದ್ದೇನೆ. ಆ ಸ್ಫರ್ಧೆ ಮುಗಿದಾಗ ನಾನು ಮರಳಿ ಬರುತ್ತೇನೆ. ಅಂದೇ ನಿನ್ನ ಮನೆಗೆ ನಾನು ಬರುತ್ತೇನೆ. ಈಗ ನನಗೆ ಪುರುಸೊತ್ತು ಇಲ್ಲ. ನಿನ್ನ ಮನೆಗೆ ಬಂದ ಬಳಿಕ 'ಊವಂ ಬಯಂಜ್' ಮಾಡಿಕೊಂಡೇ ಮರಳುವವನು ನಾನು. ಹಾಗೆ ಅವರು ಮಾತನಾಡುತ್ತಿದ್ದಾಗ ಪಯ್ಯನಾಡನ್ ಚಿಂಡನ್ ನಂಬ್ಯಾರ್, ಎಡಕಂಡಿ ಕೋರ ಕುರುಪ್ಪ್, ತಚ್ಚೋಳಿ ಒದೇನ, ಕಂಡಚ್ಚೇರಿ ಚಾಪ್ಪ, ಕಲ್ಪಳ್ಳಿ ಪಾಲಾಟ್ಟ್ ಕುಂಞಿಕೋರ – ಇವರೆಲ್ಲ ಒಂದಾಗಿ ಮಾಹಿಯ ಕಳರಿ ಸ್ಪರ್ಧೆಗಾಗಿ ಆ ದಾರಿಯಾಗಿ ಹೋಗುತ್ತಿದ್ದರು. ಹಾಗೆ ಹೋಗುತ್ತಿದ್ದ ಅವರು ಮಾತುವನ್ನು ಕಣ್ಣಾರೆ ಕಂಡರು. ಚಂದುವನ್ನೂ ಕಂಡರು. ಚಂದುವಿನಲ್ಲಿ ಕೇಳಿದರು – ಪಯ್ಯಂಪಳ್ಳಿ ಚಂದು! ನೀನೀಗ ಎಲ್ಲಿಗೆ ಹೊರಟವನು? ಈ ಹುಡುಗಿ ಯಾರು? ಚಂದು ಕೂಡಲೇ ಅವರಿಗೆಂದ – ಮಾಹಿಯಲ್ಲಿ ನಡೆಯುವ

ಕಳರಿ ಸ್ಪರ್ಧೆಯಲ್ಲಿ ಭಾಗವಹಿಸಲು ಹೊರಟವನು ನಾನು. ಈ ಹುಡುಗಿ ಚೇಟ್ಟುವಾಯಿ ಕಡವತ್ತ್ ನಂಬ್ಯಾರರ ಸೊಸೆ. ಕೂಡಲೆ ಅವರೆಲ್ಲ ಕೇಳಿದರು – ಅವಳಿಗೆ ಗಂಡನಿದ್ದಾನೆಯೆ ಚಂದು? ಅದಕ್ಕೆ ಚಂದುವೆಂದ – ಚೇಟ್ಟ್‌ವಾಯಿ ಕಡವ್‌ನ ಕುಂಞಿಮಾತುವಿಗೆ ನಾನೇ ಗಂಡ. ಕೂಡಲೇ ಅವರು ಕೇಳಿದರು – ಪಯ್ಯಂಪಳ್ಳಿ ಚಂದು! ನೀನು ಅವಳಿಗೆ 'ಪುಡಮುರಿ' ಮಾಡಿದ್ದಿಯಾ? ಪರಸ್ಪರ ಊವಂ ಬಯಂಜ್ ಮಾಡಿಕೊಂಡ ನಿಮ್ಮಲ್ಲಿ ಈಕೆ ತೀರ ಎಳೆಯ ಹುಡುಗಿ. ಕೂಡಲೇ ಚಂದುವೆಂದ –ಪಯ್ಯನಾಡನ್ ಚೆಂಡನ್ ನಂಬ್ಯಾರೇ! ಎಡಕಂಡಿ ಕೋರಕುರುಪ್ಪೇ! ತಚ್ಚೋಳಿ ಒದೇನ! ಕಂಡಾಚ್ಚೇರಿ ಚಾಪ್ಪ! ಕಲ್ಪಳ್ಳಿ ಪಾಲಯಾಟ್ಟ್ ಕುಂಞಿಕೋರಾ! ಎಲ್ಲರೂ ಕೇಳಿರಿ. ಚೇಟ್ಟ್‌ವಾಯಿ ಕಡವ್‌ನ ಈ ಮಾತುವನ್ನು ನಾನು ಪುಡಮುರಿ ಮದುವೆಯಾಗಿಲ್ಲ. ಊವಂ ಬಯಂಜ್ ಆಗಿಲ್ಲ. ನಾನು ಆಗ ಹಾಗೆ ತಮಾಷೆಗೆ ಹೇಳಿದೆನಷ್ಟೆ. ಅಂದ ಹಾಗೆ ನೀವೆಲ್ಲ ಎಲ್ಲಿಗೆ ಹೋಗುತ್ತಿದ್ದೀರಿ? ಕೂಡಲೆ ನಂಬ್ಯಾರನೆಂದ–ಮಾಹಿಯ ಕಳರಿ ಸ್ಪರ್ಧೆಗಾಗಿ ನಾವೆಲ್ಲ ಹೋಗುತ್ತಿದ್ದೇವೆ. ಅವರು ಇನ್ನೂ ಹೀಗೆಂದರು – ಚೇಟ್ಟ್‌ವಾಯಿ ಕಡವ್‌ನ ಕುಂಞಿಮಾತು! ಅವನು ನಿನ್ನನ್ನು ಊವಂ ಬಯಂಜ್ ಮಾಡಿಕೊಳ್ಳಲಿ. ಕೂಡಲೆ ಕುಂಞಿಮಾತುವೆಂದಳು – ನಾನು ಇಂದು ಊವಂ ಬಯಂಜ್‌ಗೆ ಸಿದ್ಧಳಿಲ್ಲ. ಅದನ್ನು ಕೇಳಿದ ನಂಬ್ಯಾರರು ಜೋರಾಗಿ ತುಂಬ ನಕ್ಕರು. ಅವರೆಲ್ಲರೂ ಅದು ಇದು ಮಾತನಾಡುತ್ತ ವೀಳ್ಯಹಾಕಿದರು. ಅವರು ವೀಳ್ಯ ಹಾಕುತ್ತಿರುವಾಗ ಚಂದು ಮಾತುವಿಗೆ ಹೇಳಿದ – ಚೇಟ್ಟ್‌ವಾಯಿ ಕಡವ್‌ನ ಮಾತು! ನೀನು ಈಗ ಅವರಿಗೆ ಹೇಳು–ನೀವೀಗ ಆರು ಜನರಿದ್ದೀರಿ. ಯಾರು ಕಳರಿಸ್ಪರ್ಧೆಯಲ್ಲಿ ಗೆಲ್ಲುತ್ತಾರೋ ಅವರು ನನಗೆ ಊವಂ ಬಯಂಜ್ ಮಾಡಲಿ. ಅವರನ್ನಷ್ಟೆ ನಾನು ಮದುವೆ ಮಾಡಿಕೊಳ್ಳುವೆ. ಆ ಮಾತುಗಳನ್ನು ಕೇಳಿದ ಎಲ್ಲರೂ ಜೋರಾಗಿ ತುಂಬ ನಕ್ಕರು. ಕೂಡಲೆ ಚಂದುವೆಂದ – ತಚ್ಚೋಳಿಯ ಒದೇನ ಕಳರಿಸ್ಪರ್ಧೆಯಲ್ಲಿದ್ದರೆ ಒದೇನನೇ ಗೆಲ್ಲುವವನು. ಪಯ್ಯನಾಡನ್ ಚೆಂಡನ್ ನಂಬ್ಯಾರನು ಅದಕ್ಕೆಂದ – ಪಯ್ಯಂಪಳ್ಳಿ ಚಂದು! ಮಾತುವಿಗೆ ನಿನ್ನನ್ನು ಮನಸ್ಸಿಗೆ ಬಂದಿದೆಯೆ? ಅದಕ್ಕೆ ಕೂಡಲೆ ಮಾತುವೆಂದಳು – ನನ್ನ ಮನಸ್ಸಿಗೆ ಯಾರೂ ಬಂದಿಲ್ಲ. ಮಾಹಿಯ ಕಳರಿಸ್ಪರ್ಧೆಯಲ್ಲಿ ಯಾರು ಗೆಲ್ಲುತ್ತಾರೋ ಅವರೇ ನನಗೆ ಬೇಕು. ಕೂಡಲೇ ನಂಬ್ಯಾರನೆಂದ – ನಿನ್ನನ್ನು ತಚ್ಚೋಳಿ ಒದೇನನೇ ಒಯ್ಯುತ್ತಾನೆ. ಅದನ್ನು ಕೇಳಿದ ಒದೇನ ಜೋರಾಗಿ ಬಾಯಿ ತುಂಬ ನಕ್ಕ. ಬಳಿಕ ಮಾತುವಿಗೆಂದ – ಚೇಟ್ಟ್‌ವಾಯಿ ಕಡವಿನ ಕುಂಞಿಮಾತು! ನೀನು ನಿನ್ನ ಮನೆಗೆ ಹೋಗು. ಮಾಹಿಯ ಕಳರಿ ಸ್ಪರ್ಧೆಗಾಗಿ ನಾವೀಗ ಹೋಗುತ್ತಿದ್ದೇವೆ. ಯಾರು ಅಲ್ಲಿ ಗೆಲ್ಲುತ್ತಾರೋ ಅವರು ನಿನ್ನಲ್ಲಿಗೆ ಬರುತ್ತಾರೆ. ಹಾಗೆ ಹೇಳಿ ಅವರೆಲ್ಲರೂ ಹೋದರು. ಎಲ್ಲರೂ ಬಂದು

ಸೇರಿದ ಬಳಿಕ ಮಾಹಿಯ ಕಳರಿಸ್ಪರ್ಧೆ ಆರಂಭವಾಯಿತು. ಸ್ಪರ್ಧೆಗಾಗಿ ಸಾಕಷ್ಟು ಜನ ಬಂದಿದ್ದರು. ಎಲ್ಲರೂ ಸೇರಿದ ಸಂದರ್ಭದಲ್ಲಿ ಪಯ್ಯಂಪಳ್ಳಿ ಚಂದು ಈ ಐವರನ್ನು ಕರೆದು ಹೇಳಿದ –ಮಾಹಿಯ ಈ ಕಳರಿಸ್ಪರ್ಧೆಯಲ್ಲಿ ಇಂದು ತಚ್ಚೋಳಿ ಒದೇನನೇ ಗೆಲ್ಲುವವನು. ಮಾತುವನ್ನು ಅವನೇ ಊವಂ ಬಯಂಜ್ ಮಾಡಿಕೊಳ್ಳುತ್ತಾನೆ. ಹೀಗೆ ಹೇಳಿಯೆ ಅವರು ಸ್ಪರ್ಧೆ ಆರಂಭಿ ಸಿದರು. ಅವರು ಸ್ಪರ್ಧೆ ಆರಂಭಿಸಿ ಹೊತ್ತು ಸಂಜೆ ಯಾಗುತ್ತಿದ್ದಂತೆ ಒದೇನ ಸ್ಪರ್ಧೆಯಲ್ಲಿ ಗೆದ್ದ. ಆಗ ಕಂಡಾಚ್ಚೇರಿ ಎಂದ – ಪಯ್ಯಂಪಳ್ಳಿ ಚಂದು! ನೀವೆಲ್ಲರೂ ಸ್ಪರ್ಧಾಳುಗಳಾಗಿದ್ದರೂ ನನ್ನ ಯಜಮಾನ ಸ್ಪರ್ಧೆಯಲ್ಲಿ ಗೆದ್ದಿದ್ದಾರೆ. ನೀವೆಲ್ಲ ಮನದಲ್ಲೆ ಮಂಡಿಗೆ ಮೆಲ್ಲುತ್ತಿದ್ದ ಚೇಟ್ಟುವಾಯಿ ಕಡವ್‌ನ ಮಾತುವನ್ನು ನನ್ನ ಯಜಮಾನರು ಊವಂ ಬಯಂಜ್ ಮಾಡಿಕೊಂಡು ಹೋಗಲಿದ್ದಾರೆ! ಸ್ಪರ್ಧೆಯಲ್ಲಿ ಗೆದ್ದ ಒದೇನ ಬೇಗ ಬೇಗ ಹಿಂತಿರುಗಿದ.

ಎಲ್ಲರಿಂದಲೂ ಕಳುಹಿಸಿಕೊಂಡು ಕಂಡಾಚ್ಚೇರಿ ಚಾಪ್ಪನನ್ನೂ ಜತೆಗೂಡಿ ಒದೇನ ಹೊರಟ. ಇಬ್ಬರೂ ಚೇಟ್ಟುವಾಯಿ ಕಡವಿಗೆ ತಲಪಿದರು. ಅವರು ಅಲ್ಲಿಗೆ ತಲಪಿದಾಗ ಚೇಟ್ಟುವಾಯಿ ಕಡವ್‌ನ ನಂಬ್ಯಾರನು ಶಿಷ್ಟಾಚಾರವೆಸಗಿ ವಿಷಯ ಏನೆಂದು ಕೇಳಿದ. ಒದೇನ ಅವನಿಗೆ ಎಲ್ಲ ಸಂಗತಿಗಳನ್ನು ಮಂದಟ್ಟಾಗಿಸಿದ. ಎಲ್ಲವನ್ನೂ ಕೇಳಿದ ನಂಬ್ಯಾರ ನೆಂದ – ತಚ್ಚೋಳಿಯ ಕಣ್ಮಣಿ ಬಾಲ ಒದೇನ! ಪಡುಕೋಣೆಯನ್ನು ಗುಡಿಸಿ ಸಾರಿಸಿ ಸಿದ್ಧಪಡಿಸಿದೆ. ಅದನ್ನು ಕೇಳಿದ ಒದೇನ ಇನ್ನೊಂದಿಷ್ಟು ಮಾತನಾಡಿ ಪಡುಕೋಣೆಗೆ ಹೋದ. ಪಡುಕೋಣೆಗೆ ಹೋಗಿ ಅಲ್ಲಿ ಮಾತುವಿಗೆ ಎಲ್ಲ ವಿಷಯಗಳನ್ನು ಹೇಳಿದ. ಎಲ್ಲ ಸುದ್ದಿಗಳನ್ನು ಮಾತು ಕೇಳಿದಾಗ ತಾನಾಗಿಯೇ ಅವಳು ನಕ್ಕುಬಿಟ್ಟಳು. ವೀಳ್ಯದೆಲೆ ಯನ್ನು ಸುರುಟಿ ಒದೇನನಿಗೆ ಕೊಟ್ಟಳು. ಒದೇನ ವೀಳ್ಯದೆಲೆ ಸುರುಳಿಯನ್ನು ತೆಗೆದು ಕೊಂಡು ತಿಂದ. ಆ ಬಳಿಕ ಅಲ್ಲೇ ಸುಖವಾಗಿ ಮಾತುವಿನೊಂದಿಗೆ ಸೇರಿಕೊಂಡ. ಅಲ್ಲಿ ಹಾಗೆ ಸುಖವಾಗಿ ಸೇರಿಕೊಂಡು ಮುಂಜಾನೆ ಬೆಳಕು ಹರಿಯುವಾಗ ಕಂಡಾಚ್ಚೇರಿಯ ಚಾಪ್ಪನನ್ನು ಜತೆಗೂಡಿ, ಚೇಟ್ಟುವಾಯ ಕಡವ್‌ನ ಕುಂಞಿಮಾತುವಿನಿಂದ ಕಳುಹಿಸಿ ಕೊಂಡು, ಅಲ್ಲಿಂದ ಹೊರಟ. ಅವರು ತಚ್ಚೋಳಿ ಮನೆ ತಲಪಿ ಅಲ್ಲಿ ಸುಖವಾಗಿದ್ದರು.

ತೈಕಂಡಿ ಕುಂಞಿಮಾದೇಯಿ ಎಂಥ ಒಳ್ಳೆ ಹೆಣ್ಣು!

ಒಂದು ದಿನ ತಚ್ಚೋಳಿ ಕೋಮಕುರುಪ್ಪ್ ಒದೇನನನ್ನು ಕರೆದು ಹೀಗೆಂದ– ತಚ್ಚೋಳಿ ಒದೇನ, ಪ್ರಿಯತಮ್ಮಾ! ತೈಕಂಡಿ ಚೆಲ್ಲಾಟನ್ ಕುಂಞಾಯನ ಐದು ಆನೆಗಳಿಗೆ ಐನೂರು ಹಾನೆ ಭತ್ತ, ಅದಕ್ಕೆ ಸರಿ ಸುಮಾರು ಅಷ್ಟೇ ಪೊಲಿ ಭತ್ತ, ಇವನ್ನು ನೀನು ಇಂದು ಕೊಂಡೊಯ್ದು ಕೊಟ್ಟು ಬರಬೇಕು. ತಚ್ಚೋಳಿ ಒದೇನ ಐದು ಆನೆಗಳಿಗೆ ಐನೂರು ಹಾನೆ ಭತ್ತ, ಅದಕ್ಕೆ ಸರಿಸುಮಾರು ಅಷ್ಟೇ ಪೊಲಿ ಭತ್ತವನ್ನು ಮೂಟೆ ಕಟ್ಟಿಸಿದ. ಆಳುಗಳಿಂದ ಹೊರಿಸಿದ. ಹಿಂದೆಯೇ ತಾನೂ ಹೋದ. ಕಂಡಾಚ್ಚೇರಿ ಚಾಪ್ಪನೂ ಜತೆಗೆ ಹೋದ. ಅವರು ಹಾಗೆ ಹೋಗಿ ತೈಕಂಡಿ ಚೆಲ್ಲಾಟಂ ಕುಂಞಾಯನ ಮನೆ ಬಾಗಿಲಿಗೆ ಬಂದು ನಿಂತರು. ತೈಕಂಡಿ ಕುಂಞಾಯನ ಹೆಂಡತಿ ಕುಂಞಿಮಾದೇಯಿ ಇವರು ಬಂದುದನ್ನು ಗಮನಿಸಿದಳು. ಅವಳು ಒಂಭತ್ತು ತಿಂಗಳ ಗರ್ಭಿಣಿ. ಅವಳು ಮನೆಬಾಗಿಲಿಗೆ ಹೋದಳು. ಮಾದೇಯಿ ಕೇಳಿದಳು – ನಾಯರರೇ! ನೀವು ಎಲ್ಲಿಂದ ಬರುತ್ತಿದ್ದೀರಿ. ಕೂಡಲೇ ಒದೇನ ಉತ್ತರಿಸಿದ – ತೈಕಂಡಿ ಚೆಲ್ಲಾಟನ್‌ನ ಕುಂಞ್ಯಾದೇಯಿ! ನಾನು ತಚ್ಚೋಳಿ ಮನೆಯ ಒದೇನ. ತೈಕಂಡಿ ಕುಂಞಾಯನರಿಗೆ ಸಂದಾಯವಾಗಬೇಕಾದ ಭತ್ತವನ್ನು ತಂದಿದ್ದೇನೆ. ಭತ್ತವನ್ನೂ ಪೊಲಿಭತ್ತವನ್ನೂ ಇಲ್ಲಿ ಅಳೆಸಿಕೊಂಡು ಸಂದಾಯ ಮಾಡಿ ಹೋಗುವು ದಕ್ಕೆ ಬಂದಿದ್ದೇನೆ. ಅದನ್ನು ಕೇಳಿದ ಕುಂಞಿ ಮಾದೇಯಿ ಕಂಚಿನ ಬಳ್ಳ ತಂದಳು. ಮನೆಬಾಗಿಲಿಗೆ ಬಂದು ಕೂತಳು. ಮೊಲೆಯುಣ್ಣುವ ಕುಂಕ (ಮಗು) ನನ್ನು ಬೆನ್ನೇರಿಸಿಕೊಂಡಳು. ಐದು ಆನೆಗಳಿಗೆ ಸಂದಾಯವಾಗಬೇಕಾದ ಐನೂರು ಬಳ್ಳ ಭತ್ತ ಅಳೆದಳು. ಅದಕ್ಕೆ ಸರಿಸುಮಾರು ಅಷ್ಟೇ ಪೊಲಿಭತ್ತವನ್ನೂ ಅಳೆದಳು. ಒದೇನ ಚಾಪ್ಪನನ್ನು ಕರೆದು ಹೇಳಿದ – ನೋಡೋ ನೋಡೋ ಕಂಡಾಚ್ಚೇರಿ! ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ಮೊಲೆಕುಡಿಯುವ ಕೂಸು ಕುಂಕನನ್ನು ಬೆನ್ನಲ್ಲಿ

ಕಟ್ಟಿಕೊಂಡೇ ಈ ಒಂಭತ್ತು ತಿಂಗಳ ಗರ್ಭಿಣಿ ಐದು ಆನೆಗಳಿಗೆ ಐನೂರು ಬಳ್ಳ ಭತ್ತ ಅಳೆದಳು. ಸರಿಸುಮಾರು ಅಷ್ಟೇ ಪೊಲಿಭತ್ತವನ್ನೂ ಅಳೆದಳು. ಆದರೆ ನೋಡು ಮೂಗಿನ ಮೇಲೆ ಒಂದೇ ಒಂದು ಮುತ್ತುಬೆವರು ಮೂಡಿಲ್ಲ! ತೈಕಂಡಿ ಕುಂಞಿಮಾದೇಯಿ ಎಂಥ ಒಳ್ಳೆ ಹೆಣ್ಣು, ಕಂಡಾಚ್ಚೇರಿ ಚಾಪ್ಪಾ! ನಮ್ಮ ಹೆಂಗಸರೂ ಇದ್ದಾರೆ ನೋಡು! ಅವರಿಗೆ ಹೊಟ್ಟೆಯಲ್ಲಿ ಬೀಜ ಮೊಳೆತರೆ ಸಾಕು ಅಡುಗೆ ಮನೆ ಅವರಿಗೆ ದೂರ. ಮನೆಯ ಉಗ್ರಾಣವಂತೂ ಗಾವುದ ದೂರ. ಆಚೆಯ ಅಕ್ರದ ಕಡ್ಡಿಯನ್ನು ಈಚೆ ಇಡರು. ಇಲ್ಲಿ ನೋಡಿದೆಯ? ತೈಕಂಡಿ ಚೆಲ್ಲಾಟನ್ ಕುಂಞಾಯನ ಹೆಂಡತಿಯನ್ನು? ಇನ್ನು ಏನು ಹೇಳಲಿ. ಇದೆಲ್ಲ ನಮ್ಮ ಭಾಗ್ಯ. ಅವರು ಹೀಗೆ ಮಾತನಾಡಿಕೊಂಡರು.

ಒದೇನನೂ ಚಾಪನೂ ಹೊರಟರು. ಅವರು ಅರ್ಧದಾರಿ ತಲಪಿರಬಹುದು, ಅಷ್ಟೆ. ತೈಕಂಡಿ ಕುಂಞಾಯ ದಾರಿಯಲ್ಲೇ ಕಾಣಸಿಕ್ಕಿದ. ಅವನನ್ನು ಕಂಡ ಒದೇನ ಹೇಳಿದ – ತೈಕಂಡಿ ಚೆಲ್ಲಾಟ್ಟನ್ ಕುಂಞಾಯನೇ! ಐದಾನೆಗಳಿಗೆ ಐನೂರು ಹಾನೆ ಭತ್ತ, ಸರಿಸುಮಾರು ಅಷ್ಟೇ ಪೊಲಿಭತ್ತವನ್ನು ನಾನು ನಿನ್ನ ಮನೆಗೆ ತಂದು ಸಂದಾಯ ಮಾಡಿದ್ದೇನೆ. ನಿನ್ನ ಮಡದಿ ಕುಂಞಿಮಾದೇಯಿ ಎಲ್ಲವನ್ನೂ ಅಳೆದು ನೋಡಿದ್ದಾಳೆ. ನನ್ನ ಅಣ್ಣ ಕೋಮಕುರುಪ್ಪ್ ಹೇಳಿದ್ದಾನೆ– ನೀನು ಒಮ್ಮೆ ತಚ್ಚೋಳಿ ಮೇಪಕ್ಕೆ ಹೋಗಲೇ ಬೇಕಂತೆ. ಈಗಲೇ ನೀನು ಹೊರಟುಬಿಡು. ಅದನ್ನು ಕೇಳಿ ಕುಂಞಾಯನೆಂದ – ತಚ್ಚೋಳಿಯ ಕಣ್ಮಣಿ ಬಾಲಒದೇನ! ಈಗ ಹೊತ್ತು ಮುಸ್ಸಂಜೆ ಯಾಗುತ್ತಾ ಬಂತು. ನಾನು ಈಗ ಹೊರಟರೆ ಕುಂಞಿಮಾದೇಯಿ ಒಬ್ಬಳೇ ಆಗಿ ಬಿಡುತ್ತಾಳೆ. ಆದುದರಿಂದ ತಚ್ಚೋಳಿ ಮೇಪಕ್ಕೆ ನಾಳೆ ಮುಂಜಾನೆ ಹೊರಟು ಬಿಡುತ್ತೇನೆ, ಆಗದೇ? ಒದೇನ ಅದಕ್ಕೆಂದ – ತೈಕಂಡಿ ಕುಂಞಾಯನೇ! ನನ್ನಣ್ಣ ತಚ್ಚೋಳಿ ಕೋಮಕುರುಪ್ಪ್ ನಿನಗಾಗಿ ಕಾದು ಕುಳಿತಿದ್ದಾನೆ. ನೀನು ಇಂದೇ ಹೋಗಿಬಿಡು. ನಿನ್ನ ಹೆಂಡತಿ ತೈಕಂಡಿ ಕುಂಞಿಮಾದೇಯಿಗೆ ಭಯವಾಗುವುದಿದ್ದರೆ ಕಂಡಾಚ್ಚೇರಿ ಚಾಪ್ಪನೂ ನಾನೂ ಅಲ್ಲಿ ಅವಳಿಗೆ ಕಾವಲಿರುತ್ತೇವೆ. ನಿಮ್ಮ ಮನೆಬಾಗಿಲಲ್ಲೇ ಮಲಗಿರುತ್ತೇವೆ. ನೀನು ತಚ್ಚೋಳಿ ಮೇಪ್ಪದಿಂದ ಹಿಂದಿರುಗುವ ವರೆಗೂ ನಾವು ಅಲ್ಲಿಯೇ ಕಾವಲು ನಿಲ್ಲುತ್ತೇವೆ. ನೀನು ಹೋಗಿ ಬಂದುಬಿಡು. ಇಷ್ಟು ಹೇಳಿ ಒದೇನನೂ ಚಾಪ್ಪನೂ ಬೇಗ ಬೇಗ ಹೊರಟು ತೈಕಂಡಿ ಮನೆಗೆ ಬಂದರು. ಬಾಗಿಲ ಬಳಿ ಹೋಗಿ ಕರೆದರು– ತೈಕಂಡಿ ಮನೆಯ ಕುಂಞಿಮಾದೇಯೀ! ಹುಲ್ಲುಚಾಪೆಗಳನ್ನು ನಮಗೆ ತಂದು ಕೊಟ್ಟುಬಿಡು. ಅದನ್ನು ಕೇಳಿದ ಮಾದೇಯಿ ಹುಲ್ಲುಚಾಪೆಗಳನ್ನು ತಂದು ಕೊಡುವಾಗ ತಚ್ಚೋಳಿ ಒದೇನ ಬಾಗಿಲನ್ನು ಫಕ್ಕನೆ ದೂಡಿ ಪಡುಕೋಣೆಗೆ ಹೋಗಿ ಮಲಗಿಕೊಂಡ. ಅಲ್ಲಿ ಮಲಗಿದ

ಒದೇನನೂ ಮಾದೇಯಿಯೂ ಒಂದಾದರು. ಮುಂಜಾನೆ ಆಗುತ್ತಿದ್ದಂತೆ ತಚ್ಚೋಳಿ ಒದೇನ ಮನೆ ಬಾಗಿಲಿಗೆ ಬಂದು ಅಲ್ಲಿ ಮಲಗಿಕೊಂಡ. ತೈಕಂಡಿ ಕುಂಞಾಯ ಆ ಹೊತ್ತಿಗೆ ಬಂದವನೇ ಒದೇನನನ್ನು ಕರೆದ – ತಚ್ಚೋಳಿ ಕಣ್ಮಣಿ ಬಾಲಒದೇನ! ಇದೆಂಥ ನಿದ್ದೆ ನಿನಗೆ. ಅದನ್ನು ಕೇಳಿ ಒದೇನ ನಿದ್ದೆಯಿಂದ ತಟ್ಟನೆ ಎದ್ದು ಕುಳಿತ. ತೈಕಂಡಿ ಚೆಲ್ಲಾಟನ್‌ನ ಕುಂಞಾಯನನ್ನು ಬೀಳ್ಕೊಂಡು ತಚ್ಚೋಳಿ ಒದೇನನೂ ಕಂಡಾಚೇರಿ ಚಾಪ್ಪನೂ ತಚ್ಚೋಳಿ ಮೇಪಕ್ಕೆ ಬಂದರು.

ಇದು ನಿಮ್ಮದೇ ಬಸಿರು!

ತಚ್ಚೋಳಿಯ ಕಣ್ಮಣಿ ಬಾಲಒದೇನ ತನ್ನ ಅಣ್ಣ ತಚ್ಚೋಳಿ ಕೋಮಕುರುಪ್ಪ್‌ಗೆಂದ – ನನ್ನಣ್ಣ ಕೋಮಕುರುಪ್ಪೇ ಕೇಳಿ! ನನಗೆ ಪುರಮಾಲದ ತಿರುಗಾಟಕ್ಕೆ ಹೋಗಬೇಕು. ಕೂಡಲೇ ಅದಕ್ಕೆ ಕೋಮಕುರುಪ್ಪ್ ಉತ್ತರಿಸಿದ – ನನ್ನ ತಮ್ಮ, ನೀನು ಪುರಮಾಲದ ತಿರುಗಾಟಕ್ಕೆ ಹೋಗಬೇಡ. ನೀನು ಹೋದೆಯಾದರೆ ಪುರಮಾಲ ಮನೆಗೆ ಹೋಗದಿರ ಲಾರೆ. ಹಾಗೆ ಹೋದಾಗ ಅಲ್ಲಿನ ಕುಂಕಮ್ಮ ಯಾರು, ಏನು? ಎಂದು ವಿಚಾರಿಸುವವಳಲ್ಲ. ಘಟ್ಟದ ಕೆಳಗಿನ ಯಾವನೇ ನಾಯರ್ ಮನೆತನದ ಗಂಡಸು ಹೋದರೂ ಮರ್ಯಾದೆ ತೋರುವವಳಲ್ಲ, ಆಚಾರಕ್ಕಾದರೂ ಎದ್ದು ನಿಲ್ಲುವವಳಲ್ಲ. ನೀನಂತೂ ಮುಂಗೋಪಿ. ನೀನು ಪುರಮಾಲ ಮನೆಯನ್ನು ಕುಟ್ಟಿಕೊಡುವೆ. ಕೂಡಲೇ ಒದೇನ ಅದಕ್ಕೆ ಉತ್ತರಿಸಿದ – ನನ್ನಣ್ಣ ಕೋಮಕುರುಪ್ಪೇ ಕೇಳಿ! ಪುರಮಾಲ ಕುಂಕಮ್ಮನನ್ನು ಕೊಲ್ಲಲು ನಾನು ಹೋಗುತ್ತಿದ್ದೇನೆಯೆ? ನಾನು ತಿರುಗಾಟಕ್ಕೆ ಹೋಗುತ್ತಿರುವೆ! ಒದೇನ ಸಿಂಗರಿಸಿಕೊಂಡ. ತನ್ನ ಉರುಮಿಯನ್ನೂ ಗುರಾಣಿಯನ್ನೂ ತೆಗೆದುಕೊಂಡ. ಮುಂದೆ ಹುಲಿಕುಂತದ ಕಂಡಾಚ್ಚೇರಿ ಚಾಪ್ಪು! ಹಿಂದೆ ಸೂತ್ರಧಾರಿ ತಚ್ಚೋಳಿ ಒದೇನ! ಅವರು ಪಯಣ ಹೊರಟು ಪುರಮಾಲ ಮನೆಗೆ ತಲಪಿದರು. ಅವರು ಅಲ್ಲಿಗೆ ಹೋದಾಗ ಪುರಮಾಲ ಕುಂಕಮ್ಮ ಕಾಲುಚಾಚಿ ಕುಳಿತು ಚುಕ್ಕೆ ರೇಶ್ಮೆ ಬಟ್ಟೆಯನ್ನು ಸೊಂಟಕ್ಕೆ ಬಿಗಿದು ರಾಮಾಯಣ ಕಥೆ ಹೇಳುತ್ತಿದ್ದಳು. ತಚ್ಚೋಳಿ ಒದೇನ ಬಾಗಿಲ ಬಳಿ ಹೋಗಿ ನಿಂತುಕೊಂಡ. ಕುಂಕಮ್ಮ ಕಂಡೂ ಕಾಣದ ಭಾವದಿಂದಿದ್ದಳು. ಎದ್ದು ನಿಂತು ಆಚಾರ ಪಾಲಿಸಲಿಲ್ಲ. ತಚ್ಚೋಳಿ ಒದೇನ ಇದನ್ನು ಕಂಡು ಹೇಳಿದ– ಪುರಮಾಲ ಕುಂಕಮ್ಮ ಅಮ್ಮನವರೇ! ಕೇಳಿ! ಇಲ್ಲಿ. ಗಂಡಸರನ್ನು ಕಂಡರೆ ಆಚಾರದಂತೆ ನಡೆದುಕೊಳ್ಳುವ ಪದ್ಧತಿ ಇಲ್ಲವೆ? ಕೂಡಲೆ ಅವಳು ಪ್ರತ್ಯುತ್ತರವಿತ್ತಳು– ಘಟ್ಟದ ಕೆಳಗಿಂದ ಬಂದ ನಾಯರನೇ ಕೇಳು!

ಘಟ್ಟದ ಕೆಳಗೆ ಎರವನೂ ಹೊಲೆಯನೂ ಇಲ್ಲವೇ? ಇವರಲ್ಲಿ ಯಾರಿಗೆ ಆಚಾರ ತೋರಬೇಕಾದದ್ದು? ತಚ್ಚೋಳಿ ಒದೇನನಿಗೆ ಮೈಯೆಲ್ಲ ಕಂಪಿಸತೊಡಗಿತು. ಕೂಡಲೇ ಕಂಡಾಚ್ಚೇರಿ ಚಾಪ್ಪನೆಂದ – ನನ್ನ ಧನೀ ನನ್ನ ಯಜಮಾನ! ಯಾರದ್ದೋ ತಾಯಂದಿರನ್ನು ಕಂಡಾಗ ಹಿಂದೆಯೂ ತುಂಬ ಸಲ ನಿಮಗೆ ಹೀಗೆಯೇ ಆಗಿತ್ತು. ಹಾಗೆ ಕಂಡಾಗ ನಿಮ್ಮ ಉರುಮಿ ಕಂಪಿಸುತ್ತದೆ, ಹಿಡಿತಕ್ಕೆ ಸಿಗದಂತೆ! ಹೀಗೆ ಅಲ್ಲಿ ಅವರು ನಿಂತಿರಲು, ಒಂದಷ್ಟು ಹೊತ್ತು ಕಳೆದ ಬಳಿಕ, ಪುರಮಾಲ ಕುಂಕಮ್ಮ ಎದ್ದು ಒಳಹೋದಳು. ಸ್ವಲ್ಪ ಹೊತ್ತು ಕಳೆಯಿತು. ಪರಂದ್‌ತುರ್ತಿಯ ಪಣಿಕ್ಕರ್ ಅಲ್ಲಿಗೆ ಬಂದ. ಒದೇನನನ್ನು ಕಣ್ಣಾರೆ ಕಂಡರೂ ಕಾಣದಂತೆ ಇದ್ದ. ಯಾಕೆ ಬಂದೆ ಎಂದು ಕೇಳಿಲಿಲ್ಲ. ಬೇಗ ಬೇಗ ಮೆಟ್ಟಲೇರಿ ಹೋದ. ಬೇಗ ಪಡುಕೋಣೆಗೆ ಹೋದ. ಬಟ್ಟೆ ಬರೆಗಳನ್ನೆಲ್ಲಾ ಕಳಚಿಟ್ಟ. ಆಗ ಪುರಮಾಲ ಕುಂಕಮ್ಮ ಎಣ್ಣೆಯನ್ನೂ ಕೊಯಂಬನ್ನೂ ತೆಗೆದುಕೊಂಡು ಬಂದಳು. ಪರಂದ್‌ಪರಂಬ್‌ನ ಪಣಿಕ್ಕರಿಗೆ ಅವನ್ನು ಹಚ್ಚಿದಳು. ಅದನ್ನು ಕಂಡು ಒದೇನ ಸಿಟ್ಟಿನಿಂದ ಕಣ್ಣು ಗೊಂಬೆಗಳನ್ನು ಉರುಳಾಡಿಸಿದ. ಕರಿದೊಡೆಗಳ ನ್ನೆರಡನ್ನೂ ಕುಣಿಸಿದ. ಕೂಡಲೇ ಕಂಡಾಚ್ಚೇರಿ ಎಂದ – ನನ್ನ ಧನೀ ನನ್ನ ಯಜಮಾನರೇ! ಯಾರದ್ದೋ ತಾಯಂದಿರನ್ನು ಕಂಡಾಗ ನಿಮಗೆ ಉಂಟಾಗುವ ಕಂಪನಕ್ಕೆ ಮಿತಿಯಿಲ್ಲ. ಕಾವಿಲ್‌ಚಾತ್ತೋತ್ತ್‌ನ ಚೀರು ಅಮ್ಮ ನಿಮ್ಮನ್ನು ಎಣ್ಣೆಹಚ್ಚಿ ಸ್ನಾನ ಮಾಡಿಸುವಾಗ ಯಾರಿಗಾದರೂ ನಡುಕ ಪ್ರಾರಂಭ ವಾಗುತ್ತದೆಯೇ? ಚಾಪ ತೆಂಗಿನ ಹೆಡೆಯ ಸೀಳೊಂದನ್ನು ತೆಗೆದುಕೊಂಡ. ಅದನ್ನು ಒಯ್ದು ಒದೇನನಿಗೆ ಕೊಟ್ಟ. ತಚ್ಚೋಳಿ ಒದೇನ ಅದನ್ನು ತೆಗೆದುಕೊಂಡು ಹಾಸಿ ಕುಳಿತುಕೊಂಡ (ಇದು ತೀವ್ರ ಪ್ರತಿಭಟನೆಯ ಸಾಂಕೇತಿಕ ಕ್ರಿಯೆ). ಹತ್ತು ಹೆಜ್ಜೆಗಳಷ್ಟು ಹೊತ್ತು ಸರಿದಾಗ ಪುರಮಾಲ ನಂಬಿ ಕುರುಪ್ಪ್ ಬಂದು ಒಳಪ್ರವೇಶಿಸಿದ. ಪ್ರವೇಶಿಸು ತ್ತಿದ್ದಂತೆ ಒದೇನನನ್ನು ಕಣ್ಣಾರೆ ಕಂಡ ನಂಬಿ ಕುರುಪ್ಪ್ ಹೀಗೆಂದ – ತಚ್ಚೋಳಿ ಕಣ್ಮಣಿ ಬಾಲ ಒದೇನ! ನನ್ನ ಪುರಮಾಲೆಗೆ ನೀನು ಬಂದು ಒಂದು ಸೀಳು ತೆಂಗಿನ ಗರಿಯಲ್ಲಿ ಕುಳಿತುದು ಯಾವಾಗ? ಅಯ್ಯೋ ವಿಧಿಯೇ? ಒದೇನ, ಹುಲ್ಲುಚಾಪೆಯಲ್ಲಿ ಕುಳಿತುಕೋ ಒದೇನ. ನಂಬಿಕುರುಪ್ಪ್ ಓಡೋಡಿ ಪಡುಕೋಣೆಗೆ ಹೋದ. ಹುಲ್ಲುಚಾಪೆಯನ್ನು ತೆಗೆದುಕೊಂಡ ಕೂಡ. ಬಾಗಿಲಿಗೆ ತಂದು ಕೊಡವಿ ನೆರಿಗೆ ಸರಿಪಡಿಸಿ ಹಾಸಿದ. ಒದೇನನ ಕೈಹಿಡಿದು – ಹುಲ್ಲು ಚಾಪೆಯಲ್ಲಿ ಕುಳಿತುಕೊ ಒದೇನ! ಎಂದ. ಒದೇನ ಅದಕ್ಕೆ ಉತ್ತರಿಸಿದ – ಪುರಮಾಲ ನಂಬಿಕುರುಪ್ಪರೇ ಕೇಳಿ! ಹುಲ್ಲುಚಾಪೆಯಲ್ಲಿ ಕುಳಿತುಕೊಳ್ಳುವುದಿಲ್ಲ. ಏನು ಹೇಳಿದರೂ ಕುಳಿತುಕೊಳ್ಳುವುದಿಲ್ಲ! ಬೇರೆ ಬೇರೆ ರೀತಿಯಲ್ಲಿ ಹೇಳಿದರೂ ಒದೇನ ಹುಲ್ಲುಚಾಪೆಯಲ್ಲಿ ಕುಳಿತುಕೊಳ್ಳಲಿಲ್ಲ. ತಂದಿಟ್ಟ ವೀಳ್ಯ ಹಾಕಿಕೊಳ್ಳ ಲಿಲ್ಲ. ಆಗ ಕಂಡಾಚ್ಚೇರಿ ಚಾಪನೆಂದ – ಪುರಮಾಲ ನಂಬಿಕುರುಪ್ಪೇ ಕೇಳಿ! ನನ್ನ ಧನಿ,

ನನ್ನ ಯಜಮಾನರು ಯಾವುದೇ ಯುದ್ಧಕಳದಲ್ಲೂ ತೆಂಗಿನ ಓಲೆಯ ಸೀಳಲ್ಲಷ್ಟೇ ಕುಳಿತುಕೊಳ್ಳುತ್ತಾರೆ. ಪುರಮಾಲ ನಂಬಿ ಕುರುಪ್ಪ್ ಉಗ್ರಾಣದ ಬಳಿಯ ಅಡುಗೆ ಮನೆಗೆ ಬಂದು ಕುಂಕಮ್ಮಳಲ್ಲಿ ಕೇಳಿದ–ಪುರಮಾಲ ಕುಂಕಮ್ಮಾ ಕೇಳು – ಕಡತ್ತುನಾಡ್‌ನ ಉದ್ದಗಲಕ್ಕೂ ಹೆಸರುವಾಸಿಯಾದ ತಚ್ಚೋಳಿಯ ಒದೇನ ನಮ್ಮ ಮನೆಗೆ ಬಂದಾಗ ತೆಂಗಿನ ಓಲೆಯ ಸೀಳಲ್ಲಿ ಕುಳಿತುಕೊಳ್ಳುವುದೆ? ಹುಲ್ಲುಚಾಪೆಯನ್ನು ಅವನಿಗೆ ಯಾಕೆ ಕೊಡಲಿಲ್ಲ? ಕೂಡಲೇ ಅವಳು ಉತ್ತರವಿತ್ತಳು – ಪುರಮಾಲ ನಂಬಿಕುರುಪ್ಪ್ ಮಾವ! ಘಟ್ಟದ ಕೆಳಗೆ ಎರವನೂ ಹೊಲೆಯನೂ ಇಲ್ಲವೆ? ಯಾರೆಲ್ಲ ಇಲ್ಲಿಗೆ ಬರುತ್ತಾರೋ? ಯಾರಿಗೆಲ್ಲ ಆಚಾರದಂತೆ ಗೌರವಿಸುವುದು? ಹಾಗೆ ಹೇಳಿ ಅವನನ್ನು ಸುಮ್ಮನಾಗಿಸಿದಳು. ಪುರಮಾಲ ನಂಬಿಕುರುಪ್ಪು ಇದನ್ನು ಬಂದು ಒದೇನನಲ್ಲಿ ಹೇಳಿದ–ತಚ್ಚೋಳಿಯ ಕಣ್ಮಣಿ ಬಾಲಒದೇನ! ಹಳೆಯಕ್ಕಿ ಅನ್ನವಿದೆ ಊಟಮಾಡು. ಸ್ನಾನಮಾಡಿ ಬಂದು ಊಟಮಾಡು ಒದೇನ! ಒದೇನ ಕೂಡಲೇ ಹೇಳಿದ – ಪುರಮಾಲ ನಂಬಿ ಕುರುಪ್ಪೇ ಕೇಳಿ! ನಾನೀಗ ಸ್ನಾನ ಮಾಡುವುದೇ ಇಲ್ಲ. ನಾನು ಊಟವನ್ನೂ ಮಾಡುವುದಿಲ್ಲ. ಹಾಗೆ ಹೇಳಿ ಅವನು ಸುಮ್ಮನೆ ಇದ್ದ. ಪುರಮಾಲ ನಂಬಿಕುರುಪ್ಪ್ ತೆಂಕು ಕೋಣೆಗೆ ಹೋದ. ಅಲ್ಲಿ ಮಲಗಿ ನಿದ್ರಿಸಿದ. ಪರಂದ್‌ತುರ್ತಿಯ ಪಣಿಕ್ಕರ್ ಮತ್ತು ಕುಂಕಮ್ಮ ಪಡುಕೋಣೆಗೆ ಹೋಗಿ ಅಲ್ಲಿ ಒಂದಾದರು. ತಚ್ಚೋಳಿ ಕಣ್ಮಣಿ ಒದೇನನ ಕಾಲ ಉಂಗುಷ್ಟದಿಂದ ಮೂಗಿನ ತುದಿಯವರೆಗೂ ಥರಗುಡುತ್ತಿತ್ತು. ಮಧ್ಯರಾತ್ರೆ ಹೊತ್ತಲ್ಲಿ ಪಡು ಕೋಣೆಯ ಬಾಗಿಲು ತೆರೆದ, ಪಡುಕೋಣೆ ಪ್ರವೇಶಿಸಿದ. ಪರಂದ್ ತುರ್ತಿಯ ಪಣಿಕ್ಕರನನ್ನು ಅಲ್ಲಿಯೇ ಕಡಿದು ಕೊಂದು ಹಾಕಿದ. ಆಮೇಲೆ ಬೇಗ ಬಾಗಿಲಿಳಿದು ಹೋಗಿ ಹಿಂದಿನ ಜಾಗದಲ್ಲಿಯೇ ಕುಳಿತುಕೊಂಡ. ಚಾಪ್ಪನಲ್ಲಿ ಒದೇನ ಹೇಳಿದ – ಕಂಡಾಚ್ಚೇರಿಯ ಪ್ರಿಯ ಗೆಳೆಯ ಚಾಪ್ಪಾ! ನೀನು ಪಡುಕೋಣೆಗೆ ಹೋಗಿ ಪುರಮಾಲ ಕುಂಕಮ್ಮ ಏನು ಮಾಡುತ್ತಿದ್ದಾಳೆ ಎಂದು ನೋಡಿ ಬಾ. ಅಂತೆಯೇ ಕಂಡಾಚ್ಚೇರಿ ಚಾಪ್ಪನು ಅಲ್ಲಿಗೆ ಹೋಗಿ ನೋಡಲು ಕುಂಕಮ್ಮ ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿದ್ದಳು. ಚಾಪ್ಪ ಕೂಡಲೇ ಬಾಗಿಲ ಬಳಿ ಬಂದು ಒದೇನನಲ್ಲಿ ಹೇಳಿದ – ನನ್ನ ಧನೀ ನನ್ನ ಯಜಮಾನರೇ! ಪುರಮಾಲ ಕುಂಕಮ್ಮ ಅಕ್ಕಿ ಮತ್ತು ಭತ್ತಗಳ ಲೆಕ್ಕ ತೆಗೆಯುತ್ತಿದ್ದಾಳೆ. ಹಾಗೆ ತುಂಬಾ ಹೊತ್ತು ಕಳೆಯಿತು. ಒದೇನ ಚಾಪ್ಪನಿಗೆಂದ – ಕಂಡಾಚ್ಚೇರಿಯ ಪ್ರಿಯ ಗೆಳೆಯ ಚಾಪ್ಪ! ಕುಂಕಮ್ಮನನ್ನು ಹೋಗಿ ನೋಡಿ ಬಾ ಚಾಪ್ಪಾ. ಚಾಪ್ಪ ಹೋಗಿ ಪಡುಕೋಣೆಯಲ್ಲಿ ನೋಡಿದಾಗ ಕುಂಕಮ್ಮ ಪುನಃ ಹೊರಳಾಡಿ ಗೋಳಿಡುತ್ತಿದ್ದಳು. ಚಾಪ್ಪ ಹಿಂತಿರುಗಿ ಬಂದ. ಒದೇನನಲ್ಲಿ ಹೇಳಿದ – ನನ್ನ ಧನಿ, ನನ್ನ ಯಜಮಾನರೇ! ಪುರಮಾಲ ಕುಂಕಮ್ಮ ಅಮ್ಮನವರು ಹೊನ್ನಿನ ಮತ್ತು ಹಣದ ಲೆಕ್ಕ ಮಾಡುತ್ತಿದ್ದಾರೆ.

ಇನ್ನು ಸ್ವಲ್ಪ ಹೊತ್ತು ಕಳೆಯಿತು. ತಚ್ಚೋಳಿ ಒದೇನ ಪುನಃ ಹೇಳಿದ – ನನ್ನ ಮಗೂ, ನನ್ನ ಕಂಡಾಚ್ಚೇರಿ! ಪುರಮಾಲ ಕುಂಕಮ್ಮ ಹುಡುಗಿಗೆ ಹೋಗಿ ಹೇಳು – ಹೋಗುವುದಿದ್ದರೆ ಒಟ್ಟಿಗೆ ಹೋಗಬೇಕಂತೆ ಎಂದು. ಕಂಡಾಚ್ಚೇರಿ ಚಾಪ್ಪ ಪಡುಕೋಣೆ ಯ ಬಾಗಿಲ ಮುಂದೆ ನಿಂತು ಕೂಗಿ ಹೇಳಿದ– ಪುರಮಾಲ ಕುಂಕಮ್ಮ ಅಮ್ಮನೋರೆ, ಕೇಳಿ! ನೀವು ನಿನ್ನೆ ರಾತ್ರೆ ಊಟ ಮಾಡಿದ್ದೀರಿ. ನಾನು ನಿನ್ನೆ ರಾತ್ರಿ ಕೂಡ ಉಂಡಿಲ್ಲ. ಹೋಗುವುದಿದ್ದರೆ ಒದೇನಪ್ಪನ ಜೊತೆಗೆ ಹೋಗಬಹುದು. ಪುರಮಾಲ ಕುಂಕಮ್ಮ ಬೇಗ ಎದ್ದು ಕೂತಳು. ಬಳಿಕ ಎದ್ದು ಬಾಗಿಲ ಬಳಿ ಹೋದಳು. ಒದೇನ ನಾಲ್ಕು ಕೋಣೆಯ ಬಾಗಿಲುಗಳನ್ನು ಮುಚ್ಚಿದ. ಅವರು ಹಾಗೆ ಹೊರಟರು. ಪುರಮಾಲ ಕುಂಕಮ್ಮ ಅಳುತ್ತ ಹೋಗುತ್ತಿದ್ದಳು. ಹಾಗೆ ಅವರು ಕಾಲುದಾರಿಗೆ ತಲಪಿದಾಗ ಒದೇನ ಹೇಳಿದ – ನನ್ನ ಮಗೂ, ನನ್ನ ಕಂಡಾಚ್ಚೇರಿ! ಪುರಮಾಲ ಕುಂಕಮ್ಮನಿಗೆ ಎಳನೀರು ತೆಗೆದು ಕೊಡು ಚಾಪ್ಪಾ! ನನ್ನನ್ನು ಕಂಡರೆ ಅವಳಿಗೆ ನಾಚಿಕೆ. ಚಾಪ್ಪ ಎಳನೀರು ತೆಗದುಕೊಂಡು ಬಂದ. ಎಳನೀರನ್ನೆಲ್ಲ ಕುಡಿದ. ಅದರ ತೊಂಡನ್ನು ತಂದು ಹೇಳಿದ – ಪುರಮಾಲ ಕುಂಕಮ್ಮ ಅಮ್ಮನವರೇ ಕೇಳಿ! ನನ್ನ ಯಜಮಾನರು ಹೇಳಿದ್ದು ಕೇಳಿದ್ದಿರೋ? ನೀವು ನಿನ್ನೆ ರಾತ್ರಿ ಉಂಡಿದ್ದೀರಂತೆ. ನಾನು ನಿನ್ನೆ ರಾತ್ರಿ ಉಂಡಿಲ್ಲ. ಎಳನೀರನ್ನು ನಾನು ಕುಡಿದು ತೊಂಡನ್ನು ನಿಮಗೆ ಕೊಡಬೇಕಂತೆ. ಅದಕ್ಕೂ ಕುಂಕಮ್ಮ ಪ್ರತಿಕ್ರಿಯೆ ತೋರಲಿಲ್ಲ. ಒದೇನ ಮತ್ತೆ ಚಾಪ್ಪನಿಗೆಂದ – ಕಂಡಾಚ್ಚೇರಿಯ ಪ್ರಿಯ ಗೆಳೆಯ ಚಾಪ್ಪಾ! ಕುಂಕಮ್ಮನಿಗೆ ಒಂದು ಬಾಳೆಯ ಹಣ್ಣು ತಂದುಕೊಡು. ಚಾಪ್ಪ ಬಾಳೆಹಣ್ಣು ತೆಗೆದುಕೊಂಡು ಬಂದ. ಕುಂಕಮ್ಮನ ಬಳಿಗೆ ಹೋದ. ಬಾಳೆ ಹಣ್ಣನ್ನು ತಾನೇ ತಿಂದ. ಕುಂಕಮ್ಮನಿಗೆಂದ – ಪುರಮಾಲ ಕುಂಕಮ್ಮ ಅಮ್ಮನವರೇ ಕೇಳಿ! ನನ್ನ ಯಜಮಾನರು ಹೇಳಿದ್ದನ್ನು ಕೇಳಿದ್ದೀರಾ? ನೀವು ನಿನ್ನೆ ರಾತ್ರಿ ಉಂಡಿದ್ದಿರಂತೆ. ನಾನು ನಿನ್ನೆ ರಾತ್ರಿ ಊಟ ಮಾಡಿಲ್ಲ. ಬಾಳೆಹಣ್ಣನ್ನು ನಾನು ತಿಂದು ಸಿಪ್ಪೆಯನ್ನು ನಿಮಗೆ ಕೊಡಬೇಕಂತೆ. ಅದಕ್ಕೂ ಕುಂಕಮ್ಮ ಪ್ರತಿಕ್ರಿಯೆ ತೋರಲಿಲ್ಲ.

ಅವರು ನಡೆಯುತ್ತಾ ನಡೆಯುತ್ತಾ ತಚ್ಚೋಳಿ ಮೇಪಕ್ಕೆ ತಲಪಿದರು. ಅಲ್ಲಿಗೆ ತಲಪುವಾಗ ಕೋಮಕುರುಪ್ಪು ಬಾಗಿಲಲ್ಲೇ ಕುಳಿತಿದ್ದ, ಕುರುಪ್ಪು ಮನಸ್ಸಿನಲ್ಲೇ ಗ್ರಹಿಸುತ್ತಿದ್ದ – ಅಯ್ಯೋ ದೇವರೇ ಪರಮಾತ್ಮ! ಪುರಮಾಲ ಮನೆಯನ್ನು ಒದೇನ ಕುಟ್ಟಿಕೊಟ್ಟು ಬೆಂಕಿಯಂಥ ಕುಂಕಮ್ಮನನ್ನು ಕರೆದುಕೊಂಡು ಬರುತ್ತಿದ್ದಾನಲ್ಲಾ! ಹಾಗೆ ಕೋಮಕುರುಪ್ಪ್ ಕುಳಿತಿರಲು ಒದೇನ ಬಂದು ಬಾಗಿಲು ದಾಟಿದ. ಬೇಗ ಒಳಗೆ ಹೋಗಿ ನಾಗತ್ತೆಳಂಕೋಡಿ ಮಾತುವಿಗೆಂದ – ನಾಗತ್ತೆಳಂಕೋಡಿ ನನ್ನ ಅತ್ತಿಗೆಮ್ಮಾ! ಪುರಮಾಲ ಕುಂಕಮ್ಮ

ಹುಡುಗಿ ನಮ್ಮ ಓಣಂ ಹೊಯ್ಗೆ ಗದ್ದೆಯಿಂದ ಏಳು ಪಲ್ಲ ಹುಲ್ಲು ಕೊಯ್ದು ತಂದಳಾದರೆ ಅವಳಿಗೆ ಉಪ್ಪು ಹಾಕದ ಗಂಜಿ ಕೊಡಬೇಕು. ಹಾಗೆ ಹೇಳಿ ಒದೇನ ಕಂಡಾಚ್ಚೇರಿ ಚಾಪ್ಪನನ್ನು ಕರೆದುಕೊಂಡು ಹೊರಟುಹೋದ.

ಅವರು ಕೊಡುಮಲೆ ಏರಿದರು. ಪುರಮಾಲ ಕುಂಕಮ್ಮ ಏಳು ಪಲ್ಲ ಹುಲ್ಲು ತಂದಳು. ಅವಳು ಹಾಗೆ ಮತ್ತೆ ಹೋಗುತ್ತಿದ್ದಾಗ ನಾಗತ್ತೆಳಂಕೊಡಿ ಕುಂಞಿಮಾತು ಅವಳನ್ನು ಕರೆದು ಹೇಳಿದಳು – ಪುರಮಾಲ ಕುಂಕಮ್ಮ ಹುಡುಗಿ ಕೇಳು! ನೀನು ಇಂದು ಇನ್ನು ಹುಲ್ಲು ತರುವುದು ಬೇಡ. ತಚ್ಚೋಳಿಯ ಹೆಂಗುಸರು ಯಾರು ಕೂಡ ಹುಲ್ಲು ಹೆರೆಯುವುದಿಲ್ಲ. ಕುಂಕಮ್ಮ ಆ ಮಾತು ಕೇಳಲಿಲ್ಲ. ಅವಳು ಓಣಂ ಹೊಯ್ಗೆ ಗದ್ದೆಯಿಂದ ಏಳು ಪಲ್ಲ ಹುಲ್ಲು ಹೆರೆದು ಕಟ್ಟಮಾಡಿದಳು. ಅವಳೆಂದಳು – ದಾರಿ ಹೋಗುತ್ತಿರುವ ಮಹಾಜನರೇ! ಒಂದಿಷ್ಟು ನನ್ನ ತಲೆಗೆ ಹುಲ್ಲು ಕಟ್ಟು ಏರಿಸಲು ಕೈಗೊಡಿ. ಆಗ ಅವರು ಕೇಳಿದರು – ಅಮ್ಮಾ, ನೀವು ಯಾವ ಮನೆಯವರು? ಅದಕ್ಕೆ ಕುಂಕಮ್ಮ ಎಂದಳು – ತಚ್ಚೋಳಿ ಮೇಪ್ಪದವಳು ನಾನು. ತಚ್ಚೋಳಿ ಒದೇನನ ಹೆಂಗಸು. ಅದಕ್ಕೆ ಮಹಾಲೋಕರೆಂದರು – ನಾವು ಯಾರೂ ಕೈಗೊಡೆವು. ತಚ್ಚೋಳಿ ಒದೇನ ಹಾಗೆ ಮಾಡಿದ ಕೈಯನ್ನು ಮೊಣಕೈ ಸಮೇತ ಕಡಿದು ಹಾಕಿಯಾನು. ನಾವು ಯಾರೂ ಹುಲ್ಲಿನ ಕಟ್ಟ ಮುಟ್ಟೆವು! ಹೊತ್ತು ಹತ್ತು ಹೆಜ್ಜೆ ಮೇಲೇರಲು ಪುರಮಾಲ ಕುಂಕಮ್ಮ ಒಲವಣ್ಣೂರ್ ಕಾವ್‌ನ ಭಗವತಿಗೆ ಹರಕೆ ಹೊತ್ತಳು – ಅಮ್ಮಾ ಭಗವತಿ! ನೀನು ಮುಡಿಧರಿಸಿ ಮೂಡುದಿಕ್ಕಿಗೆ ತಿರುಗುವ ಹೊತ್ತಿಗೆ ನಿನಗೆ ಎಡಮುರಿ ಬಲಮುರಿ ಬಳೆ ಕೊಡುತ್ತೇನೆ. ಎಕ್ಕ ಹೂವಿನ ಹೊನ್ನಮಾಲೆಯನ್ನು ಕೊರಳಿಗೆ ಹಾಕಿಸುತ್ತೇನೆ. ಹೀಗೆ ಹರಕೆ ಹೇಳಿಕೊಂಡು ಹುಲ್ಲಿನ ಕಟ್ಟನ್ನು ಎತ್ತಲು ಪ್ರಯತ್ನಿಸಿದಾಗ ಹುಲ್ಲಿನ ಕಟ್ಟು ಮೇಲೇರಿತು! ಅವಳು ಹುಲ್ಲು ಹೊತ್ತುಕೊಂಡು ಹೋದಳು. ತಚ್ಚೋಳಿ ಮೇಪಕ್ಕೆ ಬಂದಳು. ತೆಂಗಿನ ಬುಡದಲ್ಲಿ ಹುಲ್ಲಿನ ಕಟ್ಟನ್ನು ಹಾಕಿದಳು. ಹೋಗಿ ಒರಳಿನ ಮೇಲೆ ಕುಳಿತುಕೊಂಡಳು, ಅವಳೆಂದಳು – ನಾಗತ್ತೆಳಂಕೋಡಿಯ ನನ್ನ ಅಕ್ಕಮ್ಮಾ! ನನಗಾಗಿ ಇರುವ ಗಂಜಿ ಕೊಡಿ. ಉಪ್ಪು ಹಾಕದ ಆ ಗಂಜಿ ಇತ್ತ ಕೊಟ್ಟುಬಿಡಿ. ಅದಕ್ಕೆ ಕುಂಞಿಮಾತು ಎಂದಳು– ಪುರಮಾಲ ಕುಂಕಮ್ಮ ಹುಡುಗಿ, ಕೇಳು! ಹಳೆಯಕ್ಕಿ ಅನ್ನ ಮಾಡಿಕೊ ನೀನು. ಎಣ್ಣೆ ಹಚ್ಚಿ ಚೆನ್ನಾಗಿ ಮಿಂದುಕೊ ನೀನು! ಅದಕ್ಕೆ ಕುಂಕಮ್ಮ ಹೇಳಿದಳು – ನಾಗತ್ತೆಳಂ ಕೋಡಿಯ ನನ್ನ ಅಕ್ಕಮ್ಮಾ! ಘಟ್ಟದ ಕೆಳಗಿನ ನಾಯಮ್ಮಾರರು ನನಗೆ ಅನ್ನ ಕೊಡುವುದು ಸಾಧ್ಯವಾಗದೆ ಉಪ್ಪುಹಾಕದ ಗಂಜಿಕೊಡಿ ಅಂತ ಹೇಳಿದ್ದಾರಲ್ಲ?. ಯಾವ ಯಾವ ರೀತಿಯಲ್ಲಿ ಹೇಳಿದರೂ ಅವಳು ಅನ್ನ ಉಣ್ಣಲಿಲ್ಲ. ಹಾಗೆ ಅಲ್ಲಿ ಅವಳು

ಬದುಕುತ್ತಾ ಇದ್ದಳು. ನಾಗತ್ತೆಳಂ ಕೋಡಿ ಕುಂಞಿಮಾತು ಅವಳಿಗೆ ಉಪ್ಪು ಹಾಕದ ಗಂಜಿ ನೀಡಿದಳು. ಪುರಮಾಲ ಕುಂಕಮ್ಮ ಹಾಗೆ ಅಲ್ಲಿ ಬದುಕುತ್ತಿದ್ದಳು. ತಚ್ಚೋಳಿ ಒದೇನ ಚಾಪನಿಗೆಂದ – ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ನೀನು ಬಡೇರ ತಿರಿಕೊಟ್ಟ್‌ಗೆ ಹೋಗು. ಹೋಗಿ ಚಿರುದೆಯನ್ನು (ಒದೇನನ ತಂಗಿಯ ಮಗಳು?) ಮೇಪ್ಪಕ್ಕೆ ಕಳುಹಿಸಲು ಬಾವು ಭಾವನಿಗೆ ಹೇಳು. ಕಂಡಾಚ್ಚೇರಿ ಚಾಪ್ಪ ಕೂಡಲೇ ಬಡೇರತಿರಿಕೊಟ್ಟ್‌ಗೆ ಹೋದ. ಬಾವು ಬಾಗಿಲಲ್ಲೇ ಕುಳಿತಿದ್ದ. ಅವ ಕೇಳಿದ – ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ನೀನು ಇತ್ತ ಬಂದ ಕೆಲಸವೇನು? ಅದಕ್ಕೆ ಕಂಡಾಚ್ಚೇರಿ ಚಾಪ್ಪನೆಂದ – ಬಡೇರಿ ತಿರಿಕೋಟ್ಟ್‌ನ ಬಾವುನವರೆ! ತಚ್ಚೋಳಿ ಮೇಪಕ್ಕೆ ಚಿರುದೆಯನ್ನು ಕಳುಹಿಸುವಂತೆ ನನ್ನ ಯಜಮಾನ ಹೇಳಿ ಕಳುಹಿಸಿದ್ದಾರೆ. ಚಿರುದೆಯನ್ನು ನನ್ನ ಜತೆ ಕಳುಹಿಸಿಕೊಡಿ. ಅದನ್ನು ಕೇಳಿದ ಬಾವು ಚಿರುದೆಯನ್ನು ಚಾಪನ ಜತೆ ಕಳಿಸಿದ. ಚಿರುದೆ ತಚ್ಚೋಳಿ ಮೇಪಕ್ಕೆ ಬಂದಳು. ಒದೇನ ಚಿರುದೆಗೆ ಹೇಳಿದ – ತಚ್ಚೋಳಿ ಮೇಪದ ಚಿರುದೆ ಕುಟ್ಟಿ! ನಾನು ಪುರಮಾಲೆಗೆ ಹೋಗಿ ಪುರಮಾಲೆಯ ಅಮ್ಮಾವರನ್ನು ಕರೆತಂದಿದ್ದೇನೆ. ನಾನು ಕೊಡುಮಲೆಗೆ ಹೋಗಬೇಕಾಗಿದೆ. ಪುರಮಾಲ ಕುಂಕಮ್ಮನನ್ನು ನೀನು ಮಾಣಿಕೋತ್ತ್‌ನ ನಮ್ಮ ಮನೆಗೆ ಕರೆದುಕೊಂಡು ಹೋಗಿ ನೀವಿಬ್ಬರೂ ಅಲ್ಲಿರಿ. ಜತೆಗೇ ಎಣ್ಣೆ ಹಚ್ಚಿ ಮಿಂದುಕೊಳ್ಳಿ. ಜತೆಗೇ ಊಟ ಮಾಡಿಕೊಳ್ಳಿ. ಮಾಣಿಕೋತ್ತ್ ಮನೆಯ ಪಡುಕೋಣೆಯಲ್ಲಿ ಜತೆಗೆ ಮಲಗಿ ನಿದ್ದೆಮಾಡಿಕೊಳ್ಳಿ. ಕಂಡಾಚ್ಚೇರಿ ಚಾಪ್ಪ ಅವರನ್ನು ಕರೆದುಕೊಂಡು ಅಲ್ಲಿಗೆ ಹೋದ. ಮಾಣಿಕೋತ್ತ್ ಮನೆಗೆ ಕರೆದೊಯ್ದು ಮರಳಿ ಬಂದ. ಒದೇನನು ಅವನನ್ನೂ ಕೂಡಿಕೊಂಡು ಕೊಡುಮಲೆಗೆ ಹೊರಟ. ಅವರು ಕೊಡುಮಲೆಗೆ ತಲಪಿದರು.

ತಚ್ಚೋಳಿ ಮೇಪ್ಪದ ಚಿರುದೆಯೂ ಪುರಮಾಲ ಕುಂಕಮ್ಮನೂ ಜತೆಗೆ ಎಣ್ಣೆಹಚ್ಚಿ ಮಿಂದರು. ಜತೆಗೆ ಅನ್ನಮಾಡಿ ಉಂಡರು. ಜತೆಗೇ ಮಲಗಿ ನಿದ್ರಿಸಿದರು. ಹಾಗೆ ತುಂಬ ದಿನಗಳು ಕಳೆದು ಹೋದುವು. ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ಕೊಡುಮಲೆಯಿಂದ ಹಿಂತಿರುಗಿ ತಚ್ಚೋಳಿ ಮೇಪಕ್ಕೆ ತಲಪಿದರು. ಒದೇನನೆಂದ – ನನ್ನ ಮಗೂ ನನ್ನ ಕಂಡಾಚ್ಚೇರಿ! ನಾವು ಮಾಣಿಕೋತ್ತ್ ಮನೆಗೆ ಹೋಗೋಣ. ಕೂಡಲೆ ಕಂಡಾಚ್ಚೇರಿ ಎಂದ – ನನ್ನ ಧನೀ ನನ್ನ ಯಜಮಾನರೆ! ಹಿಂದೆಯೂ ಕೆಲವು ಬಾರಿ ಹಾಗೆ ಹೇಳಿದ್ದಿರಿ. ಆದರೆ ಹೋಗಿಲ್ಲ. ಹಾಗೆ ಇನ್ನಷ್ಟು ದಿನ ಕಳೆಯಿತು. ತಚ್ಚೋಳಿ ಒದೇನನೂ ಕಂಡಾಚ್ಚೇರಿ ಚಾಪ್ಪನೂ ಮೇಪದ ಬಾಗಿಲಬಳಿ ಮಲಗಿಕೊಂಡರು. ಕಂಡಾಚ್ಚೇರಿ ಚಾಪ್ಪನಿಗೆ ನಿದ್ದೆ ಎಂದರೆ ನಿದ್ದೆ, ಗಾಢ ನಿದ್ದೆ. ಒದೇನ ಎದ್ದವನೇ ನೇರ ಮಾಣಿಕೋತ್ತ್‌ಗೆ ಹೊರಟು ಬಿಟ್ಟ. ಪಯಣವನ್ನು ಎಲ್ಲಿಯೂ ನಿಲ್ಲಿಸದೆ ಅವನು ನೇರ

ಮಾಣಿಕೋತ್ತ್ ಮನೆಗೆ ತಲಪಿದ. ಮನಸ್ಸಲ್ಲೆ ಪ್ರಾರ್ಥಿಸಿದ – ಒಲವಣ್ಣೂರು ಕಾವಿನ ಭಗವತಿಯಮ್ಮ! ಮುಚ್ಚಿದ ಬಾಗಿಲು ತೆರೆದರೆ ನೀನು ಮುಡಿಧರಿಸಿ ಪೀಠಕಲ್ಲು ಏರುವ ಹೊತ್ತಿಗೆ ತೆಂಗಿನಕಾಯಿ ಕುಟ್ಟುವುದು ಮತ್ತು ಪಾಟ್ಟ್ ನಡೆಸುತ್ತೇನೆ. ಆವರಣದೊಳಗೆ ಸಿಡಿಮದ್ದು ಸಿಡಿಯಿಸುತ್ತೇನೆ. ಹರಸಿಕೊಂಡ ನಾಲಿಗೆ ದೊಂಡೆಯಲ್ಲೆ ನೆಲೆಗೊಳ್ಳಬೇಕಾದರೆ ಮುಚ್ಚಿಕೊಂಡಿದ್ದ ಬಾಗಿಲು ತೆರೆದುಕೊಂಡಿತು. ಒದೇನ ಬಾಗಿಲು ದಾಟಿ ಒಳಗೆ ಹೋದ. ಪಡುಕೋಣೆಯ ಬಾಗಿಲಿಗೆ ಹೋಗಿ ಹಿರಿದೊಂದು ಹರಕೆ ಹೊತ್ತಾಗ ಅದರ ಬಾಗಿಲೂ ತೆರೆಯಿತು. ಒದೇನ ಪಡುಕೋಣೆಯ ಒಳಗೆ ಹೋದ. ಒಲವಣ್ಣೂರ್ ಕಾವಿನ ಭಗವತಿಗೆ ದೊಡ್ಡದೊಂದು ಹರಕೆ ಮತ್ತೆ ಹೇಳಿಕೊಂಡ. ಪುರಮಾಲ ಕುಂಕಮ್ಮ ನಿದ್ದೆಯಲ್ಲೇ ಹೊರಳಿ ಇತ್ತಬರುವಂತಾಗಲಿ. ಮಾಣಿಕೋತ್ತ್ ಮನೆಯ ಪಡುಮನೆಯಲ್ಲಿ ನಾವು ಸೇರುವಂತಾಗಲಿ. ಹೇಳಿಕೊಂಡಿರುವ ಹರಕೆ ಕೊಡುತ್ತೇನೆ ಎಂದ. ಹೇಳಿದ ನಾಲಗೆ ದೊಂಡೆಯಲ್ಲಿ ಅಡಗಬೇಕಾದರೆ ಪುರಮಾಲ ಕುಂಕಮ್ಮ ನಿದ್ದೆಯಲ್ಲೆ ಹೊರಳಿ ಅವನತ್ತ ಸರಿದು ಬಂದಳು. ಪಡುಮನೆಗೆ ಜೊತೆಯಲ್ಲಿ ಬಂದಳು. ತಚ್ಚೋಳಿ ಒದೇನ ಅವಳನ್ನು ಸೇರಿದ. ಅವನು ಬೇಗ ಬಾಗಿಲು ದಾಟಿ ಹೊರಬಂದ. ಬಾಗಿಲನ್ನು ಮುಚ್ಚಿ ಅವನು ಹೋದ. ತಚ್ಚೋಳಿ ಮೇಪ್ಪಕ್ಕೆ ತಲಪಿದ. ಚಾಪ್ಪನ ಹತ್ತಿರ ಹೋದ. ಅವನ ಬಳಿಯೇ ಮಲಗಿ ನಿದ್ರಿಸಿದ.

ತುಂಬ ದಿನಗಳು ಉರುಳಿದುವು. ಪುರಮಾಲ ಕುಂಕಮ್ಮನಿಗೆ ಮುಟ್ಟುನಿಂತು ಬಸುರಾಯಿತು. ಬಸುರಿಗೆ ನಾಲ್ಕೈದು ತಿಂಗಳಾದಾಗ ತಚ್ಚೋಳಿ ಮೇಪ್ಪದ ಚಿರುದೆಕುಟ್ಟಿ ತುಂಬ ತುಂಬ ಅತ್ತು ಬಿಟ್ಟಳು. ಪುರಮಾಲೆಯಿಂದ ಕರಕೊಂಡು ಬಂದ ಅತ್ತೆಗೆ ಯಾರಿಂದ ಬಸುರಾಯಿತು? ಹಾಗೆ ಮರುಗುತ್ತ ಅವಳು ಅಲ್ಲಿದ್ದಳು. ಬಡೆರಿತಿರಿಕೊಟ್ಟ್ ಬಾವುಗೆ ಇದು ಕಿವಿಯಾನು ಕಿವಿ ಸುದ್ದಿಯಾಗಿ ತಿಳಿಯಿತು. ಅವನು ಕೂಡಲೆ ಹೊರಟ. ಮಾಣಿಕೋತ್ತ್ ಮನೆಗೆ ಬಂದ. ಬಾಗಿಲು ದಾಟಿ ಹೋಗಿ ಕುಳಿತುಕೊಂಡ. ಆಗ ತಚ್ಚೋಳಿ ಮನೆಯ ಚಿರುದೆ ಕುಟ್ಟಿ ನಡು ಅಂಗಳಕ್ಕೆ ಹಾರಿ ಬಿದ್ದಳು. ಗಂಡನಲ್ಲಿ ಎಂದಳು – ಬಡೆರಿ ತಿರಿಕ್ಕೋಟ್ಟ್‌ನ ನನ್ನ ಗಂಡ! ಮಾವ ಇಲ್ಲಿಂದ ಹೋಗುವಾಗ ಏಳು ವರ್ಷದ ಹುಡುಗನಂತೆ. ಆ ಬಳಿಕ ಇಲ್ಲಿಯ ಬಾಗಿಲ ಬಳಿ ಕೂಡ ಬಂದಿಲ್ಲ. ಆ ಮಾತುಗಳನ್ನು ಕೇಳಿದ ಬಾವುವಿನಲ್ಲಿ ಅವಳು ಮತ್ತೂ ಹೇಳಿದಳು – ಪುರಮಾಲೆಯಿಂದ ತಂದ ನನ್ನ ಅತ್ತೆಗೆ ಬಸುರಾದುದು ನಿಮ್ಮಿಂದ! ಆ ಮಾತುಗಳನ್ನು ಕೇಳಿದ ಬಾವು ಎಂದ – ತಚ್ಚೋಳಿ ಮೇಪ್ಪದ ಚಿರುದೆ ಕುಟ್ಟಿ! ಮಾವ ತಂದಿರುವ ಈ ಅತ್ತೆಗೆ ನನ್ನ ಬಸುರು ಎನ್ನುತ್ತಿಯಾ, ಚಿರುದೆ? ನೀನು ಹೇಳುತ್ತಿರುವ ಮಾತು ಅತಿ ನೀಚವಾದುದು.

ಬಾವು ಅಲ್ಲಿ ನಿಲ್ಲದೆ ಬಾಗಿಲಿಳಿದು ಹೊರಟು ಹೋದ. ಪಯ್ಯಾಂಪಳ್ಳಿ ಚಂದು ಕಿವಿಯಾನುಕಿವಿ ಇದೇ ಸುದ್ದಿ ಕೇಳಿದ – ತಚ್ಚೋಳಿ ಮೇಪ್ಪದಲ್ಲೂ ಮಾಣಿಕೋತ್ತ್‌ನಲ್ಲೂ ಬಸುರಿನದೇ ಹುಸಿಮಾತಿನ ಗೌಜಿ. ನಾನು ಹೋಗಿ ನಿಜ ತಿಳಿದು ಬರುತ್ತೇನೆ. ಚಂದು ಬೇಗಬೇಗ ಅತ್ತ ಹೆಜ್ಜೆ ಹಾಕಿದ. ಅವನು ಮಾಣಿಕೋತ್ತ್ ಮನೆಗೆ ತಲಪಿ ಮೆಟ್ಟಿಲೇರುವಾಗ ಚಿರುದೆ ಕೂಗಿ ಹೇಳಿದಳು– ಪಯ್ಯಾಂಪಳ್ಳಿಯ ಪ್ರೀತಿಯ ಚಂದು ಮಾವಾ! ಮಾವ ಇಲ್ಲಿಂದ ಹೊರಟು ಹೋದಾಗ ಅವರು ಏಳು ವರ್ಷದ ಹುಡುಗನಂತೆ! ಆ ಬಳಿಕ ಇಲ್ಲಿಯ ಮನೆಬಾಗಿಲಿಗೆ ಅವರು ಬಂದೇ ಇಲ್ಲ. ಹೀಗೆ ಆಗಾಗ ಬರುವ ನೀವೇ ನನ್ನ ಅತ್ತೆಗೆ ಬಸಿರು ಮಾಡಿದವರು! ಅದಕ್ಕೆ ಕೂಡಲೇ ಚಂದು ಹೇಳಿದ – ತಚ್ಚೋಳಿ ಮೇಪ್ಪದ ಚಿರುದೆ ಕುಟ್ಟಿ! ನಿನಗೆ ಹುಚ್ಚು ಹಿಡಿಯಿತೆ, ಚಿರುದೆ ಕುಟ್ಟಿ? ಚಂದು ಬಾಗಿಲಿಳಿದು ಹೊರಟುಹೋದ. ಅವನು ತನ್ನ ಮನೆಗೆ ತಲಪಿದ. ತಚ್ಚೋಳಿ ಮನೆಯ ಅಳಿಯ ಕುಂಞಿಕೇಳು ಒದೇನನಿಗೆ ಹೇಳಿದ – ತಚ್ಚೋಳಿ ಮೇಪ್ಪದ ಸಣ್ಣಮಾವಾ! ತಚ್ಚೋಳಿ ಮನೆಯಲ್ಲೂ ಮಾಣಿಕೋತ್ತಲ್ಲೂ ಬಸುರಿನದೇ ಹುಸಿಮಾತಿನ ಗೌಜಿ. ನಾನು ಹೋಗಿ ನಿಜ ತಿಳಿದು ಬರುತ್ತೇನೆ, ಆಗದೆ ಮಾವ? ತಚ್ಚೋಳಿ ಅಳಿಯ ಕುಂಞಿಕೇಳು ಮಾಣಿಕೋತ್ತ್ ಮನೆಗೆ ಹೋದ. ಅವನು ಅಲ್ಲಿಗೆ ತಲಪಿದಾಗ ತಚ್ಚೋಳಿ ಮೇಪ್ಪದ ಚಿರುದೆಕುಟ್ಟಿ ಬಂದು ಕೇಳುವನ್ನು ಹಿಡಿದುಕೊಂಡಳು. ಅವನಿಗೆ ಚೆನ್ನಾಗಿ ಹೊಡೆದಳು. ಅವನಲ್ಲಿ ಹೇಳಿದಳು – ತಚ್ಚೋಳಿ ಅಳಿಯ ಕುಂಞಿಕೇಳು! ಅತ್ತೆಗೆ ಬಸಿರುಮಾಡಿದ್ದು ನೀನು! ಅದನ್ನು ಕೇಳಿದ ಕೇಳು ಅಳುತ್ತ ಹೊರಟು ಹೋದ. ತಚ್ಚೋಳಿಗೆ ತಲಪಿ ಒದೇನನ ಬಳಿ ಕುಳಿತುಕೊಂಡ. ಸುದ್ದಿಗಳನ್ನೆಲ್ಲ ಅವನಿಗೆ ತಿಳಿಸಿದ. ಆಗ ಒದೇನ ಮುಗುಳ್ನಗುತ್ತ ಅದನ್ನೆಲ್ಲ ಕೇಳಿದ. ಆಗ ಕಂಡಾಚ್ಚೇರಿ ಎಂದ – ನನ್ನ ಧನೀ ನನ್ನ ಯಜಮಾನರೇ! ಯಾರಿಗೂ ಗೊತ್ತಿಲ್ಲದೆ ನೀವು ಹೋದಿರಿ. ಒದೇನ ಚಾಪ್ಪನಲ್ಲಿ ಹೇಳಿದ – ನಾವೊಮ್ಮೆ ಮಾಣಿಕೋತ್ತ್‌ಗೆ ಹೋಗಿ ಬರೋಣವೇ? ಕೂಡಲೆ ಕಂಡಾಚ್ಚೇರಿ ಹೇಳಿದ – ನಾನೀಗ ಮಾಣಿಕೋತ್ತ್‌ಗೆ ಬರುವುದಿಲ್ಲ. ಅದನ್ನು ಕೇಳಿದ ಒದೇನ ತಾನೊಬ್ಬನೇ ಮಾಣಿಕೋತ್ತ್‌ಗೆ ಹೊರಟ. ಒದೇನ ಬರುತ್ತಿರುವುದನ್ನು ಕಂಡು ತಚ್ಚೋಳಿ ಮೇಪ್ಪದ ಚಿರುದೆಕುಟ್ಟಿ ಓಡಿ ಹೋಗಿ ಬಾವಿಗೆ ಹಾರಿದಳು. ಪುರಮಾಲ ಕುಂಕಮ್ಮ ಗಿಂಡಿಯಲ್ಲಿ ನೀರು ತೆಗೆದು ಕೊಂಡಳು. ಬಾಗಿಲಲ್ಲಿ ನಿಂತುಕೊಂಡಳು. ಆಗ ಒದೇನ ಕೇಳಿದ – ಪುರಮಾಲ ಕುಂಕಮ್ಮ ಹುಡುಗಿ ಕೇಳು! ನಿನಗೆ ಯಾರಿಂದ ಬಸಿರಾಯಿತು ಹೇಳು. ಕೂಡಲೆ ಕುಂಕಮ್ಮನೆಂದಳು – ತಚ್ಚೋಳಿ ಮೇಪ್ಪದ ನನ್ನ ಗಂಡ! ನಿಮ್ಮದೇ ಬಸುರಿದು ನನ್ನ ಗಂಡ! ಹುಸಿಮಾತು ಆಮೇಲೆ ಆಡೋಣ. ತಚ್ಚೋಳಿ ಚಿರುದೆ ಬಾವಿಗೆ ಹಾರಿಕೊಂಡಿದ್ದಾಳೆ. ಅವಳು ಸತ್ತಳೋ ಗೊತ್ತಿಲ್ಲ! ಒದೇನ ಕೂಡಲೇ ಹೋಗಿ ಬಾವಿಗೆ ಹಾರಿದ. ಚಿರುದೆಯನ್ನು

ಹಿಡಿದುಕೊಂಡು ಬಾವಿಯ ಮೇಲೆ ತಂದ. ತಚ್ಚೋಳಿ ಚಿರುದೆಯೂ ಪುರಮಾಲ ಕುಂಕಮ್ಮನೂ ಒದೇನನೂ ಎಲ್ಲರೂ ತಚ್ಚೋಳಿಗೆ ತಲಪಿದ ಬಳಿಕ ಒದೇನ ಚಿರುದೆಯನ್ನಷ್ಟೆ ಕರೆದುಕೊಂಡು ಬಡೇರಿ ತಿರಿಕ್ಕೋಟ್‌ಗೆ ಹೋಗಿ ಅವಳನ್ನು ಅಲ್ಲಿ ಬಿಟ್ಟುಬಂದ. ಆ ಬಳಿಕ ಕಾವಿಲ್ ಚಾತ್ತೋತ್ತ್ ಮನೆಗೆ ಹೋಗಿ ಚೀರುವಿಗೆಂದ – ಕಾವಿಲ್ ಚಾತ್ತೋತ್ತ್‌ನ ಕುಂಞಿಚೀರು! ಪುರಮಾಲ ಕುಂಕಮ್ಮನಿಗೆ ಐದು ತಿಂಗಳ ಗರ್ಭ! ನೀನು ಮೇಪದಲ್ಲಿ ಇಲ್ಲದಿದ್ದರೆ ಅವಳಿಗೆ ಯಾರೂ ಜತೆಗೆ ಇಲ್ಲವಲ್ಲ? ಅದನ್ನು ಕೇಳಿದ ಕುಂಞಿಚೀರು ಒಂದು ತೋರ್ತ್‌ಮುಂಡನ್ನು ತೆಗೆದುಕೊಂಡು (ಕೂಡಲೇ) ಬಾಗಿಲು ದಾಟಿ ಹೊರಟೇ ಬಿಟ್ಟಳು. ತಚ್ಚೋಳಿ ಮೇಪ್ಪಕ್ಕೆ ಬಂದಳು. ಬಾಗಿಲು ದಾಟಿ ಒಳಹೋದಳು. ತೆಂಕುಕೋಣೆಗೆ ಹೋದಳು. ಕೋಮ ಕುರುಪ್ಪ್‌ನ ಬಳಿ ಬಂದು ನಿಂತಳು. ಆಗ ಕುರುಪ್ಪ್ ಕೇಳಿದ– ಕಾವಿಲ್ ಚಾತ್ತೋತ್ತ್‌ನ ಕುಂಞಿಚೀರು! ನೀನು ಮೇಪ್ಪಕ್ಕೆ ಬಾರದೆ ಎಷ್ಟೊಂದು ಕಾಲ ವಾಯಿತು? ಆಗ ಕುಂಞಿಚೀರು ಎಂದಳು– ತಚ್ಚೋಳಿ ಕೋಮಕುರುಪ್ಪ್ ಭಾವಾ! ಪುರಮಾಲ ಕುಂಕಮ್ಮನಿಗೆ ಐದು ತಿಂಗಳ ಬಸುರು. ಕೈಸುಟ್ಟುಕೊಂಡೇ ಏನಾದರೂ ಮಾಡಿ ತಿನ್ನಬೇಕಲ್ಲ. ಅದಕ್ಕೆ ಕೋಮಕುರುಪ್ಪ್ ಹೇಳಿದ – ಕಾವಿಲ್ ಚಾತ್ತೋತ್ತ್‌ನ ಕುಂಞಿಚೀರು. ನನ್ನಿಂದ ಈಗ ಏನಾಗಬೇಕು? ನಿನಗೆ ತಿಳಿದಂತೆ ಮಾಡಿಕೊ. ಕುಂಞಿಚೀರು ಬಾಗಿಲ ಬಳಿ ಬಂದು ಒದೇನನಿಗೆ ಹೇಳಿದಳು – ತಚ್ಚೋಳಿ ಒದೇನ ಕುರುಪ್ಪರೇ, ಕೇಳಿ! ತಚ್ಚೋಳಿ ಕೋಮ ಕುರುಪ್ಪ್ ಭಾವ ಹೇಳಿದ್ದಾರೆ – ಪುರಮಾಲ ಕುಂಕಮ್ಮನಿಗೆ ಏನೆಲ್ಲ ಆಗಬೇಕೋ ಅದನ್ನೆಲ್ಲ ಮಾಡಬೇಕಂತೆ. ಅದಕ್ಕೆ ಒದೇನ ಕಂಡಾಚ್ಚೇರಿ ಚಾಪ್ಪನನ್ನು ಕರೆದು ಹೇಳಿದ – ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ಪುರಮಾಲ ಕುಂಕಮ್ಮ ಹುಡುಗಿಗೆ ಸೀಮಂತಕ್ಕೆ ಮುಹೂರ್ತ ನೋಡಬೇಕು. ಮುಹೂರ್ತ ಕೇಳಿಕೊಂಡು ಬಾ, ಚಾಪ್ಪ! ಕಂಡಾಚ್ಚೇರಿ ಚಾಪ್ಪ ಕೂಡಲೇ ಹೊರಟ. ಮುಹೂರ್ತ ಕೇಳಿ ತಿಳಿದುಕೊಂಡ. ಬಂದು ಒದೇನನಲ್ಲಿ ಹೇಳಿದ– ನನ್ನ ಧನೀ ನನ್ನ ಯಜಮಾನರೆ! ಮುಂದಿನ ಮೊದಲ ಗುರುವಾರ ಸೀಮಂತಕ್ಕೆ ಹೇಳಿಮಾಡಿಸಿದಂಥ ಮುಹೂರ್ತ! ಕುಂಞಿಚೀರು ಬಂದು ಕೋಮ ಕುರುಪ್ಪಲ್ಲಿ ಈ ಸಂಗತಿ ಹೇಳಿದಳು. ಅದಕ್ಕೆ ಕೋಮಕುರುಪ್ಪ್ ಅವಳಲ್ಲಿ ಹೇಳಿದ – ಕುಂಞಿಚೀರು! ಬೇಕಾದ ಸಾಮಾನು ಸೇರಿಸಿಕೊಳ್ಳಿ, ಪುರಮಾಲ ಕುಂಕಮ್ಮನಿಗೆ ಇದು ಭಾಗ್ಯೋದಯ ಕಾಲ. ಹಾಗಾಗಿ ಸೀಮಂತವನ್ನು ತುಂಬ ಚೆನ್ನಾಗಿ ಮಾಡಬೇಕು. ಕುಂಞಿಚ್ಚೀರು ಬಂದು ಒದೇನನಿಗೆಂದಳು – ತಚ್ಚೋಳಿ ಮೇಪ್ಪದ ನನ್ನ ಬಂಧು! ಸೀಮಂತವನ್ನು ಗಡದ್ದಾಗಿ ಮಾಡಿಬೇಕೆಂದು ಭಾವನವರು ಹೇಳಿದ್ದಾರೆ. ಒದೇನನೂ ಉತ್ಸಾಹದಿಂದಲೇ ಬೇಕುಬೇಕಾದ ಸಾಮಾನುಗಳನ್ನು ಶೇಖರಿಸುವ ಏರ್ಪಾಡು ಮಾಡಿದ. ಕುಂಞಿಚೀರು ಊರೆಲ್ಲ ಸುತ್ತಿ ಎಲ್ಲರನ್ನೂ ಆಮಂತ್ರಿಸಿದಳು. ಗುರುವಾರ ಬಂದೇ

ಬಂತು! ಬೆಳಗಾಗುತ್ತಿದ್ದಂತೆ ಆಮಂತ್ರಿತರೆಲ್ಲ ಒಬ್ಬೊಬ್ಬರೇ ಬರತೊಡಗಿದರು. ಸೀಮಂತ ಬಹಳ ಅದ್ದೂರಿಯಿಂದ ಚೆನ್ನಾಗಿ ನೆರವೇರಿತು. ಕುಂಞಿಚೀರು ಎಂಟುದಿನ ಕಳೆದು ಒದೇನನಲ್ಲಿ ಕೇಳಿ ಚಾತ್ತೋತ್ತ್‌ನ ತನ್ನ ಮನೆಗೆ ಮರಳಿದಳು. ಪುರಮಾಲ ಕುಂಕಮ್ಮನಿಗೆ ಹತ್ತುತಿಂಗಳು ತುಂಬುತ್ತ ಬಂತು. ಹೆರಿಗೆ ನೋವೂ ಕಾಣಿಸಿಕೊಂಡಿತು. ತಚ್ಚೋಳಿಚ್ಚಿ ಕುಂಬೆ, ಚಾತ್ತೋತ್ತ್ ಚೀರುವಿಗೆ ಕರೆಕಳಿಸಿದಳು. ಚೀರುವೂ ಕೂಡಲೇ ಬಂದು ತಲಪಿದಳು. ಪುರಮಾಲ ಕುಂಕಮ್ಮನಿಗೆ ಸುಖ ಪ್ರಸವವಾಯಿತು. ಬಾಣಂತಿ ನೋಡಲು ನಾಲ್ಕು ಜನರನ್ನು ಚಾತ್ತೋತ್ತ್ ಚೀರು ಗೊತ್ತುಮಾಡಿದಳು. ಹಾಗೆ ಅವರು ಅಲ್ಲಿ ಸುಖವಾಗಿದ್ದರು.

ಅವನನ್ನು ಅಡಗಿಸುವುದು ಸಾಧ್ಯವೇ ಇಲ್ಲ

ತಿರುನೆಲ್ಲಿ ಕೋಟೆಯರಸು ಮಾಡಾಯಿ ಅರಮನೆಯ ಕುಂಞಿಪ್ಪಾರುವಿನಲ್ಲಿ ಕೇಳಿದ – ಎಲ್ಲಿಗೆ ಹೊರಡುತ್ತಿದ್ದಿ ಕುಂಞಿಪ್ಪಾರು? ಅದಕ್ಕೆ ಅವಳೆಂದಳು– ತಿರುನೆಲ್ಲಿ ಕೋಟೆಗೊಡೆಯ ನನ್ನ ಗಂಡ! ತಿರುನೆಲ್ಲಿ ಕೋಟೆಯ ಕೆರೆಗೆ ಮೀಯಲು ಹೊರಟಿದ್ದೇನೆ. ಕೂಡಲೇ ಕೋಟೆಗೊಡೆಯ ಅರಸುವೆಂದ – ಮಾಡಾಯಿ ಅರಮನೆಯ ಕುಂಞಿಪ್ಪಾರು! ನೀನು ಸ್ನಾನಕ್ಕೆ ಅಲ್ಲಿಗೆ ಹೋಗಬೇಡ. ನೀನು ಹೋದೆಯಾದರೆ ಯಾರಾದರೂ ನಿನ್ನನ್ನು ನೋಡಿ ಆಸೆ ಪಡುತ್ತಾರೆ. ಹಾಗೆ ಯಾರಾದರೂ ಆಸೆ ಪಟ್ಟರೆ ನನಗೆ ದೊಡ್ಡ ಸಂಕಟಕ್ಕೆ ಇಟ್ಟುಕೊಳ್ಳುತ್ತದೆ. ಹಾಗಾಗಿ ನೀನು ಕೆರೆಮೀಯಲು ಹೋಗಬೇಡ. ಅದಕ್ಕೆ ಪಾರುವೆಂದಳು – ತಿರುನೆಲ್ಲಿ ಕೋಟೆಗೊಡೆಯ ನನ್ನ ಗಂಡ! ನನ್ನನ್ನು ನೋಡಿ ಯಾರು ಆಸೆ ಪಡುವವರು? ಹಾಗೆ ಆಸೆ ಪಟ್ಟರೂ ಏನು ಪ್ರಯೋಜನ? ನಾನು ಮಾಡಾಯಿ ಕೋಟೆಯಲ್ಲಿ ಹುಟ್ಟಿರುವುದರಿಂದ ನನ್ನನ್ನು ಯಾರೂ ಮುಟ್ಟಲು ಅಸಾಧ್ಯ. ಯಾರಾದರೂ ನೋಡಿ ಆಸೆ ಪಟ್ಟುಕೊಳ್ಳಲಿ. ನನ್ನ ಗಂಡ! ಮಾಡಾಯಿ ಅರಮನೆಯಿಂದ ನಾನು ಬರೆಹ ಕಲಿಯುವುದಕ್ಕಾಗಿ ಹೋಗುತ್ತಿದ್ದ ಕಾಲದಲ್ಲಿ ತಚ್ಚೋಳಿಯ ಒದೇನ ನನ್ನನ್ನು ಕಂಡು ಆಸೆ ಪಟ್ಟಿದ್ದ. ಆಗ ನನಗೆ ಹದಿಮೂರು ವರ್ಷ ಪ್ರಾಯ. ನಾನಿನ್ನೂ ದೊಡ್ಡವಳಾಗಿರಲಿಲ್ಲ. ಕೂಡಲೇ ಅರಸ ಕೇಳಿದ – ಮಾಡಾಯಿ ಅರಮನೆಯ ಕುಂಞಿಪ್ಪಾರು! ತಚ್ಚೋಳಿ ಒದೇನ ನಿನ್ನನ್ನು ಕಂಡಾಗ ನಿನ್ನಲ್ಲಿ ಏನು ಕೇಳಿದ್ದ? ಕೂಡಲೇ ಪಾರು ಎಂದಳು – ತಿರುನೆಲ್ಲಿ ಕೋಟೆಗೊಡೆಯ ನನ್ನ ಗಂಡ! ಒದೇನ ನನ್ನನ್ನು ಕಂಡಾಗ – ಒಂದು ಸಂಜೆ ನಿನ್ನನ್ನು ಊವಂ ಬಯಂಚ್ ಮಾಡಿಕೊಳ್ಳಲೆ? ನಿನ್ನ ಅಮ್ಮನಲ್ಲಿ ಹೋಗಿ ನೀನು ಕೇಳಿ ನನಗೆ ತಿಳಿಸು ಎಂದ. ಅದಕ್ಕೆ ನಾನಂದಿದ್ದೆ – ತಚ್ಚೋಳಿಯ ಒದೇನ! ಅಮ್ಮನಲ್ಲಿ ಯಾಕೆ ಕೇಳಬೇಕು. ನಾನು ಊವಂ ಬಯಂಚ್‌ಗೆ

ಒಪ್ಪುವವಳಲ್ಲ. ತಿರುನೆಲ್ಲಿ ಕೋಟೆಯರಸರು ನನ್ನನ್ನು ಕಾದಿರಿಸಿದ್ದಾರೆ. ಅದನ್ನು ಕೇಳಿದ ಒದೇನ ಹೇಳಿದ್ದ – ಮಾಡಾಯಿ ಅರಮನೆಯ ಕುಂಞಿಪ್ಪಾರು! ತಚ್ಚೋಳಿ ಮನೆಯಲ್ಲಿ ನಾನು ಹುಟ್ಟಿರುವುದು ನಿಜವಾದರೆ ನಿನ್ನನ್ನು ಇಂದಲ್ಲ ಮುಂದಾದರೂ ಊವಂ ಬಯಂಜದೆ ಬಿಡುವವನಲ್ಲ. ಅದಕ್ಕೆ ನಾನಂದಿದ್ದೆ – ತಿರುನೆಲ್ಲಿ ಕೋಟೆಗೊಡೆಯರಸು ನನ್ನನ್ನು ಪುಡಮುರಿ ಮಾಡಿಕೊಳ್ಳುತ್ತಾರೆ. ಆಗ ಅವರಿಗೇ ಊವಂ ಬಯಂಜ್‌ಗೆ ನಾನು ಒಪ್ಪುವವಳು. ಅದಕ್ಕೆ ಅವನಂದಿದ್ದ – ಮಾಡಾಯಿ ಅರಮನೆಯ ಕುಂಞಿಪಾರು! ಈಗ ನಾನೇನೂ ಹೇಳುವುದಿಲ್ಲ. ನೀನು ಬೇಗ ಇಲ್ಲಿಂದ ಹೋಗು. ನೀನು ಅರಸನ ಒಬ್ಬಾಕೆಯೇ ಆಗಿರಬಹುದು. ಹಾಗಿದ್ದೂ ನೀನು ನನಗೆ ಊವಂ ಬಯಂಜ್ ಮಾಡಿ ಕೊಂಡರೆ ಸಾಕು. ಕುಂಞಿಪ್ಪಾರು! ನಾನೀಗ ತೆರಳುತ್ತೇನೆ ಎಂದು ಹೇಳಿ ಹೊರಟು ಹೋಗಿದ್ದ. ಹೀಗೆ ತಿರುನೆಲ್ಲಿಯರಸು ಮತ್ತು ಕುಂಞಿಪ್ಪಾರು ಸುಖದಿಂದ ಇದ್ದಾಗ ಒಮ್ಮೆ ತಿರುನೆಲ್ಲಿಯರಸು ತನ್ನ ಇಪ್ಪತ್ತೆರಡು ಜನ ನಾಯಮ್ಮಾರರೂ ತುಂಬ ಜನರೂ ಸೇರಿ ಅರಸು ಬೇಟೆಗೆ ಹೊರಟರು. ಅವರು ಬೇಟೆಗೆ ಹೋಗುವುದನ್ನು ತಚ್ಚೋಳಿ ಒದೇನ ಕಣ್ಣಾರೆ ಕಂಡ. ಅವನು ಕೇಳಿದ – ತಿರುನೆಲ್ಲಿ ಕೋಟೆಯ ಪಾರುಪತ್ಯಗಾರಾ! ಅರಸರು ಎಲ್ಲಿಗೆ ಹೊರಟಿದ್ದಾರೆ? ಅದಕ್ಕೆ ಪಾರುಪತ್ಯಗಾರನೆಂದ – ತಚ್ಚೋಳಿಯ ಪ್ರಿಯ ಒದೇನ! ತಿರುನೆಲ್ಲಿಯರಸ ಆನೆಮಲೆಗೆ ಸವಾರಿ ಹೊರಟು ಅರಸುಬೇಟೆ ಮಾಡುತ್ತಾರೆ. ಕೂಡಲೇ ಒದೇನ ಕೇಳಿದ – ಅವರು ಹಿಂದಿರುಗುವುದು ಯಾವಾಗ? ಅದಕ್ಕೆ ಪಾರುಪತ್ಯಗಾರನೆಂದ – ಅವರು ಹಿಂತಿರುಗುವುದುದಕ್ಕೆ ನಾಲ್ಕು ದಿನ ಬೇಕಾಗಬಹುದು. ಹಾಗೆ ಹೇಳಿ ಅವನು ಹೊರಟು ಹೋದಾಗ ಒದೇನ ಮನಸ್ಸಲ್ಲೇ ಲೆಕ್ಕ ಹಾಕಿದ – ಮಾಡಾಯಿ ಅರಮನೆಯ ಕುಂಞಿಪ್ಪಾರು ಬರೆಹ ಕಲಿಯಲು ಹೋಗುತ್ತಿದ್ದಾಗ ನಾನು ಆಸೆಪಟ್ಟು ಕೇಳಿಯೂ ಅವಳು ಊವಂ ಬಯಂಜ್‌ಗೆ ಒಪ್ಪಿರಲಿಲ್ಲ. ಅವಳಿಗಾಗ ಹದಿಮೂರು. ಈಗ ಹದಿನಾರಾಯಿತು. ದೊಡ್ಡವಳಾಗಿಯೇ ಆಗಿರುತ್ತಾಳೆ. ಅವಳಲ್ಲಿ ಹೇಳಿದ್ದೆ – ನಿನ್ನನ್ನು ಇಂದಲ್ಲ ಮುಂದಾದರೂ ಊವಂ ಬಯಂಜದೆ ಬಿಡುವವನಲ್ಲವೆಂದು. ಹಾಗಾಗಿ ಊವಂ ಬಯಂಜ್ ಮಾಡಬೇಕು. ಅರಸು ಬೇಟೆಗೆ ಹೋದದ್ದು ಒಳ್ಳೆಯದೇ ಆಯಿತು. ಅರಸನ ವೇಷದಲ್ಲಿ ತಿರುನೆಲ್ಲಿ ಕೋಟೆಗೆ ಹೋಗುತ್ತೇನೆ – ಹೀಗೆ ನೆನೆದು ಅವನು ತಚ್ಚೋಳಿ ಮನೆಗೆ ಹೋದ. ಗೆಳೆಯ ಕಂಡಾಚ್ಚೇರಿ ಚಾಪನಿಗೆ ಎಲ್ಲ ವಿಷಯಗಳನ್ನು ತಿಳಿಸಿದ. ಆಗ ಚಾಪ್ಪನೆಂದ – ನೀನು ತಚ್ಚೋಳಿ ಮನೆಯಲ್ಲಿ ಹುಟ್ಟಿದವನಾದರೆ ಹಾಕಿಕೊಂಡ ಪಂಥದಂತೆ ತಿರುನೆಲ್ಲಿ ಕೋಟೆಯ ಪಾರುವನ್ನು ಊವಂ ಬಯಂಜ್ ಮಾಡಿಕೊಳ್ಳಲೇ ಬೇಕು. ಅರಸು ಹಿಂದಿರುಗುವ ಮೊದಲೇ ಅದನ್ನು ನೀನು ಮಾಡು. ಅರಸನ ವೇಷ ಹಾಕಿಕೊ.

ಅದನ್ನು ಕೇಳಿದ ಒದೇನ ಅರಸನ ವೇಷ ಹಾಕಿಕೊಂಡು ಚಾಪ್ಪನಿಗೆಂದ – ಚಾಪ್ಪಾ! ಇಪ್ಪತ್ತೆರಡು ಮಂದಿ ನಾಯಮ್ಮಾರರೂ ನೀನೂ ನನ್ನ ಜತೆ ಬರಬೇಕು. ಇಂದು ಮುಸ್ಸಂಜೆಯಾಗುವಾಗ ನಾವು ತಿರುನೆಲ್ಲಿಯಲ್ಲಿರಬೇಕು. ಹಾಗೆಯೇ ಎಲ್ಲರೂ ಹೊರಟು ತಿರುನೆಲ್ಲಿಗೆ ಹೋದರು. ಮುಸ್ಸಂಜೆಯಾದಾಗ ಅವರೆಲ್ಲ ಅಲ್ಲಿದ್ದರು. ಒದೇನ ನೇರವಾಗಿ ಪಡುಕೋಣೆ ಪ್ರವೇಶಿಸಿದ. ಹಾಗೆ ಅವನು ಹೋದಾಗ ಕುಂಞಿಪ್ಪಾರು ಕೇಳಿದಳು – ತಿರುನೆಲ್ಲಿಯರಸು ನನ್ನ ಗಂಡ! ನೀವು ಬೇಟೆಗೆ ಹೋಗಿ ಇಷ್ಟು ಬೇಗ ಮರಳಿ ಬಂದಿರಾ? ಮುಸ್ಸಂಜೆ ಹೊತ್ತಿಗೆ ಯಾಕೆ ಗಡಿಬಿಡಿಯಲ್ಲಿ ಮರಳಿದಿರಿ? ಕೂಡಲೇ ಅರಸನೇ ಹೇಳುವ ಹಾಗೆ ಒದೇನ ಹೇಳಿದ – ಮಾಡಾಯಿ ಅರಮನೆಯ ಕುಂಞಿಪ್ಪಾರು! ನಾನು ಮಲಗಿ ನಿದ್ರಿಸಿದಾಗ ನಾನೊಂದು ಕನಸು ಕಂಡೆ. ನೀನು ಅಸೌಖ್ಯದಲ್ಲಿದ್ದಿ. ನೀನು ಮಲಗಿಕೊಂಡು ಅಳುತ್ತಿದ್ದಿ. ನನಗೆ ಫಕ್ಕನೆ ಎಚ್ಚರವಾಯಿತು. ಕೂಡಲೇ ಹೊರಟು ನಾನು ಇತ್ತ ಬಂದೆ. ನಿನ್ನನ್ನೊಮ್ಮೆ ನೋಡಿ ಒಂದು ಸಂಜೆ ಊವಂ ಬಯಂಙ್ ಮಾಡಿಕೊಂಡು ಮಯಮಯ ಬೆಳಕು ಹರಿಯುವಾಗ ಹೋಗಿ ಬಿಡುವವನು ನಾನು. ನಿನ್ನನ್ನು ನೆನೆದು ಇತ್ತ ಬಂದೆ. ಹಾಗೆ ಅಂದು ಅವರು ಸಂತಸದಿಂದ ಸೇರಿದರು. ಮರುದಿನ ಮಯಮಯ ಬೆಳಕು ಹರಿಯುವ ಹೊತ್ತಿಗೆ ಒದೇನ ತಿರುನೆಲ್ಲಿ ಕೋಟೆಯ ಕುಂಞಿಪ್ಪಾರುವಿನ ಕೈಯನ್ನು ಪ್ರೀತಿಯಿಂದ ಹಿಡಿದುಕೊಂಡು ತನ್ನ ಹೆಸರು ಕೆತ್ತಿದ ಉಂಗುರವನ್ನು ಅವಳ ಬೆರಳಿಗೆ ತೊಡಿಸಿದ. ಬಳಿಕ ಎಂದ – ತಿರುನೆಲ್ಲಿ ಕೋಟೆಗೊಡತಿ ಕುಂಞಿಪ್ಪಾರು! ನಿನ್ನನ್ನು ನೆನೆದು ಬಂದೆ ನಾನು. ನಾನಿನ್ನು ಬೇಟೆಗೆ ಹೊರಟು ಹೋಗುವೆ. ಕೂಡಲೇ ಪಾರು ಅದು ಅರಸನೆಂದೇ ತಿಳಿದು ಹೀಗೆಂದಳು – ತಿರುನೆಲ್ಲಿಯರಸು ನನ್ನ ಗಂಡ! ನೀವು ಬೇಟೆಗೆ ಹೋಗಿ ಬೇಗ ಮರಳಿ ಬನ್ನಿ. ನಾನು ಇಲ್ಲಿ ಒಂಟಿಯಾಗಿದ್ದೇನೆ. ಕೂಡಲೇ ಒದೇನನೆಂದ – ತಿರುನೆಲ್ಲಿಗೊಡತಿ ಕುಂಞಿಪ್ಪಾರು! ನಾನು ಬೇಗ ಮರಳಿ ಬರುತ್ತೇನೆ. ನೀನು ಹಾಗೆ ತುಂಬ ನೆನೆದುಕೊಳ್ಳಬೇಡ. ಒದೇನ ಪಾರುವನ್ನು ಬೀಳ್ಕೊಂಡು ಹೊರಟು ಹೋದ. ತಚ್ಚೋಳಿ ಮನೆಗೆ ತಲಪಿದ. ಮನೆಗೆ ಬಂದು ಅಣ್ಣ ಕೋಮ ಕುರುಪ್ಪಿಗೆ ಎಲ್ಲ ವಿಷಯವನ್ನೂ ಹೇಳಿದ. ಅದನ್ನು ಕೇಳಿ ಎಲ್ಲರೂ ನಕ್ಕರು. ಹಾಗೆ ಅವರು ಅಲ್ಲಿರಲು ತಿರುನೆಲ್ಲಿಯರಸು ತನ್ನ ಇಪ್ಪತ್ತೆರಡು ಮಂದಿ ನಾಯನ್ಮಾರರನ್ನೂ ಪಾರುಪತ್ಯಗಾರರನ್ನೂ ಕೂಡಿಕೊಂಡು ಬೇಟೆ ಮುಗಿಸಿ ತಿರುನೆಲ್ಲಿಗೆ ಮರಳಿಬಂದ. ಆಗ ಕುಂಞಿಪ್ಪಾರು ಕೇಳಿದಳು– ತಿರುನೆಲ್ಲಿಯರಸು ನನ್ನ ಗಂಡ! ನೀವು ಬೇಟೆಗೆ ಹೋದವರು ಎರಡು ದಿನ ಆಗುವ ಮುನ್ನವೇ ಒಂದು ಸಂಜೆ ಬಂದು ಊವಂ ಬಯಂಙ್ ಕಳೆದು ಹೊರಡುವಾಗ ಬೇಗನೇ ಬಂದು ಬಿಡುತ್ತೇನೆಂದು ಹೇಳಿದ್ದೀರಿ. ಇಷ್ಟು ತಡವಾದುದು ಯಾಕೆ? ನನ್ನನ್ನು ಒಂಟಿಯಾಗಿ ಬಿಟ್ಟು ಇಷ್ಟು ತಡವಾಗಿ ಬರುವುದೇ?

ಕೂಡಲೇ ಅರಸನೆಂದ – ಮಾಡಾಯಿ ಅರಮನೆಯ ಕುಂಞಿಪ್ಪಾರು! ನಾನು ಬೇಟೆಗೆ ಹೋದವನು ಮಧ್ಯೆ ಇಲ್ಲಿಗೆ ಬಂದಿಲ್ಲ. ಇಂದೇ ಮರಳುತ್ತಿದೇನಲ್ಲ! ಇದೆಲ್ಲ ಎಂಥ ಸುದ್ದಿ? ನೀನು ಏನು ಹೇಳಿತ್ತಿದ್ದಿ? ಕೂಡಲೇ ಪಾರುವೆಂದಳು – ತಿರುನೆಲ್ಲಿಯರಸು ನನ್ನ ಗಂಡ! ನೀವು ಮರಳಿಬಂದು ನನ್ನಲ್ಲಿ ಹೇಳಿದ್ದಿರಲ್ಲ – ನಾನು ಮಲಗಿಕೊಂಡು ನಿದ್ರಿಸುವಾಗ ಕನಸು ಬಿತ್ತು. ನೀನು ಹುಷಾರಿಲ್ಲದೆ ಮಲಗಿ ಅಳುತ್ತಿದ್ದುದನ್ನು ಕಂಡೆ. ಆಗ ಫಕ್ಕನೆ ಎಚ್ಚರವಾಗಿ ಇಲ್ಲಿಗೆ ಬಂದು ಬಿಟ್ಟೆ – ಎಂದಿರಲ್ಲ? ಹಾಗೆ ಹೇಳಿ ಅಂದು ರಾತ್ರೆ ಇಲ್ಲಿಯೇ ಕಳೆದಿರಲ್ಲ? ಮಯಮಯಬೆಳಕು ಹರಿದಾಗ ನೀವು ಎದ್ದು ಹೊರಡುತ್ತ ನನ್ನಲ್ಲಿ ಬೇಗಹೋಗಿ ಮರಳಿ ಬಂದುಬಿಡುತ್ತೇನೆ ಎಂದಿದ್ದೀರಲ್ಲವೆ? ನೀನು ಮನಸ್ಸಲ್ಲೇ ನೆನೆದು ಕೊರಗಬೇಡ, ಉಪವಾಸವಿರಬೇಡ, ಚೆನ್ನಾಗಿ ಊಟಮಾಡು, ನಾನು ಇದ್ದಾಗ ಹೇಗಿರುತ್ತಿಯೋ ಹಾಗೆಯೇ ಇರು, ನಾನು ಬೇಗ ಬಂದು ಬಿಡುತ್ತೇನೆ ಎಂದು ಹೇಳಿದವರು ನನ್ನ ಕೈಹಿಡಿದು ನಿಮ್ಮ ಹೆಸರು ಕೆತ್ತಿದ ಉಂಗುರವನ್ನು ಕಳಚಿ ನನ್ನ ಬೆರಳಿಗೆ ತೊಡಿಸಲಿಲ್ಲವೆ? ಬೇಟೆ ಮುಗಿಸಿ ಬಂದಾಗ ಉಂಗುರವನ್ನು ನಾನು ತೆಗೆದುಕೊಳ್ಳುವೆ ಎಂದಿರಲ್ಲ? ಕೂಡಲೇ ಅರಸನೆಂದ – ಮಾಡಾಯಿ ಅರಮನೆಯ ಕುಂಞಿಪ್ಪಾರು! ಇದೆಲ್ಲ ಏನಿದು ಹೊಸಸಂಗತಿ? ನಾನಿಲ್ಲಿಗಾದರೋ ಬಂದೇ ಇಲ್ಲ. ನಾನು ಒಂದು ವೇಳೆ ಬಂದು ಹಾಗೆ ಉಂಗುರ ತೊಡಿಸಿದ್ದರೆ ನಿನ್ನ ಬೆರಳಲ್ಲಿ ಅದು ಇರಬೇಕಲ್ಲವೆ? ನಾನು ಅದನ್ನೊಮ್ಮೆ ನೋಡಿಬಿಡುತ್ತೇನೆ. ಅದನ್ನು ಕೇಳಿ ಕುಂಞಿಪ್ಪಾರು ಸಿಟ್ಟುಗೊಂಡಳು. ಅವಳಿಗೆ ಅರಸ ಬಂದಿದ್ದುದರಲ್ಲಾಗಲಿ ಉಂಗುರತೊಡಿಸಿದ್ದರಲ್ಲಾಗಲಿ ಸಂಶಯವೇ ಇರಲಿಲ್ಲ. ಅವಳೆಂದಳು – ತಿರುನೆಲ್ಲಿ ಕೋಟೆಯ ಅರಸ ನನ್ನ ಗಂಡ! ನಾನು ಮಾಡಾಯಿ ಅರಮನೆಯಲ್ಲಿ ಹುಟ್ಟಿದವಳಾದರೆ ಸುಳ್ಳು ಹೇಳುವವಳಲ್ಲ. ಸುಳ್ಳು ಯಾಕೆ ಹೇಳಬೇಕು? ನೀವೇ ಬೆರಳಿಗೆ ತೊಡಿಸಿದಿರಿ. ಹಾಗಾಗಿ ನಾನದನ್ನು ಪರೀಕ್ಷಿಸು ವುದಕ್ಕೇ ಹೋಗಿಲ್ಲ. ತಿರುನೆಲ್ಲಿಯರಸನಿಗೆ ಅವಳು ಉಂಗುರವನ್ನು ಕಳಚಿಕೊಟ್ಟಳು. ಆಗ ಅರಸ ಉಂಗುರವನ್ನು ತೆಗೆದುಕೊಂಡು ನೋಡಿದ. ನೋಡಿ ಹೀಗೆಂದ – ತಿರುನೆಲ್ಲಿಗೊಡತಿ ಕುಂಞಿಪ್ಪಾರು! ಇದೆಲ್ಲ ಏನಿದು ಹೊಸಸಂಗತಿಗಳು! ತಚ್ಚೋಳಿ ಒದೇನನ ಉಂಗುರವಿದು! ನಿನ್ನನ್ನು ಒದೇನ ವಂಚಿಸಿದ. ಕುಂಞಿಪ್ಪಾರುವೂ ನೋಡಿದಳು. ನೋಡಿ ಹೀಗೆಂದಳು – ತಿರುನೆಲ್ಲಿಯರಸು ನನ್ನ ಗಂಡ! ನೀವೇ ಎಂದೇ ನಾನು ಭಾವಿಸಿದೆ. ನಿಮ್ಮದೇ ಅಲಂಕಾರವಿತ್ತು. ಹೊತ್ತು ಮುಸ್ಸಂಜೆಯಾಗುತ್ತಿದ್ದಂತೆ ಅವನು ಪಡುಕೋಣೆಗೆ ಬಂದಾಗ ನೀವೇ ಎಂದು ಭಾವಿಸಿದೆ. ನನ್ನನ್ನು ಒದೇನ ವಂಚಿಸಿಬಿಟ್ಟ. ನಾನು ಹದಿಮೂರರವಳಾಗಿದ್ದಾಗ ಕಲಿಯಲು ಹೋಗುತ್ತಿದ್ದ ಕಾಲದಲ್ಲಿ ಅವನು ಹೇಳಿದ್ದ ಮಾತನ್ನು ಈಗ ಸಾಧಿಸಿ ಎಂಥ ವಂಚನೆ ಮಾಡಿಬಿಟ್ಟ! ಆಗ ತಿರುನೆಲ್ಲಿಯ

ರಸನೆಂದ–ನೀನು ಒದೇನನನ್ನು ಏನೂ ಹೇಳಬೇಡ. ಅವನು ಆ ಮಾತುಗಳನ್ನು ಎಲ್ಲಿಯಾದರೂ ಕೇಳಿದನಾದರೆ ನನ್ನನ್ನು ಜೀವಸಹಿತ ಬಿಡಲಾರ. ಇದು ನನಗೆ ಮಾಡಿದ ವಂಚನೆ. ಅವನನ್ನು ವಂಚಿಸುವವನೂ ಇದ್ದಾನು. ಕುಂಞಿಪ್ಪಾರು! ನೀನು ಅಳಬೇಡ ಈಗ. ತಿಳಿಯದೆ ನಡೆದುಹೋದ ಸಂಗತಿ. ಹಾಗಾಗಿ ನಾನೇನೂ ಹೇಳುವುದಿಲ್ಲ. ಆಗ ಪಾರು ಎಂದಳು – ತಚ್ಚೋಳಿಯ ಒದೇನನನ್ನು ಅಡಗಿಸುವವರು ಯಾರೂ ಇಲ್ಲವಲ್ಲ! ಎಲ್ಲರೂ ಹಾಗೆ ಹೆದರಿದ್ದರಿಂದಲೇ ಅವನು ಇಷ್ಟು ಉರಿಯುತ್ತಿರುವುದು. ನೀವು ಅವನನ್ನು ಒಮ್ಮೆ ಬಂಧಿ. ಕೂಡಲೇ ಅರಸನೆಂದ– ತಿರುನೆಲ್ಲಿಗೊಡತಿ ಕುಂಞಿಪ್ಪಾರು! ತಚ್ಚೋಳಿ ಕಣ್ಮಣಿ ಬಾಲಒದೇನನಿಗೆ ಯಾರು ಬುದ್ಧಿಕಲಿಸುವುದು? ಅರಸರೂ ಪಾರುಪತ್ಯಗಾರರೂ ಭಟ್ಟರೂ ನಂಬ್ಯಾರರೂ ಎಲ್ಲರೂ ಅವನಿಗೆ ಹೆದರುವವರೇ! ಹಾಗಾಗಿ ಅವನನ್ನು ಅಡಗಿಸುವುದು ಹೇಗೆ? ಅವನನ್ನು ಅಡಗಿಸುವುದು ಸಾಧ್ಯವೇ ಇಲ್ಲ! ಹೀಗೆ ಅವರು ಅಲ್ಲಿ ಜತೆಯಲ್ಲಿದ್ದರು. ಜತೆಯಲ್ಲಿರುತ್ತ ಸುಖವಾಗಿದ್ದರು.

ತಚ್ಚೋಳಿ ಮೇಪ್ಪದ ಒದೇನನೇ ನನ್ನ ಗಂಡ!

ಕೋಟೆಯನ್ನು ಆಳುವ ಅರಸು ನಿರೂಪ ಹೊರಡಿಸಿದ – ಕೊಡುಮಲೆಯ ಒಡೆಯ ಕುಂಞಿಕಣ್ಣ ನಮಗೆ ಕೊಡಬೇಕಾದ ಗೇಣಿಯ ಪಚ್ಚೆ ಹೆಸರನ್ನೂ ಸಂದಾಯ ಮಾಡುತ್ತಿಲ್ಲ, ಹೊಸ ಹಣವನ್ನೂ ಕೊಡುತ್ತಿಲ್ಲ. ಮೂರುವರ್ಷ ಹೀಗೇ ಕಳೆದಾಗ ಕೋಟೆಯರಸು ಮತ್ತೆ ಹೀಗೆಂದ–ಸಮರ್ಥನಾದ ನಾಯರೊಬ್ಬನನ್ನು ಕಳುಹಿಸಿ ಕೊಡು ಮಲೆ ಕುಂಞಿಕಣ್ಣನಿಂದ ಎಳ್ಳಿನ ಹೊಲದಲ್ಲಿ ಕಳೆಹುಲ್ಲು ಕೀಳಿಸಬೇಕು. ಸುಗ್ಗಿಯ ಬೀಜ ಮುಡಿಕಟ್ಟಿಸಬೇಕು. ಉಪವಾಸ ಕೆಡವಿ ಅವನನ್ನು ಕೊಲ್ಲಬೇಕು. ಇದಕ್ಕೆ ಯಾರನ್ನು ಕಳುಹಿಸುವುದು? ಅದಕ್ಕೆ ಕೃಷ್ಣನ್ ಕುಟ್ಟಿ ಎಂಬ ಪಾರುಪತ್ಯಗಾರ ಬಿನ್ನವಿಸಿಕೊಂಡ – ಪ್ರಭೂ, ಕಡತ್ತನಾಟ್ಟ್ ಪರಂಬಲ್ಲಿ ಹೆಸರುವಾಸಿಯಾದ ತಚ್ಚೋಳಿ ಕುಂಞ್ಯೋದೇನನಿಗೆ ಒಂದು ಓಲೆ ಕಳಿಸಿದರೆ ಅವನಿಲ್ಲಿ ಬಂದಾನು. ಅವನು ಹೋಗಿ ಗೇಣಿ ವಸೂಲು ಮಾಡಿಯಾನು. ಇದನ್ನು ಕೇಳಿದ ಅರಸು ಅಪ್ಪಣೆ ಮಾಡಿದ – ಲೆಕ್ಕಿಗ ಗೋಪಾಲಾ, ಕಣ್ಣಾ! ಹೋಗಿ ಓಲೆಯನ್ನೂ ಕಂಠವನ್ನೂ ತನ್ನಿ. ಅವರು ಓಲೆಕಂಠಗಳನ್ನು ತಂದರು. ಅರಸನ ಮುಂದೆ ನಿಂತರು. ಅರಸನು ವಾಚಕವನ್ನು ಹೇಳುತ್ತಿದ್ದಂತೆ ಇವರು ಬರೆಯಲು ಸಿದ್ಧರಾದರು. ಅರಸು ಅಪ್ಪಣೆ ಕೊಡಿಸಿದ: ಇಬ್ಬರು ಉಲಾದಿರಿ ಭಟ್ಟರೇ, ನೀವು ಕಡತ್ತನಾಟ್ ಪರಂಬ್‌ಗೆ ಹೋಗಿ ಅಲ್ಲಿ ತಚ್ಚೋಳಿಯ ಒದೇನನಿಗೆ ಒಂದು ಓಲೆಯನ್ನು ತಲಪಿಸಬೇಕು. ಅದನ್ನು ಕೇಳಿದ ಭಟ್ಟರು ಓಲೆಯನ್ನು ತೆಗೆದುಕೊಂಡು ಒಂದೇ ಸಮನೆ ನಡೆಯುತ್ತ ಪೆರಿಂಜೊಳನಾರ್ ಹೊಳೆದಾಟಿ ಕಾಪ್ಪುಂಕರ ಎಂಬಲ್ಲಿಗೆ ತಲಪಿದಾಗ ಅವರು ಅಲ್ಲಿ ಆಡುತ್ತಿದ್ದ ಮಕ್ಕಳಲ್ಲಿ ಕೇಳಿದರು: ಮಕ್ಕಳೇ, ತಚ್ಚೋಳಿ ಮೇಪ್ಪ ಎಲ್ಲಿದೆ ಮಕ್ಕಳೇ? ಅದಕ್ಕೆ ಮಕ್ಕಳಲ್ಲೊಬ್ಬನೆಂದ – ನನ್ನ ಬೆರಳಿನ ತುದಿ ನೋಡಿ! ಅಲ್ಲಿ ಕಾಣುವುದೇ ತಚ್ಚೋಳಿ ಮೇಪ್ಪ. ಇಬ್ಬರು ಭಟ್ಟರೂ ಅದೇ ಕಡೆಗೆ ಮುಂದುವರಿದು

ಅಲ್ಲಿಗೆ ತಲಪಿದರು. ತಚ್ಚೋಳಿಯ ಕಣ್ಮಣಿ ಬಾಲ ಒದೇನ ಅವರಲ್ಲಿ ಕೇಳಿದ – ಇಬ್ಬರು ಉಲಾದಿರಿ ಭಟ್ಟರೇ, ನೀವು ಎಲ್ಲಿಂದ ಬಂದಿರಿ? ಅದಕ್ಕೆ ಅವರು ಏನೂ ಉತ್ತರವೀಯದೆ ತಮ್ಮಲ್ಲಿದ್ದ ಓಲೆಯನ್ನು ತೆಗೆದುಕೊಟ್ಟರು. ಒದೇನ ಓಲೆಯನ್ನು ತೆಗೆದುಕೊಂಡು ಅದರಲ್ಲಿನ ವಾಚಕಗಳನ್ನು ಓದಿಕೊಂಡ. ಬಳಿಕ ಅವರಿಗೆಂದ – ಭಟ್ಟರೇ, ನೀವು ಹಿಂತಿರುಗಿ ಹೋಗಿ. ನಿಮ್ಮ ಹಿಂದೆಯೇ ನಾನೂ ತಲಪಿದೆ. ಅದನ್ನು ಕೇಳಿದ ಭಟ್ಟರು ಕೂಡಲೆ ಹಿಂತಿರುಗಿದರು. ಒದೇನ ಮೇಲೆದ್ದು ಅಣ್ಣ ಕೋಮ ಕುರುಪ್ಪ್ ಇದ್ದಲ್ಲಿಗೆ ಹೋದ. ಅವನ ಕಾಲ ಬಳಿ ನಿಂತುಕೊಂಡ. ಬಳಿಕ ಎಂದ – ನನ್ನ ಅಣ್ಣ, ಕೇಳಬೇಕು. ಕೋಟೆ ಯಾಳುವ ಅರಸು ನನಗೆ ಒಂದು ರಾಜಾಜ್ಞೆಯ ಓಲೆ ಕಳಿಸಿದ್ದಾರೆ. ಕೊಡುಮಲೆ ಮೂಡುಮನೆ ಕಣ್ಣನಿಂದ ಅರಮನೆಗೆ ಸಂದಾಯವಾಗಬೇಕಾದ ಗೇಣಿಯನ್ನು ವಸೂಲು ಮಾಡಬೇಕಂತೆ. ಅದಕ್ಕೆ ತಡಮಾಡದೆ ಕೋಮಕುರುಪ್ಪ್ ಹೇಳಿದ – ನನ್ನ ತಮ್ಮ! ನನ್ನ ಮುದ್ದು ತಮ್ಮ! ನೀನು ಕೊಡುಮಲೆಗೆ ಗೇಣಿ ವಸೂಲಿಗಾಗಿ ಹೋಗಲೇ ಬೇಡ. ಕೊಡುಮಲೆ ಮೂಡುಮನೆಯಲ್ಲಿನ ಕುಂಞಿಕುಂಕಿ ಏಳುಮಲೆಗಳಿಗೂ ಒಡತಿ. ಆಕೆ ಸ್ವತಃ ಅಪ್ಪನಿಗೂ ಅಡಗಿದವಳಲ್ಲ. ನೀನು ಹೋಗಿ ಕುಂಕಿಯನ್ನು ಅಡಗಿಸಬೇಕಾಗಿಲ್ಲ. ನೀನು ಕೊಡುಮಲೆಗೆ ಹೋದರೆ ಕುಂಕಿಯನ್ನು ಕೊಲ್ಲದೆ ಬಿಡುವವನಲ್ಲ. ಕೊಡುಮಲೆಯ ಏಳು ಶಿಖರಗಳೂ ಹತ್ತು ನಾಡುಗಳೂ ಕುಂಕಿಗೆ ಅಧೀನವಾಗಿವೆ, ಮುದ್ದು ತಮ್ಮ. ಇದನ್ನೆಲ್ಲ ಕೇಳುತ್ತಿದ್ದ ಒದೇನ ಅಣ್ಣನಿಗೆಂದ– ನನ್ನ ಅಣ್ಣ ಕೋಮ ಕುರುಪ್ಪೇ, ಕೇಳಿ. ಕುಂಕಿಯನ್ನು ಕೊಲ್ಲುವುದಕ್ಕಾಗಿ ನಾನು ಹೋಗುತ್ತಿದ್ದೇನೆಯೆ? ನಾನು ಅಲ್ಲಿಂದ ಗೇಣಿ ವಸೂಲಿಗಾಗಿ ಹೋಗುತ್ತಿದ್ದೇನಲ್ಲವೆ?

ಒದೇನ ಬೇಗಬೇಗ ಎಣ್ಣೆಸ್ನಾನ ತೀರಿಸಿದ. ಅಲಂಕರಿಸಿಕೊಂಡ. ಹುಲಿಯ ಚಿತ್ರವುಳ್ಳ ಕುಂತ ಹಿಡಿದ ಕಂಡಾಚ್ಚೇರಿ ಚಾಪ್ಪ ಮುಂದೆ, ಕರ್ಣಧಾರನಾದ ಒದೇನ ಹಿಂದೆ. ಇಬ್ಬರೂ ಸೇರಿಕೊಂಡು ಹೊರಟರು. ಹಾಗೇ ನಡೆಯುತ್ತ ಸಾಗಿ ಕೋಟೆಯ ಒಳಗೆ ಅವರು ತಲಪಿದರು. ಕೋಟೆಯ ಅರಸು ಇವರನ್ನು ಕಂಡಾಗ ಇವರು ಅರಸನ ತಿರುವಡಿಗೂ ಮುಡಿಗೂ ಸಿರಿಯೊಡಲಿಗೂ ಕೈ ಜೋಡಿಸಿ ವಂದಿಸಿದರು. ಅರಸು ಹೀಗೆ ಆಜ್ಞಾಪಿಸಿದ – ತಚ್ಚೋಳಿಯ ಕಣ್ಮಣಿ ಬಾಲ ಒದೇನ! ಕೊಡುಮಲೆಯನ್ನು ಆಳುತ್ತಿರುವ ಕುಂಞಿಕಣ್ಣ ಸುಮಾರು ಮೂರು ವರ್ಷಕ್ಕಿಂತಲೂ ಹೆಚ್ಚಾಯ್ತು, ಗೇಣಿಯಾಗಿ ಕೊಡುವ ಪಚ್ಚೆ ಹೆಸರನ್ನಾಗಲಿ ಹೊಸ ಹಣವನ್ನಾಗಲಿ ಕೊಟ್ಟಿಲ್ಲ. ಸಮರ್ಥನಾದ ಒಬ್ಬ ನಾಯರನ್ನು ಕಳುಹಿಸಿ ಕಣ್ಣನಿಂದ ಎಳ್ಳಿನ ಹುಲ್ಲು ಕೀಳಿಸಬೇಕು, ಸುಗ್ಗಿ ಬತ್ತದ ಬೀಜವನ್ನು ಮುಡಿಕಟ್ಟಿಸಬೇಕು, ಉಪವಾಸ ಕೆಡವಿ ಕೊಲ್ಲಿಸಬೇಕು ಎಂದು ನಿರ್ಧರಿಸಿದ್ದೇನೆ. ನೀನು

ಹೋಗಿ ಗೇಣಿ ವಸೂಲು ಮಾಡಬೇಕು. ಗೇಣಿ ವಸೂಲಿ ಮಾಡಿ ಬಂದೆಯಾದರೆ ಗೇಣಿಯಲ್ಲಿ ಅರ್ಧ ನಿನಗೆ ಕೊಡುತ್ತೇನೆ, ಒದೇನ.

ತಚ್ಚೋಳಿಯ ಕಣ್ಮಣಿ ಬಾಲ ಒದೇನ ಪುನಃ ಅರಸನಿಗೆ ನಮಸ್ಕರಿಸಿದ. ಹಾಗೆ ಎಲ್ಲೂ ನಿಲ್ಲದೆ ನಡೆಯುತ್ತ ಸಾಗಿ ಅವರು ಕೊಡುಮಲೆ ತಲಪಿದರು. ಕೊಡುಮಲೆ ಮೂಡುಮನೆಗೆ ತಲಪಿದಾಗ ಕೊಡುಮಲೆ ಮೂಡುಮನೆ ಕುಂಞಿಕುಂಕಿ ಕಾಲುಗಳನ್ನು ಚಾಚಿ ಅಂಗಾಲುಗಳು ಮುಂದೆ ಕಾಣುವಂತೆ ಕುಳಿತು ರಾಮಾಯಣ ಕಥೆಯನ್ನು ಹಾಡುತ್ತಿದ್ದಾಳೆ! ಒದೇನ ಕೋಪ ಬಂದವನಂತೆ ನಟಿಸಿದ. ಕಂಡಾಚ್ಚೇರಿ ಚಾಪ್ಪ ಹೇಳಿದ – ನನ್ನ ಧನೀ, ನನ್ನ ಯಜಮಾನ! ಸಿಟ್ಟಾದರೆ ಯಾರನ್ನೂ ನೀವು ಲೆಕ್ಕಿಸುವುದಿಲ್ಲ. ಅವನು ಮತ್ತೂ ಹೇಳಿದ – ಕೊಡುಮಲೆಯನ್ನು ಆಳುತ್ತಿರುವ ಕುಂಕಿಯಮ್ಮ! ಗಂಡಸರಿಗೆ ಇಲ್ಲಿ ಗೌರವ ಕೊಡುವ ಪದ್ಧತಿ ಇಲ್ಲವೆ? ಕೂಡಲೆ ಕುಂಞಿಕುಂಕಿಯೆಂದಳು – ಘಟ್ಟದ ಕೆಳಗೆ ಎಷ್ಟೊಂದು ಹೊಲೆಯರಿಲ್ಲ? ಯಾರೋ ಎಲ್ಲ ಇಲ್ಲಿಗೆ ಬಂದರೆ ಯಾರಿಗೆಲ್ಲ ಆಚಾರ ಮಾಡಬೇಕು? ಕಂಡಾಚ್ಚೇರಿ ಚಾಪ್ಪ ಕೂಡಲೇ ಹೇಳಿದ – ಕೊಡುಮಲೆ ಆಳುತ್ತಿರುವ ಕುಂಕಿಯಮ್ಮ, ನೀವು ಅನ್ನುತ್ತಿರುವುದಾದರೂ ಏನು? ಘಟ್ಟದ ಕೆಳಗೆಲ್ಲ ಹೆಸರುವಾಸಿಯಾದ ಯಜಮಾನರು ಅವರು. ನನ್ನ ಧನಿ, ನನ್ನ ಯಜಮಾನ ಅವರು. ಕುಂಞಿಕುಂಕಿ ಕೂಡಲೆ ಎಂದಳು – ನಿನ್ನ ಧನಿ ಎಂಥ ಧನಿಯೋ? ಬೇಟ್ವರ ಧನಿಯೋ ಎರವರ ಧನಿಯೋ? ಅದಕ್ಕೆ ಚಾಪನೆಂದ – ಬೇಟ್ವರ ಧನಿಯೂ ಅಲ್ಲ, ಎರವರ ಧನಿಯೂ ಅಲ್ಲ. ತಚ್ಚೋಳಿ ಒದೇನಪ್ಪ ಧನಿ. ಅಂಥ ಹೆಸರಾದ ಧನಿ. ಕುಂಞಿಕುಂಕಿ ಕೂಡಲೇ ಅಂದಳು – ಕೆಳಗಿನಿಂದ ಬಂದಿರುವ ನಾಯರೇ, ಕೇಳು! ನಾನು ಯಾರಿಗೂ ಆಚಾರ ಮಾಡಿ ಮರ್ಯಾದೆ ತೋರಿಸುವವಳಲ್ಲ. ಕೊಡುಮಲೆ ಆಳುವ ಕುಂಞುಕುಂಕಿ ಎದ್ದು ಒಳಗೆಹೋದಳು. ಒದೇನನೂ ಕಂಡಾಚ್ಚೇರಿ ಚಾಪ್ಪನೂ ತೆಂಗಿನ ಓಲೆಯ ಸೀಳಲ್ಲಿ ಕುಳಿತರು (ಪ್ರತಿಭಟನೆಯ ಸಾಂಕೇತಿಕ ಕ್ರಿಯೆ).

ಸಂಜೆಯ ನೆರಳು ಹತ್ತು ಹೆಜ್ಜೆ ನೀಳವಾಗಿತ್ತು. ಕೊಡುಮಲೆ ಆಳುವ ಕುಂಞಿಕಣ್ಣ ಒದೇನನನ್ನು ಕಣ್ಣಾರೆ ಕಂಡಾಗ ಹೀಗೆಂದ – ತಚ್ಚೋಳಿ ಒದೇನ, ನನ್ನ ಪ್ರಿಯಗೆಳೆಯ! ನೀನು ನನ್ನ ಕೊಡುಮಲೆಗೆ ಬಂದು ಓಲೆಯ ಸೀಳಲ್ಲಿ ಕುಳಿತುಕೊಳ್ಳಬೇಕಾಯಿತೆ? ಮೆಟ್ಟಲೇರಿ ಬಂದು ಕುಳಿತುಕೊ, ಒದೇನ. ಅದಕ್ಕೆ ಒದೇನನೆಂದ – ಕೊಡುಮಲೆ ಆಳುವ ಕುಂಞಿಕಣ್ಣಾ, ನಾನು ನಿನ್ನ ಕೊಡುಮಲೆಗೆ ಬಂದಾಗ ಕೊಡುಮಲೆ ಆಳುವ ಕುಂಞಿಕುಂಕಿ ಎದ್ದು ನಿಂತು ಗೌರವದ ಆಚಾರ ಸಲ್ಲಿಸಲಿಲ್ಲವಲ್ಲ? ಅದಕ್ಕೆ ಕುಂಞಿಕಣ್ಣನೆಂದ – ತಚ್ಚೋಳಿ ಒದೇನ, ನನ್ನ ಪ್ರಿಯಗೆಳೆಯ! ಕೊಡುಮಲೆಯನ್ನು ಆಳುವ ಕುಂಞಿಕುಂಕಿ

ಅಪ್ಪನಿಗೂ ಅಡಗಿದವಳಲ್ಲ. ಒದೇನ ಕೂಡಲೆ ಎಂದ – ಕೊಡುಮಲೆ ಆಳುವ ಕುಂಞಿಕಣ್ಣ, ಅವಳನ್ನು ಹಿಡಿದು ನನ್ನ ಕೈಗೆ ಕೊಟ್ಟರೆ ನಾನು ಒಂದು ಕೋಲಿನಿಂದ ಅವಳನ್ನು ಅಡಗಿಸುತ್ತೇನೆ ನೋಡು. ಒದೇನ ಮತ್ತೂ ಮುಂದುವರಿಸಿದ – ಕೊಡುಮಲೆ ಆಳುವ ಕುಂಞಿಕಣ್ಣ, ಕೊಡುಮಲೆ ಆಳುತ್ತಿರುವ ಕುಂಕಿಯನ್ನು ನನಗೆ ಊವಂ ಪೊರುಕ್ಕಲ್ ಮಾಡಿಕೊಡು. ಕೊಡುಮಲೆ ಆಳುವ ಕುಂಕಿ ಈ ಮಾತುಗಳನ್ನು ಕೇಳಿಯೂ ಅದನ್ನು ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ. ಊವಂ ಪೊರುಕ್ಕಲ್‌ನ ಬಳಿಕ ಅವಳು ಪಡಿಂಞಾಟ್ಟಕ್ಕೇ ಹೋಗಲಿಲ್ಲ. ಆ ಕಾರ್ಯಕ್ರಮ ಕಳೆದು ಮರುದಿನ ಮುಂಜಾನೆ ಹೊತ್ತಿಗೆ ಕೊಡುಮಲೆ ಮೂಡುಕೋಣೆಯಲ್ಲಿ ಕುಂಞಿಕುಂಕಿ ಊವಂಪೊರುಕ್ಕಲ್‌ನ ಪೊಡಮುರಿಯ ರೇಶ್ಮೆ ಸೀರೆಯನ್ನು ನಡು ಅಂಗಳಕ್ಕೆ ಬಿಸಾಡಿ ತುಳಿದಳು. ತಚ್ಚೋಳಿ ಒದೇನ ಎಲ್ಲವನ್ನೂ ನೋಡಿದ. ಹಾಗೆ ನೋಡಿ ಅವಳನ್ನು ಹಿಡಿದುಕೊಳ್ಳಲು ಹೋದ. ಹಾಗೆ ಅವನು ಹೋದಾಗ ಅವಳು ಅವನನ್ನು ಕಣ್ಣಾರೆ ಕಂಡಳು. ಕೊಡುಮಲೆ ಆಳುವ ಕುಂಞಿಕುಂಕಿ ತಪ್ಪಿಸಿಕೊಂಡು ಕರಿಮಲೆ ಏರಿದಳು. ಅದನ್ನು ಕಂಡ ಒದೇನನೂ ಮಲೆ ಏರಿದ. ಅವನು ಕರಿಮಲೆ ಏರಿದಾಗ ಕುಂಕಿ ತೊಡಚ್ಚೇರಿಯನ್ನು ಇಳಿದಳು. ಕುಂಕಿ ಇನ್ನೊಂದು ಮಲೆ ಏರಿದಾಗ ಒದೇನ ಕರಿಮಲೆ ಇಳಿಯುತ್ತಿದ್ದ. ಅವಳು ಆ ಮಲೆಯನ್ನೂ ಇಳಿದು ಹೋದಳು. ಹೋಗಿ ಕೊಡುಮಲೆ ಮೂಡುಮನೆಗೆ ಬಂದಳು. ಕನ್ನಡಿಯನ್ನೂ ಉಮಿಕ್ಕರಿಯನ್ನೂ ತೆಗೆದುಕೊಂಡು ಏತದ ಕಟ್ಟೆಯ ಮೆಟ್ಟಿಲಲ್ಲಿ ಕುಳಿತಳು. ಅಲ್ಲಿ ಕುಳಿತು ಹಲ್ಲುಜ್ಜುತ್ತಿದ್ದಳು. ಅವಳನ್ನು ಹಿಡಿಯಲು ಒದೇನನು ಹೋದಾಗ ಅದನ್ನು ಕಣ್ಣಾರೆ ಕಂಡು ಬಾವಿಗೆ ಹಾರಿದಳು. ಹಾಗೆ ಅವಳು ಬಾವಿಗೆ ಹಾರಿದಾಗ ಒದೇನ ಎಲ್ಲರಿಗೂ ಕೇಳಿಸುವಂತೆ ಹೇಳಿದ – ಕಂಡಾಚ್ಚೇರಿ ಚಾಪ್ಪಾ, ಪಾಂದವನ್ನು (ತೆಂಗಿನ ಹೆಡೆಯ ಹೊಟ್ಟೆಭಾಗದ ನಾರು) ಕತ್ತರಿಸಿ ತೆಗೆದುಕೊಂಡು ಬಾರೋ. ಅದನ್ನು ಕೇಳಿದ ಕಂಡಾಚ್ಚೇರಿ ಚಾಪ್ಪನು ಪಾಂದ ಕತ್ತರಿಸಿಕೊಂಡು ಹೋದ. ಅದನ್ನು ಬಾವಿಗೆ ಎಸೆದು ಕೊಟ್ಟಾಗ ಒದೇನನು ಅವಳ ಕೂದಲನ್ನು ಸುರುಟಿ ಹಿಡಿದು ಪಾಂದವನ್ನು ಅವಳ ಕೊರಳಿಗೆ ಕುಣಿಕೆ ಹಾಕಿದ, ಪಾಂದವನ್ನು ಹಾಗೆ ಕುಣಿಕೆ ಹಾಕಿ ಅವಳಲ್ಲಿ ಒದೇನ ಕೇಳಿದ – ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ಕೊಡುಮಲೆ ಆಳುವ ಕುಂಕಿಯನ್ನು ಹಾಗೆ ನಾನು ಬಾವಿಯಿಂದ ಹಿಡಿದು ಕೊಟ್ಟರೆ ಆಕೆಯನ್ನು ಎಷ್ಟು ಕರಿಮಲೆಗಳನ್ನು ನೀನು ಇಳಿಸುವಂತೆ ಮಾಡುತ್ತಿ? ಕೂಡಲೆ ಚಾಪ್ಪನೆಂದ – ನನ್ನ ಧನೀ, ನನ್ನ ಯಜಮಾನ! ಕೊಡುಮಲೆ ಆಳುವ ಕುಂಕಿಯಮ್ಮನನ್ನು ನೀವು ಬಾವಿಯಿಂದ ಹಿಡಿದುಕೊಟ್ಟರೆ ಏಳು ಕರಿಮಲೆ ಇಳಿಯುವಂತೆ ಮಾಡುತ್ತೇನೆ. ತಚ್ಚೋಳಿಯ ಕಣ್ಮಣಿ ಒದೇನನು ಕೊಡುಮಲೆ

ಯನ್ನಾಳುವ ಕುಂಞಿಕುಂಕಿಯನ್ನು ಬಾವಿಯಿಂದ ಬಂಧಿಸಿಕೊಟ್ಟ. ಕಂಡಾಚ್ಚೇರಿ ಚಾಪ್ಪನು ಕುಂಕಿಯನ್ನು ಕರೆದುಕೊಂಡು ಹೊರಟ. ಒದೇನ ಬಾವಿಯಿಂದ ಮೇಲೆ ಬಂದ.

ಒದೇನ ಹೇಳಿದ – ಕೊಡುಮಲೆಯನ್ನಾಳುವ ಕುಂಞಿಕಣ್ಣಾ! ಕೋಟೆಯನ್ನಾಳುವ ಅರಸರಿಗೆ ಕೊಡಬೇಕಾದ ಪಚ್ಚೆಹೆಸರನ್ನಾಗಲಿ ಹೊಸ ಹಣವನ್ನಾಗಲಿ ಗೇಣಿಯಾಗಿ ಕೊಡುವುದನ್ನು ಕೊಟ್ಟುಬಿಡು. ಅದನ್ನು ಕೇಳಿದ ಕುಂಞಿಕಣ್ಣನು ಗೇಣಿಯನ್ನು ಸಂಗ್ರಹಿಸಿ ಕೊಟ್ಟ. ಒದೇನನೆಂದ –ಕೊಡುಮಲೆಯನ್ನಾಳುವ ಕುಂಞಿಕಣ್ಣಾ! ಅಂದು ನಾನು ಕೊಡುಮಲೆಗೆ ಬಂದು ಉಪವಾಸವಿದ್ದೆ, ಕುಂಞಿಕಣ್ಣಾ. ನನಗೆ ಅದರ ಪರಿಹಾರವಾಗಿ ಹೊನ್ನನ್ನು ಬೇರೆ ಕೊಡು. ಕುಂಞಿಕಣ್ಣ ಅದನ್ನೂ ಕೊಟ್ಟ. ಒದೇನ ಹೊರಡಲು ಅಣಿಯಾದ.

ಆಗ ಕುಂಞಿಕಣ್ಣನೆಂದ–ತಚ್ಚೋಳಿಯ ಕಣ್ಮಣಿ ಬಾಲ ಒದೇನ! ಕೊಡುಮಲೆ ಮೂಡುಮನೆ ಕುಂಕಿಯನ್ನು ಕೊಲ್ಲದೆ ಅಡಗಿಸಬೇಕು. ಏಳುಮಲೆಗಳಿಗೂ ಒಬ್ಬಳೇ ಕುಂಕಿ ಇರುವುದು. ಒದೇನ ಕೂಡಲೆ ಹೊರಟ. ಕಂಡಾಚ್ಚೇರಿ ಚಾಪ್ಪನು ಕುಂಕಿಯನ್ನು ಏಳು ಕರಿಮಲೆಗಳನ್ನು ಇಳಿಸಿದ್ದ. ಅವನೆಂದ – ನನ್ನ ಧನೀ, ನನ್ನ ಯಜಮಾನ! ನೀವು ಹೋಗುವಾಗ ಕಾಡುಕರಿಬಳ್ಳಿಯ (ಮಾದೆರಿ) ಕೋಲು ಸಿಕ್ಕಿದರೆ ಅದನ್ನು ಕತ್ತರಿಸಿ ಬಗ್ಗಿಸಿ ಇರಿಸಿಕೊಳ್ಳಬೇಕು. ಬಿಳಿತೊಗಲಿನ ಹೆಣ್ಣನ್ನು ಕಂಡರೆ ಮೊಡಮುರಿ ಮಾಡಿ ಜತೆಗೆ ಕರೆದುಕೊಳ್ಳಬೇಕು. ಒದೇನ ಕಾಡುಕರಿಬಳ್ಳಿಯ ಕೋಲು ಸಿದ್ಧಪಡಿಸಿಕೊಂಡ. ಹಾಗೆ ನಡಿಗೆ ಮುಂದುವರಿಸಿ ಅವರು ತಚ್ಚೋಳಿಯ ಮೇಪ್ಪಕ್ಕೆ ತಲುಪಿದರು. ಒದೇನ ಕಾಡು ಕರಿಬಳ್ಳಿಯ ಕೋಲನ್ನು ಅಟ್ಟದ ಅಡ್ಡದ ಸಂದಿನಲ್ಲಿಟ್ಟಿದ್ದ. ತಚ್ಚೋಳಿ ಒದೇನನು ಹದಿನಾಲ್ಕು ಮೊಳದ ಸೀರೆಯಂಥ ಕೊಡುಮಲೆ ಕುಂಕಿಯ ತಲೆಗೂದಲನ್ನು ಒಂದು ಒರಳ ಮೇಲೆ ಇಟ್ಟು ಕತ್ತರಿಸಿದ. ತಚ್ಚೋಳಿ ಒದೇನ ಮತ್ತು ಕಂಡಾಚ್ಚೇರಿ ಚಾಪ್ಪರು ಚಾಂಞೋತ್ತ್‌ಗೆ ಹೋದರು.

ಹಾಗೆ ತುಂಬ ದಿವಸ ಕಳೆಯಿತು. ಚಾಪ್ಪ ಮೇಪ್ಪಕ್ಕೆ ಹಿಂದಿರುಗಿದ. ಕುಂಞಿಕುಂಕಿ ಮುಂಬಾಗಿಲಲ್ಲೇ ಕುಳಿತಿದ್ದಳು. ಅದನ್ನು ಕಂಡು ಕಂಡಾಚ್ಚೇರಿ ಚಾಪ್ಪ ಸಿಟ್ಟಾದ. ಅವನು ಕೇಳಿದ –ಕೊಡುಮಲೆ ಆಳುವ ಕುಂಕಿಯಮ್ಮಾ! ಏನು ವಿಶೇಷ ಕುಂಕಿಯಮ್ಮ? ಅದಕ್ಕೆ ಕುಂಕಿ ಎಂದಳು –ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ನಾನು ಏನೂ ವಿಶೇಷವನ್ನು ಕಂಡಿಲ್ಲವಲ್ಲ? ತಚ್ಚೋಳಿ ಕುರುಪ್ಪರಿಗೆ ಕೂದಲಿಗೆ ಎಣ್ಣೆ ಹಚ್ಚಿಕೊಳ್ಳುವುದಕ್ಕೆ ಕೊಡಲು ಅಸಾಧ್ಯವಾದ್ದರಿಂದ ಹದಿನಾಲ್ಕು ಮೊಳವಿದ್ದ ನನ್ನ ನಿಡುಗೂದಲನ್ನು ಒರಳಿನ ಮೇಲೆ ಇಟ್ಟು ಕತ್ತರಿಸಿದರಲ್ಲ! ಅದನ್ನು ಕೇಳಿದ ಚಾಪ ಕೂಡಲೇ ಮೆಟ್ಟಲಿಳಿದು ಹೋದ.

ಕಾವಿಲ್ ಚಾಂಞೋತ್‌ಗೆ ತಲಪಿದ ಅವನು ಒದೇನನಲ್ಲಿ ಇದನ್ನು ಹೇಳಿದ. ಅದನ್ನು ಕೇಳಿದ ಒದೇನ ಕೂಡಲೇ ಮೆಟ್ಟಿಲಿಳಿದು ಹೊರಟ. ಎಲ್ಲೂ ನಿಲ್ಲದೆ ಆ ನಡಿಗೆ ಮುಂದುವರಿಸಿ ತಚ್ಚೋಳಿ ಮೇಪ್ಪಕ್ಕೆ ತಲಪಿದ. ಅಲ್ಲಿಗೆ ತಲಪಿದ ಅವನು ಅಟ್ಟದ ಅಡ್ಡದ ಸಂದಿನಲ್ಲಿ ಇರಿಸಿದ ಕಾಡುಕರಿಬಳ್ಳಿಯ ಕೋಲನ್ನು ಅಲ್ಲಿಂದ ಎಳೆದು ತೆಗೆದ. ಅದನ್ನು ಹಿಡಿದುಕೊಡು ಶಂಖದಂಥ ಕುಂಕಿಯ ಕೊರಳಿಂದ ತೊಡಗಿ ಅಂಗಾಲುಗಳ ವರೆಗೂ ಹೊಡೆದ ಏಟಿಗೆ ಕೊಡುಮಲೆ ಮೂಡುಮನೆಯ ಕುಂಞಿಕುಂಕಿ ವಂದಿಸಿದಳು, ತಣಪಣ ಕುಣಿದಳು, ಬಿದ್ದುಬಿಟ್ಟಳು; ಅವಳಿಗೆ ಬೋಧ ತಪ್ಪಿಹೋಯಿತು. ಅದನ್ನು ಕಂಡ ಒದೇನ ಚಾಪ್ಪನನ್ನು ಕರೆದ. ಊರಾಳಿ ಕೋಮನ್ ವೈದ್ಯರನ್ನು ಕರೆದುಕೊಂಡು ಬಾ ಎಂದು ಹೇಳಿ ಕಳುಹಿಸಿದ. ಅದನ್ನು ಕೇಳಿದ ಚಾಪ್ಪ ಸ್ವಲ್ಪ ನಡೆಯುತ್ತ ಇನ್ನು ಸ್ವಲ್ಪ ಓಡುತ್ತಾ ಊರಾಳಿ ಮನೆಗೆ ತಲಪಿದ. ವೈದ್ಯರಲ್ಲಿ ಹೇಳಿದ – ಊರಾಳಿ ಕೋಮ ವೈದ್ಯರೇ, ನಿಮ್ಮನ್ನು ತಚ್ಚೋಳಿ ಒದೇನ ಕುರುಪ್ಪರು ಕರೆದಿದ್ದಾರೆ. ಅದನ್ನು ಕೇಳಿದ ವೈದ್ಯರು ಚಾಪನ ಜತೆಯಲ್ಲೆ ಉಂಡ ತುತ್ತಲ್ಲೆ ಉಟ್ಟ ಬಟ್ಟೆಯಲ್ಲೆ ಹೊರಟರು. ತಚ್ಚೋಳಿ ಮನೆಗೆ ತಲಪಿದ ಅವರು ಕೂಡಲೆ ಕುಂಕಿಯ ನಾಡಿಯನ್ನು ಹಿಡಿದು ನೋಡಿದರು. ಬಳಿಕ ಒದೇನನಿಗೆಂದರು – ಒದೇನ! ಮರ್ಮಸ್ಥಾನಗಳನ್ನು ತಿಳಿದಿರುವ ನೀನು ಮರ್ಮವನ್ನು ತಪ್ಪಿಸಿಯೇ ಹೊಡೆದಿದ್ದಿ. ಆದರೂ ಅವಳನ್ನು ಪಾತಿಚಿಕಿತ್ಸೆಗೆ (ಮರದ ಪಾತಿಯಲ್ಲಿರಿಸಿ 'ಕಿಳಿ' ಮುಂತಾದ ಚಿಕಿತ್ಸೆ ಮಾಡುವುದು) ಒಳಪಡಿಸಬೇಕು. ಮೂರು ತಿಂಗಳು ಪಾತಿಯಲ್ಲಿ ಮಲಗಿದರೆ ಎಲ್ಲ ಗುಣವಾದೀತು. ಅದನ್ನು ಕೇಳಿದ ಒದೇನ ಪಾತಿಚಿಕಿತ್ಸೆಗೆ ಬೇಕಾದ ಸಿದ್ಧತೆಗಳನ್ನು ಮಾಡಿಸಿದ. ಪಾತಿಯನ್ನು ಸಿದ್ಧಮಾಡಿ ವೈದ್ಯನು ಕುಂಕಿಯನ್ನು ಪಾತಿಯಲ್ಲಿ ಮಲಗಿಸಿದ/ಹಾಕಿದ.

ಕೊಡುಮಲೆಯನ್ನಾಳುವ ಕುಂಕಿ ಮೂರು ತಿಂಗಳು ಪಾತಿಯಲ್ಲಿ ಮಲಗಿದಳು. ಒದೇನನು ತೋರು ಬೆರಳಲ್ಲಿ ಸುಣ್ಣ ಹಚ್ಚಿಕೊಂಡು (ಹೆಣ್ಣಿನ ಒಲವನ್ನು ಅರಿಯುವ ಒಂದು ಬಗೆ) ಪಾತಿಯ ಸಮೀಪದಲ್ಲಿ ಸುಳಿದ. ಅವನು ಕೇಳಿದ – ಕೊಡುಮಲೆ ಯನ್ನಾಳುವ ಕುಂಞಿಕುಂಕಿ! ಕೈಯಲ್ಲಿರುವ ವೀಳ್ಯದೆಲೆ ನಳನಳಿಸುತ್ತಿದೆ. ಒಂದು ತುಂಡು ಅಡಕೆಯನ್ನು ಕೊಡುತ್ತಿಯಾ? ಅದನ್ನು ಕೇಳಿದ ಕುಂಕಿ ಮುಗುಳ್ನಗುವಿನ ಉತ್ತರವಿತ್ತಳು. ಒದೇನ ಅವಳನ್ನು ಪಾತಿಯಲ್ಲೇ ಕೂಡಿದ. ತುಂಬ ಹೊತ್ತು ಕಳೆದು ಒದೇನ ಪಾತಿಯಿಂದೆದ್ದು ಹೊರಟುಹೋದ. ಕೊಡುಮಲೆಯನ್ನಾಳುವ ಕುಂಕಿಹೆಣ್ಣು ಆರು ತಿಂಗಳು ಪಾತಿಯಲ್ಲೇ ಮಲಗಿದ್ದಳು. ಅವಳಿಗೆ ಮೂರು ತಿಂಗಳ ಗರ್ಭವಾಗಿತ್ತು. ತಚ್ಚೋಳಿ ಮೇಪ್ಪದ ಹೆಂಗುಸರು ಹೀಗೆ ಆಡಿಕೊಂಡರು – ತಚ್ಚೋಳಿ ಕೋಮಕುರುಪ್ಪೇ, ನಮ್ಮ ಮಾವಾ! ಬಸುರಿನಿಂದ ತಚ್ಚೋಳಿ ಮೇಪ್ಪದಲ್ಲೂ ಮಾಣಿಕ್ಕೋತ್ತಲ್ಲೂ ಆಗುತ್ತಿರುವ ಕೋಲಾಹಲವನ್ನು ಏನೆನ್ನಲಿ!

ತಚ್ಚೋಳಿ ಮೇಪ್ಪದ ನಮ್ಮ ಸಣ್ಣ ಮಾವ ಕೊಡುಮಲೆಯಿಂದ ಕರೆತಂದ ಅತ್ತೆಗೆ ಬಸುರಂತೆ! ಯಾರಿಂದ ಬಸುರು ಎಂದು ತಿಳಿದುಬಂದಿಲ್ಲ. ಹೀಗೆಲ್ಲಾ ಹೇಳುತ್ತ ಅಲ್ಲಿ ಹೆಂಗುಸರು ಸೇರಿದರು.

ಬಸುರಿಗೆ ಸುಮಾರು ಏಳು ತಿಂಗಳಾದಾಗ ಒದೇನನು ತಚ್ಚೋಳಿ ಮೇಪ್ಪಕ್ಕೆ ಬಂದ. ಬಂದವನು ಕೊಡುಮಲೆ ಆಳುವ ಕುಂಞಿಕುಂಕಿಯಲ್ಲಿ ಕೇಳಿದ – ಕುಂಕಿ, ನಿನಗೆ ಯಾರಿಂದ ಬಸುರಾಯಿತು? ಕುಂಕಿ ಎಂದಳು – ತಚ್ಚೋಳಿ ಮೇಪ್ಪದ ಒದೇನನೇ ನನ್ನ ಬಂಧು. ಅವನದೇ ಒಳ್ಳೆಯ ಬಸುರು. ಒದೇನ ಅದನ್ನು ಕೇಳಿ ಒಂದು ಮುಗುಳು ನಗು ನಕ್ಕ.

ಒದೇನನು ಕೋಟೆಯನ್ನಾಳುವ ಅರಸನ ಬಳಿಗೆ ಹೋದ. ಅರಸ ಒದೇನನನ್ನು ಕಂಡ. ಅರಸನು ತನ್ನನ್ನು ಕಂಡ ಕೂಡಲೆ ಒದೇನ ಅರಸನ ತಿರುವಡಿಗೂ ಮುಡಿಗೂ ಸಿರಿಯೊಡಲಿಗೂ ಎರಡು ಕೈಗಳನ್ನು ಜೋಡಿಸಿ ಗೌರವದಿಂದ ವಂದಿಸಿದ. ಬಳಿಕ ಅರಸನಿಗೆಂದ – ಕೋಟೆಯನ್ನು ಆಳುವ ಅರಸರೇ! ಗೇಣಿ ವಸೂಲು ಮಾಡಿದ ಎಲ್ಲ ಹೊನ್ನನ್ನು ಕೊಡುವುದಕ್ಕಾಗಿ ಇದೋ ತಂದಿದ್ದೇನೆ. ಕೊಡುಮಲೆಯನ್ನಾಳುವ ಕುಂಞಿಕಣ್ಣನನ್ನು ನಾನು ಕಂಡೆ. ಅದನ್ನು ಕೇಳಿದ ಅರಸರ ತುಟಿ ಅರಳಿತು. ವಸೂಲು ಮಾಡಿದ ಗೇಣಿಯ ಚಿನ್ನವನ್ನೆಲ್ಲ ತೆಗೆದು ಅದರಲ್ಲಿ ಅರ್ಧವನ್ನು ಒದೇನನಿಗೆ ಕೊಟ್ಟರು. ಹೊನ್ನನ್ನು ಪಡೆದುಕೊಂಡು ಒದೇನ ಸುಖವಾಗಿ ಬದುಕುತ್ತಿದ್ದ.

ತಚ್ಚೋಳಿ ಮನೆಯ ಕುಂಞ್ಯೊದೇನನನ್ನು ಗೊತ್ತಿಲ್ಲವೆ?

ತಚ್ಚೋಳಿ ಮನೆಯ ಒದೇನ ತನ್ನ ಅಣ್ಣನಲ್ಲಿ ಹೀಗೆಂದು ಹೇಳಿದ – ಅಣ್ಣಾ! ಒಂದು ಸಂಗತಿ ಹೇಳುತ್ತ ಇದ್ದೇನೆ, ಕೇಳಬೇಕು. ನಾನೊಂದು ಸುದ್ದಿ ಕೇಳಿದೆ. ರಾಜ್ಯಾದ್ಯಂತದ ಎಲ್ಲ ಹಿರಿಯ ಕಿರಿಯ ಅರಸರೂ ಕೋಟೆಗಳನ್ನು ಕಟ್ಟಿಸಿದ್ದಾರೆ. ಆದರೇನು! ನನ್ನ ಪ್ರೀತಿಯ ಅಣ್ಣ, ಕೇಳಬೇಕು. ಕರಿಮಲೆಯೊಡತಿ ಕುಂಞಿಕನ್ನಿ ಕಟ್ಟಿಸಿದ ಕೋಟೆಯೇ ಕೋಟೆ. ಅದಕ್ಕೆ ಸಮಾನವಾದ ಕೋಟೆಯೇ ಇಲ್ಲ. ಕಾಲುಭಾಗದ ಕೋಟೆಯನ್ನು ಕಬ್ಬಿಣದ ದಸಿಗಳಿಂದಲೂ ಮುಕ್ಕಾಲು ಭಾಗದ ಕೋಟೆಯನ್ನು ಕಗ್ಗಲ್ಲಿನಿಂದಲೂ ಕಟ್ಟಿದ್ದು. ಕಂಡವರು ಹೆದರಿಬಿಡುವಂಥ ಕೋಟೆ. ಆ ಕೋಟೆಯನ್ನು ನೋಡಲು ನಾನು ಹೋಗಬೇಕು. ಕೋಟೆಯ ಕೆಲಸವನ್ನು ಕಾಣಬೇಕು. ಬಳಿಕ ಸತ್ತರೂ ದುಃಖವಿಲ್ಲ. ಆ ಮಾತುಗಳನ್ನು ಕೇಳಿದ ಕಂಡಾಚ್ಚೇರಿಯ ಚಾಪ್ಪ ಹೇಳಿದ – ಒಂದು ವಿಚಾರವುಂಟು ಕೇಳಬೇಕಪ್ಪ ಒದೇನರೇ. ಆ ಕೆಲಸ ಬೇಡಯ್ಯಾ ನಿಮಗೆ! ಆ ಕೋಟೆಯನ್ನು ಕಾಣುವುದು ಬೇಡ. ಆಗ ತಚ್ಚೋಳಿ ಮನೆಯ ಹಿರಿಯನಾದ ಕೋಮ ಕುರುಪ್ಪನೆಂದ ಒಂದು ವಿಚಾರ ಕೇಳಬೇಕಪ್ಪ ಒದೇನ! ನೀನು ಬಯಸಿದ ಬಯಕೆಗಳನ್ನೆಲ್ಲ ಈಡೇರಿಸಿಕೊಂಡಿದ್ದಿ. ಆದರೆ ಈಗ ಕೋಟೆಯ ಕೆಲಸ ನೋಡು ವುದಕ್ಕಾಗಿ ನೀನು ಹೋಗಲೇ ಬಾರದಪ್ಪ ಒದೇನ! ನಿನ್ನ ಹಿರಿಯ ಮಾವಂದಿರು ಏಳು ಜನ ಆ ಕೋಟೆಯ ಕೆಲಸ ನೋಡುವುದಕ್ಕಾಗಿ ಹೋದವರು ಸತ್ತೇ ಹೋಗಿದ್ದಾರೆ. ತೆಂಕು ತಿರುಮಲೆ ಬೆಟ್ಟದ ಮೇಲಿನಿಂದ ಅಲ್ಲಿಗೆ ಹೋಗಬೇಕು. ಅದು ಅಷ್ಟು ದೂರದಲ್ಲಿದೆ ಒದೇನ! ಅಲ್ಲಿ ಹುಲಿ ಚಿರತೆ ಗಳಿವೆ, ಕರಡಿ ಕಾಡುಕೋಣಗಳಿವೆ. ಮಾತ್ರವಲ್ಲ ಕರಿಮಲೆಯೊಡತಿ ಕುಂಞಿಕನ್ನಿಯ ಪಡೆಗಡಲಿದೆ. ಅದನ್ನು ದಾಟಿ ಹೋಗುತ್ತಿದ್ದಾಗಲೆ, ಒದೇನ,

ನಿನ್ನ ಏಳುಜನ ಮಾವಂದಿರು ಸತ್ತದ್ದು! ಒಂದು ವೇಳೆ ಅದನ್ನು ದಾಟಿ ನೀನು ಹೋದರೂ ಕಲ್ಲಾಯಿತೋಡೆಂಬ ತೊರೆಯಿದೆ. ಆ ತೊರೆಯನ್ನು ದಾಟಬೇಕು. ಆ ತೊರೆಯ ಬಳಿಯಲ್ಲಿಯೇ ಕನ್ನಿಯ ಐದುನೂರು ಜನ ಸೈನಿಕರಿದ್ದಾರೆ. ಹಾಗಾಗಿ ನೀನು ಅಲ್ಲಿಗೆ ಹೋಗುವುದೇ ಬೇಡ, ಒದೇನ.

ಆ ಮಾತುಗಳನ್ನು ಕೇಳಿದ ಒದೇನ ಹೇಳಿದ – ತಚ್ಚೋಳಿ ಮನೆಯ ನನ್ನ ಅಣ್ಣಾ! ಯಾರೇ ಅಲ್ಲಿಗೆ ಹೋಗಿ ಸತ್ತಿದ್ದರೂ ಏನೆಲ್ಲ ತೊಂದರೆಗಳು ಎದುರಾದರೂ..... ನನ್ನಣ್ಣ ಕೋಮಕುರುಪ್ಪರೇ! ನನಗೆ ಅಲ್ಲಿ ಹೋಗದಿರಲು ಸಾಧ್ಯವಿಲ್ಲ. ಅದನ್ನು ಕೇಳಿದ ಕೋಮ ಕುರುಪ್ಪ್ ಮನದಲ್ಲೆ ನೆನೆದ – ನನ್ನ ಪ್ರಿಯ ತಮ್ಮ ಇಂದು ಕರಿಮಲೆಗೆ ಹೋದನಾದರೆ ಜೀವ ಸಹಿತ ಮರಳಿ ಬರಲಾರ. ಹೀಗೆ ನಿಶ್ಚೈಸಿ ತಚ್ಚೋಳಿ ಮನೆಯ ಕೋಣೆಯೊಂದರಲ್ಲಿ ಒಂದು ಒಳ್ಳೆಯ ಕಳ್ಳಕೋಣೆಯನ್ನು ಕಟ್ಟಿಸಿದ. ಬಳಿಕ ಒದೇನನಿಗೆಂದ – ಒಂದು ವಿಚಾರವುಂಟು ಕೇಳಪ್ಪ ಒದೇನ! ನೀನು ಆ ಕೋಣೆಗೆ ಹೋಗಿ ಖಡ್ಗ ಗುರಾಣಿಗಳನ್ನು ತೆಗೆದುಕೊ ಒದೇನ. ಆ ಮಾತುಗಳನ್ನು ಕೇಳಿ ಒದೇನನು ಕೋಣೆಗೆ ದಾಟಿದಾಗ ಕೋಣೆಯ ಬಾಗಿಲು ಮುಚ್ಚಿತು. ಕೋಮ ಕುರುಪ್ಪ್ ಚಿಲಕ ಹಾಕಿಬಿಟ್ಟ. ಬಳಿಕ ಮೆಲ್ಲಗೆ ಎಂದ – ತಚ್ಚೋಳಿ ಒದೇನ! ಕುಂಞ್ಯೋದೇನ! ನೀನು ಮನೆ ಯಲ್ಲಿಯೇ ಇದ್ದುಕೊಳ್ಳಪ್ಪ! ಅದನ್ನು ಕೇಳಿ ಒದೇನ ಒಳವನ್ನೂರ್ ಕಾವಿನ ಭಗವತಿಯನ್ನು ನೆನೆಯುತ್ತ ಕುಳಿತ – ಓ ಒಳವನ್ನೂರು ಕಾವು ಭಗವತಿಯೇ! ನನ್ನನ್ನು ಇಲ್ಲಿಂದ ಪಾರುಮಾಡಿ ದೆಯಾದರೆ ನಾನು ನಿನ್ನ ಕಾವಿಗೆ ಬರುತ್ತೇನೆ. ಎಕ್ಕಸರ ಮಾಲೆಯನ್ನೂ ಇನ್ನಿತರ ಹರಕೆಗಳನ್ನೂ ಸಮರ್ಪಿಸುವೆ. ಅದನ್ನು ಕೇಳಿಸಿಕೊಂಡ ಭಗವತಿ ಒದೇನನಿಗೆ ಬೇಕಾದ ವರವಿತ್ತಳು. ತಚ್ಚೋಳಿ ಮನೆಯಲ್ಲಿನ ಒಳಕೋಣೆ ಹಾರು ಹೊಡೆಯಿತು. ಅಲ್ಲಿಂದ ಒದೇನ ತಪ್ಪಿಸಿಕೊಂಡ. ಅವನು ಅಲ್ಲಿಂದ ಹೊರಟು ಕಳರಿ ಕೋಣೆಗೆ ಪ್ರವೇಶಿಸಿದ. ಅಲ್ಲಿ ಇದ್ದ ಇಪ್ಪತ್ತೆರಡು ಉರುಮಿಗಳಲ್ಲಿ ಒಂದು ಕಂಪಿಸುತ್ತಿರುವುದನ್ನು ಕಂಡ. ಅವನು ಅದನ್ನು ಎತ್ತಿಕೊಂಡ. ಮಕ್ಕಾದಿಂದ ಆಮದಾಗಿದ್ದ ಚೀನಾಂಬರ ತೆಗೆದು ಉಟ್ಟುಕೊಂಡ. ಓಟೆಯೊಳಗೆ ಸುರುಟಿರಿಸಿದ್ದ ಮೋಡಿ ರೇಶ್ಮೆಬಟ್ಟೆಯನ್ನು ತೆಗೆದು ಮುಂಡಾಸು ಬಿಗಿದ. ಇನ್ನೂ ಒಂದಷ್ಟು ಅಲಂಕರಿಸಿಕೊಂಡ. ಅಲ್ಲಿಂದಲೂ ಹೊರಟು ಹೋದ. ಹಾಗೆ ನಡೆಯುತ್ತ ಹೋಗುತ್ತಿದ್ದಾಗ ಕಂಡಾಚ್ಚೇರಿ ಚಾಪ್ಪನೂ ಜತೆಯಲ್ಲಿ ಹೋದ. ಚಾಪ್ಪನೆಂದ – ತಚ್ಚೋಳಿ ಒದೇನರೆ! ಒಂದು ಸಂಗತಿಯುಂಟು ಕೇಳಿ! ತೆಂಕುತಿರುಮಲೆ ಬೆಟ್ಟದಲ್ಲಿ ಹುಲಿಚಿರತೆಗಳು ಕರಡಿ ಕಾಡುಕೋಣಗಳು ಇವೆ. ಆದುದರಿಂದ ಹುಲಿ ಚಿರತೆ ಕರಡಿಗಳಲ್ಲಿ ಹೋರಾಡಬೇಕಾಗುತ್ತದೆ. ಆ ಮಾತು ಕೇಳಿ

ಒದೇನನೆಂದ – ಒಂದು ಸಂಗತಿಯುಂಟು ಕಂಡಾಚ್ಚೇರಿ! ಯಾವುದಕ್ಕೂ ಹೆದರಬೇಡ. ನಮ್ಮ ಭಗವತಿ ಇದ್ದರೆ ನಮಗೆ ಯಾವುದರ ಬಾಧೆಯೂ ತಟ್ಟದು.

ಹೀಗೆ ಮಾತನಾಡುತ್ತ ಅವರು ನಡೆದು ನಡೆದು ತೆಂಕು ತಿರುಮಲೆ ತಲಪಿದರು. ಇನ್ನೂ ಮುಂದೆ ನಡೆದಾಗ ತೆಂಕು ತಿರುಮಲೆ ಬೆಟ್ಟ. ನಾಲ್ಕು ದಿಕ್ಕುಗಳಲ್ಲೂ ಕಲ್ಲಿನ ಕೋಟೆ. ಅದರ ಒಳಗೆ ದಪ್ಪದಪ್ಪ ಮರಗಳು. ಒದೇನ ಇನ್ನಷ್ಟನ್ನು ಕಂಡ. ಆಳೆತ್ತರದ ಆನೆ ಹುಲ್ಲು ತುಂಬಿದೆ. ಹುಲ್ಲು ತುಂಬಿ ಬೇರೇನೂ ಕಾಣಿಸದು. ಆಗ ಚಾಪ್ಪನೆಂದ – ಒಂದು ಸಂಗತಿಯುಂಟು ಒದೇನ ಧನಿಗಳೇ! ಬೆಟ್ಟ ಏರುವಾಗ ನೋಡಿಕೊಳ್ಳಬೇಕು. ಹುಲ್ಲು ತುಂಬಿ ಏನೂ ಕಾಣಿಸುವುದಿಲ್ಲವಷ್ಟೆ? ಹುಲಿ ಕರಡಿಗಳುಳ್ಳ ಮಲೆಯಿದು ಎಂಬುದನ್ನು ಕೇಳಿಬಲ್ಲೆವು. ನಮ್ಮ ಮೇಲೆ ನೆಗೆದು ಅವು ನಮ್ಮನ್ನು ಕೊಂದಾವು. ತುಂಬ ಎಚ್ಚರಿಕೆಯಿಂದಿರಬೇಕು. ಆ ಮಾತುಗಳನ್ನು ಕೇಳಿದ ಒದೇನನೆಂದ– ಒಳವನ್ನೂರ್ ಕಾವಿನ ಭಗವತೀ! ನಮ್ಮನ್ನು ಕಾಪಾಡಬೇಕು ಭಗವತೀ! ನಮಗಾರೂ ಇಲ್ಲಿ ಬೇರೆ ದಿಕ್ಕಿಲ್ಲ! ಹೀಗೆ ಪ್ರಾರ್ಥಿಸಿ ಚಾಪ್ಪನಿಗೆಂದ – ಒಂದು ಸಂಗತಿಯುಂಟು ಚಾಪ್ಪಾ! ನೀನು ಅದಕ್ಕಾಗಿ ಹೆದರಬೇಕಾಗಿಲ್ಲ! ನಾನು ಹುಲಿಯೊಂದಿಗೆ ಹೋರಾಡುವಾಗ ನೀನು ನನ್ನ ಹಿಂದೆ ನಿಂತುಕೊ! ಆಗ ನಿನಗೇನೂ ಆಗದು! ಹೀಗೆ ಮಾತನಾಡುತ್ತ ಅವರು ಮುಂದೆ ಮುಂದೆ ನಡೆದರು. ತೆಂಕುತಿರುಮಲೆ ಬೆಟ್ಟದಮೇಲೆ ಹೀಗೆ ಅವರು ಮುಂದುವರಿಯುತ್ತಿದ್ದಾಗ ಉರಿಯುವ ಕೆಂಡದ ರಾಶಿಗಳ ಹಾಗೆ ಹುಲಿಚಿರತೆಗಳು ಮಲಗಿರುವುದನ್ನು ಒದೇನ ಕಂಡ. ಕೂಡಲೇ ಅವನು ಕೂಗಿ ಹೇಳಿದ – ಒಂದು ಸಂಗತಿಯುಂಟು ಚಾಪ್ಪಾ! ಹುಲಿಕರಡಿಗಳೊಂದಿಗೆ ಹೋರಾಡುವಾಗ ಗುಂಡು ಹೊಡೆದರೆ ತಾಗದಂಥ ತಾಯಿತದ ಅಗತ್ಯವಿಲ್ಲ. ಇದನ್ನು ನೀನು ಹಿಡಿದುಕೊ. ಹಾಗೆಂದು ಚಾಪನ ಕೈಗೆ ತಾಯಿತವನ್ನು ಕೊಟ್ಟ. ಬಳಿಕ ಒದೇನ ಉರುಮಿ ಕೈಗೆತ್ತಿಕೊಂಡ. ಹುಲಿಯ ಎದುರಿಗೇ ಹೋದ. ಆಗ ಹುಲಿ ನೆಗೆದು ಅಬ್ಬರಿಸುತ್ತ ಹಾರಿತು, ಕರಡಿಯೂ ನೆಗೆಯುತ್ತ ಬಂತು. ಆಗ ಒದೇನ 'ಕಾಕಚ್ಚುಮಡ್' ಎಂಬ ಪಟ್ಟನ್ನು ಪ್ರಯೋಗಿಸಿ ಹುಲಿ ಚಿರತೆ ಕರಡಿಗಳನ್ನು ಕೊಂದಡಗಿಸಿದ. (ಈ ಪಟ್ಟಿನಲ್ಲಿ ಒಮ್ಮೆಲೇ ವೇಗವಾಗಿ ಮೇಲಕ್ಕೆ ನೆಗೆದು ಅಷ್ಟೇ ಶೀಘ್ರವಾಗಿ ಕೆಳಗೆ ನೆಗೆಯುತ್ತ, ಕೆಳಬರುತ್ತಿದ್ದಂತೆ ತೀವ್ರವಾಗಿ ಪ್ರಹಾರ ನೀಡುವುದು ಮುಖ್ಯ). ಹಾಗೆ ಅವು ಸತ್ತು ಬಿದ್ದಾಗ ಒದೇನ ಕೂಗಿ ಹೇಳಿದ – ತೆಂಕು ತಿರುಮಲೆ ಬೆಟ್ಟದಲ್ಲಿ ಇನ್ನು ಹುಲಿ ಚಿರತೆ ಕರಡಿಗಳಿಲ್ಲ. ಕರಿಮಲೆಯೊಡತಿ ಕುಂಞಿಕನ್ನಿಯ ಒಂದು ಸೇನಾತುಕಡಿ ಬಾಕಿ ಇದೆ. ಅಲ್ಲಿಂದ ಅವರು ಮತ್ತೆ ಮುಂದುವರಿದರು. ಹಾಗೆ ಮುಂದುವರಿಯುತ್ತಿದ್ದಾಗ ಕಾಡಿನಲ್ಲಿ ಕುಳಿತಿದ್ದ ಸೇನಾತುಕಡಿಯನ್ನು ಒದೇನ ಕಣ್ಣಾರೆ ಕಂಡ. ಆಗ ಅವನೆಂದ – ಒಂದು ಸಂಗತಿಯುಂಟು ಚಾಪ್ಪಾ! ಕೇಳಬೇಕು. ಕರಿಮಲೆಗೊಡತಿ

ಕನ್ನಿಯ ಸೈನಿಕರು ಅದೋ ಅಲ್ಲಿ ಅರಣ್ಯದಲ್ಲಿ ಕುಳಿತಿದ್ದಾರೆ. ಅವರಲ್ಲಿ ನಾನಿದೋ ಸಾರಿ ಹೇಳುವವನಿದ್ದೇನೆ – ಸೈನಿಕರಾದ ನಿಮ್ಮಲ್ಲಿ ನಾನು ಒಂದು ವಿಚಾರ ಹೇಳಬೇಕಾಗಿದೆ. ನನಗೂ ನನ್ನ ಸಂಗಾತಿ ಚಾಪ್ಪನಿಗೂ ಕರಿಮಲೆ ಕೋಟೆಗೆ ಹೋಗಬೇಕಾಗಿದೆ. ನೀವು ಹೋಗಲು ಬಿಡದಿದ್ದರೆ ನಾವು ಹೋಗದಿರುವವರಲ್ಲ. ನಮ್ಮಲ್ಲಿ ನೀವು ಹೋರಾಟಕ್ಕಿಳಿದರೆ ಕಾಡು ಬಾಳೆಯ ತೋಟವನ್ನು ತರಿದ ಹಾಗೆ ನಿಮ್ಮನ್ನು ತರಿದು ಕೊಂದೇವು. ಅದನ್ನು ಕೇಳಿದ ಸೈನಿಕರು ಅವರಿಗೆ ಸಮ್ಮತಿ ಕೊಟ್ಟರು.

ಅಲ್ಲಿಂದಲೂ ಮುಂದುವರಿದು ಅವರು ಕಲ್ಲಾಯಿ ತೊರೆಯ ಬಳಿಗೆ ತಲುಪಿದರು. ಅಲ್ಲಿ ಎಂಟು ಜನ ಕಾವಲುಗಾರರಿರುವುದನ್ನು ಒದೇನ ಕಂಡ. ಇನ್ನಷ್ಟು ಜನ ಖಡ್ಗಧಾರಿಗಳೂ ಕುಂತಧಾರಿಗಳೂ ಆದ ಆಳುಗಳಿದ್ದರು. ಅವರೆಲ್ಲ ಕರಿಮಲೆ ಕನ್ನಿಯ ಕಡೆಯವರು. ಅವರನ್ನು ಕಣ್ಣಾರೆ ಕಂಡ ತಚ್ಚೋಳಿ ಒದೇನ ಅವರಿಗೆಂದ – ಒಂದು ಸಂಗತಿಯುಂಟು ಕೇಳಬೇಕು ಕಾವಲುಗಾರರೇ! ನೀವು ಇಲ್ಲಿ ಇರುವುದು ಯಾಕೆಂದು ನನಗೆ ಹೇಳುವಿರಾ? ಆಗ ಅವರೆಂದರು – ತಚ್ಚೋಳಿ ಮನೆಯ ಕುಂಞ್ಯೋದೇನಾ! ನಾವು ಕರಿಮಲೆ ಕನ್ನಿಯ ಕಾವಲು ಭಟರು. ಕರಿಮಲೆ ಕೋಟೆಗೆ ಯಾರಾದರೂ ನಮ್ಮ ಒಪ್ಪಿಗೆಯಿಂದ ಮಾತ್ರ ಪ್ರವೇಶಿಸಬಹುದು. ನಾವು ಒಪ್ಪಿಗೆ ಕೊಡಬೇಕಾದರೆ ಅವಳ ಓಲೆ ಬೇಕು. ಅದನ್ನು ಕೇಳಿ ಒದೇನನೆಂದ – ಹಾಗಾದರೆ ಕೇಳಿರಿ ಸಿಪಾಯಿಗಳೆ! ತಿರುಮಲೆ ಕನ್ನಿಯ ಓಲೆ ಇಲ್ಲದ ನಮಗೆ ಒಪ್ಪಿಗೆ ಸಿಗಲಾರದಷ್ಟೆ? ಆಗ ಅವರೆಂದರು – ನಿನಗೆ ಓಲೆ ಸಿಗಲಾರದಾದರೆ ಒಪ್ಪಿಗೆ ಸಿಗಲಾರದಷ್ಟೆ? ಅದಕ್ಕೆ ಒದೇನನೆಂದ – ನನಗೆ ಓಲೆಯಾಗಲಿ ಒಪ್ಪಿಗೆಯಾಗಲಿ ಬೇಕಾಗಿಲ್ಲ. ನಾನಿಂದೇ ಕರಿಮಲೆಗೆ ಹೋಗುವವನು, ತಿಳಿದುಕೊಳ್ಳಿ. ಆ ಮಾತುಗಳನ್ನು ಕೇಳಿ ಸಿಪಾಯಿಗಳ ಸೇನೆ ಸಜ್ಜಾಗಿ ನಿಂತಿತು. ಅವರು ಖಡ್ಗ ಕುಂತ ಮುಂತಾದುವನ್ನು ಹಿಡಿದುಕೊಂಡರು. ಹಾಗೆ ಸಜ್ಜಾಗಿ ನಿಂತ ಅವರ ಜತೆ ಒದೇನ ಹೋರಾಡತೊಡಗಿದ. ಒದೇನ 'ಪರ್ಂದುಂ ಚುವಡ್' ಎಂಬ ಪಟ್ಟನ್ನು ಬಳಸಿ ಕಾವಲುಕಾರರನ್ನೂ ಸೈನಿಕರನ್ನೂ ಖಡ್ಗದಿಂದ ಕಡಿದುರುಳಿಸಿದ. (ಈ ಪಟ್ಟಿಗೆ ಪರ್ಂದ್ ಚಡಕ್ಕಂ ಎಂದೂ ಹೆಸರಿದೆ. ಇದರಲ್ಲೂ ಮೇಲಕ್ಕೆ ಏರುವುದು ಇಳಿಯುವುದು ಮತ್ತು ಕಡಿಯುವುದು ಮುಖ್ಯ. ಆದರೆ ಹೆಚ್ಚು ಎತ್ತರಕ್ಕೆ ನೆಗೆಯಬೇಕು ಮತ್ತು ಭೂಮಿ ಬಿಟ್ಟು ಹೆಚ್ಚು ಹೊತ್ತು ನಿಲ್ಲಬೇಕು ಎಂಬುದು ವ್ಯತ್ಯಾಸ). ಅಲ್ಲಿಂದ ಮತ್ತೆ ಮುಂದುವರಿದು ಅವರು ಕರಿಮಲೆ ಕೋಟೆಗೆ ತಲುಪಿದರು. ಕರಿಮಲೆಯ ಕುಂಞಿಕನ್ನಿಯ ಕೋಟೆಗೆ ಹೋದಾಗ ಒದೇನ ಎಚ್ಚರದಿಂದ ಮುಂದುವರಿದ. ಕಾಲು ಭಾಗದ ಕೋಟೆ ಕಬ್ಬಿಣದ ದಸಿಯದು. ಮುಕ್ಕಾಲು ಭಾಗದ ಕೋಟೆ ಕಗ್ಗಲ್ಲಿನದು. ನಾಲ್ಕು ದಿಕ್ಕಲ್ಲೂ ಅತೀ ಎತ್ತರದ ತೆಂಗಿನಷ್ಟು ಎತ್ತರದ ಕೋಟೆ ಗೋಡೆಗಳು. ಒದೇನ ಇನ್ನೂ ಕೆಲವು ಸಂಗತಿಗಳನ್ನು

ಕಂಡ. ಕರಿಮಲೆಯನ್ನಾಳುವ ಕನ್ನಿಯ ಬಾವುಟ ಹಾರಾಡುತ್ತಿದೆ. ಒದೇನ ಕೋಟೆಯ ಒಳಗೆ ಪ್ರವೇಶಿಸಿದ. ಒಂದೊಂದು ಕೋಣೆಗೂ ಹೊಕ್ಕು ನೋಡಿದ. ಆಗ ಒಳ್ಳೆಯ ಒಂದು ಕೋಣೆ ಕಾಣಸಿಕ್ಕಿತು. ಆ ಕೋಣೆಯನ್ನೂ ಪ್ರವೇಶಿಸಿ ನೋಡಿದಾಗ ರತ್ನ ಮಂಚವನ್ನು ಹಾಕಿ ಅದರಲ್ಲಿ ಹಾಸಿಗೆಯನ್ನು ಹರಡಿ ಹಾಸಿಗೆಯ ಮೇಲೆ ರೇಶ್ಮೆ ಬಟ್ಟೆಯನ್ನು ಹಾಸಿದೆ. ಬೇರೆಯೂ ರೇಶ್ಮೆ ಬಟ್ಟೆಯನ್ನು ಹಾಸಿಗೆಯ ಮೇಲೆ ಇರಿಸಿದೆ. ರೇಶ್ಮೆಯದೇ ಹಸಿರು ತಲೆದಿಂಬು. ಇನ್ನೊಂದು ಬಿಳಿ ರೇಶ್ಮೆ ಬಟ್ಟೆಯಿಂದ ಹಾಸಿಗೆಯನ್ನು ಅಂದವಾಗಿ ಸಿದ್ಧಪಡಿಸಿದೆ. ಇದನ್ನು ಕಂಡ ಒದೇನ ಮಂಚದ ಮೇಲೆ ಹೋಗಿ ಕುಳಿತ. ಹಾಗೆ ಕುಳಿತಿದ್ದುದನ್ನು ಕನ್ನಿ ಕಂಡಳು. ಕಂಡ ಅವಳು ಹೀಗೆಂದಳು – ಯಾರಿದು ಯಾರಿದು ಬಂದಿರುವುದು? ನನ್ನ ಕೋಣೆಗೂ ಬಂದಿರುವುದು? ಅದಕ್ಕೆ ಒದೇನನೆಂದ – ನೀನು ಏನನ್ನೂ ಕೇಳಿ ತಿಳಿದಿಲ್ಲವೇ ಕುಂಞಿಕನ್ನಿ? ತಚ್ಚೋಳಿ ಮನೆಯ ಕುಂಞ್ಯೊದೇ ನನನ್ನು ಗೊತ್ತಿಲ್ಲವೇ ಕನ್ನಿ? ಅದಕ್ಕೆ ಕನ್ನಿಯೆಂದಳು – ಅವನು ನನಗಾಗಿ ಆಸೆ ಪಡುತ್ತಿದ್ದಾನೆಂದು ಗೊತ್ತು. ಕಳೆದ ಮೂರು ವರ್ಷಗಳಿಂದಲೂ ಹೆಚ್ಚಾಯಿತು, ಹಾಗೆ. ನೀನೀಗ ಬಂದದ್ದು ಒಳ್ಳೆಯದೇ ಆಯಿತು ಒದೇನ. ಆ ಮಾತುಗಳನ್ನು ಕೇಳಿ ಒದೇನನೆಂದ – ಆದರೂ ಕರಿಮಲೆಯ ಕುಂಞಿಕನ್ನಿ! ಹೀಗ್ಯಾಕೆ? ವೀಳ್ಯದೆಲೆ ಸುರುಟಿಕೊಡೇ ಕುಂಞಿಕನ್ನಿ! ಅದಕ್ಕೆ ಅವಳೆಂದಳು – ವೀಳ್ಯದೆಲೆ ಸುರುಟಿ ಕೊಡಬೇಕಾದರೆ ನಾನು ಕಟ್ಟಿಸಿದ ಕೋಟೆಯ ಕೆಲಸವನ್ನು ನೀನು ನೋಡಬೇಕು. ಅದನ್ನು ಕೇಳಿದ ಒದೇನನು ಕೋಟೆಯ ಕೆಲಸವನ್ನು ನೋಡುತ್ತಿದ್ದಾಗ ಪಕ್ಕನೆ ಕನ್ನಿ ಅವನನ್ನು ಕಲ್ಲು ಕೋಣೆಯೊಳಗೆ ಹಾಕಿಬಿಟ್ಟಳು. ಅವನು ಕಲ್ಲಕೋಣೆಯಲ್ಲಿದ್ದಾಗ ಅದರ ಕಬ್ಬಿಣದ ಚಿಲಕವನ್ನು ಅವಳು ಹಾಕಿ ಮುಚ್ಚಿದಳು. ಆಗ ಒದೇನ ಜೋರಾಗಿ ಅತ್ತುಬಿಟ್ಟ.

ಹೀಗೆ ಒದೇನನು ತೊಂದರೆಗೆ ಒಳಗಾಗಿದ್ದ ಸಮಯ. ಕಂಡಾಚ್ಚೇರಿ ಕುಂಞಿಚಾಪ್ಪನು ಅಲ್ಲಿಂದ ಹೊರಗೆ ಇಳಿದ. ಅವನು ಮನದಲ್ಲೇ ಭಾವಿಸಿದ – ಅಯ್ಯೋ ದೇವರೇ! ಭಗವಂತ! ಒದೇನನಿಗೆ ಯಾರೂ ಸಹಾಯಕರಿಲ್ಲದಂತಾಯಿತಲ್ಲಾ! ನಾನೇನು ಮಾಡಲಿ ದೇವರೇ! ಗುಂಡು ಹೊಡೆದರೆ ತಾಗದಿರುವ ತಾಯಿತವನ್ನು ನನ್ನ ಕೈಗೆ ಕೊಟ್ಟಿದ್ದಾನೆ. ಅವನನ್ನು ಅವಳು ಕೊಲ್ಲಿಸದೆ ಇರಲಾರಳು. ಹೀಗೆ ನೆನೆದು ಅವನಿಗೆ ಅಳುಬಂತು. ಅವನು ಅಲ್ಲಿ ನಿಲ್ಲದೆ ಓಡಿದ. ಅವನು ತಚ್ಚೋಳಿ ಮನೆಗೆ ಬಂದು ವಿಷಯವನ್ನೆಲ್ಲ ತಿಳಿಸಿದ – ತಚ್ಚೋಳಿ ಮನೆಯ ಉಣ್ಣಿಚಿರುದಮ್ಮ! ಸಂಗತಿ ಗೊತ್ತುಂಟಾ, ಉಣ್ಣಿಚಿರುದಮ್ಮ? ಕರಿಮಲೆಕೋಟೆ ಕಾಣುವುದಕ್ಕೆಂದು ಹೋಗಿದ್ದ ಒದೇನನನ್ನು ಕನ್ನಿ ಒಂದು ಕಲ್ಲುಕೋಣೆ ಯಲ್ಲಿ ಹಾಕಿದ್ದಾಳೆ. ಇನ್ನೂ ಕಷ್ಟವೆಂದರೆ ಅವನು ತಾಯಿತವನ್ನು ನನ್ನ ಕೈಗೆ ಕೊಟ್ಟಿದ್ದ. ಅದನ್ನು ಕೇಳಿದ ಉಣ್ಣಿಚ್ಚೇರು ಜೋರಾಗಿ ಅತ್ತುಬಿಟ್ಟಳು. ಸ್ವಲ್ಪ ಹೊತ್ತಿನ ಬಳಿಕ ಒಂದು

ಉಪಾಯ ನೆನೆದಳು. ಅವಳು ಹೊರಟು ನಿಂತಳು. ಒಂದು ಒಳ್ಳೆಯ ಬುಟ್ಟಿ ತೆಗೆದು ಕೊಂಡಳು. ಅದನ್ನು ತಲೆಯಲ್ಲಿ ಇಟ್ಟುಕೊಂಡಳು. ತನ್ನ ಅಣ್ಣನಿಂದ ಒಂದು ತಾಯಿತವನ್ನು ಪಡೆದುಕೊಂಡಳು. ಅಲ್ಲಿಂದ ಹೊರಟು ಒಮ್ಮೆ ಓಡುತ್ತಾ ಒಮ್ಮೆ ನಡೆಯುತ್ತಾ ಮುಂದು ವರಿದಳು. ಜೊತೆಗೆ ಜಾಪ್ಪನೂ ಹೋದ.

ಕರಿಮಲೆಗೊಡತಿ ಕುಂಞಿಕನ್ನಿ ನೇಣಿನ ಸಿದ್ಧತೆ ಮಾಡಿಸುತ್ತಿದ್ದಳು. ತಚ್ಚೋಳಿ ಒದೇನನನ್ನು ನೇಣು ಬಿಗಿದು ಕೊಲ್ಲಿಸಬೇಕು. ಕೋಟೆಯ ಮುಖ್ಯದ್ವಾರದ ಒಂದು ಗಾವುದ ದೂರ ನೇಣಿನ ಸಿದ್ಧತೆ ನಡೆಯುತ್ತಿದ್ದ ಸ್ಥಳದಲ್ಲಿ ಒಬ್ಬಾಕೆ ಕೊರವಂಜಿ ಕಾಣಿಸಿ ಕೊಂಡಳು. ಅವಳು ಕೋಟೆಯತ್ತ ಹೊರಟಳು. ಆಗ ಕನ್ನಿಯೆಂದಳು– ಏನಮ್ಮಾ ಏನಮ್ಮಾ ಕೊರವಂಜಿ? ನೀನು ಈ ಕಡೆಗೆ ಯಾಕೆ ಬಂದೆ? ಅದಕ್ಕೆ ಕೊರತಿಯೆಂದಳು– ನಾನೊಬ್ಬಾಕೆ ಕೊರವಂಜಿ, ರಾಣಿಯವರೇ! ಕೈ ನೋಡಿ ಲಕ್ಷಣ ಹೇಳಬಲ್ಲೆ. ಎಲ್ಲವನ್ನೂ ಸರಿಯಾಗಿ ಹೇಳಬಲ್ಲೆನಮ್ಮಾ! ಆಗ ಕುಂಞಿಕನ್ನಿ ಅಂದಳು– ಎಲ್ಲವನ್ನೂ ಸರಿಯಾಗಿ ಹೇಳುವೆಯಾದರೆ ಒಳ್ಳೆಯ ಬಟ್ಟೆ ಬರೆಗಳನ್ನು ಕೊಡುತ್ತೇನೆ. ಉಣ್ಣಲು ಒಳ್ಳೆ ಊಟ ಕೊಡುತ್ತೇನೆ. ಪಡಿ ಬೇರೆ ಕೊಡುತ್ತೇನೆ. ಕೈಗೆ ನಾಲ್ಕು ಕಾಸು ಕೊಡುತ್ತೇನೆ. ಆದುದರಿಂದ ಹೇಳುತ್ತೇನೆ–ನೀನು ಇದ್ದದ್ದನ್ನೇ ಹೇಳಬೇಕು. ಇಲ್ಲದ್ದನ್ನು ಹೇಳಿದೆಯಾದರೆ ನಿನ್ನನ್ನು ಬಾಕಿ ಮಾಡಲಾರೆ. ಅದನ್ನು ಕೇಳಿದ ಕೊರವಂಜಿ ಎರಡು ಕೈಗಳಿಂದಲೂ ಬಾಯಿಯನ್ನು ಮುಚ್ಚಿ ಬೋದಿಗೆಕಂಬದ ಮರೆಗೆ ನಿಂತುಕೊಂಡು ಹೇಳಿದಳು– ನಾನು ಏನೂ ಸುಳ್ಳು ಹೇಳುವುದಿಲ್ಲಮ್ಮ! ಎಲ್ಲವನ್ನೂ ಸರಿಯಾಗಿ ಹೇಳುತ್ತೇನೆ. ಅದಕ್ಕಾಗಿಯೇ ನೀವು ಒಂದು ಕೈಯನ್ನು ನೀಡಿ ಅಮ್ಮ. ಕರಿಮಲೆಕನ್ನಿ ಕೈ ನೀಡಿದಳು. ಕೊರವಂಜಿ ಕನ್ನಿಗೆಂದಳು– ಒಂದುಂಟು, ಕೇಳಬೇಕು ಮಹಾತಾಯಿ! ಕೋಟೆಯ ಕೆಲಸವನ್ನು ಕಾಣುವುದಕ್ಕಾಗಿ ತಚ್ಚೋಳಿ ಮನೆಯ ಕುಞ್ಞೋದೇನ ಇತ್ತ ದಾಟಿ ಬಂದಿದ್ದನಲ್ಲವೆ? ಅವನನ್ನು ಕಲ್ಲ ಕೋಣೆಯಲ್ಲಿ ಬಂದಿಸಿದ್ದೀರಿ. ಇವತ್ತು ಅವನು ಆ ಕಲ್ಲಕೋಣೆಯಲ್ಲಿ ಕೊಳೆಯುತ್ತಿದ್ದಾನೆ. ಇನ್ನೂ ಕೇಳಿರಿ ಮಹಾತಾಯಿ! ಅವನನ್ನು ನೀವು ನೇಣಿಗೆ ಹಾಕುವುದಕ್ಕಾಗಿ ಕೋಟೆಗೆ ಒಂದು ಗಾವುದ ದೂರದಲ್ಲಿ ನೇಣಗಂಬದ ಸಿದ್ಧತೆ ಮಾಡಿದ್ದೀರಿ. ಅವನಿಗೆ ನೇಣು ಬಿಗಿಯುವ ಮುನ್ನ ಕೊರವಂಜಿ ಉಂಡ ಅನ್ನವನ್ನು ಅವನಿಗೆ ಕೊಡಬೇಕು. ಹಾಗಾದರೆ ಮಹತಾಯಿ ಕೇಳಬೇಕು! ಅವನ ಬಲ್ಮೆಯೂ ಕಡಿಮೆಯಾಗುತ್ತದೆ. ಅದೂ ಅಲ್ಲದೆ ಮಹಾತಾಯಿ, ನಾನು ಈ ಕೋಟೆಯ ಮೆಟ್ಟಿಲು ಇಳಿದ ಕೂಡಲೆ ನೀವು ಬಾಗಿಲು ಮುಚ್ಚಬೇಕು. ಕೊರವಂಜಿ ಹೇಳಿದ ಮಾತು ಕೇಳಿ ಕರಿಮಲೆ ಕನ್ನಿಗೆ ತುಂಬ ಖುಷಿ ಯಾಯಿತು. ಅವಳೆಂದಳು– ಒಂದುಂಟು ಕೇಳಮ್ಮ ಕೊರವಂಜಿ! ನೀನು ಹೇಳಿದ್ದು ನಿಜ. ತಚ್ಚೋಳಿ ಮನೆಯ ಒದೇನ ಇಂದು ಕೋಟೆಗೆ ಬಂದ. ಅವನನ್ನು ನಾನು ಕಲ್ಲು

ಕೋಣೆಯಲ್ಲಿ ಬಂದಿಸಿದ್ದೇನೆ. ಅವನ ಅಹಂಕಾರ ಮುರಿಯಬೇಕು. ಇನ್ನೂ ಕೇಳಮ್ಮ, ಕೊರವಂಜಿ. ಅವನನ್ನು ನಾನು ಸುಮ್ಮನೆ ಬಿಡುವವಳಲ್ಲ. ಅವನನ್ನು ನೇಣಿಗೇರಿಸಿ ಕೊಲ್ಲುವುದಕ್ಕಾಗಿ ಕೋಟೆ ಬಾಗಿಲ ಒಂದು ಗಾವುದ ದೂರ ನೇಣಗಂಬದ ಸಿದ್ಧತೆ ನಡೆಯುತ್ತಿದೆ. ಆಗ ಕೊರವಂಜಿಯೆಂದಳು – ಒಂದುಂಟು ಕೇಳಬೇಕು ಮಹಾತಾಯಿ! ನನಗೆ ಊಟ ಕೊಟ್ಟುಬಿಡಿ. ಅದನ್ನು ಕೇಳಿ ಕನ್ನಿ ಕೊರವಂಜಿಗೆ ಊಟಕೊಟ್ಟಳು. ಆಗ ಕೊರವಂಜಿಯೆಂದಳು – ಒಂದುಂಟು ಕೇಳಬೇಕು ಮಹಾತಾಯಿ! ತಚ್ಚೋಳಿ ಒದೇನನ ಅಹಂಕಾರ ಅಡಗಬೇಕಾದರೆ ಕೊರವಂಜಿಯಾದ ನಾನು ತಿಂದ ಅನ್ನವನ್ನು ನಾನೇ ಅವನಿಗೆ ಕರೆದುಕೊಡುತ್ತೇನೆ. ಹಾಗಾದರೆ ಅವನ ಜಂಭ ಮುರಿಯುತ್ತದೆ. ಅದನ್ನು ಕೇಳಿದ ಕನ್ನಿ ಕೊರವಂಜಿಯನ್ನು ಕರೆದಳು. ಕೊರವಂಜಿ ವೇಷದಲ್ಲಿದ್ದ ಚೀರು ಮಡಿಲಿನಿಂದ ಮೆಲ್ಲಗೆ ತಾಯಿತವನ್ನು ತೆಗೆದು ಅನ್ನದಲ್ಲಿ ಮುಚ್ಚಿಕೊಂಡಳು. ಒದೇನನನ್ನು ಕಲ್ಲಕೋಣೆ ಯಿಂದ ಹೊರತಂದಿದ್ದರು. ಕೊರವಂಜಿ ಅನ್ನವನ್ನು ಕೊಡುತ್ತ ಒದೇನನನ್ನೂ ಒದೇನನು ಕೊರವಂಜಿರೂಪದಲ್ಲಿದ್ದ ಚೀರುವನ್ನೂ ಗುರುತಿಸಿ ಗೆಲುವಾದರು. ಒದೇನನು ಅನ್ನವನ್ನು ತೆಗೆದುಕೊಂಡು ಉಣ್ಣತೊಡಗಿದ. ಅದರಲ್ಲಿದ್ದ ತಾಯಿತವನ್ನು ಮೆಲ್ಲಗೆ ಸೊಂಟಕ್ಕೆ ಕಟ್ಟಿಕೊಂಡ. ಊಟಮಾಡಿ ಮುಗಿಯುತ್ತಾ ಬಂತು. ಊಟ ಮುಗಿದ ಕೂಡಲೆ ಒದೇನ ಉರುಮಿಯನ್ನು ಎಳೆದು ಕೈಗೆ ತೆಗೆದುಕೊಂಡ. ಮೊದಲು ಕನ್ನಿಯನ್ನು ಕಡಿದುಕೊಂದ. ಕರಿಮಲೆಗೊಡತಿ ಕುಂಞಿಕನ್ನಿ ಹಾಗೆ ಸತ್ತುಬಿದ್ದಳು. ನೇಣುಗಂಬದ ಕೆಲಸ ಮಾಡುತ್ತಿದ್ದ ಅವಳ ಸಂಗಾತಿಗಳನ್ನೂ ಒದೇನ ಕಡಿದು ನೆಲಕ್ಕೊರಗಿಸಿದ. ಬಳಿಕ ಕನ್ನಿಯು ಸಂಗ್ರಹಿಸಿ ಟ್ಟಿದ್ದ ಹಣ, ಚಿನ್ನ, ಬೆಳ್ಳಿ ಎಲ್ಲವನ್ನೂ ಉಳಿದ ಇತರ ಒಳ್ಳೊಳ್ಳೆಯ ವಸ್ತುಗಳನ್ನೂ ಎಲ್ಲವನ್ನೂ ತೆಗೆಸಿಕೊಂಡು ತಚ್ಚೋಳಿ ಮನೆ ತಲುಪಿದ. ನಡೆದ ಸಂಗತಿಯನ್ನೆಲ್ಲ ಒದೇನ ಅಣ್ಣನಿಗೆ ಹೇಳಿದ. ಎಲ್ಲರು ಸುಖದಿಂದ ಇದ್ದರು.

ಮಹಾಜನರೇ! ಯಾರೀಕೆ ಹೋಗುತ್ತಿರುವವಳು?

ಕಾವಿಲುಂ ಚಾತ್ತೋತ್ತ್ ಕುಂಞಿಚ್ಚೀರು ಹೀಗೆ ಹೇಳುತ್ತ ಅಳುತ್ತಿದ್ದಳು–ತಚ್ಚೋಳಿ ಕೋಮ ಕುರುಪ್ಪರೇ, ನನ್ನ ಭಾವಾ! ಊರಲ್ಲಿರುವ ಅಮ್ಮಂದಿರೂ (ನಾಯರ್ ಸ್ತ್ರೀಯರು) ನಾಯನ್ಮಾರರೂ ಬ್ರಾಹ್ಮಣರ ಮನೆಯ ಹೆಂಗುಸರೂ ಬ್ರಾಹ್ಮಣರೂ ಬಾಕಿ ಎಲ್ಲ ಮಂದಿಯೂ ದೈವಸ್ಥಾನಕ್ಕೆ ಚಾಮುಂಡಿ ದೈವದ ನೇಮ ನೋಡಲು ಹೋಗುತ್ತಿದ್ದಾರೆ. ಅದೂ ಅಲ್ಲದೆ ಅಲ್ಲಿ ಮನರಂಜನೆಗಾಗಿ ಬೇರೆ ಬೇರೆ ತೆರನ ಆಟಗಳಿವೆ, ಹಾಡುಗಳಿವೆ, ಕುಣಿತಗಳಿವೆ. ಅವನ್ನು ನೋಡುವುದಕ್ಕೂ ಕೇಳುವುದಕ್ಕೂ ತುಂಬ ಜನರಿರುತ್ತಾರೆ. ಊರಿಗೆ ಊರೇ ಅಲ್ಲಿಗೆ ಹೋಗುತ್ತದೆ. ಆದರೆ ನನ್ನ ಭಾವಯ್ಯ, ತಚ್ಚೋಳಿ ಮೇಪ್ಪದ ನನ್ನ ಗಂಡ ನನ್ನನ್ನು ಸುತರಾಂ ಅಲ್ಲಿಗೆ ಹೋಗಲು ಬಿಡುವುದಿಲ್ಲ. ನಾನು ಏನು ಹೇಳಿದರೂ ಅವರು ಕೇಳುತ್ತಿಲ್ಲ. ಹಾಗಾಗಿ ನೀವೇ ಅವರಿಗೆ ಹೇಳಬೇಕು. ಅವಳ ಆ ಮಾತುಗಳನ್ನು ಕೇಳಿ ತಚ್ಚೋಳಿ ಮೇಪ್ಪದ ಕೋಮ ಕುರುಪ್ಪ್ ಹೇಳಿದ – ಚಾತ್ತೋತ್ತ್ ಕುಂಞಿಚೀರು, ನೀನು ಒಂದು ಮಾತನ್ನು ಕೇಳಬೇಕು. ನಿನ್ನ ಗಂಡ ಕುಂಞಒದೇನ ನನ್ನ ತಮ್ಮನಾದರೂ ಅವನ ಕಿವಿಗಳ ಒಳಗೆ ಯಾವ ಮಾತುಗಳೂ ದಾಟುವುದಿಲ್ಲ. ಬೇಕಾದ್ದನ್ನು ಯಾವುದನ್ನೂ ಅವನು ಮಾಡುವುದಿಲ್ಲ. ಏನೇ ಇರಲಿ, ಇಂದು ಸಂಜೆ ಅವನು ಬಂದಾಗ ಅವನನ್ನು ಕರೆಸಿ ನಾನು ಹೇಳುತ್ತೇನೆ. ನೀನು ಅಳಬೇಡ. ಆ ಮಾತುಗಳನ್ನು ಕೇಳಿದ ಚೀರು ಸಂತಸದಿಂದ ಹಿಂತಿರುಗಿದಳು.

ಸಂಜೆಯಾಯಿತು. ಒದೇನ ಮನೆಗೆ ಬಂದ. ಬಾಗಿಲು ತೆಗೆದು ಒಳಬಂದವನೇ ಜೋರಾಗಿ ಕೂಗಿ ಹೇಳಿದ – ಕುಂಞಿಚೀರು! ತುಂಬ ಹಸಿವಾಗುತ್ತಿದೆ, ಅನ್ನ ಬಡಿಸು. ಆ ಮಾತುಗಳನ್ನು ಕೇಳಿದ ಚೀರು ಎಂದಳು – ತಚ್ಚೋಳಿ ಮನೆಯ ನನ್ನ ಗಂಡ! ಕೈ ಕಾಲುಗಳನ್ನು ಬೇಗ ತೊಳೆದು ಬನ್ನಿ. ಬೇಗ ಊಟಮಾಡಿ. ಆ ಮಾತುಗಳನ್ನು ಕೇಳಿ

ಒದೇನ ಕೈಕಾಲು ಮುಖ ತೊಳೆದು ಬಂದ. ಭಸ್ಮದ ಕುಡಿಕೆ ಎತ್ತಿಕೊಂಡ. ಎರಡು ಕೈಗಳಲ್ಲೂ ಭಸ್ಮ ತೆಗೆದುಕೊಂಡ. ಹಣೆಗೂ ಎದೆಗೂ ಹಚ್ಚಿಕೊಂಡ. ಪಡುದಿಕ್ಕಿನಲ್ಲಿ ಭಗವಂತನನ್ನು ನೋಡುತ್ತ ನಾಮಜಪಮಾಡುತ್ತ ನಿಂತ. ಅಲ್ಲಿಂದಲೂ ಒದೇನ ಹೊರಟ. ಒಳಗಿನ ಬಾಗಿಲನ್ನು ದಾಟಿದ. ಹುಲ್ಲುಚಾಪೆಯಲ್ಲಿ ಕುಳಿತ. ಆಗ ಕುಂಞಿಚ್ಚೀರು ತುಂಬೆ ಹೂವಿನಂಥ ಅನ್ನ ಬಡಿಸಿ ಗಂಡನ ಮುಂದೆ ತಂದಿರಿಸಿದಳು. ಅನ್ನದ ಜತೆ ಪದಾರ್ಥ ವನ್ನೂ ಬಡಿಸಿದಳು. ತಣ್ಣೀರಿನಂಥ ಹೊಚ್ಚಹೊಸ ತುಪ್ಪವನ್ನು ಮೂರು ಚಮಚ ಬಡಿಸಿದಳು. ಒದೇನ ಉಂಡ. ಬಳಿಕ ಮಂಚಕ್ಕೆ ಒರಗಿ ಮಲಗಿದ.

ತಚ್ಚೋಳಿ ಮೇಪ್ಪದ ಕೋಮಕುರುಪ್ಪ್ ಒದೇನನಲ್ಲಿ ಹೇಳಿದ – ತಚ್ಚೋಳಿ ಮೇಪ್ಪದ ನನ್ನ ತಮ್ಮಾ! ನೀನು ಊರ ವಿಶೇಷವನ್ನೇನನ್ನೂ ಕಾಣುತ್ತಿಲ್ಲವೇ? ಚಾಮುಂಡಿ ಕಾವಿನ ನೇಮಕ್ಕೆ ಯಾರೆಲ್ಲ ಹೋಗುತ್ತಾರೆ, ಗೊತ್ತೆ ಒದೇನ? ಬ್ರಾಹ್ಮಣರ ಮನೆಯ ಹೆಂಗಸರೂ ಬ್ರಾಹ್ಮಣರೂ ಊರಿನ ದೊಡ್ಡವರೂ ಸಣ್ಣವರೂ ಹೋಗುತ್ತಾರೆ. ಅಷ್ಟು ಮಾತ್ರವಲ್ಲ ಒದೇನ, ಗಂಡುಸರು ಹೆಂಗುಸರು ಅಂತ ಇಲ್ಲ. ಏನೂ ಎಗ್ಗಿಲ್ಲದೆ ಎಲ್ಲರೂ ಹೋಗುತ್ತಾರೆ. ನಮ್ಮ ಒಂದು ಮನೆ ಮಾತ್ರ ಬಾಕಿ. ಈ ಮನೆಯಲ್ಲಿರುವ ಹೆಂಗುಸರಿಗೆ ಎಷ್ಟೇ ಆಸೆಪಟ್ಟರೂ ಅಲ್ಲಿ ಹೋಗುವುದಕ್ಕಿಲ್ಲ. ನೀನು ಅವರನ್ನು ಕಳಿಸುತ್ತಿಲ್ಲ. ಕಾವಿಲುಂ ಚೀರುವನ್ನು ನೀನು ಚಾಮುಂಡಿ ನೇಮಕ್ಕೆ ಕಳುಹಿಸು. ಜತೆಗೆ ಚಾಪನೂ ಹೋಗಲಿ. ಅವಳಿಗೂ ಒಂದು ಆಸೆಯಲ್ಲವೆ, ಒದೇನ? ಅವಳು ನೋಡಿ ಬರಲಿ ಪಾಪ! ಇದನ್ನು ಕೇಳಿದ ಒದೇನನೆಂದ – ಕೋಮಕುರುಪ್ಪೇ, ನನ್ನ ಅಣ್ಣಾ! ನಾನು ಇಂದು ಚೀರುವನ್ನು ಕಳು ಹಿಸಿದರೆ ಕಾವಿಗೆ ಬಂದಿರುವ ಬ್ರಾಹ್ಮಣರೂ ಇನ್ನುಳಿದ ದೊಡ್ಡ ದೊಡ್ಡ ನಾಯಮ್ಮಾ ರರೂ ಎಲ್ಲರೂ ಅವಳನ್ನು ಕಾಣುತ್ತಾರೆ. ಕಂಡ ಮೇಲೆ ಅವರವರೇ ನಗುತ್ತಾರೆ. ಹಾಗೆ ನಕ್ಕರೆ ನಾನು ಅವರನ್ನು ಜೀವಸಹಿತ ಬಿಡಲಾರೆನಷ್ಟೆ? ಇದನ್ನು ಕೇಳಿದ ಕೋಮ ಕುರುಪ್ಪನೆಂದ – ಒದೇನ, ನೀನು ಅದನ್ನೆಲ್ಲ ಚಿಂತಿಸಬೇಡ. ಯಾರೂ ಏನೂ ಹೇಳಲಿಕ್ಕಿಲ್ಲ. ಒದೇನ ಅಣ್ಣನ ಮಾತಿನಂತೆ ಚೀರುವಿಗೆ ಹೋಗಲು ಒಪ್ಪಿಗೆಯಿತ್ತ.

ಕುಂಞಿಚೀರು ಮಿಂದು ಅಲಂಕರಿಸಿಕೊಂಡಳು. ಎರಡು ಕಣ್ಣುಗಳಗೂ ಕಾಡಿಗೆ ಹಾಕಿಕೊಂಡಳು. ಕೂದಲು ಬಾಚಿ ಕಟ್ಟಿಕೊಂಡಳು. ಆಭರಣದ ಪೆಟ್ಟಿಗೆ ತೆರೆದಿಟ್ಟು ಕುಂಕುಮದ ಬೊಟ್ಟು ಇಟ್ಟಳು. ಪಟ್ಟೆಸೀರೆಯುಟ್ಟಳು. ನಾಗಜಡೆಯನ್ನೂ ಹುಲಿಯು ಗುರನ್ನೂ ಕೊರಳಿಗೆ ಹಾಕಿಕೊಂಡಳು. ಉಂಗುರವನ್ನು ಬೆರಳುಗಳಿಗೆ ಸಿಕ್ಕಿದಳು. ಹಸ್ತ ಕಡಗವನ್ನು ಕೈಗೆ ತೊಟ್ಟಳು. ಎಲ್ಲ ರೀತಿಯಲ್ಲಿ ಅಲಂಕರಿಸಿಕೊಂಡು ಚೀರು ಹೊರಟಳು. ಕಂಡಾಚ್ಚೇರಿಯ ಚಾಪ್ಪನೂ ಜತೆಯಲ್ಲಿ ತೆರಳಿದ. ಅವರು ಹಾಗೆ ಅತ್ತ ಹೋದಾಗ

ಊರಿನ ದೊಡ್ಡವರೂ ಸಣ್ಣವರೂ ಎಂದರು –ಮಹಾಜನರೇ, ಈ ಹೋಗುತ್ತಿರುವಾಕೆ ಯಾರು? ಬ್ರಾಹ್ಮಣ ಮನೆಯ ಅಮ್ಮನವರೋ? ಕುಟ್ಟಿಪುರಂನಲ್ಲಿನ ದೊಡ್ಡಮ್ಮಣ್ಣಿಯೋ? ಯಾರೀಕೆ ಯಾರೀಕೆ ಮಹಾಜನರೇ? ಆಗ ಒಬ್ಬಾತ ಜೋನಕ ಎಂದ – ಅದು ಇವರಾರೂ ಅಲ್ಲ ಮಹಾಜನರೇ. ತಚ್ಚೋಳಿ ಮೇಪ್ಪದ ಕುಂಞ್ಯೋದೇನನ ಮಡದಿ ಕುಂಞಿಚ್ಚೀರುವಲ್ಲವೇ? ಅವಳು ತಾನೆ ಹೋಗುತ್ತಿರುವುದು? ಕುಂಞಿಚ್ಚೀರು ಮುಂದೆ ಮುಂದೆ ಹೋದಳು. ಚಾಮುಂಡಿ ಕಾವಿಗೆ ತಲಪಿದಳು. ಅವಳು ಅಲ್ಲಿಗೆ ತಲಪಿದಾಗ ನಾಲ್ಕು ಅರಮನೆಗಳ ಅರಸರು, ಅವರ ಪತ್ನಿಯರು, ಪಾರುಪತ್ಯಗಾರರು, ಅಂಗರಕ್ಷಕರು, ನೋಟಕರು – ಎಲ್ಲರೂ ಅವಳು ಬರುತ್ತಿರುವುದನ್ನು ನೋಡುತ್ತ ನಿಂತರು. ಆಗ ಅರಸರು ಎಂದರು – ಅರಸರೇ, ಈ ಬಂದಾಕೆ ಯಾರು? ಅರಸರ ಮನೆಯ ಹೆಂಗುಸೆಂದು ಹೇಳುವಂತಿದ್ದಾಳೆ. ಇವಳಿಗೆ ಎಂಥ ಜಂಭ! ಈ ಹೆಂಗುಸಿನ ಗಂಡ ಯಾರು? ಒಂದಿಷ್ಟು ಎಗ್ಗಿಲ್ಲದ ಇವಳ ಬಟ್ಟೆ ಬಿಚ್ಚಬೇಕು. ಅದನ್ನು ಚಾಪ್ಪ ಕೇಳಿಸಿಕೊಂಡ. ಅವನೆಂದ – ಒಂದು ವಿಚಾರವನ್ನು ತಿಳಿದುಕೊಳ್ಳಿ ನಾಯಮ್ಮಾರರೇ! ಇನ್ನು ಏನನ್ನೂ ಹೇಳಬೇಡಿ ನಾಯನ್ಮಾರರೇ, ತಚ್ಚೋಳಿ ಮೇಪ್ಪದ ಧನಿಗಳು, ಎಂದರೆ ತಚ್ಚೋಳಿ ಒದೇನ. ಅವರನ್ನು ಗೊತ್ತಲ್ಲವೇ ನಾಯನ್ಮಾರರೇ? ಆಗ ಅರಸರೆಂದರು– ತಚ್ಚೋಳಿ ಒದೇನನ ಹೆಣ್ಣಾದರೆ ನೀನು ಅವಳನ್ನು ಕುಳ್ಳಿರಿಸಿ ಪೂಜೆಮಾಡು. ನಮಗೆ ಅವಳನ್ನು ಏನೂ ಲಕ್ಷ್ಯವಿಲ್ಲವೋ! ಅವಳು ಇಲ್ಲಿ ಒಂದು ಕ್ಷಣವೂ ನಿಲ್ಲುವುದು ಬೇಡ. ಆ ಮಾತು ಗಳನ್ನು ಕೇಳಿದ ಕುಂಞಿಚ್ಚೀರು ಅಳಲು ಪ್ರಾರಂಭಿಸಿದಳು. ತಚ್ಚೋಳಿ ಮೇಪ್ಪದ ಒದೇನ ಗುಟ್ಟಿನಲ್ಲಿ ಚೀರುವಿನ ಹಿಂದೆಯೇ ಬಂದಿದ್ದ. ಇವರ ಮಾತುಕತೆಗಳನ್ನು ಅವನು ಕಿವಿಯಾರೆ ಕೇಳಿಸಿಕೊಂಡಿದ್ದ. ತಚ್ಚೋಳಿ ಒದೇನ ಚೀರುವನ್ನು ಕೈಯಾರೆ ಹಿಡಿದುಕೊಂಡು ನಾಲ್ಕು ಅರಮನೆಗಳಲ್ಲಿನ ಅರಸರ ಮಧ್ಯೆ ಒಯ್ದು ನಿಲ್ಲಿಸಿದ. ನಾಲ್ಕು ಅರಮನೆಗಳ ಅರಸರನ್ನು ಒದೇನ ಹೊಡೆದು ಅಟ್ಟಿದ. ಉಳಿದ ಸ್ತ್ರೀಯರೂ ಬ್ರಾಹ್ಮಣರೂ ಪೆಟ್ಟುತಿಂದು ಓಡಿದರು. ಎಲ್ಲರೂ ಓಡಿಹೋದರು. ಕಾವಿಲುಂ ಚಾತ್ತೋತ್ತ ಕುಂಞಿಚೀರು ನಿರಾತಂಕ ವಾಗಿ ನೇಮವನ್ನು ನೋಡಿದಳು. ಅಲ್ಲಿಂದ ಮೆಲ್ಲಗೆ ಹೊರಟು ಅವಳು ಕಾವಿಲುಂ ಚಾತ್ತೋತ್‌ಗೆ ಹೋದಳು. ನಡೆದ ಸುದ್ದಿ ತಿಳಿಸಿ ಅಲ್ಲಿಂದ ತಚ್ಚೋಳಿ ಮೇಪ್ಪಕ್ಕೆ ಹಿಂತಿರುಗಿ ದಳು. ತಚ್ಚೋಳಿ ಮೇಪ್ಪದ ಕೋಮಕುರುಪ್ಪ್‌ನಲ್ಲಿ ಎಲ್ಲವನ್ನೂ ತಿಳಿಸಿದಳು. ಎಲ್ಲರೂ ಸಂತೋಷದಿಂದ ಒಂದಾಗಿದ್ದರು.

ಆರಿಲ್ಲ ಮೂರಿಲ್ಲ; ಇರುವವಳೊಬ್ಬಳು ಒಡಹುಟ್ಟು

ಕರುಮಾಲಕುನ್ನ್‌ನ ಕುಂಞಿಕೋರ ಬೆಳ್ಳಿಯ ಪಟ್ಟಿ ಹಾಕಿಸಿದ ತನ್ನ ಕೋವಿಯನ್ನು ತೆಗೆದುಕೊಂಡು ಅದನ್ನು ಚೆನ್ನಾಗಿ ಒರೆಸಿ ಅದರಲ್ಲಿ ಮದ್ದನ್ನು ಜಡಿದು ತುಂಬಿಸಿದ. ಬಳಿಕ ಎತ್ತರದ ಮಲೆಯ ಮೇಲಿನ ಜಿಂಕೆಯನ್ನೂ ತಗ್ಗಿನ ಹೊಳೆಯಲ್ಲಿನ ಮೀನನ್ನೂ ಹುಡುಕುತ್ತ ಬರುತ್ತಿದ್ದಾಗ ತಚ್ಚೋಳಿಚ್ಚಿ ಉಣ್ಣಿಚ್ಚಿರ ಕೊಳದಲ್ಲಿ ಮೀಯುತ್ತಿದ್ದಳು. ಕುಂಞಿಕೋರ ಅದನ್ನು ಕಣ್ಣಾರೆ ಕಂಡ. ಕಂಡು ಬಳಿ ಬಂದು ಅವಳಲ್ಲಿ ಕೇಳಿದ – ತಚ್ಚೋಳಿಚ್ಚಿ ಉಣ್ಣಿಚ್ಚೀರು, ಕೇಳು! ಬಿಚ್ಚಿಹೋದ ನನ್ನ ಕುಡುಮದ ಕೂದಲಿಗೆ ಹಚ್ಚಿ ಕೊಳ್ಳಲು ಒಂದು ಬೊಗಸೆ ಎಣ್ಣೆ ಕೊಡುವೆಯ? ಉಣ್ಣಿಚೀರು ಎಂದಳು – ಕರುಮಾಲ ಕುನ್ನ್‌ನ ಕುಂಞಿಕೋರ! ನಾನು ತಂದ ಎಣ್ಣೆ ನಾನು ಹಚ್ಚಿಕೊಂಡು ಮುಗಿಯಿತಲ್ಲ! ಅವಳು ಮನದಲ್ಲೆ ಅಂದುಕೊಂಡಳು – ಈ ತೀಯ ಕೇಳಿದ ಮಾತುಗಳನ್ನು ನೆಲದಲ್ಲಿ ಹರಿಯುವ ಇರುವೆಯಾಗಲಿ ಬಾನಲ್ಲಿ ಹಾರುವ ಹಕ್ಕಿಯಾಗಲಿ ಕೇಳಿಸಿ ಕೊಂಡುವೇನೋ? ದೇವರೇ! ಕುಂಞಿಕೋರ ಪುನಃ ಅವಳಲ್ಲಿ ಕೇಳಿದ – ತಚ್ಚೋಳಿಚ್ಚಿ ಉಣ್ಣಿಚೀರ, ಕೇಳು! ಬಿಚ್ಚಿಹೋದ ನನ್ನ ಕುಡುಮದ ಕೂದಲಿಗೆ ಒಂದು ಬೊಗಸೆ ಗೊಂಪು ಹಿಂಡಿ ಕೊಡುವೆಯ? ಅದಕ್ಕೆ ಉಣ್ಣಿಚ್ಚಾರ ಎಂದಳು – ಕರುಮಾಲಕುನ್ನ್‌ನ ಕುಂಞಿಕೋರಾ! ನಾನು ತಂದ ಗೊಂಪು ಹಚ್ಚಿಕೊಂಡು ಮುಗಿದುಹೋಯಿತು. ಅವಳು ಮತ್ತೂ ಮನದಲ್ಲೇ ನೆನೆದಳು – ಈ ತೀಯನು ನನ್ನಲ್ಲಿ ಕೇಳಿದ ಮಾತನ್ನು ಯಾರಾದರೂ ಕೇಳಿಸಿಕೊಂಡರೇ? ಕುಂಞಿಕೋರ ಅಲ್ಲಿಂದ ಹೊರಟುಹೋದ. ಹೋದವನು ನೇರವಾಗಿ ಮಾಣಿಕೋತ್ತ್ ಮನೆಗೆ ಹೋದ. ಅವನು ಅಲ್ಲಿಗೆ ತಲಪಿದಾಗ ಕೋಮ ಕುರುಪ್ಪ್ ಬಾಗಿಲಲ್ಲೆ ಕುಳಿತಿದ್ದ. ಕೋರ ಹೆಬ್ಬಾಗಿಲು ದಾಟಿ ಒಳಹೋದ. ಕೋಮ ಕುರುಪ್ಪ

ಕೇಳಿದ – ಕರುಮಾಲಕುನ್ನ್‌ನ ಕುಂಞಿಕೋರ! ನೀನು ಯಾವ ಕಡೆಗೆ ಹೊರಟವನು? ಇಲ್ಲಿಗೆಂದೇ ಬಂದವನೋ ಅಥವಾ ಬೇರೆಲ್ಲಿಗಾದರೂ ಹೊರಟವನೋ? ಅದಕ್ಕೆ ಕೋರನೆಂದ – ನಾನು ಇಲ್ಲಿಗೆಂದೇ ಬಂದವನು. ಕೋಮಕುರುಪ್ಪ್ ಕೇಳಿದ – ಏನು ಹೀಗೆ ಬಂದು ಬಿಟ್ಟೆ ಕೋರಾ? ಅದಕ್ಕೆ ಕುಂಞಿಕೋರನೆಂದ – ತಚ್ಚೋಳಿ ಕೋಮ ಕುರುಪ್ಪರೇ! ತಚ್ಚೋಳಿಚ್ಚಿ ಉಣ್ಣಿಚೀರುವಿಗೆ ಹಚ್ಚಲು ಎಣ್ಣೆ, ಉಡಲು ಬಟ್ಟೆಗಳನ್ನು ಯಾರಾದರೂ ಕೊಡಿಸಿದವರು ಇದ್ದಾರೆಯೆ? ಅದಕ್ಕೆ ಕೋಮಕುರುಪ್ಪೆಂದ – ನಾನು ಹೊರತು ಅವಳಿಗೆ ಬೇರೆ ಯಾರೂ ಎಣ್ಣೆ ಬಟ್ಟೆ ಕೊಟ್ಟವರಿಲ್ಲ. ಅದಕ್ಕೆ ಕೋರನೆಂದ – ಹಾಗಾದರೆ ನಾನು ಈಗ ಅದನ್ನು ಕೊಟ್ಟು ಬಿಡಲೆ? ಕೋಮಕುರುಪ್ಪ್‌ಗೆ ಚಿನ್ನವೆಂದರೆ ತುಂಬ ಆಸೆ. ಕೋರನ ಮಾತು ಕೇಳಿ ಕುರುಪ್ಪ್‌ನ ಮುಖ ಅರಳಿತು. ಅವನೆಂದ – ಆಗಲಿ! ಅದಕ್ಕೆ ವ್ಯವಸ್ಥೆ ಮಾಡಿಕೊಳ್ಳೋಣ. ಮುಂದಿನ ಭಾನುವಾರಕ್ಕೆ ಅವರು ದಿನ ನಿಶ್ಚೈಸಿದರು. ಇವರು ಹೀಗೆ ಮಾತನಾಡಿ ನಿಶ್ಚೈಸಿ ಕೊಂಡುದನ್ನು ಉಣ್ಣಿಚೀರು ಮಿಂದು ಮನೆಗೆ ಮರಳಿದವಳು ಕೇಳಿಸಿಕೊಂಡಳು. ಅವಳು ತನ್ನ ಪಡುಕೋಣೆಗೆ ಹೋದಳು. ಒದ್ದೆ ಬಟ್ಟೆ ಬದಲಾಯಿಸಲಿಲ್ಲ. ಪಡುಕೋಣೆಯ ಹೊಂಬೆತ್ತದ ಮಂಚದಲ್ಲಿ ಕವುಚಿ ಬಿದ್ದುಕೊಂಡಳು. ದಿನ ನಿಶ್ಚೈಯಿಸಿಕೊಂಡು ಕುಂಞಿಕೋರ ಹೊರಟುಹೋದ. ವಳೆಯ ತ್ತೆಳಂ ಕುನ್ನಿನ ಅತ್ತಿಗೆ ಕನ್ನಿ (ನಾಗತ್ತೆಳಂಕೋಡಿ ಕನ್ನಿ – ಎಂತಲೂ ಇದೆ. ಕೋಮ ಕುರುಪ್ಪ್‌ನ ಹೆಂಡತಿ) ಬಂದು ಚೀರುವನ್ನು ಕರೆದಳು – ತಚ್ಚೋಳಿಚ್ಚಿ ಉಣ್ಣಿಚ್ಚೀರು, ಕೇಳು! ಇಂದು ಮೀಯಲು ಹೋದಲ್ಲಿ ನಿನಗೆ ಯಾವ ಸಂಕಟ ಎದುರಾಯಿತು ಮಗೂ? ಏಳು. ಎದ್ದು ಬಟ್ಟೆ ಬದಲಾಯಿಸು. ಬಂದು ಗಂಜಿ ಊಟಮಾಡು. ಚೀರುವಿನ ಉತ್ತರವಿಲ್ಲ, ಮರುಮಾತಿಲ್ಲ. ಎರಡು ಸಂಜೆಗಳು ಹಾಗೆಯೇ ಕಳೆದುವು.

ಕೊಡುಮಲೆ ಕುಂಕಿಯ ಪಡುಕೋಣೆಯಲ್ಲಿ ತಚ್ಚೋಳಿಯ ಕಣ್ಮಣಿ ಬಾಲ ಒದೇನನು ಗಾಢವಾಗಿ ನಿದ್ರಿಸುತ್ತಿದ್ದ. ನಿದ್ದೆಯಲ್ಲಿ ಅವನಿಗೆ ಹೀಗೆ ಕೇಳಿಸಿತು – ತಚ್ಚೋಳಿ ಒದೇನ, ಪ್ರಿಯ ಪುತ್ರಾ! ಇಲ್ಲಿ ಹೀಗೆ ಮತಿಕೆಟ್ಟು ನಿದ್ದೆಮಾಡುತ್ತಿರುವೆಯಲ್ಲ? ಆರಿಲ್ಲ. ಮೂರಿಲ್ಲ, ಇರುವ ಒಬ್ಬಳೇ ತಂಗಿ ಅಲ್ಲಿ ಸಾಯುತ್ತಿದ್ದಾಳೆ! ಮಿಂದು ಬಂದವಳು ಬಟ್ಟೆ ಬದಲಿಸಿಲ್ಲ, ಬಾಯಿಗೆ ಒಂದು ಗುಟುಕು ನೀರು ಹಾಕಿಕೊಂಡಿಲ್ಲ. ಕುಂಞುಣ್ಣಿಚ್ಚೀರು ಈಗ ಸಾಯು ವವಳಿದ್ದಾಳೆ. ಒದೇನ ನಿದ್ದೆಯಿಂದ ಥಟ್ಟನೆ ಎದ್ದ. ಕಂಡಾಚ್ಚೇರಿ ಚಾಪ್ಪನನ್ನು ಹೋಗಿ ಕರೆದೆಬ್ಬಿಸಿದ. ಚಾಪ್ಪಾ! ಏನೋ ಒಂದು ಸಂಕಟ ನಮಗೆ ಕಾದಿದೆ. ಏನೆಂದು ನನಗೆ ತಿಳಿಯದು. ನಾವು ಕೂಡಲೇ ಮಾಣಿಕೋತ್ತ್‌ಗೆ ಹೋಗೋಣ. ರಾತ್ರೆಯೂ ಹಗಲೂ ಅವರು ಪಯಣಿಸಿ ಮಾಣಿಕೋತ್ತ್ ಮನೆಗೆ ಬಂದರು. ಬಂದಾಗ ಬಾಗಿಲು ಹಾಕಿಕೊಂಡಿದೆ. ಒದೇನ ಹೋಗಿ ಜೋರಾಗಿ ಕರೆದ – ವಳೆಯತ್ತೆಳಂಕುನ್ನ್‌ನ ಅತ್ತಿಗೆಮ್ಮಾ! ಬಾಗಿಲು

ತೆರೆಯಿರಿ ಅತ್ತಿಗೆಮ್ಮಾ! ಒಂದು ಕರೆದುದಕ್ಕೆ ಒಂಭತ್ತು ಓಗೊಡುತ್ತ ಬಂದು ಅತ್ತಿಗೆ ಬಾಗಿಲು ತೆರೆದಳು. ಒದೇನ ಅತ್ತಿಗೆಯಲ್ಲಿ ಕೇಳಿದ – ಅತ್ತಿಗೆಮ್ಮಾ! ಏನು ವರ್ತಮಾನ? ಏನು ನಡೆಯುತ್ತಾ ಇದೆ? ಆಗ ಅತ್ತಿಗೆ ಕನ್ನಿ ಹೇಳಿದಳು – ತಚ್ಚೋಳಿಯ ಕಣ್ಮಣಿ ಬಾಲಒದೇನ! ಇಂದಿಗೆ ಮೂರುದಿನವಾಯಿತು. ಉಣ್ಣಿಚ್ಚೀರ ಮಗು ಮಿಂದು ಬಂದು ಬಟ್ಟೆ ಬದಲಾಯಿಸಿಲ್ಲ, ಬಾಯಾರಿಕೆಗೆ ಗಂಟಲು ನೆನೆಸಲಿಲ್ಲ. ಪಡುಕೋಣೆಯ ಹೊಂಬೆತ್ತದ ಮಂಚದಲ್ಲಿ ಕವುಚಿ ಬಿದ್ದಿದ್ದಾಳೆ. ಆಗ ಒದೇನ ಕೇಳಿದ – ವಳಯತ್ತೆಳಂಕುನ್ನ್‌ನ ಅತ್ತಿಗೆಮ್ಮಾ ! ಅವಳಿಗೆ ಏನು ಮಾಡಿದಿರಿ? ಉತ್ತರವಾಗಿ ಕನ್ನಿ ಎಂದಳು – ನಿನ್ನಾಣೆ ನನ್ನಾಣೆ. ನಾನು ಯಾವುದನ್ನೂ ಕಂಡಿಲ್ಲ ಕೇಳಿಲ್ಲ, ಮಗೂ ಒದೇನ! ನನ್ನಲ್ಲಿ ಏನನ್ನೂ ಆಕೆ ಹೇಳುವುದಿಲ್ಲ. ಒದೇನ ಪಡುಕೋಣೆಗೆ ಹೋದ.ಉಣ್ಣಿಚ್ಚೀರುವನ್ನು ಕರೆದ. ಆಕೆ ತಡೆದುಕೊಳ್ಳಲಾರದೆ ಗಟ್ಟಿಯಾಗಿ ರೋದಿಸಿದಳು. ಬಳಿಕ ಒದೇನನಲ್ಲಿ ಕೇಳಿದಳು – ನನ್ನ ಪ್ರೀತಿಯ ಸಣ್ಣಣ್ಣ! ನಿಮಗೆ ಹತ್ತಿಲ್ಲ, ಹಲವಿಲ್ಲ. ನಾನೊಬ್ಬಳೇ ತಂಗಿ ಇರುವುದು. ಆದರೇನು? ತಂಗಿಗಿಂತ ತಂಗ(ಚಿನ್ನ) ಹೆಚ್ಚು. ನನ್ನ ದೊಡ್ಡಣ್ಣನ ಬಳಿ ಮುಡಿಬಂಗಾರವಿಲ್ಲ, ಪಾಪ! ಅದಕ್ಕಾಗಿ ಅವರು ನನ್ನನ್ನು ಹಿಡಿದು ತೀಯನೊಬ್ಬನಿಗೆ ಕೊಡುತ್ತಿದ್ದಾರೆ. ಆಗ ಒದೇನನೆಂದ – ಆಗಲಿ ಅದಕ್ಕೇನು? ನಿನಗೆ ತೀಯನ ಜತೆ ಹೋಗಬಾರದೆ? ಬಳಿಕ ಅತ್ತಿಗೆಯಲ್ಲಿ ಕೇಳಿದ – ಅತ್ತಿಗೆಮ್ಮಾ! ರಾತ್ರೆಯ ಅನ್ನ ಆಗಿದೆಯೆ? ಅನ್ನ ಸಿದ್ಧವಿದೆ – ಎಂದಳು ಅತ್ತಿಗೆ. ಒದೇನ ಉಣ್ಣಿಚ್ಚೀರುವನ್ನು ಕರೆದುಕೊಂಡ. ಬಟ್ಟೆಬದಲಾಯಿಸಿಕೊಳ್ಳಲು ಹೇಳಿದ. ಬಟ್ಟೆ ಬದಲಾಯಿಸಿ ಉಡಿಸಿದ. ಅವಳನ್ನು ಕರೆದುಕೊಂಡು ಅಡುಗೆ ಮನೆಗೆ ಹೋದ. ರಾತ್ರೆಯ ಊಟಮಾಡಿಸಿದ. ಇನ್ನು ನಿನ್ನ ಪಡುಕೋಣೆಗೆ ಹೋಗು – ಎಂದ. ಮಾಳಿಗೆಯ ಮೆಟ್ಟಲೇರಿ ಮೇಲೆ ಹೋದ. ಅವನು ಹೋದಾಗ ಕೋಮಕುರುಪ್ಪ್‌ಗೆ ಥಟ್ಟನೆ ಎಚ್ಚರವಾಯಿತು. ಅವನು ಎದ್ದು ಕುಳಿತು ಒದೇನನಿಗೆಂದ – ತಚ್ಚೋಳಿ ಕಣ್ಮಣಿ ಬಾಲಒದೇನ! ಇದ್ಯಾವ ಹೋಗಾಟ ನಿನ್ನದು? ತಮ್ಮಾ, ಭಾನುವಾರ ಹತ್ತಿರ ಬಂದು ಬಿಟ್ಟಿತು. 'ಊವಂ' ಕಾರ್ಯಕ್ರಮ ನಿಶ್ಚೈಸಿದೆ. ಅದರ ಯಾವುದೇ ಸಿದ್ಧತೆಯೂ ಆಗಿಲ್ಲ. ಆಗ ಒದೇನ ಕೇಳಿದ – ಯಾರಿಗೆ ಊವಂ ಕಾರ್ಯಕ್ರಮ, ಅಣ್ಣಾ? ಕೋಮಕುರುಪ್ಪೆಂದ – ಹಾಗೆಂದರೇನು? ನಮ್ಮ ಉಣ್ಣಿಚ್ಚೀರುವಿಗಲ್ಲ ವೇನೋ? ಒದೇನ ಕೇಳಿದ – ಅವಳಿಗೆ ಗಂಡನಾಗಿ ಯಾರನ್ನು ಕಂಡುಕೊಂಡಿರಿ? ಕೋಮಕುರುಪ್ಪೆಂದ – ಕರುಮಾಲ ಕುನ್ನ್‌ನ ಕುಂಞಿಕೋರ! ಅದಕ್ಕೆ ಒದೇನ ಹೇಳಿದ – ಇದೇನಣ್ಣ! ಇರುವುದೊಬ್ಬಾಕೆ ಒಡಹುಟ್ಟು ತಂಗಿ. ಅವಳನ್ನು ತೀಯನೊಬ್ಬನಿಗೆ ಹಿಡಿದುಕೊಡುವುದೆ? ಮಾಳಿಗೆಯ ಮೇಲೆ ಕುಳಿತುಕೊಳ್ಳುವುದು ಯಾಕೆ? (ಈ ಯಜಮಾನಿಕೆ ಯಾಕೆ?). ಕುಂಬಳಕಾಯಿ ಯಂತೆ ನಿಮಗೆ ಎಲ್ಲ ಕಡೆ ನರೆತಿದೆಯಲ್ಲಣ್ಣ? ಅದಕ್ಕೆ ಕೋಮಕುರುಪ್ಪೆಂದ – ನಿನ್ನಾಣೆ

ನನ್ನಾಣೆ ಒದೇನ! ಕರುಮಾಲಕುನ್ನ್ ಕುಂಞಿಕೋರ ತೀಯನೆಂಬುದೇ ನನಗೆ ಗೊತ್ತಾಗಲಿಲ್ಲ. ಒದೇನನಿಗೆ ಸಿಟ್ಟೇರಿತು. ಅವನೆಂದ – ಅಣ್ಣಾ! ನಿಮಗೆ ನಾನು ಏನು ಹೇಳಲಿ? ಒದೇನ ಮಾಳಿಗೆಯ ಮೆಟ್ಟಲಿಳಿದ. ಚಾಪ್ಪನನ್ನು ಕರೆದು ಹೇಳಿದ – ಹೊತ್ತು ಕಂತುವ ಸಮಯಕ್ಕೆ ನಾವು ಕರುಮಾಲಕುನ್ನ್‌ನಲ್ಲಿರಬೇಕು. ಅಂತೆಯೇ ಆ ಹೊತ್ತಿಗೆ ಅವರು ಅಲ್ಲಿದ್ದರು. ಅಲ್ಲಿ ಹದಿನೆಂಟು ದಿಕ್ಕಿಗೂ ಬಿಗಿಕಾವಲು ಎಂದೂ ಕಡಿಮೆಯಾಗದು. ಕಾವಲುಗಾರರು ಇವರನ್ನು ಮೇಲಕ್ಕೆ ಬಿಡಲಿಲ್ಲ. ಅಷ್ಟರಲ್ಲಿ ಮಾಳಿಗೆಯ ಮೇಲಿನಿಂದ ಕುಂಞಿಕೋರ ಕೇಳಿದ – ಯಾರು ಬಂದವರು, ಕಾವಲುಗಾರರೆ? ಅವರು ಉತ್ತರಿಸಿದರು –ತಚ್ಚೋಳಿಯ ಸಣ್ಣ ಕುರುಪ್ಪರಂತೆ! ಅವರನ್ನು ಮೇಲಕ್ಕೆ ಬಿಡುವಂತೆ ಕೋರ ಆಜ್ಞಾಪಿಸಿದ. ಒದೇನ ಮಾಳಿಗೆಯ ಮೆಟ್ಟಲೇರಿ ಹೋದ. ಕುಂಞಿಕೋರ ಅವನನ್ನು ಕೈಹಿಡಿದು ತನ್ನ ಆಸನದಲ್ಲಿ ಕುಳ್ಳಿರಿಸಿದ. ಬಳಿಕ ಕೇಳಿದ – ತಚ್ಚೋಳಿಯ ಒದೇನ! ರಾತ್ರೆಯ ಊಟ ಮಾಡಿದಿರಾ? ಅದಕ್ಕೆ ಒದೇನನೆಂದ – ನನಗೆ ಶನಿವಾರ ಉಪವಾಸ. ರಾತ್ರೆ ನಾನು ಉಣ್ಣುವುದಿಲ್ಲ. ಕೋರನೆಂದ ಹಾಗಾದರೆ ಚಾಪ್ಪನಾದರೂ ಉಣ್ಣಲಿ. ಅದಕ್ಕೆ ಚಾಪ್ಪನೆಂದ – ನಾನು ಧನಿಗಳ ಆಳು. ನಾನು ಹಾಗೆ ಉಣ್ಣುವವನಲ್ಲ. ಬಳಿಕ ಕೋರ ಕೇಳಿದ – ಈ ರಾತ್ರೆಹೊತ್ತು ಬಂದುದು ಏನು ಕಾರಣ ಒದೇನ? ಅದಕ್ಕೆ ಅವನೆಂದ – ಕುಂಞಿ ಕೋರಾ! ನಾನು ಮಾಣಿಕೋತ್ತ್‌ನಲ್ಲಿ ಇರಲಿಲ್ಲವಲ್ಲ! ಪುರಮಾಲದ ತಿರುಗಾಟಕ್ಕೆ ಹೋಗಿದ್ದೆ. ನಾನು ಈಗ ತಾನೆ ಮಾಣಿಕೋತ್ತ್‌ಗೆ ತಲಪಿದಾಗ ನನಗೆ ಅಣ್ಣ ತಿಳಿಸಿದ – ಊವಂ ನಿಶ್ಚೈಸಿ ನೀನು ಇತ್ತ ಬಂದೆಯಂತೆ! ಮಾಣಿಕೋತ್ತ್‌ನಲ್ಲಿ ಅದರ ಯಾವುದೇ ಸಿದ್ಧತೆ ನಡೆದಿಲ್ಲ. ಭಾನುವಾರ ನಾಳೆಯೇ ಬಂದುಬಿಟ್ಟಿತು. ಮನೆಯಲ್ಲಿ ಪುಡಿಗಾಸಿಲ್ಲ. ಆ ಮಾತನ್ನು ಕೇಳಿದ ಕೋರ ಎರಡು ಪೆಟ್ಟಿಗೆ ಹೊನ್ನು ಕೊಟ್ಟು ಬಿಟ್ಟ. ಒದೇನ ಆ ಪೆಟ್ಟಿಗೆಗಳನ್ನು ತೆಗೆದುಕೊಂಡು ಹೊರಟೇಬಿಟ್ಟ. ಒಂದೇ ಸವನೆ ನಡೆಯುತ್ತ ಇದ್ದಾಗಲೇ ಭಾನುವಾರದ ಮುಂಜಾನೆ ಬಿರಿದುಕೊಂಡಿತು. ಒದೇನ ಚಾಪ್ಪನಲ್ಲೆಂದ – ಕಂಡಾಚ್ಚೇರಿ ಚಾಪ್ಪಾ! ಕಾಣುವವ ರೆಲ್ಲರೂ ಕಾಣಲಿ – ಊವಂನ ಸಿದ್ಧತೆ ಇಲ್ಲಿ ಜೋರಾಗಿ ನಡೆಯುತ್ತಿದೆ ಎಂಬುದನ್ನು. ನೀನು ತೆಂಗಿನ ಮರವೇರಿ ನಾಲ್ಕಾರು ಹಸಿ ಓಲೆಗಳನ್ನು ಕಡಿದು ತಂದು ಹೊಗೆ ಎಬ್ಬಿಸು. ಯಾರಿಗೂ ಇದು ತಿಳಿಯುವುದು ಬೇಡ. ಚೆನ್ನಾಗಿ ಹೊಗೆ ಏಳಲಿ. ಹೊತ್ತು ಕತ್ತಲಾಗುತ್ತಿರುವಂತೆ ಕರುಮಾಲ ಕುಂಞಿಕೋರ ತನ್ನ ಆರು ಸಾವಿರ ಜನರೊಂದಿಗೆ ಆನೆಯ ಮೇಲೇರಿ ಬಂದ. ಆಗ ಒದೇನ ಚಾಪ್ಪನಿಗೆಂದ – ಹುಡುಗಿಯನ್ನು ಅಲಂಕಾರಮಾಡಿಸಿ. ಕೋರನ ಬಳಿ ಪೆಟ್ಟಿಗೆಗಟ್ಟಲೆ ಚಿನ್ನವಿದೆ. ಅದನ್ನು ಅವನು ಮರಳಿ ಒಯ್ಯುವುದು ಬೇಡ. ಅವನಲ್ಲಿರುವ ಚಿನ್ನವನ್ನು ತೆಗೆದುಕೋ. ಚಾಪ್ಪ ಅಂತೆಯೇ ಹೋಗಿ ಹೊನ್ನನ್ನು ತೆಗೆದುಕೊಂಡ.

ಒದೇನನಿಗೆ ಥರಥರ ಕಂಪಿಸಲು ಪ್ರಾರಂಭವಾಯಿತು. ಅವನು ಕೋರನ ಕಾವಲುಗಾರನನ್ನು ಸಮೀಪಿಸಿದ. ಸೊಂಟಕ್ಕೆ ಕಟ್ಟಿಕೊಂಡಿದ್ದ ಉರುಮಿಯನ್ನು ಎಳೆದು ಹೊರ ತೆಗೆದ. ನೆಲದಿಂದ ಮೇಲಕ್ಕೆ ಒಂದು ಲಾಗ ಹೊಡೆದು ಆನೆಯ ಮೇಲೆ ಏರಿ ಕೇಳಿದ – ಕರುಮಾಲಕುನ್ನ್‌ನ ಕುಂಞಿಕೋರಾ! ತಚ್ಚೋಳಿ ಮನೆಯ ಹೆಣ್ಣಿನ ಜತೆ ಪುಡಮುರಿ ಮಾಡಿಕೊಳ್ಳುತ್ತಿಯಾ? ಕುಂಞಿಕೋರನ ತಲೆಯನ್ನು ಕತ್ತರಿಸಿ ಕೆಳಗೆಸೆದ. ಅವನ ಜತೆಗೆ ಬಂದವರೆಲ್ಲ ತರಗೆಲೆಯ ಹಾಗೆ ಹಾರಿಹೋದರು. ಆನೆಯನ್ನು ಇವರು ಹಿಡಿದುಕೊಂಡರು. ಅವರು ಓಟಕಿತ್ತರು. ಓಡುತ್ತಾ ಕರುಮಾಲಕುನ್ನ್ ತಲಪಿದರು. ಕರುಮಾಲಕುನ್ನ್ ಎಂಬ ಗುಡ್ಡವನ್ನೇರಿದರು. ಕಣ್ಣು ಮುಚ್ಚಿ ತೆರೆಯುವುದರೊಳಗೆ ಅವರು ಕುರುಮಾಲಕುನ್ನನ್ನು ವಶಪಡಿಸಿಕೊಂಡರು.

ಚೀರು ಅಮ್ಮನ ಚೌರಿಯನ್ನು ನಿಮ್ಮ ಕುಡುಮಕ್ಕೆ ಸೇರಿಸಿ ಕಟ್ಟೋಣ

ತಚ್ಚೋಳಿಚ್ಚಿ ಕುಂಬೆಕುಂಞಿ ಹೀಗೆಂದಳು – ಚೆಕ್ಯೂರ ಮನೆಯ ನನ್ನ ಹಡೆದಮ್ಮ! ನನಗೆ ಇಂದು ಒಂದು ದೊಡ್ಡ ಆಸೆಯುಂಟಾಗಿದೆ. ಅದಕ್ಕೆ ಅವಳ ಅಮ್ಮ ಹೀಗೆಂದಳು –ತಚ್ಚೋಳಿಚ್ಚಿ ಕುಂಬೆಕುಂಞಿ, ಕೇಳು. ನಿನಗೆ ಯಾವುದು ಅಂಥ ಆಸೆ? ಅದಕ್ಕೆ ಅವಳೆಂದಳು – ಚೆಕ್ಯೂರ ಮನೆಯ ನನ್ನ ಹಡೆದವ್ವ, ನಾನು ಮೂಡು ಪೆರುಮಾಳ್ ದೇವರಿಗೆ (ಕೊಟ್ಟಿಯೂರು) ಕೈಮುಗಿಯಲು ಹೋಗಬೇಕೆಂಬಾಸೆ. ಅದಕ್ಕೆ ಅಮ್ಮ ಎಂದಳು – ತಚ್ಚೋಳಿಚ್ಚಿ ಕುಂಬೆ, ನೀನು ನನ್ನಲ್ಲಿ ಕೇಳಿ ಅಲ್ಲಿಗೆ ಹೋಗಬೇಡ. ಚೆಕ್ಯೂರ ಚಂದು ಈಗ ಯುವಕನಾಗಿದ್ದಾನೆ. ಅವನಲ್ಲಿ ಕೇಳಿ ನೀನು ಅಲ್ಲಿಗೆ ಹೋಗು. ತಚ್ಚೋಳಿಚ್ಚಿ ಕುಂಬೆ ಈಚೆ ಹೊರಭಾಗಕ್ಕೆ ಬಂದಳು. ಆಕೆ ಚಂದುವಿನಲ್ಲಿ ಹೇಳಿದಳು – ಚೆಕ್ಯೂರ ಮನೆಯ ನನ್ನ ಗಂಡಾ! ನನಗೆ ಇಂದು ಒಂದು ದೊಡ್ಡ ಆಸೆ ಯುಂಟಾಗಿದೆ. ಮೂಡು ಪೆರುಮಾಳ್ ದೇವರಿಗೆ ಕೈಮುಗಿಯಲು ಅಲ್ಲಿಗೆ ಹೋಗಬೇಕೆಂಬ ಆಸೆ. ಕೂಡಲೆ ಚಂದು ಹೇಳಿದ – ತಚ್ಚೋಳಿಚ್ಚಿ ಕುಂಬೆ, ಕೇಳು. ಪೆರುಮಾಳ್ ದೇವರಿಗೆ ಕೈಮುಗಿಯಲು ನೀನು ಅಲ್ಲಿಗೆ ಹೋಗುವುದು ಬೇಡ. ನೀನು ಇಂದು ದೇವರ ಸಂಗತಿಯನ್ನು ಪ್ರಸ್ತಾಪಿಸಿದ್ದಕ್ಕೆ ನಾವು ಹದಿನಾರು ಬೆಳ್ಳಿಹಣವನ್ನು ಅಲ್ಲಿಗೆ ಒಪ್ಪಿಸಿಬಿಡೋಣ. ಅದಕ್ಕೆ ಕುಂಬೆ ಎಂದಳು – ಚೆಕ್ಯೂರ ಮನೆಯ ನನ್ನ ಗಂಡಾ! ನೀವು ನನ್ನನ್ನು ತಡೆದರೂ ನಾನು ಕೇಳುವವಳಲ್ಲ. ಮೂಡು ಪೆರುಮಾಳ್ ದೇವರಿಗೆ ಕೈಮುಗಿಯಲು ನಾನು ಹೋಗಲೇಬೇಕು. ಕೂಡಲೆ ಚಂದು ಎಂದ – ತಚ್ಚೋಳಿಚ್ಚಿ ಕುಂಬೆ, ಕೇಳು. ಅಷ್ಟೊಂದು ಕಡ್ಡಾಯವಾಗಿ ಹೋಗಲೇಬೇಕೆಂದಾದರೆ ತಚ್ಚೋಳಿ ಮನೆಯ ನಿನ್ನ ಮಾವಂದಿರು ಇದ್ದಾರೆ. ಅವರಲ್ಲಿ ಕೇಳಿ ಹೋಗಬಹುದು. ಆ ಮಾತುಗಳನ್ನು ಕೇಳಿದ

ಕುಂಬೆ ಉಟ್ಟುಬಟ್ಟೆಯಲ್ಲೆ ಬಾಚಿದ ಮುಡಿಯಲ್ಲೆ ಹೊರಟಳು. ಹಾಗೆ ನಡೆದು ಅವಳು ತಚ್ಚೋಳಿ ಮನೆಗೆ ತಲಪಿದಾಗ ತಚ್ಚೋಳಿಯ ಕಣ್ಮಣಿ ಬಾಲ ಒದೇನ ಮನೆಬಾಗಿಲಲ್ಲೆ ಕುಳಿತುಕೊಂಡಿದ್ದ. ಅವನು ಕೇಳಿದ – ಏನಮ್ಮ ತಚ್ಚೋಳಿಚ್ಚಿ ಕುಂಬೆಕುಂಞಿ? ನೀನು ಇಲ್ಲಿಗೆ ಬಾರದೆ ಸುಮಾರು ಮೂರು ವರ್ಷಕ್ಕಿಂತ ಹೆಚ್ಚೇ ಆಗಿರಬಹುದಲ್ಲವೆ? ಅದಕ್ಕೆ ಅವಳು ಬೋದಿಗೆ ಕಂಬದ ಮರೆಗೆ ನಿಂತುಕೊಂಡು, ಉಂಗುರ ಹಾಕಿದ ಬೆರಳುಗಳಿಂದ ಬಾಯನ್ನು ಮುಚ್ಚಿ ಉತ್ತರವಿತ್ತಳು – ತಚ್ಚೋಳಿ ಸಣ್ಣ ಮಾವ! ಚೆಕ್ಕೂರ ಮನೆಯಲ್ಲಿ ನನಗೆ ಕೈತುಂಬ ಕೆಲಸ. ಹಾಗಾಗಿ ನಾನು ಈ ಕಡೆ ಬರಲು ಸಾಧ್ಯವಾಗಲಿಲ್ಲ. ಅದಕ್ಕೆ ಒದೇನನೆಂದ – ಇಂದು ಏನಮ್ಮ ಬಂದೆ? ಅದಕ್ಕೆ ಅವಳೆಂದಳು– ತಚ್ಚೋಳಿ ಮನೆಯ ಸಣ್ಣಮಾವ! ನನಗೆ ಇಂದು ಒಂದು ದೊಡ್ಡ ಆಸೆಯಾಗಿದೆ. 'ನಿನಗೆ ಯಾವುದು ಅಂಥ ಆಸೆ?' ಕೂಡಲೆ ಅವಳೆಂದಳು – ಮೂಡು ಪೆರುಮಾಳ್ ದೇವರನ್ನು ಕಂಡು ವಂದಿಸಿ ಬರಲು ಅಲ್ಲಿಗೆ ಹೋಗಬೇಕೆಂಬ ಆಸೆ. ಅದಕ್ಕೆ ಒದೇನನೆಂದ – ತಚ್ಚೋಳಿಚ್ಚಿ ಕುಂಬೆ ಕುಂಞೀ, ನಿನಗೆ ಇದ್ಯಾವ ಬುದ್ಧಿ ಬಂತು ಹೇಳು? ನಮ್ಮ ಮನೆಯ ಹೆಂಗುಸರಿಗೆ ಯಾರಿಗೂ ಇಂಥ ಬುದ್ಧಿ ಇರಲಿಲ್ಲವಲ್ಲ? ಪೆರುಮಾಳಿಗೆ ಕೈಮುಗಿಯಲು ನೀನು ಹೋಗುವುದು ಬೇಡ. ನೀನು ಇಂದು ಈ ಸಂಗತಿಯನ್ನು ಪ್ರಸ್ತಾಪಿಸಿದ್ದಕ್ಕೆ ನಿನ್ನ ಹೆಸರಲ್ಲಿ ಹದಿನಾರು ಬೆಳ್ಳಿ ಹಣವನ್ನು ಕೊಡೋಣ. ಕೂಡಲೆ ಆಕೆಯೆಂದಳು – ತಚ್ಚೋಳಿ ಸಣ್ಣ ಮಾವ! ನನ್ನ ಅಮ್ಮನಿಗೆ ಕೊಂಡಾಟದ ಸಣ್ಣ ಮಾವ! ಇಲ್ಲಿ ನನ್ನ ಅಮ್ಮನ ಏಳು ತೆರನ ಚಿನ್ನದ ಆಭರಣಗಳಿವೆ, ಸಣ್ಣಮಾವ! ಆಮಾಡ, ತಾಲಿ, ಕೊಮಣಿ, ಕೈಕ್ಕಡವ, ಚೆಕ್ಕಿಮಾಲೆ, ಮುಚ್ಚಿರ ಪೊವ್ವೊ, ಮುಡಿಮಾಲೆ, (ಮಲಯಾಳಿ ಆಭರಣ ವಿಶೇಷಗಳು) ವರ್ಣೋಜ್ವಲ ಪಟ್ಟೆಸೀರೆ – ಇವೆಲ್ಲ ಇವೆ ಮಾವ! ಚಿನ್ನದಿಂದ ಏಳು ಮೊಳದ ಪೊಡವ ಬಟ್ಟೆಯನ್ನೂ ಮೂರುವರೆ ಮೊಳ ಪಂಚೆಯನ್ನೂ ಮಾಡಿಸಿದ್ದಿವೆ. ನನ್ನ ಅಮ್ಮನ ಚಿನ್ನದ ಬಟ್ಟೆ – ಇವೆಲ್ಲವನ್ನೂ ನನಗೆ ತೆಗೆದುಕೊಡಬೇಕು ಮಾವ. ಅದಕ್ಕೆ ಕೂಡಲೆ ಒದೇನ ಉತ್ತರವಿತ್ತ– ತಚ್ಚೋಳಿಚ್ಚಿ ಕುಂಬೆ ಕುಂಞಿಯೇ ಕೇಳು. ವರ್ಣೋಜ್ವಲ ಪಟ್ಟೆ ಸೀರೆ ಉಡಬೇಡ, ಹಾಗೇನಾದರೂ ಉಟ್ಟರೆ ಅರಸರ ಅಂಗಳಕ್ಕೆ ತಲಪುವಾಗ ಅದರ ಚಿನ್ನಕ್ಕೆ ಅರಸ ಬಾಯಿ ಬಿಡುತ್ತಾರೆ. ನೀನಾದರೋ ಚಿನ್ನವನ್ನು ಕೊಡಲಾರೆ. ನಮ್ಮ ಮನೆಯ ಸಂತತಿ ನಾಶವಾಗಿ ಬಿಡುತ್ತದೆ. ಕುಂಬೆ ತುಂಬ ಅತ್ತಳು. ತಚ್ಚೋಳಿ ಒದೇನ ಆಗ ಅವಳಿಗೆಂದ – ತಚ್ಚೋಳಿಚ್ಚಿ ಕುಂಬೆಕುಂಞಿ, ಕೇಳು. ನೀನು ನನ್ನಲ್ಲಿ ಕೇಳಿಹೋಗುವುದು ಬೇಡ. ನಿನ್ನ ಗಂಡ ಚೆಕ್ಕೂರ ಚಂದುವಿನ ಅನುಮತಿ ಪಡೆದುಹೋಗು. ಅದಕ್ಕೆ ಅವಳೆಂದಳು – ತಚ್ಚೋಳಿ ಮನೆಯ ಸಣ್ಣಮಾವ, ನನ್ನ ಗಂಡ ನನಗೆ ಒಪ್ಪಿಗೆ ಕೊಟ್ಟಿಲ್ಲ. ಹಾಗೆ ನಾನು ಹೊರಟು ಇಲ್ಲಿಗೆ ಬಂದುದಲ್ಲವೇ? ಆ

ಮಾತುಗಳನ್ನು ಕೇಳಿದ ಒದೇನನೆಂದ – ತಚ್ಚೋಳಿಚ್ಚಿ ಕುಂಬೆ ಕುಂಞಿ, ನೀನು ನನ್ನಲ್ಲಿ ಕೇಳಿ ಹೋಗುವುದು ಬೇಡ. ತಚ್ಚೋಳಿ ಕೋಮ ಕುರುಪ್ಪ್, ನಮ್ಮಣ್ಣ ಇದ್ದಾರೆ. ಅಣ್ಣನಲ್ಲಿ ಕೇಳಿ ನೀನು ಹೋಗು. ತಚ್ಚೋಳಿಚ್ಚಿ ಕುಂಬೆ ಹಾಗೆ ಅಲ್ಲಿಗೆ ತೆರಳಿದಳು. ಒದೇನ ಬೇಗ ಹೊಸ್ತಿಲಿಳಿದು ಹೊರಹೋದ. ಅವನು ತನ್ನ ಒಬ್ಬಾಕೆ ಮಡದಿಮನೆ ಕಾವಿಲ್ ಚಾತ್ತೋತ್ತ್‌ಗೆ ಹೋದ.

ತಚ್ಚೋಳಿಚ್ಚಿ ಕುಂಬೆ ಕೋಮಕುರುಪ್ಪ್‌ನಲ್ಲಿಗೆ ಹೋಗಿ ಅವನ ಕಾಲುಗಳ ಬಳಿ ನಿಂತಳು. ಆಗ ಕೋಮಕುರುಪ್ಪ್ ಕೇಳಿದ – ಏನಮ್ಮ ತಚ್ಚೋಳಿಚ್ಚಿ ಕುಂಬೆಕುಂಞಿ? ನೀನು ಇಲ್ಲಿಗೆ ಬಾರದೆ ಸುಮಾರು ಮೂರು ವರ್ಷಕ್ಕಿಂತ ಹೆಚ್ಚೇ ಆಗಿರಬಹುದಲ್ಲವೆ? ತಚ್ಚೋಳಿಚ್ಚಿ ಕುಂಬೆ ಮರ್ಯಾದೆಗೆ ಅನುಸಾರವಾಗಿ ಉಂಗುರ ಹಾಕಿದ ತನ್ನ ಕೈಬೆರಳುಗಳಿಂದ ಬಾಯಿಮುಚ್ಚಿ ಕೊಂಡು ಹೀಗೆಂದಳು– ತಚ್ಚೋಳಿ ದೊಡ್ಡಮಾವಾ! ಚೆಕ್ಯೂರ ನಮ್ಮ ಮನೆಯಲ್ಲಿ ನನಗೆ ಕೈತುಂಬ ಕೆಲಸ. ಹಾಗಾಗಿ ನನಗೆ ಇಲ್ಲಿ ಬರಲು ಸಾಧ್ಯವಾಗಲಿಲ್ಲ. ಅದಕ್ಕೆ ಕೋಮಕುರುಪ್ಪನೆಂದ – ಇಂದು ಏನಮ್ಮ ಬಂದೆ? ಕುಂಬೆ ಉತ್ತರವಿತ್ತಳು – ತಚ್ಚೋಳಿ ದೊಡ್ಡಮಾವಾ! ನನಗೆ ಇಂದು ಒಂದು ದೊಡ್ಡ ಆಸೆಯಾಗಿದೆ. ಮೂಡು ಪೆರುಮಾಳ್ ದೇವರನ್ನು ಕಂಡು ವಂದಿಸಿ ಬರಲು ಅಲ್ಲಿಗೆ ಹೋಗಬೇಕು ಎಂಬ ಆಸೆ. ಅದನ್ನು ಕೇಳಿದ ಕೋಮಕುರುಪ್ಪನೆಂದ – ಹಾಯ್! ಹರಿಯೋ ಹರಿ! ನನ್ನ ಕುಂಬೆ ಕುಂಞೀ, ಮಹಾ ಆಪತ್ತಿನ ಸಂಗತಿಯನ್ನು ಹೇಳುತ್ತಿದ್ದಿ! ನೀನು ಆ ಸಂಗತಿಯನ್ನು ಪ್ರಸ್ತಾಪಿಸಿದ್ದಕ್ಕೆ ನಿನ್ನ ಹೆಸರಲ್ಲಿ ನಿನ್ನ ಜತೆಗೆ ಬಂದಿರುವ ನಾಯನ್ಮಾರರ ಕೈಯಲ್ಲಿ ಅಲ್ಲಿಗೆ ಒಪ್ಪಿಸಲು ಹದಿನಾರು ಬೆಳ್ಳಿಹಣವನ್ನು ಕೊಟ್ಟು ದೇವರ ಭಂಡಾರ ಹೆಚ್ಚಿಸುವವನಿದ್ದೇನೆ. ಅವರನ್ನು ಅಲ್ಲಿಗೆ ಇದಕ್ಕಾಗಿ ಕಳುಹಿಸುತ್ತೇನೆ. ತಚ್ಚೋಳಿಚ್ಚಿ ಕುಂಬೆ ಮತ್ತೆ ಹೀಗೆಂದಳು – ತಚ್ಚೋಳಿ ಮನೆಯ ದೊಡ್ಡ ಮಾವಾ! ಮನೆ ಇಳಿದು ಹೊರಟುಬರುವ ಹೊತ್ತಿಗೆ..... ನನ್ನ ಬಂಗಾರು ಮಾವಾ, ನಾನು ಯಾವುದೇ ಆಭರಣಗಳನ್ನು ಧರಿಸಿಕೊಂಡಿಲ್ಲ. ಕೊಂಡಾಟದ ದೊಡ್ಡ ಮಾವಾ! ನನ್ನ ಅಮ್ಮನ ಏಳು ತೆರನ ಚಿನ್ನವಿದೆ. ಆಮಾಡ, ತಾಲಿ, ಕೊಮಣಿ, ಕೈಕ್ಕಡವ, ಚೆಕ್ಕಿಮಾಲೆ, ಮುಚ್ಚಿರ ಪೊವ್ವೊ, ಮುಡಿಮಾಲೆ ಮತ್ತು ವರ್ಣೋಜ್ವಲ ಪಟ್ಟೆಸೀರೆ ಉಂಟು ಮಾವಾ. ನನ್ನಮ್ಮನ ಕೊಂಡಾಟದ ದೊಡ್ಡ ಮಾವಾ, ಚಿನ್ನದಿಂದ ಏಳುಮೊಳ ಬಟ್ಟೆಯನ್ನೂ ಮೂರುವರೆ ಮೊಳ ಪಂಚೆಯನ್ನೂ ಮಾಡಿದ್ದನ್ನು ನನಗೆ ನೀವು ತೆಗೆದುಕೊಡಿ ಮಾವಾ. ಕೂಡಲೆ ಕೋಮಕುರುಪ್ಪನೆಂದ – ತಚ್ಚೋಳಿಚ್ಚಿ ಕುಂಬೆಕುಂಞ್ಯೆ ಕೇಳು – ಇಂದು ಎಂದೇನು ಕುಂಬೆಕುಂಞ್ಯೆ? ನಿನ್ನಮ್ಮ ಸತ್ತಂದು ಮೊದಲು ಈ ನನ್ನ ಕಣ್ಣುಗಳಿಂದ ನಾನು ಅವನ್ನು ಕಂಡುದಿಲ್ಲ. ನಿನ್ನಮ್ಮನ ಹೊನ್ನ ಆಭರಣಗಳನ್ನು ಕಂಡಿಲ್ಲ. ಮಾತ್ರವಲ್ಲ ನೀನು ವರ್ಣೋಜ್ವಲ ಬಟ್ಟೆಯನ್ನು ಉಡಬೇಡ.

ಅದನ್ನು ಕೇಳಿದ ಕುಂಬೆ ಮೆಟ್ಟಿಲ ಬಳಿಬಂದಳು. ಮೆಟ್ಟಿಲ ಬಳಿಬಂದು ನೋಡಿದಾಗ ಅಲ್ಲಿ ಒದೇನ ಇರಲಿಲ್ಲ. ಬಾಗಿಲ ಬಳಿ ಇದ್ದ ರತ್ನ ಮಂಚದಲ್ಲಿ ಅವಳು ಬಿದ್ದು ಹೊರಳಾಡಿ ಅತ್ತಳು. ಅತ್ತು ಅತ್ತು ಅಲ್ಲೇ ನಿದ್ದೆ ಹೋದಳು. ತಚ್ಚೋಳಿಚ್ಚಿ ಉಣ್ಣಿಚ್ಚಿರ (ಕುಂಬೆಯ ತಾಯಿ) ಅವಳ ಬಳಿ ಪ್ರೇತದ ನೆರಳಾಗಿ ಹೋದಳು. ಕುಂಬೆಯ ಬಳಿಬಂದು ಕುಳಿತುಕೊಂಡು ಹೀಗೆಂದಳು – ತಚ್ಚೋಳಿಚ್ಚಿ ಕುಂಬೆ ಕುಂಞಿ, ಕೇಳು. ಇಂದೇ ನಾನು ಸತ್ತ ಪುಣ್ಯತಿಥಿಯಂದು ದೇವರನ್ನು ಕಂಡು ವಂದಿಸಿ ಬರಬೇಕೆಂದು ನೀನು ಬಂದೆ. ನನ್ನ ಹೊನ್ನು ಬಟ್ಟೆಗಳನ್ನು ನನ್ನ ಅಣ್ಣಂದಿರು ಕಂಡಿದ್ದಿಲ್ಲ. ಅದನ್ನು ಪಡುಕೋಣೆಯಲ್ಲಿನ ಪೆಟ್ಟಿಗೆಯಲ್ಲಿ ಇರಿಸಲಾಗಿದೆ. ಮಾಳಿಗೆಯ 'ಉತ್ತರ'ದ ಒಂದು ಸಂದಿನಲ್ಲಿ ನಾನು ಅದರ ಬೀಗದಕೈಯನ್ನು ಇರಿಸಿದ್ದೇನೆ. ನೀನು ಅದನ್ನು ತೆಗೆದುಕೊಂಡು ಅಲಂಕರಿಸಿಕೊ ಮಗಳೆ. ಅರಸನ ಸೇವಕರೂ ಒಕ್ಕಲು ಮಕ್ಕಳೆಲ್ಲ ನಿದ್ರಿಸಿದ್ದಾರೆ. ನೀನು ಬೇಗ ಹೊರಟು ಹೋಗಿಬಿಡು ಕುಂಬೆಕುಂಞ್ಯೆ.

ತಚ್ಚೋಳಿಚ್ಚಿ ಕುಂಬೆ ನಿದ್ದೆಯಿಂದ ಹೌಹಾರಿ ಎದ್ದಳು. ಪಡುಕೋಣೆಗೆ ಹೋದಳು. ಮಾಳಿಗೆಯ ಉತ್ತರದ ಸಂದಿನಲ್ಲಿದ್ದ ಬೀಗದ ಕೈ ತೆಗೆದುಕೊಂಡಳು. ಪಡುಕೋಣೆಯಲ್ಲಿನ ಪೆಟ್ಟಿಗೆ ತೆರೆದಳು. ಏಳು ತೆರದ ವಿಶೇಷ ಆಭರಣಗಳನ್ನು ತೊಟ್ಟುಕೊಂಡಳು. ಚಿನ್ನದಿಂದ ಏಳು ಮೊಳದ ಬಟ್ಟೆಯನ್ನೂ ಮೂರುವರೆ ಮೊಳ ಬಟ್ಟೆಯನ್ನೂ ಮಾಡಿದ್ದನ್ನು ಉಟ್ಟುಕೊಂಡಳು. ನಾಯನ್ಮಾರರನ್ನೂ ಕರಕೊಂಡು ನಡೆದೇ ಬಿಟ್ಟಳು.

ಕುಂಬೆ ಹಾಗೆ ಹೋಗಿ ಊರು ದಾಟಿದಳು. ತಚ್ಚೋಳಿ ಒದೇನ ಹೀಗೆಂದ – ಕಂಡಚ್ಚೇರಿ ಚಾಪ್ಪಾ! ತಚ್ಚೋಳಿಚ್ಚಿ ಕುಂಬೆ ನಾವು ಹೋಗುತ್ತಿದ್ದಾಗ ಅಳುತ್ತಿದ್ದಳು. ನಾವು ಅವಳನ್ನು ಹೇಳಿಕಳುಹಿಸೋಣ. ಅವರು ಇಬ್ಬರೂ ಜತೆಯಾಗಿ ಹೊರಟರು. ಅವರು ತಚ್ಚೋಳಿ ಮೇಪಕ್ಕೆ ತಲಪಿದಾಗ ಕುಂಬೆ ಎಲ್ಲಿಯೂ ಕಾಣಸಿಗಲಿಲ್ಲ. ಪಡುಕೋಣೆಗೆ ಹೋಗಿ ನೋಡಿದರು. ಅಲ್ಲಿ ಪೆಟ್ಟಿಗೆ ತೆರೆದಿದ್ದುದನ್ನು ಕಂಡರು. ಎದೆ ಬಡಿದು ಕೊಂಡು ಒದೇನ ಅತ್ತುಬಿಟ್ಟ. ಕೋಮಕುರುಪ್ಪಿನ ಬಳಿಗೆ ಓಡಿ ಬಂದ. ಅಣ್ಣ ಕೋಮ ಕುರುಪ್ಪೇ, ಕೇಳಿ! ಗಂಡೂ ಹೆಣ್ಣು ಅಲ್ಲದ ನನ್ನಣ್ಣಾ, ಕುಂಬೆಯನ್ನು ನೀವು ಹೇಳಿ ಕಳುಹಿಸಿದಿರಾ? ಕೂಡಲೇ ಕೋಮ ಕುರುಪ್ಪನೆಂದ – ನನ್ನ ತಮ್ಮಾ, ಓ ನನ್ನ ಪ್ರಿಯ ತಮ್ಮಾ, ನಾನು ಆ ಕುಂಬೆಯನ್ನು ಕಳಿಸಿದ್ದಿಲ್ಲ. ನಿನ್ನಲ್ಲಿ ಕೇಳಿ ಹೋಗುವಂತೆ ನಾನೇ ಹೇಳಿದ್ದೆ. ತಚ್ಚೋಳಿ ಒದೇನ ಹೊಸ್ತಿಲ ಬಳಿಯಿದ್ದ ರತ್ನಮಂಚದಲ್ಲಿ ನಡುಗುತ್ತ ಓಲಾಡುತ್ತ ಬಿದ್ದುಬಿಟ್ಟ. ಒದೇನ ತುಂಬ ಅಳುತ್ತಲೂ ಇದ್ದ.

ತಚ್ಚೋಳಿಚ್ಚಿ ಕುಂಬೆ ಇಪ್ಪತ್ತೆರಡು ಮಂದಿ ನಾಯನ್ಮಾರರ ಬೆಂಗಾವಲಲ್ಲಿ ಹೊರಟು

ಕೈದೇರಿ ಗುಡ್ಡಕ್ಕೆ ತಲಪಿದಾಗ ಕೈದೇರಿ ಒದೇನನ್ ನಂಬ್ಯಾರನು ತನ್ನ ಇಪ್ಪತ್ತೆರಡು ಮಂದಿ ನಾಯನ್ಮಾರರ ಜತೆ ಆ ಕಡೆಯಿಂದ ಈ ಕಡೆಗೆ ಬರುತ್ತಿದ್ದ. ನಂಬ್ಯಾರ್ ಕೇಳಿದ – ಇಪ್ಪತ್ತೆರಡು ಮಂದಿ ನಾಯಮ್ಮಾರರೇ, ಇಪ್ಪತ್ತೆರಡು ಜನರ ಜತೆ ಆ ಕಡೆಯಿಂದ ಬರುತ್ತಿರುವ ವ್ಯಕ್ತಿ ಯಾರು? ನಾಯಮ್ಮಾರರೆಂದರು – ಕೈದೇರಿ ಒದೇನನ್ ನಂಬ್ಯಾರ್ರೇ! ಅದು ತಚ್ಚೋಳಿಚ್ಚಿ ಕುಂಬೆ. ದೇವರನ್ನು ಕಂಡು ವಂದಿಸಲು ಹೋಗುತ್ತಿದ್ದಾಳೆಂದು ಅವರು ನಿಜವನ್ನೇ ಹೇಳಿದರು. ಆಗ ನಂಬ್ಯಾರ್ ಕೇಳಿದ– ತಚ್ಚೋಳಿಚ್ಚಿ ಕುಂಬೆ, ನೀನು ಯಾವ ಕಡೆ ಹೊರಟೆ? ನಾಯಮ್ಮಾರರು ಕೂಡಲೇ ಉತ್ತರಿಸಿದರು – ಕೈದೇರಿ ಒದೇನನ್ ನಂಬ್ಯಾರ್ರೇ, ಕುಂಬೆ ದೇವರಿಗೆ ವಂದನೆ ಸಲ್ಲಿಸಲು ಹೋಗುತ್ತಿದ್ದಾಳೆ. ನಂಬ್ಯಾರ್ ಕೂಡಲೆ ಎಂದ – ತಚ್ಚೋಳಿಚ್ಚಿ ಕುಂಬೆ. ಈ ವರ್ಷ ನೀನು ಅಲ್ಲಿಗೆ ಹೋಗಬೇಡ. ಬರುವ ವರ್ಷ ನಾವೆಲ್ಲರೂ ಜತೆಯಲ್ಲಿ ಹೋಗೋಣ. ನಿನ್ನ ಪಟ್ಟೆಸೀರೆ ಯನ್ನು ಒಮ್ಮೆ ಎರವಲು ಕೊಡುತ್ತಿಯಾ? ಅದಕ್ಕೆ ತಚ್ಚೋಳಿಚ್ಚಿ ಕುಂಬೆ ತುಂಬ ಅತ್ತಳು. ಇಪ್ಪತ್ತೆರಡು ನಾಯಮ್ಮಾರರ ಗುಂಪಿನಿಂದ ಇಬ್ಬರು ಓಡಿದರು. ಅವರು ತಚ್ಚೋಳಿ ಮನೆಗೆ ತಲಪಿದಾಗ ಒದೇನನು ಅಳುತ್ತ ಹೇಳಿದ – ನನ್ನ ಮಗೂ ನನ್ನ ಕಂಡಾಚೇರಿ! ಜತೆ ಹೋದ ಇಬ್ಬರು ನಾಯಮ್ಮಾರರು ಓಡಿ ಬರುತ್ತಿರುವುದನ್ನು ನೋಡಿದೆಯಾ? ಹಾಗೆ ಅವನು ಹೇಳುತ್ತಿರುವಾಗಲೇ ನಾಯಮ್ಮಾರರು ಹೊಸ್ತಿಲೊಳಗೆ ಬಂದರು. ವಿಷಯವನ್ನು ತಿಳಿಸಿದರು. ಒದೇನ ಚಾಪ್ಪನಲ್ಲಿ ಹೇಳಿದ – ನನ್ನ ಮಗೂ, ನನ್ನ ಕಂಡಾಚ್ಚೇರಿ! ಕುಂಬೆಯನ್ನು ಈಚೆ ಕರೆತರಲು ಏನು ಮಾಡೋಣ? ಕಂಡಾಚೇರಿ ಚಾಪನೆಂದ – ನನ್ನ ಧನೀ, ನನ್ನ ಯಜಮಾನರೇ! ನೀವು ಇದಕ್ಕೆ ಏನೂ ದುಃಖಿಸುವುದು ಬೇಡ. ಅದಕ್ಕೆ ಬೇಕಾದ್ದನ್ನು ನಾನು ಮಾಡುತ್ತೇನೆ. ಚಾಪ್ಪ ಕೂಡಲೆ ಅಲ್ಲಿಂದ ವೇಗವಾಗಿ ಓಡಿದ. ಆತ ಕೈದೇರಿ ಗುಡ್ಡಕ್ಕೆ ತಲಪಿದಾಗ ಕೈದೇರಿ ಒದೇನ ನಂಬ್ಯಾರನು ಕುಂಬೆಯನ್ನು ತಡೆದು ನಿಂತಿದ್ದ. ಕುಂಬೆ ತುಂಬ ಅಳುತ್ತಿದ್ದಳು. ಚಾಪ್ಪ ಕುಂಬೆಯ ಬಳಿ ಹೋಗಿ ಕೇಳಿದ – ತಚ್ಚೋಳಿಚ್ಚಿ ಕುಂಬೆ, ಯಾಕೆ ಅಳುತ್ತಿದ್ದಿ? ಕೈದೇರಿ ಒದೇನ ನಂಬ್ಯಾರ್ ನಿನಗೆ ಸರಿಯಾದ ಗಂಡನಲ್ಲವೆ? ಕೈದೇರಿ ಒದೇನ ನಂಬ್ಯಾರ್ರೇ, ತಚ್ಚೋಳಿಯ ಕುರುಪ್ಪರು ಇವಳಿಗೆ ಸರಿಯಾದ ಗಂಡ ಯಾರು ಎಂದು ಕುತೂಹಲದಲ್ಲಿದ್ದಾರೆ. ತಚ್ಚೋಳಿ ಒದೇನ ಕುರುಪ್ಪರಿಗೆ ನೀವು ಇವಳ ಪೊಡಮುರಿಯ ವಿಚಾರ ಪ್ರಸ್ತಾಪಿಸಿ ಓಲೆ ಕೊಡು ವುದಿದ್ದರೆ ಕೊಡಿ.

ಅದನ್ನು ಕೇಳಿದ ನಂಬ್ಯಾರ್ ಬಹಳ ಖುಷಿಗೊಂಡ. ಮುಗುಳ್ನಗುತ್ತ ಮುಂದಿನ ವಾರದ ಗುರುವಾರ ಪೊಡಮುರಿ ಎಂದು ಬರೆದ ಓಲೆಯನ್ನು ಕೊಟ್ಟ. ಆಗ ಕಂಡಾಚ್ಚೇರಿ ಎಂದ – ತಚ್ಚೋಳಿಚ್ಚಿ ಕುಂಬೆಕುಂಞ್ಯೇ, ಕೇಳು. ನಿನಗೆ ಸರಿಯಾದ ಗಂಡ ಇಲ್ಲಿ ಸಿಕ್ಕ.

ಅವನ ಒಪ್ಪಿಗೆ ಇಲ್ಲದೆ ದೇವರನ್ನು ವಂದಿಸಲು ಹೋಗಬೇಡ. ಮುಂದಿನ ವರ್ಷ ನಿಮಗೆಲ್ಲ ಜತೆಗೆ ಹೋಗಬಹುದು. ಅಷ್ಟು ಹೇಳಿ ಚಾಪ್ಪ ಕುಂಬೆಯನ್ನು ಕರೆದುಕೊಂಡು ಮರಳಿದ. ತಚ್ಚೋಳಿ ಮನೆಗೆ ಬಂದ. ಆಗ ಒದೇನ ಕುಂಬೆಯನ್ನು ಕಣ್ಣಾರೆ ಕಂಡ. ಹಾಗೆ ಅವರು ಅಲ್ಲಿರಲು ಚೆಕ್ಯೂರ ಚಂದು ಹುಡುಗ ಬಂದು ಮೆಟ್ಟಿಲೇರಿದ. ಒಳಬಂದ ಚಂದು ಕೇಳಿದ – ತಚ್ಚೋಳಿ ಮನೆಯ ಸಣ್ಣಮಾವಾ! ಇದೇನು ಹೊಸ ವಿಶೇಷ? ತಚ್ಚೋಳಿಚ್ಚಿ ಕುಂಬೆ ದೇವರಿಗೆ ಕೈ ಮುಗಿಯುವುದಕ್ಕಾಗಿ ಮನೆಯಿಂದ ಹೊರಟು ಬಂದವಳು ಅಲ್ಲಿಗೆ ಹೋಗಿಲ್ಲವಲ್ಲ! ಅದಕ್ಕೆ ಒದೇನ ನಡೆದ ಎಲ್ಲ ವಿಷಯಗಳನ್ನು ತಿಳಿಸಿದ. ಅದನ್ನು ಕೇಳಿದ ಚಂದು ಹುಡುಗ ಮುಗುಳ್ನಕ್ಕ. ಆಗ ಒದೇನನೆಂದ – ಚೆಕ್ಯೂರ ಚಂದು ಹುಡುಗಾ! ನಿನ್ನ ಹುಡುಗಿಯನ್ನು ನೀನು ಕರಕೊಂಡು ಹೋಗು. ಕುಂಬೆಯನ್ನು ಕರೆದುಕೊಂಡು ಚಂದು ಹೊರಟುಹೋದ. ಹಾಗೆ ಹೊರಟವನು ನೇರವಾಗಿ ಚೆಕ್ಯೂರ ಮನೆ ತಲಪಿದ. ತಾಯ ಬಳಿ ಎಲ್ಲ ವಿಚಾರಗಳನ್ನು ತಿಳಿಸಿದ. ಅದನ್ನು ಕೇಳಿದ ಅವನ ತಾಯಿ ಮುಗುಳ್ನಕ್ಕಳು. ಹಾಗೆ ಅವರು ಅಲ್ಲಿ ಜತೆಯಲ್ಲಿದ್ದರು.

ತಚ್ಚೋಳಿ ಒದೇನ ಚಾಪನಲ್ಲಿ ಕೇಳಿದ – ನನ್ನ ಮಗೂ ನನ್ನ ಕಂಡಾಚ್ಚೇರಿ! ಕೈದೇರಿ ಒದೇನನ್ ನಂಬ್ಯಾರ್ ಪೊಡಮುರಿಗಾಗಿ ಬಂದಾಗ ನೀನು ಯಾರನ್ನು ಕೊಡುತ್ತಿ? ಅದಕ್ಕೆ ಚಾಪ್ಪನೆಂದ – ನನ್ನ ಧನೀ, ನನ್ನ ಯಜಮಾನರೆ! ಗುರುವಾರ ಮುಂಜಾನೆ ಹೊತ್ತಿಗೆ ಕಾವಿಲ್ ಚಾತ್ತೋತ್ತ ಚೀರು ಅಮ್ಮನ ಚೌರಿಯನ್ನು ನಿಮ್ಮ ಕುಡುಮಕ್ಕೆ ಸೇರಿಸಿ ಕಟ್ಟೋಣ. ಬಳಿಕ ತಚ್ಚೋಳಿಚ್ಚಿ ಕುಂಬೆ ಕುಂಞಿಯು ಮೊನ್ನೆ ಧರಿಸಿದ್ದ ಆಭರಣಗಳಿಂದ ನಿಮ್ಮನ್ನು ಅಲಂಕರಿಸುವ. ಅವರು ಅಂದು ಉಟ್ಟಿದ್ದ ಸೀರೆಯನ್ನು ನೀವು ಉಡಬೇಕು. ಪಡುಕೋಣೆಯ ಹೊಂಬೆತ್ತದ ಮಂಚದಲ್ಲಿ ನೀವು ಕವುಚಿ ಮಲಗಿ ಕೊಳ್ಳಿ. ಕೈದೇರಿ ಒದೇನ ನಂಬ್ಯಾರನು ಪೊಡಮುರಿಗಾಗಿ ಬಂದರೆ ನಾನು ಅವನನ್ನು ಪಡುಕೋಣೆಗೆ ಸೇರಿಸಿಬಿಡುತ್ತೇನೆ. ಆತ ಏನೇ ಕೇಳಿದರೂ ನೀವು ಉತ್ತರ ಹೇಳಬಾರದು. ನಂಬ್ಯಾರನನ್ನು ನೀವು ಕಡಿದು ಕೊಂದು ಬಿಡಿ. ಹಾಗೆಂದು ಮಾತನಾಡಿಕೊಳ್ಳುತ್ತ ಅವರು ಜತೆಯಲ್ಲಿದ್ದರು.

ಗುರುವಾರ ಬಂತು, ಚಾಪ್ಪ ಚೀರುವಿನ ಚೌರಿಗಳನ್ನು ಆಕೆಯಲ್ಲಿ ಕೇಳಿಕೊಂಡು ತಂದ. ಅದನ್ನು ಒದೇನನಿಗೆ ಅಳವಡಿಸಿದ. ಚಿನ್ನಾಭರಣಗಳನ್ನು ತೊಡಿಸಿದ. ಸೀರೆ ಕುಪ್ಪಸಗಳನ್ನೂ ಉಡಿಸಿದ. ಪಡುಕೋಣೆಗೆ ಒಯ್ದು ಅವನನ್ನು ಅಲ್ಲಿ ಬಿಟ್ಟ. ಹಾಗೆ ಅವರು ಅಲ್ಲಿದ್ದಾಗ ಕೈದೇರಿ ಒದೇನ ನಂಬ್ಯಾರನೂ ಅವನ ಇಪ್ಪತ್ತೆರಡು ಜನ ನಾಯ ಮ್ಮಾರರೂ ಪುಡಮುರಿಗೆ ಹೊರಟರು. ತಚ್ಚೋಳಿ ಮನೆಗೆ ಅವರು ಬಂದಾಗ ಕಂಡಾಚ್ಚೇರಿ

ಚಾಪ್ಪನು ಆ ಇಪ್ಪತ್ತೆರಡು ನಾಯಮ್ಮಾರರಿಗೂ ವೀಳ್ಯದೆಲೆ ಹೊಗೆಸೊಪ್ಪುಗಳನ್ನು ಕೊಡಿಸಿದ. ಆಗ ನಂಬ್ಯಾರ್ ಕೇಳಿದ – ಪ್ರಿಯ ಕಂಡಾಚ್ಚೇರಿ ಚಾಪ್ಪ! ತಚ್ಚೋಳಿ ಒದೇನ ಇಲ್ಲವೆ? ಆತ ಎಲ್ಲಿದ್ದಾನೆ? ಕೂಡಲೆ ಚಾಪ ಉತ್ತರಿಸಿದ – ಕೈದೇರಿ ಒದೇನ ನಂಬ್ಯಾರರೇ! ನನ್ನ ಧನಿ, ನನ್ನ ಯಜಮಾನ ಒದೇನರು ಹೊರಗಡೆ ತಿರುಗಾಟಕ್ಕಾಗಿ ಹೋಗಿದ್ದಾರೆ. ಇನ್ನೂ ಇಲ್ಲಿಗೆ ವಾಪಸ್ಸಾಗಿಲ್ಲ. ಈ ಹಿಂದೆಯೂ ಅವರ ಕ್ರಮ ಹಾಗೆಯೇ! ತಚ್ಚೋಳಿಚ್ಚಿ ಕುಂಬೆಕುಂಞಿಯನ್ನೂ ಅಣ್ಣ ಕೋಮಕುರುಪ್ಪರನ್ನೂ ನನ್ನ ಕೈಗೆ ಹಾಕಿ ಹೋಗಿ ಬಿಡುವುದು. ನೀವು ಪೊಡಮುರಿ ಕಾರ್ಯಕ್ರಮ ನಡೆಸಿಕೊಳ್ಳಿ. ನಂಬ್ಯಾರ್ ಪಡುಕೋಣೆ ಸೇರಿಕೊಂಡ. ಮೆಲ್ಲ ಮಾತು ತೆಗೆದ – ತಚ್ಚೋಳಿ ಕುಂಬೆಕುಂಞಿ! ಯಾಕೆ ಕುಂಬೆ, ಮಾತೇ ಆಡುತ್ತಿಲ್ಲ? ದೇವರಿಗೆ ಕೈಮುಗಿಯಲು ಹೋಗಿಲ್ಲವೆಂದು ಮುನಿಸೇ? ಮುಂದಿನ ವರ್ಷ ಎಲ್ಲರೂ ಜತೆಗೂಡಿ ಹೋಗೋಣವಂತೆ. ಅದಕ್ಕೂ ಕುಂಬೆಯ ಉತ್ತರವಿಲ್ಲ! ನಂಬ್ಯಾರ್ ಮತ್ತೆಯೂ ಕೇಳಿದ – ತಚ್ಚೋಳಿಚ್ಚಿ ಕುಂಬೆಕುಂಞ್ಯೆ, ಕೇಳು! ನೀನು ಎದ್ದು ಕುಳಿತುಕೊ. ಪೊಡಮುರಿ ಕಾರ್ಯಕ್ರಮವನ್ನು ಮುಗಿಸಿಕೊಳ್ಳೋಣ. ಅದಕ್ಕೂ ಕುಂಬೆಯ ಉತ್ತರವಿಲ್ಲ. ಕೈದೇರಿ ನಂಬ್ಯಾರ್ ಪೊಡಮುರಿ ಕಾರ್ಯಕ್ರಮವನ್ನು ಮುಗಿಸಿದ. ತಚ್ಚೋಳಿ ಒದೇನನು ಎದ್ದು ಕುಳಿತ. ಆತ ಕೇಳಿದ – ಕೈದೇರಿ ಒದೇನ ನಾಯಿಯೇ! ಕೇಳು. ಒಬ್ಬಾತನ ಹೆಣ್ಣಿಗೆ ದುರಾಸೆ ಪಡುತ್ತಿಯಾ? ಅಷ್ಟು ಹೇಳಿದ ಒದೇನ ಕೈದೇರಿ ನಂಬ್ಯಾರನನ್ನು ಕಡಿದು ಕೊಂದುಹಾಕಿದ. ಕಂಡಾಚ್ಚೇರಿ ಚಾಪ್ಪನು ಇತ್ತ ಹೊರಭಾಗಕ್ಕೆ ಬಂದ. ನಾಯಮ್ಮಾರರಿಗೆ ಅವನೆಂದ – ಇಪ್ಪತ್ತೆರಡು ಮಂದಿ ನಂಬ್ಯರರೇ, ಕೈದೇರಿ ಒದೇನ ನಂಬ್ಯಾರ್ ನಿಮ್ಮನ್ನು ಕರೆಯುತ್ತಿದ್ದಾರೆ. ಅದನ್ನು ಕೇಳಿದ ನಾಯಮ್ಮಾರರು ಪಡುಕೋಣೆಯತ್ತ ಧಾವಿಸಿದರು. ಅಲ್ಲಿಗೆ ಹೋಗಿ ನೋಡುವುದೇನು? ರಕ್ತ ಹೊನಲಾಗಿ ಹರಿಯುತ್ತಿದೆ. ನಂಬ್ಯಾರ ಸತ್ತುಬಿದ್ದಿದ್ದಾನೆ. ಅದನ್ನು ಕಂಡ ಇಪ್ಪತ್ತೆರಡೂ ನಾಯಮ್ಮಾರರು ಹೇದರಿ ನಡುಗಿ ಹೊದರು. ಕೈದೇರಿ ಒದೇನ ನಂಬ್ಯಾರನ ಶವವನ್ನು ತೆಗೆಯಿಸಿಕೊಂಡು ಅವರು ಹಿಂತಿರುಗಿ ಹೊದರು. ಕೈದೇರಿ ಮನೆಗೆ ತಲುಪಿದರು. ಆ ಮನೆಯ ಹೆಂಗಸರು ಎದಬಡಿದುಕೊಂಡು ಗೋಳಾಡಿದರು. ಒದೇನ ನಂಬ್ಯಾರನ ಹೆಣವನ್ನು ಸುಟ್ಟು ಅಂತ್ಯ ಸಂಸ್ಕಾರ ಮಾಡಲಾಯಿತು.

ನೀನು ಪೀಠಕಲ್ಲನ್ನು ಏರುವ ಹೊತ್ತಿಗೆ ನಿನಗೆ ಎಡಮುರಿ ಬಲಮುರಿ ಬಳೆಕೊಡುವೆ

ತಚ್ಚೋಳಿಯ ಕಣ್ಮಣಿ ಬಾಲ ಒದೇನ ಅಣ್ಣನಲ್ಲೆಂದ – ತಚ್ಚೋಳಿ ಕೋಮಕುರುಪ್ಪರೆ, ನನ್ನ ಅಣ್ಣ! ನನಗೆ ಒಂದು ಆಸೆಯುಂಟಾಗಿದೆ. ಕರಿಮಲೆ ಸೂಪಿಯ ಕೋಟೆ ನಿರ್ಮಾಣದ ಕೆಲಸವನ್ನು ನೋಡಲು ಹೋಗಬೇಕು. ಅದಕ್ಕೆ ಕೋಮಕುರುಪ್ಪೆಂದ – ಹಾ! ನನ್ನ ಪ್ರಿಯ ತಮ್ಮ! ನೀನು ಕೋಟೆ ನೋಡಲು ಹೋಗಬಾರದು. ಕರಿಮಲೆ ಕೋಟೆಗೆ ಹೋದವರು ಯಾರೂ ಮರಳಿ ತಮ್ಮ ಮನೆ ಸೇರಿ ಸತ್ತದ್ದಿಲ್ಲ. ನನ್ನ ಪ್ರಿಯ ತಮ್ಮ ನೀನು ಕೋಟೆನೋಡಲು ಹೋಗಬೇಡ. ಕೋಟೆಗೆ ಹೋಗುವ ದಾರಿಯಲ್ಲಿನ ಕೊಡು ಮಲೆ ಎಂಬ ಪ್ರದೇಶ ಕಳೆಯುವವರೆಗೂ ಬಾಯಾರಿಕೆಗೆ ನೀರು ಸಿಗದು. ಆ ಊರನ್ನು ಕಳೆದ ಮೇಲೂ ಬಾಯಾರಿಕೆಗೆ ನೀರು ಸಿಗದು. ಇನ್ನೂ ಬೇರೆ ತೊಂದರೆಗಳಿವೆ. ಕುರುಂಬಾಲಿ ಎಂಬ ಹೆಸರಿನ ಹೊಳೆ ಸಿಗುತ್ತದೆ. ಹೊಳೆಗೆ ಸೇತುವೆ ಏನೂ ಇಲ್ಲ. ಕಾಡುಕರಿಂಕುರುಂಞಿ ಎಂಬ ಹಾವು ಏಳು ಮಡಚಾಗಿ ಸೇತುವೆ ಕಟ್ಟಿದಂತೆ ಮಲಗಿರುತ್ತದೆ. ಮಲೆಯಾಳಿಯ ಮೂರಿ ಸಿಕ್ಕಿದರೆ ಸಾಕು, ಅದು ಹೆಡೆಯರಳಿಸಿ ಕಣ್ಣು ತೆರೆಯುತ್ತದೆ. ಒಂದು ವೇಳೆ ಆ ಹಾವನ್ನು ದಾಟಿಹೋದರೆ ಕಾವೇರಿ ಎಂಬೊಂದು ಹೆಸರಿನ ಹೊಳೆಯಿದೆ. ಹೊಳೆ ತುಂಬ ಮೊಸಳೆಗಳು. ಅಪ್ಪಿತಪ್ಪಿ ಎಲ್ಲಾದರೂ ಕಾಲುಕುತ್ತಿದರೂ ಸಾಕು, ಮೊಸಳೆಗಳು ಹಿಡಿದುಬಿಡುತ್ತವೆ. ಇನ್ನೂ ಗಂಡಾಂತರಗಳಿವೆ ಕೇಳು ಒದೇನ. ಕಾವೇರಿ ಕಾಡೆಂಬ ಕಾಡೊಂದಿದೆ. ಕಾಡಿಗೆ ಪ್ರವೇಶಿಸಿದರೆ ಸಾಕು ದಿಕ್ಕು ಯಾವುದು ದಾರಿಯಾವುದು ಎಂದು ತಿಳಿಯದು. ಹಗಲು ರಾತ್ರಿಗಳಾಗುವುದು ತಿಳಿಯದು. ಕಾಡಾನೆ ಕರಡಿಗಳಿವೆ. ಸೀಳುನಾಯಿಗಳ ಹಿಂಡುಗಳಿವೆ, ಹುಲಿಗಳ ಗುಂಪುಗಳಿವೆ ಕಾವೇರಿಕಾಡನ್ನು ದಾಟಿದ ಮೇಲೆ ನಡೆದೂ ನಡೆದೂ ಹೋದ ಬಳಿಕ ಕರಿಮಲೆ ಸೂಪಿಯ ಕೋಟೆ

ಸಿಗುತ್ತದೆ. ಮೂಡು ಪೆರುಮಾಳ್ ದೇವರ ಹೊನ್ನೆಲದಲ್ಲಿ ಕೈಗೆ ಗಾಯವಾದರೂ ಸಹ ರಕ್ತ ಕೆಳಗೆ ಬೀಳಬಾರದು. ಕರಿಮಲೆ ಸೂಪಿಯ ಕೋಟೆಯ ಏಳುಮಾಳಿಗೆಗಳಿಗೂ ಕಾವಲುಗಾರರಿದ್ದಾರೆ. ಒಂದನೇ ಮಾಳಿಗೆಗೆ ಜೋನಕರ ಕಾವಲು. ಇನ್ನೊಂದಕ್ಕೆ ಭಟ್ಟರ ಕಾವಲು. ಇನ್ನೊಂದಕ್ಕೆ ಬಿಳಿಯರ ಕಾವಲು. ಕರಿಮಲೆ ಸೂಪಿ ಎಂಬ ಜೋನಕ ಒಂದು ಅಂತಸ್ತಿನಲ್ಲಿ ಜೋನಕರನ್ನು ಇರಗೊಳಿಸಿದ್ದಾನೆ. ಹಾಗಾಗಿ ಎಂತಹ ಸಂದರ್ಭ ದಲ್ಲೂ ಆ ಕೋಟೆಗೆ ನೀನು ಹೋಗಕೂಡದು. ಕಾಲುಭಾಗ ಕರಿಮಲೆ ಕೋಟೆ ಕಾಲುವಾಸಿ ಕಗ್ಗಲ್ಲಿನಿಂದ ರಚನೆಯಾಗಿದೆ, ಮುಕ್ಕಾಲು ಭಾಗ ಕಬ್ಬಿಣದ ದಸಿಗಳಿಂದ. ಹಾಗಾಗಿ ಎಂಥ ಸಂದರ್ಭದಲ್ಲೂ ಆ ಕೋಟೆಗೆ ನೀನು ಹೋಗಕೂಡದು.

ತಚ್ಚೋಳಿ ಒದೇನ ಅಣ್ಣನ ಮಾತು ಕೇಳದೆ ಹೊರಟು ಒಲವಣ್ಣೂರ್ ಕಾವ್‌ಗ್ ಹೋದ. ಅಲ್ಲಿನ ಕೊಳದಲ್ಲಿ ಮಿಂದ. ಮುಂದೆ ಬಂದು ನಿಂತುಕೊಂಡು ಹರಕೆಹೊತ್ತ – ಒಲವಣ್ಣೂರ್ ಕಾವ್‌ನ ಭಗವತಿಯಮ್ಮಾ! ಕರಿಮಲೆ ಕೋಟೆಗೆ ಹೋಗಬೇಕು, ಕೋಟೆಯನ್ನು ಕಾಣಬೇಕೆಂಬ ಆಸೆ ಪೂರ್ತಿಯಾದರೆ ನೀನು ಮುಡಿಧರಿಸಿ ಮೂಡುದಿಕ್ಕಿಗೆ ತಿರುಗುವ ಹೊತ್ತಿಗೆ ಎಡಮುರಿ ಬಲಮುರಿ ಬಳೆಗಳನ್ನು ಕೊಡುವೆ. ಚಿನ್ನದ ಎಕ್ಕಸರ ಮಾಲೆ ಮಾಡಿಸಿ ನಿನಗೆ ಹಾಕುವೆ. ನಾಲ್ಕು ಆವರಣದೊಳಗೆ ಸಿಡಿಮದ್ದು ಸಿಡಿಸುವೆ. ತೆಂಗಿನಕಾಯಿ ಕುಟ್ಟಿಸಿ ಪಾಟ್ಟ್‌ನ ಹರಕೆ ಒಪ್ಪಿಸುವೆ. ಹೀಗೆ ದೊಡ್ಡ ಹರಕೆಯನ್ನು ಹೇಳಿಕೊಂಡಾಗ ಕಿರಿಯ ನಂಬೂದಿರಿ ಅರ್ಚಕನ ಮೈಮೇಲೆ ಆವೇಶ ಬಂದು ಅರ್ಚಕ ಹೀಗೆಂದ – ತಚ್ಚೋಳಿಯ ಒದೇನ! ಹಲಹಲವು ಕಡೆಗೆ ನೀನು ಹೋದಾಗ ನಿನ್ನ ಜತೆಗೆ ನಾವೂ ಇದ್ದೆವು. ಕರಿಮಲೆ ಸೂಪಿಯ ಕೋಟೆ ಮೂಡು ಪೆರುಮಾಳ ದೇವರ ಹೊನ್ನೆಲದಲ್ಲಿದೆ. ಅಲ್ಲಿಗೆ ನಾವು ಬರುವಂತಿಲ್ಲ. ಒದೇನನಿಗೆ ಸಿಟ್ಟೇರಿತು – ಒಲವಣ್ಣೂರ್ ಕಾವ್ ಭಗವತಿ ಹೆಂಗಸರಿಗೆ ಹೇಳಿ ಮಾಡಿಸಿದ ದೇವರು. ಅವರಿಗೆ ಬೇಕಾದ ಪುರುಷನನ್ನು ಬರಮಾಡುವುದಕ್ಕೂ ಬೇಡವಾದ ಪುರುಷನನ್ನು ಹೋಗಲಾಡಿಸ ಲಿಕ್ಕೂ ಇರುವ ದೈವ. ಒದೇನ ಅಲ್ಲಿಂದ ಹೊರಟ. ಅಲ್ಲಿಂದ ಹೊರಟು ಮೇನಪುರತ್ತ್ ಕಾವ್‌ಗೆ ತಲಪಿದ (ಇದು ಮಾಹಿಗೆ ಸಮೀಪವಿರುವ ಒಂದು ದೇವಸ್ಥಾನ). ಪೂಜೆ ಮಾಡುವ ನಂಬೂದಿರಿ ಕೆರೆಯಲ್ಲಿ ಮೀಯುತ್ತಿದ್ದ. ಒದೇನ ಅವನಲ್ಲಿ ಹೇಳಿದ – ಅಕ್ಕಿಲ್ಲಂ ಮನೆಯ ನಂಬೂದಿರಿ! ಬೇಗ ಮಿಂದುಬನ್ನಿ. ನಂಬೂದಿರಿ ಬೇಗ ಮಿಂದು ಬಂದ. ಗರ್ಭಗುಡಿಯ ಬಾಗಿಲು ತೆರೆದಾಗ ಒದೇನ ಅಲ್ಲಿ ಬಂದು ನಿಂತ. ಹಿರಿದಾಗಿ ಹರಕೆ ಹೊತ್ತ. ಮೇನಪ್ಪುರತ್ತ್ ಭಗವತಿಯೇ! ನಾನು ಕರಿಮಲೆ ಕೋಟೆ ನೋಡಲು ಹೋಗುತ್ತೇನೆ. ಕೋಟೆ ನೋಡಿ ಬಂದ ಮೇಲೆ ನಿನಗೆ ಎಡಮುರಿ ಬಲಮುರಿ ಬಳೆ ಕೊಡುವೆ. ಚಿನ್ನದ ಎಕ್ಕಸರ ಮಾಲೆ ಮಾಡಿಸಿ ಹಾಕುವೆ. ಹೀಗೆ ದೊಡ್ಡ ಹರಕೆ ಹೊತ್ತ.

ಅಲ್ಲಿಂದ ಹಿಂತಿರುಗಿ ನೋಡದೆ ಒದೇನ ಮುಂದುವರಿದ. ಮಂಗೋತ್ತ್‌ಕಾವ್‌ಗೆ ತಲಪಿದ. ಅಲ್ಲಿಗೆ ತಲಪಿದಾಗ ಮಂಟಪ ಬಿದ್ದು ಹೋಗಿದೆ. ಅಲ್ಲಿ ಪೂಜೆ ಪುರಸ್ಕಾರಗಳಿಲ್ಲ. ಒದೇನ ದೇವಾಲಯದ ಅಂಗಣಕ್ಕೆ ಹೋಗಿ ನಿಂತ. ಹಿರಿಯ ಹರಕೆಯನ್ನು ಅಲ್ಲಿಯೂ ಹೇಳಿದ– ಮಂಗೋತ್ತ್‌ಕಾವ್ ಭಗವತಿಯಮ್ಮಾ! ಕರಿಮಲೆ ಕೋಟೆ ನೋಡಲು ಹೊರಟಿದ್ದೇನೆ. ನೋಡಿ ಮರಳಿ ಬಂದ ಮೇಲೆ ಬಿದ್ದುಹೋದ ಮಂಟಪವನ್ನು ಕಟ್ಟಿಸಿ ಕೊಡುವೆ. ನಾಲ್ಕು ದಿಕ್ಕಲ್ಲೂ ಕಲ್ಲಿನ ಆವರಣ ಮಾಡಿಸಿಕೊಡುವೆ. ಗೋಪುರಕ್ಕೆ ತಾಮ್ರದ ತಗಡು ಹೊದೆಸುವೆ. ದೈವಾಲಯದ ಜಗಲಿ ಗುಡಿಸಿ ಶುಚಿಯಾಗಿಡಲು ಮಾರಾರ್ ಸ್ತ್ರೀಯನ್ನು ನೇಮಿಸುವೆ. ಅವರಿಗೆ ಹೊನ್ನು ಕೊಟ್ಟು ನೇಮಕ ಮಾಡುತ್ತೇನೆ. ಕೊಳೆ ಕಸಗಳನ್ನು ಹಾಕಲು ಒಂದು ಹೊನ್ನ ಮಡಕೆಯನ್ನೂ ಕಸಗುಡಿಸಲು ಒಂದು ಹೊನ್ನ ಹಿಡಿಲನ್ನೂ ಕೊಡುವೆ. ಹೀಗೆ ದೊಡ್ಡ ಹರಕೆ ಹೊತ್ತು ನಡೆದ ದಾರಿಯನ್ನು ಹಿಂತಿರುಗಿ ನೋಡದೆ ಮುಂದುವರಿದ. ಹಾಗೆ ನಡೆಯುತ್ತಾ ತಚ್ಚೋಳಿ ಮನೆಗೆ ಬಂದ. ಅವನು ಬಂದು ಮೆಟ್ಟಿಲೇರುವಾಗ ತಚ್ಚೋಳಿ ಕೋಮ ಕುರುಪ್ಪ್ ಒದೇನನನ್ನು ಕಂಡ. ಕೋಮ ಕುರುಪ್ಪ್ ಮೆಟ್ಟಿಲಿಳಿದು ಹೋದ. ಹಾಗೆ ಹೊರಟವನು ಕಾವಿಲ್ ಚಾತ್ತೋತ್ತ್ ಮನೆಗೆ ಹೋದ. ಅಲ್ಲಿ ಕುಂಞಿಚ್ಚೀರು ಜಗಲಿಯಲ್ಲಿ ಗುಡಿಸುತ್ತಿದ್ದಾಕೆ ಭಾವ ಬರುವುದನ್ನು ಕಂಡು ಹಿಡಿಸೂಡಿಯನ್ನು ಮನೆಯ ಹಿಂದೆ ಎಸೆದಳು(ಗೌರವ ಸೂಚಕ ಕ್ರಿಯೆ. ಹಿಡಿಸೂಡಿ ಅಶುಭಸೂಚಕ). ಭಾವನ ಬಳಿ ಬಂದು ಮಾತನಾಡಿಸಿದಳು. ತಚ್ಚೋಳಿ ಭಾವಾ! ಏನು ವಿಶೇಷ ಭಾವಾ? ಏನು ಇತ್ತ ಬಂದಿರಿ? ಕೋಮಕುರುಪ್ಪನೆಂದ – ಕಾವಿಲ್ ಚಾತ್ತೋತ್ತ್ ಚೀರು! ಮಗು ಅಂಬಾಡಿ ಎಲ್ಲಿದ್ದಾನೆ? ಚೀರು ಎಂದಳು – ಭಾವಾ! ಅವನು ಪಡುಕೋಣೆಯಲ್ಲಿ ಹೊಂಬೆತ್ತದ ಮಂಚದಲ್ಲಿ ಮಲಗಿದ್ದಾನೆ. ಅದನ್ನು ಕೇಳಿ ಕೋಮಕುರುಪ್ಪ್ ಅಲ್ಲಿಗೆ ಹೋಗಿ ಮಲಗಿದ್ದ ಮಗುವನ್ನು ಎತ್ತಿಕೊಂಡ. ಚೀರುವಿನಿಂದ ಕಳುಹಿಸಿಕೊಂಡು ಮರಳಿದ. ಅಂಬಾಡಿಯಲ್ಲಿ ಹೇಳಿದ – ಮಗೂ, ಅಂಬಾಡಿ! ನನ್ನ ಚಿನ್ನಾ! ಒಂದು ವಿಚಾರವನ್ನು ಕೇಳು. ನಿನ್ನಪ್ಪ ಒದೇನ ಕರಿಮಲೆ ಕೋಟೆಗೆ ಹೊರಟಿದ್ದಾನೆ. ಹೊರಟು ನಿಂತ ಅವನಿಗೆ ನಾವು ಮನೆ ತಲಪಿದ ಕೂಡಲೇ ನೀನು ಹೇಳು – ತಚ್ಚೋಳಿ ಮನೆಯ ನನ್ನ ಅಪ್ಪಾ! ನೀವು ಹೊರಟಿರುವುದೆಲ್ಲಿಗೆ? ನೀವು ಕರಿಮಲೆ ಕಾಣಲು ಹೋಗಬಾರದು. ನೀನು ಹೀಗೆ ಹೇಳಿದಾಗ ಅವನು – ನೀನು ನಮ್ಮ ಅಣ್ಣನನ್ನು ಕಂಡಿದ್ದೆಯಾ ಮಗನೇ? ಎಂದು ಕೇಳಿಯಾನು. ಆಗ ನೀನು – ತಚ್ಚೋಳಿ ಮನೆಯ ನನ್ನ ಅಪ್ಪಾ! ನಾನು ದೊಡ್ಡಪ್ಪನನ್ನು ಕಂಡಿಲ್ಲ. ಆದರೆ ನಿದ್ರಿಸುತ್ತಾ ಒಂದು ಕನಸು ಕಂಡೆ ಎಂದು ಹೇಳು. ಹಾಗೆ ಮಾತನಾಡುತ್ತಾ ಅವರು ತಚ್ಚೋಳಿ ಮನೆಯ ಬಳಿ ತಲುಪಿದರು. ಕೋಮಕುರುಪ್ಪ್ ಎತ್ತಿಕೊಂಡಿದ್ದ ಮಗುವನ್ನು ಕೆಳಗಿಳಿಸಿದ.

ಕುರುಪ್ಪ್ ಅಲ್ಲಿಂದ ಮಾಣಿಕೋತ್ತ್‌ಗೆ ಹೊರಟ. ಕಾವಿಲ್ ಚಾತ್ತೋತ್ತ್ ಕುಂಞಂಬಾಡಿ ಮನೆಮೆಟ್ಟಿಲು ಹತ್ತುತ್ತಿದ್ದಂತೆ ಒದೇನ ಅವನನ್ನು ಕಂಡ. ಕಂಡಕೂಡಲೆ ಓಡಿ ಬಂದ. ಅವನು ಅಂಬಾಡಿಯನ್ನು ಬಾಚಿ ಎತ್ತಿಕೊಂಡ. ಎತ್ತಿಕೊಂಡು ಅವನಲ್ಲಿ ಕೇಳಿದ – ಮಗೂ ಅಂಬಾಡಿ! ಯಾರ ಜತೆ ಬಂದೆ ಮಗನೇ? ಕೂಡಲೇ ಅಂಬಾಡಿಯೆಂದ – ತಚ್ಚೋಳಿ ಮನೆಯ ನನ್ನಪ್ಪಾ! ನನ್ನ ಜತೆ ಯಾರೂ ಬಂದಿಲ್ಲ. ನಾನೊಬ್ಬನೇ ಬಂದೆ. ಆಗ ಒದೇನನೆಂದ – ಕಾವಿಲ್ ಚಾತ್ತೋತ್ತ್ ಕುಂಞಂಬಾಡೀ! ನೀನು ದೊಡ್ಡಪ್ಪನನ್ನು ಕಂಡಿದ್ದಿಯಾ? ಅಂಬಾಡಿಯೆಂದ – ತಚ್ಚೋಳಿ ಮನೆಯ ನನ್ನಪ್ಪಾ! ನಾನು ದೊಡ್ಡಪ್ಪ ನನ್ನೇನೂ ಕಂಡಿಲ್ಲ. ಅದಕ್ಕೆ ಒದೇನನೆಂದ – ಕಾವಿಲ್ ಚಾತ್ತೋತ್ತ್‌ನ ಕುಂಞಂಬಾಡೀ! ಇದೆಲ್ಲಾ ನಿನ್ನ ದೊಡ್ಡಪ್ಪನ ಕೆಣಿ(ಉಪಾಯ). ಒದೇನ ಅಂಬಾಡಿಯನ್ನು ಎತ್ತಿಕೊಂಡು ಚಾತ್ತೋತ್ತ್ ಮನೆಗೆ ಹೋದ. ಹೋದವನು ಚೀರುವಲ್ಲಿ ಕೇಳಿದ– ಕಾವಿಲ್ ಚಾತ್ತೋತ್ತ್ ಚೀರು! ನೀನು ಅಂಬಾಡಿಯನ್ನು ಒಬ್ಬನನ್ನೇ ತಚ್ಚೋಳಿಗೆ ಕಳುಹಿದೆಯಾ? ಅದಕ್ಕೆ ಅವಳೆಂದಳು – ತಚ್ಚೋಳಿ ಮನೆಯ ನನ್ನ ಗಂಡಾ! ಕೋಮಕುರುಪ್ಪ್ ಭಾವ ನಿದ್ದೆಯಲ್ಲಿದ್ದ ಅಂಬಾಡಿಯನ್ನು ಎತ್ತಿಕೊಂಡು ಹೋದರಲ್ಲ! ಒದೇನ ಮುಗುಳ್ನಕ್ಕ. ಚೀರುವಿಗೆ ಹೀಗೆಂದ – ಕಾವಿಲ್ ಚಾತ್ತೋತ್ತ್ ಕುಂಞಿಚ್ಚೀರು! ಇದೆಲ್ಲ ಅಣ್ಣನ ಕೆಣಿ. ನಾನು ಕರಿಮಲೆ ಸೂಪಿಯ ಕೋಟೆಯನ್ನು ನೋಡಲು ಹೋಗುತ್ತೇನೆ ಚೀರು! ಅಲ್ಲಿಂದ ಹೊರಟು ಒದೇನ ತಚ್ಚೋಳಿ ಮನೆಗೆ ಬಂದ. ಮನೆಗೆ ಬಂದು ಕುಂಬೆಗೆ (ಸೊಸೆ) ಹೇಳಿದ – ತಚ್ಚೋಳಿಚ್ಚಿ ಕುಂಬೆ! ನಾನು ಸ್ನಾನಕ್ಕೆ ಹೋಗುತ್ತಿದ್ದೇನೆ. ಸ್ನಾನ ಮುಗಿಸಿ ಬರುವಾಗ ಹಳೆಯಕ್ಕಿ ಅನ್ನ ಮಾಡಿಡು. ಎಣ್ಣೆ ಕೊಯಂಬುಗಳನ್ನು ಒದೇನ ಹಚ್ಚಿಕೊಂಡ. ಕಂಡಾಚ್ಚೇರಿ ಚಾಪ್ಪ ಗೊಂಪನ್ನೂ ಬಾಗೆ ಹುಡಿಯನ್ನೂ ತೆಗೆದುಕೊಂಡ. ಅವರು ದೇವಾಲಯದ ಕೆರೆಗೆ ಬಂದರು. ಒದೇನ ಚೆನ್ನಾಗಿ ಸ್ನಾನ ಮಾಡಿದ. ಬಟ್ಟೆ ಒಗೆದುಕೊಂಡು ಒಣಗಿಸಿ ಕೊಂಡ. ಕಂಡಾಚ್ಚೇರಿ ಈಗಾಗಲೇ ಗಂಧದ ಕಲ್ಲನ್ನೂ ಕೊರಡನ್ನೂ ತೆಗೆದುಕೊಂಡು ಶಕ್ತಿಹಾಕಿ ಗಂಧತೇದು ಸಿದ್ಧಪಡಿಸಿದ್ದ. ಒದೇನನಿಗೆ ಅದನ್ನು ಕೊಟ್ಟ. ಒದೇನ ಕೋಝಿ ಕ್ಕೋಡು ಚಾಂದ್ ಚಂದನಗಳನ್ನೂ ಕಳಭ ಕಸ್ತೂರಿಗಳನ್ನೂ ನಾಲ್ಕನ್ನೂ ತೆಗೆದುಕೊಂಡು ಸೊಗಸಾಗಿ ಮಿಶ್ರಮಾಡಿದ. ಪರಿಮಳಕ್ಕಾಗಿ ಕುಂಕುಮವನ್ನೂ ಸೇರಿಸಿಕೊಂಡ. ನಾಯರರ ಕ್ರಮದಂತೆ ಐದು ಕಡೆ ಅದನ್ನು ಲೇಪಿಸಿಕೊಂಡ(ನೆತ್ತಿ, ಎರಡು ಕೈಗಳು ಎದೆ, ಹೊಕ್ಕುಳು). ತೀಯರ ಕ್ರಮದಂತೆ ಮೂರು ಕಡೆ ಲೇಪಿಸಿಕೊಂಡ. (ನೆತ್ತಿ, ಎದೆ, ಹೊಕ್ಕುಳು). ಕಡತ್ತ್ ನಾಡಿನ ಗೆರೆಗಳನ್ನೆಳೆದ. ಇರುವ್ವೆನಾಡ್‌ನ ಬೊಟ್ಟುತೊಟ್ಟ. ಊಟಕ್ಕೆ ಬಂದು ಕುಳಿತ. ತಚ್ಚೋಳಿಚ್ಚಿ ಕುಂಬೆ ಕದಳಿ ಎಲೆ ಹಾಸಿದಳು., ಮಣೆ ಇಟ್ಟಳು. ತುಂಬೆ ಹೂವಿನಂಥ ಅನ್ನ ಬಡಿಸಿದಳು. ಮಳೆನೀರಿನಂಥ ತುಪ್ಪ ಸುರಿದಳು. ಓರಣವಾಗಿ ನಾಲ್ಕು ಮೇಲೋಗರ

ಬಡಿಸಿದಳು. ಒದೇನ ಬೇಕಾದಷ್ಟು ಅನ್ನವನ್ನು ಬಾಚಿ ಉಂಡ. ಸಾಕಾದಾಗ ಕೈ ಅಡ್ಡ ಹಿಡಿದ. ಕಂಚಿನ ಗಿಂಡಿಯ ನೀರು ತೆಗೆದುಕೊಂಡ. 'ಕೊಟ್ಟತ್ತಳ'ದಲ್ಲಿ ಕೈತೊಳೆದುಕೊಂಡು ಬಾಯಿ ಶುದ್ಧಮಾಡಿಕೊಂಡ. ಅಲ್ಲಿಂದ ಬಂದು ಒಂದು ಸೀಳು ವೀಳ್ಯದೆಲೆ ಬಾಯಿಗೆ ಎಸೆದುಕೊಂಡ. ವಾಡಿಕೆಯಂತೆ ಪಡುಮನೆಗೆ ಹೋದ. ಒಂದಿಷ್ಟೂ ತಡಮಾಡದೆ ಉರುಮಿಯನ್ನು ತೆಗೆದುಕೊಂಡು ನಡೆದ ಒದೇನ ಮಾಣಿಕೋತ್ ಮನೆಗೆ ತಲಪುವಾಗ ಕೋಮಕುರುಪ್ಪ್ ಬಾಗಿಲಲ್ಲೇ ಹೊಂಬೆತ್ತದ ಮಂಚದಲ್ಲಿ ಬೇಸರದಿಂದ ಕವುಚಿ ಮಲಗಿದ್ದ. ಒದೇನ ಅಣ್ಣನ ಬಳಿ ಹೋಗಿ ನಿಂತು ಪದ್ಧತಿಯಂತೆ ಮಾಡಬೇಕಾದ ಆಚಾರಗಳನ್ನು ಮಾಡಿ ಹೀಗೆಂದ – ತಚ್ಚೋಳಿ ಕೋಮಕುರುಪ್ಪ್ ನನ್ನಣ್ಣಾ! ನಾನು ಕರಿಮಲೆ ಕೋಟೆಗೆ ಹೋಗುತ್ತೇನೆ. ನಾನು ಮೂರು ತಿಂಗಳ ತನಕವೂ ಬಾರದಿದ್ದರೆ ಆರು ತಿಂಗಳಾಗುವುದ ರೊಳಗೆ ಬರುತ್ತೇನಣ್ಣ. ಆರು ತಿಂಗಳಾದರೂ ನಾನು ಬಾರದಿದ್ದರೆ........ ನಾನು ಸತ್ತಿದ್ದೇನೆಂದೇ ತಿಳಿಯಬೇಕು. ನನಗೆ ಎಲೆ ಹೊರಗಿಡಬೇಕು! ಒದೇನ ಅಣ್ಣನ ಕಾಲು ಹಿಡಿದುಕೊಂಡ. ಕೋಮ ಕುರುಪ್ಪ್ ವೀಳಯದೆಲೆಯನ್ನು ಚರಚರನೆ ಜಗಿಯುತ್ತಿದ್ದವನು ಒದೇನನ ಮುಖಕ್ಕೆ ಉಗುಳಿದ. ಒದೇನ ಅದನ್ನು ಗುರಾಣಿಯಿಂದ ತಡೆದುಕೊಂಡ. ಒಂದು ಮುಗುಳ್ನಗು ನಕ್ಕ! ಬೇಗ ಬೇಗ ಮೆಟ್ಟಿಲಿಳಿದು ನಡೆದ. ಹಾಗೆ ನಡೆದವನು ಹೆದ್ದಾರಿಯಲ್ಲೆಲ್ಲೂ ತಂಗಲೇ ಇಲ್ಲ. ಎಲ್ಲೂ ಮರದ ನೆರಳಿಗೆ ಹೋಗಲಿಲ್ಲ. ಮುಂದೆ ಹುಲಿಚಿತ್ರದ ಕುಂತ ಹಿಡಿದ ಕಂಡಾಚ್ಚೇರಿ, ಹಿಂದಿನಿಂದ ತಪ್ಪದೆ ದಾರಿ ಸವೆಸುವ ಒದೇನ. ಅವರು ಕೊಡುಮಲೆ ಏರಿದರು. ಕೊಡುಮಲೆಯಲ್ಲಿನ ಮೂಡುಮನೆಗೆ ಹೋಗಲಿಲ್ಲ. ಮುಂದೆ ಮುಂದೆ ಸಾಗುತ್ತ ಒದೇನನಿಗೆ ಕೊಡುಮಲೆಯೂರು ಕಳೆಯುವ ತನಕವೂ ಬಾಯಾರಿಕೆಗೆ ನೀರು ಸಿಗಲಿಲ್ಲ. ಕಂಡಾಚ್ಚೇರಿಯನ್ನು ಕರೆದು ಒದೇನನೆಂದ – ನನ್ನ ಮಗೂ ನನ್ನ ಕಂಡಾಚ್ಚೇರಿ! ನನ್ನಣ್ಣ ಕೋಮಕುರುಪ್ಪ್ ಹೇಳಿದ್ದು ಇಲ್ಲಿ ನಿಜ ವಾಯ್ತಲ್ಲ ಚಾಪ್ಪಾ! ಬಾಯಾರಿಕೆ ಹೆಚ್ಚುತ್ತಿದೆ. ಹಾಗೆ ಹೇಳುತ್ತ ಅವರು ಮುನ್ನಡೆದರು. ಕುರುಂಬಾಲಿ ಹೊಳೆ ಸಮೀಪವಾಯಿತು. ಹತ್ತಿರ ತಲಪಿದಾಗ ಕಾಡುಕರಿಕುರುಂಞಿ ಎಂಬ ಹಾವು ಏಳು ಮಡಚಾಗಿ ಸೇತುವೆ ಕಟ್ಟಿದೆ. ಕಾಡು ಕರಿಮೊಳೆಯೆಂಬ ಹಾವು ಕೈತಾಂಗಾಗಿ ಅಲ್ಲಿದೆ. ಕಾಡು ಕರಿಕುರುಂಞಿ ಹಾವಿಗೆ ಮಲಯಾಳಿಯ ಮೂರಿಸಿಕ್ಕಿದ್ದೇ ತಡ ಕಣ್ಣರಳಿಸಿ ಹೆಡಬಿಚ್ಚಿತು. ಕಣ್ಣು ತೆರೆದು ನೋಡಿದ ಒದೇನ ಹೀಗೆಂದ – ಕಂಡಾಚ್ಚೇರಿ ಪ್ರಿಯ ಗೆಳೆಯ ಕುಂಞಿಚಾಪ್ಪಾ! ಅಣ್ಣ ಹೇಳಿದ್ದು ನಮಗೆ ಇಲ್ಲಿ ನಿಜವಾಯ್ತು. ಸೇತುವೆಯ ಮೇಲಿ ಕಾಲಿಟ್ಟೆವು. ಕೈತಾಂಗಿನ ಮೇಲೆ ಕೈಯಿಟ್ಟೆವು. ಆದರೇನು? ಹಾವಿಗೆ ಎರೆಯಾಗಿ ಬಿಡುತ್ತೇವಲ್ಲ? ಒದೇನ ನೂರೊಂದು ಕಲ್ಲು ತೆಗೆದು ಕೊಂಡ. ಕಲ್ಲುಗಳನ್ನು ಮಂತ್ರಿಸಿ ಎಸೆದ. ಕಾಡುಕರಿಕುರುಂಞಿ ಎಂಬ ಹಾವು ಹೆಡೆ ಮುದುಡಿ ಹಿಂದಿನಂತೆ ಮಲಗಿತು.

ಅವರು ಹೊಳೆದಾಟಿ ಮುಂದುವರಿದರು. ಮುಂದುವರಿಯುತ್ತ ಕಾವೇರಿ ಹೊಳೆಗೆ ತಲಪಿದರು. ಅಲ್ಲಿಗೆ ತಲಪಿದಾಗ ಹೊಳೆಯ ತುಂಬ ಮೊಸಳೆಗಳು! ಒದೇನ ಹೇಳಿದ – ಕಂಡಾಚ್ಚೇರಿಯ ಪ್ರಿಯಗೆಳೆಯ ಕುಂಞಿಚಾಪ್ಪಾ! ನನ್ನಣ್ಣ ಕೋಮಕುರುಪ್ಪ್ ಹೇಳಿದ್ದು ಇಲ್ಲಿ ನಿಜವಾಯಿತು. ಒದೇನ ನೂರೊಂದು ಕಲ್ಲು ಹರಳುಗಳನ್ನು ತೆಗೆದುಕೊಂಡ. ಕಲ್ಲುಗಳನ್ನು ಮಂತ್ರಿಸಿ ಎಸೆದ. ಹೊಳೆಯಲ್ಲಿದ್ದ ಮೊಸಳೆಗಳೆಲ್ಲ ನೀರಿನಡಿಗೆ ಮುಳುಗಿದವು. ಅವರು ಹೊಳೆ ದಾಟಿ ಮುಂದೆ ಹೋದರು. ಹಾಗೆ ಮುಂದುವರಿದು ಅವರು ಕಾವೇರಿ ಕಾಡಿಗೆ ತಲಪಿದರು. ಕಾಡನ್ನು ಪ್ರವೇಶಿಸಿದಾಗ ಹಗಲು ರಾತ್ರೆಗಳೂ ತಿಳಿಯುತ್ತಿಲ್ಲ. ಕಾಡಾನೆ ಘೀಳಿಡುವುದು ಕೇಳಿಸಿತು. ಸೀಳು ನಾಯಿಗಳ ಹಿಂಡು ಬೊಗಳುವುದು ಕೇಳಿಸಿತು. ತೋಳಗಳ ಊಳುವಿಕೆ ಮತ್ತು ಹುಲಿಗಳ ಗರ್ಜನೆ ಕೇಳಿಸಿತು. ಆಗ ಒದೇನನೆಂದ – ಕಂಡಾಚ್ಚೇರಿಯ ಪ್ರಿಯಗೆಳೆಯ ಕುಂಞಿಚಾಪ್ಪಾ! ಅಣ್ಣ ಹೇಳಿದ್ದು ಇಲ್ಲಿ ನಮಗೆ ಸತ್ಯವಾಯಿತು. ಕಾಡಾನೆಯ ಘೀಳು ಕೇಳಿದೆಯಾ? ತೋಳ ಹುಲಿಗಳ ಊಳು ಮತ್ತು ಗರ್ಜನೆ ಕೇಳಿದೆಯಾ? ಕಂಡಾಚ್ಚೇರಿಯ ಪ್ರಿಯಗೆಳೆಯ ಕುಂಞಿಚಾಪ್ಪಾ! ಹಗಲು ರಾತ್ರೆಗಳು ತಿಳಿಯುತ್ತಿಲ್ಲ. ಒದೇನ ದೊಡ್ಡದೊಂದು ಹರಕೆ ಹೊತ್ತ – ಒಲವಣ್ಣೂರ್ ಕಾವಿನ ಭಗವತಿಯಮ್ಮಾ! ಕಾವೇರಿ ಕಾಡಿ ನಲ್ಲಿರುವ ನಮಗೆ ದಿಕ್ಕು ದೆಸೆಗಳ ಹೊಲ ಬಾಗುತ್ತಿಲ್ಲ. ನೀನು ಮುಡಿಧರಿಸಿ ಪೀಠಕಲ್ಲನ್ನು ಏರುವ ವೇಳೆಗೆ ನಿನಗೆ ಎಡಮುರಿ ಬಲಮುರಿ ಬಳೆಕೊಡುವೆ. ಚಿನ್ನದ ಎಕ್ಕಸರ ಮಾಲೆ ಮಾಡಿಸಿ ನಿನಗೆ ಹಾಕುವೆ. ಹೀಗೆ ಹರಕೆ ಹೊತ್ತಾಗ ಕಾವೇರಿ ಕಾಡಿನಲ್ಲಿದ್ದ ಅವರಿಗೆ ಹಗಲು ರಾತ್ರೆಗಳ ಅರಿವಾ ಯಿತು. ಹಾಗೆ ಅವರು ಮುಂದುವರಿಯುತ್ತ ಕರಿಮಲೆ ಕೋಟೆಗೆ ತಲಪಿದರು. ಕೋಟೆಯ ಹೊರಭಾಗಕ್ಕೆ ತಲಪಿದಾಗ ಕೋಟೆಯ ಕಂದಕ ತುಂಬ ಕಳ್ಳಿಮುಳ್ಳುಗಳು. ಬಿದಿರ ಮುಳ್ಳಿನ ಬೇಲಿ. ಬಿದಿರ ಗಡ್ಡೆಗಳನ್ನು ಕೋಟೆಗೋಡೆಗಳ ಬುಡದಲ್ಲಿ ನೆಟ್ಟಿದ್ದಾರೆ. ಕೋಟೆಗೆ ಹೋಗಲು ದಾರಿಯೇ ಇಲ್ಲ. ತಚ್ಚೋಳಿಯ ಕಣ್ಮಣಿ ಬಾಲ ಒದೇನ ಒಲವಣ್ಣೂರ್ ಕಾವ್ ಭಗವತಿಗೆ ಇನ್ನೊಂದು ಹರಕೆ ಹೊತ್ತಾಗ ಕರಿಮಲೆ ಸೂಪಿಯ ಕೋಟೆಯಿಂದ ಒಂದು ಬಿದಿರು ಬಾಗಿ ಬಂತು. ಒದೇನ ಅದನ್ನು ಹಿಡಿದುಕೊಂಡ. ಚಾಪ್ಪನಿಗೆಂದ – ಕಂಡಾಚ್ಚೇರಿ ಚಾಪ್ಪಾ, ಕೇಳು! ಬಿಗಿಯಾಗಿ ಹಿಡಿದುಕೊ. ಇಬ್ಬರೂ ಬಿದಿರ ಮೂಲಕ ಕೋಟೆಯನ್ನೇರಿದರು. ಕರಿಮಲೆ ಕೋಟೆಯಲ್ಲಿ ಅವರು ನಡೆದರು. ಒಂದನೇ ನೆಲೆಗೆ ಏರಿದಾಗ ಕಾವಲವರೆಲ್ಲ ನಿದ್ರಿಸುತ್ತಿದ್ದಾರೆ. ಒದೇನ ಅವರನ್ನೆಲ್ಲ ಕೊಚ್ಚಿ ಕೊಂದ. ಎರಡನೆಯ ನೆಲೆಗೆ ಏರಿದಾಗ ಅಲ್ಲಿನ ಕಾವಲವರನ್ನೂ ಒದೇನ ಕೊಚ್ಚಿಕೊಂದ. ಹೀಗೆಯೆ ಮೂರು ನಾಲ್ಕೈದಾರು ನೆಲೆಗಳ ಕಾವಲುಗಾರರನ್ನೂ ಕೊಚ್ಚಿಕೊಂದ. ಏಳನೆಯ ನೆಲೆಗೆ ದಾಟಿದಾಗ ಕರಿಮಲೆ ಸೂಪಿ ಎಂಬ ಜೋನಕ ಮಲಗಿ ನಿದ್ರಿಸುತ್ತಿದ್ದಾನೆ.

ಒದೇನ ಸೂಪಿ ಎಂಬ ಜೋನಕ ನನ್ನು ಕಡಿದುಕೊಂದ. ಅಲ್ಲಿದ್ದ ಎಲ್ಲರನ್ನೂ ಕಡಿದು ಕೊಂದ. ಕಂಡಾಚ್ಚೇರಿಯೂ ಒದೇನನೂ ಕೋಟೆಯ ಕೆಲಸವನ್ನೆಲ್ಲ ನೋಡಿದರು. ಕಾಲು ಭಾಗ ಕರಿಕಲ್ಲಿನಿಂದಲೂ ಮುಕ್ಕಾಲು ಭಾಗವನ್ನು ಕಬ್ಬಿಣದ ದಸಿಗಳಿಂದಲೂ ನಿರ್ಮಿಸಿದ್ದಾರೆ. ಕೋಟೆಯಲ್ಲಿ ಸಾಕಷ್ಟು ಹೊನ್ನು ಸಂಪತ್ತಿದೆ. ಮುಂಜಾನೆ ಬೆಳಕು ಹರಿಯುವ ಹೊತ್ತಿಗೆ ಕಂಡಾಚ್ಚೇರಿ ತಲೆಹೊರೆ ಕಾರ್ಮಿಕರನ್ನು ಕರೆದುಕೊಂಡು ಬಂದ. ಹೊನ್ನನ್ನು ಹೊರೆಹೊರೆಯಾಗಿ ಕಟ್ಟಿಸಿದ. ಉಳಿದ ಸಂಪತ್ತನ್ನೂ ತಲೆಹೊರೆ ಯಾಗಿ ಕಟ್ಟಿಸಿದ. ಕೊಡುಮಲೆ ಕುಂಕಿಯ ಮನೆಗೆ ಎಲ್ಲವನ್ನೂ ತಲೆಹೊರೆಯಾಗಿ ಕಟ್ಟಿಸಿದ. ಕಂಡಾಚ್ಚೇರಿಯೂ ಒದೇನನೂ ಕೋಟೆಯನ್ನು ಮುಚ್ಚಿದರು. ಅವರು ಮರಳಿ ನಡೆಯುತ್ತ ಕಾವೇರಿ ಕಾಡನ್ನು ಪ್ರವೇಶಿಸಿದರು. ದಿಕ್ಕುದಿಸೆಗಳ ಹೊಲಬಾಗುತ್ತಿಲ್ಲ. ಒದೇನ ಮೂಡು ತಂಬುರಾನ್ (ಕೊಟ್ಟಿಯೂರು) ದೇವರಿಗೆ ಹರಕೆ ಹೊತ್ತ – ಮೂಡು ತಂಬುರಾನ್ ದೇವರೇ! ವೃಷಭ ಮಾಸದ ಆದಿತ್ಯವಾರ ಬಂದಾಗ ಒಂದು ಆನೆಯನ್ನು ನಿಮಗೆ ಒಪ್ಪಿಸುವೆ. ಹೀಗೆ ಹರಕೆ ಹೊತ್ತಾಗ ಹಗಲು ರಾತ್ರೆಗಳು ಗೊತ್ತಾದುವು. ಹಾಗೆ ಮುಂದುವರಿದು ನಡೆಯುತ್ತ ಕೊಡುಮಲೆ ಕುಂಕಿಯ ಮೂಡು ಮನೆಗೆ ಅವರು ಬಂದರು. ಅಲ್ಲಿ ವಿನೋದವಾಗಿ ಕಾಲಕಳೆಯುತ್ತಿದ್ದರು.

ಇತ್ತ ಕೋಮಕುರುಪ್ಪ್ ತಮ್ಮನನ್ನು ನೆನೆದು ದುಃಖದಿಂದ ಅಳುತ್ತಿದ್ದ. ಮೂರು ತಿಂಗಳು ಮುಗಿಯುತ್ತಾ ಬರುತ್ತಿತ್ತು. ಕೋಮಕುರುಪ್ಪ್ ಎಂದ – ತಚ್ಚೋಳಿಚ್ಚಿ ಕುಂಬೆಯೇ ಕೇಳು. ನನ್ನ ತಮ್ಮ, ನನ್ನ ಮಗು ಒದೇನ ಮೂರು ತಿಂಗಳೊಳಗೆ ಮನೆಗೆ ಬರುತ್ತೇ ನೆಂದಿದ್ದ! ಮೂರು ತಿಂಗಳಲ್ಲಿ ಬಾರದೆ ಹೋದರೆ ಆರು ತಿಂಗಳಲ್ಲಾದರೂ ಬರುತ್ತೇನೆ ಎಂದಿದ್ದ. ನೋಡೋಣ ಬಂದಾನು! – ಹೀಗೆ ಸಮಾಧಾನ ಮಾಡಿಕೊಂಡು ಅವರು ಅಲ್ಲಿದ್ದರು. ಆರು ತಿಂಗಳೂ ಕಳೆಯಿತು. ಕೋಮಕುರುಪ್ಪ್ ತಚ್ಚೋಳಿ ಮನೆಯಲ್ಲೂ ಮಾಣಿಕೋತ್ತ್‌ನಲ್ಲೂ ವಿಷಯ ತಿಳಿಸಿ ಒದೇನನ ಬೊಜ್ಜ ಮಾಡಿಸಲು ತಯಾರಿ ನಡೆಸಿದ. ಮದಿಲೂರು ಕುರಿಕ್ಕಳ್ ಎಳುತ್ತಚ್ಚನ್, ಪರ್‌ಂದ್ ತುರ್ತಿಯ ಪಣಿಕ್ಕರ್ ಮತ್ತು ಆಳುಗಳು ತಮ್ಮ ತಮ್ಮಲ್ಲೇ ಆಡಿಕೊಂಡರು – ಒದೇನ ಕರಿಮಲೆಗೆ ಕೋಟೆಗೆ ಹೋಗಿ ಅಲ್ಲೇ ಸತ್ತುಹೋದ. ಒಲವಣ್ಣೂರ್ ಭಗವತಿಗೆ ಭಗವತಿಗೆ ಹೇಳಿಕೊಂಡ ಹರಕೆ ಮಾಡಿಸಬೇಕು. ಸಿಡಿಮದ್ದಿನೊಂದಿಗೆ ಮಾಲೆದೀಪದ ಹರಕೆ ಕೊಡಬೇಕು. ಟೊಪ್ಪಿಮಾಲೆಗಳನ್ನು ಒಯ್ಯಬೇಕು. ತೆಂಕಿನಿಂದ ಬಂದ ಆಚಾರಿಗಳು ತೆಂಕು ಭಾಗದಲ್ಲಿ ಮರೆಮಾಡಿಕೊಂಡು ಬಿಡಾರ ಮಾಡಿದರು. ಬಡಗಿನಿಂದ ಬಂದ ಆಚಾರಿಗಳು ಬಡಗು ಭಾಗದಲ್ಲಿ ಮರೆಮಾಡಿಕೊಂಡು ಬಿಡಾರ ಮಾಡಿದರು. ಟೊಪ್ಪಿ ಮತ್ತು ಮಾಲೆಗಳ ಕೆಲಸ ತೊಡಗಿದರು. ತಚ್ಚೋಳಿ ಕೋಮಕುರುಪ್ಪ್ ದುಃಖಿಸುತ್ತಲೇ ಒದೇನನ ಬೊಜ್ಜಕ್ಕೆ

ಸಿದ್ಧನಾದ. ನಾಳೆ ಬೊಜ್ಜ. ಅದರ ಮರುದಿನ ಎಲೆ ಹೊರಗಿಡುವುದು. ಎಲೆ ಹೊರಗಿಡಲು ಬೇಕಾದ ಸಿದ್ಧತೆಗಳನ್ನೆಲ್ಲ ಮಾಡಿದ, ಸಾಮಾನು ಸರಂಜಾಮುಗಳನ್ನು ಸಂಗ್ರಹಿಸಿದ.

ಒಲವಣ್ಣೂರ್ ಕಾವ್‌ನ ಭಗವತಿ, ಪೂಕುಟ್ಟಿಚಾತನೆಂಬ ಪರದೇವತೆ ಇಬ್ಬರೂ ಸೇರಿ ಹೊರಟರು. ಕೊಡುಮಲೆ ಕುಂಕಿಯ ತೆಂಕುಕೋಣೆಯಲ್ಲಿ ಒದೇನನ ಬಳಿಬಂದು ನಿಂತರು. ಒದೇನನ ಎಡಕಿವಿ ತಟ್ಟಿ ಹೀಗೆಂದರು – ತಚ್ಚೋಳಿ ಕಣ್ಮಣಿ ಬಾಲ ಒದೇನ! ನೀನು ಈ ಕೊಡುಮಲೆಯಲ್ಲಿ ವಾಸಿಸುತ್ತ ಆರು ತಿಂಗಳಾದುವು. ನಿನ್ನಣ್ಣ ಕೋಮ ಕುರುಪ್ಪ್‌ನ ಮಾತಿನಂತೆ ತಚ್ಚೋಳಿ ಮನೆಯಲ್ಲೂ ಮಾಣಿಕೋತ್ತಲ್ಲೂ ನಿನ್ನ ಸಾವಿನ ಸೂತಕ ಆಚರಿಸುತ್ತಿದ್ದಾರೆ. ನಾಳೆ ಬೊಜ್ಜ. ನಾಡಿದ್ದು ಎಲೆಹೊರಗಿಟ್ಟು ಔತಣ ನಿನ್ನಣ್ಣ ಕೋಮಕುರುಪ್ಪ್ ಎದೆಬಡಿದುಕೊಂಡು ಅಳುತ್ತಿದ್ದಾನೆ. ಇನ್ನಷ್ಟು ವಿಚಾರಗಳನ್ನು ಕೇಳು. ಮದಿಲೂರ್ ಕುರಿಕ್ಕಳ್ ಮತ್ತು ಸಂಗಡಿಗರೂ ಪರ್‌ಂದ್ ತುರ್ತಿಯ ಪಣಿಕ್ಕರ್ ಮತ್ತು ಆಳುಗಳು ನನಗೊಂದು ಕಾಣಿಕೆ ತರುವವರಿದ್ದಾರೆ. ಟೊಪ್ಪಿ ಮತ್ತು ಮಾಲೆ. ಅವುಗಳ ಕೆಲಸ ಇನ್ನೂ ಮುಗಿದಿಲ್ಲ. ನೀನು ಇಲ್ಲಿ ಇದಾವ ನಿದ್ದೆ ಮಾಡುತ್ತಿದ್ದಿ? ನಿದ್ದೆಯಲ್ಲಿದ್ದ ಒದೇನನಿಗೆ ಹೀಗೊಂದು ಸೊಪುನ ಬೀಳಿಸಿದರು. ಒದೇನ ನಿದ್ದೆಕೊಡವಿ ಎದ್ದ. ಕೊಡುಮಲೆಗೊಡತಿ ಕುಂಞಿಕುಂಕಿ! ನಾನೀಗಲೇ ಹೊರಡಬೇಕು. ಕುಂಞಿಕುಂಕಿಯೆಂದಳು – ತಚ್ಚೋಳಿ ಒದೇನ, ನನ್ನ ಗಂಡ! ನೀವು ಹಿಂದೆ ನಮ್ಮ ಸಂಬಂಧದ ಆರಂಭದ ರಾತ್ರೆಗಳಲ್ಲೆಲ್ಲ ಮಧ್ಯರಾತ್ರಿ ಹದಿನಾರು ಘಳಿಗೆ ಕಳೆದಾಗ ಮೂಡುದಿಕ್ಕಿಗೆ ಹೊರಟು ಹೋಗುತ್ತಿದ್ದವರು ಇಂದೇನು ಈಗಲೇ ಹೊರಟಿರಿ? ಒದೇನ ಏನೂ ಉತ್ತರಿಸದೆ ಚಾಪ್ಪನ ಬಳಿಗೆ ಹೋಗಿ ಅವನನ್ನು ಕರೆದೆಂದ– ಕಂಡಾಚ್ಚೇರಿಯ ಪ್ರಿಯಚಾಪ್ಪಾ! ಒಣ ಬಿದಿರಿನ ತುಂಡು ತದೆದು ಸೂಟೆ ಕಟ್ಟು, ನಾವು ನಮ್ಮೂರಿಗೆ ಹೊರಡೋಣ. ಕಂಡಾಚ್ಚೇರಿ ಸೂಟೆ ಕಟ್ಟಿದ. ಇಬ್ಬರೂ ಸೇರಿ ಹೊರಟರು. ಒದೇನನೆಂದ – ದೊಡ್ಡ ತಿರುವಿನ ದಾರಿಯಾಗಿ ನಾವು ಇಳಿದೆವಾದರೆ ಅದೇ ಹತ್ತಿರದ ದಾರಿ. ಕೂಡಲೇ ಕಂಡಾಚ್ಚೇರಿಯೆಂದ – ನನ್ನ ಧನೀ ನನ್ನ ಯಜಮಾನರೆ! ಕೊಟ್ಟಿಯೂರ್ ತಿರುವು ದಾರಿಯಾಗಿ ಇಳಿದರೆ ಹತ್ತಿರ. ಒದೇನ ಕೊಟ್ಟಿಯೂರ್ ತಿರುವು ದಾರಿಯಲ್ಲಿ ಇಳಿದ. ಇಳಿಯುತ್ತಿದ್ದಂತೆ ಕಾಡಾನೆಗಳು ಘೀಳಿಡುವುದು ಕೇಳಿತು. ಒದೇನ ಹೆದರಿಬಿಟ್ಟ. ದೊಡ್ಡದೊಂದು ಹರಕೆ ಹೊತ್ತ – ಮೂಡು ಪೆರುಮಾಳ್ ದೇವರೇ, ನನ್ನೊಡೆಯ! ನಿನ್ನ ಜಾತ್ರೆ ಬಂದರೆ ದೊಡ್ಡದೊಂದು ಕೊಪ್ಪರಿಗೆ ಒಪ್ಪಿಸುವೆ. ನಡುರಾತ್ರೆ ಹದಿನಾರು ಗಳಿಗೆ ಹೊತ್ತಲ್ಲಿ ನಾವು ಮಲೆ ಇಳಿದುಹೋಗುತ್ತಿದ್ದೇವೆ. ನಮಗೆ ಹುಲಿ ಚಿರತೆಗಳು ಕಾಣಸಿಗಬಾರದು. ಕಂಡಾಚ್ಚೇರಿಯೂ ಒದೇನನೂ ಮುನ್ನಡೆದರು. ಹಾಗೆ ಮುಂದುವರಿದು ನಡೆದು

ಒಲವಣ್ಣೂರ್ ಕಾವಿಗೆ ತಲಪಿದರು. ಅಲ್ಲಿಗೆ ತಲಪಿದ ಕೂಡಲೇ ಒದೇನ ಅಲ್ಲಿ ಮಿಂದು ಭಗವತಿಗೆ ನಮಸ್ಕರಿಸಿದ.

ಇವರು ಹಾಗೆ ಅಲ್ಲಿ ಕುಳಿತಿದ್ದಾಗ ತಚ್ಚೋಳಿ ಕೋಮಕುರುಪ್ಪ್ ಒದೇನನ ಎಲೆ ಹೊರಗಿಟ್ಟು ಔತಣ ಕೊಡಿಸಿದ. ಊರು ಅದಕ್ಕೆ ಸಂತೃಪ್ತಿ ಪ್ರಕಟಿಸಿತು. ಅಷ್ಟರಲ್ಲಿ ಕಂಡಾಚ್ಚೇರಿಯೂ ಒದೇನನೂ ಅಲ್ಲಿಗೆ ತಲಪಿದರು. ಒದೇನ ಬೇಗ ಬೇಗ ಮೆಟ್ಟಿಲೇರಿ ಹೋದ. ಕೋಮಕುರುಪ್ಪ್ ಅವನನ್ನು ಕಣ್ಣಾರೆ ಕಂಡಕೂಡಲೇ ಬಾಚಿ ತಬ್ಬಿಕೊಂಡು ಗಳಗಳನೆ ಅತ್ತುಬಿಟ್ಟ – ನೆನ್ನ ತಮ್ಮಾ ನನ್ನ ಮಗು ಒದೇನ! ನಿನ್ನದು ಇದೆಂಥ ಆಟವಾಗಿ ಬಿಟ್ಟಿತಪ್ಪ! ಕೂಡಲೆ ಒದೇನನೆಂದ – ನನ್ನಣ್ಣ ಕೋಮಕುರುಪ್ಪೇ ಕೇಳಿ! ಊಟವನ್ನೂ ಚೆನ್ನಾಗಿಯೇ ಕೊಡಿಸಿರಿ. ಊಟ ಮುಗಿಸಿ ಎಲ್ಲರೂ ಹೊರಟು ಹೋದರು. ಹೀಗೆ ಅವರೆಲ್ಲಾ ಅಲ್ಲಿ ಒಂದಾಗಿದ್ದರು. ಮರುದಿನ ಬೆಳಕು ಹರಿಯುವಾಗ ಒದೇನನೂ ಕಂಡಾಚ್ಚೇರಿಯೂ ಜತೆಯಲ್ಲಿ ಒಲವಣ್ಣೂರ್ ಕಾವ್‌ಗೆ ಹೋದರು. ಕಾವಿಗೆ ತಲಪಿದ ಒದೇನ ಕಾವ್‌ನ ಕೆರೆಯಲ್ಲಿ ಮಿಂದ. ಒದ್ದೆ ಬಟ್ಟೆಯಲ್ಲೇ ಹೋಗಿ ದೇವಾಲಯದ ಬಾಗಿಲಲ್ಲಿ ನಿಂತ. ಅರ್ಚಕನನ್ನು ಕಂಡು ನಮಸ್ಕರಿಸಿದ. ಅಷ್ಟರಲ್ಲಿ ಮದಿಲೂರ್ ಕುರಿಕ್ಕಳು, ಮಕ್ಕಳು ಮತ್ತು ಪರಂದ್ ತುರ್ತಿಯ ಪಣಿಕ್ಕರ್ ಮತ್ತು ಆಳುಗಳು ಹರಕೆಯೊಪ್ಪಿಸಲು ಟೊಪ್ಪಿ ಹೊನ್ನಬಳೆ ಮುಂತಾದ್ದನ್ನು ತೆಗೆದುಕೊಂಡು ಆನೆಗೆ ನೆತ್ತಿಪಟ್ಟವನ್ನು ಕಟ್ಟಿಸಿ ಶೃಂಗರಿಸಿ ಹರಕೆಗೆ ತಂದ ವಸ್ತುಗಳನ್ನು ಆನೆಯ ಮೇಲೆ ತೆಗೆದಿರಿಸಿದರು. ಆಲವಟ್ಟ ಬಿಳಿಚಾಮರಗಳನ್ನು ಬೀಸಿಸಿದರು. ನೂರೊಂದು ಅಂಡೆ ಸಿಡಿಮದ್ದು ಸಿಡಿಸಲು ಬೇಕಾದಷ್ಟು ಆಳುಗಳು ಸಿದ್ಧರಾದರು. ಬಹ್ವಾಡಂಬರ ಎದ್ದು ಕಾಣುತ್ತಿತ್ತು. ಹಾಗೆ ಗೌಜಿ ಗದ್ದಲಗಳಿಂದ ಅವರು ಅಲ್ಲಿಗೆ ತಲಪುವಾಗ ತಚ್ಚೋಳಿ ಒದೇನನು ಅಲ್ಲಿ ತೃಪ್ಪಡಿಯಲ್ಲಿ (ಗರ್ಭಗುಡಿಯ ಮೆಟ್ಟಿಲು) ಕುಳಿತಿದ್ದ. ಆಗ ಮದಿಲೂರು ಕುರಿಕ್ಕಳು ಮತ್ತು ಮಕ್ಕಳು ದೇವಾಲಯದ ಅಂಗಣಕ್ಕೆ ಬಂದು ನಿಂತರು. ಆಗ ಒದೇನನಲ್ಲಿ ಕುರಿಕ್ಕಳೆಂದಳು – ತಚ್ಚೋಳಿಯ ಒದೇನ! ತೃಪ್ಪಡಿಯಿಂದ ಮೇಲೇಳು. ಹರಕೆ ತಂದಿರುವುದನ್ನು ನಾವು ದೇವರಿಗೆ ಒಪ್ಪಿಸಬೇಕು. ಬಿಂಬಕ್ಕೆ ಮಾಲೆ ಹಾಕಬೇಕು. ಒದೇನನಿಂದ ಯಾವ ಪ್ರತಿಕ್ರಿಯೆಯೂ ಇರಲಿಲ್ಲ. ಕುರಿಕ್ಕಳ್ ಮತ್ತೆ ಅದನ್ನೆ ಪುನಾರಾವರ್ತಿಸಿ ಹೇಳಿದರು. ಒದೇನನಿಂದ ಯಾವ ಪ್ರತಿಕ್ರಿಯೆಯೂ ಇರಲಿಲ್ಲ. ಕುರಿಕ್ಕಳ್ ಎಂದರು – ಒದೇನನ ಕೈ ಹಿಡಿದು ಎಬ್ಬಿಸುವುದಕ್ಕೆ ಯೋಗ್ಯರಾದ ನಾಯರ್ ಯಾರೂ ಇಲ್ಲಿ ಇಲ್ಲವೇ? ಕೂಡಲೆ ಒದೇನನೆಂದ – ನನ್ನ ಕೈ ಹಿಡಿಯುವವಳು ಚಾತ್ತೋತ್ತ್‌ನ ಚೀರು ಮಾತ್ರ. ಬೇರೆ ಯಾರಾದರೂ ಹಾಗೆ ಹಿಡಿಯಲು ಪ್ರಯತ್ನಿಸಿದರೆ ಆ ಕೈಯನ್ನು ಮೊಳಕೈ ಸಮೇತ ಕತ್ತರಿಸಿ ಹಾಕಿಯೇನು!

ಮದಿಲೂರ್ ಕುರಿಕ್ಕಳಲ್ಲಿ ಕಂಡಾಚ್ಚೇರಿ ಚಾಪ್ಪ ಹೇಳಿದ – ಮದಿಲೂರ್ ಕುರಿಕ್ಕಳ್ ಕೇಳಬೇಕು! ನನ್ನ ಧನಿ, ನನ್ನ ಯಜಮಾನರು ಪಡಿಯಲ್ಲಿ ಕುಳಿತದ್ದು ಯಾಕೆ ಗೊತ್ತಲ್ಲವೆ? ಯಾವುದೇ ಹರಕೆ ಒಪ್ಪಿಸುವುದಿದ್ದರೂ ಪಡಿಯ ಮೇಲೆ ಎರಡು ಹಣ ಕಾಣಿಕೆಯಗಿ ಇಡಬೇಕು. ಅದನ್ನು ಕೇಳಿದ ಕುರಿಕ್ಕಳ್ ಪಂಚೆಯ ಅಂಚಿನಿಂದ ಎರಡು ಹಣವನ್ನು ಹೆಕ್ಕಿ ಪಡಿಯ ಮೇಲಿಟ್ಟರು. ತಚ್ಚೋಳಿ ಒದೇನ ಕೂಡಲೆ ತೃಪ್ತಿಯಿಂದ ಎದ್ದು ನಿಂತ. ಮದಿಲೂರ್ ಕುರಿಕ್ಕಳೂ ಸಂಗಡಿಗರೂ ಒಳಗೆ ಹೋಗಿ ಹರಕೆಯ ಹೊನ್ನ ಬಳೆ ಒಪ್ಪಿಸಿದರು. ಬಿಂಬಕ್ಕೆ ಮಾಲೆ ಸೂಡಿದರು. ಹರಕೆಗಳನ್ನೆಲ್ಲಾ ಒಪ್ಪಿಸಿದ ಬಳಿಕ ಎಲ್ಲರೂ ಜೋಕೆಯಿಂದ ಹೊರಟು ಹೋದರು. ಅವರೆಲ್ಲ ಹೊರಗೆ ಹೋದ ಬಳಿಕ ಒದೇನನೂ ಕೂಡಲೆ ಹೊರಟು ತಚ್ಚೋಳಿ ಮನೆಗೆ ಹೋದ. ಅಲ್ಲಿ ಎಲ್ಲರೂ ಸೇರಿ ಸುಖವಾಗಿದ್ದರು.

ತಚ್ಚೋಳಿಚ್ಚಿ ಕುಂಞಿಚಾರಳನ್ನು ಜೋಳಿಗೆಯಲ್ಲಿ ಹಾಕಿ ಒಯ್ಯುತ್ತಿದ್ದಾನೆ!

ಎಡವಟ್ಟಂ ಪೂಂಗಾವ್‌ನ (ಉದ್ಯಾನದ) ನಂಬರ್ ಚೆಟ್ಟಿ ಚೆನ್ನಾಗಿ ಅಲಂಕರಿಸಿ ಕೊಂಡ. ಆಗ ಅವನ ಮಕ್ಕಳು ಮತ್ತು ಅಳಿಯಂದಿರು ಕೇಳಿದರು – ಎಲ್ಲಿಗೆ ಹೊರಟು ಹೋಗುತ್ತಿದ್ದೀರಿ? ಅದಕ್ಕೆ ನಂಬರ್‌ಚೆಟ್ಟಿ ಹೇಳಿದ – ಕಡತ್ತುವ್ವೈನಾಡಿಗೆ ಒಮ್ಮೆ ಹೋಗಿ ಬರಬೇಕು. ಅದಕ್ಕೆ ಅವರೆಂದರು – ತಿಳಿದೋ ತಿಳಿಯದೆಯೋ ನೀವು ಕಡತ್ತ್‌ವೈನಾಡಿಗೆ ಹೋಗಬಾರದು. ಹಾಗೆ ಯಾರಾದರೂ ಅಲ್ಲಿಗೆ ಹೋದರೆ ಅವರು ಪುನಃ ಮಲೆನಾಡನ್ನು ಕಾಣಲಾರರು. ತಮ್ಮ ಮನೆಗೆ ಮರಳಿ ಸತ್ತವರು ಯಾರೂ ಇಲ್ಲ. ತಚ್ಚೋಳಿಯಲ್ಲಿ ಅಣ್ಣತಮ್ಮಂದಿರಿಬ್ಬರು ಯಾರನ್ನೂ ಹಿಂದಿರುಗಲು ಬಿಡರು. ಎಷ್ಟು ಹೇಳಿದರೂ ಆತ ಅದಾವುದನ್ನೂ ಕಿವಿಗೆ ಹಾಕಿಕೊಳ್ಳಲಿಲ್ಲ. ಮನೆಯ ಹೊಸ್ತಿಲು ದಾಟಿ ಹೋಗಿಯೇ ಬಿಟ್ಟ. ಹಾಗೆ ಹೊರಟು ಹೋದವನು ಮಾಣಿಕ್ಕೋತ್ತ್ ಮನೆಯ ಬಳಿ ತಲಪಿದ. ತಚ್ಚೋಳಿ ಮನೆಯ ಉಣ್ಣಿಚಾರ ಎಡಚಾವಡಿಯಿಂದ ತಾಡವಾಲೆ ಗ್ರಂಥದ ಕಟ್ಟನ್ನು ತಂದಿಟ್ಟಳು. ವ್ಯಾಸಪೀಠವನ್ನೂ ತಂದಳು. ಅದರ ಮೇಲೆ ಜಿಂಕೆಯ ಚರ್ಮವನ್ನು ಹಾಸಿದಳು. ಬಳಿಕ ಕುಳಿತುಕೊಂಡು ಗ್ರಂಥವನ್ನು ತೆರೆದು ಕಾವ್ಯಾಲಾಪ ಮಾಡತೊಡಗಿದಳು. ನಂಬರ್‌ಚೆಟ್ಟಿ ಬರುತ್ತಿರುವುದನ್ನು ದೂರದಿಂದಲೇ ಕಂಡಳು. ಸೊಂಟದಲ್ಲಿನ ಬಟ್ಟೆ ಬಿಗಿದು ಕೊಂಡಳು. ತಲೆಯಲ್ಲಿನ ಕೂದಲು ಕಟ್ಟಿಕೊಂಡಳು. ಉಣ್ಣಿಚ್ಚಾರ ಮನದಲ್ಲೇ ನೆನೆದಳು – ಅಣ್ಣನ ಸ್ನೇಹಿತರು ಯಾರೋ ಇರಬಹುದು. ಈಗ ಇಲ್ಲಿಗೆ ಬಂದಿದ್ದಾನಲ್ಲಾ! ಅವಳು ಓಲೆಯ ಕಟ್ಟನ್ನು ಕಟ್ಟಿದಳು. ಜಿಂಕೆಯ ಚರ್ಮವನ್ನು ಮಡಚಿಟ್ಟಳು. ಅವುಗಳನ್ನು ಪಡುಕೋಣೆಗೆ ಒಯ್ದಿರಿಸಿದಳು. ಹುಲ್ಲುಚಾಪೆಯನ್ನು ತೆಗೆದುಕೊಂಡಳು. ವೀಳ್ಯದ ಹರಿವಾಣವನ್ನು ತೆಗೆದುಕೊಂಡಳು. ಅವನ್ನೆಲ್ಲ ತಂದು ಚೆಟ್ಟಿಗೆ ಕೊಟ್ಟಳು. ಅವನು

ಬಂದು ಅಲ್ಲಿ ಕುಳಿತ. ಕುಡಿಯಲು ಒಂದಿಷ್ಟು ನೀರು ತಂದುಕೊಡುವಂತೆ ಉಣ್ಣಿಚಾರಳಲ್ಲಿ ಹೇಳಿದ. ಅವಳು ಅಡುಗೆ ಮನೆಗೆ ಹೋಗಿ ಒಂದು ಗಿಂಡಿ ಹಾಲು ತೆಗೆದುಕೊಂಡು ಬಂದಳು. ಅವಳು ಬಾಗಿಲ ಬಳಿ ತಲಪಿದಾಗ ಅವಳ ಕೈಯಿಂದ ಹಾಲು ತೆಗೆದುಕೊಂಡ. ಉಣ್ಣಿಚಾರ ಬೋದಿಗೆ ಕಂಬದ ಮರೆಗೆ ನಿಂತಳು. ಆಗ ನಂಬರ್ ಚೆಟ್ಟಿ ವಿಚಾರಿಸಿದ – ತಚ್ಚೋಳಿ ಉಣ್ಣಿಚ್ಚಾರ ಕೇಳು! ನಿನ್ನ ದೊಡ್ಡಣ್ಣ ಎಲ್ಲಿಗೆ ಹೋಗಿದ್ದಾರೆ? ಅದಕ್ಕೆ ಅವಳೆಂದಳು – ಅಣ್ಣ ಅಂಗಸಾಧನೆಗಾಗಿ ತೂಳಿಯಮಾಕ್ಕು ಕಳರಿಗೆ ಹೋಗಿದ್ದಾನೆ. ನಂಬರ್ ಚೆಟ್ಟಿ ಪುನಃ ಕೇಳಿದ – ತಚ್ಚೋಳಿ ಉಣ್ಣಿಚ್ಚಾರ ಕೇಳು! ನಿನ್ನ ಸಣ್ಣಣ್ಣ ಎಲ್ಲಿಗೆ ಹೋಗಿದ್ದಾರೆ? ಅವಳೆಂದಳು – ಸಣ್ಣಣ್ಣ ಮಾಹಿಯ ಅಂಕ ಕಳರಿಗೆ ಹೋಗಿದ್ದಾನೆ. ನಂಬರ್ ಚೆಟ್ಟಿ ಮತ್ತೂ ಕೇಳಿದ – ತಚ್ಚೋಳಿ ಉಣ್ಣಿಚ್ಚಾರ ಕೇಳು! ನಿನಗೆ ಬಟ್ಟೆಗೂ ಎಣ್ಣೆಗೂ ಯಾರಾದರೂ ಖರ್ಚು ಕೊಡುತ್ತಿದ್ದಾರೆಯೇ? ಅದಕ್ಕೆ ಅವಳೆಂದಳು – ಸಣ್ಣಣ್ಣ ಕೊಡುವುದನ್ನು ನಾನು ಉಡುತ್ತಿದ್ದೇನೆ. ಸಣ್ಣಣ್ಣ ಕೊಡುವುದನ್ನುನಾನು ಹಚ್ಚುತ್ತಿದ್ದೇನೆ. ಸಣ್ಣಣ್ಣನಲ್ಲದೆ ನನಗೆ ಯಾರೂ ಬಟ್ಟೆಗೂ ಎಣ್ಣೆಗೂ ಕೊಡುವವರಿಲ್ಲ. ಇದನ್ನು ಕೇಳಿದ ನಂಬರ್‌ಚೆಟ್ಟಿ ಹೇಳಿದ – ನಾನು ನಿನಗೆ ಬಟ್ಟೆಗೂ ಎಣ್ಣೆಗೂ ಕೊಡಲೇ ಉಣ್ಣಿಚ್ಚಾರ? ಅದಕ್ಕೆ ಅವಳೆಂದಳು – ನೀವು ಯಾರು ಎಂದೇ ನನಗೆ ಗೊತ್ತಿಲ್ಲ. ಗೊತ್ತಿದ್ದರೆ ಅಲ್ಲವೇ ನಾನು ಒಪ್ಪಿಗೆ ಕೊಡುವುದು? ಆಗ ನಂಬರ್‌ಚೆಟ್ಟಿ ಎಂದ – ತಚ್ಚೋಳಿ ಉಣ್ಣಿಚ್ಚಾರಳೇ ಕೇಳು! ವಳಪಟ್ಟಣ ಪೂಂಗಾವ್‌ನ ನಂಬರ್‌ಚೆಟ್ಟಿಯ ಕುರಿತು ನೀನು ಕೇಳಿಯೇ ಇಲ್ಲವೇ? ಆ ಮಾತುಗಳನ್ನು ಕೇಳಿದ ಉಣ್ಣಿಚ್ಚಾರ ಅಷ್ಟರ ತನಕ ಕಂಭದ ಮರೆಯಲ್ಲಿ ನಿಂತಿದ್ದವಳು ಹೊರಬಂದಳು. ಅವಳ ಮೈಯಿಡೀ ಥರಥರ ನಡುಗಲಾರಂಭಿಸಿತು. ಅವಳೆಂದಳು– ನೀನೊಬ್ಬ ಚೆಟ್ಟಿಯಾಗಿಯೂ ಹುಲ್ಲು ಚಾಪೆಯಲ್ಲಿ ಕುಳಿತೆಯಾ? ಅಣ್ಣನ ವೀಳ್ಯದ ಹರಿವಾಣದಿಂದ ತಾಂಬೂಲ ಹಾಕಿದೆಯಾ? ನನ್ನ ಕೈಯಿಂದ ಹಾಲು ತೆಗೆದುಕೊಂಡು ಕುಡಿದೆಯಾ? ಇದೇನು ಮಾಡಿಬಿಟ್ಟೆ ನೀನು? ಹಾಲಗಿಂಡಿಯನ್ನು ಕವುಚಿ ಯಾಕೆ ಇಡಲಿಲ್ಲ? ಅದನ್ನು ಕೇಳಿದ ಚೆಟ್ಟಿ ಗಿಂಡಿಯನ್ನು ಕವುಚಿಟ್ಟ. ಉಣ್ಣಿಚ್ಚಾರ ಬಾಗಿ ಗಿಂಡಿಯನ್ನು ತೆಗೆಯುತ್ತಿದ್ದಾಗ ಅವನು ಅವಳನ್ನು ಹಿಡಿದುಕೊಂಡು ತನ್ನ ಜೋಳಿಗೆಯಲ್ಲಿ ಬಂಧಿಸಿದ. ಉಣ್ಣಿಚ್ಚಾರ ಹುಯ್ಯಲಿಟ್ಟಳು. ಆ ಹುಯ್ಯಲು ಎಡಚಾವಡಿಯಿಂದಲೂ ಅಡುಗೆ ಮನೆಯಿಂದಲೂ ಕೇಳಿಸಿತು. ಹಾಗೆ ಸಾಗಿದ ನಂಬರ್‌ಚೆಟ್ಟಿ ಇರುವ್ವೆನಾಡಿನ ಗರಡಿ ಬಳಿ ತಲಪಿದ. ಅಲ್ಲಿ ಏಳುಪ್ಪರಿಗೆಯ ಮೇಲಿದ್ದ ಕುಂಞಿಕಣ್ಣನಿಗೆ ಹುಯ್ಯಲು ಕೇಳಿಸಿತು. ಅವನು ಕಿವಿಗೊಟ್ಟು ಕೇಳಿ ಬಯಲತ್ತ ಕಣ್ಣು ಹಾಯಿಸಿದಾಗ ತಚ್ಚೋಳಿಚ್ಚಿ ಉಣ್ಣಿಚ್ಚಾರಳನ್ನು ವಳಪಟ್ಟಣ ಪೂಂಗಾವ್‌ನ ನಂಬರ್ ಚೆಟ್ಟಿ ತನ್ನ ಜೋಳಿಗೆಯಲ್ಲಿ ಕಟ್ಟಿ ಒಯ್ಯುತ್ತಿದ್ದಾನೆ! ಅದನ್ನು ಕಂಡ ಕುಂಞಿಕಣ್ಣ ನೇತಾಡಿಸಿದ್ದ

ಉರುಮಿಯೊಂದನ್ನು ಕೈಗೆ ತೆಗೆದುಕೊಂಡು ಉಪ್ಪರಿಗೆಯ ಮೆಟ್ಟಿಲನ್ನು ನೆಗೆದಿಳಿದು ಹೋಗಿ ಚೆಟ್ಟಿಯನ್ನು ತಡೆದ. ಅವನೊಂದಿಗೆ ಹೊಡೆದಾಡುತ್ತ ಎಲ್ಲರನ್ನೂ ಕರೆದ – ಇರುವೈನಾಡ ಅಂಕದ ಕುಂಞಿರಾಮಾ (ಈತ ಕುಂಞಿಕಣ್ಣನ ತಮ್ಮ), ಹೋಗಿ ತೂಳಿಯ ಮಾಕ್ಕು ಕಳರಿಯಲ್ಲಿರುವ ತಚ್ಚೋಳಿ ಕೋಮಕುರುಪ್ಪರಿಗೆ ಈ ವಿಷಯವನ್ನು ಹೇಳು – ವಳಪಟ್ಟಣ ಪೂಂಗಾವ್‌ನ ನಂಬರ್‌ಚೆಟ್ಟಿ ನಿಮ್ಮ ತಂಗಿ ತಚ್ಚೋಳಿಚ್ಚಿ ಕುಂಞಿಚ್ಚಾರಳನ್ನು ಜೋಳಿಗೆಯಲ್ಲಿ ಹಾಕಿ ಒಯ್ಯುತ್ತಿದ್ದಾನೆ. ಇರುವೈನಾಡ ಅಂಕದ ಕೆಳಭಾಗದ ಬಯಲಲ್ಲಿ ಕುಂಞಿಕಣ್ಣ ಅವನನ್ನು ತಡೆದಿದ್ದಾನೆ. ಕೂಡಲೇ ನೀವು ಹೋಗಬೇಕಂತೆ. ಅಂತೆಯೇ ಕುಂಞಿರಾಮ ಒಮ್ಮೆ ಓಡುತ್ತ ಒಮ್ಮೆ ನಡೆಯುತ್ತ ಕಳರಿಗೆ ತಲಪಿದ. ಕಳರಿಯ ಬಳಿಹೋಗಿ ಕೋಮ ಕುರುಪ್ಪನ್ನು ಕರೆದು ಎಲ್ಲ ಸಂಗತಿಗಳನ್ನು ಹೇಳಿದ. ಅಣ್ಣ ಕುಂಞಿಕಣ್ಣ ನಂಬರ್‌ಚೆಟ್ಟಿಯನ್ನು ತಡೆದಿರುವುದನ್ನೂ ಹೇಳಿದ. ಆ ಸುದ್ದಿಯನ್ನು ಕೇಳಿದ ಕೂಡಲೇ ಕೋಮ ಕುರುಪ್ಪ್ ಕಳರಿಯಿಂದ ಮೇಲೆ ಏರಿ ಬಂದ. ಆಗ ಪಣಿಕ್ಕರನೂ ಕಳರಿಯಿಂದ ಏರಿಬಂದ. ಕಳರಿಯಲ್ಲಿದ್ದವರೆಲ್ಲ ಏರಿಬಂದು ಓಡಿದರು. ಇರುವೈನಾಡ ಅಂಕದ ಕೆಳಭಾಗಕ್ಕೆ ತಲಪಿದರು. ಕೂಡಲೇ ಕಳರಿ ಪಣಿಕ್ಕರ್ ಕುಂಞಿಕಣ್ಣನನ್ನು ಎಳೆದು ಬದಿಗೆ ಸರಿಸಿ ದಾರಿಮಾಡಿದರು. ನಂಬರ್‌ಚೆಟ್ಟಿಯೊಂದಿಗೆ ತಾನೇ ಹೋರಾಟಕ್ಕಿಳಿದರು. ಅಂತೆಯೇ ಕೂಗಿ ಹೇಳಿದರು – ತಚ್ಚೋಳಿ ಕೋಮಕುರುಪ್ಪೇ, ಕೇಳು! ಚೆಟ್ಟಿಯೊಂದಿಗೆ ನಮಗೆ ಹೋರಾಡಲು ಅಸಾಧ್ಯ. ಕೂಡಲೇ ಒಬ್ಬ ಆಳನ್ನು ಒದೇನನ ಬಳಿಗೆ ಕಳಿಸು. ಆ ಮಾತನ್ನು ಹೇಳುತ್ತಿದ್ದಂತೆಯೇ ಕಂಡಾಚ್ಚೇರಿ ಚಾಪ್ಪ – ಎಲ್ಲಿದ್ದನೋ ತಿಳಿಯದು – ಅಲ್ಲಿ ಕಾಣಿಸಿಕೊಂಡ. ಆತ ಕೂಡಲೇ ಮಾಹಿಯ ಅಂಕಕಳರಿಗೆ ಓಡುತ್ತಲೇ ಹೋಗಿ ಎಲ್ಲ ಸಂಗತಿಗಳನ್ನೂ ನಡೆದ ರೀತಿಯಲ್ಲೇ ಒದೇನನಿಗೆ ತಿಳಿಸಿದ. ಅದನ್ನು ಕೇಳಿದ ಒದೇನ ಕೂಡಲೇ ಕಳರಿಯಿಂದ ಹತ್ತಿ ಮೇಲೆ ಬಂದ. ಅವನು ಓಡಿ ಮೇಲೆ ಬಂದಾಗ ಪಣಿಕ್ಕರರೂ ಮೇಲೆ ಏರಿ ಬಂದರು. ಕಳರಿಯಲ್ಲಿದ್ದವರೆಲ್ಲ ಏರಿಬಂದರು. ಎಲ್ಲರೂ ಇರುವೈನಾಡಿನ ಅಂಕದ ಕೆಳಗೆ ತಲಪಿದರು. ಅಲ್ಲಿ ತುಂಬ ಜನ ಸೇರಿಬಿಟ್ಟರು. ಮಾಹಿಯ ಕಳರಿ ಪಣಿಕ್ಕರರು ತೂಳಿಯಮಾಕ್ಕು ಪಣಿಕ್ಕರನನ್ನು ಎಳೆದು ಬದಿಗೆ ಸರಿಸಿ ದಾರಿ ಮಾಡಿದರು. ದಾರಿಮಾಡಿಕೊಂಡು ಹೋಗಿ ಚೆಟ್ಟಿಯೊಡನೆ ಹೋರಾಟಕ್ಕಿಳಿದರು. ಆದರೆ ಚೆಟ್ಟಿಯೊಂದಿಗಿನ ಅವರ ಹೋರಾಟ ಏನೂ ಕೈಸಾಗಲಿಲ್ಲ. ಆಗ ಮಾಹಿಯ ಪಣಿಕ್ಕರರನ್ನು ಎಳೆದು ಬದಿಗೆ ಸರಿಸಿ ದಾರಿಮಾಡಿಕೊಂಡು ಒದೇನನೇ ಹೋರಾಡತೊಡಗಿದ. ಒದೇನ ಕೂಗಿ ಹೇಳಿದ– ಕಂಡಾಚ್ಚೇರಿಯ ಪ್ರಿಯ ಚಾಪ್ಪಾ! ಚೆಟ್ಟಿಯೊಂದಿಗೆ ಹೋರಾಡಿ ಗೆಲ್ಲಲು ಕಷ್ಟ. ನಾನು ಒಂದುವೇಳೆ ಹೋರಾಡಿ ಅವನನ್ನು ಕೊಲ್ಲಲು ಪ್ರಯತ್ನಿಸಿದರೆ ಮಗು ಉಣ್ಣಿಚ್ಚಾರಳಿಗೆ ಏನಾದರೂ ಅಪಾಯ ಬಂದರೂ ಬಂದೀತು. ಮದ್ದೇಲಕ್ಕಿಳಿಯ

ಮಗ ಚೋನ್ನೋಂಕುಟ್ಟಿಯನ್ನು ಇಲ್ಲಿಗೆ ಕೂಡಲೇ ಬರಮಾಡಿಸಬೇಕು. ಅವನನ್ನು ಕೂಡಲೇ ಬರಮಾಡಿಸದಿದ್ದರೆ ಉಣ್ಣಿಚ್ಚಾರಳೂ ಚೆಟ್ಟಿಯೂ ಇಬ್ಬರಿಗೂ ಅಪಾಯವುಂಟಾದೀತು. ಈ ಮಾತುಗಳನ್ನು ಕೇಳಿದ ಕೂಡಲೇ ಚಾಪ್ಪನು ತರಗೆಲೆ ಗಾಳಿಯಲ್ಲಿ ಹಾರಿಹೋಗುವಂತೆ ಮದ್ಮೇಲ ಅಂಗಡಿಗೆ ಓಡುತ್ತಹೋದ. ಅಲ್ಲಿಗೆ ತಲುಪಿ ಮದ್ಮೇಲ ಅಂಗಡಿಯ ಚೋನ್ನೋಂ ಕುಟ್ಟಿಯೊಡನೆ ಅಂಗಲಾಚುತ್ತ ಎಲ್ಲ ವಿಷಯಗಳನ್ನು ಹೇಳಿದ. ತರಗೆಲೆಯು ಗಾಳಿಗೆ ಹಾರುವಂತೆ ಹಾರಿ ಚೋನ್ನೋಂ ಕುಟ್ಟಿಯು ಇರುವೈನಾಡಿನ ಅಂಕದ ಕೆಳಗಿದ್ದ ಒದೇನನಲ್ಲಿ ತತ್ಕಾಲಕ್ಕೆ ಉರುಮಿಯನ್ನು ಕೇಳಿ ಪಡೆದುಕೊಂಡು ಉಣ್ಣಿಚ್ಚಾರಳಿಗೆ ಒಂದಿಷ್ಟೂ ತಗಲದಂತೆ ನಂಬರ್‌ಚೆಟ್ಟಿಯ ಜೋಳಿಗೆಯನ್ನು ಕತ್ತರಿಸಿದ. ಬಳಿಕ ಕೂಗಿ ಹೇಳಿದ – ತಚ್ಚೋಳಿಯ ಒದೇನಪ್ಪ ಕುರುಪ್ಪರೇ! ಉಣ್ಣಿಚ್ಚಾರಳನ್ನು ಅತ್ತ ಕರೆದುಕೊಳ್ಳಿ. ಅಂತೆಯೇ ಒದೇನ ಉಣ್ಣಿಚ್ಚಾರಳನ್ನು ಕರೆದುಕೊಂಡ. ಅವರೆಲ್ಲ ಸೇರಿ ಅವಳನ್ನು ಇರುವೈನಾಟ್ಟ್ ಅಂಕಕ್ಕೆ ಒಯ್ದರು. ಅಲ್ಲಿ ಕುಂಞಿಕಣ್ಣ ಅವಳಿಗೆ ಎಳನೀರು ಕುಡಿಯಲು ಕೊಟ್ಟ. ಆಗ ಚೋನ್ನೋಂ ಕುಟ್ಟಿ ನಂಬರ್‌ಚೆಟ್ಟಿಯನ್ನು ಅಲ್ಲಿ ತಟ್ಟಿ ಕೆಳಹಾಕಿ ಅವನ ಎದೆಯ ಮೇಲೆ ಏರಿ ಕುಳಿತ – ತಚ್ಚೋಳಿಯ ಒದೇನಪ್ಪ ಕುರುಪ್ಪರೇ! ವಳಪಟ್ಟಣ ಪೂಂಗಾವ್‌ನ ನಂಬರ್‌ಚೆಟ್ಟಿಯನ್ನು ಏನುಮಾಡಲು ಇಷ್ಟಪಡುವಿರಿ? ಅದಕ್ಕೆ ಒದೇನನೆಂದ – ಮದ್ಮೇಲೆ ಅಂಗಡಿಯ ಚೋನ್ನೋಂಕುಟ್ಟಿ! ನನಗೆ ಅವನನ್ನು ಗೂಟದ ಮೇಲೆ ಇಟ್ಟು ಕೊಚ್ಚಲು ಇಷ್ಟ ಪಡುತ್ತೇನೆ. ಅವನನ್ನು ಹಾಗೆ ನೀನು ಕೊಚ್ಚು, ಚೋನ್ನೋಂಕುಟ್ಟಿ. ಅವನನ್ನು ಹಾಗೆ ತರಿದು ಮುಗಿಸಿದಾಗ ತೆಂಕುಭಾಗದಿಂದ ಒಂದು ವದಂತಿ ಕೇಳಿಬಂತು– ವಳಪಟ್ಟಣ ಪೂಂಗಾವ್‌ನ ಚೆಟ್ಟಿಗಳು ಹೊಸ ಒಂದು ಸೇನೆಯನ್ನೇ ತರುತ್ತಿದ್ದಾರಂತೆ! ಈ ಸುದ್ದಿಯನ್ನು ಕೇಳಿದ ಕೂಡಲೇ ಮದ್ಮೇಲ್ ಕಿಳಿಯ ಮಗ ಚೋನ್ನೋಂ ಕುಟ್ಟಿಯೂ ತಚ್ಚೋಳಿ ಒದೇನನೂ ಅವರ ಪಾಳಯಕ್ಕೆ ಓಡಿ ಒಳಗೆ ಪ್ರವೇಶಿಸಿದರು. ಪಾಳಯವನ್ನು ಕಡಿದು ಧ್ವಂಸ ಮಾಡಿದರು. ಇಪ್ಪತ್ತೆರಡು ಮಂದಿ ಸೆಟ್ಟಿಗಳನ್ನು ಕೊಂದು ಹಾಕಿದರು. ವಳಪಟ್ಟಣ ಪೂಂಗಾವನ್ನು ಆಕ್ರಮಿಸಿ ಎಡಕ್ಕೂ ಬಲಕ್ಕೂ ನುಗ್ಗಿ ಸಿಕ್ಕ ಸಿಕ್ಕವರನ್ನು ಕೊಂದು ಹಾಕಿದರು. ಅಲ್ಲಿದ್ದ ಎಲ್ಲರನ್ನೂ ಕಡಿದು ನೆಲಸಮ ಮಾಡಿದರು. ಉಪ್ಪಿನ ಗೆರಟೆಯನ್ನೂ ಬಿಡದೆ ಎಲ್ಲವನ್ನೂ ಎತ್ತಿಸಿ ಒದೇನನು ಹೊರೆ ಹೊರಿಸಿದ. ಎಲ್ಲವನ್ನೂ ಮಾಣಿಕೋತ್ತ್‌ಗೆ ಸಾಗಿಸಿದ.

ಜೇನುನೊಣ ಕಚ್ಚಿ ನಾನು ಸಾಯುವುದೆ?

ಏರಾಣಿ ಮನೆಯ ಕುಂಞಿಚಂದು ಮತ್ತು ಕುಂಞಿಕೇಳು ಪೊಯ್ತ್‌ಗೆ ಓಲೆ ಕೊಡುವುದಕ್ಕಾಗಿ ಎಡಚ್ಚೇರಿ ಪೂಂಗೋಟ್ಟ್ ಮನೆಗೆ ಹೋದರು. ಅವರು ಬಂದು ಅಂಗಳಹತ್ತಿದರು. ಅಲ್ಲಿಗೆ ಎಡಚ್ಚೇರಿ ಪೂಕ್ಕೋಟ್ಟ್ ಉಣ್ಣಿಚ್ಚೇರಿಯೂ ಬಂದಿದ್ದಳು. ಅವಳು ನೀಡಿದ್ದ ಕಾಲನ್ನು ಮಡಚಲೂ ಇಲ್ಲ, ತೋರಬೇಕಾದ ಗೌರವ ತೋರಲೂ ಇಲ್ಲ. ಕುಂಞಿಚಂದು ಕುಂಞಿಕೇಳುರಿಗೆ ಸಿಟ್ಟೇರಿತು. ಅವರೆಂದರು – ಒಂದು ಗಿಂಡಿ ನೀರು ನಮಗೆ ಕೊಡುತ್ತಿಯಾ? ಉಣ್ಣಿಚ್ಚೇರಿ ಅದನ್ನು ಕೇಳಿ ನೀರಿಗೆ ಹೋದಳು. ಕೂಡಲೆ ನೀರು ತಂದುಕೊಟ್ಟಳು. ಕುಂಞಿಚಂದು ಕುಂಞಿಕೇಳು ನೀರಿನ ಗಿಂಡಿ ತೆಗೆದುಕೊಂಡರು. ಸ್ವಲ್ಪ ನೀರು ಕುಡಿದರು. ಆ ನೀರು ಕುಡಿಯಲು ಯೋಗ್ಯವಾಗಿರಲಿಲ್ಲ. ಎಣ್ಣೆಯ ಕಮಟು. ಆಗ ಕುಂಞಿಚಂದು ಕುಂಞಿಕೇಳು ಅಂದರು – ನಾಯರ್ ಪುಲಿಪ್ಪುರಂ ಉಕ್ಕಪ್ಪನಿಗೆ ಜೇನುಸಕ್ಕರೆಯಾಗಿರುವ ಗಾಣಿಗಿತ್ತಿ! ಈ ನೀರು ನಾವು ಕುಡಿಯುವ ಹಾಗಿಲ್ಲ. ಈ ಕ್ಷಣವೇ ನಾವು ಕೊಟ್ಟಿರುವ ಐದು ಹಾನೆ ಎಳ್ಳಿನ ಎಣ್ಣೆ ಮತ್ತು ಅದರ ಹಿಂಡಿಯನ್ನು ನೀನು ನಮಗೆ ಕೊಡಬೇಕು. ನಿನ್ನ ಗಂಡ ಎಲ್ಲಿದ್ದಾನೆ. ಆ ಮಾತುಗಳನ್ನು ಕೇಳಿ ಉಣ್ಣಿಚ್ಚೇರಿ ಪಡುಭಾಗಕ್ಕೆ ಹೋಗಿ ಕರೆದಳು – ತಚ್ಚೋಳಿ ಮೇಪ್ಪದ ಓ ನನ್ನ ಅಣ್ಣಾ! ನಿದ್ರಿಸುತ್ತಿದ್ದೀಯಾ. ತಚ್ಚೋಳಿ ಮನೆಯ ಒದೇನ ಆ ಕರೆ ಕೇಳಿ ಬೆಚ್ಚಿ ಎದ್ದ. ಒದೇನ ಕೇಳಿದ – ಅದು ಯಾರಮ್ಮಾ ಬಂದದ್ದು? ಉಣ್ಣಿಚ್ಚೇರಿ. ಅದಕ್ಕೆ ಅವಳೆಂದಳು – ಕೆಳಗಿನಿಂದ ಬಂದ ಇಬ್ಬರು ಪೋರರು ಒಂದು ಗಿಂಡಿ ನೀರು ಬೇಕೆಂದು ಕೇಳಿದರು. ನಾನು ಅವರಿಗೆ ನೀರು ಕೊಟ್ಟಾಗ ಅದನ್ನು ಅವರು ಎಣ್ಣೆಯ ವಾಸನೆ ಬರುತ್ತಿದೆ ಎಂದು ಕುಡಿಯಲಿಲ್ಲ. ಬಳಿಕ ಅವರು ನನ್ನನ್ನು 'ನಾಯರ್ ಪುಲಿಪ್ಪುರಂ ಉಕ್ಕಪ್ಪನಿಗೆ ಜೇನುಸಕ್ಕರೆಯಾಗಿರುವ ಗಾಣಿಗಿತ್ತಿ, ನಿನ್ನ ಗಾಣಿಗ ಎಲ್ಲಿ

ಹೋದ? ನಾವು ಕೊಟ್ಟಿರುವ ಐದು ಹಾನೆ ಎಳ್ಳಿನ ಎಣ್ಣೆ ಮತ್ತು ಅದರ ಹಿಂಡಿಯನ್ನು ಈಗಲೇ ಕೊಡುತ್ತಿಯಾ ಗಾಣಿಗಿತ್ತಿ'? ಎಂದು ಗದರಿದರು – ಎಂದಳು.

ಆ ಮಾತುಗಳನ್ನು ಕೇಳಿದ ತಚ್ಚೋಳಿ ಒದೇನ ಸಿಟ್ಟುಗೊಂಡ. ಎದ್ದೂ ಬಿದ್ದೂ ನಿಂತುಕೊಂಡ. ಆಗ ಅಂಗಳದ ಮಧ್ಯಕ್ಕೆ ಬಂದು ಮಕ್ಕಳೆಂದರು – ನಾಯರ್ ಪುಲಿಪ್ಪುರಂ ಉಕ್ಕಪ್ಪ ಎದ್ದೂ ಬಿದ್ದೂ ನಿಂತುಕೊಳ್ಳುವುದು! ಅವನದೊಂದು ಹಾಳೆಯೂ ಗಾಣವೂ! ಹಾಳೆ ತಟ್ಟುವ ಶಬ್ದ ಕೇಳುತ್ತದೆ. ಗಾಣ ತಟ್ಟುವ ಶಬ್ದ ಕೇಳುತ್ತದೆ. ಹಿಂಡಿ ತಿಂದವನು ಎಣ್ಣೆಯನ್ನೂ ಕುಡಿದ. ಅದನ್ನು ಕೇಳಿದ ಒದೇನ ನೆಗೆದಾಡಿದ. ಅಂಗಳದ ಮಧ್ಯಕ್ಕೆ ಬಂದ. ಮಕ್ಕಳಲ್ಲಿ ಕುಸ್ತಿ ಹಿಡಿದ. ಸಂಜೆ ದನ ಕರುಗಳು ಹಟ್ಟಿಗೆ ಮರಳುವ ಹೊತ್ತಾಗುವವರೆಗೂ ತಮ್ಮ ತಮ್ಮೊಳಗೆ ಹೊಡೆದಾಡಿದರು. ಕೊನೆಗೆ ಒದೇನನನ್ನು ಸಾವಿರಾರು ಜನ ಉಗುಳುವ ಹೊಂಡಕ್ಕೆ ನೂಕಿಕೊಂಡು ಹೋಗಿ ಮಗುಚಿ ಹಾಕಿದರು. ಆಗ ಒದೇನ ಹೇಳಿದ – ಮಕ್ಕಳೇ ಕೊಲ್ಲಬೇಡಿ, ಕೊಲ್ಲಬೇಡಿ. ಈ ಬಾರಿ ನನ್ನನ್ನು ನೀವು ಉಳಿಸಿದರೆ ಪೊನ್ಯತ್ತ್ ಏಳೂವರೆ ಕಳರಿಯಲ್ಲಿ ನಾವು ದ್ವಂದ್ವಯುದ್ಧ ಮಾಡೋಣ. ಒದೇನನು ಈ ಮಾತುಗಳನ್ನು ಹೇಳುತ್ತ ಮತ್ತೂ ಮುಂದುವರಿಸಿದ – ಚಿರತೆಯ ಬಾಯಿಯಿಂದ ಹೊರಬಂದೆ ನಾನು. ಹುಲಿಯ ಬಾಯಿಯಿಂದ ಹೊರಬಂದೆ ನಾನು. ಜೇನುನೊಣ ಕಚ್ಚಿ ನಾನು ಸಾಯುವುದೇ? ಏರಾಣಿ ಮನೆಯ ಕುಂಞಿಚಂದು ಕುಂಞಿ ಕೇಳುವಿಗೆ ಹೀಗೆಂದ – ಏರಾಣಿ ಮನೆಯ ನನ್ನ ಚಿಕ್ಕ ತಮ್ಮಾ! ಹಾಗಾದರೆ ನಾವು ಈಗ ಇವನನ್ನು ಕೊಲ್ಲುವುದು ಬೇಡ. ಪೊನ್ಯತ್ತ್ ಕಳರಿಯಲ್ಲಿ ಮುಂದಿನ ಭಾನುವಾರಕ್ಕೆ ಹೋರಾಟವೆಂದು ತೀರ್ಮಾನಿಸೋಣ. ಅಂದು ನಾವು ಅವನನ್ನು ಕೊಲ್ಲೋಣ. ಮಕ್ಕಳು ಅಲ್ಲಿಂದ ಹೊರಟು ಹೋದರು.

ಮುಂದಿನ ಭಾನುವಾರ ಪೊನ್ಯತ್ತೇಯರ (=ಏಳೂವರೆ) ಕಳರಿಗೆ ಏರಾಣಿ ಮನೆಯ ಹುಡುಗರು ತಲಪಿದರು. ತಚ್ಚೋಳಿ ಮನೆಯ ಒದೇನನೂ ಆಡಂಬರದಿಂದ ಹೊರಟ. ಸಾವಿರದ ಐನೂರು ಜನ ಹಿಂಬಾಲಕರೊಂದಿಗೆ ಒದೇನ ಅಲ್ಲಿಗೆ ತಲಪಿದ. ಪೊನ್ಯತ್ತೇಯರ ಕಳರಿಯಲ್ಲಿ ಹಾಗೆ ಬಂದು ಅವರೆಲ್ಲ ಸೇರಿರಲು ಏರಾಣಿ ಮನೆಯ ಕುಂಞಿಚಂದು ಮತ್ತು ಕುಂಞಿಕೇಳುವೂ ನೆರೆದಿದ್ದಾರೆ! ಕುಂಞಿಕೇಳು ಕೇಳಿದ – ಗಂಡಾದ್ಯೋ ನಾಯೇ? ಇಲ್ಲ, ನಾಯಿಕಯ್ಯೋ? ಗಂಡಾಗಿದ್ದರೆ ನೀನು ಕಳರಿಯ ಕಳವೇರಿ ಬಾ. ಆ ಮಾತುಗಳನ್ನು ಕೇಳಿದ ತಚ್ಚೋಳಿಯ ಒದೇನ ಎದ್ದುಬಂದು ದ್ವಂದ್ವ ಯುದ್ಧದಲ್ಲಿ ತೊಡಗಿಕೊಂಡ. ಹಾಗೆ ಅವನು ತೊಡಗಿಕೊಂಡಿದ್ದಾಗ ಪಾಲ್ಘಾಟಿನ ನಾಲ್ಕು ಬ್ರಾಹ್ಮಣರು ಊಟದ ಮನೆಯನ್ನರಸುತ್ತ ಹೋಗುತ್ತಿದ್ದರು. ಅವರು ಕಳರಿಯ ಬಳಿಬಂದು ಕಣ್ಣು ಹಾಯಿಸಿದರು. ಅಪ್ಪನ ಮತ್ತು ಮಕ್ಕಳ ಹೋರಾಟವನ್ನು ಕಂಡರು.

ಹೇಳಿ ಕೇಳಿ ಬ್ರಾಹ್ಮಣರು! ಕೋಮಣವನ್ನು ಬಿಗಿಯಾಗಿ ಕಟ್ಟಿಕೊಳ್ಳದೆ ಅವರು ಅಲ್ಲಿಂದ ಓಟಕಿತ್ತರು. ಎಂಟು ಗಾವುದ ದೂರಕ್ಕೆ ಓಡುತ್ತಲೇ ಹೋದರು. ಏರಾಣಿ ಮನೆಯ ಕೆಳಗಿನ ದಾರಿಯಲ್ಲೇ ಅವರು ಓಡುತ್ತ ಹೀಗೆನ್ನುತ್ತಿದ್ದರು – ಅಪ್ಪನೂ ಮಕ್ಕಳೂ ತಮ್ಮೊಳಗೆ ಹೋರಾಡುತ್ತಿರುವುದು ಹೆತ್ತ ಅಮ್ಮನಿಗೆ ತಿಳಿಯದೇ? ಆ ಮಾತುಗಳನ್ನು ಕೇಳಿ ಏರಾಣಿ ಮನೆಯ ಹಿರಿಯವ್ವೆ ಆ ಬ್ರಾಹ್ಮಣರನ್ನು ಕರೆದಳು. ಕರೆದು ವಿಷಯವೇನೆಂದು ಕೇಳಲು ಅವರು ತಚ್ಚೋಳಿ ಮನೆಯ ಒದೇನ ಮತ್ತು ಅವನ ಮಕ್ಕಳು ಹೋರಾಡು ತ್ತಿರುವುದನ್ನು ಹೇಳಿದರು. ಆ ಮಾತುಗಳನ್ನು ಕೇಳಿದ ಏರಾಣಿ ಮನೆಯ ಹಿರಿಯವ್ವ ಆ ಬ್ರಾಹ್ಮಣರಿಗೆ ಬೇಕಾದುದನ್ನು ಕೊಟ್ಟು ಕಳುಹಿಸಿದಳು. ಬಳಿಕ ಕುದುರೆ ಕಟ್ಟಿದಲ್ಲಿಗೆ ಬಂದಳು. ಇಂದ್ರವಾಲನೆಂಬ ಕುದುರೆಯ ಹತ್ತಿರ ಹೋಗಿ ಅದರ ಕಿವಿಯಲ್ಲಿ ಹೇಳಿದಳು – ಲೆಕ್ಕಹಾಕಿದರೆ ತೊಂಬತ್ತು ಗಾವುದ ದೂರವಿದ್ದೀತು. ನೀನು ಅದನ್ನು ಕಾಲುಗಾವು ದವನ್ನಾಗಿ ಮಾಡಿಕೊಂಡು ತಲಪಿಸಬೇಕು. ಹಾಗೆ ಹೇಳಿ ಕುದುರೆಗೆ ಮದಬರುವುದಕ್ಕಾಗಿ ಹೊಂಗಾರಕನ ಹಸಿ ಎಲೆಯನ್ನೂ ತಾಳಿಬೆಲ್ಲವನ್ನೂ ತಿನ್ನಿಸಿದಳು. ಎಲ್ಲ ದಿನವೂ ಐದು ಬಳ್ಳ ಹುರುಳಿ ಕೊಡುತ್ತಿರುವುದನ್ನು ನಾಳೆಯಿಂದ ಎರಡು ಬಳ್ಳ ಹೆಚ್ಚು ಕೊಡುತ್ತೇನೆ – ಎಂದಳು. ಹಾಗೆ ಹೇಳಿ ಕುದುರೆಯ ಬೆನ್ನೇರಿದಳು. ಲೆಕ್ಕ ಹಾಕಿದರೆ ತೊಂಬತ್ತು ಗಾವುದ ದೂರವಿದ್ದುದನ್ನು ಆ ಕುದುರೆ ಕಾಲುಗಾವುದ ವೆಂಬಂತೆ ದಾಟಿ ಬಂದು ಬಿಟ್ಟಿತು. ಕಳರಿಯ ಅಂಚಿಗೇ ತಲಪಿದ ಅವಳು ಅದರ ಮಧ್ಯಕ್ಕೆ ನೆಗೆದಳು. ತಚ್ಚೋಳಿ ಮನೆಯ ಒದೇನನನ್ನು ಅವನ ಮಕ್ಕಳು ಹೊಡೆಯುವುದನ್ನು ಆಕೆ ಕಣ್ಣಾರೆ ಕಂಡಳು. ಒದೇನನ ಬಳಿ ಹೋಗಿ ಅವನನ್ನು ಅಡಗಿಸಿಕೊಂಡು ನಿಂತಳು. ಬಳಿಕ ಮಕ್ಕಳಿಗೆಂದಳು – ನೀವು ಯಾರನ್ನು ಮಕ್ಕಳೇ ಹೊಡೆಯುತ್ತಿರುವುದು? ತಚ್ಚೋಳಿ ಮನೆಯ ಒದೇನ ನೆಂದರೆ ನಿಮ್ಮ ಅಪ್ಪನಲ್ಲವೆ ಮಕ್ಕಳೆ? ಒದೇನ ನನ್ನ ಗಂಡನಲ್ಲವೆ? ಆಕೆ ಮತ್ತೆಯೂ ಕೇಳಿದಳು – ತಚ್ಚೋಳಿ ಕೋಮ ಕುರುಪ್ಪೇ, ನನ್ನ ಭಾವಾ! ಕುಂಬಳ ಕಾಯಂತೆ ನರೆಗೈಯವರೇ. ತಮ್ಮನ ಮಕ್ಕಳನ್ನೂ ಗೊತ್ತಾಗಲಿಲ್ಲವೆ? ಆ ಮಾತುಗಳನ್ನು ಕೇಳಿದ ಏರಾಣಿ ಮನೆಯ ಕುಂಞೆಚಂದು ಮತ್ತು ಕುಂಞಿಕೇಳು ಅಪ್ಪನನ್ನು ಹೋಗಿ ತಬ್ಬಿಕೊಂಡರು. ಅಪ್ಪನ ಕಾಲಿಗೆ ಬಿದ್ದರು. ಬಳಿಕ ಒದೇನನಿಗೆಂದರು – ನಾವು ತಿಳಿಯದೆ ಮಾಡಿದ ತಪ್ಪನ್ನು ನೀವು ಕ್ಷಮಿಸಬೇಕು. ಹೀಗೆಂದು ಅವರು ಪುನಃ ಕಾಲಿಗೆ ಬಿದ್ದರು. ಒದೇನ ಮಕ್ಕಳಿಗೆಂದ – ನೀವು ತಿಳಿಯದೆ ಮಾಡಿದ್ದನ್ನೆಲ್ಲ ನಾನು ಮರೆತು ಬಿಟ್ಟಿದ್ದೇನೆ. ಹೀಗೆಂದು ಒದೇನ ತನ್ನ ಮಕ್ಕಳನ್ನು ಅಪ್ಪಿಹಿಡಿದುಕೊಂಡ. ಮಕ್ಕಳ ತಲೆಯಲ್ಲಿ ಕೈಯಿಟ್ಟು ಅವರನ್ನು ಆಶೀರ್ವದಿಸಿದ. ಏರಾಣಿ ಮನೆಯ ಹಿರಿಯವ್ವ ಮಕ್ಕಳನ್ನು ಕರೆದುಕೊಂಡು ತನ್ನ ಮನೆಗೆ ಹೋದಳು. ಅಲ್ಲಿ ಎಲ್ಲರೂ ಒಂದಾಗಿ ಸುಖವಾಗಿದ್ದರು.

ಯಾವ ಜಾತಿಯಾದರೇನು? ಮನಕ್ಕೊಪ್ಪುವ ಗಂಡನೆಂಬುದು ದೃಢವಾಗಿ ಬಿಟ್ಟಿದೆ

ತಚ್ಚೋಳಿಯ ಮುಂದಿನ ಉತ್ತರಾಧಿಕಾರಿ (ಅನಂತ್ರವನ್) ಕುಂಞಿಕೇಳು ಎಣ್ಣೆಸ್ನಾನ ಮುಗಿಸಿದ. ಉಣ್ಣಿಚಾರ ಬಡಿಸಿದ ಗಂಜಿ ಕುಡಿದ. ಪಡುಕೋಣೆಗೆ ಹೋದ. ಶೃಂಗರಿಸಿ ಕೊಂಡ. ಆಗ ಅಮ್ಮ ಕೇಳಿದಳು – ತಚ್ಚೋಳಿಯ ಮುಂದಿನ ಯಜಮಾನ! ಎತ್ತಕಡೆ ಹೊರಟೆಯಪ್ಪಾ ಮಗು? ಅದಕ್ಕೆ ಕುಂಞಿಕೇಳುವೆಂದ – ಮಾಣಿಕ್ಕೋತ್ತ್ ಮನೆಯ ನನ್ನಮ್ಮ! ಚೆರುವಟ್ಟ ಚುಂಡನನ್ನು ಕಾಣುತ್ತಿಲ್ಲ. ನಾವು ಕಳರಿಗೆ ಪಯಟ್ಟ್‌ಗಾಗಿ ಹೋಗ ಬೇಕಾಗಿದೆ. ಹಾಗೆ ಹೊರಟ ಕೇಳು ನಡೆಯುತ್ತ ನಡೆಯುತ್ತ ಚೆರುವಟ್ಟಕ್ಕೆ ತಲಪುವಾಗ ಚೆರುವಟ್ಟ ಚುಂಡ ಕೇಳಿದ – ತಚ್ಚೋಳಿ ಕೇಳು, ನನ್ನ ಗೆಳೆಯ, ಎಲ್ಲಿಗೆ ಹೊರಟೆಯಪ್ಪ? ಅದಕ್ಕೆ ಕುಂಞಿಕೇಳು ಎಂದ – ನನ್ನ ಗೆಳೆಯ! ಚೆರುವಟ್ಟ ಚುಂಡ! ನಾನು ನನ್ನ ವ್ಯಥೆಯನ್ನು ನಿನ್ನಲ್ಲಿ ಹೇಳಿಕೊಂಡರೆ ಕೇಳುತ್ತಿಯಷ್ಟೆ? ಅದಕ್ಕೆ ಚುಂಡನೆಂದ– ಖಂಡಿತ ವಾಗಿಯೂ ಕೇಳುತ್ತೇನೆ. ಆಗ ಕೇಳು ಎಂದ – ನನ್ನ ಗೆಳೆಯ! ನನಗೆ ಚಿನ್ನದ ಮೇಲೆ ಆಸೆ. ವಯನಾಡ್ ಕೇಳುವಿನಕೋಟೆ ಕೆಲಸವನ್ನು ನನಗೆ ನೋಡಬೇಕೆಂಬ ಬಯಕೆ. ನನ್ನ ಸಂಗಾತಿಯಾಗಿ ನೀನು ಬಾ. ಈಗಲೇ ಹೊರಟು ಬಿಡೋಣ. ಅದಕ್ಕೆ ಕುಂಞಿಚುಂಡ ನೆಂದ – ತಚ್ಚೋಳಿಯ ಅನಂತ್ರವನ್ ಕೇಳು! ವಯನಾಡನ್ ಕೋಟೆಯ ಬಗೆಗಿನ ವಿಷಯಗಳನ್ನು ಕಿವಿಗೊಟ್ಟು ಕೇಳು. ಕೋಟೆಗೆ ಯಾರೂ ಎದುರಾಗುವವರಿಲ್ಲ. ವಯನಾಡನ್ ಕೇಳು ಎಂದರೆ ಅವನನ್ನು ಮೀರಿಸು ವವರಿಲ್ಲ. ಅವನ ಕೋಟೆ ಒಂದು ಊರೇ ಇದೆ. ಅವನಿಗೆ ಸಮಾನರು ಯಾರೂ ಇಲ್ಲ. ಅದು ಹಾಗಿರಲಿ. ಅವನಿಗೆ ಏಳುಮಂದಿ ಮಕ್ಕಳೂ ಅಳಿಯಂದಿರೂ ಇದ್ದಾರೆ. ಅವರು ಎಲ್ಲ ವಿದ್ಯೆಗಳಲ್ಲೂ ಪರಿಣತರು. ಏಳುಮಂದಿಗೆ ಹದಿನಾಲ್ಕು ಮಂದಿ ಗುರುಕ್ಕಳ್ ಇದ್ದಾರೆ. ಅವರೆಲ್ಲ

ಕೋಟೆಗೆ ಕಾವಲಿರುತ್ತಾರೆ. ಅವನ ಕೋಟೆಗೆ ಹೋದವರು ಯಾರೂ ಪುನಃ ಮಲೆನಾಡು ಕಂಡವರಿಲ್ಲ. ತನ್ನ ಮನೆಗೆ ತಲಪಿ ಅಲ್ಲಿ ಸತ್ತವರಿಲ್ಲ. ಅದಕ್ಕೆ ಕುಂಞಿಕೇಳು ಉತ್ತರಿಸಿದ – ಹಾಗೆ ಹೇಳಬೇಡವೋ ಕುಂಞಿಚುಂಡಾ! ನನಗೆ ಸಂಗಾತಿಯಾಗಿ ನೀನೇ ಇರಬೇಕು. ಆಗ ಚುಂಡನೆಂದ– ಕೇಳೂ! ಹೀಗೆ ನಾವು ಹೋದೆವಾದರೆ ಕೋಟೆಯ ಕೆಲಸವನ್ನು ನಾವು ನೋಡಲಾರೆವು. ಆಗ ಕೇಳು ಪ್ರಶ್ನಿಸಿದ – ಹಾಗಾದರೆ ನಾವು ಹೇಗೆ ಹೋಗಬೇಕು, ಕುಂಞಿಚುಂಡ? ಅದಕ್ಕೆ ಚುಂಡನೆಂದ – ಸನ್ಯಾಸಿ ವೇಷದಲ್ಲಿ ಹೋಗೋಣ! ನಾವು ಸ್ನಾನ ಮಾಡಿಬರೋಣ. ಇಬ್ಬರೂ ಎಣ್ಣೆ ಹಚ್ಚಿಕೊಂಡರು. ಸ್ನಾನಮಾಡಿದರು. ಗಂಜಿ ಕುಡಿದರು. ಇಬ್ಬರೂ ಎರಡು ಜೋಳಿಗೆಗಳನ್ನು ಹೆಗಲಿಗೆ ಜೋತಾಡಿಸಿಕೊಂಡರು. ಸನ್ಯಾಸಿ ವೇಷ ಮಾಡಿಕೊಂಡರು. ಅಮ್ಮನಿಗೆ ಹೇಳಿದರು – ಚೆರುವತ್ ಮನೆಯ ನಮ್ಮಮ್ಮ! ಇಬ್ಬರಿಗೂ ಹಾನೆ ಅಕ್ಕಿ ಕೊಡಬೇಕು ನೀವು! ನಮ್ಮ ಜೋಳಿಗೆಯಲ್ಲಿ ಅದನ್ನು ನೀವು ಹಾಕಬೇಕು. ಆಗ ಆಕೆ ಕೇಳಿದಳು – ಸನ್ಯಾಸಿ ವೇಷ ಮಾಡಿಕೊಂಡಿದ್ದೀರಿ! ಎಲ್ಲಿಗೆ ಹೋಗುತ್ತಿದ್ದೀರಿ ಮಕ್ಕಳೆ? ಅದಕ್ಕೆ ಉತ್ತರವಾಗಿ ಕುಂಞಿಚುಂಡನೆಂದ – ನಾವು ಹೀಗೆ ಇಲ್ಲೇ ಇದ್ದು ಏನಮ್ಮ ಮಾಡುವುದು? ಸನ್ಯಾಸಿ ವೇಷಮಾಡಿಕೊಂಡು ಭಿಕ್ಷೆ ಬೇಡಿ ಬರುತ್ತೇವೆ. ನಮ್ಮ ಪಾಪವೆಲ್ಲಾ ನಾಶವಾಗಲಮ್ಮ! ಮಕ್ಕಳ ಮಾತನ್ನು ಅಮ್ಮ ನಿಜವೆಂದೇ ನಂಬಿದಳು. ಜೋಳಿಗೆಗೆ ಒಂದೊಂದು ಹಾನೆ ಅಕ್ಕಿ! ಹಾಕಿದಳು. ಹಾಗೆ ನಡೆಯುತ್ತ ನಡೆಯುತ್ತ ಅವರು ಭಿಕ್ಷೆ ಬೇಡುತ್ತ ಮುಂದೆ ಮುಂದೆ ಹೋದರು. ಅವರು ದೇವಾಲಯದ ಮುಂದಿನ ತಗ್ಗಿಗೆ ತಲಪಿದರು. ಆಗ ಕೇಳು ಎಂದ – ತುಂಬ ಬಾಯಾರಿಕೆಯಾಗುತ್ತಿದೆ. ಎಲ್ಲಿಯಾದರೂ ನೀರು ಸಿಗಬಹುದೇ? ಅದಕ್ಕೆ ಚುಂಡನೆಂದ – ಇನ್ನೂ ಒಂದಷ್ಟು ದೂರ ನಡೆಯೋಣ. ಕೊಯಿಲೂರು ಎಂಬಲ್ಲಿಗೆ ಹೋದರೆ ಅಲ್ಲಿ ನೀರು ಸಿಕ್ಕೀತು. ಅಂತೆಯೇ ಅವರು ಒಂದಷ್ಟು ದೂರ ನಡೆದರು. ಅವರು ಕೊಯಿಲೂರಿಗೆ ತಲಪಿದಾಗ ಅಲ್ಲಿನ ಹಿರಿಯವ್ವ ಹದಿನಾಲ್ಕು ಚಾಪೆಗಳಲ್ಲಿ ಭತ್ತ ಹರಡಿ ಕಾಗೆ ಬಾರದಂತೆ ಕಾವಲು ಕುಳಿತಿದ್ದಳು. ಅವರು ಆ ಮನೆಯ ಮೆಟ್ಟಲೇರಿ ಹೋದರು. ಆ ಹಿರಿಯವ್ವ ಅವರ ಬಳಿ ಕೇಳಿದಳು – ಎಲ್ಲಿಂದ ಬರುತ್ತಿದ್ದೀರಿ ಸನ್ಯಾಸಿಗಳೇ?ಅದಕ್ಕೆ ಕುಂಞಿಕೇಳುವೆಂದ – ಕೊಯಿಲೂರು ಮನೆಯ ಹಿರಿಯವ್ವ! ನಾವು ಬಹಳ ದೂರದ ತೆಂಕಣ ನಾಡಿನವರು. ಭಿಕ್ಷೆ ಬೇಡುತ್ತ ನಡೆಯುತ್ತಿದ್ದೇವೆ. ನಮಗೆ ಕುಡಿಯಲು ಒಂದಿಷ್ಟು ನೀರು ಬೇಕಾಗಿದೆ. ಆಕೆ ಒಂದು ಗಿಂಡಿ ನೀರು ತಂದುಕೊಟ್ಟಳು. ಅವರು ಅದನ್ನು ಕುಡಿದ ಬಳಿಕ ಆಕೆಯಲ್ಲಿ ಕೇಳಿದರು – ಕೊಯಿಲೂರು ಮನೆಯ ಹಿರಿಯವ್ವ! ಅಕ್ಕಿ ಕೊಟ್ಟರೆ ಊಟ ಕೊಡುತ್ತೀರಾ? ಅದಕ್ಕೆ ಆಕೆ ಉತ್ತರಿಸಿದಳು – ತೆಂಕಣ ನಾಡಿನ ಸನ್ಯಾಸಿಗಳೆ! ಅಕ್ಕಿ ತೆಗೆದುಕೊಂಡು ಊಟ ನಾನು ಕೊಡೆನು. ಅಕ್ಕಿ ತೆಗೆದುಕೊಳ್ಳದೆ

ಊಟ ಕೊಡೋಣ. ನೀವು ಇಲ್ಲೇ ಚಾವಡಿಯಲ್ಲಿ ಕುಳಿತುಕೊಳ್ಳಿ, ನಾನು ಹೋಗಿ ಅನ್ನ ಸಿದ್ಧಪಡಿಸುತ್ತೇನೆ. ಅವರು ಚಾವಡಿಯಲ್ಲಿ ಕುಳಿತರು. ಹಿರಿಯವ್ವ ಒಳಹೋದಳು. ಅನ್ನ ಸಿದ್ಧಪಡಿಸಿದಳು. ಕುಂಞಿಕೇಳು ಹೇಳಿದ – ಇಲ್ಲೇನು ಆನೆಯನ್ನು ಸಾಕಿದ್ದಾರೆಯೇ? ಗಂಟೆಯ ಸದ್ದು ಜೋರಾಗಿ ಕೇಳಿಸುತ್ತಿದೆ. ಅದಕ್ಕೆ ಚುಂಡನೆಂದ–ತಚ್ಚೋಳಿಯನಂತ್ರವನೇ ಕುಂಞಿಕೇಳು! ಸುಮ್ಮನಿರು. ಸುಮ್ಮನಿರು ಕುಂಞಿಕೇಳು. ಇದನ್ನೆಲ್ಲಾದರೂ ಹಿರಿಯವ್ವ ಕೇಳಿದಳಾದರೆ ತನ್ನ ಮಗಳಿಗೆ ದೃಷ್ಟಿಯಾಯಿತೆಂದು ಹೇಳಿಯಾಳು. ಕೊಯಿಲೂರು ಮನೆಯ ಕುಂಞಿಕುಂಕಿ ಓದುಬರಹ ಕಲಿಯಲು ಹೋದವಳು ಮರಳಿ ಬರುತ್ತಿದ್ದಾಳೆ. ಅವಳು ಕಾಲುಗಳಿಗೆ ಹಾಕಿಕೊಂಡ ಕಾಲಬಳೆಯ (ತರಿತ್ತಂಡ್‌ನ) ಸದ್ದು ಅದು. ಅದು ಅವಳು ಸೊಂಟಕ್ಕೆ ಕಟ್ಟಿಕೊಂಡ ಹೊಂದೊಡರಿನ ಸದ್ದು. ಚುಂಡ ಈ ಮಾತುಗಳನ್ನು ಹೇಳಿ ಮುಗಿಸಿದ್ದನೋ ಇಲ್ಲವೊ ಕುಂಕಿ ಬಂದು ಮನೆಯ ಮೆಟ್ಟಲೇರುತ್ತಿದ್ದಳು. ಸನ್ಯಾಸಿಗಳನ್ನು ಕಂಡೂ ಕಾಣದಂತಿರಲು ಆಕೆ ತನ್ನ ಕಿರುಕೊಡೆಯಿಂದ ಮೈಯನ್ನು ಮರೆ ಮಾಡಿಕೊಂಡಳು. ತಾಳೆಯೋಲೆಗಳ ಕಟ್ಟಿನಿಂದ ಮುಖವನ್ನು ಮರೆಮಾಡಿ ಕೊಂಡಳು. ಆಕೆ ಮೆಟ್ಟಿಲೇರಿ ಒಳಗೆ ಹೋದಳು. ತಾಳೆಯೋಲೆಗಳ ಕಟ್ಟನ್ನು ಒಳಗಿರಿಸಿ ದಳು. ಕಿರುಕೊಡೆಯನ್ನೂ ಒಯ್ದು ಒಳಗಿಟ್ಟಳು. ಅಡುಗೆ ಮನೆಗೆ ಹೋದಳು. ಅವಳು ಅಮ್ಮನಲ್ಲಿ ಕೇಳಿದಳು–ನಮ್ಮ ಮನೆಯ ಚಾವಡಿಯಲ್ಲಿ ಕುಳಿತುಕೊಂಡಿರುವುದು ಯಾರಮ್ಮ? ಅದಕ್ಕೆ ಹಿರಿಯವ್ವ ಉತ್ತರಿಸಿದಳು – ತೆಂಕಣ ನಾಡಿನಿಂದ ಬಂದಿರುವ ಯಾರೋ ಸನ್ಯಾಸಿಗಳು. ಭಿಕ್ಷೆ ಬೇಡಿಕೊಂಡು ತಿರುಗಾಡುತ್ತಿದ್ದಾರೆ. ಅಕ್ಕಿ ಕೊಟ್ಟರೆ ಊಟಕೊಡಬಹುದೇ ಎಂದು ನನ್ನಲ್ಲಿ ಕೇಳಿದ್ದಕ್ಕೆ ಅಕ್ಕಿ ಕೊಡದೆ ಊಟ ಕೊಡಬಹುದು ಎಂದೆ. ಅಕ್ಕಿ ತೆಗೆದು ಕೊಂಡು ಊಟಕೊಡುವುದು ನಮಗೆ ಹೇಳಿಸಿದ್ದಲ್ಲವಲ್ಲ? ಅದಕ್ಕೆ ಕುಂಕಿ ಕೇಳಿದಳು – ಅವರಿಗೆ ಕುಳಿತುಕೊಳ್ಳಲು ಸರಿಯಾದ ಆಸನ ಕೊಡಬಹುದಿತ್ತಲ್ಲವೇ? ಅದಕ್ಕೆ ಹಿರಿಯವ್ವ ಯೆಂದಳು – ತೆಂಕಣ ನಾಡಿಂದ ಬಂದಿರುವ ಸನ್ಯಾಸಿಗಳು ಯಾರೋ ಏನೋ? ಅವರು ಯಾರೆಂದು ತಿಳಿಯದೆ ಅವರಿಗೆ ಹುಲ್ಲು ಚಾಪೆ ಕೊಡಬಹುದೇ? ಅದಕ್ಕೆ ಕುಂಕಿಯೆಂದಳು – ಸನ್ಯಾಸಿಗಳಿಗೆ ಹಚ್ಚಿಕೊಳ್ಳಲು ಎಣ್ಣೆ ಕೊಡಬೇಕಮ್ಮ. ಗೊಂಪನ್ನೂ ಬಾಗೆಹುಡಿಯನ್ನೂ ಕೊಡಬೇಕು. ಕುಂಞಿಕುಂಕಿ ಎಣ್ಣೆಯನ್ನೂ ಕೊಯಂಬನ್ನೂ ತಂದು ಮುಂದಿಟ್ಟು ಅವನ್ನು ತೆಗೆದುಕೊಂಡು ಹೋಗಿ ಹಚ್ಚಿಕೊಂಡು ಸ್ನಾನಮಾಡಿಕೊಳ್ಳುವಂತೆ ಹೇಳಿದಳು. ಸನ್ಯಾಸಿಗಳು ಎಣ್ಣೆಯನ್ನು ತೆಗೆದುಕೊಂಡರು. ಕುಂಞಿಕುಂಕಿ ಅಡುಗೆ ಮನೆಗೆ ಹೋದಳು. ಕೊಯಿಲೂರು ಮನೆಯ ಹೆತ್ತವ್ವ! ಊರಲ್ಲಿ ದೊಡ್ಡವರು ನನ್ನನ್ನು ಮದುವೆಗಾಗಿ ಕೇಳಿಕೊಂಡು ಬಂದರು. ಊರಲ್ಲಿ ಚಿಕ್ಕವರು ನನ್ನನ್ನು ಕೇಳಿಕೊಂಡು ಬಂದರು. ಊರು ಒಡೆಯರು ಬಂದರು, ನಾಡ ಪ್ರಭುಗಳು ಬಂದರು. ನಾಲ್ಕೂ

ಅರಮನೆಗೆ ಸೇರಿದ ಅರಸರು ಬಂದರು. ಯಾರೂ ನನಗೆ ಸರಿಬಾರದ್ದರಿಂದ ನಾನು ಅವರಿಂದ ಮಾಲೆಯನ್ನು ತೆಗೆದುಕೊಳ್ಳಲಿಲ್ಲ. ಈಗ ನನ್ನ ಮನಕ್ಕೊಪ್ಪುವ ಗಂಡ ಬಂದಿದ್ದಾನಮ್ಮ. ಆಗ ಹಿರಿಯವ್ವ ಕೇಳಿದಳು – ಹಾಗಾದರೆ ಅವನು ಎಲ್ಲಿದ್ದಾನೆ ಮಗಳೆ? ಅದಕ್ಕೆ ಕುಂಕಿ ಕೂಡಲೆ ಎಂದಳು – ಮನೆ ಬಾಗಿಲಿಗೆ ಇಬ್ಬರು ಸನ್ಯಾಸಿಗಳು ಬಂದಿದ್ದಾರಲ್ಲಮ್ಮ? ಅವರಲ್ಲೊಬ್ಬನನ್ನು ನಾನು ಇಷ್ಟಪಟ್ಟೆ. ಆ ಸನ್ಯಾಸಿಯಿಂದ ನಾನು ಮಾಲೆ ಸ್ವೀಕರಿಸುತ್ತೇನಮ್ಮ. ಆ ಮಾತುಗಳನ್ನು ಕೇಳಿ ಹಿರಿಯವ್ವಳಿಗೆ ದುಃಖವುಮ್ಮಳಿಸಿತು – ಕೊರಳುಕೊಯ್ಕ ಮಾತನ್ನು ಆಡಬೇಡ ಮಗಳೆ ಕುಂಕಿ! ನಾಲ್ಕು ಅರಮನೆಗೆ ಸೇರಿದ ಅರಸುಗಳು ನಿನಗಾಗಿ ಇಲ್ಲಿಗೆ ಬಂದರಲ್ಲವೆ? ಯಾರನ್ನೂ ನಿನಗೆ ಸರಿಬರಲಿಲ್ಲ. ತೆಂಕಣ ನಾಡಿಂದ ಎಲ್ಲಿಂದಲೋ ಬಂದ ಸನ್ಯಾಸಿಗಳು ನಿನಗೆ ಹೇಗೆ ಇಷ್ಟವಾದರು? ಅವರು ಯಾವ ಜಾತಿ ಎಂದು ಗೊತ್ತೇ? ಅವರ ನೀತಿ ಗೊತ್ತೇ? ಅದಕ್ಕೆ ಕುಂಕಿ ಉತ್ತರವಿತ್ತಳು – ಕೊಯಿಲೂರು ಮನೆಯ ಹೆತ್ತವ್ವ! ಅವರಲ್ಲೊಬ್ಬ ಸನ್ಯಾಸಿಯಿಂದ ನಾನು ಇಂದು ಮಾಲೆ ತೆಗೆದುಕೊಳ್ಳುವೆ. ಹಿರಿಯವ್ವ ಕವುಚಿ ಕುಸಿದು ಬಿದ್ದಳು. ಎದೆಬಡಿದುಕೊಂಡಳು. ಹಿಂದೆ ನಮ್ಮ ಕುಟುಂಬದ ಹಿರಿಯವ್ವ ಇದ್ದಾಗ ಹದಿನಾಲ್ಕು ಕಲ್ಪೆಟ್ಟಿ ಬೆಳ್ಳಿಬಂಗಾರಗಳು ತುಂಬಿ ತುಳುಕಿದ್ದುವು. ಅವಕ್ಕೆಲ್ಲ ನೀನೇ ಮುಂದೆ ವಾರಿಸು ದಾರಳು. ಆ ಸಂಪತ್ತಿಗೆಲ್ಲ ನೀನೇ ಒಡೆಯಳು. ಮಕ್ಕಳನ್ನು ಹಡೆದು ಮನೆ ತುಂಬಬೇಕಾ ದವಳೂ ನೀನೇ. ಅಂಥ ನಿನಗೆ ಸನ್ಯಾಸಿಯ ಹಿಂದೆ ಓಡಿಹೋಗುವ ಯೋಗ! ಅದಕ್ಕೆ ಕುಂಕಿಯೆಂದಳು – ಹೆತ್ತಮ್ಮ! ಏನೇ ಆಗಲಿ, ಏನೇ ಹೋಗಲಿ. ನನ್ನನ್ನು ಎಷ್ಟು ತಡೆದರೂ ನಾನು ಕೇಳುವವಳಲ್ಲ. ಅವಳು ಗಂಧತೇಯುವ ಕಲ್ಲ ಬಳಿಗೆ ಹೋದಳು. ಒಂದು ಗಿಂಡಿ ನೀರು ತೆಗೆದುಕೊಂಡಳು, ಕಲ್ಲಲ್ಲಿ ಗಂಧ ತೇದಳು. ಮೂರುಬಾರಿ ತೇದಾಗ ಸಿಕ್ಕಿದ್ದನ್ನು ಸೀಟಿ ತೆಗೆದುಕೊಂಡಳು. ಅದಕ್ಕೆ ಒಳ್ಳೆಯ ರಂಗು ಬರುವುದಕ್ಕಾಗಿ ಕುಂಕುಮ ಮಿಶ್ರಮಾಡಿದಳು. ಸನ್ಯಾಸಿಗಳು ಸ್ನಾನಮಾಡಿ ಬರುವಷ್ಟರಲ್ಲಿ ಕೊಯಿಲೂರು ಮನೆಯ ಕುಂಞಿಕುಂಕಿಯು ತಚ್ಚೋಳಿಯನಂತರದನಾದ ಕುಂಞಿಕೇಳುವಿಗೆ ಚಂದನ ವನ್ನೂ ಒಯ್ದು ಇರಿಸಿದಳು. ಆಗ ಕುಂಞಿಕೇಳು ಕೇಳಿದ – ಕೊಯಿಲೂರು ಮನೆಯ ಕುಂಞಿಕುಂಕಿ! ನಾನು ಯಾರೆಂದು ತಿಳಿದು ನೀನು ಈ ಚಂದನವನ್ನು ಹೀಗೆ ತೇದು ಸಿದ್ಧಪಡಿಸಿರುವೆ? ಚಂದನವನ್ನು ನಾನೇನೂ ತೆಗೆದುಕೊಳ್ಳುವವನಲ್ಲ. ಆಗ ಕುಂಕಿಯೆಂದಳು – ಚಂದನವನ್ನು ನೀನು ತೆಗೆದು ಕೊಳ್ಳದಿದ್ದರೆ ನಾನು ಬಿಡುವವಳಲ್ಲ. ಆಗ ಕುಂಞಿ ಕೇಳುವೆಂದ – ಜತೆಗಿರುವವನೇ, ಸನ್ಯಾಸಿಯೇ! ನೀನು ಆ ಚಂದನವನ್ನು ತೆಗೆದುಕೊ. ಆಗ ಕುಂಕಿಯೆಂದಳು – ಅವರಿಗೆ ನಾನು ಚಂದನವನ್ನು ಕೊಡುವವಳಲ್ಲ. ಅದಕ್ಕೆ ಕುಂಞಿಕೇಳುವೆಂದ – ಅವನು ನನ್ನ ಊರಿನವರೇ, ಕುಂಕಿ! ನಾನೊಬ್ಬ ಅಪ್ಪಟ ತೆಂಕು

ನಾಡಿನವ. ನಾನು ಒಳ್ಳೆಯ ಒಂದು ಜಾತಿಯಲ್ಲಿ ಹುಟ್ಟಿದವನೂ ಅಲ್ಲ. ಅದಕ್ಕೆ ಕುಂಕಿ ಯೆಂದಳು – ಯಾವ ಜಾತಿಯಾದರೂ ಪರವಾಯಿಲ್ಲ. ನನ್ನಿಂದ ಈ ಚಂದನವನ್ನು ನೀನು ತೆಗೆದುಕೊಳ್ಳಲೇಬೇಕು. ಆಗ ಚುಂಡನೆಂದ – ಚಂದನವನ್ನು ತೆಗೆದುಕೊ ಕುಂಞಿಕೇಳು. ಕುಂಞಿಕೇಳು ಚಂದನವನ್ನು ತೆಗೆದುಕೊಂಡ. ಸ್ನಾನಮುಗಿಸಿದ್ದ ಅವರು ನಾಮಗಳನ್ನು ಧರಿಸಿಕೊಂಡರು, ಕುಂಕಿ ಅಡುಗೆಮನೆ ಸೇರಿದಳು.

ಎಡಚಾವಡಿಯ ಜಗಲಿಯಲ್ಲಿ ಸನ್ಯಾಸಿಗಳಿಗೆ ಎಲೆ ಹಾಕಿದಳು. ಅವರಿಗೆ ಊಟ ಬಡಿಸಿದಳು. ಹಿರಿಯವ್ವ ಕವುಚಿ ಕುಸಿದು ಬಿದ್ದಿದ್ದವಳು ಹಾಗೆಯೆ ಇದ್ದಳು. ಅವಳು ಇದೇನು ಕಾಣುತ್ತಿದ್ದಾಳೆ!! ಕುಂಕಿ ಕೇಳುವಿನ ಬಳಿಯಲ್ಲಿಯೇ ಕುಳಿತು ಉಣ್ಣುತ್ತಿದ್ದಳು. ಕೊಯಿಲೂರು ಮನೆಯ ಕುಂಞಿಕುಂಕಿ ಕೇಳುವಿನ ಬಳಿ ಕುಳಿತು ಅವನ ಎಂಜಲನ್ನು ಉಂಡ ಬಳಿಕ ಅವಳು ಪಡುಕೋಣೆಯನ್ನು ತುಂಬ ಶ್ರದ್ಧೆಯಿಂದ ಸಿದ್ಧಪಡಿಸಿದಳು. ಒಂದು ಒಳ್ಳೆಯ ಮಾಲೆಯನ್ನು ಸಿದ್ಧವಾಗಿಟ್ಟುಕೊಂಡಳು. ಅದನ್ನು ಕೇಳುವಿಗೆ ಕೊಟ್ಟಳು. ಆ ಮಾಲೆಯನ್ನು ತನ್ನ ಕೊರಳಿಗೆ ಹಾಕುವಂತೆ ಅವನಿಗೆ ಹೇಳಿದಳು. ಆಗ ಕೇಳು ವಿಚಾರಿಸಿದ – ನೀನು ಈ ಮಾಲೆಯನ್ನು ಯಾರಿಂದ ಪಡೆಯುತ್ತಿದ್ದಿ ಎಂದೂ ಅವನು ಯಾವ ಜಾತಿಗೆ ಸೇರಿದವನು ಎಂಬುದನ್ನೂ ತಿಳಿದಿದ್ದಿಯಾ? ಅದಕ್ಕೆ ಅವಳೆಂದಳು – ಯಾವ ಜಾತಿಯಾದರೇನು? ಮನಕ್ಕೊಪ್ಪಿದ ಗಂಡ ನೆಂಬುದು ನನಗೆ ದೃಢವಾಗಿಬಿಟ್ಟಿದೆ. ಕುಂಞಿಕೇಳು ಅವಳಿಗೆ ಮಾಲೆ ಸೂಡಿದ. ಚುಂಡನಿಗೆ ಎಡಬದಿಯ ಚಾವಡಿಯಲ್ಲಿ ಮಲಗಲು ವ್ಯವಸ್ಥೆ ಮಾಡಿಕೊಟ್ಟಳು. ಬಳಿಕ ಅವಳು ಕೇಳುವನ್ನು ಪಡುಕೋಣೆ ಸೇರಿಸಿಕೊಂಡಳು. ಪಡುಕೋಣೆ ಸೇರಿದ ಕೇಳುವಿನಲ್ಲಿ ಕುಂಕಿ ಕೇಳಿದಳು – ನನ್ನ ಗಂಡಾ! ನಿಮ್ಮ ಊರು ಯಾವುದು? ಮನೆ ಯಾವುದು? ಅದಕ್ಕೆ ಕುಂಞಿಕೇಳು ಉತ್ತರಿಸಿದ –ಕೊಯಿಲೂರು ಮನೆಯ ಕುಂಞಿಕುಂಕಿ! ತಚ್ಚೋಳಿಯನಂತರವನಾದ ಕುಂಞಿಕೇಳು ನಾನು. ಕುಂಕಿಗೆ ಅತ್ಯಂತ ಹರ್ಷವಾಯಿತು. ಅವಳು ಮತ್ತೆಯೂ ಕೇಳಿದಳು – ನನ್ನ ಗಂಡಾ! ನೀವು ಎಲ್ಲಿಗೆ ಹೋಗಲು ಹೊರಟವರು? ಅದಕ್ಕೆ ಕುಂಞಿಕೇಳುವೆಂದ – ಕೊಯಿಲೂರು ಮನೆಯ ಕುಂಞಿಕುಂಕಿ! ವಯನಾಡನ್ ಕೇಳುವಿನ ಕೋಟೆಯ ಕೆಲಸವನ್ನು ನೋಡಲು ನನಗೆ ಆಸೆ. ಆ ಮಾತನ್ನು ಕೇಳಿದ ಕುಂಕಿ ಎಂದಳು – ಅಯ್ಯೋ ನನ್ನ ದೈವವೇ! ಆ ಕೇಳು ಎಂಬವ ಭಯಂಕರ ಮನುಷ್ಯ. ಕೇಳುವಿನ ಕೋಟೆಗೆ ಹೋದ ಯಾರೇ ಆಗಲಿ ತನ್ನ ಮನೆಗೆ ಮರಳಿ ಸಾಯಲಾರ. ವಯನಾಡನ್ ಕೇಳುವಿನ ವಿಚಾರ ಹಾಗಿರಲಿ, ನನ್ನ ಗಂಡಾ! ಅವನಿಗೆ ಏಳು ಜನ ಮಕ್ಕಳು, ಅಳಿಯಂದಿರು ಇದ್ದಾರೆ. ಅವರು ಕಂಡ ಕಂಡವರನ್ನೆಲ್ಲಾ ಕೊಂದೇ ಹಾಕುವವರು. ಅವರ ಗುರುಕ್ಕಳ್

ಕೂಡ ಎಂಥವರು ಗೊತ್ತೇ? ಅವನು ಹದಿನಾಲ್ಕು ಗುರುಕ್ಕಳನ್ನು ತನ್ನ ಬಳಿ ಸಾಕುತ್ತಿದ್ದಾನೆ. ಅವನ ಕೋಟೆ ಎಂದರೇನು ಸಾಮಾನ್ಯವೆ? ಒಂದಿಡೀ ಊರನ್ನೆ ಆ ಕೋಟೆ ವ್ಯಾಪಿಸಿ ಕೊಂಡಿದೆ. ಆ ಕೋಟೆ ತುಂಬ ಜನರಿಂದ ತುಂಬಿದೆ. ಆ ಕೋಟೆಗೆ ಹದಿನೆಂಟು ಹೆಬ್ಬಾಗಿಲುಗಳಿವೆ. ಅವಕ್ಕೆಲ್ಲಕ್ಕೂ ಸೇರಿ ಇರುವುದು ಒಂದೇ ಹಗ್ಗ. ಬಲಭಾಗದ ಹಗ್ಗ ಬಿಗಿ ಮಾಡಿದಾಗ ಹದಿನೆಂಟು ಬಾಗಿಲುಗಳೂ ತೆರೆದುಕೊಳ್ಳುತ್ತವೆ. ಅಂಥಕೋಟೆಗೆ ನೀನು ಇಂದು ಹೊರಟಿದ್ದಿ. ನೀನು ಅಲ್ಲಿಗೆ ಹೋಗುತ್ತಿಯಾ? ಕುಂಞಿಕುಂಕಿ ಪುನಃ ಕೇಳಿದಳು – ಎಡಬದಿಯ ಚಾವಡಿಯಲ್ಲಿ ಮಲಗಿರುವುದು ಯಾರು? ಅದಕ್ಕೆ ಕುಂಞಿಕೇಳು ಎಂದ – ಅವನು ಚೆರುವಟ್ಟ ಚುಂಡ, ನನ್ನ ಗೆಳೆಯ. ಅದಕ್ಕೆ ಕುಂಕಿಯೆಂದಳು – ಇಬ್ಬರನ್ನೂ ವಯನಾಡನ್ ಕೇಳುವೂ ಅವನ ಮಕ್ಕಳೂ ಅವನ ಕೋಟೆಯಲ್ಲಿ ಕೊಲ್ಲದಿರರು. ಇರಲಿ, ಇರಲಿ ನನ್ನ ಗಂಡಾ! ನನ್ನ ಸೊಂಟದಲ್ಲಿನ ತಾಯಿತವನ್ನೂ ನೂಲನ್ನೂ ನೀನು ಸೊಂಟದಲ್ಲಿ ಕಟ್ಟಿಕೊಳ್ಳಬೇಕು. ನನ್ನ ಅಮ್ಮನಿಗೆ ಗೊತ್ತಾಗದಂತೆ ಅವುಗಳನ್ನು ತೆಗೆದುಕೊಳ್ಳಬೇಕು. ಹಾಗಾದರೆ ಗುಂಡು ಹೊಡೆದರೆ ದೇಹವನ್ನು ಪ್ರವೇಶಿಸದು. ಕತ್ತಿಯಿಂದ ಕಡಿದರೆ ಏಟು ತಗುಲದು. ಅವಳು ಉರುಮಿ ತೆಗೆದು ಅವನಿಗೆ ಕೊಟ್ಟಳು. ಕೇಳುವಿನ ಕೈಗೆ ಅವನ್ನು ನೀಡಿದಳು. ನನ್ನ ಮೈಗೆ ಎಲ್ಲ ಕಡೆಗೆ ಇದರಿಂದ ಹೊಡೆ – ಎಂದು ಆದೇಶಿಸಿದಳು. ಕೇಳು ಉರುಮಿಯಿಂದ ಅವಳನ್ನು ಅನೇಕ ಕಡೆ ಕಡಿದ. ಅವಳಿಗೆ ಯಾವ ಏಟುಗಳೂ ಬೀಳಲಿಲ್ಲ. ಬೆಳ್ಳಿಯ ಪಟ್ಟೆ ಹಾಕಿಸಿದ್ದ ಕೋವಿಯನ್ನು ಇತ್ತ ತೆಗೆದಳು. ಅದರಲ್ಲಿ ಕೇಪನ್ನು ತುಂಬಿಸಿದಳು. ತನ್ನ ನೇರಕ್ಕೆ ಗುಂಡು ಹೊಡೆಯುವಂತೆ ಹೇಳಿದಳು. ಕೇಳು ಅಂತೆಯೆ ಮಾಡಿದ. ಅವಳಿಗೆ ಗುಂಡು ತಾಗಲೇ ಇಲ್ಲ – ಇನ್ನೂ ಕೇಳಯ್ಯಾ ನನ್ನ ಗಂಡಾ! ಜನರನ್ನು ಮೂರ್ಛೆ ಬರಿಸುವ ಮದ್ದು ಅಮ್ಮನ ಪೆಟ್ಟಿಗೆಯಲ್ಲಿದೆ. ಅಮ್ಮ ಬೋಧವಿಲ್ಲದೆ ನಿದ್ರಿಸುತ್ತಿದ್ದಾಳೆ. ನಾನು ಹೋಗಿ ಅದನ್ನು ತಂದು ಕೊಡುತ್ತೇನೆ. ಅಮ್ಮನಿಗೆ ಗೊತ್ತಾದರೆ ಅವಳು ಅದನ್ನು ಕೊಡಲಾರಳು. ಕೊಯಿಲೂರು ಮನೆಯ ಕುಂಞಿಕುಂಕಿ ಅವಳ ಅಮ್ಮನಿಗೆ ತಿಳಿಯದಂತೆ ಆ ಮದ್ದನ್ನು ತೆಗೆದುಕೊಂಡು ಬಂದಳು. ತಾಯಿತದ ಮುಚ್ಚಳ ತೆಗೆದು ಅದನ್ನು ತುಂಬಿ ಅದರ ಮುಚ್ಚಳ ಮುಚ್ಚಿದಳು. ಅಂತೆಯೇ ಚೆರುವಟ್ಟ ಚುಂಡನೆಂಬ ಗೆಳೆಯನ ತಾಯಿತದಲ್ಲೂ ತುಂಬಿದಳು.

ಅವರು ಹೀಗಿರಲು ಒಂದು ಸಿಡಿಲಿನ ಸದ್ದಿನಂಥ ಶಬ್ದ ಕೇಳಿಸಿತು. ಅದೇನೆಂದು ಕೇಳು ಕೇಳಿದ. ಅದಕ್ಕೆ ಕುಂಕಿಯೆಂದಳು – ಅದು ವಯನಾಡನ್ ಕೇಳು ಕೋಟೆಯಿಂದ ಮನೆಗೆ ನಿದ್ರಿಸಲು ಹೋಗುವಾಗ ಸಿಡಿಸುವ ಸಿಡಿಮದ್ದಿನ ಸದ್ದು. ಅವನು ನಿದ್ದೆ ಮಾಡಲು ಈಗ ಹೊರಟುಹೋಗುತ್ತಾನೆ. ಇದೀಗ ಒಳ್ಳೆಯ ಮುಹೂರ್ತ, ನನ್ನ

ಗಂಡಾ! ಅವಳ ಸೊಂಟದಲ್ಲಿದ್ದ ತಾಯಿತವನ್ನೂ ನೂಲನ್ನೂ ಕುಂಞಿಕೇಳು ತನ್ನ ಸೊಂಟಕ್ಕೆ ಕಟ್ಟಿಕೊಂಡ. ಜನರ ಬೋಧ ತಪ್ಪಿಸುವ ಮದ್ದನ್ನು ತಾಯಿತದಲ್ಲಿ ತುಂಬಿಕೊಂಡು ಇದ್ದುದನ್ನು ಇಬ್ಬರೂ (ಕೇಳು ಮತ್ತು ಚುಂಡ) ತಮ್ಮ ಸೊಂಟಕ್ಕೆ ಕಟ್ಟಿಕೊಂಡರು. ಇಬ್ಬರೂ ಹೊರಟರು. ಆಗ ಕುಂಞಿಕುಂಕಿ ಕೇಳಿದಳು – ತಚ್ಚೋಳಿಯನಂತ್ರದವನಾದ ನನ್ನ ಗಂಡಾ! ನಾನು ನಿಮ್ಮನ್ನು ಇನ್ನು ಯಾವಾಗ ಕಾಣುವುದು? ಅದಕ್ಕೆ ಕುಂಞಿಕೇಳು ಎಂದ – ಕೊಯಿಲೂರು ಮನೆಯ ಕುಂಞಿಕುಂಕಿ! ವಯನಾಡನ್ ಕೇಳು ನನ್ನನ್ನು ಕೊಲ್ಲದೇ ಇದ್ದರೆ ಹಿಂದಿರುಗುವಾಗ ಈ ದಾರಿಯಾಗಿ ಬಂದೇನು ಕುಂಕಿ! ಕುಂಞಿಕೇಳು ಮೆಟ್ಟಿಲು ನೆಗೆದು ಓಡಿದ. ಹಾಗೆ ವೇಗವಾಗಿ ಸಾಗಿ ಅವರು ವಯನಾಡನ್ ಕೋಟೆಗೆ ತಲಪಿಯೇ ಬಿಟ್ಟರು. ಕೋಟೆ ಒಂದು ಊರಿಡೀ ಹಬ್ಬಿ ಬಿಟ್ಟಿದೆ. ಕೋಟೆಯನ್ನೆಲ್ಲ ಒಮ್ಮೆ ನಡೆದುನೋಡಿದರು. ನಾಲ್ಕು ಭಾಗವನ್ನೂ ನಡೆದು ನೋಡಿದರು. ಅವರು ಬಡಗು ಭಾಗಕ್ಕೆ ಬಂದು ನಿಂತರು. ಹಗ್ಗದಿಂದ ಕಟ್ಟಿ ಬಾಗಿಲು ಮುಚ್ಚಿರುವುದು ಕಂಡಿತು. ಅವರು ಎಡಭಾಗದ ಹಗ್ಗವನ್ನು ಬಿಚ್ಚಿಬಿಟ್ಟರು. ಹದಿನೆಂಟು ಬಾಗಿಲುಗಳೂ ತೆರೆದು ಕೊಂಡುವು. ಕೇಳು ಮದ್ದುತುಂಬಿದ ತಾಯಿತದ ಮುಚ್ಚಳ ತೆಗೆದ. ಅದರಲ್ಲಿನ ಹುಡಿಯನ್ನು ಹಾರಿಸಿಬಿಟ್ಟ, ಅಲ್ಲಿದ್ದವರೆಲ್ಲ ಗಾಢ ನಿದ್ರೆಗೆ ಬಿದ್ದರು. ಆಗ ಇವರು ಕಂಡಕಂಡವರನ್ನೆಲ್ಲ ಕೊಚ್ಚಿ ಹಾಕಿದರು. ಕೇಳು ಇದ್ದ ಕೋಣೆಗೆ ಪ್ರವೇಶಿಸಿದರು. ವಯನಾಡನ್ ಕೇಳು ದಿಗ್ಭ್ರಾಂತನಾದ. ಆತನೆಂದ – ಹದಿನೆಂಟು ಬಾಗಿಲಿಗೂ ಕಾವಲುಗಾರರಿದ್ದಾರೆ. ಅವರನ್ನೆಲ್ಲ ದಾಟಿ ಕಳ್ಳರು ಪ್ರವೇಶಿಸಿದ್ದಾರೆ. ಅದಕ್ಕೆ ತಚ್ಚೋಳಿ ಕೇಳು ಎಂದ – ವಯನಾಡನ್ ಕೇಳೂ! ಕಳ್ಳರೆಂದು ಹೀಯಾಳಿಕೆಯ ಮಾತು ಬೇಡ. ನಿನ್ನ ಕೋಟೆಯನ್ನು ಕಾಣುವುದಕ್ಕಾಗಿ ಬಂದವರು ನಾವು. ವಯನಾಡನ್ ಕೇಳು ಹೋರಾಟ ತೊಡಗಿದ. ಅವನು ಹಾಗೆ ಹೋರಾಟ ತೊಡಗಿದಾಗ ಅವನ ಮಕ್ಕಳು ಅಳಿಯಂದಿರು ಏಳು ಜನರೂ ಕೇಳುವನ್ನು ಕೂಡಿಕೊಂಡರು. ಚೆರುವಟ್ಟ ಚುಂಡ ಅವರನ್ನು ಇದಿರಿಸಿ ನಿಂತ. ವಯನಾಡನ್ ಕೇಳು ಮತ್ತು ತಚ್ಚೋಳಿ ಕೇಳು ಪರಸ್ಪರರನ್ನು ಇದುರಿಸಿದರು. ಚುಂಡ ಆ ಏಳು ಮಂದಿ ಮಕ್ಕಳು ಮತ್ತು ಅಳಿಯಂದಿರ ತಲೆಯನ್ನು ಹಾರಿಸಿದ. ತಚ್ಚೋಳಿಯನಂತರ ದವನಾದ ಕೇಳುವೂ ವಯನಾಡನ್ ಕೇಳುವಿನ ತಲೆ ಕಡಿದ. ಆಗ ಗುರುಕ್ಕಳ್ ಇವರನ್ನು ಎದುರಿಸಿ ಹೋರಾಟ ತೊಡಗಿದರು. ಹೋರಾಡುತ್ತ ಹೋರಾಡುತ್ತ ಕೇಳು ಚುಂಡನಿಂದ ದೂರಾದ. ಚುಂಡ ಹೋರಾಡುತ್ತ ಹೋರಾಡುತ್ತ ಬಳಲಿದ. ಕೆಲವರು ಗುರುಕ್ಕಳನ್ನು ಕೊಂದು ಚುಂಡ ಬಳಲಿಕೆಯಿಂದ ನೆಲಕ್ಕೊರಗಿದ. ತಚ್ಚೋಳಿಯನಂತ್ರದನಾದ ಕುಂಞಿಕೇಳು ಉಳಿದೆಲ್ಲರನ್ನೂ ಕೊಂದು ನೆಲಕ್ಕುರುಳಿಸಿದ. ಚುಂಡನನ್ನು ಕರೆಯುತ್ತ ಕರೆಯುತ್ತ ಕೋಟೆಯಿಡೀ ಸುತ್ತಾಡಿದ. ಎಲ್ಲಿಯೂ ಚುಂಡನ ಸುಳಿವಿಲ್ಲ.

ಅಷ್ಟರಲ್ಲಿ ಒದೇನ ಅಲ್ಲಿ ಕಾಣಿಸಿಕೊಂಡ. ಅಳಿಯ ಕುಂಞಿಕೇಳು ವಯನಾಡನ್ ಕೋಟೆ ನೋಡಬೇಕೆಂದು ಇಂದಿಗೆ ಒಂದು ವಾರದ ಹಿಂದೆ ಮನೆ ಬಿಟ್ಟು ತೆರಳಿದ್ದುದು ದುಃಖದಿಂದ ಚಾಪೆ ಹಿಡಿದಿದ್ದ ಉಣ್ಣಿಚಾರಳಿಂದ ಅವನಿಗೆ ತಿಳಿದಿತ್ತು. ಅವನು ನೆರಮಾಲದ ತಿರುಗಾಟ ಮುಗಿಸಿ ಊರಿಗೆ ಆಗತಾನೆ ಬಂದಿದ್ದ. ಸುದ್ದಿ ತಿಳಿದ ಕೂಡಲೇ ಅಪಾಯವನ್ನು ಗ್ರಹಿಸಿ ಒದೇನ ವಯನಾಡಿಗೆ ಧಾವಿಸಿ ಬಂದಿದ್ದ. ಮಾವನನ್ನು ಕಂಡದ್ದೇ ತಡ, ಕುಂಞಿಕೇಳು ಎಂದ – ಮಾಣಿಕೋತ್ತ್ ಮನೆಯ ಸಣ್ಣ ಮಾವ! ಚುಂಡ ಎಲ್ಲಿಯೂ ಕಾಣುತ್ತಿಲ್ಲ! ನನ್ನ ಒಡನಾಡಿ, ಪ್ರೀತಿಯ ಸಂಗಾತಿ ಚೆರುವಟ್ಟ ಚುಂಡ! ಒದೇನನೂ ಚುಂಡನನ್ನು ಹುಡುಕುತ್ತ ನಡೆದ. ಹಾಗೆ ಹುಡುಕುತ್ತ ನಡೆದಾಗ ಗುರುಕ್ಕಳನ್ನು ಕೊಚ್ಚಿ ಹಾಕಿದ್ದ ಜಾಗದಲ್ಲಿ ಚುಂಡ ಬಿದ್ದಿರುವುದು ಕಂಡಿತು. ಒದೇನ ಚುಂಡನನ್ನು ಎತ್ತಿಕೊಂಡ. ಚಾಪನನ್ನು ಕರೆದು ಅವನು ಹೇಳಿದ – ಕಂಡಾಚ್ಚೇರಿ ಚಾಪಾ! ನಮ್ಮನ್ನು ಈತ ಕಂಡರೂ ಮಾತನಾಡದಿರಲು ಅತಿಯಾದ ಬಳಲಿಕೆಯೇ ಕಾರಣ. ನೀನು ಕೂಡಲೇ ಎಳನೀರು ಕೊಯ್ದು ಕೆತ್ತಿ ತೆಗೆದುಕೊಂಡು ಬಾ. ಒದೇನ ಒಂದಿಷ್ಟು ಮರ್ಮಾಣಿಯನ್ನು ಜಜ್ಜಿದ. ಚುಂಡನಿಗೆ ಅದರ ರಸ ಒಂದಿಷ್ಟು ಕುಡಿಸಿ ನೀರು ಕುಡಿಸಿದ. ಚುಂಡನಿಗೆ ನಿಧಾನಕ್ಕೆ ಪ್ರಜ್ಞೆ ಮರಳಿತು. ಕೋಟೆಯಲ್ಲಿದ್ದ ಹೊನ್ನನ್ನೆಲ್ಲ ಹೊರೆಯಾಗಿ ಕಟ್ಟಿಸಿಕೊಂಡರು. ಮಾಣಿಕೋತ್ತ್‌ಗೆ ಹೊರಿಸಿದರು. ಮರಳುತ್ತ ಕೊಯಿಲೂರು ಮನೆಗೊಮ್ಮೆ ಹೋದರು. ಎಲ್ಲ ಸಂಗತಿಗಳನ್ನು ಕೇಳು ವಿವರವಾಗಿ ಹೇಳಿದ. ಹೊರೆಯಲ್ಲಿ ಅರ್ಧವನ್ನೂ ಕೊಯಿಲೂರು ಮನೆಯಲ್ಲಿ ಇಟ್ಟುಕೊಂಡು ಮರೆಸಿದರು. ಹದಿನೆಂಟು ಸಾಲು ಬಾಗಿಲುಗಳನ್ನು ತೆಂಗಿನ ಗರಿಗಳಿಂದ ಮುಚ್ಚಿದರು. ಕೇಳುವನ್ನೂ ಚುಂಡನನ್ನೂ ಒದೇನ ಮುಂಭಾಗದಲ್ಲಿ ನಡೆಸಿಕೊಂಡು ಹೋದ. ಕೇಳು ಕೊಯಿಲೂರು ಮನೆಗೆ ಹೋದ. ಅಲ್ಲಿಗೆ ಹೋದಾಗ ಅಲ್ಲಿನ ಹಿರಿಯವ್ವ ಹುಲ್ಲುಚಾಪೆಯನ್ನೂ ರೇಶ್ಮೆಯ ಬಟ್ಟೆಯನ್ನೂ ತಂದು ಹಾಸಿದಳು. ಬಳಿಕ ಕೇಳಿದಳು – ತಚ್ಚೋಳಿಯ ಒದೇನ ಕುರುಪ್ಪರೇ! ಇತ್ತ ಎಲ್ಲಿಗೆ ಬಂದಿದ್ದಿರಿ ಕುರುಪ್ಪರೇ? ಬೇರೆ ಎಲ್ಲಿಗಾದರೂ ಹೋಗುವುದಿತ್ತೇ, ಕುರುಪ್ಪರೇ? ಅದಕ್ಕೆ ಒದೇನ ಉತ್ತರಿಸಿದ – ಕೊಯಿಲೂರು ಮನೆಯ ಹಿರಿಯವ್ವ! ತಚ್ಚೋಳಿಯನಂತರದವನಾದ ಕುಂಞಿಕೇಳು ಇಂದು ಒಂದು ವಾರ ಹಿಂದೆ ಮನೆಯಿಂದ ಹೊರಟಿದ್ದ. ತಂಗಿ ಉಣ್ಣಿಚ್ಚಾರ ದುಃಖದಿಂದ ಕಂಗೆಟ್ಟಿದ್ದಾಳೆ. ಕೇಳುವನ್ನು ಹುಡುಕುತ್ತಾ ಹಾಗೆ ಹೊರಟವನು ನಾನು. ಹಾಗೆ ಹುಡುಕುತ್ತಾ ಹೊರಟಾಗ ವಯನಾಡನ್ ಕೇಳುವಿನ ಕೋಟೆಯಲ್ಲಿ ಅವನು ಕಾಣಸಿಕ್ಕಿದ. ಕೊಯೊಲೂರ ಕುಂಕಿಯ ಬೇಡಿಕೆಯಂತೆ ಅವರೆಲ್ಲ ಮೂರುದಿನ ಅಲ್ಲಿದ್ದು ತಚ್ಚೋಳಿಗೆ ಮರಳಿದರು.

ಎದುರಾಳಿಯ ತಲೆಕತ್ತರಿಸುವ ಖಡ್ಗ ಸಮೇತನಾಗಿ ಅಲ್ಲಿರುತ್ತೇನೆ

ತಚ್ಚೋಳಿ ಕಣ್ಮಣಿ ಬಾಲ ಒದೇನ ಒಂದು ದಿನ ಅಣ್ಣ ಕೋಮ ಕುರುಪ್ಪ್‌ನ ಬಳಿ ಹೋದ. ಬೋದಿಗೆಕಂಬದ ಮರೆಗೆ ನಿಂತು ನಾಲ್ಕು ಬೆರಳುಗಳಿಗೂ ಉಂಗುರ ಅಳವಡಿಸಿದ ಬಲಗೈಯನ್ನು ಬಾಯಿಗೆ ಅಡ್ಡ ಹಿಡಿದು ವಿನಯಪೂರ್ವಕ ಹೀಗೆಂದ – ಅಣ್ಣಾ ಒಲವಣ್ಣೂರ್ ಕಾವ್ ಭಗವತಿಗೆ ವರ್ಷಂಪ್ರತಿ ನಾವು ನಡೆಸುವ 'ಕಾವೂಟ್ಟುಂ' ಉತ್ಸವ ಹತ್ತಿರವಾಯಿತು. ದೇವಾಲಯದ ಮೂಡುಗೋಪುರ, ಗರ್ಭಗುಡಿಗಳ ಮುಂದೆ ಚಪ್ಪರ ಹಾಕಬೇಕು. ಎಲ್ಲಕಡೆ ತಳಿರು ತೋರಣ ಗಳಿಂದ ಅಲಂಕಾರವಾಗಬೇಕು. ಒಂದಷ್ಟು ಕೆಲಸಗಳು ಆಗಬೇಕಲ್ಲವೇ, ಅಣ್ಣಾ? ಅದಕ್ಕೆ ಕೋಮ ಕುರುಪ್ಪನೆಂದ – ತಮ್ಮಾ ಒದೇನ! ನೀನಂದುದು ನಿಜ ಮಗೂ! ಚಪ್ಪರದ ಕೆಲಸ ಕೂಡಲೇ ಪ್ರಾರಂಭ ವಾಗಬೇಕು. ಅದರ ಉಸ್ತುವಾರಿಯನ್ನು ನೀನೇ ನೋಡದಿದ್ದರೆ ಅದು ಸರಿಯಾಗಿ ನಡೆಯದು. ಅಂತೆಯೇ ಉಳಿದ ಕೆಲಸಗಳೂ. ಅಣ್ಣನ ಆಣತಿ ಪಡೆದು ಒದೇನನ ತನ್ನ ಸಹಚರ ಕಂಡಾಚ್ಚೇರಿ ಚಾಪ್ಪನನ್ನೂ ಜತೆಗೂಡಿಕೊಂಡು ಚಪ್ಪರದ ಕೆಲಸಗಳಿಗೆ ಅಗತ್ಯವಾದ ಸಾಮಾನು ಸರಂಜಾಮುಗಳನ್ನು ಕೆಲಸಗಾರರಿಂದ ತೆಗೆಯಿಸಿಕೊಂಡ. ಮರುದಿನ ಮುಂಜಾನೆಯಿಂದ ಕೆಲಸ ಆರಂಭವಾಯಿತು. ಬೆಟ್ಟದ ಮೇಲಿನ ಬಿದಿರ ಮೇಳೆಗಳಿಂದ ಚಪ್ಪರಕ್ಕೆ ಬೇಕಷ್ಟು ಬಿದಿರ ಕಂಬಗಳನ್ನು ಕಡಿದು ಸಾಗಿಸಿದರು. ಹೆಣೆಯೋಲೆಗಳ ಕಟ್ಟುಗಳ ರಾಶಿಗಳೆದ್ದುವು. ಸಾಮಾನ್ಯ ಒಂದು ತಿಂಗಳು ನಡೆಯುವ ಕೆಲಸ ಈ ಬಾರಿ ಒದೇನನ ವಿಶೇಷ ಕಾಳಜಿಯಿಂದಲೂ ಪ್ರಭುಶಕ್ತಿಯಿಂದಲೂ ಕೇವಲ ಎಂಟುದಿನಗಳಲ್ಲಿ ಸಂಪನ್ನವಾಯಿತು. ಚಪ್ಪರದ ಕೆಲಸ ಮುಗಿದುದರ ಸೂಚನೆಯಾಗಿ ಗರ್ನಾಲುಗಳ ಸದ್ದು ನೆಲಬಾನುಗಳನ್ನು ತುಂಬಿತು. ಗರ್ನಾಲು ಶಬ್ದ ಕೇಳಿದ್ದೇ ತಡ ಜನ ಗುಂಪು

ಗುಂಪಾಗಿ ಬರಲಾರಂಭಿಸಿದರು. ನಾಲ್ಕು ಅರಮನೆಗಳಿಂದ ಅರಸರೂ ರಾಣಿಯರೂ ಪಲ್ಲಕ್ಕಿ ಮೇನೆಗಳಲ್ಲಿ ಬಂದರು. ಎಲ್ಲ ಜನವರ್ಗಗಳ ಮುಖಂಡರೂ ತರವಾಡು ಹಿರಿಯರೂ ಹೆಂಗುಸರೂ ಮಕ್ಕಳೂ ಎಲ್ಲರೂ ಬಂದು ಸೇರಿದರು.

ಅದೇ ಹೊತ್ತಿಗೆ ಮದಿಲೂರ್ ಗುರುಕ್ಕಳ್ ತನ್ನ ಅನೇಕ ಮಂದಿ ಶಿಷ್ಯರೊಂದಿಗೆ ಬರುತ್ತಿರುವುದನ್ನು ಕಂಡ ಒದೇನ ಕಾಕ್ಕಾಡನ್ ಗುರುಗಳಲ್ಲಿ ಹೀಗೆಂದ – ಕಾಕ್ಕಾಡನ್ ಗುರುಕ್ಕಳೇ, ಅದೋ ಮದಿಲೂರು ಗುರುಗಳ ಸವಾರಿ. ನಾನು ಇಂದು ಅವರ ಜತೆ ಒರಟಾಗಿಯೇ ಮಾತಾಡುವೆ. ಕಾಕ್ಕಾಡನ್ ಗುರುಕ್ಕಳ್ ಹೇಳಿದರು – ಆಗದು! ಮಗೂ ಒದೇನ! ಮದಿಲೂರು ಗುರುಕ್ಕಳ್ ಎಂದರೆ ಸಾಮಾನ್ಯರೇ? ಸಾವಿರಾರು ಮಂದಿ ಶಿಷ್ಯರಿಗೆ ಅವರು ಗುರುಗಳು. ಹೆಚ್ಚೇಕೆ ನನಗೂ ನಿನಗೂ ನಿನ್ನ ಅಣ್ಣ ಕೋಮಕುರುಪ್ಪಿಗೂ ಅವರು ಗುರುಗಳು. ಅದಕ್ಕೆ ಒದೇನನೆಂದ – ಇರಬಹುದು. ಆದರೆ ಅವರು ಕುಲದಲ್ಲಿ ಕುಂಜಾರ. ಕುಂಜಾರನಿಗೆ ನನ್ನ ತಲೆ ನನ್ನ ದೇಹದ ಮೇಲೆ ನಿಂತಿರುವ ತನಕ ಬಾಗದು. ಅವರ ಮಾತು ಹೀಗೆ ಸಾಗುತ್ತಿದ್ದಂತೆಯೇ ಗುರುಕ್ಕಳ್ ದೇವಾಲಯದ ಬಳಿ ತಲಪಿದರು. ತಾನು ಹೊಸದಾಗಿ ಕಟ್ಟಿಸಿದ ಕೋವಿಯನ್ನು ಅವರು ಹಲಸಿನ ಕಂಬಕ್ಕೆ ಒರಗಿಸಿಟ್ಟು ಮುಂದೆ ಹೋಗಬೇಕೆಂಬಷ್ಟರಲ್ಲಿ ಒದೇನ ಅಲ್ಲಿಗೆ ಗರ್ವದ ಹೆಜ್ಜೆಗಳನ್ನು ಇಡುತ್ತ ಬಂದು ಆಕ್ಷೇಪದ ದನಿಯಲ್ಲಿ ಎಂದ – ಹೊನ್ನಕುಂತವನ್ನು ಇಡುವ ಹಲಸುಕಂಬದಲ್ಲಿ ಈಗ ಮಣ್ಣಕುಂತವನ್ನು ಇಟ್ಟದ್ದು ಯಾರು? ಆ ಮಾತಿಗೆ ಒಂದಿಷ್ಟು ನೋವಾದರೂ ಗುರುಕ್ಕಳ್ ಎಂದರು – ತಚ್ಚೋಳಿ ಒದೇನ! ಮಗೂ! ನಾನು ತಿಳಿಯದೆ ಇರಿಸಿಬಿಟ್ಟೆ. ನೀನು ಅದನ್ನು ಬೇರೆ ಎಲ್ಲಿಯಾದರೂ ಇಡಬಹುದು. ಒದೇನ ಕೋವಿಯನ್ನು ಅತ್ತಿತ್ತ ಹೊರಳಿಸಿ ನೋಡಿ ಗಟ್ಟಿಯಾಗಿ ಹೀಗೆ ಹೇಳಿದ – ಗುರುಕ್ಕಳೇ, ನೀವು ಹೊಸದಾಗಿ ಮಾಡಿಸಿದ ಕೋವಿ ನವಿಲು ಬೇಟೆಗೆ ಹೇಳಿ ಮಾಡಿಸಿದ ಹಾಗಿದೆ. ಮದಿಲೂರ್ ಗುರುಕ್ಕಳ್ ಅದಕ್ಕೆ ಉತ್ತರವಿತ್ತರು – ಒದೇನ! ತುಂಬ ಜನ ನೆರೆದಿರುವ ಈ ಜಾಗದಲ್ಲಿ ನೀನು ನನ್ನ ಜಾತಿಯ ಹೆಸರೆತ್ತಿದೆ. ವಿನಾಕಾರಣ ಕೋವಿಯನ್ನು ಹೀಯಾಳಿಸಿದೆ. ನಿನಗೆ ಅಹಂಕಾರ ನೆತ್ತಿಗೇರಿತು. ನಮ್ಮಿಬ್ಬರಲ್ಲಿ ಯೋಗ್ಯರು ಯಾರು ಅಯೋಗ್ಯರು ಯಾರು ಎಂಬುದನ್ನು ಪೊನ್ನಿಯಂನ ಆಲದ ಅಂಗಣ ತೀರ್ಮಾನಿಸಲಿ. ನಿನಗೆ ಆಸೆಯಿದ್ದರೆ ನವಿಲಿಗೆ ಗುಂಡು ಹೊಡೆಯಲು ನೀನು ಅಲ್ಲಿಗೆ ಬಾ. ನಾನು ನವಿಲಾಗಿ ಬರುವೆ. ಸೋಗೆ ನವಿಲಾದರೆ ಅಲ್ಲಿ ಗರಿಗೆದರಿ ಕುಕಿಲುವೆ. ಹೆಣ್ಣುನವಿಲಾದರೆ ಬಾಲ ಅಲ್ಲಾಡಿಸಿ ಅಲ್ಲಿಂದ ಮರೆಯಾಗುವೆ. ಆಗ ನಿನ್ನ ಇಷ್ಟದಂತೆ ಗುಂಡು ಹೊಡೆದುಕೊ. ಆ ಮಾತಿಗೆ ಒದೇನ ಕೇಳಿದ – ಮದಿಲೂರು ಗುರುಕ್ಕಳೇ! ನೀವು ಈಗ ಆಡಿದ ಮಾತು ತಿರುಳುಳ್ಳದ್ದೋ, ಹೊತ್ತುಕಳೆಯುವುದಕ್ಕೆ ಆಡಿದ್ದೋ? ತಿರುಳುಳ್ಳದ್ದಾದರೆ ಜಾಗ

ನಿಶ್ಚೈಸಿದ ಹಾಗೆಯೇ ದಿನವನ್ನೂ ನಿಶ್ಚೈಸಿ ಬಿಡಿ. ಅದಕ್ಕೆ ಗುರುಕ್ಕಳ್ ಹೇಳಿದರು – ಇದು ತಿರುಳುಳ್ಳ ಗಂಡವಾತು! ಹೊತ್ತುಕಳೆಯಲು ಆಡಿದ್ದಲ್ಲ. ನಿನಗೆ ದಿನವೂ ನಿಶ್ಚಯವಾಗಬೇಕಲ್ಲವೆ? ಇದೇ ಬರುವ ಕುಂಭಮಾಸ ಒಂಭತ್ತು ಹತ್ತು ಹನ್ನೊಂದು ಈ ಮೂರು ದಿನಗಳಲ್ಲಿ ಪೊನ್ನಿಯಾಲದ ಅಂಗಣದಲ್ಲಿ ನಮ್ಮ ಹೋರಾಟ. ಒಂಭತ್ತು ಬುಧವಾರ. ಒಳ್ಳೆಯ ದಿನ ಕೂಡ. ಅಂದಿನ ದಿನ ನೀನು ಸಿದ್ಧನಾಗಿ ಬಾ! ಆ ಮಾತು ಗಳಿಗೆ ಒದೇನ ಹೀಗೆ ಉತ್ತರಿಸಿದ – ಗುರುಕ್ಕಳೇ! ನನಗೆ ತಿಂಗಳು ತಿಂಗಳು ಮೂರು ದಿನದ ಸ್ನಾನವೂ ವರ್ಷ ಕ್ಕೊಂದಾವರ್ತಿ ಹೆರಿಗೆಯೂ ಇದೆಯಲ್ಲ! ನೀವು ಹೇಳಿದ ದಿನಗಳಲ್ಲಿ ನಾನು ಮುಟ್ಟಾಗಿಯೋ ಬಾಣಂತಿಯಾಗಿಯೋ ಇಲ್ಲವಾದರೆ ಎದುರಾಳಿಯ ತಲೆಕತ್ತರಿಸುವ ಖಡ್ಗಸಮೇತನಾಗಿ ಅಲ್ಲಿ ಇದ್ದೇ ಇರುತ್ತೇನೆ! ಸೇರಿದ ಜನ ಸ್ತಬ್ಧರಾದರು. ಮೆಲ್ಲಗೆ ಒಬ್ಬೊಬ್ಬರೇ ಅಲ್ಲಿಂದ ಹೊರಟು ಹೋದರು. ಮದಿಲೂರು ಮನೆಯಲ್ಲೂ ತಚ್ಚೋಳಿ ಮೇಪ್ಪದಲ್ಲೂ ತಲ್ಲಣದ ಕ್ಷಣಗಳು ಮೂಡಿ ಮರೆಯಾಗಲಾರಂಭಿಸಿದುವು.

ಮರುದಿನ ಬೆಳಗ್ಗೆ ಒದೇನ ಅಣ್ಣನಿಗೆಂದ – ತಚ್ಚೋಳಿ ಮನೆಯ ನನ್ನಣ್ಣ! ಪೊನ್ನಿಯಂ ಮೂರ್ನಾಳು ಹತ್ತಿರವಾಯಿತು. ರೇಶ್ಮೆಯಾಗಿಯೂ ರೇಶ್ಮೆಯ ನೂಲಾಗಿಯೂ ಮುನ್ನೂರು ಹಣದ ಸಾಮಾನುಗಳು ನನಗೆ ಬೇಕು. ಕೋಝಿಕ್ಕೋಡ್ ಅಂಗಡಿಗೆ ಹೋಗಬೇಕು. ಅದನ್ನು ಕೇಳಿದ ಕೋಮ ಕುರುಪ್ಪೆಂದ – ಓೇನ! ಕೋಝಿಕ್ಕೋಡ್ ಅಂಗಡಿಗೆ ಹೋಗಲೇಬೇಕಾದರೆ ನೀನು ಪುಲಿಮುಂಡಕ್ಕಾಡ್ ದಾರಿಯಾಗಿ ಹೋಗಬಾರದು. ಪುಲಿಮುಂಡಕ್ಕಾಡ್ ಚಾತು ಕುರುಪ್ಪ್ ಅಲ್ಲಿದ್ದಾನೆ. ಅವನ ಹನ್ನೊಂದು ಮಂದಿ ತಮ್ಮಂದಿರೂ ಅವನೂ ನಿನ್ನಲ್ಲಿ ಸುಂಕದ ಹಣ ವಸೂಲು ಮಾಡಲು ಬರುತ್ತಾರೆ. ನೀನಾದರೋ ಮುಂಗೋಪಿ. ಚಾತು ಕುರುಪ್ಪಲ್ಲಿ ತಾಗದೆ ಇರಲಾರೆ. ಅವನಲ್ಲಿ ತಾಗಿದವರಾರೂ ತನ್ನ ಮನೆಗೆ ಮರಳಿ ಬಂದು ಸತ್ತವರಿಲ್ಲ. ಅಷ್ಟು ಮಾತ್ರವಲ್ಲ, ಕೇಳು. ಕೋಝಿಕೋಡು ಅಂಗಡಿಗೆ ಹೋಗುವುದಿದ್ದರೆ ಅಂದೇ ಹೋಗಿ ಅಂದೇ ಮರಳಿ ಬರಬೇಕು. ನೀನು ಹಾಗೆ ಬರುವವನಲ್ಲ. ರಾತ್ರೆ ಊಟಕ್ಕೆ ನಿನಗೆ ಎಲ್ಲಿ ವ್ಯವಸ್ಥೆ? ಅದಕ್ಕೆ ಒದೇನ ಏನೂ ಉತ್ತರಿಸಲಿಲ್ಲ. ಕೋಮಕುರುಪ್ಪ್ ಮುಂದುವರಿಸಿದ– ಹೇಳುವುದನ್ನು ಕಿವಿಗೊಟ್ಟು ಕೇಳು, ತಮ್ಮಾ! ಅಲ್ಲಿ ಇಲ್ಲಿಕಲ್ಲು ಮನೆ ಎಂಬ ಒಂದು ಮನೆಯಿದೆ. ಕೋಳಿಕ್ಕಾಲಿ ಎಂಬ ಇನ್ನೊಂದು ಮನೆ ಇದೆ. ನೀನು ಇಲ್ಲಿಕ್ಕಲ್ ಮನೆಗೆ ಹೋಗಬೇಡ. ಕೋಳಿಕ್ಕಾಲಿ ಮನೆಗೆ ಹೋಗು. ಅದು ನಮ್ಮದೇ ಮನೆ. ನಾನ ಹೇಳಿದ ಯಾವುದನ್ನೂ ಮರೆಯಬಾರದು. ಒದೇನ ಹಾಂ ಎಂದು ಒಪ್ಪಿದ. ಅವನು ಚಾಪನನ್ನೂ ಕರೆದು ಬೇಗ ಸಿದ್ಧವಾಗಲು ಹೇಳಿದ. ತೆಂಕು ಕೋಣೆಗೆ ಹೋಗಿ ಕಾಸಿದ ಎಣ್ಣೆಯ ಬಿದಿರಕುತ್ತಿ ತೆಗೆದುಕೊಂಡ. ಅದರಿಂದ ಎಣ್ಣೆಯ ತಟ್ಟೆಗೆ ಎಣ್ಣೆ ಸುರಿದುಕೊಂಡ. ಎಣ್ಣೆಹಲಗೆಯಲ್ಲಿ

ಕುಳಿತು ಧಾರಾಳ ಎಣ್ಣೆಯನ್ನು ಮೈಗೂ ತಲೆಗೂ ಲೇಪಿಸಿಕೊಂಡ. ಸ್ವಲ್ಪ ಹೊತ್ತಾದ ಬಳಿಕ ಬಾಗೆಯ ಹುಡಿಯನ್ನೂ ಗೊಂಪನ್ನೂ ತೆಗೆದುಕೊಂಡು ಕೊಳಕ್ಕೆ ಹೋಗಿ ಗೊಂಪನ್ನು ಸೋಸಿ ತಲೆಗೆ ಹಚ್ಚಿ ತಿಕ್ಕಿ ತೊಳೆದುಕೊಂಡ. ಬಳಿಕ ಬಾಗೆಹುಡಿಯನ್ನು ಚೆನ್ನಾಗಿ ಮೈಗೆ ಹಚ್ಚಿಕೊಂಡು ಕೆರೆಯಲ್ಲಿ ಮುಳುಕು ಹಾಕಿ ಮಿಂದ. ಕೊಳದ ದಡದ ಪ್ರಾರ್ಥನೆಯ ಕಲ್ಲಲ್ಲಿ ನಿಂತು ನೂರೊಂದು ಬಾರಿ ದೇವರ ನಾಮ ಜಪಿಸಿದ.

ಆಮೇಲೆ ಒಳಗೆ ಹೋದ. ಆ ಬಳಿಕ ಗಂಧದ ಕಲ್ಲಿನ ಹತ್ತಿರ ಬಂದು ಕುಳಿತುಕೊಂಡ. ಬೆಳಗಿದ ಹಿತ್ತಾಳೆಯ ಗಿಂಡಿಯಿಂದ ನೀರು ಸುರುವಿಕೊಂಡು ಗಂಧದ ಕೊರಡನ್ನು ತೇದ. ಕಲ್ಲಿನಿಂದ ಅದನ್ನು ಸೀಟಿ ತೆಗೆದು ಅದಕ್ಕೆ ಒಳ್ಳೆಯ ಕಳಭ, ಕಸ್ತೂರಿ, ಕೋಝಿ ಕ್ಕೋಡ್ ಚಾಂದ್, ಚಂದನಗಳನ್ನು ಬೆರೆಸಿ ಚೆನ್ನಾಗಿ ಮಿಶ್ರಮಾಡಿದ. ಅದರಿಂದ ಐದು ನಾಯರ್ ಬೊಟ್ಟುಗಳನ್ನು ಇಟ್ಟುಕೊಂಡ. ಕಡತ್ತುವೈನಾಡಿನ ಗೆರೆಯೆಳೆದುಕೊಂಡ. ಬಳಿಕ ಅಲ್ಲಿಂದ ಎದ್ದು ಒಳಗೆ ಹೋದ. ಅಲ್ಲಿ ರೇಶ್ಮೆ ಬಟ್ಟೆ ಹೊದೆಸಿದ ಪೆಟ್ಟಿಗೆಯನ್ನು ತೆರೆದು ಓಟೆಬಿದಿರ ತುಂಡಿನೊಳಗೆ ಸುರುಟಿ ಇರಿಸಿದ ವಿಶೇಷ ರೇಶ್ಮೆಬಟ್ಟೆಯನ್ನು ತೆಗೆದು ಉಟ್ಟುಕೊಂಡ. ಬಳಿಕ ಬಂಗಾರದ ಪೆಟ್ಟಿಗೆಯನ್ನು ತೆರೆದು ಕೋಟೆಯನ್ನು ಚಿತ್ರಿಸಿರುವ ಕಡಗವನ್ನು ಬಲಕೈಗೆ ಹಾಕಿಕೊಂಡ. ನಾಲ್ಕು ಬೆರಳುಗಳಿಗೂ ಉಂಗುರವನ್ನೂ ಮುಂಗೈ ಸರಪಳಿಯನ್ನೂ ಧರಿಸಿದ. ಬಳಿಕ ಸೊಂಪಾಗಿ ಬೆಳೆಸಿದ್ದ ತಲೆ ಕೂದಲನ್ನು ವೀರಾಳಿಪಟ್ಟೆಯಿಂದ ಬಿಗಿದ. ಕುಸುರಿ ಕೆಲಸ ಮಾಡಿದ್ದ ಹೊನ್ನ ಕತ್ತಿಯನ್ನೂ ಹೊನ್ನ ಸಂಕಲೆಯನ್ನೂ ಧರಿಸಿದ. ಹೊಂಗರಕನ ಮರ ಹೂತಂತೆ, ಬಿಸಿಲಿಗೆ ಅರಳೆ ಅರಳಿ ಕೊಂಡಂತೆ ಅಲಂಕೃತನಾಗಿ ಕುಳಿತ. ತೆಂಕಣಗಾಳಿ ಬೀಸುವ ಹೂದಿಣ್ಣೆಯ ಮೇಲೆ ಗಾಳಿಗೆ ಮೈಯೊಡ್ಡಿ ಕುಳಿತ. ತುಂಬ ಹೊತ್ತಿನ ಬಳಿಕ ಎದ್ದು ಒಂದು ದೀರ್ಘ ನಿಟ್ಟುಸಿ ರೆಳೆದುಕೊಂಡು ನಿಧಾನವಾಗಿ ತೆಂಕುಕೋಣೆಯ ಒಳಗೆ ಸರಿದುಕೊಂಡ.

ಕೊಲೆನೆಲದಲ್ಲಿ ಒಂದು ಕ್ಷಣವೂ ನಿಲ್ಲಬಾರದು

ಒಂದಿಷ್ಟು ಹೊತ್ತಿನ ಬಳಿಕ ಮಧ್ಯಾಹ್ನದ ಊಟವನ್ನು ಬೇಗನೆ ತೀರಿಸಿಕೊಂಡು ಕಂಡಾಚ್ಚೇರಿಯನ್ನು ಕರೆದುಕೊಂಡು ಒದೇನ ಕೋಝಿಕ್ಕೋಡಿಗೆ ಹೊರಟ. ಮುಂದೆ ಕಂಡಾಚ್ಚೇರಿ ಹಿಂದೆ ಒದೇನ. ಹಾಗೆ ನಡೆಯುತ್ತ ಅವರು ಪುಲಿಮುಂಡಕ್ಕಾಡಿಗೆ ತಲಪಿದರು. ಒದೇನನನ್ನು ಕಣ್ಣಾರೆ ಕಂಡ ಚಾತು ಮತ್ತು ತಮ್ಮಂದಿರು ಅವನ ಮುಂದೆ ಕಾಣಿಸಿ ಕೊಂಡರು. ಸುಂಕದ ಹಣ ಕೊಡುವಂತೆ ಚಾತು ಒದೇನನನ್ನು ಬಲವಂತ ಮಾಡಿದ. ಒದೇನನೆಂದ – ಪುಲಿಮುಂಡಕ್ಕಾಡ್ ಚಾತುಕುರುಪ್ಪೇ! ಪೊನ್ನಿಯಂ ಮೂರ್ನಾಳ್ ಹತ್ತಿರಬಂತು. ನನ್ನಲ್ಲಿ ಇವೆಲ್ಲ ತಗಾದೆ ಎತ್ತಬೇಡ. ನಿನಗೆ ಅಷ್ಟೊಂದು ಹಣದ ಆಸೆ ಇದ್ದರೆ ನೀನು ನಾವಿದಬಾಳು ಸಮೇತ ನನ್ನಲ್ಲಿಗೆ ಬರಬಹುದು. ಆ ಮಾತಿನ ಖಾರ ತಾಗಿದ ಚಾತು ಮತ್ತು ತಮ್ಮಂದಿರು – ಉದ್ಧಟತನದ ಮಾತಾಡಿದವನನ್ನು ಹಿಡಿದು ಕಟ್ಟಬೇಕು ಎನ್ನುತ್ತಾ ಒದೇನನನ್ನು ಸುತ್ತುವರಿದರು. ಒದೇನ ಕ್ರೋಧದಿಂದ ಕಂಪಿಸು ತ್ತಿದ್ದವನು ಒಮ್ಮೆ ತಲೆ ಎತ್ತಿ ಬಾನನ್ನು ನೋಡಿದ. ಒಮ್ಮೆ ಭೂಮಿಯನ್ನೂ ನೋಡಿದ. ನಿಂತಲ್ಲಿಂದಲೇ ಒಂದು ಲಾಗ ಹೊಡೆದವನ ಕಾಲುಗಳು ಪುನಃ ನೆಲದಲ್ಲಿ ನಿಲ್ಲುವುದರ ಒಳಗಾಗಿ ಹುಲಿಗಳ ಹಾಗೆ ಬಂದಿದ್ದ ಹನ್ನೊಂದು ಪಂದಲೆಗಳು ಉರುಳಾಡುತ್ತಿದ್ದುವು.

ಪುಲಿಮುಂಡಕ್ಕಾಡಿನಿಂದ ತಡಮಾಡದೆ ಒದೇನನೂ ಕಂಡಾಚ್ಚೇರಿಯೂ ಮುಂದೆ ತೆರಳಿದರು. ಆಗ ಕದಿರೂರ್ ಚುಂಡ ಪೆರುಮಲಯ ಅವನ ಇಪ್ಪತ್ತೆರಡು ಮಂದಿ ಹುಡುಗ ರೊಂದಿಗೆ ಗುಂಪುಗೊಂಡು ಸೊಕ್ಕಿನಿಂದ ಮುಂಡೇಳುತ್ತ ಆ ದಾರಿಯಾಗಿ ಬರುತ್ತಿದ್ದ. ಹೊಳೆಯ ದಂಡೆಗೆ ತಲಪಿದಾಗ ಚಾಪ್ಪನನ್ನೂ ಒದೇನನನ್ನೂ ಕಂಡು ಪೆರುಮಲಯ ಕರೆದು ಹೇಳಿದ – ಲೋ! ನನ್ನ ಇಪ್ಪತ್ತೆರಡು ಮಕ್ಕಳೇ! ಕೇಳಿರಿ ಕೇಳಿರಿ. ತಚ್ಚೋಳಿ ಚಿಕ್ಕ ಕುರುಪ್ಪನ 'ಪೊನ್ನಿಯಂ ಮೂರ್ನಾಳು' (ಪೊನ್ನಿಯಂ ಎಂಬಲ್ಲಿ

ನಿಶ್ಚೈತವಾದ ಮೂರು ದಿನದ ಹೋರಾಟ) ಹತ್ತಿರವಾಯಿತು. ಆ ಕಣದಲ್ಲಿ ಭತ್ತದ ತೆನೆಹೊಡೆದು ಗಿಣಿ ಹಾರುವಂತೆಯೂ ಕಾರೆಯಿಂದ ಅಪ್ಪವನ್ನು ಚುಚ್ಚಿ ತೆಗೆಯುವಂತೆಯೂ ಹಪ್ಪಳವನ್ನು ಕಾಸಿ ತೆಗೆಯುವಂತೆಯೂ ನಾನು ತಾನೆಂದು ಸ್ಪರ್ಧೆಯಿಂದ ನೀವು ಒದೇನನ ತಲೆಕಡಿಯಬೇಕು. ಖಡ್ಗವನ್ನು ಧರಿಸಿ ತಣತಣವೆಂದು ಕುಣಿಯುವ ಮಾಂಸ ಖಂಡಗಳುಳ್ಳ ತೋಳುಗಳೊಂದಿಗೆ ನಾವು ಅಲ್ಲಿಗೆ ಹೋಗೋಣ. ಈ ಮಾತುಗಳನ್ನು ಕೇಳಿ ನಿದ್ರಿಸುತ್ತಿದ್ದ ಒದೇನನನ್ನು ಚಾಪ ಕರೆದೆಬ್ಬಿಸಿದ. ಪೆರುಮಲಯನ ಕೆಣಕುಮಾತು ಗಳನ್ನೂ ಒದೇನನಿಗೆ ನಿವೇದಿಸಿದ.

ಒದೇನನ ರಕ್ತ ಬಿಸಿಯೇರಿತು. ಅವನು ಪೆರುಮಲಯನನ್ನು ಕರೆದು ಹೇಳಿದ – ಎಲೋ ಕದಿರೂರು ಚೂಂಡ ಪೆರುಮಲಯಾ! ನೀನಿತ್ತ ಬಾ. ಪೊನ್ನಿಯಕ್ಕೆ ಆಮೇಲೆ ಹೋಗುವೆಯಂತೆ. ನಾವು ಇಲ್ಲೇ ಒಮ್ಮೆ ನಮ್ಮ ಚಾತುರ್ಯವನ್ನು ಒರೆಗೆ ಹಚ್ಚೋಣ. ತೆನೆ ಹೊಡೆಯುವ, ಕಾರೆಯಿಂದ ಅಪ್ಪ ಕುತ್ತಿ ತೆಗೆವ, ಹಪ್ಪಳ ಕಾಸಿ ತೆಗೆವ ನಿನ್ನ ಕೌಶಲವನ್ನು ನಾನೂ ಕಾಣಬೇಕು. ಅದಕ್ಕೆ ಮರುಮಲಯ ವ್ಯಂಗ್ಯದಿಂದ ಹೇಳಿದ – ಅದಕ್ಕೇನಂತೆ, ಸಿದ್ಧವೇ ಇದ್ದೇನೆ ಒಡೆಯರೇ!

ಇಬ್ಬರೂ ಹೋರಾಡಲು ಸಿದ್ಧರಾದರು. ಇಬ್ಬರೂ ಉರ್ಮಿ ಗುರಾಣಿಗಳನ್ನು ನಮಸ್ಕರಿಸಿ ಎತ್ತಿಕೊಂಡರು. ಮೂಡುಪಡುವಾಗಿ ನಿಂತು ಕಟ್ಟದ ಕೋಳಿಗಳಂತೆ ಹಾರಿ ಎಗರಿ ತುಂಬಹೊತ್ತು ಸೆಣಸಿದರು. ನೆರಳಿನೊಂದಿಗೆ ಹೋರಾಡಿದಂತಾಗಿ ಯಾರಿಗೂ ಸೋಲವೂ ಗೆಲವೂ ದೊರೆಯದಾಯಿತು. ಇಬ್ಬರ ಮೈಯಲ್ಲೂ ಒಂದು ಸಣ್ಣ ಗೀರುಗಾಯ ಕೂಡ ಆಗಲೂ ಇಲ್ಲ. ಒದೇನನಿಗೆ ಒಂದಿಷ್ಟು ಆಯಸವಾದಂತಾಗಲು ಅವನು ಚಾಪನನ್ನು ಕರೆದು ಹೇಳಿದ – ಇದೆಂಥ ವಿಚಿತ್ರ ಚಾಪ್ಪ! ಒಂಟಿ ಚಲನೆ ಮಾಡಿಯೂ ಕುಣಿದಾಡಿಯೂ ಸರಿದಾಡಿಯೂ ಹೆಚ್ಚೇಕೆ, ಕಲಿತ ಎಲ್ಲಾ ಪಟ್ಟುಗಳನ್ನು ಪ್ರಯೋಗಿಸಿಯೂ ಅವನನ್ನು ಗೆಲ್ಲಲು ಸಾಧ್ಯವಾಗುತ್ತಿಲ್ಲ. ಚಾಪ್ಪ ಒದೇನನಿಗೆಂದ – ನನ್ನ ಧನೀ! ನಾವು ಚಿಕ್ಕಂದಿನಲ್ಲಿ ಬರೆಹ ಕಲಿಯಲು ಹೋಗುತ್ತಿದ್ದಾಗ ಇದೇ ಹೊಳೆಯ ದಂಡೆಯ ಮಣಲ ರಾಶಿಯ ದಾರಿಯಾಗಿ ಹೋಗುತ್ತಿದ್ದೆವಲ್ಲವೇ? ಚಾಪ್ಪನ ಮಾತಿನ ಗೂಡಾರ್ಥ ಥಟ್ಟನೆ ಒದೇನನಿಗೆ ತಿಳಿಯಿತು. ಕೂಡಲೇ ಒದೇನನು ಪಾದದ ತಟ್ಟಿನಿಂದ ಮರಳನ್ನು ಹಾರಿಸಿ ಅತ್ಯಂತ ರಭಸದಿಂದ ಪೆರುಮಲೆಯನ ಮುಖಕ್ಕೆ ಒದೆದ. ಮಲಯನ ಕಣ್ಣುಗಳೊಳಗೆ ಮರಳ ಕಣಗಳು ಸೇರಿಕೊಂಡು ಅವನಿಗೆ ಅತೀವ ವೇದನೆಯೂ ದಿಗ್ಭ್ರಮೆಯೂ ಉಂಟಾದುವು. ಅವನು ಕಣ್ಣುಗಳನ್ನು ಉಜ್ಜುತ್ತಾ ಸುಧಾರಿಸಿಕೊಳ್ಳುವಷ್ಟರಲ್ಲಿ ಒದೇನನು ಇನ್ನೊಂದು ಏಟು ಹೊಡೆದ. ಪೆರುಮಲೆಯನು ದಂಡವು ಉರುಳುವಂತೆ ನೆಲಕ್ಕುರುಳಿದ. ಅದೇ

ಸಂದರ್ಭವನ್ನು ಸಾಧಿಸಿ ಒದೇನನು ಅವನ ಎರಡು ಕೈಗಳನ್ನೂ ಕಡಿದು ಹಾಕಿದ, ಕಣ್ಣುಗಳೆರಡನ್ನೂ ತೋಡಿ ತೆಗೆದ, ನಾಲಿಗೆಯನ್ನು ಕತ್ತರಿಸಿ ನೆಲಕ್ಕೆ ಹಾಕಿದ. ಅವನು ಪೆರುಮಲಯನಿಗೆಂದ – ಏನೆಲೋ ಪೆರುಮಲಯ! ತೆನೆಹೊಡೆದು ಹಾರುವ, ಕಾರೆ ಯಿಂದ ಅಪ್ಪವನ್ನು ಕುತ್ತಿ ತೆಗೆಯುವ, ಹಪ್ಪಳವನ್ನು ಸುಟ್ಟು ಹಾಕುವ ಕ್ರಿಯೆಗಳೆಲ್ಲ ಹೇಗೆ ನಡೆದುವು? ಎಲ್ಲ ಸಾಂಗವಾಗಿ ನೆರವೇರಿದುವಷ್ಟೆ? ಪೆರುಮಲಯ ನೆಲಕ್ಕೆ ಬಿದ್ದುದನ್ನು ಕಂಡ ಅವನ ಸಂಗಾತಿಗಳೆಲ್ಲ ಸತ್ತೆವೋ ಕೆಟ್ಟೆವೋ ಎಂದು ಕಾಲಿಗೆ ಬುದ್ಧಿ ಹೇಳಿದರು. ಚಾಪ್ಪನಿಗೆ ಒದೇನನೆಂದ – ಕಂಡಾಚೇರಿಯ ಪ್ರಿಯ ಚಾಪ್ಪಾ! ಕೊಲೆ ನೆಲದಲ್ಲಿ ಒಂದು ಕ್ಷಣವೂ ನಿಲ್ಲಬಾರದು ಎಂಬುದು ಅನುಭವಿಗಳ ಮಾತು. ನಾವು ಇಲ್ಲಿ ಇನ್ನೊಂದು ಕ್ಷಣಕೂಡ ನಿಲ್ಲುವುದು ಬೇಡ. ಹಾಗೆ ಅವರು ವೇಗವಾಗಿ ನಡೆಯುತ್ತ ಅಲ್ಲಿಂದ ದೂರವಾದರು.

ಮುಕ್ಕಾಲು ಗಾವುದ ನೆಲ ರಣೋತ್ಸಾಹದಿಂದ ಪುಳಕವೆದ್ದಿತು

ಪೊನ್ನಿಯಂ ಮೂರ್ನಾಳು ದಿನ ಹತ್ತಿರವಾಗುತ್ತ ಬಂತು. ಒಂದು ದಿನ ಕೋಮ ಕುರುಪ್ಪ್ ತಮ್ಮನನ್ನು ಹತ್ತಿರ ಕರೆದು ಹೇಳಿದ – ತಚ್ಚೋಳಿ ಕಣ್ಮಣಿ ಬಾಲ ಒದೇನ! ನನ್ನ ತಮ್ಮ! ಪೊನ್ನಿಯಂ ಪಡೆಯ ದಿನ ಸಮೀಪಿಸಿದೆ. ಸಿದ್ಧತೆಗಳು ಇನ್ನೂ ತುಂಬಾ ಉಳಿದಿವೆ. ನಾಲ್ಕು ಅರಮನೆಗಳಿಗೂ ಮರ್ಯಾದೆ ಪ್ರಕಾರ ಓಲೆ ಕಳುಹಿಸಬೇಕು. ಇಾಲಿಕ್ಕರದ ಚಂದು, ಪನಂಜಾಡನ್ ಚಂದು, ಕೋಟಕ್ಕಲ್ ಅಹಮ್ಮದ್ ಮರಕ್ಕಾರ್, ಹೊಸ ಅರಮನೆಯ ಅರಸುಗಳು, ಕೋಯಿಲೋತ್ತ್ ಕೋಮಪ್ಪನ್ ನಂಬ್ಯಾರ್, ತೋಟತ್ತಿಲ್ ಕೇಳಪ್ಪನ್, ಚೇನಂ ವೀಟ್ಟಿಲ್ ವಾಬುನ್ನವರ್ – ಮುಂತಾದ ಮಹನೀಯರಿಗೆ ಹೇಳಿಕೆ ಆಗಬೇಕು. ಅಣ್ಣನ ಸೂಚನೆಯನ್ನು ಕೇಳಿ ಅವನು ಮೊದಲು ಒಲವಣ್ಣೂರ್ ಕಾವ್‌ಗೆ ಹೋದ. ಕಂಡಾಚ್ಚೇರಿಯೂ ಜತೆಗಿದ್ದ. ಅಲ್ಲಿಗೆ ಹೋಗಿ ಗರ್ಭಗುಡಿಯ ಬಾಗಿಲು ತೆರೆಯಿಸಿ ಏಳುತಟ್ಟಿನ ಚಿನ್ನದ ಕಾಲುದೀಪ ಉರಿಸಿ ಒದೇನ ಭಗವತಿಯ ಮುಂದೆ ನಿಂತಾಗ ದೇವಿಯ ಪಾತ್ರಿಗೆ ಆವೇಶವುಂಟಾಗಿ ಈ ಮಾತು ಬಂತು – ನನ್ನನ್ನು ಒಡಗೊಂಡು ಹೋಗಬೇಕೆಂಬ ಬಯಕೆಯೆ ಪಡೆನಾಯಕಾ? ನಿನಗೀಗ ಮೂವತ್ತೆರಡು ವರ್ಷಪ್ರಾಯ. ಇಷ್ಟರಲ್ಲೇ ನೀನು ಅರುವತ್ತನಾಲ್ಕು ಬಾರಿ ಪಡೆಗಾಳಗದಲ್ಲಿ ಗೆದ್ದವನಿದ್ದಿ. ಅಲ್ಲೆಲ್ಲ ನಾನು ಜತೆಯಾಗಿ ನಿನ್ನ ಜತೆಗಿದ್ದೆ! ನಿನಗೀಗ ಗ್ರಹಚಾರದೋಷದ ಕಾಲ. ಜನ್ಮರಾಶಿಯಲ್ಲಿ ಶನಿ. ಆದುದರಿಂದ ಈ ಸಂದರ್ಭದಲ್ಲಿ ನೀನು ಪೊನ್ನಿಯಕ್ಕೆ ಹೋಗಬೇಡ. ಈ ದೈವವಾಣಿಯನ್ನು ಕೇಳಿ ಒದೇನನಿಗೆ ಒಂದಿಷ್ಟು ಅಳುಕಾಯಿತು. ಪುನಃ ದೇವವಾಣಿಯಾಯಿತು – ಇನ್ನಾದರೂ ನೀನು ಗಮನವಿಟ್ಟು ಕೇಳು. ಪೊನ್ನಿಯ ವೆಂದರೆ ಏನೆಂದುಕೊಂಡೆ? ಅಲ್ಲಿನ ಏಳುವರೆ ಗದ್ದೆಗಳಲ್ಲಿ ಒಂದಷ್ಟು ಜನ ಪ್ರಾಣ

ತೆತ್ತಿದ್ದಾರೆ. ಅದು ಬಹಳ ಹಿಂದಿನಿಂದಲೇ ಯುದ್ಧಭೂಮಿ. ವಿಷು ಕಳೆದ ಬಳಿಕ ಆ ಮಣ್ಣಿಗೆ ಯಾರೂ ಕಾಲೂರಲು ಧೈರ್ಯ ತೋರುವುದಿಲ್ಲ. ನೀನು ಇಂದು ಪೊನ್ನಿಯಕ್ಕೆ ಹೋಗುವುದಕ್ಕೆ ತೀರ್ಮಾನ ಮಾಡಿದ್ದರೆ ನಾನು ತಡೆಯುವುದಿಲ್ಲ. ಹಾಗೆ ಹೋದರೆ ನೀನು ಅಲ್ಲಿನ ಅಶ್ವತ್ಥಕಟ್ಟೆಯಲ್ಲಷ್ಟೆ ಕುಳಿತುಕೊ. ಅದು ನಾಯರ್ ವೀರರು ಕುಳಿತುಕೊಳ್ಳುವ ಜಾಗ. ನೀನು ಹಾಗೆ ಅಲ್ಲಿ ಕುಳಿತಿರುವಾಗ ಅಲ್ಲಿಗೆ ಕೆಂಬಣ್ಣದ ಒಂದು ಹಕ್ಕಿ ಹಾರಿ ಬಂದೀತು. ಅದು ನಾನೆಂದು ತಿಳಿ. ಅಶ್ವತ್ಥ ಮರದ ಮೇಲೆ ಆ ಹಕ್ಕಿಯನ್ನು ನೀನು ಕಂಡಕೂಡಲೇ ಪಡೆನೆಲಕ್ಕೆ ಹೊರಟುಬಿಡು. ನಿನ್ನ ಜತೆ ನಾನೂ ಹೊರಟು ಬರುತ್ತೇನೆ. ದೇವವಾಣಿ ನಿಂತಿತು. ಒದೇನ ಭಕ್ತಿಯಿಂದ ಕೈಮುಗಿದು ಎಡಭಾಗಕ್ಕೆ ಸರಿದುನಿಂತ. ಗರ್ಭಗುಡಿಯ ಬಾಗಿಲು ಮುಚ್ಚಿತು. ಅವನು ಅಲ್ಲಿಂದ ತಚ್ಚೋಳಿ ಮೇಪ್ಪಕ್ಕೆ ಹಿಂತಿರುಗಿದ.

ಹೆಚ್ಚಿನ ಪೂರ್ವ ತಯಾರಿಗಳೆಲ್ಲ ಒಂದು ಹಂತಕ್ಕೆ ತಲಪಲು ಕೋಮಕುರುಪ್ಪ್ ಒದೇನನಿಗೆಂದ – ಪಡೆ ನಿಶ್ಚಯವಾದ ಬಳಿಕ ಪಡೆನಾಯಕರು ವ್ರತಧಾರಿಗಳಾಗಿ ಮನೆಯಲ್ಲಿರಬೇಕು. ಅಂತೆಯೇ ಒದೇನ ವ್ರತಧಾರಿಯಾಗಿ ಮನೆಯಲ್ಲಿಯೇ ಉಳಿದುಕೊಂಡ. ನಿಶ್ಚೈಸಿದ ಬುಧವಾರವೂ ಬಂದೇ ಬಂತು. ಪೊನ್ನಿಯಂ ಪಡೆಗಾಗಿ ಊರ ಪ್ರಮುಖರೆಲ್ಲ ಹೊರಡುವ ಘಳಿಗೆಯನ್ನು ಇದಿರು ನೋಡುತ್ತಿದ್ದರು. ಬೇಕಾದ ಸಕಲ ಸಲಕರಣೆಗಳೊಂದಿಗೆ ಎಲ್ಲರೂ ಸಿದ್ಧವಾದರು. ಹೊರಡುವ ಮುಹೂರ್ತ ನೋಡಲು ಅಂದಿನ ರೂಢಿಯಂತೆ ವಾರಿಯನನ್ನೂ ಕಣಿಶನನ್ನೂ ಕರೆಯಿಸಿದರು. ಪಡೆಗೆ ಹೋದರೆ ಜಯ ಹೊಂದುವ ಒಳ್ಳೆಯ ಸಮಯವನ್ನು ಅವರು ಲೆಕ್ಕ ಹಾಕ ತೊಡಗಿದರು. ಆ ಹೊತ್ತಿಗೆ ಪಡೆನಾಯಕನಾದ ಒದೇನ ತನ್ನ ಪತ್ನಿ ಕಾವಿಲ್ ಚಾತ್ತೋತ್ತ್ ಚೀರುವನ್ನು ಕರೆದು ಹೇಳಿದ – ಈ ಹಿಂದೆಯೂ ನಾನು ಪಡೆಗೆ ಹೋಗುವಾಗ ಮೂರು ತುತ್ತು ಅನ್ನವುಂಡು ಹೊರಡುವುದು ರೂಢಿ. ಈಗಲೂ ಅದು ತಪ್ಪಿ ಹೋಗುವುದು ಬೇಡ. ಬೇಗ ಊಟ ಸಿದ್ಧಪಡಿಸು. ಹೀಗೆ ಕೇಳಿ ಅವನು ತೆಂಕುಕೋಣೆಗೆ ಹೋಗಿ ಬಂಗಾರದ ಪೆಟ್ಟಿಗೆಯನ್ನು ತೆರೆದು ಬೇಕಾದ ಹೊನ್ನನ್ನು ತೆಗೆದಿರಿಸಿದ. ಜತೆಗೆ ತನ್ನ ಆಯುಧಗಳನ್ನೂ ತೆಗೆದು ಸಜ್ಜುಗೊಳಿಸಿಕೊಂಡ. ಆಗ ಗುಂಡು ಹೊಡೆದರೂ ತಾಗದ ತನ್ನ ತಾಯಿತದಂಡು ಕಾಣಲಿಲ್ಲ. ಅದು ಏನಾಯಿತೆಂದು ನೆನಪಿಸಿಕೊಂಡ ಒದೇನ ಚಾಪ್ಪನನ್ನು ಕರೆದು ಹೇಳಿದ – ಕಂಡಾಚ್ಯೇರಿ ಚಾಪ್ಪ! ನೀನು ಹೋಗಿ ಕಯ್ಯೆನ್ನಿಡುಂನ ತೇಯಿಯ ಬಳಿ ನನ್ನ ತಾಯಿತದಂಡು ಕೊಡುವಂತೆ ಹೇಳಿ ತೆಗೆದುಕೊಂಡು ಬಾ! ಅಂತೆಯೇ ಚಾಪ್ಪನು ಒಮ್ಮೆ ನಡೆಯುತ್ತ ಒಮ್ಮೆ ಓಡುತ್ತ ಹೋಗಿ ಕಯ್ಯೆನ್ನಿಡಂ ತಲಪಿದ. ತೇಯಿಯನ್ನು ಕಂಡು ತನ್ನ ಯಜಮಾನ ಒದೇನ ಕುರುಪ್ಪ್‌ನ ತಾಯಿತದಂಡನ್ನು ಕೊಡಲು ಕೇಳಿಕೊಂಡ. ಅದಕ್ಕೆ ತೇಯಿ ಉಡಾಫೆಯ ಉತ್ತರವಿತ್ತಳು – ನಿನ್ನ ಯಜಮಾನನ ತಾಯಿತದಂಡನ್ನು

ನನ್ನಲ್ಲಿ ಯಾರೂ ಕೊಟ್ಟವರಿಲ್ಲ. ಚಾಪ್ಪ ಮರಳಿ ಬಂದ. ಒದೇನನಿಗೆ ನಡೆದ ವಿಚಾರವನ್ನು ತಿಳಿಸಿದ. ಎಲ್ಲವನ್ನೂ ಕೇಳಿದ ಒದೇನನೆಂದ – ತೇಯಿ ನನ್ನನ್ನು ವಂಚಿಸಿದಳು. ತಾಯಿತದಂಡು ಹೋದರೆ ಹೋಗಲಿ ಎಂದು ಭಾವಿಸಬಹುದು. ಆದರೆ ಈ ವಂಚನೆಗೆ ಪ್ರತಿಕಾರವಾಗಲೇಬೇಕು. ಆದರೆ ಈಗ ನನಗೆ ಅದಕ್ಕೆ ಸಮಯವಿಲ್ಲ. ಪಡೆಗೆ ಹೊರಡಬೇಕಾದ ಹೊತ್ತು ಸಮೀಪಿಸಿದೆ. ಏನು ಮಾಡಲಿ?

ಸೇರಿದ್ದ ಅರಸರೂ ಹಿರಿಯರೂ ಒದೇನನನ್ನು ಕರೆದು ಮಹೂರ್ತ ನಿಶ್ಚೈಸಲು ತಡವಾಗುತ್ತಿರುವುದರಿಂದ ಜನರಿಗೆ ಉಂಟಾಗುತ್ತಿರುವ ಅಸಹನೆಯನ್ನೂ ತಮ್ಮ ತಾಳ್ಮೆಗೇಡನ್ನೂ ತಿಳಿಸಿದರು. ಕೂಡಲೇ ಮುಹೂರ್ತ ನಿಶ್ಚಯವಾಗಬೇಕೆಂದೂ ಒತ್ತಾಯಿಸಿದರು. ಆಗ ಒದೇನನು ಮುಹೂರ್ತ ನಿಶ್ಚಯಕ್ಕೆಂದೇ ಒಂದಿಷ್ಟು ಮರೆಯಲ್ಲಿ ಸಿದ್ಧವಾಗಿದ್ದ ಜಾಗಕ್ಕೆ ಹೋಗಿ ಕುಳಿತ. ಕೂಡಲೇ ನೆಡುಂಪೋಯಿಲಮ್ಮನ್ ವಾರಿಯರ್ ಒಳಗೂ ಪೊನ್ನಿಯತ್ತ್ ಅಂಬುಕಣಿಶ ಹೊರಗೂ ಜ್ಯೋತಿಷ್ಯದ ಲೆಕ್ಕಾಚಾರದಲ್ಲಿ ತೊಡಗಿದರು. ಇಬ್ಬರೂ ಕವಡೆ ತಿರುಗಿಸಿ ಲೆಕ್ಕಾಚಾರ ಮಾಡಿ ನೋಡಿದಾಗ ಎರಡು ಕಡೆಯೂ ಒಂದೇ ರಾಶಿ ಮೂಡಿ ಬಂತು. ಕೂಡಲೇ ಅವರು ಮುಹೂರ್ತ ನಿಶ್ಚಯಮಾಡಿ ಹೇಳಿದರು – ಪಡೆಗೆ ಹೋಗಲು ವ್ರತವನ್ನು ತೆಗೆದುಕೊಂಡಿರುವ ಪಡೆನಾಯಕನು ಹೊರಡಬೇಕಾದ ಮುಹೂರ್ತ ಬಂದಿದೆ. ಈ ರಾಶಿಯ ಸಮಯ ಮುಗಿಯುವ ಮುನ್ನ ಅವನು ಹೊರಡಲೇಬೇಕು.

ಕೂಡಲೇ ಒದೇನನು ಎಣ್ಣೆಹಚ್ಚಿ ಮಿಂದು ತೇವಾರಕಲ್ಲಲ್ಲಿ ನಿಂತು ತೇವಾರದ ವಿಧಿಗಳನ್ನು ಮುಗಿಸಿದ. ತೆಂಕುಕೋಣೆಗೆ ಪ್ರವೇಶಿಸಿ ವೀರೋಚಿತವಾಗಿ ಅಲಂಕರಿಸಿಕೊಂಡ. ಕೂದಲನ್ನು ಅಂದವಾಗಿ ಬಾಚಿ ಬಲಕ್ಕೆ ಸೇರಿಸಿ 'ಕುಡುಮ' ಕಟ್ಟಿ ಚಿನ್ನದ ಹೂವೊಂದನ್ನು ಸಿಕ್ಕಿಸಿ ಮುಡಿದುಕೊಂಡ. ಕಿವಿಗಳಿಗೆ ಶೇಷನಹೆಡೆ ಕಡಕುಗಳನ್ನು ಧರಿಸಿದ. ವೀರಗಚ್ಚೆ ಹಾಕಿ ಸೊಂಟಕ್ಕೆ ರೇಶ್ಮೆಯ ದಟ್ಟಿಯನ್ನು ಬಿಗಿದ. ಅದರ ಮೇಲೊಂದು ಚಿನ್ನದ ಡಾಬು ಧರಿಸಿದ. ಐದು ಬೆರಳಿಗಳಿಗೂ ಉಂಗುರಗಳನ್ನು ಅವುಗಳನ್ನು ಮುಂಗೈಗೆ ಬಂಧಿಸುವ ಸರಪಣಿಯನ್ನೂ ಸಿಕ್ಕಿಸಿಕೊಂಡ. ಅದರಲ್ಲಿ ರಾಮಾಯಣ ಮಹಾಭಾರತಗಳನ್ನು ಕಂಡರಿಸಿತ್ತು. ಕಾಲುಗಳಿಗೆ ವೀರಪೆಂಡೆಯಗಳನ್ನು ಸಿಕ್ಕಿಸಿದ. ಚಿನ್ನದ ಹಿಡಿಯ ಕತ್ತಿಯನ್ನೂ ಹುಲಿಬೇಟೆಯ ಚಿತ್ರವಿದ್ದ ಗುರಾಣಿಯನ್ನೂ ಬಲ ಎಡಗೈಗಳಲ್ಲಿ ಹಿಡಿದುಕೊಂಡ. ಕಸ್ತೂರಿ ಮಿಶ್ರಿತ ಚಂದನವನ್ನು ಮೈಗೆ ಲೇಪಿಸಿದ್ದರಿಂದ ಮೈಯಿಂದ ಸುಗಂಧ ಸೂಸುತ್ತಿತ್ತು. ತಾಂಬೂಲ ಹಾಕಿದ ತುಟಿಗಳೂ ಮುಖಕ್ಕೊಪ್ಪುವ ಹುರಿಮೀಸೆಯೂ ವೀರಕಳೆಯನ್ನು ಹೆಚ್ಚಿಸಿದ್ದುವು. ಹತ್ತೂವರೆ ಗೇಣುದ್ದದ ಚಿನ್ನದ ಪುತ್ಥಳಿಯೋ ಉದಿಸುತ್ತಿರುವ ಸೂರ್ಯನೋ

ಅಸ್ತಮಿಸುವ ಚಂದ್ರನೋ ಎಂಬಂತೆ ವೀರಕಳೆಯಿಂದ ವಿರಾಜಿಸುತ್ತಿದ್ದ. ಅಲಂಕಾರ ಮುಗಿದ ಕೂಡಲೇ ತೆಂಕುಕೋಣೆಯಿಂದ ಹೊರಬಂದ.

ಆಗ ಪಡೆಹೊರಡಲು ಪರಿವಾರಗಳಾಗಿ ಬಂದಿದ್ದ ಜನರ ಕೋಲಾಹಲ ಹೆಚ್ಚಿತು. ಸೇರಿದ ಮಹನೀಯರೂ ಹಿರಿಯರೂ ಒದೇನನನ್ನು ಅವಸರ ಪಡಿಸಿ ಬೇಗ ಬೇಗ ಊಟದ ಶಾಸ್ತ್ರ ಮುಗಿಸಲು ಹೇಳಿದರು. ಒದೇನ ಊಟಕ್ಕೆ ಕುಳಿತ. ಎಲೆಯ ಮುಂದೆ ಕುಳಿತ ಒದೇನ ನೆರೆದ ಜನರಲ್ಲಿ ಮುಖ್ಯರಾದವರನ್ನು ಕರೆದು ಹೇಳಿದ – ನಾಲ್ಕು ಅರಮನೆ ಅರಸರೆ, ಚೀನಂ ಮನೆಯ ತಂಜಳ್ ವಾಚುನ್ನವರೆ, ಹೊಸ ಅರಮನೆಯ ಅರಸುಗಳೇ, ಪಯ್ಯಂಪಳ್ಳಿ ಚಂದು, ಕೋಟಕ್ಕಲ್ ಅಹಮ್ಮದ್ ಮರಕ್ಕಾರ್, ವಡಗರ ಪೀಡಿಗ ಕುಂಞಿಪೋಕರೆ ಮುಂತಾದವರೆ, ನಾನು ಮುಹೂರ್ತದ ಮೂರುತುತ್ತು ಅನ್ನ ಊಟ ಮಾಡಲೇ? ಎಲ್ಲರೂ ಅದಕ್ಕೆ ಒಪ್ಪಿಗೆ ಸೂಚಿಸಿದರು. ಕೂಡಲೇ ಒಂದು ತುತ್ತು ಎತ್ತಿಕೊಂಡು – ನಮ್ಮ ವಂಶದ ಹಿರಿಯರು, ಒಲವಣ್ಣೂರ್ ಕಾವ್‌ನ ನಮ್ಮ ಆರಾಧ್ಯದೇವಿ ಭಗವತಿ, ನನ್ನನ್ನು ಪೊರೆಯಲಿ ಎಂದು ಧ್ಯಾನಿಸಿ ತುತ್ತನ್ನು ಬಾಯಿಗಿಟ್ಟ. ಆ ತುತ್ತಲ್ಲಿ ಮಸಿಯ ತುಂಡು ಸಿಕ್ಕಿತು! ಎರಡನೆಯ ತುತ್ತನ್ನೆತ್ತಿ ಬಾಯಿಗಿಟ್ಟಾಗ ಕಲ್ಲುಸಿಕ್ಕಿತು!! ಮೂರನೆಯ ತುತ್ತನ್ನೆತ್ತಿ ಬಾಯಿಗಿಟ್ಟಾಗ ಕೂದಲ ರಾಶಿ!!! ಲಕ್ಷಣಗಳಾವುವೂ ಸರಿಯಿಲ್ಲ. ಒದೇನ ಮೇಲಕ್ಕೊಮ್ಮೆ ಕೆಳಕ್ಕೊಮ್ಮೆ ನಿರ್ಭಾವುಕನಾಗಿ ದಿಟ್ಟಿಸಿ ಮೇಲಕ್ಕೆದ್ದ. ಕೈಬಾಯಿ ತೊಳೆದು ಬಂದು ವೀಳ್ಯಹಾಕಿದ. ಬಳಿಕ ಮರೆಗೆ ಹೋದಾಗ ಕಾವಿಲುಂ ಚಾತ್ತೋತ್ ಚೀರು ಕಾಲುದೀಪ ಉರಿಸಿಟ್ಟು ಗಂಡನನ್ನು ಕಳಿಸಿಕೊಡಲು ಸಿದ್ಧಳಾದಳು. ಆಗ ರಾಶಿ ಮುಹೂರ್ತ ಬಂತೆಂದು ಜೋಯಿಸರು ತಿಳಿಸಲು ಉರಿಸಿದ ದೀಪಕ್ಕೆ ಒದೇನನು ಅಕ್ಕಿಕಾಳೆರಚಿ ಆಢ್ಯರನ್ನೂ ಹಿರಿಯರನ್ನೂ ಹತ್ತಿರ ಬರಮಾಡಿಸಿ – ನಾನು ಉರುಮಿ, ಸುರಗಿ ಗುರಾಣಿಗಳನ್ನು ಎತ್ತಿಕೊಳ್ಳಲೇ? ಎಂದು ಹೇಳುತ್ತ ಮೂರಡಿ ಮುಂದಿಟ್ಟು ಏಳಡಿ ಹಿಂದಕ್ಕೆ ಇಟ್ಟು ನಮಸ್ಕಾರಮಾಡಿ ಉರುಮಿಯನ್ನೂ ಗುರಾಣಿಯನ್ನೂ ಸುರಿಗೆಯನ್ನೂ ಎತ್ತಿಕೊಂಡ. ಅನಂತರ ಮೂರು ಬಾರಿ ಪಡವಿಳಿ (ಸಿಂಹನಾದ) ಮಾಡಿ ಮೂರು ಗುಂಡು ಹೊಡೆಯಿಸಿದರು. ಪರಿವಾರಗಳೆಲ್ಲ ಪೊನ್ನಿಯಕ್ಕೆ ಹೊರಟುವು.

ಕಡತ್ತನಾಡಿನಿಂದ ಹೊರಟ ಈ ಪಡೆ ಬಾಯಾರಿದರೂ ಏನನ್ನೂ ಕುಡಿಯದೆ, ಬಳಲಿದರೂ ಎಲ್ಲೂ ನಿಲ್ಲದೆ, ಎಲ್ಲಿಯೂ ತಾಂಬೂಲ ಕೂಡ ಹಾಕಿಕೊಳ್ಳದೆ ಉತ್ಸಾಹ ದಿಂದಲೇ ಮುಂದುವರಿಯುತ್ತ ಸಾಗಿತು. ಮುಕ್ಕಾಲುದಾರಿ ಕ್ರಮಿಸಿದ ಬಳಿಕ ದಾರಿಯಲ್ಲಿ ಅಡ್ಡವಾದ ಪೆರಿಂಜೊಳನಾರ್ ಹೊಳೆ ಸಿಕ್ಕಿತು. ಅದನ್ನು ದಾಟಿದ ಬಳಿಕ ಒದೇನ ತನ್ನ ಗುರಾಣಿಗೆ ಬಡಿಯುತ್ತ ರಣಗೀತೆಗಳನ್ನು ಹಾಡತೊಡಗಿದ. ಆಗ ಮುಕ್ಕಾಲು ಗಾವುದ ನೆಲ ರಣೋತ್ಸಾಹದಿಂದ ಪುಳಕವೆದ್ದರೆ ಕಾಲುಗಾವುದ ನೆಲ ಕುಲುಕಲಾರಂಭಿಸಿತು.

ಹಾಗೆ ರಣೋತ್ಸಾಹದಿಂದ ಕೂಗುತ್ತ ಬೊಬ್ಬಿಡುತ್ತ ಧೂಳೆಬ್ಬಿಸುತ್ತ ಕೋಲಾಹಲ ದಿಂದೊಡಗೂಡಿ ಪೊನ್ನಿಯಕ್ಕೆ ತಲಪಿದರು. ಬಳಿಕ ಒದೇನ ಕಟ್ಟೆಯ ಮೇಲೆ ಹೋಗಿ ಕುಳಿತ. ಅಷ್ಟರಲ್ಲೇ ಮದಿಲೂರ್ ಗುರುಕ್ಕಳ್ ಮತ್ತು ಅವರ ಶಿಷ್ಯರು ಹಾಗೂ ಒಂದಷ್ಟು ಜನ ಬಂದು ಸೇರಿದ್ದರು. ಪಡೆ ಆರಂಭವಾಗುವ ಕ್ಷಣಕ್ಕಾಗಿ ಎಲ್ಲರೂ ತುದಿಗಾಲಲ್ಲಿ ಕಾಯುತ್ತಿದ್ದರು. ಒದೇನ ಅಶ್ವತ್ಥಮರದ ಮೇಲೆ ದಿಟ್ಟಿನಟ್ಟಿದ್ದ. ಆಗಸದಲ್ಲಿ ಕೆಂಪುಬಣ್ಣದ ಹಕ್ಕಿ ಹಾರುತ್ತ ಬಂದು ಮರದ ಕೊಂಬೆಯಲ್ಲಿ ತಂಗಿದ್ದನ್ನು ಅವನು ಕಂಡ. ಅಷ್ಟರಲ್ಲಿ ಮದಿಲೂರ್ ಗುರುಕ್ಕಳ್ ಪೊನ್ನಿಯದ ಏಳೂವರೆ ಗದ್ದೆಗಿಳಿದು ದಿಕ್ಕುಗಳು ಮಾರ್ದನಿಸು ವಂತೆ ಮೂರುಬಾರಿ ಪಡವಿಳಿ (ರಣಗರ್ಜನೆ) ಮಾಡಿದರು. ಆಗ ಒದೇನ ಕಡತ್ತು ವೈನಾಡನ್ನಾಳುವ ಅರಸನ ಬಳಿ ಹೋಗಿ ಪಾದವಂದನೆ ಮಾಡಿದ. ಬಳಿಕ ತನ್ನ ತಂದೆ, ಅಣ್ಣಂದಿರ ಕಾಲಿಗೆ ನಮಸ್ಕರಿಸಿದ. ಬಳಿಕ ತನ್ನ ಕಚ್ಚೆಯ ಅಂಚಿನಿಂದ ಹದಿನಾರು ಹಣ ತೆಗೆದು ಅಹಮ್ಮದ್ ಮರಕ್ಕಾರನಿಗೆ ಕೊಟ್ಟು ತನ್ನ ಗೆಲವಿಗೋಸ್ಕರ ಅಲ್ಲಾಹುವಿನಲ್ಲಿ ಪ್ರಾರ್ಥಿಸುವಂತೆ ಕೇಳಿಕೊಂಡು ಅವನ ಪಾದಮುಟ್ಟಿ ನಮಸ್ಕರಿಸಿದ. ಬಳಿಕ ಅಶ್ವತ್ಥದ ಕಟ್ಟೆಯೇರಿ ಆಕಾಶವೇ ಮೊಳಗುವಂತೆ ಮೂರು ಬಾರಿ ಪಡೆವಿಳಿ ಮಾಡಿದ. ತನ್ನ ಉರುಮಿಯನ್ನೂ ಗುರಾಣಿಯನ್ನೂ ಅಡ್ಡಡ್ಡವಾಗಿ ಹಿಡಿದು ಒಂದು ಕ್ಷಣ ನಿಂತುಕೊಂಡ. ಇನ್ನೊಂದು ಕ್ಷಣದಲ್ಲಿ ಒಂದು ಅಂತರ್ಲಾಗ (Somersault) ಹೊಡೆದು ಪಟ್ಟೆಹುಲಿ ನೆಗೆದುಬೀಳುವಂತೆ ನೆಗೆದು ಗುರುಕ್ಕಳ ಮುಂದೆ ನಿಂತ. ಮದಿಲೂರ ಗುರುಕ್ಕಳ್ ಆಯ್ದ ತನ್ನ ಇಪ್ಪತ್ತೆರಡು ಶಿಷ್ಯರ ಮಧ್ಯೆ ತಡೆಗೋಡೆಯಂತೆ ನಿಂತಿದ್ದರು. ಒದೇನನ ವೀರಾವೇಶವನ್ನೂ ರಕ್ತಸೂಸುವಂತಿದ್ದ ಅವನ ಕೆಂಗಣ್ಣುಗಳನ್ನೂ ನೋಡಿ ಶಿಷ್ಯರು ಸರಿದು ನಿಂತರು. ಒದೇನನೂ ಗುರುಕ್ಕಳೂ ಮೂಡುಪಡುವಾಗಿ ನಿಂತು ಹೋರಾಟ ತೊಡಗಿದರು.

ಆ ಹೋರಾಟವು ಕಳರಿಪಯಟ್ಟ್‌ನ ಪಟ್ಟುಗಳನ್ನು ಬಲ್ಲವರಿಗೆ ಅತ್ಯಂತ ವಿಸ್ಮಯ ಕಾರಿಯೂ ಅದನ್ನು ತಿಳಿಯದವರಿಗೆ ಅತ್ಯಂತ ಭೀತಿ ಹುಟ್ಟಿಸುವಂಥದ್ದೂ ಆಗಿತ್ತು. ತುಂಬ ಕೌಶಲದಿಂದ ಇಬ್ಬರು ಪರಸ್ಪರ ಬಡಿದೂ ತಡೆದೂ ಕಾಳಗದ ಹುಂಜಗಳೆರಡು ಒಂದಕ್ಕಿಂತ ಒಂದು ಮಿಗಿಲಾಗಿ ಇಕ್ಕಿಮಟ್ಟುವಂತೆ, ಪೈಪೋಟಿಯಿಂದ ಸೆಣಸಾಡುವ ಸಿಂಹಗಳೆರಡರ ಹಾಗೆ ಮೂರುದಿನ ಎಡೆಬಿಡದೆ ಹೋರಾಡಿದರು. ಆದರೂ ಇಬ್ಬರ ಮೈಯಲ್ಲೂ ಒಂದು ಹನಿ ರಕ್ತವಾಗಲಿ ಒಂದು ಗೀರುಗಾಯವಾಗಲಿ ಕಂಡು ಬರಲಿಲ್ಲ. ಆಗ ಗುರುಕ್ಕಳ್ ಹೇಳಿದರು – ಲೋ ಒದೇನ! ನಾನು ಕಳ್ಳ ಹೆಜ್ಜೆಯಿಟ್ಟು ನಿನ್ನನ್ನು ಹೊಡೆಯುವೆ. ಹುಷಾರಾಗಿರು. ಹೇಳಿದ ನಾಲಗೆ ಬಾಯೊಳಗೆ ಮಲಗುವ ಮೊದಲೇ ಗುರುಕ್ಕಳ್ ಹಾಗೆಯೇ ಹೊಡೆಯಲಾರಂಭಿಸಿದರು. ಆದರೆ ಆ ಎಲ್ಲಾ ಹೊಡೆತಗಳನ್ನು

ಒದೇನ ತನ್ನ ಗುರಾಣಿಯಿಂದ ತಡೆದುಬಿಟ್ಟಿದ್ದ! ಬಳಿಕ ಒದೇನನೆಂದ – ಅಯ್ಯಾ ಮದಿಲೂರ ಗುರುಕ್ಕಳೇ! ನಿಮ್ಮನ್ನು ಮರಳೆರಚು ಹೊಡೆತ (ಪೂಟಿಕ್ಕಡವಿನಡಿ) ದಿಂದ ಹೊಡೆಯುವೆ, ಹುಷಾರಾಗಿರಿ. ಒದೇನ ಮಿಂಚಿನಂತೆ ಗುರುಕ್ಕಳ ಅಡಿಮುಡಿ ಕೈಮೈಗಳಿಗೆ ಮರಳು ತುಂಬಿಕೊಳ್ಳುವಂತೆ ಹೊಡೆತಗಳನ್ನು ಹೊಡೆದ. ಆ ಹೊಡೆತ ತಾಳಲಾರದೆ ಗುರುಕ್ಕಳ್ ಹೆಮ್ಮರವೊಂದು ಉರುಳುವಂತೆ ಕೆಳಬಿದ್ದರು. ಬಿದ್ದುದು ತಡ, ಒದೇನ ಒಂದು ರಣಗರ್ಜನೆ ಮಾಡಿ ಜಯಘೋಷ ಮಾಡುತ್ತ ಅಶ್ವತ್ಥ ಕಟ್ಟೆಯತ್ತ ಧಾವಿಸಿದ. ಆಗ ಪಡೆಗಳ ರಕ್ಷಾಧಿಕಾರಿಗಳಾಗಿ ಬಂದಿದ್ದ ಅರಸರು ಕೂಗಿ ಘೋಷಿಸಿದರು – ಪಡೆ ಮುಗಿದ ಮೇಲೆ ಪಡೆಕ್ಕಳದಲ್ಲಿ ನಿಲ್ಲುವಂತಿಲ್ಲ. ಕೂಡಲೇ ಎಲ್ಲರೂ ಇಲ್ಲಿಂದ ಹಿಂದಿರುಗಿ ಹೋಗತಕ್ಕದ್ದು. ಅದನ್ನು ಕೇಳಿದ ಒದೇನ ಅಶ್ವತ್ಥಕಟ್ಟೆಯ ಮೇಲೆ ಗಾಳಿಗೆ ಮೈಯೊಡ್ಡಿ ವಿಶ್ರಾಂತಿ ಪಡೆಯುತ್ತಿರಲು ಕಂಡಾಚ್ಚೇರಿ ಚಾಪ್ಪ ಎಳನೀರು ಕೆತ್ತಿ ಒದೇನನಿಗೆ ನೀಡಿದ. ಅವನು ಅದನ್ನು ಕುಡಿದು ತಾಂಬೂಲ ಹಾಕಿ ವಿರಾಜಿಸುತ್ತಿದ್ದ. ಬಳಿಕ ನಾಲ್ಕು ಅರಮನೆಗಳ ಅರಸುಗಳು ಒದೇನನಿಗೆಂದರು – ಅಯ್ಯಾ ಕುಂಞ್ಯೊದೇನ! ಹೊತ್ತು ಸಂಜೆ ದಿರುಗುತ್ತ ಬಂತು. ಇನ್ನು ಹೊರಡುವುದಲ್ಲವೇ? ಎಂದು ತ್ವರೆ ಮಾಡಿದರು.

ನನ್ನ ಉರುಮಿಯನ್ನೂ ಗುರಾಣಿಯನ್ನೂ ಅಂಬಾಡಿಗೆ ಕೊಡಿಸಿ

ರಕ್ಷಾಧಿಕಾರಿಗಳ ಆಜ್ಞೆಯನ್ನು ಅನುಸರಿಸಿ ಎಲ್ಲರೂ ಕೂಡಲೇ ಹೊರಡಲು ಸಿದ್ಧರಾದರು. ಒದೇನನೂ ಹೊರಡಲನುವಾದ. ಆಗ ಅವನ ಮಡಿಲಲ್ಲಿನ ಸುರಿಗೆ ಇಲ್ಲದಿರುವುದು ಅವನ ಗಮನಕ್ಕೆ ಬಂತು. ಅಲ್ಲೇ ಎಡ ಬಲದಲ್ಲಿ ಒಂದಿಷ್ಟು ಹುಡುಕಾಡಿದ. ಆಗ ಥಟ್ಟನೆ ನೆನಪಾಯಿತು – ಸುರಿಗೆಯನ್ನು ಪೊನ್ನಿಯಂ ಏಳೂವರೆ ಗದ್ದೆಗಳಲ್ಲಿ ದೊಡ್ಡಗದ್ದೆಯ ಏರಿಯಲ್ಲಿ ಇರಿಸಿದ್ದ. ಅದನ್ನು ಬೇಗ ಹೋಗಿ ತಂದುಬಿಡುತ್ತೇನೆಂದು ನಿಶ್ಚೈಸಿ ಆತ್ಮೀಯ ಗೆಳೆಯ ಪಯ್ಯಂಬಳ್ಳಿ ಚಂದುವಿಗೆಂದ – ಪಯ್ಯಂಬಳ್ಳಿ ಚಂದು! ನನ್ನ ಸುರಿಗೆಯನ್ನು ಮರೆತಿದ್ದೇನೆ. ಒಂದೇ ಒಂದು ಗಳಿಗೆಯಲ್ಲಿ ಅದನ್ನು ತಂದುಬಿಡುತ್ತೇನೆ. ಆಗ ಪಯ್ಯಂಬಳ್ಳಿ ಚಂದುವೆಂದ – ಸುರಿಗೆ ಮರೆತಿದ್ದರೆ ಹೋಗಲಿ. ಪುನಃ ಪಡೆಕ್ಕಳಕ್ಕೆ ಹೋಗುವುದು ತಪ್ಪು. ಅದಕ್ಕೆ ಒದೇನನೆಂದ – ತಪ್ಪು ಯಾವುದು ಸರಿಯಾವುದು ಎನ್ನುವುದೇ ನನಗೆ ತಲೆಗೆ ಹತ್ತುತ್ತಿಲ್ಲ. ಹೆಸರಾಂತ ನಾಯರ್‌ವೀರನೊಬ್ಬ ಪಡೆಕಾದಿ ತನ್ನ ಆಯುಧವನ್ನು ಕಣದಲ್ಲೆ ಹಾಕಿ ಹೋದರೆ ವೀರರೆಲ್ಲ ಆಡಿಕೊಂಡು ನಕ್ಕಾರು. ಅದಕ್ಕೆ ಚಂದು ಹೇಳಿದ – ಜನ ಏನಾದರೂ ಆಡಿಕೊಳ್ಳಲಿ. ಯಾವುದೇ ಕಾರಣಕ್ಕೆ ನೀನು ಮರಳಿ ಅಲ್ಲಿಗೆ ಹೋಗಬೇಡ. ಒದೇನ ಹಠಹಿಡಿದ – ಪ್ರಿಯ ಗೆಳೆಯರೆ! ನೀವು ನನ್ನನ್ನು ತಡೆಯಲಾರಿರಿ. ನೀವೆಂದೇನು? ಆನೆ ಅಡ್ಡೈಸಿದರೂ ನಾನು ಸುರಿಗೆಯನ್ನು ತಾರದೆ ಇರುವವನಲ್ಲ. ಹಾಗೆ ಹೇಳಿದುದಲ್ಲದೆ ಅವನು ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಅರಳಿಕಟ್ಟೆಯಿಂದ ಇಳಿದು ಶರವೇಗದಿಂದ ಸಾಗಿ ಏಳುವರೆ ಗದ್ದೆಗಳ ಮಧ್ಯೆ ನಿಂತಿದ್ದ. ಪಡೆಕಾದಿ ಸೋತು ಅಪಮಾನಿತರೂ ಹತಾಶರೂ ಆಗಿದ್ದ ಗುರುಕ್ಕಳ್ ಇನ್ನೂ ಪೊನ್ನಿಯಂ ಕಳದಿಂದ ಹೊರಟುಹೋಗಿರಲಿಲ್ಲ. ಒದೇನ ಮತ್ತೆ ಬರುತ್ತಿರುವುದನ್ನು ನೋಡಿ ತಮ್ಮ

ಅಂತ್ಯ ಸಮೀಪಿಸಿತೆಂದು ಹೆದರಿ ತನ್ನ ಶಿಷ್ಯರಲ್ಲೊಬ್ಬನಾದ ಚುಂಡಂಗ ಮೊಯ್ಯೆಯಿಲ್ ಮಾಯನ್ ಪಕ್ಕಿಯನ್ನು ಕರೆದು ಎಲ್ಲಾದರೂ ಮರೆಯಲ್ಲಿ ನಿಂತು ಒದೇನನಿಗೆ ಗುಂಡೆಸೆದು ಬಿಡಲು ಹೇಳಿದರು. ಅಲ್ಲೇ ಕಾಣುತ್ತಿದ್ದ ಸುರಿಗೆಯನ್ನು ಎತ್ತಿಕೊಳ್ಳಲು ಒದೇನನು ಬಾಗುತ್ತಿದ್ದಂತೆ ಗುಂಡೊಂದು ನೇರವಾಗಿ ಅವನ ಬಲ 'ಕೆನ್ನಿ' (ಕಣ್ಣು ಕಿವಿಗಳ ಮುಂಭಾಗ ಮತ್ತು ಹಣೆಯ ಕೆಳಅಂಚು ಸಂಧಿಸುವ ಮರ್ಮಸ್ಥಾನ)ಯ ಒಳ ಹೊಕ್ಕಿತು! ಒದೇನನನ್ನು ಗುಂಡು ಒಂದು ಸುತ್ತು ತಿರುಗಿಸಿ ಬಿಟ್ಟಿತು. ಸಾವರಿಸಿಕೊಂಡು ಗುಂಡು ಹೊಡೆದ ಜಾಗದತ್ತ ನೋಡಿದಾಗ ಮಾಯನ್‌ಕುಟ್ಟಿ ಅಡಗಿ ಕುಳಿತಿರುವುದು ಕಂಡಿತು. ಏಟು ತಗಲಿದ ಹುಲಿಯಾದ ಒದೇನ ತನ್ನ ಉರ್ಮಿಯನ್ನು ತಿರುಗಿಸಿ ಎಸೆದುದು ಮಾಯನ್ ಪಕ್ಕಿಯನ್ನು ಇಕ್ಕಡಿಗೈದಿತ್ತು. ಗುಂಡಿನ ಸದ್ದಿನಿಂದ ದಿಗ್ಭ್ರಮೆಗೊಂಡ ಪಯ್ಯಾಂಬಳ್ಳಿ ಚಂದು ಒಮ್ಮೆಲೆ ಅರಳಿಕಟ್ಟೆಯಿಂದ ಲಾಗ ಹೊಡೆದು ಒದೇನನ ಬಳಿ ತಲಪಿದ. ಒದೇನನನ್ನು ನೋಡಿ ಎದೆಬಡಿದುಕೊಂಡು ಬೊಬ್ಬಿಟ್ಟ – ಹಾ! ಗೆಳೆಯ ಒದೇನ! ಎಂಥ ಘಾತವಾಯಿತು! ನಾನು ನಿನಗೆ ಹೇಳಿದ್ದೆನಲ್ಲ! ನೀನು ಕೇಳಿದೆಯ? ಅವನು ಒದೇನನನ್ನು ಎದೆಗಾನಿಸಿಕೊಂಡ. ಒದೇನ ಚಂದುವಿಗೆಂದ – ಚಂದು! ನನ್ನನ್ನು ಈಗ ಅಲುಗಾಡಿಸಬೇಡ. ಬೇಗ ನನ್ನ ಕಚ್ಚೆಲ (ವೀರಗಚ್ಚೆ)ವನ್ನು ಬಿಚ್ಚು. ಅದರಲ್ಲಿ ಹಸಿಮದ್ದಿದೆ. ಅದನ್ನು ತೆಗೆದು ಗಾಯಕ್ಕೆ ಕಟ್ಟು. ಚಂದು ಅವಸರವಸರವಾಗಿ ಕಚ್ಚೆಲ ಬಿಚ್ಚಲು ಯತ್ನಿಸಿದರೂ ಅದು ಬಡಪೆಟ್ಟಿಗೆ ಬಿಚ್ಚಲಿಲ್ಲ. ತನ್ನ ಸೊಂಟದಲ್ಲಿದ್ದ ಚೂರಿಯಿಂದ ಚಂದು ಕಚ್ಚೆಲವನ್ನ ಕತ್ತರಿಸಿ ಹಸಿಮದ್ದನ್ನು ಹೊರತೆಗೆದಾಗ ಒದೇನ ತನ್ನ ಮುಂಡಾಸನ್ನು ತೆಗೆದು ಹರಿದು ಗಾಯಕ್ಕೆ ಕಟ್ಟಲು ಚಂದುವಿಗೆ ಕೊಟ್ಟ. ಹಸಿಮದ್ದಿನ ಪರಿಣಾಮದಿಂದ ಒದೇನನಿಗೆ ಒಂದಿಷ್ಟು ಉಸಿರು ಬಂದ ಹಾಗಾಯಿತು. ಅವನೆಂದ – ನನ್ನನ್ನು ಕಯ್ಯನ್ನಿಡಂನ ತೇಯಿಯೇ ವಂಚಿಸಿ ಬಿಟ್ಟುದು ಚಂದೂ. ಆಗ ಚಂದು ಹೇಳಿದ – ನಿನ್ನನ್ನು ವಿಧಿಯೇ ವಂಚಿಸಿದ್ದೆಂದು ಹೇಳು. ಇಲ್ಲವಾದರೆ ಅವಳಿಗೆ ಅಂಥ ಬುದ್ಧಿಯಾಗಲಿ ನಿನಗೆ ಇಂಥ ಹಠವಾಗಲಿ ಯಾಕೆ ಬರುತ್ತಿತ್ತು? ಒದೇನನಿಗೆ ಈಗ ಮತ್ತೆ ನೋವು ಕಾಣಿಸಿಕೊಂಡ ಹಾಗಾಯಿತು. ಅವನೆಂದ – ಪಯ್ಯಾಂಬಳ್ಳಿಯ ಪ್ರಿಯ ಚಂದು! ಇನ್ನು ಅಣ್ಣನ ಬಳಿಗೆ ತಲಪುವಾಗ ಒಂದಿಷ್ಟೂ ದುಃಖ ನಿನ್ನಲ್ಲಿ ಕಾಣಬಾರದು. ಅಂಥ ಮಾತುಗಳೂ ಹೊರಡ ಬಾರದು. ಬಳಿಕ ಒದೇನನು ಮಾಯನ್ ಪಕ್ಕಿಯನ್ನು ಕೊಂದ ತನ್ನ ಪ್ರಿಯ ಆಯುಧ ಉರ್ಮಿಯನ್ನು ತನಗೆ ತಂದುಕೊಡುವಂತೆ ಹೇಳಿದ. ಅವನ ಇಷ್ಟದಂತೆ ಚಂದುವು ಮಾಯನ ರಕ್ತದ ಕಲೆ ಅಂಟಿದ್ದ ಒದೇನನ ಉರುಮಿಯನ್ನು ಎತ್ತಿ ತಂದಿತ್ತ. ಉರುಮಿ ಸುರಿಗೆಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಒದೇನ ನಿಧಾನವಾಗಿ ನಡೆಯುತ್ತ ಅರಳಿಕಟ್ಟೆಗೆ ಬಂದ.

ಅವನಿಗೆ ಆಯಾಸ ಹೆಚ್ಚುತ್ತಿತ್ತು. ಅರಳಿಕಟ್ಟೆಯಲ್ಲಿ ಕುಳಿತುಕೊಳ್ಳಲು ಯತ್ನಿಸುತ್ತಿದ್ದ ಒದೇನನಿಗೆ ಆಧಾರವಾಗುವಂತೆ ಚಂದು ಕೈ ಹಿಡಿದಾಗ ಅವನನ್ನು ತಡೆದು ಒದೇನ ಹೇಳಿದ – ಚಂದು! ನಾನೇ ಕುಳಿತುಕೊಳ್ಳಲು ನನ್ನನ್ನು ಬಿಡು. ಒದೇನ ಬರುವುದನ್ನೇ ಕಾಯುತ್ತಿದ್ದ ತಚ್ಚೋಳಿ ಕೋಮಕುರುಪ್ಪ್ ತಮ್ಮನ ಈ ಸ್ಥಿತಿಯನ್ನು ಕಂಡು ಬೆಟ್ಟದ ಮೇಲಿನ ಬಿದಿರು ಒಡೆದಂತೆ ಗಳಗಳನೆ ಅತ್ತುಬಿಟ್ಟ, ಅಳುತ್ತ ಹೀಗೆ ಗೋಳಿಟ್ಟ – ನನ್ನ ಪ್ರಿಯ ತಮ್ಮಾ! ನಮ್ಮ ಕಣ್ಮಣಿ, ಮಗೂ ಒದೇನ! ಇದೇನಪ್ಪ ಇದು! ಸುರಿಗೆಯಂಥ ಒಂದು ಮಡಿಲಾಯುಧ ಹೋದರೇನಾಗುತ್ತಿತ್ತು? ನಮ್ಮ ಮನೆಯಲ್ಲಿ ಅಂಥವು ಬೇರೆ ಎಷ್ಟಿಲ್ಲ? ಯಾರು ಬೇಡವೆಂದರೂ ನೀನು ಕೇಳುವವನೆ? ನಮ್ಮ ಮನೆಯ ಬೆಳಕೇ ನಂದಿಹೋಗುತ್ತಿದೆಯಪ್ಪಾ! ಒದೇನ ಅಣ್ಣನ ರೋದನವನ್ನು ತಡೆದ – ಇದೇನಣ್ಣ? ಇಲ್ಲಿ ಎಷ್ಟೊಂದು ಜನ ಸೇರಿದ್ದಾರೆ. ಈಗ ನೀನು ಹೀಗೆ ರೋದಿಸಬಾರದು. ಏನೋ ಒಂದಿಷ್ಟು ಏಟು ತಗಲಿದ ಮಾತ್ರಕ್ಕೆ ಇದೇನು ರೋದನ ನಿನ್ನದು? ಹಾಗೆಲ್ಲ ನೀನು ಆಳಬಾರದು. ಎಲ್ಲಿ, ಕಣ್ಣೀರು ಒರಸಿಕೊ ನೋಡೋಣ. ಕೋಮ ಕುರುಪ್ಪ್‌ಗೆ ಏನು ಸಮಾಧಾನ ಹೇಳಿದರೂ ತಡೆದುಕೊಳ್ಳಲು ಕಷ್ಟವಾಗುತ್ತಿತ್ತು. ನನ್ನ ಪ್ರಿಯ ತಮ್ಮಾ! ಮಗೂ ಒದೇನ! ಎಂದು ಗೋಳಿಡುತ್ತಲೇ ಇದ್ದ.

ಒದೇನನಿಗೆ ಬಳಲಿಕೆ ಆಗಾಗ ಕಾಣಿಸುತ್ತಿತ್ತು. ಅದನ್ನು ಕಂಡು ಕೋಮಕುರುಪ್ಪ್ ಹೇಳಿದ – ಬೇಗ ಒಂದು ಕೈಮಂಚವನ್ನು ಸಿದ್ಧಮಾಡಿ. ಅದಕ್ಕೆ ಒದೇನನೆಂದ – ಅಣ್ಣಾ ಕೋಮಕುರುಪ್ಪೇ, ಇದೇನಣ್ಣ? ಮಂಚಲಿನಲ್ಲಿ ಕರೆದೊಯ್ದರೆ ಎಲ್ಲ ಕೈತಟ್ಟಿ ನಕ್ಕಾರು. ನಿನ್ನ ತಮ್ಮ ತಚ್ಚೋಳಿ ಒದೇನ, ಪೊನ್ನಿಯದ ಪಡೆಕಾದಿ ಗೆದ್ದವನು, ಮಂಚಿಕೆಯಲ್ಲಿ ಸಾಗುವುದು ಎಂಥ ನಾಚಿಕೆ ಕೆಲಸ! ಪಡೆಕಾದಿ ಒದೇನ ಮನೆಗೆ ನಡೆದು ಹೋಗಲು ಆಗದಷ್ಟು ಬಳಲಿದನೆಂದು ಆಗದವರು ಅದಕ್ಕೆ ಇನ್ನಷ್ಟು ಬಣ್ಣ ಹಚ್ಚಿ ನಕ್ಕಾರು. ತಚ್ಚೋಳಿ ಮೇಪ್ಪಕ್ಕೆ ನಡೆದು ಹೋಗುವಷ್ಟು ನನ್ನ ಕಾಲುಗಳು ಬಲವಾಗಿವೆ. ಅದಕ್ಕೆ ಕೋಮ ಕುರುಪ್ಪನೆಂದ – ಬೇಡ ಬೇಡ ಒದೇನ! ನಡೆದು ಹೋಗುವುದು ತುಂಬ ಅಪಾಯ. ಆಗ ಒದೇನನೆಂದ – ಅಣ್ಣಾ ಕೋಮ ಕುರುಪ್ಪೇ! ಇದೇನಣ್ಣ? ಹಣೆಗೆ ಗುಂಡು ತಾಗಿ ಬದುಕಿ ಉಳಿದವರನ್ನು ಯಾರನ್ನಾದರೂ ಕಂಡಿದ್ದೀರಾ ಅಥವಾ ಹಾಗೆಂದು ಕೇಳಿದೀರಾ? ಹುಟ್ಟಿದವರೆಲ್ಲರೂ ಒಂದು ದಿನ ಸಾಯಲೇಬೇಕು. ಸತ್ತರೂ ಮಾನಗೆಡಬಾರದಲ್ಲ! ಈ ಮಾತುಗಳನ್ನು ಒದೇನ ಹೇಳಿದಾಗಲಷ್ಟೆ ಕೋಮ ಕುರುಪ್ಪ್‌ಗೆ ವಾಸ್ತವ ಅರಿವಾಯಿತು. ಅವನು ನನ್ನ ಮಗೂ ಒದೇನ! ಎನ್ನುತ್ತ ನೆಲಕ್ಕೆ ಕುಸಿದ. ಚೀನಂವೀಡ್‌ನ ತಂಙಳ್ ವಾಟುನ್ನವರ್ (ಒದೇನನ ತಂದೆ), ತೋಟತ್ತಿಲ್ ಕೇಳಪ್ಪನ್ ನಂಬಿಯಾರ್, ಹೊಸ ಅರಮನೆಯ ಅರಸು, ಅಹಮ್ಮದ್ ಮರಕ್ಕಾರ್ ಮುಂತಾದವರೂ ಈ ದೃಶ್ಯವನ್ನು

ನೋಡಿ ಮರುಗಿದರು. ಆಗ ಒದೇನನೇ ಅವರಿಗೆ ಧೈರ್ಯದ ಮಾತುಗಳನ್ನು ಹೇಳಿದ. ನೀವೆಲ್ಲ ಯಾಕೆ ಸಂಕಟಪಡುತ್ತೀರಿ? ನನ್ನ ಆಯುಷ್ಯದಲ್ಲಿ ನಾನು ಎಷ್ಟೋ ಮಂದಿಯ ಕಣ್ಣೀರಿಗೆ ಕಾರಣನಾಗಿದ್ದೇನೆ. ಈಗ ನನ್ನವರ ಸರದಿ. ಆದರೆ ನೀವು ಮನಸ್ಸು ಗಟ್ಟಿ ಮಾಡಿಕೊಳ್ಳಿ. ನನ್ನ ಜೀವಮಾನ ಕಾಲದ ಇಂದಿನ ಸಾಧನೆಗಾಗಿ ಹೆಮ್ಮೆ ಪಡಿ.

ಅಷ್ಟರಲ್ಲಿ ಮಣಕ್ಕಾ ತೆರುವಿನ ಕುಂಞಿಮಾಕ್ಕ ಎಂಬ ಹೆಂಗಸು ಒಂಟಿವಸ್ತ್ರ ಉಟ್ಟುಕೊಂಡು ಗೋಳಿಡುತ್ತ ಓಡುತ್ತ ಬೆವರುತ್ತ ಅಲ್ಲಿಗೆ ಬಂದಳು. ಒದೇನ ಅದನ್ನು ಕಂಡ. ಅವನು ಚಂದುವಿಗೆಂದ – ಚಂದು! ಜನರನ್ನು ಒಂದಿಷ್ಟು ಸರಿಸು. ಅವಳು ಒಂದು ಬಾರಿ ನನ್ನನ್ನು ನೋಡಿಕೊಳ್ಳಲಿ. ಹತ್ತಿರಬಂದ ಆಕೆಗೆ ಒದೇನನ ಸ್ಥಿತಿಯನ್ನು ಕಂಡು ದುಃಖದ ಕಟ್ಟೆಯೊಡೆಯಿತು. ಅವಳು ಜೋರುದನಿ ತೆಗೆದು ಅಳಲಾರಂಭಿಸಿದಳು. ಒದೇನ ಅವಳನ್ನು ತಡೆದೆಂದ – ಇಷ್ಟೊಂದು ಜನರ ಮುಂದೆ ನನ್ನ ಮಾನ ಕಳೆಯಬೇಡ. ನನ್ನನ್ನು ನೋಡಿದೆಯಲ್ಲವೇ? ಇಗೋ ಈ ಉಂಗುರವನ್ನು ತೆಗೆದುಕೊ. ಅದರಲ್ಲಿ ನನ್ನನ್ನು ಕಾಣುತ್ತಿರು, ಹೋಗು. ಅವಳು ಬಾಯಿಗೆ ಸೆರಗಿಕ್ಕಿ ಅಳುತ್ತ ಮೆಲ್ಲಗೆ ಹೊರಟು ಹೋದಳು.

ಎಲ್ಲರೂ ಮುಂದೆ ಸಾಗಿದರು. ಒದೇನನ ಬಳಲಿಕೆ ಹೆಚ್ಚಿತು. ತುಂಬ ಕಷ್ಟದಿಂದ ಹೆಜ್ಜೆ ಇರಿಸುತ್ತಿದ್ದ. ಪುನಃ ಪಯ್ಯಾಂಬಳ್ಳಿ ಚಂದುವು ಆಧಾರಕ್ಕಾಗಿ ಕೈನೀಡಲು ಒದೇನನೆಂದ – ತಚ್ಚೋಳಿ ಮನೆಗೆ ತಲಪುವ ತನಕ ಯಾರನ್ನೂ ಅವಲಂಬಿಸದೆ ನಡೆದು ಹೋಗುವೆ. ಅದಕ್ಕೆ ಅವಕಾಶ ಕೊಡಿ. ಅವರು ಪೆರಿಂಜೋಳನಾರ್ ಹೊಳೆಯ ಬಳಿ ತಲಪಿದರು. ತಾವು ಎಲ್ಲಿದ್ದೇವೆ ಎಂದು ಒದೇನನಿಗೆ ಗುರುತಿಸಲು ಸಾಧ್ಯವಾಗಲಿಲ್ಲ. ಆಗ ಚಂದುವೇ ಅವನಿಗೆ ಅದನ್ನು ಹೇಳಿದ. ಜನರ ದುಃಖ ಮುಗಿಲು ಮುಟ್ಟುತ್ತಿತ್ತು. ಕಿವಿಗೊಟ್ಟು ಕೇಳಿದರೆ ತಚ್ಚೋಳಿ ಮನೆಗೂ ಅದು ಕೇಳಿಸುವಂತಿತ್ತು. ಒದೇನ ಪಯ್ಯಾಂಪಳ್ಳಿ ಚಂದುವಿಗೆಂದ – ಚಂದು! ಪಂದಕ್ಕಲ್‌ಗೆ ತಲಪುವಾಗ ನನಗೆ ಒಬ್ಬಾಕೆಯನ್ನು ಕಾಣಬೇಕು – ಮುಂಡೋಕ್ಕಲ್ ಮನೆಯ ಕುಂಞಿಕುಂಕಮ್ಮ. ಅವಳು ದಾರಿಯಲ್ಲಿ ಕಾಯುತ್ತಿದ್ದರೆ ನನ್ನ ಬಳಿಗೆ ಅವಳನ್ನು ಕರೆಸು. ಕುಂಞಿಕುಂಕಮ್ಮ ಒಂದು ಗಿಂಡಿ ನೀರನ್ನು ಹಿಡಿದುಕೊಂಡು ನಿಂತಿದ್ದಳು. ಅವಳನ್ನು ಒದೇನನ ಬಳಿ ಕರೆಸಿದರು. ಅವಳು ಆ ನೀರಿನಿಂದ ಒದೇನನ ಕಾಲು ತೊಳೆದು ತನ್ನ ಮೇಲುವಸ್ತ್ರದಿಂದ ಕಾಲುಗಳನ್ನು ಒರಸಿದಳು. ತುಂಬಿದ್ದ ಕಣ್ಣುಗಳಿಂದ ಎರಡು ಹನಿ ಒದೇನನ ಪಾದಗಳಿಗೆ ಬಿದ್ದುವು. ಒದೇನ ತನ್ನ ನಡುಬೆರಳಿನ ಉಂಗುರವನ್ನು ಕಳಚಿ ಅವಳಿಗೆ ನೀಡಿದ. ಹೆಚ್ಚು ಹೊತ್ತು ಕೊಡದೆ ಅವಳನ್ನು ಮುಂಡೋಕ್ಕಲ್ ಕುಂಞಿಕಣ್ಣ ಕರೆದುಕೊಂಡು ಹೋದ.

ಒದೇನ ಬಹುಕಷ್ಟದಿಂದ ಹೆಜ್ಜೆಯಿಡುತ್ತ ಕಲ್ಲಡಿಯನ್ ಪರಂಬ್ ತಲಪಿದಾಗ ಕೋಮ ಕುರುಪ್ಪ್‌ಗೆಂದ – ಅಣ್ಣ! ಎಲ್ಲರೂ ಒಂದಿಷ್ಟು ಹೊತ್ತು ಇಲ್ಲಿ ನಿಲ್ಲಲಿ. ನನಗೆ ಸ್ವಲ್ಪ ಮಾತುಗಳನ್ನು ಆಡಬೇಕೆಂಬ ಬಯಕೆ. ಎಲ್ಲರೂ ನಡೆಯುವುದನ್ನು ನಿಲ್ಲಿಸಿದರು. ಬಳಿಕ ಎಲ್ಲ ಸದ್ದುಗಳೂ ನಿಂತುವು. ಒದೇನ ಪ್ರಯತ್ನಪೂರ್ವಕ ಜೋರಾಗಿ ಮಾತನಾಡ ತೊಡಗಿದ – ಅಣ್ಣಾ! ಈ ಕಲ್ಲು ಹಿತ್ತಿಲಿನ ಕಲ್ಲು ಒಡೆದು ದೂರ ರಾಶಿ ಹಾಕಿ ಒಳ್ಳೆಯ ಮಣ್ಣು ತುಂಬಿಸಿ ತೆಂಗಿನ ತೋಪುಮಾಡಿದೆವು. ಸಾವಿರ ತೆಂಗಿನ ಸಸಿಗಳು ಇವೆ. ಅರ್ಧದಷ್ಟು ಒಳ್ಳೆಯ ಫಲ ಕೊಡುತ್ತಿವೆ. ಕಾವಿಲ್ ಚಾತ್ತೋತ್ತ್‌ಚೇರು ನಮ್ಮ ಜತೆ ಸಾಕಷ್ಟು ಬೆವರು ಇಲ್ಲಿ ಹರಿಸಿದ್ದಾಳೆ. ಈ ತೋಪಿನಿಂದ ನೂರು ಗಿಡಗಳ ತೆಂಗಿನಕಾಯಿಯನ್ನು ಅವಳಿಗೆ ಪ್ರತಿವರ್ಷವೂ ಕೊಡಿ. ನಮ್ಮ ಮನೆಯ ಮುಂದೆ ಮೂರು ಸಾವಿರ ಮುಡಿ ಭತ್ತದ ಗದ್ದೆಗಳಿವೆ. ಅದು ಪಿತ್ರಾರ್ಜಿತ. ಅದರಲ್ಲಿ ಅರ್ಧವನ್ನು ಅವಳಿಗೂ ಮಗು ಅಂಬಾಡಿಗೂ ಕೊಡಿಸು. ಕೋಮಕುರುಪ್ಪ್ – ನಿನ್ನಾಣೆಗೂ ಕೊಡಿಸುವೆ ಎಂದು ಗದ್ಗದ ಕೊರಳಿಂದ ಹೇಳಿದ. ಒದೇನ ಮುಂದುವರಿಸಿದ – ಅಣ್ಣಾ! ನನ್ನ ಮಗು ಅಂಬಾಡಿ ಎಳನೀರು ಪ್ರಿಯ. ಕಟ್ಟಹುಣಿಯ ಐದು ತೆಂಗುಗಳ ಎಳನೀರು ಅವನಿಗೆ ಬೇಕಾದಾಗ ಕುಡಿದುಕೊಳ್ಳಲಿ. ಕೋಮಕುರುಪ್ಪ್ – ಕುಡಿದುಕೊಳ್ಳಲಿ, ಅದಕ್ಕೇನಂತೆ! ಎನ್ನುತ್ತ ಒಪ್ಪಿಕೊಂಡ. ಸ್ವಲ್ಪ ಹೊತ್ತು ಒದೇನ ಮೌನವಾದ. ಕಣ್ಣು ಮುಚ್ಚಿಕೊಂಡು ನಿಧಾನಕ್ಕೆ ಉಸಿರೆಳೆದುಕೊಳ್ಳುತ್ತಿದ್ದ. ಪಯ್ಯಂಬಳ್ಳಿ ಚಂದು ಕೇಳಿದ – ಇನ್ನೂ ಏನಾದರೂ ಹೇಳಲಿದೆಯೇ ಒದೇನ? ಒದೇನನೆಂದ – ಹೌದು ಚಂದು! ಕಯ್ಯನ್ನಿಡಂನ ತೇಯಿಗೆ ಒಂದು ಅಕ್ರದ ಕಡ್ಡಿ ಕೂಡ ಕೊಡಬೇಡಿ. ನನ್ನ ತಾಯಿತದಂಡು ಅವಳಲ್ಲಿದೆ. ಅದನ್ನು ಅಂಬಾಡಿಗೆ ನೀವು ಅವಳಿಂದ ತೆಗೆಸಿಕೊಡಬೇಕು. ಮುಂಡೋಕ್ಕಲ್ ಮನೆಯ ಕುಂಕಿಯಮ್ಮ ನಿಗೂ ಏನು ಕೊಡಬೇಕಾಗಿಲ್ಲ. ಅವಳಿಗೆ ಬೇಕಾದ್ದನ್ನು ನಾನೇ ಕೊಡಿಸಿದ್ದೇನೆ.

ಸ್ವಲ್ಪ ಹೊತ್ತು ಕಳೆಯಿತು. ಕಂಡಾಚ್ಚೇರಿ ಚಾಪ್ಪನನ್ನು ಕರೆದು ಒದೇನನೆಂದ – ಕಂಡಾಚ್ಚೇರಿ ಪ್ರಿಯ ಚಾಪ್ಪ! ಹೋಗಿ ನನ್ನ ಚೀರುವನ್ನೂ ತಂಗಿ ಚಿರುದೇಯಿಯನ್ನೂ ಅಂಬಾಡಿಯನ್ನೂ ಒಂದು ಕೋಣೆಯೊಳಗೆ ಕೂಡಿ ಬಾಗಿಲು ಹಾಕು. ನೀನು ಹೊರಗೆ ಅಲ್ಲೇ ಇರು. ಅವರು ನನ್ನನ್ನೇ ಅಲ್ಲಿ ಈಗ ಕಾಯುತ್ತಿರಬಹುದು. ಚಾಪ್ಪ ಅಂತೆಯೇ ತಚ್ಚೋಳಿ ಮನೆ ತಲಪಿದಾಗ ಎಲ್ಲರೂ ಅವನಲ್ಲಿ ವಿಶೇಷಗಳನ್ನೂ ಹೊಸ ಸುದ್ದಿಗಳನ್ನೂ ತಿಳಿಯಲು ತವಕಗೊಂಡರು. ಚಾಪ್ಪನೆಂದ – ಒದೇನ ಕುರುಪ್ಪರು ಗೆದ್ದು ಬಂದಿದ್ದಾರೆ. ಮನೆಗೆ ಪ್ರವೇಶಿಸುವಾಗ ಹೊಸ ರೇಶ್ಮೆಯ ಬಟ್ಟೆ ಉಟ್ಟುಕೊಳ್ಳಬೇಕಲ್ಲವೆ? ಅದಕ್ಕಾಗಿ ನನ್ನನ್ನು ಕಳಿಸಿದ್ದಾರೆ. ಎಲ್ಲಿ? ಬಾಗಿಲು ತೆರೆದು ತೆಂಕುಕೋಣೆಯಿಂದ ರೇಶ್ಮೆ ಬಟ್ಟೆ

ತೆಗೆದುಕೊಡಿ ನೋಡೋಣ. ಒದೇನನು ಹೇಳಿದ್ದ ಮೂರು ವ್ಯಕ್ತಿಗಳೂ ಮನೆಯೊಳಗೆ ಹೋದಾಗ ಚಾಪ್ಪ ಬೇಗ ಬಾಗಿಲೆಳೆದುಕೊಂಡು ಹೊರಗಿನಿಂದ ಸಂಕಲೆ ಸಿಕ್ಕಿಸಿಬಿಟ್ಟ, ಕೂಡಲೆ ಕಲ್ಲಡಿಪರಂಬ್‌ಗೆ ಸಂದೇಶ ತಲಪಿಸಿದ.

ಈಗ ಮತ್ತೆ ಪ್ರಯಾಣ ಮುಂದುವರಿಯಿತು. ಒದೇನನ ಇಚ್ಚೆಯಂತೆ ಒಲವಣ್ಣೂರ್ ಕಾವಿಗೆ ಅವನನ್ನು ಕರೆದೊಯ್ಯಲಾಯಿತು. ಒದೇನನು ಮೆಲ್ಲಗೆ ಆದರೆ ಅಷ್ಟೇ ದೃಢ ಹೆಜ್ಜೆಗಳನ್ನಿಡುತ್ತ ಗರ್ಭಗುಡಿಯ ಬಾಗಿಲಿಗೆ ಬಂದ. ಬಾಗಿಲು ತೆರೆಯಿಸಿ ದೀಪ ಹೊತ್ತಿಸಿದರು. ಒದೇನ ತನ್ನ ಇಷ್ಟದೇವತೆ ಭಗವತಿಯ ಮೂರ್ತಿಯನ್ನು ಎವೆಯಿಕ್ಕದೆ ನೋಡಿದ. ಎರಡು ಹನಿ ಕಣ್ಣೀರು ಅವನ ಕೆನ್ನೆಗಳಿಂದ ಜಾರಿ ಕುಡಿಮೀಸೆಯ ಮೇಲೆ ಉರುಳಿದುವು. ಒದೇನ ಮೂರು ಹೆಜ್ಜೆ ಎಡಕ್ಕೆ ಸರಿದು ನಿಂತ. ಗರ್ಭಗುಡಿಯ ಬಾಗಿಲು ಮುಚ್ಚಿತು. ಅಲ್ಲಿಂದ ಸಾಗಿ ತಚ್ಚೋಳಿ ಮನೆ ಬಾಗಿಲಿಗೆ ಎಲ್ಲರೂ ತಲಪಿದರು. ಮೂರು ಸಿಡಿಗುಂಡುಗಳು ನೆಲದಿಂದ ಸಿಡಿದು ಅವುಗಳ ಸದ್ದು ತಚ್ಚೋಳಿ ಮನೆಯ ಎಂಟು ದಿಕ್ಕುಗಳಲ್ಲೂ ಮಾರ್ದನಿಸಿದುವು. ಒದೇನನ ಮುಖದಲ್ಲಿನ ಬಳಲಿಕೆಯನ್ನು ಹೆಮ್ಮೆ ಅಭಿಮಾನಗಳು ಗೆದ್ದಿದ್ದುವು. ಹೆಜ್ಜೆಗಳಲ್ಲಿ ದಿಟ್ಟತನವಿತ್ತು. ಬಲಗೈಯಲ್ಲಿ ಉರ್ಮಿಯೂ ಸುರಿಗೆಯೂ ಎಡಗೈಯಲ್ಲಿ ಗುರಾಣಿಯೂ ಶೋಭಿಸುತ್ತಿದ್ದುವು. ಪಯ್ಯಾಂಪಳ್ಳಿ ಚಂದು ಬೆಳ್ಳಿಯ ಗಿಂಡಿಯ ನೀರಿನಿಂದ ಒದೇನನ ಕಾಲು ತೊಳೆದ. ಒದೇನನು ಎಂದಿನಂತೆ ತೆಂಕು ಕೋಣೆ ಪ್ರವೇಶಿಸಿ ಅಲ್ಲಿ ಉರ್ಮಿ ಸುರಿಗೆಯನ್ನೂ ಗುರಾಣಿಯನ್ನೂ ಎಡಬಲಗಳಲ್ಲಿರಿಸಿ ಆಚಾರದಂತೆ ಅವುಗಳಿಗೆ ನಮಸ್ಕರಿಸಿ ಬಳಿಯಲ್ಲಿಯೇ ಇದ್ದ ಹೊಂಬೆತ್ತದ ತನ್ನ ಮಂಚದಲ್ಲಿ ಮಲಗಿಕೊಂಡ.

ಕೋಣೆಯೊಳಗೆ ಮಲಗಿದ್ದ ಒದೇನನಿಗೆ ಅಂಬಾಡಿ, ಚೀರು, ಉಣ್ಣಿಚ್ಚಿರುದ ಮುಂತಾದವರ ಆರ್ತನಾದ ಕಿವಿಗೆ ಬೀಳುತ್ತಿತ್ತು. ಅವನು ಕಂಡಾಚ್ಚೇರಿ ಚಾಪ್ಪನನ್ನು ಕರೆಸಿ ಅವರನ್ನೆಲ್ಲ ಕರೆತರುವಂತೆ ಹೇಳಿದ. ಅಣೆಕಟ್ಟಿನ ಕಿಂಡಿಯಿಂದ ನೀರು ಧುಮ್ಮಿಕ್ಕುವಂತೆ ಎಲ್ಲರೂ ಮುನ್ನುಗ್ಗಿ ಬಂದರು. ಆದರೆ ಕೋಮಕುರುಪ್ಪ್, ಪಯ್ಯಂಬಳ್ಳಿ ಚಂದು ಇಬ್ಬರೂ ಅಂಬಾಡಿ, ಚೀರು ಮತ್ತು ಉಣ್ಣಿಚ್ಚಿರರನ್ನಷ್ಟೆ ಹತ್ತಿರಬಿಟ್ಟರು. ಅಷ್ಟರಲ್ಲಿ ಕೋಮಕುರುಪ್ಪನ ಹೆಂಡತಿ ನಾಗತ್ತೆಳಂಕೋಡಿ ಮಾತುವೂ ಓಡಿ ಬಂದಳು. ಒದೇನನು ಅಂಬಾಡಿಯನ್ನು ಕೈನೀಡಿ ತನ್ನ ಬಳಿ ಮಂಚದಲ್ಲಿ ಕುಳ್ಳಿರಿಸಿಕೊಂಡ. ಬಳಿಕ ಪ್ರೀತಿಯಿಂದ ಅವನ ತಲೆ, ಬೆನ್ನುಗಳನ್ನು ಸವರಿದ. ಐದೂವರೆ ವರ್ಷದ ಆ ಬಾಲಕನ ಭಾವಗಳನ್ನು ಕಂಡ ಜನ ಮಮ್ಮಲ ಮರುಗಿದರು. ಒದೇನ ಅಣ್ಣನನ್ನು ಕರೆದೆಂದ – ಅಣ್ಣಾ ಕೋಮಕುರುಪ್ಪೇ! ನನ್ನ ಉರುಮಿ ಗುರಾಣಿಗಳಿಗೂ ನನ್ನ ದಿರಿಸು ಆಭರಣಗಳಿಗೂ ಅಂಬಾಡಿಯೇ

ಅಧಿಕಾರಿ. ಅವನಿಗೆ ಒಳ್ಳೆಯ ಗುರುಕ್ಕಳಿಂದ ವಿದ್ಯಾಭ್ಯಾಸ ಮಾಡಿಸಿ. ಅವನನ್ನು ಕಾವಿಲ್ ಚಾತ್ತೋತ್ತ್‌ಗೆ ಕಳುಹಿಸಬಾರದು. ಅಂತೆಯೇ ಕುಂಞಿಚ್ಚೇರುವನ್ನು ಕೂಡ. ಬಳಿಕ ಅತ್ತಿಗೆಯನ್ನು ಕರೆದೆಂದ – ನಾಗತ್ತೆಳಂಕೋಡಿಯ ನನ್ನ ಅತ್ತಿಗೆಮ್ಮಾ! ಚೀರುವನ್ನೂ ಅಂಬಾಡಿಯನ್ನೂ ನಿಮ್ಮ ಕೈಗೆ ಹಾಕಿದ್ದೇನೆ. ಅವರನ್ನು ಪ್ರೀತಿಯಿಂದ ನೋಡಿಕೊಳ್ಳಿ. ತಂಗಿ ಉಣ್ಣಿಚಿರುದೆ ಯಾವ ನಿರ್ಬಂಧಗಳೂ ಇಲ್ಲದೆ ಇಲ್ಲಿಗೆ ಬರುತ್ತ ಹೋಗುತ್ತ ಇರಲಿ. ಒದೇನ ಅಷ್ಟು ಹೇಳಿ ನಿಲ್ಲಿಸಿದಾಗ ಕಂಡಾಚ್ಚೇರಿ ಚಾಪ್ಪನೆಂದ – ನನ್ನ ಧನೀ! ನನ್ನ ಯಜಮಾನರೇ! ತಚ್ಚೋಳಿಯ ಸಣ್ಣ ಕುರುಪ್ಪರೇ! ಒದೇನಪ್ಪ! ಎಲ್ಲರಿಗೂ ಕೈಯೆತ್ತಿ ಕೊಟ್ಟಿರಿ. ನನಗೇನು ಕೊಡುವಿರಿ? ಅದಕ್ಕೆ ಒದೇನನೆಂದ – ಕಂಡಾಚ್ಚೇರಿಯ ಪ್ರಿಯ ಗೆಳೆಯ ಚಾಪ್ಪಾ! ನಿನಗೇನನ್ನು ಹೇಳಲಿ. ಚಿಕ್ಕಂದಿ ನಿಂದಲೂ ನನ್ನನ್ನು ನೆರಳಿನಂತೆ ಅನುಸರಿಸಿಕೊಂಡಿದ್ದವನು ನೀನು, ಹಿಂದೆಯೂ ಮುಂದೆಯೂ. ನನ್ನಜತೆಗೇ ಅತ್ತೆ, ನಕ್ಕೆ. ಈಗ ನಿನಗೇನು ನಿರ್ದೇಶಿಸಲಿ ನಾನು? ಸಾಧ್ಯವಾದರೆ ಅಣ್ಣನಿಗೆ ಒಂದಿಷ್ಟು ಆಸರೆಯಾಗು. ನಿನ್ನ ಪ್ರೀತಿ ವಿಶ್ವಾಸಗಳಿಗೆ ಪ್ರತಿಯಾಗಿ ಕೊಡಲು ನಾನು ಅಂಥ ಶ್ರೀಮಂತನಲ್ಲವಪ್ಪ!

ಒದೇನನಿಗೆ ಬಳಲಿಕೆ ತುಂಬ ಹೆಚ್ಚಿತು. ಕುಡಿಯಲು ಏನಾದರೂ ಬೇಕೆಂದು ಅವನು ಸೂಚಿಸಲು ಕೂಡಲೇ ಚಾಪ್ಪನು ಒದೇನನಿಗೆ ಇಷ್ಟವಾದ ಎರಡು ಬನ್ನಂಗಾಯಿ (ಬಲಿತ ಎಳನೀರು) ಗಳನ್ನು ಮನೆಯ ಮುಂದಿನ ಕಟ್ಟಪ್ಪುಣಿಯಿಂದ ಇಳಿಸಿ ತಂದ. ಬೇಗ ಬೇಗ ಕೆತ್ತಿದ. ಒಂದು ಬೆಳ್ಳಿಯ ಗಿಂಡಿಗೆ ಸುರುವಿ ಅದನ್ನು ಒದೇನನಿಗೆ ಕುಡಿಸು ವಂತೆ ಚೀರುವಿಗೆ ಹೇಳಿದ. ಅವಳು ಅಂತೆಯೇ ಬೆಳ್ಳಿಯ ಗಿಂಡಿಗೆ ಸುರುವಿ ಒದೇನನಿಗೆ ಸ್ವಲ್ಪ ಸ್ವಲ್ಪವೇ ಕುಡಿಸಿದಳು. ಅಂಬಾಡಿಯೂ ತಾಯಿಯ ಜತೆಗೆ ಗಿಂಡಿಯನ್ನು ಹಿಡಿದು ಕೊಂಡ. ಒದೇನನು ಚೀರು ಅಂಬಾಡಿಯರ ಕೈಗಳ ಸಮೇತ ಗಿಂಡಿಯನ್ನು ಹಿಡಿದು ಕೊನೆಯ ಗುಟುಕನ್ನು ಕುಡಿದ. ಗಿಂಡಿಯಲ್ಲಿ ಇನ್ನೂ ಅರ್ಧ ನೀರು ಬಾಕಿಯಿತ್ತು. ಕೋಮಕುರುಪ್ಪ್‌ಗೆ ಮತ್ತೆ ಅಳುವಿನ ಕಟ್ಟೆಯೊಡೆಯಿತು. ಒದೇನ ಅವನ ಕೈ ಹಿಡಿದುಕೊಂಡು ನಿಧಾನವಾಗಿ ಹೇಳಿದ – ತಚ್ಚೋಳಿ ಕೋಮಕುರುಪ್ಪೇ! ನನ್ನಣ್ಣ! ಮಲಬಾರ್‌ನ ನಾಲ್ಕು ರಾಜ್ಯ ಹದಿನೆಂಟು ನಾಡು ಎಪ್ಪತ್ತೆರಡು ಮಾಗಣೆಗಳಲ್ಲಿ ತಚ್ಚೋಳಿ ಮೇಪ್ಪದ ಹೆಸರು ಮುಂದಿನ ಸಾಲಲ್ಲಿ ನಿಲ್ಲುವಂತೆ ಮಾಡಿದೆವು. ಅದೆಷ್ಟೋ ಧನಧಾನ್ಯಗಳನ್ನೂ ಬೆಳ್ಳಿ ಬಂಗಾರವನ್ನೂ ಸಂಗ್ರಹಿಸಿದೆವು. ಅವುಗಳಲ್ಲಿ ಸಾಕಷ್ಟನ್ನು ಬಡಬಗ್ಗರಿಗೂ ಕೊಟ್ಟೆವು. ರಾಜ್ಯದ ಒಡೆಯರಿಂದ ತೊಡಗಿ ಕೊನೆಯ ಬಡವನ ತನಕ ಗೌರವಿಸುವ ಮನೆ ನಮ್ಮದು. ಇವೆಲ್ಲ ಇನ್ನೂ ಇನ್ನೂ ಮುಂದುವರಿಯಲಿ. ನೂರಾರು ನಾಲಿಗೆಗಳಲ್ಲಿ

ನಮ್ಮ ಕಥೆ ಹಾಡಾಗಿ ಹರಿಯಲಿ. ಹತ್ತಾರು ಕೈಗಳು ಅವನ್ನು ಅಕ್ಷರಗಳಲ್ಲಿಯೂ ಬರೆದು ಧನ್ಯರಾಗಲಿ. ನನ್ನ ಪ್ರಿಯ ತಚ್ಚೋಳಿ ಮೇಪ್ಪದ ಮನೆಗೂ ಮಾಣಿಕೋತ್ತ್‌ಗೂ ಇದೋ ಈ ಬಾಲಒದೇನನ ಕೊನೆಯ ವಿದಾಯ. ತಚ್ಚೋಳಿ.. ಮೇಪ್ಪ...... ಮಾಣಿ ಕೋತ್ತ್......... ಒಲವಣ್ಣೂರ್ ಭಗವತಿ........

ಒದೇನನ ಮಾತು ನಿಂತಿತ್ತು. ಆದರೇನು? ಮುಖದ ವೀರಶ್ರೀ ಮಸುಕಾಗಿರಲಿಲ್ಲ. ತಚ್ಚೋಳಿ ಮನೆಯಿಂದ ಮೂರು ಸಿಡಿಗುಂಡುಗಳು ಆ ವೀರನ ಮರಣವನ್ನು ಸುತ್ತೆಲ್ಲ ಸಾರಿದುವು. ಕಂಡಾಚ್ಚೇರಿಯೂ ಪಯ್ಯಾಂಪಳ್ಳಿಯೂ ಪರಸ್ಪರ ಕಣ್ಣೀರು ಒರೆಸಿಕೊಂಡರು. ಅಂಬಾಡಿ ಕುಂಞಿಚೀರುವನ್ನು ತಬ್ಬಿಕೊಂಡ. ಕುಂಞಿಚೀರು ಕಲ್ಲಾಗಿದ್ದಳು.

ಗ್ರಂಥಋಣ

ಕ್ರ.ಸಂ	ಕೃತಿ	ಲೇಖಕ/ಸಂಪಾದಕ	ಪ್ರಕಾಶಕರು	ವರ್ಷ
1.	Malabar	William Logan Tachcholi Ballad Pages 96 to 101	Asian Educational Services (First Published-1887)	1995
2.	Ballads of North Malbar 2nd Edition	Ed: C. Achutha Menon	Madras University	1956
3.	ಇರುವತ್ತಿನಾಲ್ ವಡಕ್ಕನ್ ಪಾಟ್ಟುಗಳ್ *	ಸಂ. ಅಚ್ಯುತಾನಂದನ್	ಶ್ರೀ ರಾಮವಿಲಾಸಂ ಪ್ರೆಸ್ ಮತ್ತು ಬುಕ್ ಡಿಪೋ–ಕೊಲ್ಲಂ	–
4.	ತಚ್ಚೋಳಿ ಒದೇನನ್	ಕೆ. ಮಾಧವಿ ಅಮ್ಮ	ಕೆ. ಆರ್. ಬ್ರದರ್ಸ್	1956
5.	ತಚ್ಚೋಳಿ ಒದೇನನ್	ಕೆ. ವಾಸುದೇವನ್ ಮೂಸ್ಸದ್	ಭಾರತೀ ವಿಲಾಸಂ ಪ್ರೆಸ್ ಮತ್ತು ಬುಕ್ ಡಿಪೋ–ತ್ರಿಶ್ಶಿವಪೇರೂರ್	1958
6.	ವಡಕ್ಕನ್ ಪಾಟ್ಟುಗಳ್	ಸಂ: ಅಪ್ಪುಣ್ಣಿ ನಂಬ್ಯಾರ್ ಎಂ. ಸಿ	ಕರೆಂಟ್ ಬುಕ್ಸ್–ತ್ರಿಚ್ಚೂರು	1960
7.	ವಡಕ್ಕನ್ ಪಾಟ್ಟು ಪಠನಂಜಳ್	ಸಂ: ರಾಘವನ್ ಪಯ್ಯನಾಡ್	ಸೆಂಟರ್ ಫಾರ್ ಫೋಕ್ ಲೋರ್ ಸ್ಟಡೀಸ್, ಕಲ್ಲಿಕೋಟೆ ವಿ.ವಿ	2000

* ಈ ಪುಸ್ತಕವು ಶ್ರೀ ಅಚ್ಯುತಾನಂದನ್ ಕೆ.ಎನ್. ಮತ್ತು ಶ್ರೀ ನೀಲಕಂಠನ್ ನಂಬೂದಿರಿ ಪಿ.ಕೆ. ಇವರಿಂದ ಪರಿಶೋಧಿಸಲ್ಪಟ್ಟು ಎಕ್ಸ್ & ಸಿ ಪಬ್ಲಿಕೇಶನ್ ತ್ರಿಚ್ಚೂರ್, ಇವರಿಂದ 1997ರಲ್ಲಿ ಪುನಃ ಪ್ರಕಾಶನಗೊಂಡಿದೆ.

ಸಾಂಸ್ಕೃತಿಕ ಪದಕೋಶ

ಉಪ್ಪು ಮೆಣಸು : ತೀರ ಬಡವರು ಅನ್ನ ಗಂಜಿಯ ಜತೆ ಮಿಶ್ರಮಾಡಲು ಯಾವುದೇ ಮೇಲೋಗರಗಳನ್ನು ಸಿದ್ಧಪಡಿಸಿಕೊಳ್ಳದಷ್ಟು ಬಡವರಾದಾಗ/ ಸಾಂದರ್ಭಿಕ ವಾಗಿ ಉಪ್ಪನ್ನೂ ಒಂದೆರಡು ಹಸಿ/ಸುಟ್ಟ ಮೆಣಸನ್ನೂ ಅಲ್ಪ ಪ್ರಮಾಣದ ಹುಣಿಸೆ ಹಣ್ಣನ್ನೂ ಮಿಶ್ರಮಾಡಿ ಕಿವುಚಿಕೊಂಡು ತಯಾರಿಸುವ ಒಂದು ಸಾಧನ.

ಉಮಿಕರಿ : ಭತ್ತದ ಹೊಟ್ಟನ್ನು (ಉಮಿ) ಬೆಂಕಿಯಲ್ಲಿ ಉರಿಸಿ ಅದು ಪೂರ್ತಿ ಬೂದಿಯಾಗುವ ಮುನ್ನ ಆರಿಸಿ ಪುಡಿಮಾಡಿ ಒಂದಿಷ್ಟು ಉಪ್ಪು ಸೇರಿಸಿ ಇರಿಸಿಕೊಂಡು ಅದನ್ನು ಹಲ್ಲು ಉಜ್ಜಲು ಜನಪದರು ಬಳಸಿಕೊಳ್ಳುತ್ತಾರೆ.

ಉರುಮಿ : ಇದು ತೆಳು ತಗಡಿನ ಅಲಗುಳ್ಳ ಬಳುಕುವ ಖಡ್ಗ. ಕಳರಿ, ಗರಡಿಗಳಲ್ಲಿ ಇದನ್ನು ಪ್ರಯೋಗಿಸುವುದನ್ನು ಕಲಿಸಿಕೊಡಲಾಗುತ್ತದೆ. ಇದರ ಪ್ರಯೋಗಕ್ಕೆ ವಿಶೇಷ ಎಚ್ಚರ, ಪರಿಣತಿ ಅಗತ್ಯ.

ಊವಂ ಬಯಂಜುಗ/ಪೊರುಕ್ಕುಗ : ಇದಕ್ಕೆ 'ಬಿಡಾರಂ ಕಯರುಗ' ಎಂದೂ ಹೆಸರಿದೆ. ಇದು ಅಲ್ಪ ಖರ್ಚಿನ ವಿವಾಹ. ವಧುವಿಗೆ ಪುಡವ ಕೊಡುವುದಿಲ್ಲ. ಬಂಧುಗಳಿಗೆ ಮಾತ್ರ ಔತಣ. ಗಂಡು ಹೆಣ್ಣಿನಲ್ಲಿಗೆ ಹೋಗುತ್ತಾನೆ ಹೊರತು ಹೆಣ್ಣನ್ನು ತನ್ನ ಮನೆಗೆ ತರುವುದಿಲ್ಲ, ಅದು ಏನಿದ್ದರೂ ಪುಡಮುರಿಯು ಬಳಿಕ. ಈ ಪುಡಮುರಿಯು ಊವಂ ಬಯಂಜ್ ಕಳೆದು ಸುಮಾರು 10/12 ವರ್ಷದ ಬಳಿಕವೂ ನಡೆಯುವುದಿದೆ.

ಎಣ್ಣೆ ಹಚ್ಚುವ ವೆಚ್ಚಕ್ಕೆ ಕೊಡುವುದು/ ಹಚ್ಚುವ ಎಣ್ಣೆಗೆ ವೆಚ್ಚಕ್ಕೆ ಕೊಡುವುದು : ಹುಡುಗಿಯನ್ನು ಮುಂದೆ ವಿವಾಹವಾಗುವ ಹಕ್ಕು ಸ್ಥಾಪಿಸುವ ರೂಪದಲ್ಲಿ ಅವಳು ಮೈನೆರೆಯುವ ಮೊದಲೇ ಅವಳು ತಲೆಗೆ ಹಚ್ಚುವ ಎಣ್ಣೆಯ ಮತ್ತು ಉಡುವ

ಬಟ್ಟೆಯ ಖರ್ಚನ್ನು ಅವಳ ಮನೆಯ ಹಿರಿಯರಿಗೆ ಕೊಡುವುದು. ಈ ಸಂಪ್ರದಾಯ ಹಿಂದೆ ರೂಢಿಯಲ್ಲಿತ್ತು.

ಒಲವಣ್ಣೂರ್/ಲೋಕನಾರ್ ಕಾವು : ಒದೇನನ ಇಷ್ಟದೈವ ಭಗವತಿಯ ದೇವಾಲಯ (ಹೆಚ್ಚಿನ ವಿವರಗಳಿಗೆ ನೋಡಿ – ನನ್ನ ಮಗು ಒದೇನನನ್ನು ಯಾರಿಗೂ ಬಿಟ್ಟುಕೊಡೆನು – ಇದೇ ಕೃತಿ). ಕಾವು ಎಂದರೆ ದೇವರ ಕಾಡು ಎಂದು ಸ್ಥೂಲವಾಗಿ ಅರ್ಥೈಸಬಹುದು.

ಒಲವಿಲ ಮುರಿ : ಕೇರಳದ ಮೇಲುವರ್ಗದ ಸಮುದಾಯಗಳಲ್ಲಿ ಬಳಕೆಯಲ್ಲಿದ್ದ ಒಂದು ವಿವಾಹ ಕ್ರಮ.

ಕಣ್ಣಾರೆ ಕಾಣುವುದು : ಮುಂದಿರುವ ವಸ್ತು/ವ್ಯಕ್ತಿ/ಘಟನೆಗಳನ್ನು ಸ್ಪಷ್ಟವಾಗಿ ಗುರುತಿಸುವುದು. ನೋಡಿ ಕಾಣುವುದು.

ಕಲ್ಲಕೋಣೆ : ಮುರಕಲ್ಲು/ಕಗ್ಗಲ್ಲುಗಳಿಂದ ಭದ್ರವಾಗಿ ರಚಿಸಲ್ಪಟ್ಟ ಕೋಣೆ. ಇದರಲ್ಲಿ ಹಣ/ಆಭರಣಗಳನ್ನು ಇರಿಸಿಕೊಳ್ಳಬಹುದು. ಸಾಮಾನ್ಯವಾಗಿ ಇದು ವ್ಯಕ್ತಿಗಳನ್ನು ಬಚ್ಚಿಟ್ಟು ಕೊಳ್ಳಲು/ ಬಂಧಿಸಿಡಲು ಬಳಕೆಯಾಗುತ್ತಿದ್ದುವೆಂದು ವಡಕ್ಕನ್ ಪಾಟ್ಟುಗಳಲ್ಲಿ ಉಲ್ಲೇಖ ಗಳಿವೆ.

ಕಲ್ಲುಮರಿಗೆಯಲ್ಲಿ ಹೆಣವನ್ನು ಮಣ್ಣುಮಾಡುವುದು : ಮುಸ್ಲಿಂ ಶವಸಂಸ್ಕಾರ ವಿಧಿ. ಮುಸ್ಲಿಮರು ಸತ್ತವರನ್ನು ದಫನ್ ವಿಧಿಯಿಂದ ಸಂಸ್ಕರಿಸುತ್ತಾರೆ. ಆಗ ನೀಳವಾದ ಕಲ್ಲು ಮರಿಗೆ ಯಲ್ಲಿ ಹೆಣವನ್ನು ಇಟ್ಟು ಮೇಲೆ ಮಣ್ಣು ಸುರಿಯುತ್ತಾರೆ.

ಕಾರಣಿಕದ ಹೊನ್ನಬಳೆ : ಇದು ವಿಶಿಷ್ಟ ಪವಾಡ/ಮಾಂತ್ರಿಕ ಶಕ್ತಿಯಿದ್ದ ಬಳೆ. ಪಾತಿವ್ರತ್ಯವನ್ನು ತಾವು ಕೆಡಿಸಿಕೊಂಡಲ್ಲಿ ಅಂಥ ಸ್ತ್ರೀಯರ ಬಳೆಗಳು (ಮತ್ತು ಕಿವಿಯ ಓಲೆಗಳು ಕೂಡ) ತನ್ನಿಂದ ತಾನೆ ನಜ್ಜುಗುಜ್ಜಾಗಿ ಬಿಡುತ್ತಿದ್ದವಂತೆ.

ಕುಜದೋಷ : ಜಾತಕದೋಷ. ಜನ್ಮರಾಶಿಯಲ್ಲಿ ನೀಚಗ್ರಹರು ಇದ್ದವರು. ಅಂಥ ವರು ಮಾಡುವ ಕೆಲಸಗಳಿಂದ ಅನರ್ಥವುಂಟಾಗುವುದೆಂದು ಜನಪದ ನಂಬಿಕೆ. ಕುಜ ಅಂದರೆ ಮಂಗಳ ಗ್ರಹ.

ಕೊಟ್ಟತ್ತಳ : ಅಡುಗೆ ಮನೆಯಲ್ಲಿ ಸಣ್ಣಪುಟ್ಟ ಪಾತ್ರೆಗಳನ್ನೂ ಕೈಗಳನ್ನೂ ತೊಳೆದು ಕೊಳ್ಳಲು ರಚಿಸಿರುವ ಜಾಗ.

ಕೊಯಂಬು : ಔಷಧೀಯ ಸಸ್ಯಗಳ ಭಾಗಗಳನ್ನು, ಮೆಂತೆಯಂಥ ಕಾಳುಗಳನ್ನು,

ಹಾಕಿ ಕಾಯಿಸಿದ ಎಣ್ಣೆ. ಇದನ್ನು ಮೈಗೆ ತಿಕ್ಕಿ ಲೇಪಿಸಿ ಸ್ನಾನ ಮಾಡುವುದು ಕೇರಳೀಯರ ವಿಶಿಷ್ಟ ಹವ್ಯಾಸ.

ಗೊಂಪು : ಕೆಲವು ವಿಶಿಷ್ಟ ಸಸ್ಯಗಳ ತೊಗಟೆ, ಎಲೆ, ಬೇರು ಮುಂತಾದುದನ್ನು ಜಜ್ಜಿ ನೀರಲ್ಲಿ ಹಾಕಿ ಹಿಂಡಿದರೆ ಒಂದು ತೆರನ ಲೋಳೆ ಲಭ್ಯವಾಗುತ್ತದೆ. ಇದನ್ನು ತಲೆಗೊದಲಿಗೆ ಶಾಂಪೂವಿನಂತೆ ಹಚ್ಚಿ ಸ್ನಾನ ಮಾಡುವುದು ಸ್ತ್ರೀ ಪುರುಷರಲ್ಲಿ ಹಿಂದೆ ರೂಢಿಯಲ್ಲಿತ್ತು.

ಚಿನ್ನ ಕೊಟ್ಟು ಹೆಣ್ಣನ್ನು ಪಡೆಯುವುದು : ಒಳ್ಳೆಯ ಮನೆತನದ ಹಿಂದೂ ಮತೀಯ ಕನ್ಯೆಯರನ್ನು ತುಂಬ ಚಿನ್ನ/ಹಣ ನೀಡಿ ಮುಸ್ಲಿಮರು ತಮ್ಮ ಹೆಂಡಿರಾಗಿ ಸ್ವೀಕರಿಸುತ್ತಿದ್ದರು. ಕಳೆದ ಶತಮಾನದ ತನಕವೂ ಇದು ಅಲ್ಲಲ್ಲಿ ರೂಢಿಯಲ್ಲಿದ್ದ ಸಂಪ್ರದಾಯವಾಗಿತ್ತು. ವಡಕ್ಕನ್ ಪಾಟ್ಟುಗಳೂ ಹೀಗೊಂದು ಸಂಪ್ರದಾಯವಿದ್ದುದನ್ನು ಉಲ್ಲೇಖಿಸುತ್ತವೆ.

ಜೋನಕ : ವಡಕ್ಕನ್ ಪಾಟ್ಟುಗಳಲ್ಲಿ ಮುಸ್ಲಿಮರನ್ನು ನಿರ್ದೇಶಿಸುವ ಪದ. ಈ ಪದವು ಮಲೆಯಾಳದಲ್ಲಿ ಮೂಲತಃ ಜೈನರನ್ನು ನಿರ್ದೇಶಿಸುತ್ತಿತ್ತೆಂದು ತಿಳಿದುಬರುತ್ತದೆ.

ತಚ್ಚೋಳಿ ಮೇಪ್ಪ : ಒದೇನ ಮತ್ತು ಅವನ ಅಣ್ಣನ ಕಾಲದಲ್ಲಿ ಪ್ರಸಿದ್ಧಿ ಪಡೆದ ಮನೆತನ. ತಚ್ಚೋಳಿ ಎಂಬ ಪ್ರದೇಶದಲ್ಲಿ ಸ್ವಲ್ಪ ಎತ್ತರದ ಜಾಗದಲ್ಲಿ ಕಟ್ಟಿದ್ದ ನಾಯರ್ ತರವಾಡು ಮನೆ.

ತೀಯ : ಕೇರಳದಲ್ಲಿ ಬಹುಸಂಖ್ಯೆಯಲ್ಲಿ ವಾಸವಾಗಿರುವ ಒಂದು ಪ್ರಬಲ ಸಮುದಾಯ. ಈ ಸಮುದಾಯದವರನ್ನೆ ಈಳವ ಎಂದು ಕರೆಯುತ್ತಾರೆ. ಇವರ ಮನೆಮಾತು ಮಲೆಯಾಳಂ. ಹಿಂದಿನ ಸಾಮಾಜಿಕ ಶ್ರೇಣೀಕರಣದಲ್ಲಿ ಇವರು ನಾಯರ್‌ಗಿಂತ ಕೆಳ ಹಂತದವರು. ಸೇಂದಿ ಇಳಿಸುವುದು ಮತ್ತು ಯೋಧವೃತ್ತಿಯನ್ನು ಮಾಡುತ್ತಿದ್ದವರು. ನಾರಾಯಣ ಗುರು ಈ ಸಮುದಾಯಕ್ಕೆ ಮಾರ್ಗದರ್ಶನ ನೀಡಿ ಮುನ್ನಡೆಸಿದರು.

ತೇವಾರ : 'ದೇವಕಾರ್ಯ' ಎಂಬ ಪದದ ಅಪಭ್ರಂಶ ರೂಪ. ಸಂಧ್ಯಾವಂದನೆ, ಜಪ, ನಮಸ್ಕಾರ, ಪೂಜೆ, ಪುಷ್ಪಾಂಜಲಿ ಇತ್ಯಾದಿ ಕ್ರಿಯೆಗಳನ್ನು ಈ ಪದವು ನಿರ್ದೇಶಿಸುತ್ತದೆ.

ನಲುವತ್ತರ ಸ್ನಾನ : ಬಾಣಂತಿಯಾಗಿ ನಲುವತ್ತನೆಯ ದಿನದಂದು ಅವಳಿಗೆ ಮಾಡಿಸುವ/ ಮಾಡುವ ವಿಶಿಷ್ಟ ಸ್ನಾನ (ಕೆಲವು ಜಾತಿ/ಭಾಷೆಗಳವರಲ್ಲಿ ನಲುವತ್ತೆರಡನೆಯ ದಿನ ನಡೆಯುತ್ತದೆ). ಇದರಿಂದ ಬಾಣಂತಿತನದ ಹೊಲೆಗಳೆಲ್ಲ ನಿವಾರಣೆಯಾಗುತ್ತವೆಂದೂ ಆಕೆ ಮತ್ತೆ ದೈವಕಾ ರ್ಯಗಳನ್ನೂ ಒಳಗೊಂಡಂತೆ ಎಲ್ಲ ಮನೆವಾರ್ತೆಗಳನ್ನು ಮಾಡಲು ಅರ್ಹಳಾಗುತ್ತಾಳೆ ಎಂಬುದು ಕೇರಳದ ಜನಪದ ಸಂಪ್ರದಾಯ.

ನಾಲ್ಕು ಅರಮನೆಗಳ ಅರಸರು : ವಡಕ್ಕನ್ ಪಾಟ್ಟುಗಳ್ ಉಲ್ಲೇಖಿಸುವಂತೆ ಹಿಂದಿನ ಕಡತ್ತನಾಡಲ್ಲಿ ಪ್ರಸಿದ್ಧವಾಗಿದ್ದ ನಾಲ್ಕು ಅರಸು ಮನೆತನಗಳು. ಅವು–ಚಿರಕ್ಕಲ್, ಕುಟ್ಟಿಪುರಂ, ಕೋಟ್ಟಯಂ, ಪುರಮೇರಿ.

ನೀಲಿ ಕಪ್ಪು ತಾಳೆಯೋಲೆ : ಆರೋಗ್ಯಪೂರ್ಣವಾಗಿದ್ದು ಚೆನ್ನಾಗಿ ಬಲಿತ ತಾಳೆ ಯೋಲೆಯು ಹಸಿಯಿದ್ದಾಗಿನ ದಟ್ಟ ಹಸಿರು ಬಣ್ಣವು ಒಣಗಿದಾಗ ಒಂದಿಷ್ಟು ನೀಲ/ ಕಪ್ಪು ಛಾಯೆಗೆ ತಿರುಗಿರುತ್ತದೆ. ಹೊಗೆ ತಾಗಿಯೂ ಕಪ್ಪಾಗುತ್ತದೆ.

ಪಂಚೆಯ ಮುನ್ನಿ : ಪಂಚೆಯನ್ನು ಉಟ್ಟಾಗ ಅದರ ಮೇಲ್ಭಾಗವನ್ನು ಸೊಂಟಕ್ಕೆ ಬಿಗಿಗೊಳಿಸಿ ಬಲ ಅಂಚನ್ನು ಒಂದಿಷ್ಟು ನೆರಿಗೆ ಮಾಡಿ ಒಳಕ್ಕೆ ಸಿಕ್ಕಿಸುತ್ತಾರೆ. ಎಡಭಾಗದ ಅಂಥದೇ ಅಂಚಲ್ಲಿ ಸಣ್ಣಪುಟ್ಟ ವಸ್ತುಗಳನ್ನು – ಒಂದಿಷ್ಟು ಎಲೆ ಅಡಕೆ, ಪುಟ್ಟಚೂರಿ, ಹಣ... ಇತ್ಯಾದಿ ಇಟ್ಟು ಕಟ್ಟಿಕೊಳ್ಳಬಹುದು. ಪಂಚಯ ಈ ಭಾಗಕ್ಕೆ ಮುನ್ನಿ ಎಂದು ಹೆಸರು.

ಪಡಿಪ್ರೆ : ಸಾಂಪ್ರದಾಯಿಕ ಜಮೀನ್ದಾರಿ ಮನೆಗಳ (ಚೌಕಟ್ಟಿನ ಮನೆ/ಒಳಸುತ್ತಿನ ಮನೆ) ಹೊರ ಪ್ರವೇಶದ್ವಾರದಲ್ಲಿ ಪುಟ್ಟ ಮನೆಯಂಥ ಒಂದು ರಚನೆ ಇರುತ್ತದೆ. ಕೆಲವೊಮ್ಮೆ ಇದು ಒಂದು ದೊಡ್ಡ ಬಾಗಿಲು ಮತ್ತು ಮೇಲ್ಛಾವಣಿಯನ್ನಷ್ಟೆ ಹೊಂದಿರುತ್ತದೆ. ಇನ್ನು ಕೆಲವೊಮ್ಮೆ ಎರಡೋ ನಾಲ್ಕೋ ಕಾವಲುಗಾರರು ನಿಂತುಕೊಳ್ಳುವಷ್ಟು ದೊಡ್ಡದಾಗಿರುತ್ತದೆ. (ಪಡಿ = ಬಾಗಿಲು; ಪುರ=ಮನೆ>ಬಾಗಿಲು ಮನೆ)

ಪಡುಕಡವು ಮೂಡುಕಡವು : ವಡಕ್ಕನ್ ಪಾಟ್ಟುಗಳ ಉಲ್ಲೇಖದಂತೆ ಸಾರ್ವಜನಿಕ ದೇವಾಲಯ/ದೈವಾಲಯಗಳಿಗೆ ಸೇರಿದ ಕೆರೆಗಳಲ್ಲಿ ನಿರ್ದಿಷ್ಟ ಜಾತಿಯ ಜನ ಕೆರೆಯ ನಿರ್ದಿಷ್ಟ ಜಾಗಗಳಲ್ಲಷ್ಟೆ ಸ್ನಾನಮಾಡುವ ಅಧಿಕಾರ ಪಡೆದಿದ್ದರೆಂದು ಕಾಣುತ್ತದೆ. ನಾಯರರು ಕೆರೆಯ ಪಡುಭಾಗದಲ್ಲೂ ತೀಯರು ಪೂರ್ವಭಾಗದಲ್ಲೂ ಮೀಯಲು ಪಾರಂಪರಿಕ ಅಧಿಕಾರ ಪಡೆದಿದ್ದರು ಎಂದು ಅನುಮಾನಿಸಲಾಗಿದೆ.

ಪಡುಕೋಣೆ : ಪಾರಂಪರಿಕ ನಾಯರ್ ಮೂಲಮನೆಗಳು ಒಳಸೂತ್ರ/ಒಳಸುತ್ತಿನ ವುಗಳಾಗಿದ್ದು ಆ ಮನೆಗಳ ಒಳಭಾಗವು ಪುಟ್ಟ ಒಳಅಂಗಳವನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಆ ಮನೆಗಳು ಪೂರ್ವಾಭಿಮುಖವಾಗಿರುತ್ತವೆ. ಒಳಅಂಗಳದ ಮೂಡು, ತೆಂಕು, ಪಡು, ಬಡಗು ಭಾಗಗಳಲ್ಲಿ ಒಂದೊಂದೋ ಎರಡೆರಡೋ ಪ್ರತ್ಯೇಕ ಪ್ರತ್ಯೇಕ ಕೋಣೆಗಳಿರುತ್ತವೆ. ಅವಕ್ಕೆ ನಿರ್ದಿಷ್ಟ ಉಪಯೋಗವೂ ಇರುತ್ತದೆ. ವಡಕ್ಕನ್ ಪಾಟ್ಟುಗಳಲ್ಲಿ ಕಾಣುವಂತೆ ಚೌಕಟ್ಟಿನ ಮನೆಯ ಪಡಿಂಞಾಟ್ಟ (ಪಡುಕೋಣೆ ಎಂದು ಕನ್ನಡ ಪರ್ಯಾಯ

ಇರಿಸಿಕೊಂಡಿದೆ) ಮನೆಯ ಹೆಂಗಸರು ವಾಸಮಾಡಲು ಬಳಕೆಯಾಗುತ್ತಿತ್ತು. ಗಂಡನ್ನು ಹೆಣ್ಣು ಸೇರುವುದೂ ಪಡುಕೋಣೆಯಲ್ಲಿ.

ಪರೆ : ಹತ್ತುವರೆ ಸೇರು ಪ್ರಮಾಣದ ಧಾನ್ಯಗಳನ್ನು ಅಳೆಯುವ ಮಾಪನ. ಇದರಲ್ಲಿ ಭತ್ತ/ಅಕ್ಕಿಯನ್ನು ತುಂಬಿ ಇಡುವುದು ಮಲೆಯಾಳಿ ಮಂಗಳ ಕಾರ್ಯಗಳಲ್ಲಿ ಸಾಮಾನ್ಯ. ಪರೆಯನ್ನು ಮರ, ಲೋಹಗಳಿಂದ ತಯಾರಿಸುತ್ತಾರೆ.

ಪಾಟ್ಟು ಮಾಡಿಸುವುದು : ಅನಿಷ್ಟ ನಿವಾರಣೆ ಮತ್ತು ಇಷ್ಟಾರ್ಥ ಸಿದ್ಧಿಗಾಗಿ ಭಕ್ತರು ಕೇರಳದ ದೇವಾಲಯ/ದೈವಾಲಯಗಳಲ್ಲಿ ಈಡೇರಿಸುವ ಕಲಾರೂಪದ ಹರಕೆ. ಇದರಲ್ಲಿ ನಿರ್ದಿಷ್ಟ ದೈವ/ದೇವರ ರೂಪವನ್ನು ಐದು ಬಣ್ಣಗಳ ಹುಡಿಗಳಿಂದ ರಚಿಸಿ ಅದರ ಮುಂದೆ ದೇವ/ ದೇವಿಯರ ಸ್ತೋತ್ರರೂಪದ ಕಥಾನಕಗಳನ್ನು ಹಾಡಿಸುವ ಸೇವೆ. ಇಂಥ ಚಿತ್ರ (ಕಳಂ) ಬರೆಯುವುದರಲ್ಲೂ ಹಾಡು ಹೇಳುವುದರಲ್ಲೂ ನಿಷ್ಣಾತವಾದ ಪ್ರತ್ಯೇಕ ವೃತ್ತಿಸಮುದಾಯದವರು ಇದ್ದಾರೆ. ಉದಾ: ತೆಯ್ಯಂಬಾಡಿಗಳು, ಕುರುಪ್ಪರು.

ಪುಡಮುರಿ : ಕೇರಳದ ಮೇಲ್ವರ್ಗದ ಜನಸಮುದಾಯಗಳಲ್ಲಿ ಜಾತಕ ಕೂಡಿ ಬಂದ ವಧೂವರರಿಗೆ ಹಿರಿಯರಿದ್ದು ದಿನ ನಿಶ್ಚೈಸಿ ನಡೆಸುವ ಮದುವೆ. ಇದರಲ್ಲಿ (ಪುಡಮುರಿ) ವಿಶೇಷವಾಗಿ ಮಧುವಿಗೆ ವರನು ಒಂದು ಹೊಸ ಬಟ್ಟೆಯನ್ನು ಕೊಡಬೇಕು. ಒಪ್ಪಿಗೆಯ ಸಂಕೇತವಾಗಿ ಅವಳು ಅದನ್ನು ಆಗಲೇ ಉಟ್ಟು ಮುಂದಿನ ವಿವಾಹ ವಿಧಿಗಳಲ್ಲಿ ಪಾಲ್ಗೊಳ್ಳುತ್ತಾಳೆ.

ಪೊಟ್ಟನ್ ದೈವ : ಶಂಕರಾಚಾರ್ಯರನ್ನು ಚಾಂಡಾಲ ವೇಷದಿಂದ ಶಿವನು ಪರೀಕ್ಷಿಸಿ ದನೆಂದು ಹೇಳಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಆ ಚಾಂಡಾಲವೇಷ ಧರಿಸಿ, ಆ ದೇವಸಂಕಲ್ಪದಲ್ಲಿ ಭಕ್ತರನ್ನು ಹರಸುವ ಮಲೆಯಾಳಂ ತೆಯ್ಯ.

ಪೊಯ್ತ್ : ಕಳರಿ ಪಯಟ್ಟ್‌ನಲ್ಲಿನ ಒಂದು ವಿಶಿಷ್ಟ ಸ್ಪರ್ಧಾರೂಪ. ಇದರಲ್ಲಿ ಹಗೆತನವೂ ಇಲ್ಲ, ಪ್ರಾಣಾಪಾಯವೂ ಇಲ್ಲ. ತಾವು ತಿಳಿದಿರುವ ಕಳರಿ ವಿದ್ಯೆಗಳನ್ನು ಬಳಸಿಕೊಂಡು ಮಾಡುವ ಸ್ಪರ್ಧೆ ಅಷ್ಟೆ, ಇದರಲ್ಲಿ ಹಿಂದಿನ ತರುಣರು ವಿಶೇಷವಾಗಿ ಭಾಗವಹಿಸುತ್ತಿದ್ದರು.

ಪೊಲಿಭತ್ತ : ಭತ್ತವನ್ನು ನಿರ್ದಿಷ್ಟ ಅವಧಿಗೆ ಭತ್ತರೂಪದ ಬಡ್ಡಿಗೆ ಸಾಲವಾಗಿ ನೀಡಲಾಗುತ್ತದೆ ನಿರ್ದಿಷ್ಟ ಕಾಲಾವಧಿ ಕಳೆದಾಗ ಒಪ್ಪಂದದಂತೆ ಸಿಗುವ ಬಡ್ಡಿಯ ಭತ್ತಕ್ಕೆ ಪೊಲಿಭತ್ತವೆಂದು ಹೆಸರು.

ಬಂಧು : ಇದು ತೀರ ಸಾಮಾನ್ಯ ಪದದಂತೆ ಕಂಡುಬಂದರೂ ಮಲೆಯಾಳಂನ

ಸಾಮಾಜಿಕ ಹಿನ್ನೆಲೆಯಲ್ಲಿ ಇದಕ್ಕೆ ಗಂಡನೆಂದೂ ಗಂಡನ ಹಕ್ಕು ಅಧಿಕಾರಗಳಿದ್ದು, ಹೆಣ್ಣೊಬ್ಬಳು ಇಷ್ಟಪಟ್ಟ ಗಂಡುಸೆಂದೂ ಅರ್ಥವಿದ್ದಂತೆ ಕಂಡುಬರುತ್ತದೆ. ಸಂಬಂಧ ಮಾಡಿಕೊಂಡವನು ಬಂಧು.

ಬೈರಾಸು(ಒಲ್ಲಣಿಗೆ)/ ತೆಂಗಿನ ಗರಿಯನ್ನು ಹಾಸಿ ಕುಳಿತುಕೊಳ್ಳುವುದು : ಇದು ತನಗೆ ಯೋಗ್ಯ ಗೌರವ ಸಂದಾಯವಾಗಿಲ್ಲ ಎನ್ನುವುದನ್ನು ಸಾಂಕೇತಿಕವಾಗಿ ತೋರಿಸುವ ಪ್ರತಿಭಟನೆಯ ಕ್ರಿಯೆ. ಕೆಲವೊಮ್ಮೆ ಇದು ರಣವ್ರತದ ಒಂದು ಅಂಗ ಕೂಡ.

ಮಂಚಿಲು/ ಕೈಮಂಚ : ಇದು ಒಬ್ಬ ವ್ಯಕ್ತಿಯನ್ನು ಎತ್ತಿಕೊಂಡು/ಹೊತ್ತುಕೊಂಡು ಹೋಗಲು ಅನುಕೂಲವಾಗುವ ಸಾಧನ. Strecher ಎಂಬ ಅರ್ಥದಲ್ಲಿ ಬಳಸಿದೆ.

ಮಲೆಮುತ್ತಪ್ಪನ್ ದೈವ : ಕಣ್ಣೂರಿನ ಸಮೀಪದ ಪೈಂಗುಟ್ಟಿ ಎಂಬ ಮಲೆಯಲ್ಲಿ ವಾಸ ವಾಗಿರುವ ಮೂಲ ಮುತ್ತಪ್ಪದೈವ. ಮುತ್ತಪ್ಪ ದೈವವು ನಾಡಿಗಿಳಿದು ಪರಶ್ಶಿನಿ ಕಡವು ಎಂಬಲ್ಲಿ ನೆಲೆನಿಂತುದಾಗಿ ಐತಿಹ್ಯ. ಕೇರಳದ ಅತ್ಯಂತ ಜನಪ್ರಿಯ ತೆಯ್ಯಂಗಳಲ್ಲಿ ಮುತ್ತಪ್ಪನ್ ಒಂದು.

ಮಾಡ : ನಿರ್ದಿಷ್ಟ ದೈವ/ತೆಯ್ಯಂಗಳಿಗೆ ಪಾರಂಪರಿಕವಾಗಿ ರಚಿಸಿರುವ ಉತ್ಕೃಷ್ಟ ಆಲಯಗಳು. ಮರದ ವಿಶಿಷ್ಟ ವಾಸ್ತುವಿನ್ಯಾಸವೂ ತಾಮ್ರದ ತಗಡುಗಳನ್ನು ಹಾಸಿದ ಮೇಲ್ಛಾವಣಿಯೂ ಇರುತ್ತವೆ.

ಮಾದೆರಿಬಳ್ಳಿ : ಬಳಕುವ ಮತ್ತು ಸು.ನಾಲ್ಕು ಐದು ಮೀಟರ್ ಉದ್ದಕ್ಕೆ ಬೆಳೆಯುವ ಒಂದು ತೆರನ ಬಳ್ಳಿ. ಇದನ್ನು ವಿಶಿಷ್ಟವಾಗಿ ತಿರುಚಿಕೊಂಡರೆ ತುಂಬ ಚೆನ್ನಾಗಿ ಮನೆಯ ಮಾಡು, ಹಸಿಸೊಪ್ಪು, ಬೇಲಿ ಮುಂತಾದುವನ್ನು ಕಟ್ಟಲು ಒದಗುತ್ತದೆ. ಇದು ತುಂಬ ನಾರುಮಿಶ್ರಿತ ವಾಗಿರುವುದರಿಂದ ಗಟ್ಟಿಮುಟ್ಟಾಗಿರುತ್ತದೆ. ಗದ್ದೆ ಉಳುವಾಗ ಎತ್ತು ಕೋಣಗಳಿಗೆ ಏಟು ಬಾರಿಸಲು ಇದರ ಕಾಂಡದಿಂದ ತಯಾರಿಸಿಕೊಂಡ ಕೋಲು ಬಳಕೆಯಾಗುತ್ತದೆ. ಬುಟ್ಟಿ ಹೆಣೆಯಲು ಕೂಡ ಮಾದೆರಿ ಬಳ್ಳಿ ಉಪಯೋಗವಾಗುತ್ತದೆ,

ಮಾಳಿಗೆಯ ಉತ್ತರ : ಹಿಂದಿನ ಕಾಲದಲ್ಲಿ ಉತ್ತರ ಕೇರಳ/ ದ.ಕನ್ನಡದ ಮಧ್ಯಮ ವರ್ಗದ ಮನೆಗಳ ಗೋಡೆಗಳನ್ನು ರಚಿಸುವಾಗ ಸು. ಎಂಟರಿಂದ ಹತ್ತು ಅಡಿ ಎತ್ತರ ದಲ್ಲಿ ಒಂದು ಸಾಲು ಕಲ್ಲು/ಇಟ್ಟಿಗೆಯನ್ನು ಗೋಡೆಗಿಂತ ಒಂದಿಷ್ಟು ಹೊರಚಾಚಿದಂತೆ ಕಟ್ಟಿ ಗೋಡೆ ನಿರ್ಮಾಣಮಾಡುತ್ತಿದ್ದರು. ಆ ನಿರ್ದಿಷ್ಟ ಸಾಲಿನ ಕಲ್ಲುಕಟ್ಟಣೆಗೆ 'ಉತ್ತರ' ವೆಂದು ಹೆಸರು. ಅದರ ಮೇಲ್ಭಾಗದಲ್ಲಿ ಮಾಳಿಗೆ/ಉಪ್ಪರಿಗೆ ನಿರ್ಮಾಣ ಮಾಡುತ್ತಿದ್ದರು.

ಮುಡಿಧರಿಸಿ ಮೂಡು ದಿಕ್ಕಿಗೆ ತಿರುಗುವುದು : ಭೂತ/ತೆಯ್ಯಂಗಳು ದೈವನರ್ತಕನ

ಮೇಲೆ ಪೂರ್ಣ ಆವಾಹನವಾಗುವ ಮೂಹೂರ್ತ. ಆಗ ಮುಖವರ್ಣಿಕೆ, ವೇಷಭೂಷಣಗಳ ಧಾರಣೆಗಳು ಕೊನೆಯ ಹಂತ ತಲಪುತ್ತವೆ. ದೈವದ ಮುಡಿ (ವಿಶಿಷ್ಟ ಶಿರೋಭೂಷಣ) ಯನ್ನು ದೈವನರ್ತಕನ ತಲೆಗೆ ತೊಡಿಸಲಾಗುತ್ತದೆ. ನೆರೆದ ಭಕ್ತಸ್ತೋಮ ಭಕ್ತಿಯಿಂದ ಪ್ರಾರ್ಥಿಸಿದ ಅಕ್ಕಿ ಕಾಳುಗಳನ್ನು ದೈವ/ದೈವನರ್ತಕನ ಮೇಲೆ ಎರಚುತ್ತಾರೆ. ಆಗ ಪೀಠದಲ್ಲಿ ಕುಳಿತಿದ್ದ ದೈವವು ಎದ್ದು ನಿರ್ದಿಷ್ಟ ದಿಕ್ಕಿಗೆ (ಇಲ್ಲಿ ಮೂಡು) ತಿರುಗುತ್ತದೆ. ಭೂತ/ತೆಯ್ಯಂ ಆರಾಧನೆಯಲ್ಲಿ ಇದು ಒಂದು ತುರೀಯ ಸನ್ನಿವೇಶ.

ಮೈಗೆ ಸೇರುವುದು : ದೈವ ದೇವರುಗಳು ತಮ್ಮ ಪಾತ್ರಿಗಳ ಮೇಲೆ ಆವೇಶವಾಗುತ್ತವೆ ಎನ್ನುವುದು ಕೇರಳದ ಜನಪದರ ಒಂದು ನಂಬಿಕೆಯಾದರೆ, ಅತೃಪ್ತಿ/ ಅಲ್ಪಾಯುಷಿಯಾಗಿ ಸತ್ತವರು ತಮ್ಮ ಸಂಬಂಧಿಗಳು/ಆಗದವರ ಮೈಮೇಲೆ ಆವೇಶವಾಗುತ್ತಾರೆಂದೂ ತಮಗೆ ಆಗದವರಿಗೆ ತೊಂದರೆ ಕೊಡುತ್ತಾರೆಂದೂ ಜನಪದ ನಂಬಿಕೆ.

ಸಂಜೆಯ ದೀಪವಿರಿಸುವುದು : ಮಲೆಯಾಳಂ ಸಂಸ್ಕೃತಿಯಲ್ಲಿ ಇದು ವಿಶಿಷ್ಟವಾದ ಒಂದು ವಿಚಾರ. ಸಂಜೆ ಅಸ್ತಮಾನದ ಹೊತ್ತಿಗೆ ದೇವರ ಕೋಣೆಯ ದೀಪ ಉರಿಸಿ ಅದರಿಂದ ಒಂದು ಕೈದೀಪ/ಕಾಲುದೀಪ/ತೂಗುದೀಪವನ್ನು ಉರಿಸಿಕೊಂಡು ಮನೆಯ ಮೂಡುಭಾಗದಲ್ಲಿ ಒಂದಿಷ್ಟು ಹೊತ್ತು ತಂದಿಡುತ್ತಾರೆ. ಬಳಿಕ ಅದನ್ನು ಪುನಃ ದೇವರ ಕೋಣೆಗೆ ಒಯ್ಯುತ್ತಾರೆ.

ಸಾಲುಬಾಗಿಲು ಹಲಗೆ : ಅಂಗಡಿ ಮುಂಗಟ್ಟುಗಳನ್ನು ಮುಚ್ಚಲು/ ತೆರೆಯಲು ಬಳಕೆಯಾಗುತ್ತಿದ್ದ ಮರದ ಹಲಗೆಗಳು. ಇವನ್ನು ಒಂದಾದ ಬಳಿಕ ಒಂದರಂತೆ ನಿಗದಿಯಾದ ಕ್ರಮದಲ್ಲಿ ಜೋಡಿಸಿ ಮುಚ್ಚುವುದು/ ತೆರೆಯುವುದು ಮಾಡಬೇಕು. ಒಂದರ ಜತೆ ಸಂದಿಲ್ಲದೆ ಸೇರಿಕೊಳ್ಳಲು ಹಲಗೆಯ ಬದಿಗಳನ್ನು ವಿಶಿಷ್ಟವಾಗಿ ಒಂದಿಷ್ಟು ಕೆತ್ತುತ್ತಾರೆ. ಮಧ್ಯದ ಮೂರೋ ನಾಲ್ಕೋ ಹಲಗೆಗಳನ್ನು ಕಬ್ಬಿಣದ ಸರಳೊಂದರಿಂದ ಜೋಡಿಸಿ ಅದರ ತುದಿಗೆ ಬೀಗ ಹಾಕುತ್ತಾರೆ. ಸಾಮಾನ್ಯವಾಗಿ ಅಂಗಡಿಯೊಂದರ ಬಾಗಿಲಿಗೆ ಇಂಥ ಆರೋ ಎಂಟೋ ಹಲಗೆಗಳಿರುತ್ತವೆ.

ಸಾವಿರ ತೆಂಗಿನ ಕಾಯಿ ಒಡೆಸುವುದು : ಇದು ಉತ್ತರ ಕೇರಳದ ಅನೇಕ ದೈವ ಸ್ಥಾನಗಳಲ್ಲಿ ನಡೆಸುವ ವಿಶಿಷ್ಟ ಸೇವೆ. ಭಕ್ತರು ನಾನಾ ಉದ್ದೇಶಗಳಿಗೆ ಹರಕೆ ರೂಪದಲ್ಲಿ ಹೇಳಿಕೊಂಡ ತೆಂಗಿನ ಕಾಯಿಗಳನ್ನು ದೈವದ ಸೇವಕರಲ್ಲೊಬ್ಬನಾದ ಕೋಮರನು ದೈವಾಲಯದಲ್ಲಿ ಅದಕ್ಕೆಂದೇ ನಿಗದಿಯಾಗಿರುವ ಜಾಗದಲ್ಲಿ ಒಂದೇ ಸವನೆ ಕಲ್ಲಿಗೆ ಎಸೆದು ಒಡೆಯುತ್ತಾನೆ. ಭಕ್ತರ ಸೇವೆ ಸಂದಾಯವಾಗಿ ತೆಂಗಿನ ಕಾಯಿಯ ಹೋಳುಗಳೇ

ಪ್ರಸಾದ ರೂಪದಲ್ಲಿ ದೊರೆಯುತ್ತವೆ. ತೆಂಗಿನ ಕಾಯಿಗಳ ಸಂಖ್ಯೆಯಲ್ಲಿ ಹೆಚ್ಚುಕಡಿಮೆ ಇರುತ್ತದೆ.

ಸಿಡಿಮದ್ದಿನ ಸೇವೆ : ಭಕ್ತರು ಹೇಳಿಕೊಂಡ ಹರಕೆಗೆ ಅನುಸಾರವಾಗಿ ನಿರ್ದಿಷ್ಟ ಪ್ರಮಾಣದಲ್ಲಿ ಸಿಡಿಮದ್ದು ಸಿಡಿಸಿ ದೈವಪ್ರೀತಿಗಳಿಸುವ ಉದ್ದೇಶದಿಂದ ಕೇರಳದ ದೈವಾಲಯ ದೇವಾಲಯಗಳಲ್ಲಿ ಮಾಡಿಸುವ ಸೇವೆ. ದೈವ ದೇವರು ಇಂಥ ಸೇವೆಗಳನ್ನು ಮೆಚ್ಚುತ್ತಾರೆಂದೂ ಅದನ್ನು ಮಾಡಿಸಿದವರ ಅನಿಷ್ಟಗಳನ್ನು ನಿವಾರಿಸುತ್ತಾರೆಂದೂ ಜನಪದರ ನಂಬಿಕೆ. ಇದರಿಂದ ಊರಿನ ಅಮಂಗಳಕೂಡ ನಿವಾರಣೆಯಾಗುತ್ತವೆಂದು ವಿಶ್ವಾಸ.

ಸೊಪುನ : ಜನಪದರಿಗೆ ವಿಶಿಷ್ಟ ಸಂದರ್ಭಗಳಲ್ಲಿ ತಾವು ಆರಾಧಿಸುವ ದೈವ ದೇವರುಗಳು ಸ್ವಪ್ನದ ಮೂಲಕ ಭವಿಷ್ಯದಲ್ಲಿ ನಡೆಯಲಿರುವುದನ್ನಾಗಲಿ, ಮರೆತು ಹೋಗಿರುವು ದನ್ನು ಎಚ್ಚರಿಸುವುದನ್ನಾಗಲಿ ಮಾಡುತ್ತಾರೆಂಬುದು ಜನಪದ ಗ್ರಹಿಕೆ.

ಸೌತೆ ಕೊಯ್ದ ಗದ್ದೆ (ಸೌತೆ ಅಕ್ಕಲು) : ಮುಖ್ಯ ಭತ್ತದ ಬೆಳೆಯ ಬಳಿಕ ಗದ್ದೆಗಳಲ್ಲಿ ಸಿರಿಧಾನ್ಯ ಗಳ ಹಾಗೆಯೇ ಸೌತೆಯ ಬೆಳೆ ತೆಗೆಯುವುದು ಕೆಲವೆಡೆ ರೂಢಿ. ಹಾಗೆ ಬೆಳೆದ ಸೌತೆಯ ಫಸಲನ್ನು ಕೊಯ್ದ ಬಳಿಕ ಬಳ್ಳಿಗಳಲ್ಲಿ ಬಾಕಿಯಾದ ಸೌತೆ ಮಿಡಿಗಳನ್ನು ಇನ್ನಾರಾದರೂ ಕೊಯ್ದು ತಿಂದರೂ ಕೃಷಿಮಾಡಿದಾತ ಸಾಮಾನ್ಯವಾಗಿ ಆಕ್ಷೇಪಿಸುವುದಿಲ್ಲ.


ಹಣ : ಇದು ಹಿಂದಿನ ಕಾಲದಲ್ಲಿ ಬಳಕೆಯಾಗುತ್ತಿದ್ದ ವಿಶೇಷ ಬೆಳ್ಳಿನಾಣ್ಯ. ಎಲ್ಲ ಮಂಗಳ/ಧಾರ್ಮಿಕ ಕಾರ್ಯಗಳಲ್ಲಿ ಈ ಹಣದ ಬಳಕೆಯಾಗುತ್ತಿದ್ದುದರ ಉಲ್ಲೇಖಗಳಿವೆ. ಇದರ ಬೆಲೆ ಹಿಂದಿನ ಕಾಲದ ನಾಲ್ಕಾಣೆ. ಐದು ಹಣ, ಹದಿನಾರು ಹಣಗಳದ್ದು ಒಂದು ಧಾರ್ಮಿಕ ಲೆಕ್ಕಾಚಾರ.

ಹಳೆಯಕ್ಕಿ : ಮಲೆಯಾಳಂ ಜನಪದ ಸಾಹಿತ್ಯದಲ್ಲಿ ಉಲ್ಲೇಖಿತವಾಗುವ ಈ ಪದವು ಆರ್ಥಿಕ ಸ್ಥಿತಿಗತಿಗೆ ಸಂಕೇತವಿದ್ದಂತಿದೆ. ಹಳೆಯಕ್ಕಿಯ ಅನ್ನ ಉಣ್ಣುವುದು ಬಡತನ ಇಲ್ಲದವರು ಮಾತ್ರ. ಬಹುಶಃ ಇದು ಆರೋಗ್ಯವರ್ಧಕ ಕೂಡ. ಹಳೆಯಕ್ಕಿ ಧಾರ್ಮಿಕ ಸಾಂಸ್ಕೃತಿಕ ಮಹತ್ವವನ್ನು ಉಳ್ಳದ್ದು.

ಹಿರಿಯವ್ವ : ವಡಕ್ಕನ್ ಪಾಟ್ಟುಗಳಲ್ಲಿ ಪೆಟ್ಟೋರಮ್ಮ (ಹೆತ್ತ ಅಮ್ಮ) ಎಂಬ ಸಂಬೋಧನೆ ಕಂಡುಬರುತ್ತದೆ. ಇದು ಪ್ರಸ್ತುತ ಹುಡುಗ/ಹುಡುಗಿಯ ತಾಯಿಯನ್ನು ನಿರ್ದೇಶಿಸಲು ಬಳಕೆಯಾದ ಪದ. ಇದಕ್ಕೆ ಸಮಾನಾರ್ಥದಲ್ಲಿ ಹಿರಿಯವ್ವ ಪದವನ್ನು ಈ ಕೃತಿಯಲ್ಲಿ ಬಳಸಿದೆ.

ಇತಿಹಾಸದ ಗರ್ಭದಲ್ಲಿ ಜನಪದ ಸಾಹಿತ್ಯದ ಕೆಲ ಪ್ರಭೇದಗಳು ಹುದುಗಿವೆ. ಐತಿಹಾಸಿಕ ಘಟನೆಗಳು, ವ್ಯಕ್ತಿಗಳು, ವೀರಪುರುಷರು, ಲಾವಣಿ, ಐತಿಹ್ಯ, ಪುರಾಣಗಳಲ್ಲಿ ಚಿತ್ರಿತವಾಗಿರುವುದು ಸರಿಯಷ್ಟೆ. ಅದರಲ್ಲೂ ಕೆಲವರು ಪ್ರಾಂತ್ಯಭೇದ ಮೀರಿ ತಮ್ಮ ಸ್ವಭಾವದಿಂದ ಕಾಲಾತೀತರಾಗಿ ಬಿಡುತ್ತಾರೆ. ಜನಪದದ ಪ್ರತಿನಿಧಿಯಾಗಿ ತೋರುತ್ತಾರೆ. ಅಂತಹ ವಿರಳ ವ್ಯಕ್ತಿತ್ವಗಳಲ್ಲಿ ಒದೇನನು ತುಂಬ ಭಿನ್ನವಾಗಿ ಮತ್ತು ವಿಶಿಷ್ಟವಾಗಿ ಚಿತ್ರಿತವಾಗಿದ್ದಾನೆ. ಉತ್ತರ ಕೇರಳದ ಕಡತ್ತುನಾಡಿನ ಜನಪದ ವೀರ ತಚ್ಚೋಳಿ ಒದೇನನ ಮಲೆಯಾಳಂ ಜನಪದ ಸಾಹಿತ್ಯದಲ್ಲಿ ಗಣ್ಯ ಸ್ಥಾನ ಪಡೆದುಕೊಂಡಿದ್ದಾನೆ. ಒದೇನನ ಗುಣಸ್ವಭಾವ, ವ್ಯಕ್ತಿದೌರ್ಬಲ್ಯ, ಮೌಲ್ಯಗಳನ್ನು ಬಿಂಬಿಸುವ ಜನಪದ ಗೀತೆಗಳು ಮಲೆಯಾಳಂ ಭಾಷೆಯಲ್ಲಿ ಈಗಾಗಲೇ ಜನಪ್ರಿಯಗೊಂಡಿವೆ. ಚದುರಿದಂತಿರುವ ಒದೇನನ ಒಟ್ಟು ಬದುಕಿನ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನಗಳು ಈವರೆಗೆ ನಡೆದಿರುವುದು ವಿರಳ. ಮಲೆಯಾಳಂದಲ್ಲಿ ಈಗಾಗಲೇ ಜನಪ್ರಿಯತೆ ಪಡೆದುಕೊಂಡಿರುವ ಒದೇನನನ್ನು ಕನ್ನಡ ಭಾಷೆಗೆ ರೂಪಾಂತರಿಸುವ ಮೂಲಕ ಒದೇನನ ಜನಪದೀಯತೆಯನ್ನು ಕನ್ನಡ ಜನಪದ ವಾಙ್ಮಯಕ್ಕೆ ನೀಡುವ ಸಾಹಸವನ್ನು ನಾಡಿನ ಹಿರಿಯ ವಿದ್ವಾಂಸರಾದ ಡಾ. ಕೆ. ಕಮಲಾಕ್ಷ ಅವರು ಮಾಡಿದ್ದಾರೆ. ಎರಡು ಭಾಷಾ ಸಂಸ್ಕೃತಿಗಳ ಕೊಂಡಿಯಾಗಿ 'ಕಡತ್ತುನಾಡಿನ ಜನಪದ ವೀರ ತಚ್ಚೋಳಿ ಒದೇನನ್' ಕೃತಿ ಗಮನಾರ್ಹವಾದುದು. ಅನನ್ಯವಾದ ಕೃತಿಯನ್ನು ರೂಪಾಂತರಿಸಿ ಕೊಟ್ಟ ಡಾ. ಕೆ. ಕಮಲಾಕ್ಷ ಅವರಿಗೆ ಅಭಿನಂದನೆಗಳು.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ



₹ ೧೪೦/-

ISBN 938314902-7

ISBN : 978-93-83149-02-5

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ